ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೨-೧

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಶಿವಮಾಹಾತ್ಮ್ಯಖಂಡ, ಜ್ಞಾನಯೋಗಖಂಡ, ಮುಕ್ತಿಖಂಡಗಳು

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೫

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೨–೧

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಶಿವಮಾಹಾತ್ಮ್ಯಖಂಡ, ಜ್ಞಾನಯೋಗಖಂಡ, ಮುಕ್ತಿಖಂಡಗಳು

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೫

Printed by T. S. Raghavachar, Manager,
Sree Panchacharya Electric Press
Sayaji Rao Road, Mysore.

For The Palace, Mysore.

ಮುನ್ನುಡಿ

॥ ಶ್ರೀಗಣೇಶಶಾರದಾಗುರುಭ್ಯೋನಮಃ ॥

ಶ್ರೀಸೂತಸಂಹಿತಾ

ಈ ಗ್ರಂಥವು ಸ್ಕಾಂದಮಹಾಪುರಾಣಕ್ಕೆ ಸೇರಿದ್ದೆಂದು ಈ ಗ್ರಂಥದಲ್ಲೂ ಹೇಳಿದೆ. ಆದರೆ ಈಗ ಮುದ್ರಿತವಾಗಿ ದೊರೆಯುತ್ತಿರುವ ಸ್ಕಾಂದಮಹಾಪುರಾಣದಲ್ಲಿ ಇದು ದೊರೆಯುತ್ತಿಲ್ಲ. ಸ್ಕಾಂದಪುರಾಣವೂ ಪೂರ್ತಿಯಾಗಿ ದೊರೆತು ಮುದ್ರಿತವಾಗಿಲ್ಲವೆಂದು ತಿಳಿಯಲೂ ಅವಕಾಶವಿದೆ. ಪ್ರಾಯಶಃ ಈ ಗ್ರಂಥವು ಆ ಭಾಗದಲ್ಲಿ ಸೇರಿದ್ದಾಗಿರಬಹುದು.

ಈ ಸೂತಸಂಹಿತೆಯಲ್ಲಿ ೬೧೬೦ ಶ್ಲೋಕಗಳಿವೆ. ಇದರಲ್ಲಿ ಶಿವಮಾಹಾತ್ಮ್ಯಖಂಡ, ಜ್ಞಾನಖಂಡ, ಮುಕ್ತಿಖಂಡ, ಯಜ್ಞವೈಭವಖಂಡಗಳೆಂದು ನಾಲ್ಕು ಖಂಡಗಳಿವೆ. ಈ ಯಜ್ಞವೈಭವಖಂಡದಲ್ಲಿ ಪೂರ್ವಭಾಗ ಉತ್ತರಭಾಗವೆಂದು ಎರಡು ಭಾಗಗಳಿವೆ. ಈ ಉತ್ತರ ಭಾಗದಲ್ಲಿ ಬ್ರಹ್ಮಗೀತಾ, ಸೂತಗೀತಾ, ಎಂದು ಎರಡು ಗೀತೆಗಳಿವೆ.

ಇತರ ಪುರಾಣಗಳಂತೆ ಇದರಲ್ಲೂ, ಕಥೆಗಳೂ, ದಿನಗಟ್ಟಲೆಯ ಜನಜೀವನದಲ್ಲಿ ಅನುಸರಿಸಬೇಕಾದ ನೀತಿಗಳೂ, ಆಚರಿಸಬೇಕಾದ ಧರ್ಮಕರ್ಮಗಳೂ, ಉಪಾಸನೆಗಳೂ, ವೇದಾಂತತತ್ವಗಳೂ, ಇವನ್ನು ವಿವರಿಸಲಾಗಿದೆ. ಇತರ ಪುರಾಣಗಳಲ್ಲಿ ಕಥೆಗಳಿಗೆ ಪ್ರಾಧಾನ್ಯವಿರುತ್ತದೆ. ಈ ಸೂತಸಂಹಿತೆಯಲ್ಲಿ ವೇದಾಂತತತ್ವನಿರೂಪಣೆಗೆ ಪ್ರಾಧಾನ್ಯವಿದೆ. ಈ ವೇದಾಂತತತ್ವದ ಸಾಕ್ಷಾತ್ಕಾರಕ್ಕೆ ಸಹಾಯಕವಾದ ಉಪಾಸನೆಯನ್ನೂ ಅದಕ್ಕೆ ಆವಶ್ಯಕವಾದ ಯೋಗ್ಯತೆಯನ್ನುಂಟುಮಾಡುವ ಚಿತ್ತಶುದ್ಧಿಗೆ ಸಾಧನವಾದ ದಿನಚರ್ಯೆಯನ್ನೂ ವಿವರಿಸಿ, ಕರ್ಮಕಾಂಡ ಜ್ಞಾನಕಾಂಡಗಳಿಗೆ ಸಾಮರಸ್ಯವನ್ನು ಮನಗಾಣಿಸಿರುವುದು ಒಂದು ವಿಶೇಷವಾಗಿದೆ. ಪ್ರಾಯಶಃ ಈ ಕಾರಣದಿಂದಲೇ ಶ್ರೀ ಶಂಕರಾಚಾರ್ಯರು ಈ ಸೂತಸಂಹಿತೆಯನ್ನು ಅನೇಕಾವೃತ್ತಿ ವ್ಯಾಸಂಗಮಾಡಿದ ಮೇಲೆ ಸೂತ್ರಭಾಷ್ಯವನ್ನು ಬರೆದರೆಂಬುದು " ತಾಮಷ್ಟಾದಶಧಾ ದೃಷ್ಟ್ವಾ ಶಂಕರಃ ಸೂತಸಂಹಿತಾಂ ।............ಚಕ್ರೇ ಶಾರೀರಸಂಹಿತಾಂ ॥ ಎಂಬ ಐತಿಹ್ಯದಿಂದ ತಿಳಿದುಬರುತ್ತಿದೆ.

†

ಈ ಸೂತಸಂಹಿತೆಯಲ್ಲಿ ಗಮನಿಸಬಹುದಾದ ಮತ್ತೊಂದು ವಿಶೇಷಗುಣವೂ ಇದೆ. ಈ ಪುರಾಣದಲ್ಲಿ ಶಿವಪಾರಮ್ಯವನ್ನು ವರ್ಣಿಸಿದ್ದರೂ ಇತರ ದೇವತೆಗಳಲ್ಲಿ ತಿರಸ್ಕಾರವನ್ನು ಹೇಳದೆ, ವಿಷ್ಣು, ಬ್ರಹ್ಮ, ಶಕ್ತಿ ಮುಂತಾದ ದೇವತೆಗಳ ಮಹಿಮೆಯನ್ನೂ ವರ್ಣಿಸಿದೆ. ಇದರಿಂದ ಭಗವದ್ಗೀತೆಯಲ್ಲಿ ಹೇಳಿರುವಂತೆ "ಯೋ ಯೋ ಯಾಂ ಯಾಂ ತನೂಂ ಭಕ್ತಃ |" ಎಂದು ಮುಂತಾಗಿ ವಿವರಿಸಿರುವ, ಪರಮತಸಹನೆಯಿಂದ ಕೂಡಿದ ವಿಶ್ವಧರ್ಮದ ನಿರೂಪಣೆಯನ್ನೂ ಚನ್ನಾಗಿ ಮಾಡಲಾಗಿದೆ.

ಮೇಲೆ ಹೇಳಿದ ಉದ್ದೇಶಕ್ಕೆ ಅನುಸಾರವಾಗಿ, ಈ ಸೂತಸಂಹಿತೆಯಲ್ಲಿ ಮೊದಲನೆಯದಾದ ಶಿವಮಾಹಾತ್ಮ್ಯಖಂಡದಲ್ಲಿ, ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ ಎಂಬ ಪರಶಿವನ ಪಂಚಸ್ವರೂಪವನ್ನೂ, ಲಿಂಗಮಹಾಪುರಾಣದಲ್ಲಿ ಸದ್ಯೋಜಾತಾದಿ ಪಂಚಶಿವಸ್ವರೂಪಗಳನ್ನೂ, ಪಂಚಬ್ರಹ್ಮಸ್ವರೂಪವೆಂದು ವರ್ಣಿಸಿರುವಂತೆ, ಇಲ್ಲೂ ವಿವರಿಸಿದೆ. ಶಿವಪೂಜಾ, ಶಕ್ತಿಪೂಜಾ, ವಿಷ್ಣುಮಹಿಮಾ ಮುಂತಾದುವನ್ನೂ ವಿವರಿಸಲಾಗಿದೆ.

ಎರಡನೆಯದಾದ ಜ್ಞಾನಖಂಡದಲ್ಲಿ ಜ್ಞಾನಸಾಧನವಾದ ಚಿತ್ತಶುದ್ಧಿಯನ್ನು ಉಂಟುಮಾಡುವ ವರ್ಣಾಶ್ರಮಧರ್ಮಗಳನ್ನೂ ಅಷ್ಟಾಂಗಯೋಗವನ್ನೂ ವರ್ಣಿಸಿ, ಪರಶಿವನ ತತ್ವಸ್ವರೂಪವನ್ನೂ, ಜೀವಬ್ರಹ್ಮೈಕ್ಯವನ್ನೂ, ವಿವರಿಸಿದೆ. "ಜ್ಞಾನವಿಹೀನಸ್ಸರ್ವಮತೇನ ಮುಕ್ತಿಂ ನ ಭಜತಿಜನ್ಮಶತೇನ ||" ಎಂಬಂತೆ ಮುಕ್ತಿಪ್ರಾಪ್ತಿಗೆ ಜ್ಞಾನವೇ ಮುಖ್ಯ ಸಾಧನವೆಂದೂ, ಜೀವರೂ ಶಿವನೂ, ಸಚ್ಚಿದಾನಂದರೂಪದಲ್ಲಿ ಅಭಿನ್ನರೆಂದೂ, ಭೇದಪ್ರಪಂಚದ ತೋರುವಿಕೆ ಎಲ್ಲವೂ ಆತ್ಮತತ್ವಸ್ವರೂಪವು ತಿಳಿಯದೆ ಇರುವಿಕೆ ಎಂಬ ಅಜ್ಞಾನ ಅಥವಾ ಮಾಯಾ, ಅಥವಾ ಶಕ್ತಿಯಪ್ರಭಾವವೆಂದೂ, ಈ ಅಜ್ಞಾನವು ಜ್ಞಾನದಿಂದಲೇ ನಿವೃತ್ತಿಯಾಗಬೇಕೆಂದೂ ವಿವರಿಸಿದೆ.

ಮೂರನೆಯದಾದ ಮುಕ್ತಿಖಂಡದಲ್ಲಿ ಮುಕ್ತಿ, ಮುಕ್ತ್ಯುಪಾಯ, ಮೋಚಕ, ಮೋಚಕಪ್ರದ, ಇವರ ಸ್ವರೂಪವನ್ನು ತಿಳಿಸಿದೆ. ಜ್ಞಾನವುಂಟಾಗದಿರುವುದಕ್ಕೆ ಕಾರಣಗಳನ್ನು ಹೇಳಿ, ಅವುಗಳನ್ನು ನಿವಾರಿಸಿಕೊಂಡು, ಜ್ಞಾನಸಂಪಾದನೆಗಾಗಿ ಗುರುವನ್ನು ಪಡೆಯಬೇಕೆಂದೂ, ಮೋಕ್ಷವು ಎಂತಹ ಜ್ಞಾನದಿಂದ ಉಂಟಾಗುತ್ತದೆಂದೂ, ತಿಳಿಯಹೇಳಿದೆ.

ನಾಲ್ಕನೆಯದಾದ ಯಜ್ಞವೈಭವಖಂಡದಲ್ಲಿ ವೇದಾಂತಾರ್ಥಸಾರವನ್ನು ತಿಳಿಯಹೇಳುವುದಕ್ಕಾಗಿ ಪರಾಪರವೇದಾರ್ಥಗಳನ್ನು ವಿವರಿಸಿ, ವೇದಾಂತಕ್ಕೂ

ಕರ್ಮಕಾಂಡಕ್ಕೂ ಸಂಬಂಧವನ್ನು ತಿಳಿಸಿ, ವಾಚಿಕ ಮುಂತಾದ ಯಜ್ಞಗಳ ಸ್ವರೂಪ ವನ್ನೂ, ಪ್ರಣವ, ಗಾಯತ್ರೀ, ಆತ್ಮಮಂತ್ರ, ಅಜಪಾಮಂತ್ರ, ಷಡಕ್ಷರ, ಸ್ವರೂಪ ವನ್ನೂ, ಈ ಮಂತ್ರಗಳಿಂದ ಉಪಾಸನೆಯನ್ನು ಮಾಡುವುದರಿಂದ ಹೇಗೆ ತತ್ವಸಾಕ್ಷಾತ್ಕಾರವು ಲಭಿಸುತ್ತದೆಂಬುದನ್ನೂ ಹೇಳಿದೆ. ಈ ಜ್ಞಾನವುಂಟಾಗಲು ಯೋಗ್ಯತೆಯು ದಿನಗಟ್ಟಲೆಯ ಧರ್ಮಾಚರಣೆಯಿಂದ, ಕರ್ಮಾನುಷ್ಠಾನದಿಂದ, ಅದರಲ್ಲೂ ನಿಷ್ಕಾಮ ಕರ್ಮಯೋಗದಿಂದ, ಹೇಗೆ ಉಂಟಾಗುತ್ತದೆಂಬುದನ್ನು ತಿಳಿಯ ಹೇಳಿದೆ.

ಇಂತಹ ಉತ್ತಮ ಗ್ರಂಥದ ವ್ಯಾಸಂಗದಿಂದ ಜನತೆಯ ತಿಳಿವಳಿಕೆಯೂ ನಡೆವಳಿಕೆಯೂ ಉತ್ತಮಗೊಳ್ಳಲೆಂಬ ಘನವಾದ ಉದ್ದೇಶದಿಂದ ಇದನ್ನು ಮುದ್ರಿಸಿ ಪ್ರಕಟಿಸಬೇಕೆಂದು, ನಮ್ಮನ್ನಾಳುತ್ತಿರುವ ಮಹಾಸ್ವಾಮಿಯವರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ.,** ಮಹಾಪ್ರಭುಗಳವರ ಅಪ್ಪಣೆಯನ್ನು ಅನುಸರಿಸಿ ಇದನ್ನು ಪ್ರಕಟಿಸಲಾಗಿದೆ. ಇಂತಹ ಸೇವಾವಕಾಶವನ್ನು ಕಲ್ಪಿಸಿಕೊಟ್ಟಿರುವ ಮಹಾಪ್ರಭುಗಳಲ್ಲಿ ನನ್ನ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಿ, ಈ ಮಹೋದ್ದೇಶವು ನೆರವೇರುವಂತಾಗಲೆಂದು ಜಗನ್ಮಾತೆಯನ್ನು ಪ್ರಾರ್ಥಿಸುತ್ತಿರುತ್ತೇನೆ.

ಪಾರ್ಥಿವಸಂವತ್ಸರದ
ವೈಶಾಖ ಕೃಷ್ಣ ದ್ವಾದಶೀ
ಗುರುವಾರ, 7—6—1945

ಎಡತೊರೆ ದೇವಯ್ಯದೀಕ್ಷಿತರ ಮಗ
ಚಂದ್ರಶೇಖರಶಾಸ್ತ್ರೀ

ಶ್ರೀಸೂತಸಂಹಿತೆಯ ಪ್ರಥಮಸಂಪುಟದಲ್ಲಿರುವ ವಿಷಯಗಳ ಸೂಚಿಕೆ

೧. ಶಿವಮಾಹಾತ್ಮ್ಯಖಂಡ

ಅಧ್ಯಾಯ	ವಿಷಯ	ಪುಟಸಂಖ್ಯಾ

೩. ಮುಕ್ತಿಖಂಡ

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಂದಪುರಾಣಾಂತರ್ಗತಾ
ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

|| ಪ್ರಥಮೋಽಧ್ಯಾಯಃ ||

ಮೊದಲನೆಯ ಅಧ್ಯಾಯವು

ಐಶ್ವರಂ ಪರಮಂ ತತ್ತ್ವಮಾದಿಮಧ್ಯಾಂತವರ್ಜಿತಂ ।
ಆಧಾರಂ ಸರ್ವಲೋಕಾನಾಮನಾಧಾರಮವಿಕ್ರಿಯಂ ॥೧॥

ಗಣೇಶಂ ವಿಘ್ನನಾಶಾಯ ವಾಣೀಂ ವಾಗರ್ಥಬುದ್ಧಯೇ ।
ಗುರುಂ ಮುಖ್ಯಾರ್ಥಬೋಧಾರ್ಥಂ ನಮಾಮಿ ಪರಯಾ ಮುದಾ ॥

ಮಹಾಮಹಿಮರಾದ ವ್ಯಾಸಮಹರ್ಷಿಗಳು ಲೋಕಾನುಗ್ರಹಮಾಡುವುದರಲ್ಲಿ ಆಸಕ್ತರಾಗಿ ಪರಶಿವನ ಸ್ವರೂಪವನ್ನು ಪ್ರಕಟಪಡಿಸುವುದೇ ಮುಖ್ಯವಾದ ಉದ್ದೇಶವಾಗಿ ಉಳ್ಳ ಈ ಸೂತಸಂಹಿತೆಯನ್ನು ಪ್ರಾರಂಭಮಾಡುತ್ತಾ, ಉತ್ತಮ ಪುರುಷಾರ್ಥವಾದ ಮೋಕ್ಷಕ್ಕೆ "ಶ್ರೇಯಾಂಸಿ ಬಹುವಿಘ್ನಾನಿ" ಎಂಬಂತೆ ಅನೇಕ ವಿಘ್ನಗಳುಂಟಾಗುವುದು ಸ್ವಾಭಾವಿಕವಾದುದರಿಂದ, ಅವುಗಳ ನಿವಾರಣೆಗಾಗಿ ಶಿಷ್ಟರ ಆಚಾರದಿಂದ ಊಹಿಸಿದ ವೇದದ ವಿಧಿಯಿಂದ ಆವಶ್ಯಕವಾಗಿ ಮಾಡಬೇಕಾದ ಪರಶಿವನ ಧ್ಯಾನ ಮತ್ತು ನಮಸ್ಕಾರರೂಪವಾದ ಮಂಗಳವನ್ನು ಈ ಗ್ರಂಥರಚನೆಯ ಆರಂಭದಲ್ಲಿ ಮಾಡಿ ಶಿಷ್ಯರ ತಿಳಿವಳಿಕೆಗಾಗಿ ಈ ಶ್ಲೋಕವನ್ನು ರಚಿಸಿರುವರು.

ಪರಮೇಶ್ವರನ ಸ್ವರೂಪವು ಪಾರಮಾರ್ಥಿಕ, ವ್ಯಾವಹಾರಿಕ, ಎಂದು ಎರಡು ಬಗೆಯಾಗಿದೆ. ಅವುಗಳಲ್ಲಿ ಶುದ್ಧವಾಗಿ ನಿಷ್ಕಲವೆನಿಸಿಕೊಂಡು ತ್ರಿಕಾಲಾಬಾಧ್ಯವಾಗಿ ವಿಕಾರವಿಲ್ಲದಿರುವುದು ಒಂದು. ಇದೇ ಪಾರಮಾರ್ಥಿಕಸ್ವರೂಪವು. ಲಿಂಗ, ಮೂರ್ತಿ, ಅವತಾರರೂಪವಾಗಿ, ಸಕಲವೆನಿಸಿಕೊಂಡು ಸಮಸ್ತ ಪ್ರಪಂಚಕ್ಕೂ ಆಧಾರವಾಗಿ, ಮಾಯೆಯಿಂದ ಕಲ್ಪಿತವಾದ ವಿಕಾರಸಹಿತವಾಗಿರುವಂತೆ ತೋರುತ್ತಿರುವುದು

ಅನಂತಾನಂದಬೋಧಾಂಬುನಿಧಿಮದ್ಭುತವಿಕ್ರಮಂ ।
ಅಂಬಿಕಾಪತಿಮೀಶಾನಮನೀಶಂ ಪ್ರಣಮಾಮ್ಯಹಂ ॥೨॥

ಮತ್ತೊಂದು. ಇದೇ ವ್ಯಾವಹಾರಿಕಸ್ವರೂಪವು. ಇವುಗಳಲ್ಲಿ ಮೊದಲನೆಯ ನಿಷ್ಕಲ ರೂಪವು ಅದ್ವಿತೀಯವೂ ನಿರ್ವಿಕಾರವೂ, ನಿರ್ಗುಣವೂ, ನಿತ್ಯಶುದ್ಧಬುದ್ಧಮುಕ್ತ ಸ್ವರೂಪವೂ ಆಗಿರುವ ಸಚ್ಚಿದಾನಂದದ್ವೈಕರಸವಾಗಿರುವುದು. ಎರಡನೆಯ ಸಕಲ ರೂಪವು ಜಗತ್ತಿಗೆ ಉಪಾದಾನಕಾರಣವಾಗಿ ಸಮಸ್ತ ಜಗತ್ತಿನ ತೋರುವಿಕೆಗೆ ಅಧಿಷ್ಠಾನ ಸ್ವರೂಪವಾಗಿಯೂ, ಲೀಲಾವತಾರರೂಪದಿಂದ ಸಕಲ ಪ್ರಪಂಚವನ್ನೂ, ನಿಯಮನಮಾಡತಕ್ಕದಾಗಿಯೂ, ಮೊದಲು, ಮಧ್ಯ, ತುದಿ ಎಂಬ ವ್ಯವಹಾರಕ್ಕೆ ಒಳಪಡದೆಯೂ ಇರುವುದು. ಎಲ್ಲಕ್ಕೂ ಮಿಗಿಲಾದ ಆ ಪರತತ್ವವು ತನಗಿಂತ ಬೇರೆಯಾದ ಆಧಾರವಿಲ್ಲದುದಾಗಿರುವುದು. "ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ, ಸ್ವೇ ಮಹಿಮ್ನೀತಿ." ಈ ಶ್ರುತಿಯಲ್ಲಿ ಹೇಳಿರುವ ರೀತಿಯಿಂದ ತನಗೆ ತಾನೇ ಆಧಾರವಾಗಿರುವುದು. ಇಂತಹ ತತ್ವಕ್ಕೆ ನಮಸ್ಕಾರಮಾಡುವೆನು. ॥೧॥

ಈ ಶ್ಲೋಕದಿಂದ ಲೀಲಾವತಾರರೂಪದ ಧ್ಯಾನವನ್ನು ವರ್ಣನೆಮಾಡಿರುವರು. ಶಿವನು ದುಷ್ಟನಿಗ್ರಹ ಶಿಷ್ಟರಕ್ಷಣೆ ಎಂಬ ಧರ್ಮದ ಪರಿಪಾಲನಾರ್ಥವಾಗಿಯೂ, ಭಕ್ತರ ಧ್ಯಾನಪೂಜಾದಿಗಳನ್ನು ಸ್ವೀಕರಿಸಿ ಅವರ ಕೋರಿಕೆಗಳನ್ನು ನೆರವೇರಿಸುತ್ತಾ ಕಡೆಗೆ ನಿಶ್ರೇಯಸವನ್ನೂ ಅನುಗ್ರಹಿಸುವುದಕ್ಕಾಗಿಯೂ, ಅವತಾರಮಾಡುವನು. "ಸುಪ್ರಭೇದ"ವೆಂಬ ಆಗಮಗ್ರಂಥದಲ್ಲಿ-ಯತೀನಾಂ ಮಂತ್ರಿಣಾಂ ಚೈವ ಜ್ಞಾನಿನಾಂ ಯೋಗಿನಾಂ ತಥಾ । ಧ್ಯಾನಪೂಜಾನಿಮಿತ್ತಂ ಹಿ ತನುಂ ಗೃಹ್ಣಾತಿ ಮಾಯಯಾ । ಎಂದು ಹೇಳಿರುವುದು. ತ್ರಿಪುರದಹನವೇ ಮುಂತಾದ ಆಶ್ಚರ್ಯಕರವಾದ ಪರಾಕ್ರಮಕಾರ್ಯವೂ, ಅಂಬಿಕಾಪತಿಯಾದುದರಿಂದ, ಗಿರಿಜಾಕಲ್ಯಾಣವೇ ಮೊದಲಾದ ಉತ್ಸವಗಳೂ, ಪರಮೇಶ್ವರನ ಲೀಲೆಗಳಾಗಿರುವುವು. ಹೀಗಾದ ಮೇಲೆ ಶಿವನು ಸಾಮಾನ್ಯ ಜನರಂತೆ, ರಾಗದ್ವೇಷಾದಿಗಳುಳ್ಳವನೇ? ಎಂದರೆ, ಪರಮೇಶ್ವರನು ವಿಜಯ, ವಿವಾಹ, ಮುಂತಾದ ವ್ಯಾಪಾರಗಳನ್ನು ಅಹಂಕಾರಮಮಕಾರಗಳೆಂಬ ಅಭಿಮಾನದ ಲೇಪವಿಲ್ಲದೆ ಅನಾಯಾಸವಾಗಿ ಲೀಲೆಯಿಂದ ಮಾಡುತ್ತಾ, ರಾಗದ್ವೇಷಾದಿಗಳಿಲ್ಲದೇ ಸಮಸ್ತ ಜಗತ್ತಿಗೂ ಒಡೆಯನಾಗಿ, ಮತ್ತೊಬ್ಬರಿಗೆ ಅಧೀನನಾಗದೇ, ಸ್ವತಂತ್ರನಾಗಿರುವನು. ಎಂಬುದು ಈಶಾನಂ ಅನೀಶಂ ಎಂಬ ಪದಗಳಿಂದ ತಿಳಿಯುವುದು. ಆದುದರಿಂದ ಇವನು ಸಾಮಾನ್ಯಜನರ ಹಾಗಲ್ಲವು. ಕಾರಣವೇನೆಂದರೆ ಪರಮೇಶ್ವ

ಸತ್ರಾವಸಾನೇ ಮುನಯೋ ವಿಶುದ್ಧಹೃದಯಾ ಭೃಶಂ ।
ನೈಮಿಷೀಯಾ ಮಹಾತ್ಮಾನಮಾಗತಂ ರೋಮಹರ್ಷಣಂ ॥೩॥

ರನು ಅನಂತಾನಂದಬೋಧಾಂಬುನಿಧಿಯು, ಎಂದರೆ ಅಳತೆಗೆ ಸಿಕ್ಕದಷ್ಟು ಮಿಗಿಲಾದ ಆನಂದವೂ, ಜ್ಞಾನವೂ, ಅವನಲ್ಲಿ ಸ್ವರೂಪವಾಗಿರುವುದು. ಲೌಕಿಕಾನಂದ ಜ್ಞಾನಗ ಳಂತೆ ಪರಮೇಶ್ವರನ ಜ್ಞಾನಾನಂದಗಳು ಹುಟ್ಟಿ ನಾಶವಾಗತಕ್ಕವುಗಳಲ್ಲವು. ಅಖಂಡೈಕ ರಸವಾದುವು. ಪರಮೇಶ್ವರನಿಗಿಂತ ಅತಿಶಯವಾದ ಮತ್ತೊಂದು ವಸ್ತುವಿಲ್ಲದು ದರಿಂದ ನಿರತಿಶಯವಾದುವು. ಲೋಕದ ಜನರು ಸಾಂತವೂ, ಸಾತಿಶಯವೂ ಆದ ಸಮುದ್ರವನ್ನು ಅನಂತವೂ, ನಿರತಿಶಯವೂ ಆದುದೆಂದು ತಿಳಿದುಕೊಂಡಿರುವುದ ರಿಂದ ಪರಮೇಶ್ವರನ ಆನಂದಜ್ಞಾನಗಳ ಮಹಿಮೆಯನ್ನು ತಿಳಿಸುವುದಕ್ಕಾಗಿ ಸಮು ದ್ರದ ರೂಪಣವನ್ನು ಮಾಡಿರುವುದು. ಪ್ರಪಂಚವೆಲ್ಲವೂ ಪರಮೇಶ್ವರನ ರೂಪವೇ ಆದಮೇಲೆ ಸಾಮಾನ್ಯ ಜನರೂ ಪರಮೇಶ್ವರನಿಗಿಂತ ಬೇರೆ ಅಲ್ಲವಾಯಿತು. ಅವರ ಜ್ಞಾನಾನಂದಗಳು ಪರಮೇಶ್ವರನ ಜ್ಞಾನಾನಂದಗಳಿಗೆ ಏಕೆ ಸಮಾನವಾಗಿಲ್ಲವೆಂದರೆ, ಈಗಲೂ ಇವರ ಜ್ಞಾನಾನಂದಗಳು ಪರಮೇಶ್ವರನ ಜ್ಞಾನಾನಂದಗಳಿಗೆ ಸಮಾನಗಳೇ ಆಗಿರುವುವು. ಆದರೂ ಜನರು ಅಜ್ಞಾನರೂಪವಾದ ಮಾಯೆಯ ಆವರಣಶಕ್ತಿಯ ಪ್ರಭಾವದಿಂದ ಅದನ್ನು ತಿಳಿಯದವರಾಗಿರುವರು. "ಅಜ್ಞಾನೇನಾವೃತಂಜ್ಞಾನಂ ತೇನ ಮುಹ್ಯಂತಿ ಜಂತವಃ ।" ಎಂದು ಭಗವದ್ಗೀತೆಯಲ್ಲಿ ವಿವರಿಸಿರುವುದು. ಅಜ್ಞಾ ನೇನಾವೃತೋಽರಾಮಃ ಸಾಕ್ಷಾನ್ನಾರಾಯಣೋಽಪಿ ಚ । ಸ್ವಸ್ವರೂಪಂ ತು ನಾಜ್ಞಾ ಸೀತ್" ಎಂದು ಅಜ್ಞಾನಾವರಣದ ಮಹಿಮೆಯನ್ನು ಹೇಳಿದೆ. ಇದರಿಂದ ಲೌಕಿಕ ವ್ಯವಹಾರವೆಲ್ಲವೂ ದುಃಖಬಹುಳವಾಗಿರುವುದು. ಇಂತಹ ಆವರಣವಿಲ್ಲದ ಪರಮಾ ನಂದಜ್ಞಾನರೂಪವು ಅನುಭವಕ್ಕೆ ಬರುತ್ತಿರುವುದರಿಂದ ಪರಮೇಶ್ವರನ ವಿಜಯ ವಿವಾಹಾದಿಕಾರ್ಯಗಳು ಲೀಲೆಗಳಾಗಿರುವುವು. ಇಲ್ಲಿ ನಿಷ್ಕಲನಾದ ಶಿವನಿಗೆ ಆ ನಿಷ್ಕಲ ರೂಪದಿಂದಿರುವುದೇ ನಮಸ್ಕಾರವಾಗುವುದು. ಸಕಲನಾದ ಶಿವನಿಗಾದರೋ ಧ್ಯಾನ ಸ್ತೋತ್ರಪೂಜಾರೂಪವಾದ ಕಾರ್ಯಗಳೇನಮಸ್ಕಾರವಾಗಿರುವುದು. ಸುಪ್ರಭೇದವೆಂಬ ಗ್ರಂಥದಲ್ಲಿ "ಧ್ಯಾನಪೂಜಾವಿಹೀನಂ ಯನ್ನಿಷ್ಕಲಂ ತದ್ವಿಧಾಯಕಂ । ತತ್ತಸ್ಮಾತ್ಸ ಕಲಂ ಶಂಭುಂ ನಿಷ್ಕಲಂ ಸಂಪ್ರಪೂಜಯೇತ್ ॥" ಎಂದು ಹೇಳಿರುವುದು. ॥೨॥

ನೈಮಿಷಾರಣ್ಯದಲ್ಲಿ ಮುನಿಗಳು ಸತ್ರವೆಂಬ ಒಂದು ದೊಡ್ಡ ಯಜ್ಞವನ್ನು ಮಾಡಿ ಪರಿಶುದ್ಧವಾದ ಮನಸ್ಸುಳ್ಳವರಾಗಿರಲು, ಆ ಸಮಯಕ್ಕೆ ಸರಿಯಾಗಿ

ದೃಷ್ಟ್ವಾ ಯಥಾರ್ಹಂ ಸಂಪೂಜ್ಯ ಪ್ರಸನ್ನೇಂದ್ರಿಯಮಾನಸಾಃ ।
ಪಪ್ರಚ್ಛುಃ ಸಂಹಿತಾಂ ಪುಣ್ಯಾಂ ಸೂತಂ ಪೌರಾಣಿಕಂ ಮುದಾ ॥೪॥

ಅಲ್ಲಿಗೆ ಬಂದ ಮಹಾತ್ಮನಾದ ಸೂತಮುನಿಯನ್ನು ಕಂಡು ಗುರುಭಾವದಿಂದ ಪೂಜಿಸಿ ಸಂತೋಷದಿಂದ ಕೂಡಿದವರಾಗಿ ಪುಣ್ಯಕರವಾದ ಸಂಹಿತೆಯನ್ನು ಹೇಳಬೇಕೆಂದು ಪ್ರಶ್ನೆಮಾಡಿದರು. ಇಲ್ಲಿ ವಿಶೇಷವೇನೆಂದರೆ—ವ್ಯಾಸಮಹರ್ಷಿಗಳು ಮಂಗಲಾಚರಣೆ ಮಾಡಿ ಸೂತನಿಗೂ, ಋಷಿಗಳಿಗೂ ಸಂವಾದರೂಪವಾಗಿ ಪುರಾಣವನ್ನು ಪ್ರಾರಂಭಿಸುವರು. ವ್ಯಾಸರು ಹಿಂದೆಯೇ ತಮ್ಮ ಶಿಷ್ಯನಾದ ಸೂತನಿಗೆ ಹದಿನೆಂಟು ಪುರಾಣಗಳಲ್ಲಿ ವ್ಯಕ್ತಪಡಿಸಿರುವ ತತ್ವವಿದ್ಯೆಯ ಮಹಿಮೆಯನ್ನು ಪ್ರಪಂಚದ ಜನರಿಗೆಲ್ಲರಿಗೂ ತಿಳಿಸಬೇಕೆಂಬ ಉದ್ದೇಶದಿಂದ ಈಗ ಮುನಿಸೂತಸಂವಾದರೂಪವಾಗಿ ಈ ಗ್ರಂಥವನ್ನು ರಚಿಸಿರುವರು.

ಸೂತನು ವಯಸ್ಸಿನಲ್ಲಿ ಚಿಕ್ಕವನಾದರೂ, ವ್ಯಾಸರು ಉಪದೇಶಿಸಿದ ಪುರಾಣಗಳಿಂದ ತತ್ವಗಳನ್ನು ತಿಳಿದು, ತನಗಿಂತಲೂ ವಯಸ್ಸಿನಲ್ಲಿ ದೊಡ್ಡವರಾದ ಮುನಿಗಳಿಗೆ ತತ್ವೋಪದೇಶವನ್ನು ಮಾಡಿದನು. ಎಂದಮೇಲೆ ತತ್ವಜ್ಞಾನದ ಮಹಿಮೆಯು ತಿಳಿದಂತಾಯಿತು. ಸತ್ರಾವಸಾನೇ, ವಿಶುದ್ಧಹೃದಯಾಃ, ಪ್ರಸನ್ನೇಂದ್ರಿಯಮಾನಸಾಃ, ಎಂಬ ಮೂರು ವಿಶೇಷಣಗಳಿಂದ ಮುನಿಗಳು ಪರವಿದ್ಯೋಪದೇಶಕ್ಕೆ ಅಧಿಕಾರವುಳ್ಳವರೆಂದು ವ್ಯಕ್ತವಾಗುವುದು. ಹೇಗೆಂದರೆ—ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಗಳಲ್ಲಿ ಹೇಳಿದ ವೇದಾಭ್ಯಾಸ, ಯಜ್ಞ, ದಾನ, ತಪಸ್ಸು, ವ್ರತ ಇವುಗಳಿಂದ ಪಾಪಗಳೆನ್ನೆಲ್ಲವನ್ನೂ ಕಳೆದುಕೊಂಡು ಶುದ್ಧವಾದ ಬುದ್ಧಿಯುಳ್ಳವನಿಗೆ ಪರಮಶಿವನ ಸ್ವರೂಪವನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯುಂಟಾಗುವುದು. ಅವನೇ ಜ್ಞಾನಕ್ಕೆ ಅಧಿಕಾರಿಯು. ಇಂತಹ ವಿದ್ಯೆಯನ್ನು ಗ್ರಹಿಸುವ ಅಧಿಕಾರವುಂಟಾಗಲು ಕಾರಣಗಳಾದ ಗುಣಗಳಾವುವೆಂಬುದನ್ನು ವ್ಯಕ್ತಪಡಿಸಬೇಕು. " ಸತ್ರಾವಸಾನೇ " ಎಂಬ ಪದದಿಂದ ಶ್ರುತಿಯಲ್ಲಿ ಹೇಳಿದ ಸಕಲ ಕರ್ಮಗಳನ್ನೂ ಮಾಡಿದರೇ, ಜ್ಞಾನಕ್ಕೆ ಪ್ರತಿಬಂಧಕಗಳಾದ ಸಕಲ ಪಾಪಗಳ ನಾಶರೂಪವಾದ ಬುದ್ಧಿಶುದ್ಧಿಯುಂಟಾಗುವುದು. ಎಂದು ಹೇಳಿದಂತಾಯಿತು. ಸೋಮಯಾಗವು ಏಕಾಹ, ಅಹೀನ, ಸತ್ರ, ಅಯನ, ಎಂದು ನಾಲ್ಕು ಬಗೆಯಾಗಿರುವುದು. ಒಂದೊಂದೇ ದಿನದಲ್ಲಿ ಮಾಡಿ ಮುಗಿಸುವ ಅಗ್ನಿಷ್ಟೋಮಾದಿಗಳು ಏಕಾಹವೆನಿಸುವುವು. ಎರಡುದಿನ ಮೊದಲುಗೊಂಡು ಹನ್ನೊಂದು ದಿನಗಳು ಪೂರ್ತಿಯಾಗುವವರೆಗೂ ಮಾಡುವ ಯಾಗಗಳು ಅಹೀನಗಳು. ಹನ್ನೆರಡು ದಿನ

ಮಾಡುವ ಯಾಗಗಳು, ಸತ್ರ, ಅಹೀನ ಎಂಬ ಎರಡು ಹೆಸರುಗಳನ್ನು ಪಡೆಯುವುವು. ಹದಿಮೂರು ದಿನಗಳಿಗಿಂತ ಹೆಚ್ಚಿನ ದಿನಗಳ ವರೆಗೆ ಮಾಡುವ ಯಾಗಗಳು ಸತ್ರಗಳು. ವರ್ಷಗಟ್ಟಲೆ ಮಾಡತಕ್ಕ ಯಾಗಗಳು ಅಯನಗಳು. ಈ ಅಯನಗಳನ್ನೂ, ಸತ್ರಗಳೆಂದೇ ಕರೆಯುವ ರೂಢಿಯಾಗಿರುವುದು. ಇದಕ್ಕೆ ಪ್ರಮಾಣವೇನೆಂದರೆ—ಗಾವೋ ವಾ ಏತತ್ಸತ್ರಮಾಸತ, ವಿಶ್ವಸೃಜಃ ಸಮಾಃ ಸತ್ರಮಾಸತ, ನೈಮಿಷೇ ನಿಮಿಷಕ್ಷೇತ್ರೇ ಋಷಯಃ ಶೌನಕಾದಯಃ। ಸತ್ರಂ ಸ್ವರ್ಗಾಯ ಲೋಕಾಯ, ಸಹಸ್ರಸಮ ಮಾಸತ ॥ ಎಂಬಲ್ಲಿ ನೈಮಿಷಾರಣ್ಯವಾಸಿಗಳಾದ ಋಷಿಗಳು ಅನೇಕ ವರ್ಷಗಳವರೆಗೆ ಮಾಡಿದ ಯಜ್ಞವು ಅಯನವಾದರೂ ಅದನ್ನು ಸತ್ರವೆಂದೇ ಹೇಳಿರುವರು. ಯಜ್ಞದಂತೆಯೇ, ದಾನ, ತಪಸ್ಸು, ವ್ರತ ಮುಂತಾದುವುಗಳೂ, ಚಿತ್ತಶುದ್ಧಿದ್ವಾರಾ ಜ್ಞಾನ ಕಾರಣಗಳಾಗಿರುವುವು. " ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನ ದಾನೇನ ತಪಸಾಽನಾಶಕೇನ " ಎಂದು ವೇದವು ಹೇಳಿರುವುದು. ಹೀಗೆಯೇ ಪಾಶುಪತವ್ರತವೂ ಪರಶಿವನ ಸಾಕ್ಷಾತ್ಕಾರಕ್ಕೆ ಕಾರಣವಾಗುವುದೆಂದು ಅಥರ್ವಶಿರೋಪನಿಷತ್ತಿನಲ್ಲಿ ಹೇಳಿದೆ. " ಅಗ್ನಿರಿತಿ ಭಸ್ಮ" ಎಂದು ಭಸ್ಮವನ್ನು ತೆಗೆದು ಅದನ್ನು ನೀರಿನಲ್ಲಿ ಕಲಸಿ ಅಂಗಗಳಿಗೆ ಬಳಿದುಕೊಂಡರೇ ಪಾಪನಾಶವಾಗುವುದು. ಇದು ಪಾಶುಪತವ್ರತವು. " ವಿಶುದ್ಧಹೃದಯಾಃ " ಎಂಬ ಪದವು ಶುದ್ಧಬುದ್ಧಿ ಎಂಬ ಅರ್ಥವನ್ನು ಹೇಳುವುದು. ಇದು ಸಂಚಿತಪಾಪಫಲಗಳನ್ನು ನಾಶಮಾಡುವುದರಿಂದ ಆ ಫಲಸಂಬಂಧವಾದ ದುಃಖನಾಶವನ್ನು ಹೇಳಿದಂತಾಯಿತು. ತಪಸ್ಸಿಗೆ ಯೋಗ್ಯವಾದ ಸ್ಥಳವಾವುದೆಂದು ಕೇಳಿದ ಮುನಿಗಳಿಗೆ ಬ್ರಹ್ಮನು ಸೂರ್ಯನಂತೆ ಹೊಳೆಯುತ್ತಿರುವ ಒಂದು ಮನೋಮಯವಾದ ಚಕ್ರವನ್ನು ನಿರ್ಮಿಸಿಕೊಟ್ಟು, ಶಿವನಿಗೆ ನಮಸ್ಕರಿಸಿ, ಹೇಳಿದನು. ಈ ಚಕ್ರದ ನೇಮಿಯು(ಅಂಚು) ಎಲ್ಲಿ ಕಳಚಿಬೀಳುವುದೋ ಅದೇ ತಪಸ್ಸಿಗೆ ಯೋಗ್ಯವಾದ ಕ್ಷೇತ್ರವು ಎಂದು ಹೇಳಿದಂತೆ ಆದುದರಿಂದ ನೈಮಿಷಕ್ಷೇತ್ರವು ತಪಸ್ಸಿಗೆ ಯೋಗ್ಯವಾದ ಸ್ಥಳವಾಗಿರುವುದು. ಪ್ರಸನ್ನೇಂದ್ರಿಯಮಾನಸಾಃ ಎಂಬ ಪದದಿಂದ ತೋರುವ ಮನಃಪ್ರಸಾದವೆಂಬುದು, ರಜಸ್ತಮೋಗುಣಗಳ ಬಾಧೆಯಿಲ್ಲದುದರಿಂದುಂಟಾದ ವಿಕ್ಷೇಪ ಮತ್ತು ಆವರಣ ಶಕ್ತಿಗಳಿಲ್ಲದಿರುವ, ತತ್ವನಿಶ್ಚಯಸಾಧನವಾದ ಐಕಾಗ್ರತೆಯು. ಇಂದ್ರಿಯಪ್ರಸಾದವೆಂಬುದು ಮನಸ್ಸಿಗೆ ಪ್ರತಿಕೂಲವಾಗಿರುವ ಇಂದ್ರಿಯವ್ಯಾಪಾರಗಳು ನಿಂತು ಶಾಂತವಾಗಿರುವ ಸ್ಥಿತಿಯು. ಶ್ರುತಿಯಲ್ಲಿ—ಯಸ್ತ್ವವಿಜ್ಞಾನವಾನ್ಭವತ್ಯಮನಸ್ಕಃ ಸದಾಽಶುಚಿಃ । ತಸ್ಯೇಂದ್ರಿಯಾಣ್ಯವಶ್ಯಾನಿ ದುಷ್ಟಾಶ್ವಾ ಇವಸಾರಥೇಃ।ಯಸ್ತು ವಿಜ್ಞಾನವಾನ್ಭವತಿ ಸಮನಸ್ಕಃ ಸದಾ ಶುಚಿಃ। ತಸ್ಯೇಂದ್ರಿಯಾಣಿ

ಏವಂ ಪೃಷ್ಟೋ ಮುನಿಶ್ರೇಷ್ಠೈಃ ಸೂತಃ ಸರ್ವಾರ್ಥದಾಯಿನಂ ।
ಮಹಾದೇವಂ ಮಹಾತ್ಮಾನಂ ಧ್ಯಾತ್ವಾ ವ್ಯಾಸಂ ಚ ಭಕ್ತಿತಃ ॥೫॥

ವಶ್ಯಾನಿ ಸದಶ್ವಾ ಇವ ಸಾರಥೇಃ॥" ಕಠ.ಉ. ೩. ೫-೬ ಎಂದು ಹೇಳಿರುವುದು. ಈ ಜನ್ಮದಲ್ಲಿ ಅಥವಾ ಜನ್ಮಾಂತರದಲ್ಲಿ ಮಾಡಿದ ವ್ರತದಾನಾದಿಗಳಿಂದ ಸಂಚಿತವಾಗಿದ್ದ ಪಾಪಗಳು ನಾಶವಾಗಿ ರಜಸ್ತಮೋಗುಣಗಳು ಮನಸ್ಸನ್ನು ಆಕ್ರಮಿಸಗೊಡದೇ ತತ್ತ್ವವನ್ನು ತಿಳಿಯಬೇಕೆಂದು ಅಪೇಕ್ಷಿಸುವವರೇ ವಿದ್ಯಾಗ್ರಹಣಕ್ಕೆ ಅಧಿಕಾರಿಗಳೆಂಬುದನ್ನು ಹೇಳಿದಂತಾಯಿತು. "ಮಹಾತ್ಮಾನಂ" "ಆಗತಂ" ಎಂಬ ಎರಡು ಪದಗಳಿಂದ ಸೂತನಿಗೆ ವಿದ್ಯೋಪದೇಶಮಾಡುವ ಅಧಿಕಾರವಿರುವುದೆಂದು ಹೇಳಿದಂತಾಗಿದೆ. ವಿದ್ಯೋಪದೇಶಕ್ಕೆ ಅನುಗ್ರಹಸಾಮರ್ಥ್ಯ, ಅನುಗ್ರಹಮಾಡುವ ಸ್ವಭಾವ, ಎರಡೂ ಇರಬೇಕು. "ಮಹಾತ್ಮಾನಂ" ಎಂಬ ಪದದಿಂದ ಮಹಾದೇವನ ಅನುಗ್ರಹದಿಂದ ಪರಶಿವನನ್ನು ಸಾಕ್ಷಾತ್ಕಾರಮಾಡಿಕೊಂಡಿರುವುದೇ ಸೂತನಿಗಿರುವ ಅನುಗ್ರಹಸಾಮರ್ಥ್ಯವೆಂದೂ, "ಆಗತಂ" ಎಂಬ ಪದದಿಂದ ಯೋಗ್ಯರಾದ ಅಧಿಕಾರಿಗಳು ದೊರೆತುದರಿಂದ ಅವರನ್ನು ಉದ್ಧಾರಮಾಡುವುದಕ್ಕಾಗಿ, ಕರೆಯದಿದ್ದರೂ ತಾನೇ ಬಂದುದರಿಂದ ಅತ್ಯಂತ ದಯಾಳುವಾದ ಸೂತನು ಅನುಗ್ರಹಮಾಡುವ ಸ್ವಭಾವದವನೆಂದೂ, ವ್ಯಕ್ತವಾಗುವುದು. ಹೀಗೆಯೇ ಜ್ಞಾನಕ್ಕೆ ಅಧಿಕಾರಿಯಾದ ಜನಕನ ಸಮೀಪಕ್ಕೆ ಅನುಗ್ರಹಸಾಮರ್ಥ್ಯವೂ, ಸ್ವಭಾವವೂವುಳ್ಳ ಯಾಜ್ಞವಲ್ಕ್ಯರು ಬಂದರೆಂದು ವೇದದಲ್ಲಿ ಹೇಳಿರುವುದು. ವಿದ್ಯಾಗ್ರಹಣಾಧಿಕಾರವುಳ್ಳ ಮುನಿಗಳು ಉಪದೇಶ ಮಾಡುವುದಕ್ಕೆ ಯೋಗ್ಯನಾದ ಗುರುವು ದೊರೆತನೆಂಬ ಸಂತೋಷದಿಂದ ಸೂತನನ್ನು ಪೂಜಿಸಿ ಪ್ರಶ್ನೆಮಾಡಿದರು. ಎಂಬುದನ್ನು "ಸಂಪೂಜ್ಯ" "ಪಪ್ರಚ್ಛುಃ" ಎಂಬ ಪದಗಳು ಹೇಳುವುವು. ಗೀತೆಯಲ್ಲಿ—ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ। ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ॥ ಭ.ಗೀ. ೪.೩೪. ಎಂದು ಹೇಳಿರುವುದೇ ಇದಕ್ಕೆ ಪ್ರಮಾಣವು. ॥೩-೪॥

ಈ ರೀತಿಯಲ್ಲಿ ಮುನಿಶ್ರೇಷ್ಠರು ಪ್ರಶ್ನೆಮಾಡಲು ಸೂತನು ಸಮಸ್ತ ಇಷ್ಟಾರ್ಥಗಳನ್ನು ಕೊಡುವ ಮಹಾಮಹಿಮನಾದ ಪರಮೇಶ್ವರನನ್ನೂ, ಗುರುವಾದ ವ್ಯಾಸನನ್ನೂ, ಭಕ್ತಿಯಿಂದ ಧ್ಯಾನಮಾಡಿ ಏಕಾಗ್ರಚಿತ್ತನಾಗಿ ಮುನಿಗಳನ್ನು ನೋಡಿ ವೇದಕ್ಕೆ ಸಮವಾದ (ಸಕಲ ವೇದಾರ್ಥಗಳ ಸಂಗ್ರಹರೂಪವಾದ) ಸಂಹಿತೆಯನ್ನು ಹೇಳಲು ಪ್ರಾರಂಭಮಾಡಿದನು. ಇಲ್ಲಿ "ವಿಲೋಕ್ಯ" ಎಂಬ ಪದದಿಂದ ಶಿಷ್ಯರನ್ನು

ಸಮಾಹಿತಮನಾ ಭೂತ್ವಾ ವಿಲೋಕ್ಯ ಮುನಿಸತ್ತಮಾನ್ ।
ವಕ್ತುಮಾರಭತೇ ಸೂತಃ ಸಂಹಿತಾಂ ಶ್ರುತಿಸಮ್ಮಿತಾಂ ॥೬॥

॥ ಸೂತ ಉವಾಚ ॥

ಬ್ರಾಹ್ಮಂ ಪುರಾಣಂ ಪ್ರಥಮಂ ದ್ವಿತೀಯಂ ಪಾದ್ಮಮುಚ್ಯತೇ ।
ತೃತೀಯಂ ವೈಷ್ಣವಂ ಪ್ರೋಕ್ತಂ ಚತುರ್ಥಂ ಶೈವಮುಚ್ಯತೇ ॥೭॥

ತತೋ ಭಾಗವತಂ ಪ್ರೋಕ್ತಂ ಭವಿಷ್ಯಾಖ್ಯಂ ತತಃ ಪರಂ ।
ಸಪ್ತಮಂ ನಾರದೀಯಂ ಚ ಮಾರ್ಕಂಡೇಯಂ ತಥಾಽಷ್ಟಮಂ ॥೮॥

ಆಗ್ನೇಯಂ ನವಮಂ ಪಶ್ಚಾದ್ಬ್ರಹ್ಮವೈವರ್ತಮೇವ ಚ ।
ತತೋ ಲೈಂಗಂ ವರಾಹಂ ಚ ತತಃ ಸ್ಕಾಂದಮನುತ್ತಮಂ ॥೯॥

ವಾಮನಾಖ್ಯಂ ತತಃ ಕೌರ್ಮಂ ಮಾತ್ಸ್ಯಂ ತತ್ಪರಮುಚ್ಯತೇ ।
ಗರುಡಾಖ್ಯಂ ತತಃ ಪ್ರೋಕ್ತಂ ಬ್ರಹ್ಮಾಂಡಂ ತತ್ಪರಂ ವಿದುಃ ॥೧೦॥

ನೋಡುವುದೆಂಬ ಚಾಕ್ಷುಷದೀಕ್ಷೆಯನ್ನು ಸೂಚಿಸಿರುವುದು. ಆಗಮಗಳಲ್ಲಿ ಚಾಕ್ಷುಷ ದೀಕ್ಷೆಯನ್ನು ಕುರಿತು— ಚಕ್ಷುರುನ್ಮೀಲ್ಯ ಯತ್ತತ್ತ್ವಂ ಧ್ಯಾತ್ವಾ ಶಿಷ್ಯಂ ಸಮೀಕ್ಷತೇ । ಪಶುಬಂಧವಿಮೋಕ್ಷಾಯ ದೀಕ್ಷೇಯಂ ಚಾಕ್ಷುಷೀ ಮತಾ ॥ ಎಂದು ಹೇಳಿರುವುದು. ಪರಮೇಶ್ವರನಿಗೆ ನಮಸ್ಕಾರ ಮಾಡಿದಂತೆಯೇ ಗುರುವಿಗೂ ನಮಸ್ಕಾರ ಮಾಡಬೇಕೆಂದು ಶ್ವೇತಾಶ್ವತರೋಪನಿಷತ್ತಿನಲ್ಲಿ—ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ । ತಸ್ಯೈತೇ(ಽ)ಕಥಿತಾಽಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥ ಎಂದು ಹೇಳಿರುವುದು. ಶ್ವೇ.ಉ. ೬.೨೩. ॥೫-೬॥

ಸೂತನು ಹೇಳಿದನು— ಸೂತನು ತಾನು ಹೇಳಬೇಕೆಂದಿರುವ ಸೂತ ಸಂಹಿತೆಯು ವ್ಯಾಸರ ಮುಖದಿಂದ ಬಂದುದೆಂದೂ, ಅನೇಕ ಮುನಿಗಳು ರಚಿಸಿರುವ ಸಮಸ್ತ ಉಪಪುರಾಣಗಳಿಗೂ, ವ್ಯಾಸರು ರಚಿಸಿರುವ ಹದಿನೆಂಟು ಪುರಾಣಗಳು ಮೂಲಗಳೆಂದೂ, ವೇದಶಾಖೆಗಳನ್ನು ವಿಭಾಗಮಾಡಿದುದರಿಂದ ವ್ಯಾಸರು ಸರ್ವಜ್ಞರೆಂದೂ, ಪರಮೇಶ್ವರನ ಅವತಾರವೆಂದೂ ತಿಳಿಯಿಸುವುದಕ್ಕಾಗಿ, ಅವರು ಮಾಡಿದ ಹದಿನೆಂಟು ಪುರಾಣಗಳ ಹೆಸರುಗಳನ್ನು ಕ್ರಮವಾಗಿ ಹೇಳುವನು. ಬ್ರಾಹ್ಮ ೧, ಪಾದ್ಮ ೨, ವಿಷ್ಣು ೩, ಶಿವ ೪, ಭಾಗವತ ೫, ಭವಿಷ್ಯ ೬, ನಾರದೀಯ ೭

ಗ್ರಂಥತಶ್ಚ ಚತುರ್ಲಕ್ಷಂ ಪುರಾಣಂ ಮುನಿಪುಂಗವಾಃ ।
ಅಷ್ಟಾದಶಪುರಾಣಾನಾಂ ಕರ್ತಾ ಸತ್ಯವತೀಸುತಃ ॥೧೧॥

ಕಾಮಿಕಾದಿ ಪ್ರಭೇದಾನಾಂ ಯಥಾದೇವೋ ಮಹೇಶ್ವರಃ ।
ಅಷ್ಟಾದಶಪುರಾಣಾನಿ ಶ್ರುತ್ವಾ ಸತ್ಯವತೀ ಸುತಾತ್ ॥೧೨॥

ಅನ್ಯಾನ್ಯುಪಪುರಾಣಾನಿ ಮುನಿಭಿಃ ಕೀರ್ತಿತಾನಿ ತು ।
ಆದ್ಯಂ ಸನತ್ಕುಮಾರೇಣ ಪ್ರೋಕ್ತಂ ವೇದವಿದಾಂ ವರಾಃ ॥೧೩॥

ದ್ವಿತೀಯಂ ನಾರಸಿಂಹಾಖ್ಯಂ ತೃತೀಯಂ ನಾಂದಮೇವ ಚ ।
ಚತುರ್ಥಂ ಶಿವಧರ್ಮಾಖ್ಯಂ ದೌರ್ವಾಸಂ ಪಂಚಮಂ ವಿದುಃ ॥೧೪॥

ಷಷ್ಠಂ ತು ನಾರದೀಯಾಖ್ಯಂ ಕಾಪಿಲಂ ಸಪ್ತಮಂ ವಿದುಃ ।
ಅಷ್ಟಮಂ ಮಾನವಂ ಪ್ರೋಕ್ತಂ ತತಶ್ಚೋಶನಸೇರಿತಂ ॥೧೫॥

ಮಾರ್ಕಂಡೇಯ ೮, ಆಗ್ನೇಯ ೯, ಬ್ರಹ್ಮವೈವರ್ತ ೧೦, ಲಿಂಗ ೧೧, ವರಾಹ ೧೨, ಸ್ಕಾಂದ ೧೩, ವಾಮನ ೧೪, ಕೂರ್ಮ ೧೫, ಮತ್ಸ್ಯ ೧೬, ಗರುಡ ೧೭, ಬ್ರಹ್ಮಾಂಡ ೧೮, ಇವುಗಳು ಹದಿನೆಂಟು ಮಹಾಪುರಾಣಗಳು. ॥೭-೮-೯-೧೦॥

ಎಲೈ ಮುನಿಶ್ರೇಷ್ಠರೇ, ಈ ಹದಿನೆಂಟು ಮಹಾಪುರಾಣಗಳಲ್ಲಿಯೂ ಒಟ್ಟು ನಾಲ್ಕು ಲಕ್ಷ ಶ್ಲೋಕಗಳಿರುವುವು. ಇವುಗಳನ್ನೆಲ್ಲವನ್ನೂ ಸತ್ಯವತೀ ಪುತ್ರರಾದ ವ್ಯಾಸರೇ ಮಾಡಿದರು. ॥೧೧॥

ಕಾಮಿಕ, ಕಾರಣ ಮುಂತಾದ ಆಗಮಶಾಸ್ತ್ರಗಳನ್ನು ಮಹೇಶ್ವರನು ಹೇಗೆ ನಿರ್ಮಿಸಿದನೋ ಹಾಗೆ ನಾರಾಯಣನ ಅವತಾರರಾದ ವ್ಯಾಸರು ಹದಿನೆಂಟು ಪುರಾಣಗಳನ್ನು ನಿರ್ಮಿಸಿದರು.

ಸತ್ಯವತೀ ಪುತ್ರರಾದ ವ್ಯಾಸರಿಂದ ಹದಿನೆಂಟು ಮಹಾಪುರಾಣಗಳನ್ನೂ ಕೇಳಿ ಇತರ ಮುನಿಗಳೂ, ಬೇರೆ ಉಪಪುರಾಣಗಳನ್ನು ರಚಿಸಿದರು. ॥೧೨॥

ವೇದವನ್ನು ತಿಳಿದವರಲ್ಲಿ ಶ್ರೇಷ್ಠರಾದ ಋಷಿಗಳೇ, ಕೇಳಿರಿ. ಸನತ್ಕುಮಾರ ೧, ನಾರಸಿಂಹ ೨, ನಾಂದ ೩, ಶಿವಧರ್ಮ ೪, ದೌರ್ವಾಸ ೫, ನಾರದೀಯ ೬,

ತತೋ ಬ್ರಹ್ಮಾಂಡಸಂಜ್ಞಂ ತು ವಾರುಣಾಖ್ಯಂ ತತಃ ಪರಂ ।
ತತಃ ಕಾಲೀಪುರಾಣಾಖ್ಯಂ ವಿಶಿಷ್ಟಂ ಮುನಿಪುಂಗವಾಃ ॥೧೬॥

ತತೋ ವಾಸಿಷ್ಠಲೈಂಗಾಖ್ಯಂ ಪ್ರೋಕ್ತಂ ಮಾಹೇಶ್ವರಂ ಪರಂ ।
ತತಃ ಸಾಂಬಪುರಾಣಾಖ್ಯಂ ತತಃ ಸೌರಂ ಮಹಾದ್ಭುತಂ ॥೧೭॥

ಪರಾಶರಂ ತತಃ ಪ್ರೋಕ್ತಂ ಮಾರೀಚಾಖ್ಯಂ ತತಃ ಪರಂ ।
ಭಾರ್ಗವಾಖ್ಯಂ ತತಃ ಪ್ರೋಕ್ತಂ ಸರ್ವಧರ್ಮಾರ್ಥಸಾಧಕಂ ॥೧೮॥

ಲಕ್ಷಂ ತು ಗ್ರಂಥಸಂಖ್ಯಾಭಿಃ ಸರ್ವವಿಜ್ಞಾನಸಾಗರಂ ।
ಸ್ಕಾಂದಮುದ್ಯಾಭಿವಕ್ಷ್ಯಾಮಿ ಪುರಾಣಂ ಶ್ರುತಿಸಮ್ಮಿತಂ ॥೧೯॥

ಷಡ್ವಿಧಂ ಸಂಹಿತಾಭೇದೈಃ ಪಂಚಾಶತ್ಖಂಡಮಂಡಿತಂ ।
ಆದ್ಯಾ ಸನತ್ಕುಮಾರೋಕ್ತಾ ದ್ವಿತೀಯಾ ಸೂತಸಂಹಿತಾ ॥೨೦॥

ತೃತೀಯಾ ಶಾಂಕರೀ ವಿಪ್ರಾಶ್ಚತುರ್ಥೀ ವೈಷ್ಣವೀ ಮತಾ ।
ತತ್ಪರಾ ಸಂಹಿತಾ ಬ್ರಾಹ್ಮೀ ಸೌರಾಽಂತ್ಯಾ ಸಂಹಿತಾ ಮತಾ ॥೨೧॥

ಕಾಪಿಲ ೭, ಮಾನವ ೮, ಉಶನಸ ೯, ಬ್ರಹ್ಮಾಂಡ ೧೦, ವಾರುಣ ೧೧, ಕಾಲೀಪುರಾಣ ೧೨, ವಾಸಿಷ್ಠಲೈಂಗ ೧೩, ಮಾಹೇಶ್ವರ ೧೪, ಸಾಂಬ ೧೫, ಸೌರ ೧೬, ಪರಾಶರ ೧೭, ಮಾರೀಚ ೧೮, ಭಾರ್ಗವ ೧೯, ಈ ಉಪಪುರಾಣಗಳು ಸಮಸ್ತ ಧರ್ಮಾರ್ಥಸಾಧಕವಾದುವುಗಳಾಗಿ ಬೇರೆ ಬೇರೆ ಋಷಿಗಳಿಂದ ವಿರಚಿತವಾದುವು. ॥೧೩-೧೪-೧೫-೧೬-೧೭-೧೮॥

ಉಪಪುರಾಣಗಳು ಸಮಸ್ತವಿಜ್ಞಾನಕ್ಕೂ ಸಾಗರಸ್ವರೂಪವಾಗಿ ಒಂದು ಲಕ್ಷ ಶ್ಲೋಕಗಳಿಂದ ಕೂಡಿರುವುವು. ಇನ್ನು ವೇದಕ್ಕೆ ಸಮಾನವಾದ ಸ್ಕಾಂದಪುರಾಣದ ವಿಷಯವನ್ನು ಹೇಳುವೆನು. ಹದಿಮೂರನೆಯದಾದ ಸ್ಕಾಂದಪುರಾಣದಲ್ಲಿ ಆರು ಸಂಹಿತೆಗಳೂ, ಐವತ್ತು ಖಂಡಗಳೂ ಇರುವುವು. ॥೧೯॥

ಸನತ್ಕುಮಾರಸಂಹಿತೆ ೧, ಸೂತಸಂಹಿತೆ ೨, ಶಂಕರಸಂಹಿತೆ ೩, ವಿಷ್ಣುಸಂಹಿತೆ ೪, ಬ್ರಹ್ಮಸಂಹಿತೆ ೫, ಸೌರಸಂಹಿತೆ ೬ ಎಂದು ಸ್ಕಾಂದಪುರಾಣವು ಆರು ಸಂಹಿತೆಯಾಗಿ ಭಾಗವಾಗಿರುವುದು. ॥೨೦-೨೧॥

ಗ್ರಂಥತಃ ಪಂಚಪಂಚಾಶತ್ಸಹಸ್ರೇಣೋಪಲಕ್ಷಿತಾ ।
ಆದ್ಯಾ ತು ಸಂಹಿತಾ ವಿಪ್ರಾ ದ್ವಿತೀಯಾ ಷಟ್ಸಹಸ್ರಿಕಾ ॥೨೨॥

ತೃತೀಯಾ ಗ್ರಂಥತಸ್ತ್ರಿಂಶತ್ಸಹಸ್ರೇಣೋಪಲಕ್ಷಿತಾ ।
ತುರೀಯಾ ಸಂಹಿತಾ ಪಂಚಸಹಸ್ರೇಣಾಭಿನಿರ್ಮಿತಾ ॥೨೩॥

ತತೋಽನ್ಯಾಸ್ತ್ರಿಸಹಸ್ರೇಣ ಗ್ರಂಥೇನೈವ ವಿನಿರ್ಮಿತಾಃ ।
ಅನ್ಯಾ ಸಹಸ್ರತಃ ಸೃಷ್ಟಾ ಗ್ರಂಥತಃ ಪಂಡಿತೋತ್ತಮಾಃ ॥೨೪॥

ದ್ವಿತೀಯಾಂ ಸಂಹಿತಾಂ ವಕ್ಷ್ಯೇ ಸರ್ವಪಾಪಪ್ರಣಾಶಿನೀಂ ।
ಮುನಿಭಿರ್ದೇವಗಂಧರ್ವೈಃ ಪೂಜಿತಾಮತಿಶೋಭನಾಂ ॥೨೫॥

ಚತುರ್ಧಾ ಖಂಡಿತಾ ಸಾಽಪಿ ಪವಿತ್ರಾ ವೇದಸಮ್ಮಿತಾ ।
ಶಿವಮಾಹಾತ್ಮ್ಯಖಂಡಾಖ್ಯಃ ಪ್ರಥಮಃ ಪರಿಕೀರ್ತಿತಃ ॥೨೬॥

ದ್ವಿತೀಯೋ ಜ್ಞಾನಯೋಗಾಖ್ಯಃ ಸರ್ವವೇದಾಂತಸಂಗ್ರಹಃ ।
ತೃತೀಯೋ ಮುಕ್ತಿಖಂಡಾಖ್ಯಶ್ಚತುರ್ಥೋ ಯಜ್ಞವೈಭವಃ ॥೨೭॥

ಒಂದನೆಯದಾದ ಸನತ್ಕುಮಾರಸಂಹಿತೆಯಲ್ಲಿ ಐವತ್ತೈದು ಸಾವಿರ ಶ್ಲೋಕಗಳೂ, ಎರಡನೆಯ ಸೂತಸಂಹಿತೆಯಲ್ಲಿ ಆರು ಸಾವಿರ ಶ್ಲೋಕಗಳೂ, ಮೂರನೆಯ ಶಂಕರಸಂಹಿತೆಯಲ್ಲಿ ಮೂವತ್ತುಸಾವಿರ ಶ್ಲೋಕಗಳೂ, ನಾಲ್ಕನೆಯ ವಿಷ್ಣುಸಂಹಿತೆಯಲ್ಲಿ ಐದು ಸಾವಿರ ಶ್ಲೋಕಗಳೂ, ಐದನೆಯ ಬ್ರಹ್ಮಸಂಹಿತೆಯಲ್ಲಿ ಮೂರುಸಾವಿರ ಶ್ಲೋಕಗಳೂ, ಆರನೆಯ ಸೌರಸಂಹಿತೆಯಲ್ಲಿ ಒಂದು ಸಾವಿರ ಶ್ಲೋಕಗಳೂ, ಇರುವುವು. ||೨೨-೨೩-೨೪||

ಕೇಳಿದವರ ಸಮಸ್ತಪಾಪಗಳನ್ನೂ ನಾಶಮಾಡುವ, ದೇವತೆಗಳಿಂದಲೂ, ಗಂಧರ್ವರಿಂದಲೂ, ಮುನಿಗಳಿಂದಲೂ, ಪೂಜಿಸಲ್ಪಟ್ಟ, ಅತ್ಯಂತ ಮಂಗಳಕರವಾದ ಎರಡನೆಯದಾದ ಸೂತಸಂಹಿತೆಯನ್ನು ಈಗ ಹೇಳುವೆನು. ||೨೫||

ವೇದಕ್ಕೆ ಸಮಾನವಾದ ಆ ಸೂತಸಂಹಿತೆಯು ನಾಲ್ಕುಭಾಗವಾಗಿರುವುದು. ಮೊದಲನೆಯದು ಶಿವಮಾಹಾತ್ಮ್ಯಖಂಡವು. ಎರಡನೆಯದು ಸಕಲವೇದೋಪನಿಷತ್ತುಗಳ ಅರ್ಥವನ್ನು ಸಂಗ್ರಹಿಸಿ ಜ್ಞಾನೋತ್ಪತ್ತಿಗೆ ಉಪಾಯವಾದ ಯಮ, ನಿಯಮಾದಿ

ಆದ್ಯಃ ಸಪ್ತಶತಂ ಪ್ರೋಕ್ತೋ ಗ್ರಂಥತಃ ಪಂಡಿತೋತ್ತಮಾಃ ।
ದ್ವಿತೀಯೋ ಗ್ರಂಥತಃ ಸಪ್ತಶತಂ ತ್ರಿಂಶತ್ತತೋಽಧಿಕಂ ॥೨೮॥

ತತೋಽಧಿಕಂ ಚ ಸಪ್ತೈವ ಮುನಯಃ ಪರಿಕೀರ್ತಿತಃ ।
ತೃತೀಯಃ ಷಟ್ಶತಂ ವಿಪ್ರಾಃ ಸಪ್ತತ್ರಿಂಶದ್ವಿವರ್ಜಿತಃ ॥೨೯॥

ಚತುರ್ಥಸ್ತು ಮುನಿಶ್ರೇಷ್ಠಾಃ ಸಹಸ್ರಾಣಾಂ ಚತುಷ್ಟಯಂ ।
ಉಪರ್ಯಧೋ ಭಾಗಭೇದಾದ್ದ್ವಿಧಾಭೂತಃ ಸ ಉಚ್ಯತೇ ॥೩೦॥

ಆದ್ಯಸ್ತ್ರಯೋದಶಾಧ್ಯಾಯೋ ದ್ವಿತೀಯೋ ವಿಂಶತಿಸ್ತಥಾ ।
ತೃತೀಯೋ ನವ ವಿಪ್ರೇಂದ್ರಾಶ್ಚತುರ್ಥಸ್ತು ತಥೈವ ಚ ॥೩೧॥

ಸಪ್ತಷಷ್ಟಿಃ ಸಮುಸ್ತಾನಾಂ ವೇದಾನಾಮರ್ಥ ಆಸ್ತಿಕಾಃ ।
ಏವಂ ಚತುರ್ವಿಧೈಃ ಖಂಡೈಃ ಸಂಹಿತಾ ವೇದಸಮ್ಮಿತಾ ।
ಅಸ್ಯಾಮೇವ ಸ್ಥಿತಃ ಸಾಕ್ಷಾತ್ಸಂಹಿತಾಯಾಂ ನ ಸಂಶಯಃ ॥೩೨॥

ಯೋಗಸಾಧನೆಗಳನ್ನು ಹೇಳುವ ಜ್ಞಾನಯೋಗಖಂಡವು. ಮೂರನೆಯದು ಮುಕ್ತಿ ಖಂಡವು. ನಾಲ್ಕನೆಯದು ಯಜ್ಞವೈಭವ ಖಂಡವು. ॥೨೬-೨೭॥

ಪಂಡಿತಶ್ರೇಷ್ಠರಾದ ಮುನಿಗಳೇ, ಮೊದಲನೆಯ ಶಿವಮಾಹಾತ್ಮ್ಯಖಂಡದಲ್ಲಿ ಏಳುನೂರು ಶ್ಲೋಕಗಳೂ, ಜ್ಞಾನಯೋಗಖಂಡದಲ್ಲಿ ಏಳನೂರ ಮೂವತ್ತೇಳು ಶ್ಲೋಕಗಳೂ, ಮೂರನೆಯ ಮುಕ್ತಿಖಂಡದಲ್ಲಿ ಐನೂರು ಅರವತ್ತುಮೂರು ಶ್ಲೋಕಗಳೂ ಇರುವುವು. ॥೨೮-೨೯॥

ನಾಲ್ಕನೆಯದಾದ ಯಜ್ಞವೈಭವಖಂಡವು, ಉಪರಿಭಾಗ, ಅಧೋಭಾಗವೆಂದು ಎರಡು ಭಾಗವಾಗಿ ನಾಲ್ಕುಸಾವಿರ ಶ್ಲೋಕಗಳುಳ್ಳದ್ದಾಗಿರುವುದು. ॥೩೦॥

ಮೊದಲನೆಯ ಖಂಡದಲ್ಲಿ ಹದಿಮೂರು ಅಧ್ಯಾಯಗಳು. ಎರಡನೆಯದರಲ್ಲಿ ಇಪ್ಪತ್ತು ಅಧ್ಯಾಯಗಳು. ಮೂರನೆಯದರಲ್ಲಿ ಒಂಬತ್ತು ಅಧ್ಯಾಯಗಳು. ನಾಲ್ಕನೆಯದರಲ್ಲಿ ಅರವತ್ತೇಳು ಅಧ್ಯಾಯಗಳೂ ಇರುವುವು ಈ ಸಂಹಿತೆಯಲ್ಲಿ ಸಮಸ್ತ ವೇದಾರ್ಥಗಳೂ ಅಡಕವಾಗಿರುವುವು. ಈ ವಿಷಯದಲ್ಲಿ ಸಂದೇಹವಿಲ್ಲ. ॥೩೧-೩೨॥

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುಚರಿತಂ ಚೈವ ಪುರಾಣಂ ಪಂಚಲಕ್ಷಣಂ ॥೩೩॥

ಯಶ್ಚತುರ್ವೇದವಿದ್ವಿಪ್ರಃ ಪುರಾಣಂ ವೇತ್ತಿ ನಾರ್ಥತಃ ।
ತಂ ದೃಷ್ಟ್ವಾ ಭಯಮಾಪ್ನೋತಿ ವೇದೋ ಮಾಂ ಪ್ರತರಿಷ್ಯತಿ ॥೩೪॥

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ ವಿಪ್ಲವಿಷ್ಯತಿ ।
ವೇದಾಃ ಪ್ರಮಾಣಂ ಪ್ರಥಮಂ ಸ್ಮೃತಏವ ತತಃ ಪರಂ ॥೩೫॥

ಸ್ಮೃತಯಶ್ಚ ಪುರಾಣಾನಿ ಭಾರತಂ ಮುನಿಪುಂಗವಾಃ ।
ಅನ್ಯಾನ್ಯಪಿ ಮುನಿಶ್ರೇಷ್ಠಾಃ ಶಾಸ್ತ್ರಾಣಿ ಸುಬಹೂನಿ ಚ ॥೩೬॥
ಸರ್ವಂ ವೇದಾವಿರೋಧೇನ ಪ್ರಮಾಣಂ ನಾನ್ಯವರ್ತ್ಮನಾ ।

ಪುರಾಣಗಳು ವೇದಾರ್ಥವನ್ನು ಬೆಳಸಿ ಬಲಪಡಿಸುತ್ತವೆ. ವೇದಗಳಲ್ಲಿ "ಆತ್ಮೈವೇದಮಗ್ರ ಆಸೀತ್. ಸ ಐಕ್ಷತ." ಇತ್ಯಾದಿ ವಾಕ್ಯಗಳಿಂದ ಮಹಾಸೃಷ್ಟಿಯನ್ನೂ, "ನೇಹ ನಾನಾಸ್ತಿ ಕಿಂಚನ" ಇತ್ಯಾದಿ ವಾಕ್ಯಗಳಿಂದ ಮಹಾಪ್ರಳಯವನ್ನೂ, ಮಿಕ್ಕ ವಾಕ್ಯಗಳಿಂದ ಸ್ಥಿತಿವಿಲಾಸವನ್ನೂ, ಹೇಳಿರುವುದು. ಪುರಾಣಗಳಲ್ಲಿಯೂ, ಸೃಷ್ಟಿಯ ವಿಷಯವನ್ನೂ, ವಂಶ ಮನ್ವಂತರ ವಂಶಾನುಚರಿತರೂಪಗಳಾದ ಸ್ಥಿತಿವಿಲಾಸಗಳನ್ನೂ, ಮಹಾಪ್ರಳಯವನ್ನೂ, ವರ್ಣಿಸುವುದರಿಂದ ಪುರಾಣವು ವೇದಾರ್ಥವನ್ನೇ ವಿಸ್ತಾರವಾಗಿತಿಳಿಸುತ್ತಾ ಐದು ಲಕ್ಷಣಗಳಿಂದ ಕೂಡಿರುವುದು. ||೩೩||

ನಾಲ್ಕು ವೇದಗಳನ್ನೂ ತಿಳಿದ ಬ್ರಾಹ್ಮಣನು ಪುರಾಣಗಳನ್ನು ಅರ್ಥಸಹಿತವಾಗಿ ತಿಳಿಯದಿದ್ದರೆ, ವೇದವು ಅವನನ್ನು ಕಂಡು ನನ್ನ ಅರ್ಥವನ್ನು ಸರಿಯಾಗಿ ತಿಳಿಯದೆ ಮುಳುಗಿಸುತ್ತಾನೆಂದು ಭಯಪಡುವುದು. ಎಂದರೆ ವೇದವನ್ನು ಓದಿದವರೆಲ್ಲರೂ, ಅವಶ್ಯವಾಗಿ ಪುರಾಣಗಳನ್ನು ಅರ್ಥಸಹಿತವಾಗಿ ತಿಳಿದುಕೊಳ್ಳಬೇಕೆಂದು ಅಭಿಪ್ರಾಯವು. ||೩೪||

ಇತಿಹಾಸ ಪುರಾಣಗಳಿಂದ ವೇದಾರ್ಥವನ್ನು ವಿಸ್ತರಿಸಬೇಕೆಂಬ ದೊಡ್ಡವರ ಮಾತಿನಿಂದ, ವೇದವೇ ಮುಖ್ಯವಾದ ಪ್ರಮಾಣಗ್ರಂಥವು. ಸ್ಮೃತಿಗಳು, ಪುರಾಣಗಳು, ಭಾರತ, ಮಿಕ್ಕ ಅನೇಕಶಾಸ್ತ್ರಗಳು, ಇವೆಲ್ಲವೂ, ವೇದಕ್ಕೆ ವಿರೋಧವಿಲ್ಲದರೀತಿಯಲ್ಲಿದ್ದರೆ ಪ್ರಮಾಣಗಳಾಗಿರುವುವು. ಆದರೆ ಋಗ್ವೇದದಲ್ಲಿ—ಸೂರ್ಯೋದಯಕ್ಕೆ

ಏಕ ಏವ ದ್ವಿಜಾ ವೇದೋ ವೇದಾರ್ಥಶ್ಚೈಕ ಏವ ತು ॥೩೭॥

ತಥಾಽಪಿ ಮುನಿಶಾರ್ದೂಲಾಃ ಶಾಖಾಭೇದೇನ ಭೇದತಃ (ದಿತಾಃ) ।
ಅನಂತಾ ವೈ ದ್ವಿಜಾ ವೇದಾ ವೇದಾರ್ಥೋಽಪಿ ದ್ವಿಜೋತ್ತಮಾಃ ॥೩೮॥

ಅನಂತೋ ವೇದವೇದ್ಯಸ್ಯ ಶಂಕರಸ್ಯ ಶಿವಸ್ಯ ತು ।
ಮಾಯಯಾ ನ ಸ್ವರೂಪೇಣ ದ್ವಿಜಾ ಹಾ ದೇವವೈಭವಂ ॥೩೯॥

ಮುಂಚಿತವಾಗಿ ಮಾಡುವ ಹೋಮವನ್ನು ನಿಂದಿಸಿ, ಉದಯವಾದ ಮೇಲೆ ಹೋಮವನ್ನು ವಿಧಿಸಿರುವುದು. "ಪ್ರಾತಃ ಪ್ರಾತರನೃತಂ ತೇ ವದಂತಿ ಪುರೋದಯಾಜ್ಜುಹ್ವತಿ ಯೇಽಗ್ನಿಹೋತ್ರಂ । ದಿವಾಕೀರ್ತ್ಯಮದಿವಾ ಕೀರ್ತಯಂತಃ ಸೂರ್ಯೋಜ್ಯೋತಿರ್ನತದಾಜ್ಯೋತಿರೇಷಾಂ" ಎಂಬುದು ಋಗ್ವೇದದ ಪ್ರಮಾಣವಚನವು. ಯಜುರ್ವೇದದಲ್ಲಿ ಉದಯವಾದ ಮೇಲಿನ ಹೋಮವನ್ನು ನಿಂದಿಸಿ, ಉದಯಕ್ಕೆ ಮುಂಚೆ ಹೋಮವನ್ನು ಮಾಡಬೇಕೆಂದು ವಿಧಿಸಿದೆ. "ಯಥಾಽತಿಥಯೇ ಪ್ರದ್ರುತಾಯ ಶೂನ್ಯಾಯಾಽವಸಥಾಯಾಽಹಾರ್ಯಂ ಹರಂತಿ ತಾದೃಕ್ತದ್ಯದುದಿತೇ ಜುಹೋತಿ" ಎಂಬುದು ಯಜುರ್ವೇದಪ್ರಮಾಣವಚನವು. ಆದುದರಿಂದ ವೇದದಲ್ಲಿಯೇ ಪರಸ್ಪರ ವಿರೋಧವು ಕಾಣುವುದರಿಂದ, ಎರಡು ವೇದವೂ ಪ್ರಮಾಣವಲ್ಲವೆನ್ನಲಾಗದು. ಏಕೆಂದರೆ, ||೩೪-೩೬||

ಎಲೈ ಮುನಿಗಳೇ, ವೇದವೂ, ವೇದಾರ್ಥವೂ, ಒಂದೇ ಅಭಿಪ್ರಾಯವನ್ನು ಹೇಳುವುದು. ವಿರೋಧವು ಕಾಣುವುದಲ್ಲ. ಎಂದರೆ, ಇಂತಹ ಸಂದರ್ಭದಲ್ಲಿ "ಷೋಡಶಿಗ್ರಹಣ ವಚನದಂತೆ" ವಿಕಲ್ಪಾಭಿಪ್ರಾಯ ಉಳ್ಳುದೆಂದು ಅರ್ಥಮಾಡಬೇಕು. ||೩೭||

ಎಲೈ ಮುನಿಗಳೇ, ವೇದಗಳೂ, ವೇದಾರ್ಥಗಳೂ, ಅನೇಕವಾಗಿರುವುದರಿಂದ ಎಲ್ಲರೂ ಎಲ್ಲವನ್ನೂ ಅಧ್ಯಯನಮಾಡಿ ಅನುಷ್ಠಾನಮಾಡುವುದು ಅಸಾಧ್ಯವಾದ ಕಾರಣ, ಅವನ್ನು ಋಗ್ಯಜುಃ ಸಾಮಾಥರ್ವಗಳೆಂದು ನಾಲ್ಕು ಬಗೆಯಾಗಿ ಐತರೇಯ ಮುಂತಾದ ಶಾಖಾಭೇದದಿಂದ ಬೇರೆಬೇರೆಯಾಗಿ ವಿಂಗಡಿಸಿರುವುದು. ಆದರೂ ||೩೮||

ಎಲೈ ಮುನಿಗಳೇ, ವೇದಗಳಿಂದ ತಿಳಿಯಲ್ಪಡತಕ್ಕವನೂ, ಸುಖವನ್ನುಂಟು ಮಾಡುವವನೂ ಆದ ಶಿವನ ವಾಸ್ತವಸ್ವರೂಪವು ಅದ್ವಿತೀಯವಾದುದೆಂಬುದು ಮುಖ್ಯಾರ್ಥವು. ಅದು ಮಾಯೆಯಿಂದ ಅನೇಕವಾಗಿ ತೋರುತ್ತಿದೆ. ಇಂತಹ ಲೀಲೆಯು ಲೋಕದಲ್ಲೆಲ್ಲೂ ಕಂಡುದಿಲ್ಲ. ದೇವನ ಮಹಿಮೆಯು ಆಶ್ಚರ್ಯಕರವಾಗಿರುವುದು. ||೩೯||

ಬ್ರಹ್ಮಾಣಂ ಮುನಯಃ ಪೂರ್ವಂ ಸೃಷ್ಟ್ವಾ ತಸ್ಮೈ ಮಹೇಶ್ವರಃ ।
ದತ್ತವಾನಖಿಲಾನ್ವೇದಾನಾತ್ಮನ್ಯೇವ ಸ್ಥಿತಾನಿಮಾನ್ ॥೪೦॥

ಬ್ರಹ್ಮಾ ಸರ್ವಜಗತ್ಕರ್ತಾ ಶಿವಸ್ಯ ಪರಮಾತ್ಮನಃ ।
ಪ್ರಸಾದಾದೇವ ರುದ್ರಸ್ಯ ಸ್ಮೃತೀಃ ಸಸ್ಮಾರ ಸುವ್ರತಾಃ ॥೪೧॥

ಆ ಮಹೇಶ್ವರನು ತಾನೇ ಲೀಲೆಯಿಂದ ಸಕಲ ವೇದಗಳನ್ನೂ ಗ್ರಹಿಸುವ ಶಕ್ತಿಯುಳ್ಳ ಬ್ರಹ್ಮನನ್ನು ನಿರ್ಮಿಸಿ ತನ್ನಲ್ಲಿಯೇ ಇದ್ದ ಸಮಸ್ತವೇದಗಳನ್ನೂ ಅವನಿಗೆ ಕೊಟ್ಟನು. ಹೀಗೆ ಕೊಟ್ಟುದರಿಂದ ಶಿವನು ಉಪಾಧ್ಯಾಯನ ಸಮಾನನೆಂದು ಭಾವಿಸಬಾರದು. ಉಪಾಧ್ಯಾಯನಾದರೋ ಇತರರಿಂದ ತಾನು ಕಲಿತ ವೇದವನ್ನು ತನ್ನ ಶಿಷ್ಯನಿಗೆ ಹೇಳಿಕೊಡುವನು. ಆದರೆ ಶಿವನು ತನ್ನಲ್ಲಿಯೇ ಯಾವಾಗಲೂ ಇದ್ದ ವೇದವನ್ನು ಬ್ರಹ್ಮನ ಮೂಲಕವಾಗಿ ಲೋಕಕ್ಕೆ ಕೊಟ್ಟು ಗುರುಶಿಷ್ಯಸಂಪ್ರದಾಯವನ್ನು ಸ್ಥಾಪಿಸಿದನು. ಈ ವಿಷಯದಲ್ಲಿ—"ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ" ಎಂಬ ಶ್ರುತಿಯು ತನ್ನಲ್ಲಿದ್ದ ವೇದವನ್ನೇ ಬ್ರಹ್ಮನು ಪ್ರಚಾರಮಾಡಿದನೆಂದು ಹೇಳುವುದು. ॥೪೦॥

ಒಳ್ಳೆಯ ವ್ರತಗಳನ್ನು ಮಾಡಿದ ಮುನಿಗಳೇ, ಸಮಸ್ತ ಜಗತ್ತನ್ನೂ ಸೃಷ್ಟಿಸಿದ ಬ್ರಹ್ಮನು ಪರಮಾತ್ಮನಾದ ಶಿವನ ಅನುಗ್ರಹದಿಂದ ಸ್ಮೃತಿಗಳನ್ನು ಸ್ಮರಿಸಿದನು. ಸ್ಮರಣಮಾತ್ರದಿಂದ ಪಡೆದುದರಿಂದ ಸ್ಮೃತಿ ಎಂದು ಅವುಗಳಿಗೆ ಹೆಸರಾಯಿತು. ವೇದದಲ್ಲಿ ಕರ್ಮಭಾಗ, ಜ್ಞಾನಭಾಗವೆಂದು ಎರಡು ಭಾಗಗಳು. ಮೊದಲನೆಯ ಕರ್ಮಭಾಗದ ಅರ್ಥವನ್ನು ಬ್ರಹ್ಮನು ಶಿವನ ಅಪ್ಪಣೆಯಿಂದ ಸ್ಮೃತಿಗಳ ಮೂಲಕವಾಗಿ ವಿವರಿಸಿದನು. ಎರಡನೆಯದಾದ ಜ್ಞಾನಭಾಗದ ಅರ್ಥವನ್ನು ವಿಷ್ಣುವು ವ್ಯಾಸರೂಪದಿಂದ ಅವತಾರಮಾಡಿ ಪುರಾಣಗಳ ಮೂಲಕವಾಗಿ ವಿವರಿಸಿದನು. ಆದುದರಿಂದ ಸ್ಮೃತಿಪುರಾಣಗಳು ಸ್ವತಂತ್ರಪ್ರಮಾಣವಾದುವುಗಳಲ್ಲ. ವೇದಗಳಿಂದ ಹೊರಟವುಗಳು. ಸ್ಮೃತಿಗಳಲ್ಲಿಯೂ, "ಕ್ಷೇತ್ರಜ್ಞಸ್ಯೇಶ್ವರ ಜ್ಞಾನಾದ್ವಿಶುದ್ಧಿಃ ಪರಮಾ ಮತಾ" ಇತ್ಯಾದಿಯಾಗಿ ಜ್ಞಾನವಿಚಾರವಿದ್ದರೂ ನಾಲ್ಕನೆಯದಾದ ಸನ್ಯಾಸಾಶ್ರಮಸ್ವರೂಪವನ್ನು ವಿವರಿಸುವ ಸಂದರ್ಭದಲ್ಲಿ ಒಂದಾಗಿರುವುದು. ಪುರಾಣಗಳಲ್ಲಾದರೋ ಜ್ಞಾನವೇ ಮುಖ್ಯವಾದುದಾಗಿಯೂ, ಕರ್ಮವು ಪ್ರಾಸಂಗಿಕವಾಗಿಯೂ ಇರುವುದು. ಪುರಾಣಗಳಲ್ಲಿ ಪ್ರಪಂಚದ ಉತ್ಪತ್ತಿ ಸ್ಥಿತಿ ಲಯ ಕಾರಣನು ಶಿವನೇ ಎಂದು ಹೇಳಿ, ಉತ್ಪತ್ತಿಕಾರಣವನ್ನು ಸೃಷ್ಟಿಯಿಂದಲೂ, ಲಯಕಾರಣವನ್ನು

ವಿಷ್ಣುರ್ವಿಶ್ವಜಗನ್ನಾಥೋ ವಿಶ್ವೇಶಸ್ಯ ಶಿವಸ್ಯ ತು ।
ಆಜ್ಞಯಾ ಪರಯಾ ಯುಕ್ತೋ ವ್ಯಾಸೋ ಜಜ್ಞೇ ಗುರುರ್ಮಮ ॥೪೨॥

ಸ ಪುನರ್ದೇವದೇವಸ್ಯ ಪ್ರಸಾದಾದಂಬಿಕಾಪತೇಃ ।
ಸಂಕ್ಷಿಪ್ಯ ಸಕಲಾನ್ವೇದಾಂಶ್ಚತುರ್ಧಾ ಕೃತವಾನ್ ದ್ವಿಜಾಃ ॥೪೩॥

ಋಗ್ವೇದಃ ಪ್ರಥಮಃ ಪ್ರೋಕ್ತೋ ಯಜುರ್ವೇದಸ್ತತಃ ಪರಃ ।
ತೃತೀಯಃ ಸಾಮವೇದಾಖ್ಯಶ್ಚತುರ್ಥೋಽಥರ್ವ ಉಚ್ಯತೇ ॥೪೪॥

ಏಕವಿಂಶತಿಭೇದೇನ ಋಗ್ವೇದೋ ಭೇದಿತೋಽಮುನಾ ।
ಯಜುರ್ವೇದೋ ದ್ವಿಜಾ ಏಕಶತಭೇದೇನ ಭೇದಿತಃ ॥೪೫॥

ಪ್ರತಿಸರ್ಗದಿಂದಲೂ, ಸ್ಥಿತಿಕಾರಣವನ್ನು ವಂಶಮನ್ವಂತರ ವಂಶಾನುಚರಿತಗಳಿಂದಲೂ, ವಿವರಿಸಿರುವರು. ಈ ಸಂದರ್ಭದಲ್ಲಿ ಆಶ್ರಮಧರ್ಮಗಳೂ ಬಂದಿರುವುವು. ಆದುದರಿಂದಲೇ ಧರ್ಮವಿಷಯದಲ್ಲಿ ಸ್ಮೃತಿ ಮತ್ತು ಪುರಾಣಗಳಿಗೆ ವಿರೋಧಬಂದರೆ ಸ್ಮೃತಿಗಳಿಗೂ, ತತ್ವಜ್ಞಾನವಿಷಯದಲ್ಲಿ ಪುರಾಣಗಳಿಗೂ, ಪ್ರಾಬಲ್ಯವಿರುವುದೆಂದು ತಿಳಿಯಬೇಕು. ||೪೧||

ಸಮಸ್ತ ಪ್ರಂಪಂಚಗಳಿಗೂ ಒಡೆಯನಾದ ವಿಷ್ಣುವು ವಿಶ್ವೇಶ್ವರನಾದ ಶಿವನ ಅಪ್ಪಣೆಯಿಂದ ನನ್ನ ಗುರುವಾದ ವ್ಯಾಸನಾಗಿ ಅವತಾರಮಾಡಿದನು. ||೪೨||

ಆ ವ್ಯಾಸನು ದೇವದೇವನೂ, ಪಾರ್ವತೀಪತಿಯೂ ಆದ ಶಿವನ ಅನುಗ್ರಹದಿಂದ, ಸಮಸ್ತವೇದಗಳನ್ನೂ ಸಂಗ್ರಹಿಸಿ ಶಾಖಾಭೇದದಿಂದ ಅಲ್ಪಬುದ್ಧಿಗಳಿಗೂ, ಗ್ರಾಹ್ಯವಾಗುವಂತೆ ನಾಲ್ಕು ಭಾಗಗಳನ್ನು ಮಾಡಿ ವೇದಾಧ್ಯಯನಸಂಪ್ರದಾಯವನ್ನು ಲೋಕದಲ್ಲಿ ಸ್ಥಾಪಿಸಿದನು. ||೪೩||

ಮೊದಲನೆಯದಾದ ಋಗ್ವೇದವನ್ನು ಇಪ್ಪತ್ತೊಂದು ಭಾಗವಾಗಿಯೂ, ಎರಡನೆಯದಾದ ಯಜುರ್ವೇದವನ್ನು ಒಂದು ನೂರು ಭಾಗವಾಗಿಯೂ, ಮೂರನೆಯದಾದ ಸಾಮವೇದವನ್ನು ಸಾವಿರಭಾಗವಾಗಿಯೂ. ನಾಲ್ಕನೆಯದಾದ ಅಥರ್ವವೇದವನ್ನು ಒಂಬತ್ತು ಭಾಗವಾಗಿಯೂ, ವ್ಯಾಸಮುನಿಯು ವಿಂಗಡಮಾಡಿದನು. ||೪೪-೪೫||

ನವಧಾ ಭೇದಿತೋಽಥರ್ವವೇದಃ ಸಾಮ ಸಹಸ್ರಧಾ ।
ವ್ಯಸ್ತವೇದತಯಾ ವ್ಯಾಸ ಇತಿ ಲೋಕೇ ಶ್ರುತೋ ಮುನಿಃ ॥೪೬॥

ಅಯಂ ಸಾಕ್ಷಾನ್ಮಹಾಯೋಗೀ ವ್ಯಾಸಃ ಸರ್ವಜ್ಞ ಈಶ್ವರಃ ।
ಮಹಾಭಾರತಮಾಶ್ಚರ್ಯಂ ನಿರ್ಮಮೇ ಭಗವಾನ್ಮುನಿಃ ॥೪೭॥

ತಸ್ಯ ಶಿಷ್ಯಾ ಮಹಾಭಾಗಾಶ್ಚತ್ವಾರೋ ಮುನಿಸತ್ತಮಾಃ ।
ಅಭವನ್ಸ ಮುನಿಸ್ತೇಭ್ಯಃ ಪೈಲಾದಿಭ್ಯೋಽದದಾಚ್ಛ್ರುತೀಃ(೦) ॥೪೮॥

ತೇಭ್ಯೋಽಧೀತಾ ಶ್ರುತಿಃ ಸರ್ವೈಃ ಸಾಧ್ವೀ ವಿಪ್ರಾಃ ಸನಾತನೀ ।
ತಯಾ ವರ್ಣಾಶ್ರಮಾಚಾರಃ ಪ್ರವೃತ್ತೋ ವೇದವಿತ್ತಮಾಃ ॥೪೯॥

ಪುರಾಣಾನಾಂ ಪ್ರವಕ್ತಾರಂ ಸ ಮುನಿರ್ಮಾಂ ನ್ಯಯೋಜಯತ್ ।
ತಸ್ಮಾದೇವ ಮುನಿಶ್ರೇಷ್ಠಾಃ ಪುರಾಣಂ ಪ್ರವದಾಮ್ಯಹಂ ॥೫೦॥

ವೇದವನ್ನು ವಿಭಾಗಮಾಡಿದುದರಿಂದ ಈ ಮುನಿಗೆ ವ್ಯಾಸನೆಂದು ಹೆಸರಾಯಿತು. ಇವನು ಮಹಾಯೋಗಿಯೂ, ಸರ್ವಜ್ಞನೂ, ಆದುದರಿಂದ ಸಾಕ್ಷಾತ್ ಈಶ್ವರನ ಸ್ವರೂಪನು. ಮಹಾಮಹಿಮನಾದ ಈ ಮುನಿಯು ಆಶ್ಚರ್ಯಕರವಾದ ಭಾರತಗ್ರಂಥವನ್ನು ರಚಿಸಿದನು. ಅದು ಆಶ್ಚರ್ಯಕರವಾದುದೆಂಬ ವಿಷಯದಲ್ಲಿ, "ಧರ್ಮೇ ಚಾರ್ಥೇ ಚ ಕಾಮೇ ಚ ಮೋಕ್ಷೇ ಚ ಭರತರ್ಷಭ। ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನತತ್ಕ್ವಚಿತ್ ॥" ಎಂಬುವೇ ಪ್ರಮಾಣವಚನವು. ಭಾರತಗ್ರಂಥವನ್ನು ರಚಿಸಿದವರು ಸಾಕ್ಷಾದ್ವಿಷ್ಣುವಿನ ಅವತಾರವೆಂಬ ವಿಷಯದಲ್ಲಿ "ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಂ । ಕೋಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್ ॥ ಎಂಬುದೇ ಪ್ರಮಾಣ ವಚನವು. ॥೪೬-೪೭॥

ಆ ವ್ಯಾಸಮಹಾಮುನಿಗೆ ಪೈಲ, ವೈಶಂಪಾಯನ, ಜೈಮಿನಿ, ಸುಮಂತು ಎಂಬ ನಾಲ್ಕು ಜನ ಶಿಷ್ಯರಿದ್ದರು. ಆ ನಾಲ್ಕು ಜನ ಶಿಷ್ಯರಿಗೆ ಸನಾತನವಾದ ನಾಲ್ಕು ವೇದಗಳನ್ನು ಕೊಟ್ಟು ಲೋಕದಲ್ಲಿ ಆ ವೇದಧರ್ಮಗಳನ್ನು ಸ್ಥಾಪಿಸಬೇಕೆಂದು ಆಜ್ಞೆಮಾಡಿದುದರಿಂದ ಅವರೆಲ್ಲರೂ ಆ ವೇದಗಳನ್ನು ಅಭ್ಯಾಸಮಾಡಿ, ವರ್ಣಾಶ್ರಮಾಚಾರಗಳನ್ನು ಲೋಕದಲ್ಲಿ ನೆಲೆಗೊಳಿಸಿದರು. ॥೪೮-೪೯॥

ಆ ಮುನಿಯು ಪುರಾಣಗಳನ್ನು ಹೇಳಬೇಕೆಂದು ನನಗೆ ಆಜ್ಞೆಮಾಡಿದುದರಿಂದ ಪುರಾಣಗಳನ್ನು ನಾನೂ ಹೇಳುತ್ತಿರುವೆನು. ॥೫೦॥

ಶ್ರದ್ಧಯಾ ಪರಯಾ ಯುಕ್ತಾಃ ಶೃಣುಧ್ವಂ ಮುನಿಪುಂಗವಾಃ ।
ಇತಿ ಶ್ರುತ್ವಾ ಮುನಿಶ್ರೇಷ್ಠಾ ನೈಮಿಷೀಯಾಃ ಸನಾತನಾಃ ॥೫೧॥

ಪ್ರಣಮ್ಯ ಸೂತಮವ್ಯಗ್ರಂ ಪೂಜಯಾಮಾಸುರಾದರಾತ್ ।
ಸೋಽಪಿ ಸರ್ವಜಗದ್ಧೇತುಂ ಶಂಕರಂ ಪರಮೇಶ್ವರಂ ॥೫೨॥

ಅಂಬಿಕಾಪತಿಮೀಶಾನಮನಂತಾನಂದಚಿದ್ಘನಂ ।
ಧ್ಯಾತ್ವಾ ತು ಸುಚಿರಂ ಕಾಲಂ ಭಕ್ತ್ಯಾಪರವಶೋಽಭವತ್ ॥೫೩॥

ನಮಃ ಸೋಮಾಯ ರುದ್ರಾಯ ಶಂಕರಾಯ ಮಹಾತ್ಮನೇ ।
ಬ್ರಹ್ಮವಿಷ್ಣುಸುರೇಂದ್ರಾಣಾಂ ಧ್ಯಾನಗಮ್ಯಾಯ ಶೂಲಿನೇ ॥೫೪॥

ಎಲೈ ಮುನಿಶ್ರೇಷ್ಠರೇ, ಅತ್ಯಂತ ಭಕ್ತಿಯಿಂದ ಕೂಡಿದವರಾಗಿ ಪುರಾಣಗಳನ್ನು ಕೇಳಿರಿ. ಎಂದು ಹೇಳಿದ ಸೂತನ ಮಾತನ್ನು ಕೇಳಿ ನೈಮಿಷಾರಣ್ಯವಾಸಿಗಳಾದ ಮಹರ್ಷಿಗಳೆಲ್ಲರೂ ಸೂತನಿಗೆ ನಮಸ್ಕರಿಸಿ ಪ್ರೀತಿಯಿಂದ ಪೂಜೆಮಾಡಿದರು. ||೫೧||

ಆ ಸೂತನು ಪುರಾಣಾರಂಭಕಾಲದಲ್ಲಿ ಸರ್ವಪ್ರಪಂಚಕ್ಕೂ ಉಪಾದಾನ ಕಾರಣರೂಪದಿಂದಲೂ, ಶಂಕರ ಪರಮೇಶ್ವರ ಶಬ್ದಗಳಿಂದ ನಿಮಿತ್ತಕಾರಣರೂಪದಿಂದಲೂ, ಅಂಬಿಕಾಪತಿಶಬ್ದದಿಂದ ಲೀಲಾವತಾರರೂಪದಿಂದಲೂ, ಅನಂತಾನಂದಘನವೆಂಬಪದದಿಂದ ನಿಷ್ಕಲರೂಪದಿಂದಲೂ, ಶಿವನನ್ನು ಬಹುಕಾಲ ಧ್ಯಾನಮಾಡಿ ಭಕ್ತಿಯಿಂದ ಪರವಶನಾಗಿಬಿಟ್ಟನು. ಭಕ್ತಿಪಾರವಶ್ಯದಿಂದಲೇ ಆ ಸೂತನ ಬಾಯಿಯಿಂದ ಯತ್ನವಿಲ್ಲದೇ ಮುಂದೆ ಹೇಳುವ ಸ್ತೋತ್ರವು ಹೊರಟಿತು. ||೫೨-೫೩||

ಸೋಮನೆಂದರೆ ಚಂದ್ರನು ಪರಶಿವನ ಎಂಟನೆಯ ಮೂರ್ತಿಯು. ಅಷ್ಟಮೂರ್ತಿಗಳಲ್ಲಿ ಒಂದನ್ನು ಹೇಳಿದುದರಿಂದ ಮಿಕ್ಕ ಏಳು ಮೂರ್ತಿಗಳನ್ನೂ ಗ್ರಹಣಮಾಡಬೇಕು. ಅಥವಾ ಉಮಾಸಹಿತನಾದವನು ಸೋಮ. ರುತ್ ಎಂದರೆ ಸಂಸಾರದುಃಖರೂಪವಾದುದು. ಇದನ್ನು ದ್ರಾವಯತಿ, ಕರಗಿಸುವನು. ಆದುದರಿಂದ ರುದ್ರನು. ಈಶಬ್ದಾರ್ಥದವಿಷಯದಲ್ಲಿ ವಾಯುವೀಯಸಂಹಿತೆಯಲ್ಲಿ—"ರುದ್ದುಃಖಂ ದುಃಖಹೇತುಂ ಚ ವಿದ್ರಾವಯತಿ ನಃ ಪ್ರಭುಃ । ರುದ್ರ ಇತ್ಯುಚ್ಯತೇ ತಸ್ಮಾಚ್ಛಿವಃ ಪರಮಕಾರಣಂ ||" ಎಂದು ಹೇಳಿದೆ. ಅನಿಷ್ಟನಿವೃತ್ತಿಗೆ ಕಾರಣನಲ್ಲದೆ ಇಷ್ಟಪ್ರಾಪ್ತಿಗೂ ಅವನೇ ಕಾರಣನಾದುದರಿಂದ ಶಂಕರನೆಂದು ಹೇಳಿದೆ. ಭಕ್ತಿಹೊರತಾಗಿ

ಭಕ್ತಿಗಮ್ಯಾಯ ಭಕ್ತಾನಾಂ ವಿದುಷಾಮಾತ್ಮರೂಪಿಣೇ ।
ಸ್ವಾನುಭೂತಿಪ್ರಸಿದ್ಧಾಯ ನಮಸ್ತೇ ಸರ್ವಸಾಕ್ಷಿಣೇ ॥೫೫॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ ಗ್ರಂಥಾವತಾರಕಥನಂ ನಾಮ ಪ್ರಥಮೋಽಧ್ಯಾಯಃ ಸಮಾಪ್ತಃ.

ಸಾವಿರಾರು ಉಪಾಯಗಳಿಂದ ಆ ದೇವನನ್ನು ತಿಳಿಯಲು ಅಸಾಧ್ಯವಾದುದರಿಂದ ಮಹಾತ್ಮನೆಂದೂ, ಭಕ್ತಿಯಿಲ್ಲದೆ ಪ್ರಬಲರಾದವರು ಎಷ್ಟು ಪ್ರಯತ್ನಮಾಡಿದರೂ ಅವರ ಶಕ್ತಿಎಲ್ಲವೂ ಆ ಶಿವನ ದರ್ಶನದ ವಿಷಯದಲ್ಲಿ ಬಲಹೀನವಾಗುವುದೆಂದು ತಿಳಿಯಿಸುವುದಕ್ಕಾಗಿ ಬ್ರಹ್ಮ ವಿಷ್ಣು ದೇವೇಂದ್ರರಿಗೂ ಧ್ಯಾನಗೋಚರನಾದವನೆಂದೂ, ಹೇಳಿದೆ. ||೫೪||

ಈ ವಿಷಯದಲ್ಲಿ ತಲವಕಾರೋಪಸಿಷತ್ತಿನಲ್ಲಿ (ಕೇನೋಪನಿಷತ್) "ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ" ಎಂದು ಆರಂಭಿಸಿ ಶಿವನ ಅನುಗ್ರಹದಿಂದ ಜಯವನ್ನು ಪಡೆದ ದೇವತೆಗಳು ತಮ್ಮ ಜಯವು ತಮ್ಮ ಮಹಿಮೆಯಿಂದಲೇ ಉಂಟಾಯಿತೆಂದು ತಿಳಿದರು. ಶಿವನು ಅವರ ಅಹಂಕಾರಕ್ಕೆ ಕಾರಣವಾದ ಮದವನ್ನು ನಾಶಮಾಡುವುದಕ್ಕಾಗಿ ದೂರದಲ್ಲಿ ದಿವ್ಯವಾದ ಪ್ರಕಾಶಸ್ವರೂಪನಾಗಿ ವ್ಯಕ್ತನಾದನು. ಆ ಲೋಕೋತ್ತರವಾದ ರೂಪವನ್ನು ಕಂಡು ದೇವತೆಗಳು ವಿಮರ್ಶೆಮಾಡಿ ತಿಳಿಯದೆ ಹೋದರು. ಅಗ್ನಿವಾಯುಗಳಿಬ್ಬರೂ ಪ್ರಯತ್ನಪಟ್ಟು ಶಕ್ತಿಹೀನರಾದರು. ದೇವೇಂದ್ರನಿಗೆ ಆ ದೇವನು ಕಾಣಲೇಇಲ್ಲ. ಆಮೇಲೆ ತನ್ನ ಅಹಂಕಾರವನ್ನು ಬಿಟ್ಟು ವಿಶೇಷವಾದ ಭಕ್ತಿಯಿಂದ ಕೂಡಿದ ದೇವೇಂದ್ರನಿಗೆ ಅಲ್ಲಿಯೇ ಪಾರ್ವತಿಯ ರೂಪದಿಂದ ದರ್ಶನವನ್ನು ಕೊಟ್ಟು ಆ ಪರಮೇಶ್ವರನು, ನಿಮ್ಮ ನಾಶಕ್ಕೆ ಕಾರಣವಾದ ಮದವನ್ನು ನಾಶಮಾಡುವುದಕ್ಕಾಗಿ, ಈ ರೀತಿಯಲ್ಲಿ ಅವತಾರ ಮಾಡಿರುವೆನು. ಎಂದನು.

ಭಕ್ತರ ಭಕ್ತಿಯಿಂದ ತಿಳಿಯತಕ್ಕವನಾದ, ವಿದ್ವಾಂಸರ ಆತ್ಮಸ್ವರೂಪನಾದ ಅಂದರೆ ಜ್ಞಾನಿಗಳಿಗೆ ಸ್ವರೂಪಜ್ಞಾನವನ್ನುಂಟುಮಾಡುವ, ಸ್ವಪ್ರಕಾಶದಿಂದಲೇ ಪ್ರಕಾಶಿಸುತ್ತಿರುವ ಸಮಸ್ತ ಪದಾರ್ಥಗಳಿಗೆ ಸಾಕ್ಷಿಸ್ವರೂಪನಾದ ಶಿವನಿಗೆ ನಮಸ್ಕಾರವು. ||೫೫||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ ಗ್ರಂಥಾರಂಭದ ವಿವರಣೆ ಎಂಬ ಮೊದಲನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

|| ದ್ವಿತೀಯೋಽಧ್ಯಾಯಃ ||

ಎರಡನೆಯ ಅಧ್ಯಾಯವು

|| ನೈಮಿಷೀಯಾ ಊಚುಃ ||

ಸರ್ವಂ ಜಗದಿದಂ ವಿದ್ವನ್ವಿಭಕ್ತಂ ಕೇನ ಹೇತುನಾ ।
ಉತ್ಪನ್ನಂ ಕೇನಚಿತ್ತಸ್ಮಾದನಿತ್ಯಂ ಚ ತತಃ ಪಶುಃ ॥೧॥

ನೈಮಿಷೀಯ ಋಷಿಗಳು ಹೇಳಿದರು— ಪಾಶುಪತವ್ರತವನ್ನು ದೇವತೆಗಳಿಗೂ ಉಪದೇಶಮಾಡಿ, ಅದರಿಂದ ಜ್ಞಾನವು ಅನುಭವಕ್ಕೆ ಬರಬೇಕೆಂದು ಹೇಳುವುದಕ್ಕಾಗಿ ಎರಡನೆಯ ಅಧ್ಯಾಯವನ್ನು ಪ್ರಾರಂಭಮಾಡಿದೆ. ಪ್ರಪಂಚಕ್ಕೆ ಕಾರಣವಾದ ವಸ್ತುವು ಒಂದು ಇರುವುದೆಂದು ಸಾಮಾನ್ಯವಾಗಿ ತಿಳಿದಿದ್ದರೂ, ಇದೇ ತತ್ತ್ವವೆಂದು ಅದರ ಸ್ವರೂಪವನ್ನು ತಿಳಿಯದ ಮುನಿಗಳು ಆ ವಸ್ತುವನ್ನು ತಿಳಿಯಬೇಕೆಂದು ಸೂತನನ್ನು ಪ್ರಶ್ನೆಮಾಡಿದರು. ಓ ವಿದ್ವಾಂಸನಾದ ಸೂತನೇ, ಈ ಸಮಸ್ತಪ್ರಪಂಚವೂ ಯಾವ ವಸ್ತುವಿನಿಂದ ಉತ್ಪತ್ತಿಯಾಯಿತು? ಉತ್ಪತ್ತಿಯಾದುದರಿಂದ ಇದು ಅನಿತ್ಯವಾದುದಾಯಿತು. ಅಜ್ಞಾನದಿಂದ ಕೂಡಿದುದರಿಂದ ಇದು ಪಶುಸ್ವರೂಪವಾದುದು. ಪ್ರಕೃತಿಯು ಜಡವಾದುದರಿಂದ ಪ್ರಪಂಚಕ್ಕೆ ಅದು ಕಾರಣವಲ್ಲ. ಆದುದರಿಂದ ಸಕಲ ಜಗತ್ತಿಗೂ, ಕಾರಣವಾದ ವಸ್ತುವು ಬೇರೊಂದು ಇರಬೇಕು. ವಿಶೇಷವಾಗಿ ತಪಸ್ಸನ್ನು ಮಾಡಿ ಪುಣ್ಯವಂತನಾದ ನೀನು ಮಹಾಮಹಿಮೆಯುಳ್ಳವನಾದುದರಿಂದ ಆ ಸಕಲ ಪ್ರಪಂಚಕ್ಕೂ ಕಾರಣವಾದ ವಸ್ತುವನ್ನು ನಮಗೆ ವಿಸ್ತರಿಸಿ ಹೇಳು. ಇಲ್ಲಿ ವಿಶೇಷವೇನೆಂದರೆ: ಮಲ, ಮಾಯಾ, ಕರ್ಮಗಳೆಂಬ ಮೂರು ದೋಷಗಳೆಂಬ ಹಗ್ಗಗಳ ಕಟ್ಟುಳ್ಳ ಜೀವರುಗಳೇ ಪಶುಗಳು. ಇವರಲ್ಲಿ ಮಲವೆಂಬ ಒಂದೇ ಹಗ್ಗದ ಕಟ್ಟುಳ್ಳ

ಅಜ್ಞತ್ವಾನ್ನೈವ ಹೇತುಃ ಸ್ಯಾನ್ನ ಚ ಪ್ರಕೃತಿರೇವ ಚ ।
ಅತಃ ಸರ್ವಜಗದ್ಧೇತುರನ್ಯ ಏವ ತಪೋಧನ ॥೨॥

ತನುಸ್ಮಾಕಂ ಮಹಾಭಾಗ ಬ್ರೂಹಿ ಪುಣ್ಯವತಾಂ ವರ ।

|| ಸೂತ ಉವಾಚ ||

ಪುರಾ ವಿಷ್ಣ್ವಾದಯೋ ದೇವಾಃ ಸರ್ವೇ ಸಂಭೂಯ ಕಾರಣಂ ॥೩॥

ವರನ್ನು ವಿಜ್ಞಾನಕಲಾಜೀವರೆಂದು ಕರೆಯುವರು. ಅವರಲ್ಲಿ ಪಾಪವನ್ನು ಸ್ವಲ್ಪ ಕಳೆದುಕೊಂಡವರೆಂದೂ, ಪಾಪವನ್ನು ಪೂರ್ಣವಾಗಿ ಕಳೆದುಕೊಂಡವರೆಂದೂ ಎರಡುವಿಧವಿರುವುದು. ಮೊದಲನೆಯಗುಂಪಿನವರು ವಿದ್ಯೇಶ್ವರರೆನಿಸಿಕೊಳ್ಳುವರು. ಮಲ ಕರ್ಮ ಎಂಬ ಎರಡು ಹಗ್ಗದ ಕಟ್ಟುಳ್ಳವರು ಪ್ರಳಯಕಲಾಜೀವರು. ಅವರಲ್ಲಿ ಮಲಕರ್ಮ ಪರಿಪಾಕವುಳ್ಳವರೆಂದೂ, ಪರಿಪಾಕವಿಲ್ಲದವರೆಂದೂ, ಎರಡುವಿಧವಿರುವುದು. ಯಾರಿಗೆ ಕರ್ಮಪರಿಪಾಕವಿಲ್ಲವೋ ಅವರು ಕರ್ಮವಶದಿಂದ ಅನೇಕಯೋನಿಗಳಲ್ಲಿ ಹುಟ್ಟುವರು. ಯಾರಿಗೆ ಮಲಕರ್ಮಪರಿಪಾಕವಿರುವುದೋ, ಅವರು ಈಶ್ವರಾನುಗ್ರಹದಿಂದ ರಾಜರಾಗಿ ಹುಟ್ಟುವರು. ಮಲ, ಮಾಯಾ, ಕರ್ಮಗಳೆಂಬ ಮೂರು ಹಗ್ಗದ ಕಟ್ಟುಳ್ಳವರು ಸಕಲ ಜೀವರೆನಿಸುವರು. ಅವರಲ್ಲಿ ೧೧೮ ಜೀವರುಗಳು ಶಿವನ ಅನುಗ್ರಹದಿಂದ ಮಂತ್ರೇಶ್ವರರಾಗಿರುವರು. ಅವರಲ್ಲಿ ಶತರುದ್ರ ಮಂತ್ರಾಧಿದೇವತೆಗಳು ನೂರು ಜನರು. ಮಂಟಪಾಧಿಪತಿಗಳು ಎಂಟು ಜನರು. ಕ್ರೋಧಾಧಿಪತಿಗಳು ಎಂಟು ಜನರು. ಶ್ರೀಕಂಠವಿಶ್ವೇಶ್ವರರೆಂಬುವರಿಬ್ಬರು. ಇವರನ್ನು ಬಿಟ್ಟು ಮಿಕ್ಕ ಜೀವರುಗಳಲ್ಲಿ ಯಾರಿಗೆ ಮಲಾದಿಕರ್ಮಗಳು ಪರಿಪಾಕಾವಸ್ಥೆಗೆ ಬಂದಿರುವುದೋ ಅವರಿಗೆ ಶಿವನೇ ಆಚಾರ್ಯರೂಪದಿಂದ ಪಾಶುಪತವ್ರತದೀಕ್ಷೆಯನ್ನು ಅನುಗ್ರಹಿಸುವನು. ಕರ್ಮಫಲ ಪರಿಪಾಕವಿಲ್ಲದವರನ್ನು ಫಲಪರಿಪಾಕಾವಸ್ಥೆಗಾಗಿ ಸುಖದುಃಖಾನುಭವಕ್ಕೋಸ್ಕರ ಅನೇಕಯೋನಿಗಳಲ್ಲಿ ಹುಟ್ಟುವಂತೆ ಅಪ್ಪಣೆಮಾಡುವನು. ಇವರೆಲ್ಲರೂ ಪಶುಗಳೆನಿಸುವರು. ಇವರು ಸರ್ವಜ್ಞರಲ್ಲವಾದುದರಿಂದ ಪ್ರಪಂಚಕ್ಕೆ ಕಾರಣರಲ್ಲ. ಪ್ರಕೃತಿಯಂತೂ ಜಡವಾದುದರಿಂದ ಪ್ರಪಂಚಕ್ಕೆ ಕಾರಣವಾಗಲಾರದು. ಆದುದರಿಂದ ಸರ್ವಜ್ಞನಾದ ಒಬ್ಬನು ಜಗತ್ತಿಗೆ ಕಾರಣವಾಗಿರಬೇಕು ಎಂದು ಮುಖ್ಯಾಭಿಪ್ರಾಯವು. ||೧-೨||

ಮುನಿಗಳ ಪ್ರಶ್ನೆಗೆ ಉತ್ತರವಾಗಿ ಸೂತನು ಅಥರ್ವಶಿರೋಪನಿಷತ್ತಿನಲ್ಲಿರುವ ಕಥೆಯನ್ನು ಹೇಳುತ್ತಾನೆ. ಹಿಂದೆ ವಿಷ್ಣುವೇ ಮುಂತಾದ ದೇವತೆಗಳೆಲ್ಲರೂ ಕೂಡಿ

ವಿಚಾರ್ಯರ್ಜಗತೋ ವಿಪ್ರಾಃ ಸಂಶಯಾವಿಷ್ಟಚೇತಸಃ ।
ಅತೀವ ಸುಖದಂ ಶ್ರೇಷ್ಠಂ ರೌದ್ರಂ ಲೋಕಂ ಸಮಾಗಮನ್ ॥೪॥

ತೇಷಾಂ ಮಧ್ಯೇ ಮಹಾದೇವಃ ಸಂಸಾರದ್ರಾವಕೋ ಹರಃ ।
ರುದ್ರಃ ಪರಮಕಾರುಣ್ಯಃ ಸ್ವಯಮಾವಿರಭೂದ್ದ್ವಿಜಾಃ ॥೫॥

ಅದೃಷ್ಟಪೂರ್ವಂ ತಂ ದೃಷ್ಟ್ವಾ ದೇವಾವಿಷ್ಣುಪುರೋಗಮಾಃ ।
ಪ್ರಣಿಪತ್ಯ ಮಹಾದೇವಮಪೃಚ್ಛನ್ಕೋ ಭವಾನಿತಿ ॥೬॥

ಸೋಽಬ್ರವೀದ್ಭಗವಾನ್ರುದ್ರಃ ಪಶೂನಾಂ ಪತಿರೀಶ್ವರಃ ।
ಸರ್ವಜ್ಞಃ ಸರ್ವತತ್ವಾನಾಂ ತತ್ವಭೂತಃ ಸನಾತನಃ ॥೭॥

ಅಹಮೇಕೋ ಜಗದ್ಧಾತುರಾಸಂ ಪ್ರಥಮಮೀಶ್ವರಃ ।
ವರ್ತಾಮಿ ಚ ಭವಿಷ್ಯಾಮಿ ನ ಮತ್ತೋಽನ್ಯೋಽಸ್ತಿ ಕಶ್ಚನ ॥೮॥

ಜಗತ್ತಿಗೆ ಕಾರಣವಸ್ತುವಾವುದೆಂದು ವಿಚಾರಮಾಡಿ ಸಂದೇಹದಿಂದ ಕೂಡಿದವರಾಗಿ ಅತ್ಯಂತಸುಖಕರವೂ, ಪರಿಶುದ್ಧವೂ, ಆದ ರುದ್ರಲೋಕಕ್ಕೆ ಹೋದರು. " ದೇವಾ ಹ ವೈ ಸ್ವರ್ಗಂ ಲೋಕಮಗಮನ್ " ಎಂಬುದಾಗಿ ಅಥರ್ವಶಿರ ಶ್ರುತಿಯು. ॥೩-೪

ಆ ದೇವತೆಗಳ ನಡುವೆ ಸಂಸಾರದುಃಖವನ್ನು ನಾಶಪಡಿಸುವ ಮಹಾದೇವನಾದ ರುದ್ರನು ಅತ್ಯಂತ ಕರುಣೆಯಿಂದ ತಾನೇ ಪ್ರತ್ಯಕ್ಷನಾಗಿ ಬಂದನು. ಹಿಂದೆ ಎಂದೂ ಅವನನ್ನು ನೋಡದ ವಿಷ್ಣುವೇ ಮುಂತಾದ ದೇವತೆಗಳು ಆಗ ಮಹಾದೇವನನ್ನು ನೋಡಿ ನಮಸ್ಕರಿಸಿ ನೀನು ಯಾರು? ಎಂದು ಪ್ರಶ್ನೆಮಾಡಿದರು. " ತೇ ದೇವಾ ರುದ್ರಮಪೃಚ್ಛನ್ಕೋ ಭವಾನಿತಿ " ಎಂದು ಆ ಶ್ರುತಿಯಲ್ಲಿದೆ. ॥೫-೬॥

ಆಗ ಸರ್ವಜ್ಞನೂ ಸಮಸ್ತ ಜೀವರಿಗೂ ಸ್ವಾಮಿಯಾದುದರಿಂದ ಪಶುಪತಿಯೂ, ಮಹಾಮಹಿಮನೂ, ಅನಾದಿಯಾದವನೂ ಸಕಲ ತತ್ವಗಳಿಗೂ ಕಾರಣಸ್ವರೂಪನೂ ಆದ ರುದ್ರನು ಉತ್ತರವನ್ನು ಹೇಳಿದನು. ॥೭॥

ಜಗತ್ತನ್ನು ಸೃಷ್ಟಿಸಿದ ಬ್ರಹ್ಮನಿಗಿಂತಲೂ, ಮೊದಲು ನಾನೊಬ್ಬನೇ ಇದ್ದೆನು. ಈಗಲೂ ಇರುತ್ತೇನೆ, ಮುಂದೆಯೂ ಇರುವೆನು. ನಾನೇ ಈಶ್ವರನು. ನನಗಿಂತ ಬೇರೆಯಾದ ಈಶ್ವರನು ಇಲ್ಲ. ॥೮॥

ಮನ್ಮಾಯಯಾ ಶಕ್ತಿಸಂಕ್ಲಪ್ತಂ ಜಗತ್ಸರ್ವಂ ಚರಾಚರಂ ।
ಸಾಽಪಿ ಮತ್ತಃ ಪೃಥಗ್ಭಿನ್ನಾ ನಾಸ್ತ್ಯೇವ ಪರಮಾರ್ಥತಃ ॥೯॥

ಈ ಸಮಸ್ತ ಚರಾಚರ ಪ್ರಾಣಿಗಳಿಂದ ಕೂಡಿದ ಪ್ರಪಂಚವು ನನ್ನ ಮಾಯಾ ಶಕ್ತಿಯಿಂದ ಕಲ್ಪಿವಾದುದು. ಆ ಮಾಯೆಯೂ, ನನಗಿಂತ ಬೇರೆಯಾಗಿ ಪರಮಾರ್ಥವಾಗಿ ಇಲ್ಲವೇ ಇಲ್ಲ. ಇಲ್ಲಿ ನಿರ್ಣಯವೆಂತೆಂದರೆ :—ಯಾವುದನ್ನು ಆಶ್ರಯಿಸಿ ಯಾವ ಪದಾರ್ಥವು ಪ್ರಕಾಶಿಸುತ್ತದೆಯೋ ಅಲ್ಲಿ ಆ ಪದಾರ್ಥಗಳು ಕಲ್ಪಿತವಾದುವುಗಳೆಂದು ನಿಶ್ಚಯವು, ಹೇಗೆಂದರೆ—ಹಗ್ಗವನ್ನು ಆಶ್ರಯಿಸಿ ಸರ್ಪದಂಡಧಾರಾದಿಗಳು ಪ್ರಕಾಶಿಸುವುದರಿಂದ "ಇದಂ" ಎಂಬ ಹಗ್ಗದಲ್ಲಿ ಇವು ಕಲ್ಪಿತವಾಗಿರುವುವು. ಹಾಗೆ ಸತ್ಪದಾರ್ಥವಾದ ಆತ್ಮನನ್ನು ಆಶ್ರಯಿಸಿ ಈ ಜಗತ್ತು ಪ್ರಕಾಶಿಸುವುದು. ಆದುದರಿಂದ ಸದ್ರೂಪನಾದ ಪರಶಿವನಲ್ಲಿ ಜಗತ್ತು ಕಲ್ಪಿತವಾಗಿರುವುದು. ಸದ್ರೂಪವಾದ ಆತ್ಮವಸ್ತುವು ಪ್ರಕಾಶಿಸದಿದ್ದರೆ ಆದರಲ್ಲಿ ಕಲ್ಪಿತವಾದ ಜಗತ್ತೂ, ಪ್ರಕಾಶಿಸುತ್ತಿರಲಿಲ್ಲ. ಜಗತ್ತುಪ್ರಕಾಶಿಸುತ್ತಿರುವುದರಿಂದ ಸದ್ರೂಪವಾದ ಆತ್ಮತತ್ತ್ವವೂ ಪ್ರಕಾಶಿಸುತ್ತಿರುವುದೆಂದು ಒಪ್ಪಿಕೊಳ್ಳಬೇಕು. ಆತ್ಮವಸ್ತುವು ಜಗತ್ತನ್ನು ಪ್ರಕಾಶಪಡಿಸುವುದೇ ಹೊರತು ಇದನ್ನು ಪ್ರಕಾಶಪಡಿಸುವ ಮತ್ತೊಂದು ವಸ್ತುವು ಇರುವುದಿಲ್ಲ. ಆತ್ಮವಸ್ತುವನ್ನು ಬಿಟ್ಟು ಮಿಕ್ಕವುಗಳೆಲ್ಲ ಕಲ್ಪಿತವಾದುದರಿಂದ ಜಡವಾದುವುಗಳು. ಆತ್ಮವಸ್ತುವು ಸ್ವಪ್ರಕಾಶವುಳ್ಳದಾದುದರಿಂದ ಜ್ಞಾನಸ್ವರೂಪವಾದುದಾಗಿರುವುದು. ಆ ಜ್ಞಾನವು ಆತ್ಮಸ್ವರೂಪಕ್ಕಿಂತಲೂ ಬೇರೆಯಾದುದಲ್ಲವಾದುದರಿಂದ ಪರಮಪ್ರೇಮಾಸ್ಪದವಾಗಿ, ಪರಮಾನಂದರೂಪವಾಗಿರುವುದು. ಹೀಗೆ ಸಚ್ಚಿದಾನಂದೈಕರಸನಾದ ಪರಮಾತ್ಮನು, ಅನಾದಿಯೂ, ಅನಂತನೂ ಆದುದರಿಂದ ಅವನಲ್ಲಿರುವ ಮಾಯೆಯೂ ಅನಾದಿಯಾಗಿರುವುದು. ಆ ಮಾಯೆಯು ಸತ್ವರಜಸ್ತಮೋರೂಪವಾದುದಾದರೂ ಸಾಂಖ್ಯರು ಹೇಳುವ ಪ್ರಕೃತಿಯಂತೆ ಸ್ವತಂತ್ರವಾದುದಲ್ಲ. ಈಶ್ವರಾಧೀನವಾದುದು. ಆದುದರಿಂದಲೇ ಶಕ್ತಿ ಎಂದು ಹೇಳಿದೆ. ಮಾಯೆಯ ಗುಣಗಳು ಒಂದನ್ನೊಂದು ತಿರಸ್ಕರಿಸುವುವು. ಭಗವದ್ಗೀತೆಯಲ್ಲಿ ಅ.೧೪. ಶ್ಲೋ. ೧೦. ರಜಸ್ತಮಶ್ಚಾಭಿಭೂಯ,ಸತ್ವಂ ಭವತಿ ಭಾರತ।ರಜಃ ಸತ್ವಂ ತಮಶ್ಚೈವ ತಮಃ ಸತ್ವಂ ರಜಸ್ತಥಾ॥ ಎಂದು ಹೇಳಿರುವುದು. ಆದುದರಿಂದ ಆ ಮಾಯೆಯೂ, ಮೂರು ಬಗೆಯಾಗಿರುವುದು. ರಜಸ್ತಮೋಗುಣಗಳು ಅತ್ಯಂತ ಕಡಿಮೆಯಾಗಿ ವಿಶುದ್ಧಸತ್ವಸ್ವರೂಪವಾದುದೊಂದು. ರಜಸ್ತಮೋಗುಣಗಳು ಸ್ವಲ್ಪ ಗೋಚರಿಸುತ್ತಿರುವ ಮಲಿನಸತ್ವಸ್ವರೂಪವಾದುದು ಎರಡನೆಯದು. ತಮೋಗುಣವು ವಿಶೇಷವಾಗಿ ಸತ್ವರಜಸ್ತಮೋಗುಣಗಳು ಅತ್ಯಂತ

ಕಡಿಮೆಯಾಗಿರುವ ಕೇವಲ ತಮೋಗುಣರೂಪವಾದುದು ಮೂರನೆಯದು. ಮಾಯಾತೀತವಾದ ಸಚ್ಚಿದಾನಂದೈಕರಸಸ್ವರೂಪವೇ ಪರಶಿವನ ಸ್ವರೂಪವು. ವಿಶುದ್ಧಸತ್ವಗುಣಪ್ರಧಾನವಾದ ಮಾಯೆಯು ಆತ್ಮನನ್ನು ತನ್ನಧೀನಮಾಡಿಕೊಳ್ಳಲಾರದು. ಮಾಯಾವಿಶಿಷ್ಟನಾದ ಆತ್ಮನ ಅಧೀನವಾಗಿರುವುದು. ಹೀಗಾದಮೇಲೆ ಸ್ವಾಧೀನಮಾಯೋಪಾಧಿಯೊಡನೆ ಪರಶಿವಸ್ವರೂಪವನ್ನೇ ಈಶ್ವರನೆಂದೂ ಜಗತ್ಕರ್ತನೆಂದೂ, ಸರ್ವಜ್ಞನೆಂದೂ, ಭೋಗಪ್ರದನೆಂದೂ ಹೇಳುವರು. "ಫಲಮತ ಉಪಪತ್ತೇಃ"ಎಂಬ ವ್ಯಾಸಸೂತ್ರ ೩,೨,೩೮ರಲ್ಲಿ ಈ ವಿಷಯವನ್ನು ವಿಸ್ತರಿಸಿ ಹೇಳಿರುವುದು. ಮಲಿನಸತ್ವಗುಣಪ್ರಧಾನವಾದ ಮಾಯೆಯು, ಮಾಯಾವಿಶಿಷ್ಟವಾದ ಜೀವಾತ್ಮಚೈತನ್ಯವನ್ನು ತನ್ನಧೀನಮಾಡಿಕೊಂಡು, ಜೀವ, ಸಂಸಾರೀ, ಕರ್ತಾ, ಭೋಕ್ತಾ ಎಂಬ ಹೆಸರುಗಳನ್ನು ಹೊಂದುವುದು. ಕೇವಲತಮೋಗುಣಪ್ರಧಾನವಾದ ಮಾಯೆಯು ಆತ್ಮಸ್ವರೂಪವನ್ನು ಸಂಪೂರ್ಣವಾಗಿ ಮರೆಮಾಡಿ, ಭೂತಗಳು ಭೌತಿಕಪದಾರ್ಥಗಳು ಜಗತ್ತು ಇವುಗಳ ಸ್ವರೂಪವಾಗಿ ಭೋಗ್ಯವಾಗಿರುವುವು. ಈ ಶ್ಲೋಕದಲ್ಲಿರುವ "ಮನ್ಮಾಯಾಶಕ್ತಿ" ಎಂಬ ಮಾತಿನಿಂದ ಭೋಗಪ್ರದನಾದ ಈಶ್ವರನನ್ನೂ, ಅವನ ಅಧೀನವಾದ ಮಾಯೆಯನ್ನೂ, ಹೇಳಿರುವುದು. ಹಾಗೆಯೇ ಎರಡನೆಯ ಸ್ಥಿತಿಯನ್ನು ಹೊಂದಿದ ಮಾಯೋಪಾಧಿವಿಶಿಷ್ಟ ಚೈತನ್ಯವೇ ಭೋಕ್ತೃವಾದ ಜೀವನು. ಮೂರನೆಯ ಸ್ಥಿತಿಯನ್ನು ಹೊಂದಿದ ಮಾಯೋಪಾಧಿವಿಶಿಷ್ಟಚೈತನ್ಯವು ಭೋಗ್ಯಜಡಜಗತ್ತಾಗಿ, ತೋರುತ್ತಿರುವುದು. ಹೀಗೆ ಭೋಗಪ್ರದ ಭೋಕ್ತೃ ಭೋಗ್ಯವೆಂಬ ವಿಭಾಗಕಲ್ಪನೆಗೆ ಆಶ್ರಯವಾದ ಮಾಯೆಯು ಕಲ್ಪಿತವಾದುದರಿಂದ ಮಾಯಾತೀತನಾದ ಶಿವನನ್ನು ಬಿಟ್ಟು ಈ ಮಾಯೆಗೆ ಪರಮಾರ್ಥಸತ್ತೆಯು ಇಲ್ಲವು. ಈ ವಿಷಯದಲ್ಲಿ ಶ್ವೇತಾಶ್ವತರೋಪನಿಷತ್ತಿನಲ್ಲಿ "ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮ ಮೇತತ್" ಎಂದು ಹೇಳಿರುವುದು. ಎಲ್ಲಿಯವರೆಗೆ ಬ್ರಹ್ಮಜ್ಞಾನವುಂಟಾಗುವುದಿಲ್ಲವೋ, ಅಲ್ಲಿಯವರೆಗೂ, ಪ್ರೇರಕನೂ, ಭೋಗಪ್ರದನೂ, ಆದ ಈಶ್ವರನೆಂದೂ, ಭೋಕ್ತೃವು ಜೀವನೆಂದೂ, ಭೋಗ್ಯವು ಜಗತ್ತೆಂದೂ ವಿಭಾಗಗಳು ಇರುವುವು. ಬ್ರಹ್ಮಜ್ಞಾನವಾದಮೇಲೆ ಈ ಮೂರೂ ಇದ್ದರೂ ಬ್ರಹ್ಮಸ್ವರೂಪವಾಗಿ ಗೋಚರಿಸುವುದು. ಆದುದರಿಂದಲೇ ಮಾಯಾಶಕ್ತಿಕಲ್ಪಿತವೆಂದು ಹೇಳಿರುವುದು. ಆಗಮಶಾಸ್ತ್ರದಲ್ಲಿಯೂ, "ಶಿವೋ ದಾತಾ ಶಿವೋ ಭೋಕ್ತಾ ಶಿವಃ ಸರ್ವಮಿದಂ ಜಗತ್ । ಜೀವೋ ಯಜತಿಯಜ್ಞೈಶ್ಚ ಯಃ ಶಿವಃ ಸೋಽಹಮೇವ ಹಿ" ಎಂದು ಹೇಳಿರುವುದು. ಮಾಯಾತೀತನಾದ ಶಿವನೇ ತನ್ನ ಮಾಯೆಯಿಂದ ಭೋಗ

ಮಾಮೇವಂ ವೇದವಾಕ್ಯೇಭ್ಯೋ ಜಾನಾತ್ಯಾಚಾರ್ಯಪೂರ್ವಕಂ ।
ಯಃ ಪಶುಃ ಸ ವಿಮುಚ್ಯೇತ ಜ್ಞಾನಾದ್ವೇದಾಂತ ವಾಕ್ಯಜಾತ್ ॥೧೦॥

ಇತ್ಯುಕ್ತ್ವಾ ಭಗವಾನ್ರುದ್ರಃ ಸ್ವಂ ಪೂರ್ಣಂ ರೂಪಮಾವಿಶತ್ ।
ನಾಪಶ್ಯಂತ ತತೋ ರುದ್ರಂ ದೇವಾ ವಿಷ್ಣುಪುರೋಗಮಾಃ ॥೧೧॥

ಅಥರ್ವಶಿರಸಾ ದೇವಮಸ್ತುವಂಶ್ಚೋರ್ಧ್ವಬಾಹವಃ ।
ಅನ್ಯೈರ್ನಾನಾವಿಧೈಃ ಸೂಕ್ತೈಃ ಶ್ರೀಮತ್ಪಂಚಾಕ್ಷರೇಣ ಚ ॥೧೨॥

ದಾತೃವಾಗಿಯೂ (ಸುಖವನ್ನು ಕೊಡುವವನು) ಸುಖವನ್ನು ಅನುಭವಿಸುವವನಾಗಿಯೂ, ಭೋಗ್ಯವಸ್ತುವಾಗಿಯೂ ತೋರುವನು. ಯಾವಾಗ ಭೋಕ್ತೃವಾದ ಜೀವನು ಶಿವನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವನೋ, ಆಗ ವಿಭಾಗಕ್ಕೆ ಕಾರಣವಾದ ಮಾಯೆಯು ನಾಶವಾಗಿ ತಾನೇ ಶಿವಸ್ವರೂಪನಾಗುವನು. ಈ ಅರ್ಥವನ್ನೇ ಮುಂದಿನ ಗ್ರಂಥದಲ್ಲಿ ವಿವರಿಸಲಾಗುವುದು. ॥೯॥

ಯಾವ ಜೀವನು ಗುರುಮುಖದಿಂದ ವೇದವಾಕ್ಯಗಳನ್ನು ಕೇಳಿ ನನ್ನನ್ನು ತಿಳಿಯುವನೋ ವೇದಾಂತವಾಕ್ಯಗಳಿಂದುಂಟಾದ ಜ್ಞಾನದಿಂದ ಕೂಡಿದ ಅವನು ಮುಕ್ತನಾಗುವನು. ಈ ವಿಷಯದಲ್ಲಿ "ತಂ ತ್ವೌಪನಿಷದಂ ಪೃಚ್ಛಾಮಿ" "ಆಚಾರ್ಯವಾನ್ ಪುರುಷೋ ವೇದ" "ಯೋ ಜಾನಾತಿ ಸೋಽಜ್ಞಾನಾನ್ಮುಚ್ಯತೇ" "ಬ್ರಹ್ಮವೇದ ಬ್ರಹ್ಮೈವ ಭವತಿ" "ತಮೇವ ವಿದಿತ್ವಾಽತಿಮೃತ್ಯುಮೇತಿ" "ತಮೇವಂ ವಿದ್ವಾನಮೃತ ಇಹ ಭವತಿ" "ನಾನ್ಯಃಪಂಥಾ ವಿದ್ಯತೇಽಯನಾಯ" ಎಂಬ ವೇದವಾಕ್ಯಗಳೇ ಪ್ರಮಾಣಗಳು. ॥೧೦॥

ಈ ರೀತಿಯಲ್ಲಿ ಗುರೂಪದೇಶದಿಂದಲೇ ತಿಳಿಯಬೇಕಾದ ಸ್ವರೂಪವನ್ನು ಉಪದೇಶಮಾಡಿ ಆತ್ಮಸಾಕ್ಷಾತ್ಕಾರಕ್ಕೆ ಸಾಧನಗಳಾದ, ಪಾಶುಪತವ್ರತ, ಪ್ರಣವ, ಪಂಚಾಕ್ಷರ ಜಪವೇ ಮುಂತಾದುವುಗಳನ್ನು ಶಾಸ್ತ್ರಗಳಿಂದಲೇ ದೇವತೆಗಳು ತಿಳಿಯಬಲ್ಲರೆಂದು ತಾನು ಮಾಡಬೇಕಾದುದು ಯಾವುದೂ ಇಲ್ಲದುದರಿಂದ ಮಹಾಮಹಿಮನಾದ ಶಿವನು ತನ್ನ ಪೂರ್ಣಸ್ವರೂಪವನ್ನು ಪ್ರವೇಶಿಸಿದನು. ಆ ಬಳಿಕ ವಿಷ್ಣುವೇ ಮೊದಲಾದ ದೇವತೆಗಳು ಆ ದೇವನನ್ನು ನೋಡಲಿಲ್ಲ. ॥೧೧॥

ದೇವತೆಗಳು ಕೈಗಳನ್ನು ಮೇಲಕ್ಕೆ ಎತ್ತಿ ಅಥರ್ವಶಿರೋಪನಿಷತ್ತಿನಿಂದಲೂ, ಇತರ ಶತರುದ್ರೀಯವೇ ಮೊದಲಾದ ಸೂಕ್ತಗಳಿಂದಲೂ, ಪಂಚಾಕ್ಷರೀ ಜಪದಿಂದಲೂ ಆ ಶಿವನನ್ನು ಸ್ತೋತ್ರಮಾಡಿದರು. ॥॥೧೨॥

ಪುನಃ ಸಾಕ್ಷಾಚ್ಛಿವಜ್ಞಾನಸಿದ್ಧ್ಯರ್ಥಂ ಮುನಿಪುಂಗವಾಃ ।
ಅಗ್ನಿಹೋತ್ರಸಮುತ್ಪನ್ನಂ ಭಸ್ಮಾದಾಯಾದರೇಣ ತು ॥೧೩॥

ನಿಧಾಯ ಪಾತ್ರೇ ಶುದ್ಧೇ ತತ್ಪಾದೌ ಪ್ರಕ್ಷಾಲ್ಯ ವಾರಿಣಾ ।
ದ್ವಿರಾಚಮ್ಯ ಮುನಿಶ್ರೇಷ್ಠಾಃ ಸಪವಿತ್ರಾಃ ಸಮಾಹಿತಾಃ ॥೧೪॥

ಓಮಾಪಃ ಸರ್ವಮಿತ್ಯೇತನ್ಮನ್ತ್ರಮುಚ್ಚಾರ್ಯ ಭಕ್ತಿತಃ ।
ಧ್ಯಾತ್ವಾ ವಿಷ್ಣುಂ ಜಲಾಧ್ಯಕ್ಷಂ ಗೃಹೀತ್ವಾ ಭಸ್ಮ ವಾರಿಣಾ ॥೧೫॥

ವಿಮೃಜ್ಯ ಮಂತ್ರೈರ್ಜಾಬಾಲೈರಗ್ನಿರಿತ್ಯಾದಿ ಸಪ್ತಭಿಃ ।
ಸಮಾಹಿತಧಿಯಃ ಶುದ್ಧಾಃ ಶಿವಂ ಧ್ಯಾತ್ವಾ ಶಿವಾಮಪಿ ॥೧೬॥

ಸಮುದ್ಧೂಲ್ಯ ಮುನಿಶ್ರೇಷ್ಠಾ ಆಪಾದತಲಮಸ್ತಕಂ ।
ಸಿತೇನ ಭಸ್ಮನಾ ತೇನ ಬ್ರಹ್ಮಭೂತೇನ ಭಾವನಾತ್ ॥೧೭॥

ಲಲಾಟೇ ಹೃದಯೇ ಕುಕ್ಷೌ ದೋರ್ದ್ವಂದ್ವೇ ಚ ಸುರೋತ್ತಮಾಃ ।
ತ್ರಿಪುಂಡ್ರಧಾರಣಂ ಕೃತ್ವಾ ಬ್ರಹ್ಮವಿಷ್ಣುಶಿವಾತ್ಮಕಂ ॥೧೮॥

ಮುನಿಶ್ರೇಷ್ಠರೇ, ಕೇಳಿರಿ. ಪುನಃ ಆ ದೇವತೆಗಳು ಸಾಕ್ಷಾತ್ ಶಿವಜ್ಞಾನಸಿದ್ಧಿ ಗೋಸ್ಕರವಾಗಿ ಅಗ್ನಿಹೋತ್ರದಲ್ಲಿ ಹುಟ್ಟಿದ ಭಸ್ಮವನ್ನು ಪ್ರೀತಿಯಿಂದ ತೆಗೆದುಕೊಂಡು, ಶುದ್ಧವಾದ ಪಾತ್ರೆಯಲ್ಲಿಟ್ಟು ಕಾಲುಗಳನ್ನು ತೊಳೆದುಕೊಂಡು ಎರಡಾವೃತ್ತಿ ಆಚಮನವನ್ನು ಮಾಡಿ ಶುದ್ಧರಾಗಿ ಭಕ್ತಿಯಿಂದ "ಓ ಮಾಪೋ ಜ್ಯೋತಿರಸೋಮೃತಂ ಬ್ರಹ್ಮ ಭೂರ್ಭುವಃ ಸ್ವರೋಂ" ಎಂಬ ಮಂತ್ರವನ್ನು ಹೇಳಿ ಜಲಾಧಿಪತಿಯಾದ ವರುಣನನ್ನೂ ವಿಷ್ಣುವನ್ನೂ ಧ್ಯಾನಮಾಡಿ ಭಸ್ಮವನ್ನು ತೆಗೆದುಕೊಂಡು ನೀರಿನಲ್ಲಿ ಕಲಸಿ "ಅಗ್ನಿರಿತಿ ಭಸ್ಮ" ಇತ್ಯಾದಿ ಏಳು ಮಂತ್ರಗಳಿಂದ ಜಾಬಾಲೋಪನಿಷತ್ತಿನಲ್ಲಿ ಹೇಳಿರುವಂತೆ ಅಭಿಮಂತ್ರಿಸಿ ಏಕಾಗ್ರಚಿತ್ತದಿಂದ ಶಿವನನ್ನೂ ಶಿವೆಯನ್ನೂ ಧ್ಯಾನಮಾಡಿ, ||೧೩-೧೪-೧೫-೧೬||

ಪಾದದಿಂದ ತಲೆಯವರೆಗೂ, ಬ್ರಹ್ಮಭಾವನೆಯಿಂದ ಬ್ರಹ್ಮಸ್ವರೂಪವಾದ ಬೆಳ್ಳಗಿರುವ ಭಸ್ಮವನ್ನು ಬಳಿದುಕೊಂಡು, ಹಣೆ, ಎದೆ, ಹೊಟ್ಟೆ, ತೋಳುಗಳು ಇವುಗಳಲ್ಲಿ ಬ್ರಹ್ಮವಿಷ್ಣುಶಿವಸ್ವರೂಪವಾದ ತ್ರಿಪುಂಡ್ರಧಾರಣೆಯನ್ನು ಮಾಡಿಕೊಂಡು ಅಥರ್ವಶಿರೋಪನಿಷತ್ತಿನಲ್ಲಿ ಹೇಳುವ ಪಾಶುಪತವ್ರತವನ್ನು ಈರೀತಿಯಲ್ಲಿ ಮಾಡಿ,

ಏವಂ ಕೃತ್ವಾ ವ್ರತಂ ದೇವಾ ಅಥರ್ವಶಿರಸಿ ಸ್ಥಿತಂ ।
ಶಾಂತಾ ದಾಂತಾ ವಿರಕ್ತಾಶ್ಚ ತ್ಯಕ್ತ್ವಾ ಕರ್ಮಾಣಿ ಸುವ್ರತಾಃ ॥೧೯॥

ವಾಲಾಗ್ರಮಾತ್ರಂ ವಿಶ್ವೇಶಂ ಜಾತವೇದಸ್ಸ್ವರೂಪಿಣಂ ।
ಹೃತ್ಪದ್ಮಕರ್ಣಿಕಾಮಧ್ಯೇ ಧ್ಯಾತ್ವಾ ವೇದವಿದಾಂ ವರಾಃ ॥೨೦॥

ಸರ್ವಜ್ಞಂ ಸರ್ವಕರ್ತಾರಂ ಸಮಸ್ತಾಧಾರಮದ್ಭುತಂ ।
ಪ್ರಣವೇನೈವ ಮಂತ್ರೇಣ ಪೂಜಯಾಮಾಸುರೀಶ್ವರಂ ॥೨೧॥

ಅಥ ತೇಷಾಂ ಪ್ರಸಾದಾರ್ಥಂ ಪಶೂನಾಂ ಪತಿರೀಶ್ವರಃ ।
ಉಮಾರ್ಧವಿಗ್ರಹಃ ಶ್ರೀಮಾನ್ ಸೋಮಾರ್ಧಕೃತಶೇಖರಃ ॥೨೨॥

ನೀಲಕಂಠೋ ನಿರಾಧಾರೋ ನಿರ್ಮಲೋ ನಿರುಪಪ್ಲವಃ ।
ಬ್ರಹ್ಮವಿಷ್ಣುಮಹೇಶಾನೈರುಪಾಸ್ಯಃ ಪರಮೇಶ್ವರಃ ॥೨೩॥

ಶಾಂತರೂ, ಇಂದ್ರಿಯನಿಗ್ರಹದಿಂದ ವಿರಕ್ತರೂ, ಆಗಿ, ಕರ್ಮಗಳನ್ನೆಲ್ಲವನ್ನೂ ಬಿಟ್ಟು, ಸೂಕ್ಷ್ಮನೂ (ಎಂದರೆ ಬಾಹ್ಯೇಂದ್ರಿಯಾಗೋಚರನು) ಅಗ್ನಿಸ್ವರೂಪನೂ, ಆದ, ವಿಶ್ವೇಶ್ವರನನ್ನು ತಮ್ಮ ಹೃದಯಕಮಲಗಳ ಕರ್ಣಿಕೆಯ ನಡುವೆ ಧ್ಯಾನಮಾಡುತ್ತಾ, ಸರ್ವಜ್ಞನೂ, ಸಕಲಪ್ರಪಂಚಗಳಿಗೂ ಆಶ್ರಯನೂ, ಸಕಲವನ್ನೂ ಸೃಷ್ಟಿಸಿದವನೂ, ಆಶ್ಚರ್ಯಸ್ವರೂಪನೂ ಆದ ಈಶ್ವರನನ್ನು ಪ್ರಣವಮಂತ್ರದಿಂದಲೇ ಪೂಜಿಸಿದರು. ॥೧೭-೧೮-೧೯-೨೦-೨೧॥

ಆಮೇಲೆ ಪಶುಪತಿಯೂ, ಅರ್ಧನಾರೀಶ್ವರನೂ, ಚಂದ್ರಶೇಖರನೂ, ನೀಲಕಂಠನೂ ಆದ ಶಿವನು ಆ ದೇವತೆಗಳ ಪೂರ್ವಜನ್ಮಸಂಸ್ಕಾರಸಹಿತವಾದ ಅವಿದ್ಯಾನಿವೃತ್ತಿರೂಪವಾದ, ಪರಿಶುದ್ಧತೆಗೋಸ್ಕರವಾಗಿ, ನಿರಾಧಾರನೂ, ನಿರ್ಮಲನೂ, ಬ್ರಹ್ಮವಿಷ್ಣುಮಹೇಶ್ವರರಿಂದ ಧ್ಯಾನಿಸಲ್ಪಡತಕ್ಕವನೂ, ಸಂಸಾರದುಃಖನಾಶಕನೂ, ಆಗಿ, ನಿಷ್ಕಲರೂಪದಿಂದ ಅನುಭವಗೋಚರನಾದನು. ದೇವತೆಗಳು ಮೊದಲೇ ಶಿವನ ದರ್ಶನವನ್ನು ಮಾಡಿ ಅವನ ಉಪದೇಶವನ್ನು ಪಡೆದರೆಂದು ಹೇಳಿದಮೇಲೆ ದೇವತೆಗಳು ಮಾಡುವ ವ್ರತಾದಿಗಳಿಗೆ ಪ್ರಯೋಜನವೇನು? ಎಂದರೆ, ಮೊದಲು ಶಿವನು ಸಗುಣಸ್ವರೂಪದಿಂದ ದೇವತೆಗಳಿಗೆ ನಿರ್ಗುಣಸ್ವರೂಪವನ್ನು ಉಪದೇಶ ಮಾಡಿದನು. ಆಗ ಅವರಿಗೆ ಪರೋಕ್ಷಜ್ಞಾನವುಂಟಾಯಿತು. ದೇವತೆಗಳು ವ್ರತಾದಿಗಳಿಂದ ನಿರ್ಗುಣನಾದ ಆತ್ಮನ ಸ್ವರೂಪದರ್ಶನಕ್ಕೆ ಪ್ರತಿಬಂಧಕವಾಗಿರುವ ಪಾಪ

ಸಾನ್ನಿಧ್ಯಮಕರೋದ್ರುದ್ರಃ ಸಾಕ್ಷಾತ್ಸಂಸಾರನಾಶಕಂ ।
ಯಂ ಪ್ರಪಶ್ಯಂತಿ ವೇದಾಂತೈಃ ಸ್ವರೂಪಂ ಸರ್ವಸಾಕ್ಷಿಣಂ ॥೨೪॥

ತಮೇವ ಶಂಕರಂ ಸಾಕ್ಷಾದ್ದದೃಶುಃ ಸುರಸತ್ತಮಾಃ ।
ಯಂ ನ ಪಶ್ಯಂತಿ ದುರ್ವೃತ್ತಾಃ ಶ್ರೌತಸ್ಮಾರ್ತ ವಿವರ್ಜಿತಾಃ ॥೨೫॥

ತಮೇವ ಶಂಕರಂ ಸಾಕ್ಷಾದ್ದದೃಶುರ್ದೇವಪುಂಗವಾಃ ।
ಯತ್ಪ್ರಾಪ್ತ್ಯರ್ಥಂ ದ್ವಿಜೈರ್ವೇದಾ ಅಧೀಯಂತೇ ಸಮಾಹಿತೈಃ ॥೨೬॥

ತಮೇವ ರುದ್ರಮೀಶಾನಂ ದದೃಶುಸ್ತ್ರಿದಶಾ ಭೃಶಂ ।
ಯಂ ಯಜಂತೇ ಮುನಿಶ್ರೇಷ್ಠಾಃ ಶ್ರದ್ಧಯಾ ಬ್ರಾಹ್ಮಣೋತ್ತಮಾಃ ॥೨೭॥

ತಮೇವ ಪರಮಂ ದೇವಂ ದದೃಶುಃ ಸ್ವರ್ಗವಾಸಿನಃ ।
ಯಂ ಪ್ರಪಶ್ಯಂತಿ ದೇವೇಶಂ ಯೋಗಿನೋ ದಗ್ಧಕಿಲ್ಬಿಷಾಃ ॥೨೮॥

ಗಳನ್ನು ನಾಶಮಾಡಿಕೊಂಡು ಅಪರೋಕ್ಷಜ್ಞಾನವನ್ನು ಪಡೆದರೆಂಬುದು ಮುಖ್ಯಾಭಿಪ್ರಾಯವು. ॥೨೨-೨೩॥

ಸಮಸ್ತ ವಸ್ತುಗಳಿಗೂ ಸಾಕ್ಷಿಸ್ವರೂಪನಾದ ಎಂದರೆ ಸಂಸಾರಪ್ರವೇಶವಿಲ್ಲದೆ ಉದಾಸೀನನಾದ, ಶಂಕರನನ್ನು ವೇದಾಂತವಾಕ್ಯಗಳಿಂದ "ಸತ್ಯಂ ಜ್ಞಾನಮನಂತಂ ಬ್ರಹ್ಮ" "ತತ್ವಮಸಿ" "ಅಹಂ ಬ್ರಹ್ಮಾಽಸ್ಮಿ" ಇತ್ಯಾದಿ ಮಹಾವಾಕ್ಯಗಳ ಅಭಿಧಾವೃತ್ತಿಯಿಂದ ಸಗುಣಸ್ವರೂಪವನ್ನು ತಿಳಿದು, ಲಕ್ಷಣಾವೃತ್ತಿಯಿಂದ ನಿರ್ಗುಣಸ್ವರೂಪವನ್ನು ದೇವತೆಗಳು ತಿಳಿದುಕೊಂಡರು. ಶ್ರೌತಸ್ಮಾರ್ತಕರ್ಮಗಳನ್ನು ಮಾಡದ ದುರಾಚಾರಿಗಳು ಆ ದೇವನ ಯಾವ ರೂಪವನ್ನೂ ತಿಳಿಯಲಾರರು. ಶಂಕರನೆಂದರೆ ಸಂಸಾರಿಗಳಿಗೂ, ಮುಕ್ತರಿಗೂ ಸುಖವನ್ನುಂಟುಮಾಡುವವನು. ಯಾವ ಪರಬ್ರಹ್ಮಸ್ವರೂಪಪ್ರಾಪ್ತಿಗಾಗಿ ಬ್ರಾಹ್ಮಣರು ವೇದಾಭ್ಯಾಸವನ್ನು ಮಾಡುತ್ತಾರೋ ಅಂತಹ ದುಃಖನಾಶಕನೂ, ಸ್ವತಂತ್ರನೂ, ಆದ ಶಿವನನ್ನು ದೇವತೆಗಳು ಅಪರೋಕ್ಷಾನುಭವರೂಪದಿಂದ ನೋಡಿದರು. ॥೨೪-೨೫-೨೬॥

ಶ್ರೇಷ್ಠರಾದ ಮುನಿಗಳು ಭಕ್ತಿಯಿಂದ ಯಾರನ್ನು ಪೂಜಿಸುವರೋ, ಯೋಗಿಗಳು ತಮ್ಮ ಪಾಪಗಳನ್ನು ನಾಶಮಾಡಿಕೊಂಡು ಯಾರನ್ನು ನೋಡುವರೋ, ಯಾರ ಅನುಗ್ರಹದಿಂದ ಮಹಾಮಹಿಮನಾದ ವಿಷ್ಣುವು ಸಕಲ ಜಗತ್ತಿಗೂ ಒಡೆಯನಾಗಿರು

ತಮೇವ ಸರ್ವಮಾನಂದಂ ದದೃಶುರ್ಲೋಕನಾಯಕಾಃ ।
ಯಸ್ಯ ಪ್ರಸಾದಾತ್ ಭಗವಾನ್ವಿಷ್ಣುರ್ವಿಶ್ವಜಗತ್ಪತಿಃ ॥೨೯॥

ತಮೇವ ಸರ್ವಲೋಕೇಶಂ ದದೃಶುಃ ಪುರುಷಾಧಿಕಾಃ ।
ಯತ್ಪ್ರಸಾದಾದ್ದ್ವಿಜಾ ಬ್ರಹ್ಮಾ ಸ್ರಷ್ಟಾ ಸರ್ವಸ್ಯ ಸುವ್ರತಾಃ ॥೩೦॥

ತಮೇವ ಸತ್ಯಮೀಶಾನಂ ದದೃಶುಃ ಸತ್ವಸಂಯುತಾಃ ।
ಅಥ ತಂ ತುಷ್ಟುವುರ್ದೇವಾಃ ಸಾಂಬಂ ಸರ್ವಫಲಪ್ರದಂ ॥೩೧॥

ಸಂಸಾರರೋಗದುಃಖಸ್ಯ ಭೇಷಜಂ ಗದ್ಗದಸ್ವರಾಃ ।
ಅಥ ದೇವೋ ಮಹಾದೇವಃ ಸಾಂಬೋ ದೇವೈರಭಿಷ್ಟುತಃ ॥೩೨॥

ವಿಲೋಕ್ಯ ದೇವಾನಖಿಲಾನ್ಪ್ರೀತೋಽಸ್ಮೀತ್ಯಬ್ರವೀದ್ಧರಃ ।
ಪುನರ್ದೇವಾನ್ಸಮಾಲೋಕ್ಯ ರುದ್ರೋ ವಿಷ್ಣುಪುರೋಗಮಾನ್॥೩೩॥

ಪ್ರಾಹ ಗಂಭೀರಯಾ ವಾಚಾ ಭಗವಾನ್ಕರುಣಾನಿಧಿಃ ।
ಅಹಮೇವ ಪರಂ ತತ್ವಂ ಮತ್ತೋ ಜಾತಂ ಜಗತ್ಸುರಾಃ ॥೩೪॥

ವನೋ, ಯಾರ ಅನುಗ್ರಹದಿಂದ ಬ್ರಹ್ಮನು ಸಮಸ್ತವನ್ನೂ ಸೃಷ್ಟಿಸುವನೋ, ಆ ಸತ್ಯಸ್ವರೂಪನೂ, ಆನಂದಸ್ವರೂಪನೂ, ಸರ್ವಲೋಕೇಶ್ವರನೂ, ಸ್ವತಂತ್ರನೂ ಆದ ಶಿವನನ್ನು ದೇವತೆಗಳು ದರ್ಶನಮಾಡಿದರು. ॥೨೭-೨೮-೨೯-೩೦॥

ಆ ಮೇಲೆ ದೇವತೆಗಳು ಗದ್ಗದ ಧ್ವನಿಯಿಂದ ಕೂಡಿ ಸಂಸಾರವೆಂಬ ರೋಗದಿಂದುಂಟಾದ ದುಃಖಕ್ಕೆ ಔಷಧಸ್ವರೂಪನೂ, ದೇವೀಸಹಿತನೂ, ಸಮಸ್ತಫಲವನ್ನು ಕೊಡತಕ್ಕವನೂ, ಆದ ಶಿವನನ್ನು ಸ್ತೋತ್ರಮಾಡಿದರು. ॥೩೧॥

ಆಮೇಲೆ ದೇವತೆಗಳ ಸ್ತೋತ್ರವನ್ನು ಕೇಳಿದ ದೇವೀಸಹಿತನಾದ ಮಹಾದೇವನು ದೇವತೆಗಳನ್ನೆಲ್ಲರನ್ನೂ ನೋಡಿ, ನಾನು ಸಂತುಷ್ಟನಾದೆನು. ಎಂದು ಹೇಳಿದನು. ॥೩೨॥

ಮತ್ತೆ ರುದ್ರನು ವಿಷ್ಣುವೇ ಮುಂತಾದ ದೇವತೆಗಳನ್ನು ನೋಡಿ ಕರುಣೆಯಿಂದ ಕೂಡಿದವನಾಗಿ ಗಂಭೀರವಾದ ಧ್ವನಿಯಿಂದ ಹೇಳಿದನು. ॥೩೩॥

ಎಲೈ ದೇವತೆಗಳೇ, ನಾನೇ ಪರತತ್ವಸ್ವರೂಪನು. ಈ ಪ್ರಪಂಚವು ನನ್ನಿಂದಲೇ ಹುಟ್ಟಿ ನನ್ನಲ್ಲಿಯೇ ಲಯವನ್ನು ಹೊಂದುವುದು. ನನಗೆ ಸಮವಾದುದಾಗಲೀ

ಮಯ್ಯೇವ ಸಂಸ್ಥಿತಂ ನಷ್ಟಂ ಮತ್ತಸ್ತೋ ನಾಧಿಕಃ ಸದಾ ।
ಮತ್ಸ್ವರೂಪಪರಿಜ್ಞಾನಾದೇವ ಸಂಸಾರನಿರ್ವೃತಿಃ ॥೩೫॥

ಮಮ ಜ್ಞಾನಂ ಚ ವೇದಾಂತಶ್ರವಣಾದೇವ ಜಾಯತೇ ।
ಮುಮುಕ್ಷೋರ್ವ್ರತನಿಷ್ಠಸ್ಯ ಪ್ರಶಾಂತಸ್ಯ ಮಹಾತ್ಮನಃ ॥೩೬॥

ತ್ಯಕ್ತಕರ್ಮಕಲಾಪಸ್ಯ ಧ್ಯಾನನಿಷ್ಠಸ್ಯ ಶೂಲಿನಃ ।
ಯಜ್ಞದಾನಾದಿಭಿಃ ಕ್ಷೀಣಮಹಾಪಾಪಾರ್ಣವಸ್ಯ ಚ ॥೩೭॥

ಏವಂ ಮಾಂ ಯೋ ವಿಜಾನಾತಿ ಸ ಸರ್ವಂ ವೇದ ನೇತರಃ ।
ಉಕ್ತಂ ವೇದಾಂತವಿಜ್ಞಾನಂ ಯುಷ್ಮಾಕಂ ಸುರಪುಂಗವಾಃ ॥೩೮॥

ಅಧಿಕವಾದುದಾಗಲೀ ಮತ್ತೊಂದು ವಸ್ತುವು ನಿಜವಾಗಿ ಇರುವುದಿಲ್ಲ. ನನ್ನ ನಿಷ್ಕಲ ಸ್ವರೂಪವನ್ನು ತಿಳಿದುಕೊಂಡರೆ ಜನನಮರಣರೂಪವಾದ ಸಂಸಾರದುಃಖವು ನಾಶವಾಗುವುದು. ||೩೪-೩೫||

ಮೋಕ್ಷಾಪೇಕ್ಷೆಯುಳ್ಳವನಾಗಿ, ಯಜ್ಞಾದಿಕರ್ಮಗಳಲ್ಲಾಸಕ್ತನಾಗಿ, ಶಾಂತವಾದ ಮನಸ್ಸುಳ್ಳ ಮಹಾತ್ಮನಿಗೆ ವೇದಾಂತಶ್ರವಣದಿಂದ ನನ್ನ ಸ್ವರೂಪಜ್ಞಾನವುಂಟಾಗುವುದು. ||೩೬||

ಕರ್ಮಕಲಾಪಗಳನ್ನು ಬಿಟ್ಟು ಶಿವನ ಧ್ಯಾನದಲ್ಲಿ ಆಸಕ್ತನಾದ ಯಜ್ಞದಾನ ಮುಂತಾದುವುಗಳಿಂದ ಮಹಾಪಾಪಗಳನ್ನು ಕಳೆದುಕೊಂಡ ಮಹಾತ್ಮನಿಗೆ ನನ್ನ ಸ್ವರೂಪಜ್ಞಾನವುಂಟಾಗುವುದು. ||೩೭||

ಎಲೈ ದೇವಶ್ರೇಷ್ಠರೇ, ಈ ರೀತಿಯಲ್ಲಿ ನನ್ನನ್ನು ಯಾರು ತಿಳಿಯುವರೋ ಅವರು ಸಮಸ್ತವನ್ನೂ ತಿಳಿದವರಾಗುವರು. ಏಕವಿಜ್ಞಾನದಿಂದ ಸರ್ವವಿಜ್ಞಾನವುಂಟಾಗುವುದೆಂದು ವೇದವು ಹೇಳುವುದು. ಜ್ಞಾನಾಧಿಕಾರಕ್ಕೆ ಕಾರಣವಿಲ್ಲದಿದ್ದರೆ ಜ್ಞಾನವುಂಟಾದರೂ ಊಷರಭೂಮಿಯಲ್ಲಿ (ಬಂಜರುಭೂಮಿ) ಬಿತ್ತಿದ ಬೀಜದಂತೆ ಫಲವಿಲ್ಲದೆ ಹೋಗುವುದು. ಪ್ರಶ್ನೋಪನಿಷತ್ತಿನ ೧.೧೫ರಲ್ಲಿ- " ಯೇಷಾಂ ತಪೋ ಬ್ರಹ್ಮಚರ್ಯಂ ಯೇಷು ಸತ್ಯಂ ಪ್ರತಿಷ್ಠಿತಂ । ತೇಷಾಮಸೌ ವಿರಜೋ ಬ್ರಹ್ಮಲೋಕೋ ನ ಯೇಷು ಜಿಹ್ಮಮನೃತಂ ನ ಮಾಯಾ ಚ ॥ ಎಂದು ಹೇಳಿರುವುದು. ಇಲ್ಲಿ ಬ್ರಹ್ಮಲೋಕವೆಂದರೆ ನಿಷ್ಕಲನಾದ ಶಿವನೆಂದರ್ಥವು. ಈ ರೀತಿಯಲ್ಲಿ ನಿಮಗೆ ವೇದಾಂತದಲ್ಲಿ ವಿವರಿಸಿರುವ ವಿಜ್ಞಾನದ ಮಹಿಮೆಯನ್ನು ಹೇಳಿರುವೆನು. ||೩೮||

ವ್ರತಂ ಪಾಶುಪತಂ ಚೀರ್ಣಂ ಯೈರ್ದ್ವಿಜೈರಾದರೇಣ ಚ ।
ತೇಷಾ ಮೇವೋಪದೇಷ್ಟವ್ಯಮಿತಿವೇದಾನುಶಾಸನಂ ॥೩೯॥

॥ ಸೂತ ಉವಾಚ ॥

ಇತ್ಯುಕ್ತ್ವಾ ಭಗವಾನ್ರುದ್ರಸ್ತತ್ರೈವಾಂತರಧೀಯತ ।
ತತೋ ದೇವಾ ಮುನಿಶ್ರೇಷ್ಠಾ ದೇವದೇವಸ್ಯ ವೈಭವಂ ॥೪೦॥

ಯಾವ ಬ್ರಾಹ್ಮಣಕ್ಷತ್ರಿಯವೈಶ್ಯರು ಪಾಶುಪತವ್ರತವನ್ನು ಪ್ರೀತಿಯಿಂದ ದಂಭವಿಲ್ಲದೆ ಆಚರಿಸಿರುವರೋ ಅವರಿಗೇ ಇದನ್ನು ಉಪದೇಶಮಾಡಬೇಕೆಂದು ವೇದವಿಧಿಯೂ ಇರುವುದು.—ಕ್ರಿಯಾವಂತಃ ಶ್ರೋತ್ರಿಯಾ ಬ್ರಹ್ಮನಿಷ್ಠಾಃ ಸ್ವಯಂ ಜುಹ್ವತ ಏಕರ್ಷಿಂ ಶ್ರದ್ಧಯಂತಃ । ತೇಷಾಮೇವೈತಾಂ ಬ್ರಹ್ಮವಿದ್ಯಾಂ ವದೇತ ಶಿರೋವ್ರತಂ ವಿಧಿವದ್ಯೈಸ್ತು ಚೀರ್ಣಂ ॥ ಮುಂಡಕೋಪನಿಷತ್ ೩.೨.೧೦ ಇಲ್ಲಿ ಹೇಳುವ ಏಕರ್ಷಿಹೋಮ ಶಿರೋವ್ರತಾದಿಗಳು ಅಥರ್ವಣ ವೇದದವರಿಗೆ ಮಾತ್ರ ಅಧ್ಯಯನಧರ್ಮಗಳು. ಮಿಕ್ಕವರಿಗೆ ಕ್ರಿಯಾವತ್ತ್ವ ಮುಂತಾದುವುಗಳೇ ಮುಖ್ಯಗಳು. ॥೩೯॥

ಸೂತನು ಹೇಳಿದನು—ಮಹಾ ಮಹಿಮನಾದ ಶಿವನು ಹೀಗೆ ಹೇಳಿ ಅಲ್ಲಿಯೇ ಅದೃಶ್ಯನಾದನು. ಎಲೈ ಮುನಿಗಳೇ, ಕೇಳಿರಿ. ಆಮೇಲೆ ದೇವತೆಗಳು ದೇವದೇವನಾದ ಶಿವನ ಮಹಿಮೆಯನ್ನು ತಿಳಿದು ಅಸೂಯೆಯಿಲ್ಲದವರಾಗಿ (ಚಿತ್ತಮಲವಿಲ್ಲದವರಾಗಿ) ಪ್ರಪಂಚಕ್ಕೆ ಅವನೇ ಕಾರಣನೆಂದು ತಿಳಿದುಕೊಂಡರು. ಮಲಿನಚಿತ್ತವುಳ್ಳವರಿಗೆ ಜ್ಞಾನಬೋಧೆಯಾಗುವುದಿಲ್ಲ. ಆದುದರಿಂದ ಚಿತ್ತಮಲವನ್ನು ನಾಶಮಾಡುವ ಕರ್ಮಗಳನ್ನು ಪತಂಜಲಿ ಮುನಿಯು ತನ್ನ ಯೋಗಸೂತ್ರ ಪಾ.೧ಸೂ.೩೩ ರಲ್ಲಿ ಹೇಳಿರುವನು—ಮೈತ್ರೀ ಕರುಣಾ ಮುದಿತೋಪೇಕ್ಷಾಣಾಂ ಸುಖದುಃಖ ಪುಣ್ಯಾಪುಣ್ಯ ವಿಷಯಾಣಾಂ ಭಾವನಾತಶ್ಚಿತ್ತ ಪ್ರಸಾದನಂ. ಎಂಬುದೇ ಆ ಸೂತ್ರವು. ಸುಖವುಳ್ಳವರಲ್ಲಿ ಸ್ನೇಹಭಾವದಿಂದಿದ್ದರೆ ಪರರ ಸುಖವೂ ತನ್ನದೇ ಎಂಬ ಅಭಿಮಾನದಿಂದ ಮನಸ್ಸಿನಲ್ಲಿರುವ ಈರ್ಷ್ಯಾರೂಪವಾದ ದೋಷವು ನಿವೃತ್ತಿಯಾಗುವುದು. ದುಃಖವನ್ನು ಹೊಂದಿದವರ ವಿಷಯದಲ್ಲಿ ಕರುಣೆಯನ್ನು ಭಾವಿಸುತ್ತಿದ್ದರೆ ದುಃಖವನ್ನು ಹುಟ್ಟಿಸುವುದಕ್ಕೆ ಕಾರಣವಾದ ದ್ವೇಷವೆಂಬ ದೋಷವು ನಿವೃತ್ತಿಯಾಗುವುದು. ಪುಣ್ಯವಂತರ ವಿಷಯದಲ್ಲಿ ಸಂತೋಷವನ್ನು ಭಾವಿಸುತ್ತಿದ್ದರೆ ಗುಣವಂತರಲ್ಲಿಯೂ ತಪ್ಪನ್ನು ಹುಡುಕುವ ಅಸೂಯೆಯೆಂಬ ದೋಷವು ನಾಶವಾಗುವುದು. ಪಾಪಿಷ್ಠರಲ್ಲಿ

ವಿದಿತ್ವಾ ತಂ ಜಗದ್ಧೇತು ಮುಮುನ್ಯಂತಾನಸೂಯವಃ ।
ತಸ್ಮಾದ್ಧ್ಯಾಯಮಪಿ ಶ್ರೇಷ್ಠಾಃ ಸರ್ವಜ್ಞಂ ಪರಮೇಶ್ವರಂ ॥೪೧॥

ಜಗತಃ ಕಾರಣಂ ಬುದ್ಧ್ವಾ ಭಜಧ್ವಂ ಸರ್ವಕಾರಣಂ ।
ಸೋಽಪಿ ಸರ್ವಜಗದ್ಧೇತುಃ ಸೋಮಃ ಸೋಮಾರ್ಧಶೇಖರಃ ॥೪೨॥

ಪ್ರಧಾನಾಭಿಮುಖೋ ಭೂತ್ವಾ ಬ್ರಹ್ಮವಿಷ್ಣ್ವಾದಿಭಿಃ ಸಹ ।
ಸಾನ್ನಿಧ್ಯಂ ವೇದವಿಚ್ಛ್ರೇಷ್ಠಾಃ ಕರಿಷ್ಯತ್ಯಖಿಲೇಶ್ವರಃ ॥೪೩॥

ಇತಿ ಶ್ರುತ್ವಾ ಮಹಾತ್ಮಾನೋ ನೈಮಿಷಾರಣ್ಯವಾಸಿನಃ ।
ಮಹಾದೇವಸ್ಯ ಮಾಹಾತ್ಮ್ಯಂ ಶ್ರೀಮತ್ಪಾಶುಪತಸ್ಯ ಚ ॥೪೪॥

ಹೃಷ್ಟಚಿತ್ತಾ ಮಹಾತ್ಮಾನಂ ಸೂತಂ ಸರ್ವಾರ್ಥಸಾಗರಂ ।
ಪ್ರಣಮ್ಯ ಪೂಜಯಾಮಾಸುರ್ಭಕ್ತ್ಯಾ ವಿಜ್ಞಪ್ತಿಸಿದ್ಧಯೇ ॥೪೫॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ
ಪಾಶುಪತವ್ರತಂ ನಾಮ ದ್ವಿತೀಯೋಽಧ್ಯಾಯಃ ಸಮಾಪ್ತಃ.

ಉಪೇಕ್ಷೆಯನ್ನು ಭಾವಿಸುತ್ತ ಅವರ ಸಂಬಂಧವನ್ನು ಬಿಡುವುದರಿಂದ ಸಂಸರ್ಗದೋಷವೆಂಬ ಮಾಲಿನ್ಯವು ನಿವೃತ್ತಿಯಾಗಿ ಚಿತ್ತಪ್ರಸಾದವುಂಟಾಗುವುದು. ॥೪೦॥

ಆದುದರಿಂದ ಶ್ರೇಷ್ಠರಾದ ನೀವೂ ಕೂಡ, ಜಗತ್ತಿಗೆ ಪರಮೇಶ್ವರನೇ ಕಾರಣನೆಂದು ತಿಳಿದು ಸರ್ವಜ್ಞನೂ, ಸರ್ವಕಾರಣನೂ, ಆದ ಆ ದೇವನನ್ನೇ ಭಕ್ತಿಯಿಂದ ಪೂಜಿಸಿರಿ. ಸರ್ವಜಗತ್ಕಾರಣನಾದ, ಉಮಾದೇವೀಸಹಿತನೂ, ಚಂದ್ರಶೇಖರನೂ, ಸಮಸ್ತಜಗತ್ತಿಗೆ ಒಡೆಯನೂ ಆದ ಪರಮೇಶ್ವರನು ಪ್ರಸನ್ನನಾಗಿ ಬ್ರಹ್ಮಾವಿಷ್ಣುಮುಂತಾದವರೊಡನೆ ನಿಮಗೆ ಪ್ರತ್ಯಕ್ಷನಾಗುವನು. ॥೪೧-೪೨-೪೩॥

ಹೀಗೆಂದು ಮಹಾದೇವನ ಮಹಿಮೆಯನ್ನೂ ಪಾಶುಪತವ್ರತದ ಮಹಿಮೆಯನ್ನೂ ಹೇಳಿದ ಸೂತನ ಮಾತನ್ನು ಕೇಳಿದ ನೈಮಿಷಾರಣ್ಯವಾಸಿಗಳಾದ ಮುನಿಗಳೆಲ್ಲರೂ ತಮ್ಮ ಜ್ಞಾನಸಿದ್ಧಿಗಾಗಿ ಸಮಸ್ತಶಾಸ್ತ್ರಗಳನ್ನೂ ಸಾಗರದಂತೆ ತುಂಬಿಕೊಂಡಿರುವ ಸೂತನನ್ನು ಭಕ್ತಿಯಿಂದ ನಮಸ್ಕರಿಸಿ ಪೂಜಿಸಿದರು. ॥೪೪-೪೫॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ
ಪಾಶುಪತವ್ರತ ವಿವರಣೆ ಎಂಬ ಎರಡನೆಯ ಅಧ್ಯಾಯವು ಮುಗಿಯಿತು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

|| ತೃತೀಯೋಽಧ್ಯಾಯಃ ||

ಮೂರನೆಯ ಅಧ್ಯಾಯವು

|| ನೈಮಿಷೀಯಾ ಊಚುಃ ||

ಭಗವನ್ ಕೇಃ ಸುರೈಃ ಸರ್ವೈರಸುರೈಃ ಸಿದ್ಧ ಕಿನ್ನರೈಃ |
ಮುನಿಭಿರ್ಯಕ್ಷಗಂಧರ್ವೈಸ್ತಥಾಽನ್ಯೈಃ ಸರ್ವಜಂತುಭಿಃ ||೧||

ಭುಕ್ತ್ಯರ್ಥಂ ಚ ವಿಮುಕ್ತ್ಯರ್ಥಂ ಪೂಜ್ಯಃ ಪುಣ್ಯವತಾಂ ವರ |
ತಮಸ್ಮಾಕಂ ಮಹಾಭಾಗ ಬ್ರೂಹಿ ಸರ್ವಾರ್ಥವಿತ್ತಮ ||೨||

|| ಸೂತ ಉವಾಚ ||

ಸಾಧು ಸಾಧು ಮಹಾಪ್ರಾಜ್ಞಾಃ ಪೃಷ್ಟಮೇತಜ್ಜಗದ್ಧಿತಂ |
ವಕ್ಷ್ಯೇ ತಂ ಶ್ರದ್ಧಯೋಪೇತಾಃ ಶೃಣುಧ್ವಂ ಮುನಿಪುಂಗವಾಃ ||೩||

ನೈಮಿಷಾರಣ್ಯವಾಸಿಗಳಾದ ಮುನಿಗಳು ಮತ್ತೆ ಪ್ರಶ್ನೆಮಾಡಿದರು. ಓ ಮಹಾಮಹಿಮನೂ, ಪುಣ್ಯವಂತರಲ್ಲಿ ಶ್ರೇಷ್ಠನೂ, ಸರ್ವಜ್ಞನೂ, ಆದ ಸೂತನೇ, ಸಮಸ್ತ ದೇವತೆಗಳೂ, ಅಸುರರೂ, ಸಿದ್ಧರೂ, ಕಿನ್ನರರೂ, ಮುನಿಗಳೂ, ಯಕ್ಷರೂ, ಗಂಧರ್ವರೂ, ಇತರ ಸಮಸ್ತ ಪ್ರಾಣಿಗಳೂ ಕೂಡ ತಮಗೆ ಭುಕ್ತಿಯೂ, ಮುಕ್ತಿಯೂ ದೊರೆಯಬೇಕಾದರೆ ಯಾರನ್ನು ಪೂಜಿಸಬೇಕು ? ಆ ಪೂಜ್ಯನಾದ ದೇವನನ್ನು ನಮಗೆ ಹೇಳು. ಎಂದರು. ||೧-೨||

ಸೂತನು ಹೇಳಿದನು—ಮಹಾಬುದ್ಧಿಶಾಲಿಗಳಾದ ಮುನಿಗಳೇ, ನೀವು ವೈರಾಗ್ಯವುಳ್ಳವರಾಗಿ ಮೋಕ್ಷಾಪೇಕ್ಷಿಗಳಾದರೂ, ಕರುಣೆಯಿಂದ ಲೋಕದಲ್ಲಿ ಸುಖಾ

ಪುರಾ ವಿಷ್ಣುರ್ಜಗನ್ನಾಥಃ ಪುರಾಣಃ ಪುರುಷೋತ್ತಮಃ ।
ಮಾಯಯಾ ಮೋಹಿತಃ ಸಾಕ್ಷಾಚ್ಛಿವಸ್ಯ ಪರಮಾತ್ಮನಃ ॥೪॥

ಅಹಮೇವ ಜಗತ್ಕರ್ತಾ ಮಯ್ಯೇವೇದಂ ಸ್ಥಿತಂ ಜಗತ್ ।
ಮತ್ಸಮಶ್ಚಾಧಿಕಶ್ಚಾಪಿ ನಾಸ್ತಿ ಸರ್ವತ್ರ ಸರ್ವದಾ ॥೫॥

ಮಮ ಶಕ್ತಿವಿಲಾಸೋಽಯಂ ಜಗತ್ಸರ್ವಂ ಚರಾಚರಂ ।
ಅಹಮೇವ ಸಮಾರಾಧ್ಯಃ ಸರ್ವದಾ ಸರ್ವಜಂತುಭಿಃ ॥೬॥

ಇತ್ಯಹಂಭಾವಮಾಪನ್ನಃ ಸ್ವಾತ್ಮಭೂತಂ ಮಹೇಶ್ವರಂ ।
ಅವಿಜ್ಞಾಯಾಂಬಿಕಾನಾಥಮನಂತಾನಂತಚಿದ್ಘನಂ ॥೭॥

ಅತೀವಾಜ್ಞಾಪಯಾಮಾಸ ಬ್ರಹ್ಮಾದೀನಖಿಲಾನ್ ಹರಿಃ ।
ಅಥ ದೇವೋ ಮಹಾದೇವಃ ಸರ್ವಾತ್ಮಾ ಸರ್ವಭಾಸಕಃ ॥೮॥
ತಸ್ಯ ಶಕ್ತಿಂ ಸಮಾಹೃತ್ಯ ಮೋಹಯಾಮಾಸ ಶಂಕರಃ ।

ಪೇಕ್ಷೆಯುಳ್ಳವರ ಹಿತಕ್ಕಾಗಿ ಈ ಪ್ರಶ್ನೆಯನ್ನು ಮಾಡಿರುವಿರಿ. ಇದು ಅತ್ಯಂತ ಶ್ಲಾಘ್ಯವಾದುದು. ಆ ವಿಚಾರವನ್ನು ಹೇಳುವೆನು. ಆಸಕ್ತಿಯಿಂದ ಕೇಳಿರಿ. ||೩||

ಹಿಂದೆ ಒಂದಾನೊಂದು ಕಾಲದಲ್ಲಿ ಲೋಕಕ್ಕೆಲ್ಲಕ್ಕೂ ಒಡೆಯನೂ ಪುರುಷರಲ್ಲಿ ಶ್ರೇಷ್ಠನೂ ಅನಾದಿಯಾದವನೂ ಆದ ವಿಷ್ಣುವು ಸಾಕ್ಷಾತ್ಪರಮಾತ್ಮನಾದ ಶಿವನ ಮಾಯೆಯಿಂದ ಮೋಹಿತನಾದನು. ||೪||

ಹರಿಯು ನಾನೇ ಪ್ರಪಂಚವನ್ನು ಸೃಷ್ಟಿಸಿದವನು. ನನ್ನಲ್ಲಿಯೇ ಈ ಪ್ರಪಂಚವಿರುವುದು. ಎಲ್ಲಿಯೂ, ಯಾವಾಗಲೂ, ನನಗೆ ಸಮಾನರಾಗಲೀ, ಹೆಚ್ಚಿನವರಾಗಲೀ ಇಲ್ಲ. ಈ ಚರಾಚರಪ್ರಪಂಚವೆಲ್ಲವೂ ನನ್ನ ಲೀಲೆಯಾಗಿರುವುದು. ಯಾವಾಗಲೂ ಸಮಸ್ತ ಪ್ರಾಣಿಗಳೂ ನನ್ನನ್ನೇ ಪೂಜಿಸಬೇಕು. ಹೀಗೆಂದು ಅಹಂಕಾರವನ್ನು ಹೊಂದಿ ಅಂಬಿಕಾಪತಿಯೂ, ಜ್ಞಾನಾನಂದೈಕರಸವುಳ್ಳವನೂ ತನ್ನ ಆತ್ಮಸ್ವರೂಪನೂ ಆದ ಮಹೇಶ್ವರನನ್ನು ತಿಳಿಯದೆ ಬ್ರಹ್ಮನೇ ಮುಂತಾದ ದೇವತೆಗಳೆಲ್ಲರನ್ನೂ ವಿಶೇಷವಾದ ತನ್ನ ಅಪ್ಪಣೆಗೆ ಗುರಿಮಾಡಿದನು. ||೫-೬-೭||

ಆಮೇಲೆ ಸರ್ವರಿಗೂ ಆತ್ಮಸ್ವರೂಪನೂ ಸರ್ವವನ್ನೂ ಪ್ರಕಾಶಪಡಿಸತಕ್ಕವನೂ, ಆದ ಮಹಾದೇವನು ಅವನ ಶಕ್ತಿಯನ್ನು ಉಪಸಂಹರಿಸಿ ವಿವೇಕವಿಲ್ಲದವನನ್ನಾಗಿ ಮಾಡಿದನು. ||೮||

ತತಸ್ತತ್ಪ್ರಮುಖಾಃ ಸರ್ವೇ ಬ್ರಹ್ಮಾದ್ಯಾಃ ಪಶವೋ ಭೃಶಂ ॥೯॥

ಮೋಹಿತಾ ಮಾಯಯಾ ಶಂಭೋರ್ವಿವಶಾಶ್ಚ ವಿಶೇಷತಃ ।
ಏತಸ್ಮಿನ್ನಂತರೇ ಶ್ರೀಮಾನ್ನಂದೀ ಶಂಕರವಲ್ಲಭಃ ॥೧೦॥

ಸರ್ವವಿಜ್ಞಾನರತ್ನಾನಾಮಾಕರಃ ಕರುಣಾಲಯಃ ।
ಸಮಾಗತ್ಯ ಹರಿಬ್ರಹ್ಮಪ್ರಮುಖಾನಮರಾಧಿಪಾನ್ ॥೧೧॥

ಬೋಧಯಾಮಾಸ ಸರ್ವಜ್ಞಃ ಪರಂ ಭಾವಂ ಶಿವಸ್ಯ ತು ।

॥ ನಂದಿಕೇಶ್ವರ ಉವಾಚ ॥

ವಿಷ್ಣೋ ವಿಶ್ವಜಗನ್ನಾಥಃ ಶಂಕರಃ ಪರಮೇಶ್ವರಃ ॥೧೨॥

ಸರ್ವಸಾಕ್ಷೀ ಮಹಾನಂದಃ ಸರ್ವಾತ್ಮತ್ವೇನ ಸಂಸ್ಥಿತಃ ।
ಸ ಏವ ಸರ್ವಜಂತೂನಾಮಾತ್ಮಾ ಸರ್ವಾವಭಾಸಕಃ ॥೧೩॥

ಬಳಿಕ ಹರಿಯೇ ಮೊದಲಾದ ಬ್ರಹ್ಮಾದಿಪಶುಗಳೆಲ್ಲರೂ, ಶಿವನ ಮಾಯೆಯಿಂದ ಮೋಹಿತರಾಗಿ ವಿಶೇಷವಾಗಿ ಭ್ರಾಂತರಾದರು. ॥೯॥

ಈ ಸಮಯಕ್ಕೆ ಸರಿಯಾಗಿ ಶಿವನಿಗೆ ಅತ್ಯಂತ ಪ್ರೀತಿಪಾತ್ರನಾದ ಸಮಸ್ತ ವಿಜ್ಞಾನವೆಂಬ ರತ್ನಗಳಿಗೆ ಗಣಿಯೂ, ಕರುಣೆಗೆ ಮನೆಯೂ, ಸರ್ವಜ್ಞನೂ ಆದ ನಂದೀಶ್ವರನು ಬಂದು ಹರಿ ಬ್ರಹ್ಮನೇ ಮುಂತಾದ ದೇವತೆಗಳಿಗೆ ಶಿವನ ಪರಮಾತ್ಮ ಸ್ವರೂಪವನ್ನು ಬೋಧಿಸಿದನು. ॥೧೦-೧೧॥

ನಂದೀಕೇಶ್ವರನು ಹೇಳಿದನು—ಎಲೈ ವಿಷ್ಣುವೇ, ಶಿವನು ಸಮಸ್ತಜಗತ್ತಿಗೂ ಭೋಗಮೋಕ್ಷಗಳನ್ನು ಕೊಡತಕ್ಕವನಾದುದರಿಂದ ಶಂಕರನು ಒಡೆಯನು, ಆಜ್ಞಾಸಾಮರ್ಥ್ಯವಿರುವುದರಿಂದ ಪರಮೇಶ್ವರನು, ಸರ್ವಜ್ಞನಾದುದರಿಂದ ಸರ್ವಸಾಕ್ಷಿಯು. ನಿತ್ಯತೃಪ್ತನಾದುದರಿಂದರಿಂದ ಮಹಾನಂದಸ್ವರೂಪನು. ತನ್ನಲ್ಲಿ ಅಧ್ಯಸ್ತವಾದ ಸಮಸ್ತ ವಸ್ತುಗಳಿಗೂ ಸತ್ವವೆಂಬ ಜ್ಞಾನವನ್ನು ಕೊಡತಕ್ಕವನಾಗಿ ಸರ್ವಾತ್ಮದಿಂದಿರುವವನು. ಸಮಸ್ತಪ್ರಾಣಿಗಳಿಗೂ ಆತ್ಮಸ್ವರೂಪನಾಗಿ ಸಮಸ್ತವನ್ನು ಪ್ರಕಾಶಪಡಿಸತಕ್ಕವನೂ ಅವನೇ. ॥೧೨-೧೩॥

ಅಸ್ಯ ಪ್ರಸಾದಲೇಶಸ್ಯ ಲವಲೇಶಲವೇನ ತು ।
ಇದಂ ವಿಷ್ಣುಪದಂ ಲಬ್ಧಂ ತ್ವಯಾ ನಾನ್ಯೇನ ಹೇತುನಾ ॥೧೪॥

ಅನ್ಯೇಷಾಮಪಿ ಸರ್ವೇಷಾಂ ಪದಮಸ್ಯ ಪ್ರಸಾದತಃ ।
ಅನೇನೇದಂ ಜಗತ್ಸರ್ವಂ ವಿನಾ ನ ಭವತಿ ಸ್ವಯಂ ॥೧೫॥

ಅಯಂ ಧಾತಾ ವಿಧಾತಾ ಚ ಸರ್ವದಾ ಸರ್ವವಸ್ತುನಾಂ ।
ಯಥಾ ವೈಶ್ವಾನರೇಣೇದ್ಧಮಯೋ ದಹತಿ ಭಾತಿ ಚ ॥೧೬॥

ತಥಾಽನೇನ ಭವತ್ಯೇತಜ್ಜಗತ್ಸರ್ವಂ ವಿಭಾತಿ ಚ ।
ಅಸ್ಯಾನಂದಸ್ಯ ಭೂತಾನಿ ಲೇಶಮನ್ಯಾನಿ ಸರ್ವದಾ ॥೧೭॥

ಲಬ್ಧ್ವಾ ಸಂತೋಷಮಾಪನ್ನಾನ್ಯತೀವ ಬ್ರಹ್ಮವಿತ್ತಮಾಃ ।
ಅಸ್ಯೈವಾಜ್ಞಾಲವಾಕೃಷ್ಟಂ ಜಗನ್ನಿತ್ಯಂ ಪ್ರವರ್ತತೇ ॥೧೮॥

ಅವಿಜ್ಞಾಯೈನಮಾತ್ಮಾನಂ ಭವಾನತ್ಯಂತಮೋಹಿತಃ ।
ಅಹಂಕಾರಾಭಿಭೂತಶ್ಚ ಭವತಾ ಮೋಹಿತಂ ಜಗತ್ ॥೧೯॥

ಈ ಶಿವನ ಅನುಗ್ರಹದ ಅತ್ಯಂತ ಸೂಕ್ಷ್ಮಭಾಗದಿಂದ ಈ ವಿಷ್ಣುಪದವಿಯು ನಿನಗೆ ಸಿಕ್ಕಿರುವುದು. ಇತರರೆಲ್ಲರಿಗೂ ಈ ಶಿವನ ಅನುಗ್ರಹದಿಂದಲೇ ಅವರವರ ಪದವಿಯು ದೊರೆತಿರುವುದು. ಈ ಜಗತ್ತೆಲ್ಲವೂ ಈ ಶಿವನಿಲ್ಲದೆ ಇರುವುದಿಲ್ಲ. ||೧೪-೧೫||

ಈ ಶಿವನೇ ಸೃಷ್ಟಿಕರ್ತನು ಪೋಷಕನು. ಬೆಂಕಿಯಲ್ಲಿ ಕಾಯಿಸಿದ ಕಬ್ಬಿಣದಲ್ಲಿ ಸುಡುವುದು, ಪ್ರಕಾಶಿಸುವುದು, ಹೇಗೆ ಬೆಂಕಿಯ ಮಹಿಮೆಯೋ, ಹಾಗೆ ಸಮಸ್ತ ವಸ್ತುಗಳೂ ಇರುವುದು ಪ್ರಕಾಶಿಸುವುದು ಈ ಎರಡೂ ಶಿವನ ಮಹಿಮೆಯಾಗಿರುವುದು. ||೧೬||

ಈ ಶಿವನ ಆನಂದದ ಅತಿಸೂಕ್ಷ್ಮವಾದ ಭಾಗವನ್ನು ಪಡೆದು ಇತರ ಜೀವರುಗಳು ಸಂತೋಷವನ್ನು ಹೊಂದುವರು. ಇವನ ಸೂಕ್ಷ್ಮವಾದ ಅಪ್ಪಣೆಗೆ ಅಧೀನವಾಗಿ ಪ್ರಪಂಚವು ತನ್ನ ಕಾರ್ಯವನ್ನು ಮಾಡುತ್ತಿರುವುದು. ||೧೭-೧೮||

ಈ ಆತ್ಮನನ್ನು ತಿಳಿಯದೆ ನೀನು ಅತ್ಯಂತ ಅಜ್ಞಾನವನ್ನು ಪಡೆದಿರುವೆ. ಅಹಂಕಾರವು ನಿನ್ನನ್ನು ನಿಕೃಷ್ಟಮಾಡಿರುವುದು. ಇಂತಹ ನಿನ್ನಿಂದ ಪ್ರಪಂಚವೂ

ಅತಸ್ತ್ವಂ ಭ್ರಾಂತಿಮುತ್ಸೃಜ್ಯ ಸ್ವಾತ್ಮಭೂತಂ ಮಹೇಶ್ವರಂ ।
ಆರಾಧಯಾದರೇಣೈವ ಸಹ ದೇವೈರುಮಾಪತಿಂ ॥೨೦॥

ಇತ್ಯುಕ್ತ್ವಾ ಮುನಯಃ ಶ್ರೀಮಾನ್ನಂದೀ ಶಂಕರವಲ್ಲಭಃ ।
ಅಗಮದ್ರಥಮಾರುಹ್ಯ ಶ್ರೀಮತ್ಕೈಲಾಸಪರ್ವತಂ ॥೨೧॥

ತತೋ ವಿಶ್ವಾಧಿಕಂ ರುದ್ರಂ ಮಹರ್ಷಿಂ ಸರ್ವಸಾಕ್ಷಿಣಂ ।
ಬ್ರಹ್ಮವಿಷ್ಣ್ವಾದಯೋ ದೇವಾಃ ಪೂಜಯಾಮಾಸುರಾದರಾತ್ ॥೨೨॥

ತಥಾ ಲಕ್ಷ್ಮ್ಯಾದಯೋ ದೇವ್ಯಸ್ತಥಾಽನ್ಯೇ ಸರ್ವಜಂತವಃ ।
ಪೂಜಯಾಮಾಸುರೀಶಾನಂ ಪುರುಷಂ ಕೃಷ್ಣಪಿಂಗಲಂ ॥೨೩॥

ಅಥೈಷಾಂ ಪುರತಃ ಶ್ರೀಮಾನಂಬಿಕಾಪತಿರೀಶ್ವರಃ ।
ಆವಿರ್ಬಭೂವ ಸರ್ವಜ್ಞಃ ಶಂಕರೋ ವೃಷವಾಹನಃ ॥೨೪॥

ಅಜ್ಞಾನವನ್ನು ಹೊಂದಿತು. ಆದುದರಿಂದ ನೀನು ಭ್ರಮೆಯನ್ನು ಬಿಟ್ಟು ನಿನಗೆ ಆತ್ಮಸ್ವರೂಪನಾದ ಉಮಾದೇವಿಯ ಪತಿಯಾದ ಮಹೇಶ್ವರನನ್ನು ದೇವತೆಗಳೊಡನೆ ಪ್ರೀತಿಯಿಂದ ಪೂಜಿಸು. ॥೧೯-೨೦॥

ಎಲೈ ಮುನಿಗಳೇ, ಕೇಳಿರಿ. ಶಂಕರನಿಗೆ ಪ್ರೀತಿಪಾತ್ರನಾದ ನಂದೀಶ್ವರನು ವಿಷ್ಣುವಿಗೆ ಹೀಗೆಂದು ಹೇಳಿ ಕೈಲಾಸಪರ್ವತಕ್ಕೆ ಹೊರಟು ಹೋದನು. ॥೨೧॥

ಆಮೇಲೆ ಬ್ರಹ್ಮವಿಷ್ಣು ಮುಂತಾದ ದೇವತೆಗಳು ಪ್ರಪಂಚಕ್ಕಿಂತ ಶ್ರೇಷ್ಠನೂ, ಸರ್ವಜ್ಞನೂ, ಸಮಸ್ತಕ್ಕೂ ಸಾಕ್ಷಿಸ್ವರೂಪನೂ, ಆದ ರುದ್ರನನ್ನು ಪ್ರೀತಿಯಿಂದ ಪೂಜಿಸಿದರು: ॥೨೨॥

ಲಕ್ಷ್ಮಿಯೇ ಮೊದಲಾದ ದೇವಿಯರೂ ಸಮಸ್ತಪ್ರಾಣಿಗಳೂ, ಕೃಷ್ಣಪಿಂಗಲ ನೆಂಬ ಹೆಸರುಳ್ಳ [ಕಂಠದಲ್ಲಿ ಕಪ್ಪು, ಹಣೆಯಲ್ಲಿ ಪಿಂಗಲವರ್ಣವೂ ಉಳ್ಳ] ಸರ್ವರ ಹೃದಯದಲ್ಲಿಯೂ ಇರುವ ಸಮಸ್ತಪ್ರಪಂಚಕ್ಕೂ ಈಶ್ವರನಾದ ಶಿವನನ್ನು ಭಕ್ತಿಯಿಂದ ಪೂಜಿಸಿದರು. ॥೨೩॥

ಆ ಮೇಲೆ ಇವರೆಲ್ಲರ ಎದುರಿಗೆ ಸರ್ವಜ್ಞನೂ, ಭಕ್ತರಿಗೆ ಸುಖವನ್ನು ಕೊಡತಕ್ಕವನೂ, ಉಮಾದೇವಿಯ ಪತಿಯೂ, ವೃಷಭವಾಹನನೂ ಆದ ಶಿವನು ಕಾಣಿಸಿಕೊಂಡನು. ॥೨೪॥

ದೃಷ್ಟ್ವಾ ತಂ ಬ್ರಹ್ಮನಿಷ್ಠಾಖ್ಯಾಃ ಪಶೂನಾಂ ಪತಿಮೀಶ್ವರಂ ।
ಬ್ರಹ್ಮವಿಷ್ಣ್ವಾದಯಃ ಸರ್ವೇ ಪ್ರಣಮ್ಯ ಭುವಿದಂಡವತ್ ॥೨೫॥

ಶಿರಸ್ಯಂಜಲಿಮಾಧಾಯ ಪ್ರಸನ್ನೇಂದ್ರಿಯಮಾನಸಾಃ ।
ಅಸ್ತುವನ್ಮುಕ್ತಿದಂ ಭಕ್ತ್ಯಾ ಭುಕ್ತಿದಂ ಭವಭೇಷಜಂ ॥೨೬॥

॥ ದೇವಾ ಊಚುಃ ॥

ನಮಸ್ತೇ ದೇವದೇವೇಶ ನಮಸ್ತೇ ಕರುಣಾಲಯ ।
ನಮಸ್ತೇ ಸರ್ವಜಂತೂನಾಂ ಭುಕ್ತಿಮುಕ್ತಿಫಲಪ್ರದ ॥೨೭॥

ನಮಸ್ತೇ ಸರ್ವಲೋಕಾನಾಂ ಸೃಷ್ಟಿಸ್ಥಿತ್ಯಂತಕಾರಣ ।
ನಮಸ್ತೇ ಭವಭೀತಾನಾಂ ಭವಭೀತಿವಿಮರ್ದನ ॥೨೮॥

ನಮಸ್ತೇ ವೇದವೇದಾಂತೈರರ್ಚನೀಯ ದ್ವಿಜೋತ್ತಮೈಃ ।
ನಮಸ್ತೇ ಶೂಲಹಸ್ತಾಯ ನಮಸ್ತೇ ವಹ್ನಿಪಾಣಯೇ ॥೨೯॥

ಆ ದೇವನನ್ನು ನೋಡಿ ಬ್ರಹ್ಮಜ್ಞಾನಿಗಳಲ್ಲಿ ಮುಖ್ಯರಾದ ಬ್ರಹ್ಮವಿಷ್ಣು ಮುಂತಾದ ದೇವತೆಗಳು ಭೂಮಿಯಲ್ಲಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ತಲೆಯಮೇಲೆ ಕೈ ಜೋಡಿಸಿಕೊಂಡು ಪರಿಶುದ್ಧವಾದ ಇಂದ್ರಿಯಗಳೂ ಮನಸ್ಸೂ ಉಳ್ಳವರಾಗಿ ಇಹಲೋಕಸುಖವನ್ನು ಕೊಡುವ ಸಂಸಾರವೆಂಬ ರೋಗಕ್ಕೆ ಔಷಧ ಸ್ವರೂಪನಾದ ಪಶುಪತಿಯೂ ಸರ್ವೇಶ್ವರನೂ ಆದ ಮೋಕ್ಷಸುಖವನ್ನುಂಟುಮಾಡುವ ಶಿವನನ್ನು ಭಕ್ತಿಯಿಂದ ಸ್ತೋತ್ರಮಾಡಿದರು. ॥೨೫-೨೬॥

ದೇವತೆಗಳು ಹೇಳಿದರು— ದೇವತೆಗಳಿಗೆಲ್ಲರಿಗೂ ದೇವನೇ, ಕರುಣೆಗೆ ಮನೆಯಾದವನೇ, ಸಮಸ್ತಪ್ರಾಣಿಗಳಿಗೂ ಭುಕ್ತಿಮುಕ್ತಿರೂಪವಾದ ಫಲವನ್ನು ಕೊಡತಕ್ಕವನೇ, ಸಮಸ್ತಲೋಕಗಳ ಸೃಷ್ಟಿಸ್ಥಿತಿಲಯಗಳನ್ನು ಮಾಡುವವನೇ, ಪುನರ್ಜನ್ಮರೂಪವಾದ ಸಂಸಾರಕ್ಕೆ ಭಯಪಟ್ಟವರ ಭಯವನ್ನು ನಾಶಮಾಡತಕ್ಕವನೇ, ನಿನಗೆ ನಮಸ್ಕಾರವು. ॥೨೭-೨೮॥

ಬ್ರಾಹ್ಮಣಶ್ರೇಷ್ಠರಿಂದ ವೇದಾಂತವಾಕ್ಯಗಳಿಂದ ಪರಮಾರ್ಥಸ್ವರೂಪವನ್ನು ತಿಳಿಯುವುದರಿಂದಲೂ, ವೇದಗಳಿಂದ ಸ್ತೋತ್ರ ಮತ್ತೂ ಯಜ್ಞಕರ್ಮಗಳನ್ನು ಮಾಡುವುದರಿಂದಲೂ, ಪೂಜೆಯನ್ನು ಪಡೆಯುವ, ಶೂಲಾಯುಧವನ್ನೂ ಅಗ್ನಿ

ನಮಸ್ತೇ ವಿಶ್ವನಾಥಾಯ ನಮಸ್ತೇ ವಿಶ್ವಯೋನಯೇ ।
ನಮಸ್ತೇ ನೀಲಕಂಠಾಯ ನಮಸ್ತೇ ಕೃತ್ತಿವಾಸಸೇ ॥೩೦॥

ನಮಸ್ತೇ ಸೋಮರೂಪಾಯ ನಮಸ್ತೇ ಸೂರ್ಯರೂಪಿಣೇ ।
ನಮಸ್ತೇ ವಹ್ನಿರೂಪಾಯ ನಮಸ್ತೇ ಜಲರೂಪಿಣೇ ॥೩೧॥

ನಮಸ್ತೇ ಭೂಮಿರೂಪಾಯ ನಮಸ್ತೇ ವಾಯುರೂಪಿಣೇ ।
ನಮಸ್ತೇ ವ್ಯೋಮರೂಪಾಯ ನಮಸ್ತೇ ಹ್ಯಾತ್ಮರೂಪಿಣೇ ॥೩೨॥

ನಮಸ್ತೇ ಸತ್ಯರೂಪಾಯ ನಮಸ್ತೇಽಸತ್ಯರೂಪಿಣೇ ।
ನಮಸ್ತೇ ಬೋಧರೂಪಾಯ ನಮಸ್ತೇಽಬೋಧರೂಪಿಣೇ ॥೩೩॥

ನಮಸ್ತೇ ಸುಖರೂಪಾಯ ನಮಸ್ತೇಽಸುಖರೂಪಿಣೇ ।
ನಮಸ್ತೇ ಪೂರ್ಣರೂಪಾಯ ನಮಸ್ತೇಽಪೂರ್ಣರೂಪಿಣೇ ॥೩೪॥

ನಮಸ್ತೇ ಬ್ರಹ್ಮರೂಪಾಯ ನಮಸ್ತೇಽಬ್ರಹ್ಮರೂಪಿಣೇ ।
ನಮಸ್ತೇ ಜೀವರೂಪಾಯ ನಮಸ್ತೇಽಜೀವರೂಪಿಣೇ ॥೩೫॥

ಯನ್ನೂ ಕೈಯಲ್ಲಿ ಧರಿಸಿರುವ, ಪ್ರಪಂಚಕ್ಕೆ ಕಾರಣನೂ ಅಧಿಪತಿಯೂ ಆದ ನೀಲ ಕಂಠನೂ, ಗಜಚರ್ಮವನ್ನು ವಸ್ತ್ರವಾಗಿ ಧರಿಸಿದವನೂ ಆದ ನಿನಗೆ ನಮಸ್ಕಾರ ಮಾಡುವೆನು. ॥೨೯-೩೦॥

ಚಂದ್ರ, ಸೂರ್ಯ, ಅಗ್ನಿ, ಜಲ, ಭೂಮಿ, ವಾಯು, ಆಕಾಶ, ಯಜಮಾನ, ಎಂಬ ಅಷ್ಟಮೂರ್ತಿಸ್ವರೂಪನಾದ ನಿನಗೆ ನಮಸ್ಕಾರವು. ॥೩೧-೩೨॥

ಭಾವಾಭಾವಪ್ರಪಂಚವು ಶಿವನಲ್ಲಿ ಅಜ್ಞಾನದಿಂದ ಕಲ್ಪಿತವಾಗಿ ತೋರುತ್ತಿರುವುದರಿಂದ, ಪರಮಾರ್ಥರೂಪದಲ್ಲಿ ಪರಮಾನಂದರೂಪನೂ, ಅನಂತನೂ, ವ್ಯಾವಹಾರಿಕರೂಪದಲ್ಲಿ ಪ್ರಪಂಚರೂಪನೂ, ಆದ ಶಿವನಿಗೆ ನಮಸ್ಕಾರವು. ॥೩೩-೩೪॥

ಪರಮಾತ್ಮನು ದೇಶ ಕಾಲ ವಸ್ತು ಇವುಗಳ ಅಳತೆಗೆ ಸಿಕ್ಕತಕ್ಕವನಲ್ಲವಾದುದರಿಂದ ಅವನನ್ನು ಅನಂತನೆಂದು ಹೇಳಿದೆ. ಭಾವಾಭಾವಗಳೆಲ್ಲವೂ, ಪರಮಾತ್ಮನಿ

ನಮಸ್ತೇ ವ್ಯಕ್ತರೂಪಾಯ ನಮಸ್ತೇಽವ್ಯಕ್ತರೂಪಿಣೇ ।
ನಮಸ್ತೇ ಶಬ್ದರೂಪಾಯ ನಮಸ್ತೇಽಶಬ್ದರೂಪಿಣೇ ॥೩೬॥

ನಮಸ್ತೇ ಸ್ಪರ್ಶರೂಪಾಯ ನಮಸ್ತೇಽಸ್ಪರ್ಶರೂಪಿಣೇ ।
ನಮಸ್ತೇ ರೂಪರೂಪಾಯ ನಮಸ್ತೇಽರೂಪರೂಪಿಣೇ ॥೩೭॥

ನಮಸ್ತೇ ರಸರೂಪಾಯ ನಮಸ್ತೇಽರಸರೂಪಿಣೇ ।
ನಮಸ್ತೇ ಗಂಧರೂಪಾಯ ನಮಸ್ತೇಽಗಂಧರೂಪಿಣೇ ॥೩೮॥

ನಮಸ್ತೇ ದೇಹರೂಪಾಯ ನಮಸ್ತೇಽದೇಹರೂಪಿಣೇ ।
ನಮಸ್ತೇ ಪ್ರಾಣರೂಪಾಯ ನಮಸ್ತೇಽಪ್ರಾಣರೂಪಿಣೇ ॥೩೯॥

ನಮಸ್ತೇ ಶ್ರೋತ್ರರೂಪಾಯ ನಮಸ್ತೇಽಶ್ರೋತ್ರರೂಪಿಣೇ ।
ನಮಸ್ತೇ ತ್ವಕ್ಸ್ವರೂಪಾಯ ನಮಸ್ತೇಽತ್ವಕ್ಸ್ವರೂಪಿಣೇ ॥೪೦॥

ನಮಸ್ತೇ ದೃಷ್ಟಿರೂಪಾಯ ನಮಸ್ತೇಽದೃಷ್ಟಿರೂಪಿಣೇ ।
ನಮಸ್ತೇ ರಸನಾರೂಪ ನಮಸ್ತೇಽರಸನಾತ್ಮನೇ ॥೪೧॥

ನಮಸ್ತೇ ಘ್ರಾಣರೂಪಾಯ ನಮಸ್ತೇಽಘ್ರಾಣರೂಪಿಣೇ ।
ನಮಸ್ತೇ ಪಾದರೂಪಾಯ ನಮಸ್ತೇಽಪಾದರೂಪಿಣೇ ॥೪೨॥

ನಮಸ್ತೇ ಪಾಣಿರೂಪಾಯ ನಮಸ್ತೇಽಪಾಣಿರೂಪಿಣೇ ।
ನಮಸ್ತೇ ವಾಕ್ಸ್ವರೂಪಾಯ ನಮಸ್ತೇಽವಾಕ್ಸ್ವರೂಪಿಣೇ ॥೪೩॥

ನಮಸ್ತೇ ಲಿಂಗರೂಪಾಯ ನಮಸ್ತೇಽಲಿಂಗರೂಪಿಣೇ ।
ನಮಸ್ತೇ ಪಾಯುರೂಪಾಯ ನಮಸ್ತೇಽಪಾಯುರೂಪಿಣೇ ॥೪೪॥

ಗಿಂತ ಬೇರೆಯಾದುದಲ್ಲವಾದುದರಿಂದ ಅನೇಕಭಾವಾಭಾವರೂಪಗಳಿಂದ ಸ್ತೋತ್ರ ಮಾಡಿರುವುದು. ॥೩೫-೩೬-೩೭-೩೮-೩೯-೪೦-೪೧-೪೨-೪೩-೪೪॥

ನಮಸ್ತೇ ಚಿತ್ತರೂಪಾಯ ನಮಸ್ತೇಽಚಿತ್ತರೂಪಿಣೇ ।
ನಮಸ್ತೇ ಮಾತೃರೂಪಾಯ ನಮಸ್ತೇಽಮಾತೃರೂಪಿಣೇ ॥೪೫॥

ನಮಸ್ತೇ ಮಾನರೂಪಾಯ ನಮಸ್ತೇಽಮಾನರೂಪಿಣೇ ।
ನಮಸ್ತೇ ಮೇಯರೂಪಾಯ ನಮಸ್ತೇಽಮೇಯರೂಪಿಣೇ ॥೪೬॥

ನಮಸ್ತೇ ಮಿತಿರೂಪಾಯ ನಮಸ್ತೇಽಮಿತಿರೂಪಿಣೇ ।
ನಮಸ್ತೇ ಸರ್ವರೂಪಾಯ ನಮಸ್ತೇಽಸರ್ವರೂಪಿಣೇ ॥೪೭॥

ರಕ್ಷ ರಕ್ಷ ಮಹಾದೇವ ಕ್ಷಮಸ್ವ ಕರುಣಾಕರ ।
ಭಕ್ತಚಿತ್ತಸಮಾಸೀನ ಬ್ರಹ್ಮವಿಷ್ಣುಶಿವಾತ್ಮಕ ॥೪೮॥

|| ಸೂತ ಉವಾಚ ||

ಇತಿ ಬ್ರಹ್ಮಾದಯಃ ಸ್ತುತ್ವಾ ಪ್ರಣಮ್ಯ ಭುವಿ ದಂಡವತ್ ।
ಭಕ್ತಿಪಾರಂಗತಾ ದೇವಾ ಬಭೂವುಃ ಪರಮೇಶ್ವರೇ ॥೪೯॥

ದೇವದೇವೋ ಮಹಾದೇವಃ ಸರ್ವಭೂತಹಿತೇ ರತಃ ।
ಅನುಗೃಹ್ಯಾವಶಾನ್ದೇವಾನಂಬಿಕಾಪತಿರೀಶ್ವರಃ ॥೫೦॥

ಚಿತ್ತ, ಅಳತೆಮಾಡುವವನು, ಅಳತೆಗೆ ಸಾಧನ, ವಿಷಯ, ಪ್ರಮಾಣ, ಮುಂತಾದ ಸಕಲ ಭಾವಾಭಾವರೂಪನಾಗಿ ತೋರುತ್ತಿರುವ ನಿನಗೆ ನಮಸ್ಕಾರವು. ||೪೫-೪೬-೪೭||

ನೀನು ದಯೆಗೆ ಮನೆಯಾದುದರಿಂದ ನಾನು ಮಾಡಿದ ಅಪರಾಧಗಳನ್ನು ಕ್ಷಮಿಸಿ ಕಾಪಾಡು. ಭಕ್ತರ ಮನಸ್ಸಿನಲ್ಲಿ ಯಾವಾಗಲೂ ನೆಲಸಿರುವೆ. ಬ್ರಹ್ಮವಿಷ್ಣು ಶಿವಸ್ವರೂಪನಾಗಿಯೂ ಇರುವೆ. ಇದಕ್ಕೆ ಗೀ. ೧೮.೬೧. ಈಶ್ವರಸ್ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ || ಸ ಬ್ರಹ್ಮಾ, ಸ ಶಿವಃ ಸ ಹರಿಃ ಕೈ.ಉ. ೮. ಪ್ರಮಾಣ ಗಳು. ||೪೮||

ಸೂತನು ಹೇಳಿದನು—ಹೀಗೆ ಬ್ರಹ್ಮಾದಿದೇವತೆಗಳು ಸ್ತೋತ್ರಮಾಡಿ ಭೂಮಿಯಲ್ಲಿ ದಂಡದಂತೆ ನಮಸ್ಕಾರಮಾಡಿ ಪರಮೇಶ್ವರನಲ್ಲಿ ಬೇರೇವಿಧವಾದ ಚಿತ್ತವೃತ್ತಿಯಿಲ್ಲದ ಏಕಾಗ್ರತೆಯ ಭಕ್ತಿಯನ್ನು ಪಡೆದರು. ||೪೯||

ಸಮಸ್ತಪ್ರಾಣಿಗಳಿಗೂ ಹಿತವನ್ನುಂಟುಮಾಡುವುದರಲ್ಲಿ ಆಸಕ್ತನಾದ ಅಂಬಿಕಾ ಪತಿಯೂ, ದೇವತೆಗಳಿಗೆಲ್ಲರಿಗೂ ದೇವನೂ ಮಹಾಮಹಿಮನೂ ಆದ ಶಿವನು ಭಕ್ತಿ

ಪ್ರನೃತ್ಯ ಪರಮಂ ಭಾವಂ ಸ್ವಕಂ ಸಮ್ಯಕ್ಪ್ರದರ್ಶಯನ್ ।
ಬ್ರಹ್ಮವಿಷ್ಣ್ವಾದಿಭಿಃ ಸಾಕಂ ಶ್ರೀಮದ್ವ್ಯಾಘ್ರಪುರಂ ಗತಃ ॥೫೧॥

ತತ್ರ ಸರ್ವೇ ಸುರಾ ವಿಪ್ರಾಃ ಶ್ರದ್ಧಯಾ ದ್ರಷ್ಟುಮಿಚ್ಛಯಾ ।
ಅವರ್ತಂತಾಖಿಲೇಶಸ್ಯ ನರ್ತನಂ ಭಕ್ತಿಮುಕ್ತಿದಂ ॥೫೨॥

ಭವಂತೋಽಪಿ ಮಹಾದೇವಪ್ರಸಾದಾಯ ಮುನೀಶ್ವರಾಃ ।
ಪೂಜಯಧ್ವಂ ಮಹಾಭಕ್ತ್ಯಾ ಮಹಾದೇವಂ ಘೃಣಾನಿಧಿಂ ॥೫೩॥

ಇತಿ ಶ್ರುತ್ವಾ ಮುನಿಶ್ರೇಷ್ಠಾ ನೈಮಿಷೀಯಾಸ್ತಪೋಧನಾಃ ।
ಪ್ರಣಮ್ಯ ದಂಡವದ್ಭೂಮೌ ಸೂತಮಾತ್ಮಹಿತಪ್ರದಂ ॥೫೪॥

ಜಜ್ಞಿರೇ ದೇವದೇವೋಽಸೌ ಶಂಕರಸ್ತ್ವಂಬಿಕಾಪತಿಃ ।
ಪೂಜನೀಯ ಇತಿ ಶ್ರೀಮಾನ್ ಸರ್ವದಾ ಸರ್ವಜಂತುಭಿಃ ॥೫೫॥

ಪಾರವಶ್ಯದಿಂದ ಕೂಡಿದ ದೇವತೆಗಳು ಜ್ಞಾನೋಪದೇಶಕ್ಕೆ ತಕ್ಕ ಅಧಿಕಾರಿಗಳೆಂದು ತಿಳಿದು ಅವರಿಗೆ ಪರತತ್ವಜ್ಞಾನವನ್ನು ಅನುಗ್ರಹಿಸಿ ತನ್ನ ಪರತತ್ವಸ್ವರೂಪನ್ನು ಅಭಿನಯದಿಂದ ಸ್ಪಷ್ಟಪಡಿಸುವುದಕ್ಕಾಗಿ, ಬ್ರಹ್ಮವಿಷ್ಣು ಮುಂತಾದವರೊಡನೆ ಸಂಪದ್ಯುಕ್ತವಾದ ವ್ಯಾಘ್ರಪುರವೆಂಬ ಪಟ್ಟಣಕ್ಕೆ ಹೋದನು. ॥೫೦-೫೧॥

ಎಲೈ ಮುನಿಗಳೇ, ಆ ವ್ಯಾಘ್ರಪುರದಲ್ಲಿ ಭೋಗಮೋಕ್ಷಫಲಗಳನ್ನು ಕೊಡತಕ್ಕ ಸರ್ವೇಶ್ವರನಾದ ಶಿವನ ನರ್ತನವನ್ನು ಆಸಕ್ತಿಯಿಂದ ನೋಡಲಪೇಕ್ಷೆಯುಳ್ಳವರಾಗಿ, ಸಮಸ್ತದೇವತೆಗಳೂ ಅಲ್ಲಿಯೇ ಇದ್ದರು. ॥೫೨॥

ಎಲೈ ಮುನಿಶ್ರೇಷ್ಠರೇ, ನೀವೂ ಕೂಡ ಮಹಾದೇವನ ಅನುಗ್ರಹಕ್ಕಾಗಿ ದಯಾನಿಧಿಯಾದ ಆ ಮಹಾದೇವನನ್ನು ವಿಶೇಷಭಕ್ತಿಯಿಂದ ಪೂಜಿಸಿರಿ. ॥೫೩॥

ಸೂತನು ಹೇಳಿದ ಶಿವನ ಮಹಿಮೆಯನ್ನು ಕೇಳಿ ನೈಮಿಷಾರಣ್ಯದಲ್ಲಿದ್ದ ತಪಸ್ವಿಗಳೆಲ್ಲರೂ, ತಮಗೆ ಹಿತವನ್ನುಂಟುಮಾಡಿದ ಸೂತನಿಗೆ ಭೂಮಿಯ ಮೇಲೆ ದಂಡದಂತೆ ನಮಸ್ಕರಿಸಿ, ಪಾರ್ವತೀಪತಿಯೂ, ದೇವದೇವನೂ, ಸಮಸ್ತ ಸಂಪದ್ಯುಕ್ತನೂ ಆದ ಶಿವನು ಯಾವಾಗಲೂ ಸಮಸ್ತಪ್ರಾಣಿಗಳಿಂದಲೂ ಪೂಜಾಯೋಗ್ಯನಾಗಿರುವನೆಂದು ತಿಳಿದುಕೊಂಡರು. ॥೫೪-೫೫॥

ತೇಷಾಂ ಶಿಷ್ಯಾಃ ಪ್ರಶಿಷ್ಯಾಶ್ಚ ತಥಾಽನ್ಯೇ ಸರ್ವಜಂತವಃ ।
ಮಹಾದೇವಂ ಸದಾ ಸರ್ವೈಃ ಪೂಜ್ಯ ಇತ್ಯೇವ ಜಜ್ಞಿರೇ ॥೫೬॥

ಇತಿ ಶ್ರೀಸ್ಕಂದಪುರಾಣೇ ಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ ನಂದೀಶ್ವರ ವಿಷ್ಣುಸಂವಾದೇ ಈಶ್ವರಪ್ರಸಾದನಂ ನಾಮ ತೃತೀಯೋಽಧ್ಯಾಯಃ ಸಮಾಪ್ತಃ

ಆ ಋಷಿಗಳ ಶಿಷ್ಯ, ಪ್ರಶಿಷ್ಯರೂ, ಮಿಕ್ಕ ಸಮಸ್ತಪ್ರಾಣಿಗಳೂ, ಮಹಾದೇವನು ಯಾವಾಗಲೂ ಎಲ್ಲರಿಂದಲೂ ಪೂಜಾಯೋಗ್ಯನಾಗಿರುವನೆಂದು ಖಂಡಿತವಾಗಿ ತಿಳಿದುಕೊಂಡರು. ॥೫೬॥

ಈ ಅಧ್ಯಾಯದಲ್ಲಿ ದೇವತೆಗಳು ಮಾಡಿದ ಶಿವಸ್ತೋತ್ರದಲ್ಲಿ ಪರಮೇಶ್ವರನನ್ನು ಸಗುಣ ನಿರ್ಗುಣ ರೂಪದಲ್ಲಿ, ಭಾವಾಭಾವರೂಪದಲ್ಲಿ, ಸ್ತುತಿಸಲಾಗಿದೆ. ಜೀವರಲ್ಲಿರುವ ಸ್ವಸ್ವರೂಪದ ಅಜ್ಞಾನದ ದಶೆಗೆ ವ್ಯಾವಹಾರಿಕ ಸ್ಥಿತಿ ಎಂದು ಹೆಸರು. ಈ ಅಜ್ಞಾನವೆಂಬ ಮಾಯೆಯು ತನ್ನಲ್ಲಿರುವ ಆವರಣಶಕ್ತಿಯಿಂದ ಜೀವರಿಗೂ ಪರಮಾತ್ಮನಿಗೂ ಸಚ್ಚಿದಾನಂದ ರೂಪದಲ್ಲಿ ಇರುವ ಅಭೇಧವನ್ನು ಮರೆಮಾಡುತ್ತದೆ. ಮತ್ತು ಅದು ತನ್ನ ವಿಕ್ಷೇಪಶಕ್ತಿಯಿಂದ ಈ ಪ್ರಪಂಚರೂಪದಲ್ಲಿ ತೋರುತ್ತಿರುತ್ತದೆ. ಆತ್ಮರೂಪದ ಜ್ಞಾನವು ವೇದಾಂತವಿಚಾರದಿಂದಲೂ, ಅನುಭವದಿಂದಲೂ, ಉಂಟಾದಮೇಲೆ, ಈ ಪಾರಮಾರ್ಥಿಕ ಸ್ಥಿತಿಯಲ್ಲಿ, ದೇಹ, ಇಂದ್ರಿಯ, ಪಂಚಭೂತಗಳು ಮುಂತಾದ ಪ್ರಪಂಚವು ಆತ್ಮನಿಗಿಂತ ಭಿನ್ನವಾಗಿರುವಂತೆ ತೋರುವುದಿಲ್ಲ. ಎಲ್ಲವನ್ನೂ ಆತ್ಮರೂಪದಲ್ಲೂ, ಆತ್ಮನಲ್ಲಿ ಎಲ್ಲವನ್ನೂ ತೋರುತ್ತಿರುವುದನ್ನು ಜ್ಞಾನಿಯಾದ ಜೀವನು ಕಾಣುತ್ತಾನೆ. ಇದಕ್ಕೆ ಅಧ್ಯಾರೋಪಅಪವಾದನ್ಯಾಯವೆಂದು ಹೆಸರಿದೆ. ಆದುದರಿಂದ ವ್ಯಾವಹಾರಿಕ ಮತ್ತು ಪಾರಮಾರ್ಥಿಕಗಳೆಂಬ ದೃಷ್ಟಿಭೇದದಿಂದ ವಿರೋಧವಿಲ್ಲವೆಂದು ತಿಳಿಯಬೇಕು.

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ ನಂದಿ ವಿಷ್ಣು ಸಂವಾದದಲ್ಲಿ ಶಿವನನ್ನು ಒಲಿಸಿಕೊಂಡ ಬಗೆ ಎಂಬ ಮೂರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

|| ಚತುರ್ಥೋಽಧ್ಯಾಯಃ ||

ನಾಲ್ಕನೆಯ ಅಧ್ಯಾಯವು

|| ನೈಮಿಷೀಯಾ ಊಚುಃ ||

ಭಗವನ್ದೇವದೇವಸ್ಯ ನೀಲಕಂಠಸ್ಯ ಶೂಲಿನಃ ।
ಬ್ರೂಹಿ ಪೂಜಾವಿಧಿಂ ವಿದ್ವನ್ ಕೃಪಯಾ ಭುಕ್ತಿಮುಕ್ತಿದಂ ||೧||

|| ಸೂತ ಉವಾಚ ||

ವಕ್ಷ್ಯೇ ಪೂಜಾವಿಧಿಂ ವಿಪ್ರಾಃ ಶೃಣುಧ್ವಂ ಭುಕ್ತಿಮುಕ್ತಿದಂ ।
ಶ್ರುತಿಸ್ಮೃತ್ಯುದಿತಂ ಕರ್ಮ ಕೃತ್ವಾ ಶ್ರದ್ಧಾಪುರಃಸರಂ ||೨||

ನೈಮಿಷಾರಣ್ಯವಾಸಿಗಳಾದ ಮುನಿಗಳು ಹೇಳಿದರು—ಮಹಾಮಹಿಮನಾದ ಸೂತನೇ, ನೀಲಕಂಠನೂ, ಶೂಲಾಯುಧಧಾರಿಯೂ, ದೇವದೇವನೂ ಆದ ಶಿವನ ಪೂಜೆಯು ಭೋಗಮೋಕ್ಷಫಲಗಳನ್ನು ಕೊಡತಕ್ಕುದು. ಆದುದರಿಂದ ಆ ಪೂಜಾ ವಿಧಿಯನ್ನು ವಿದ್ವಾಂಸನಾದ ನೀನು ನಮಗೆ ದಯೆಯಿಟ್ಟು ಹೇಳು. ||೧||

ಸೂತನು ಹೇಳಿದನು—ಎಲೈ ಬ್ರಾಹ್ಮಣರೇ, ಭೋಗಮೋಕ್ಷಗಳನ್ನು ಕೊಡುವ ಶಿವನ ಪೂಜಾವಿಧಾನವನ್ನು ಹೇಳುವೆನು ಕೇಳಿರಿ. ಶ್ರುತಿಸ್ಮೃತಿಗಳಲ್ಲಿ ಹೇಳಿರುವಂತೆ ಭಕ್ತಿಯಿಂದ ನಿತ್ಯಕರ್ಮಗಳನ್ನು ಮಾಡಿ ಭಸ್ಮಸ್ನಾನಾದಿಗಳಿಂದ ಶುದ್ಧನಾಗಿ, ಸಮವಾಗಿ, ಶುದ್ಧವಾಗಿ ಇರುವ ನೆಲವನ್ನು ಗೋಮಯದಿಂದ ಬಳಿದು ಮೌನವಾಗಿ ಉತ್ತರಾಭಿಮುಖವಾಗಿ, ಚಲಿಸದೆ ಕುಳಿತುಕೊಳ್ಳಬೇಕು. ಇಲ್ಲಿ ಶುದ್ಧಿಯ ವಿಷಯದಲ್ಲಿ ಸೋಮಶಂಭುವೆಂಬುವನು "ಇತ್ಥಮಾತ್ಮಾಶ್ರಯದ್ರವ್ಯಮಂತ್ರಲಿಂಗ

ಸ್ನಾತ್ವಾ ಶುದ್ಧೇ ಸಮೇ ದೇಶೇ ಗೋಮಯೇನೋಪಲೇಪಿತೇ ।
ಸಮಾಸೀನಃ ಸದಾ ಮೌನೀ ನಿಶ್ಚಲೋದಙ್ಮುಖಃ ಸುಖೀ ॥೩॥

ವಿಚಿತ್ರಮಾಸನಂ ತತ್ರ ನಿಧಾಯ ಬ್ರಹ್ಮವಿತ್ತಮಾಃ ।
ಆಗಸ್ತ್ಯೇನೈವ ಶಾಸ್ತ್ರೇಣ ಪ್ರೋಕ್ತಲಕ್ಷಣಲಕ್ಷಿತಂ ॥೪॥

ವಿಶುದ್ಧಿಷು । ಕೃತಾಸು ದೇವದೇವಸ್ಯ ಪೂಜನಂ ನಾನ್ಯಥಾ ಭವೇತ್ ॥ " ಎಂದು ಹೇಳಿರುವನು. " ಸದಾ " ಎಂಬ ಶಬ್ದಕ್ಕೆ ಪೂಜಾಕಾಲಪರ್ಯಂತವಾಗಿ ಮೌನವಾಗಿರಬೇಕೆಂದು ಅಭಿಪ್ರಾಯವು. ಉತ್ತರಾಭಿಮುಖವಾಗಿಯೇ ಕುಳಿತುಕೊಳ್ಳಲು ಕಾರಣವನ್ನು ಜ್ಞಾನರತ್ನಾಕರವೆಂಬ ಗ್ರಂಥದಲ್ಲಿ ಹೇಳಿರುವುದು—" ನ ಪ್ರಾಚ್ಯಾಮಗ್ರತಃ ಶಂಭೋರ್ನೋತ್ತರೇ ಯೋಷಿದಾಶ್ರಯೇ । ನ ಪ್ರತೀಚ್ಯಾಂ ಯತಃ ಪೃಷ್ಠಂ ತಸ್ಮಾದ್ದಕ್ಷಂ ಸಮಾಶ್ರಯೇತ್ ॥ " ಪೂರ್ವದಿಕ್ಕು ಶಿವನಿಗೆ ಎದುರಾದುದು. ಉತ್ತರದಿಕ್ಕಿನಲ್ಲಿ ಪಾರ್ವತಿಯು ಇರುವಳು. ಪಶ್ಚಿಮವು ಹಿಂಭಾಗವಾಯಿತು. ಆದುದರಿಂದ ದಕ್ಷಿಣಭಾಗದಲ್ಲಿಯೇ ಉತ್ತರಾಭಿಮುಖವಾಗಿ ಕುಳಿತುಕೊಳ್ಳಬೇಕು. ॥೨-೩॥

ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ಋಷಿಗಳೇ, ಕೇಳಿರಿ. ಲಿಂಗಪೂಜೆಗಾಗಿ ಸ್ಥಿರಲಿಂಗವಾದರೆ ಆಧಾರಶಕ್ತಿಮೊದಲಾಗಿ ಶಿವಾಸನಪರ್ಯಂತವಾಗಿ ಬಗೆಬಗೆಯ ಆಸನಗಳನ್ನು ಭಾವನೆಮಾಡಬೇಕು. ಚರಲಿಂಗವಾದರೆ ಸ್ನಾನಾರ್ಥವಾದ ಸ್ಥಿರವಾದ ಒಂದು ಪೀಠವನ್ನು ಇಟ್ಟು ಅದರಮೇಲೆ ಅಗಸ್ತ್ಯರೇ ಮುಂತಾದ ಮಹರ್ಷಿಗಳು ಹೇಳಿದ ಶಾಸ್ತ್ರಾನುಸಾರವಾಗಿ ಭಕ್ತಿಯಿಂದ ಒಂದು ಶಿವಲಿಂಗವನ್ನು ತಂದು ಇಡಬೇಕು. ಲಿಂಗಲಕ್ಷಣವಿಚಾರದಲ್ಲಿ ಸಿದ್ಧಿಯನ್ನು ಬಯಸುವವರು ಯಾವಾಗಲೂ ಸ್ಥಿರಲಿಂಗವನ್ನು ಪೂಜಿಸಬೇಕು. ಚರಲಿಂಗದಲ್ಲಿ ಶಿವಾರ್ಚನೆಯು ಭುಕ್ತಿಮುಕ್ತಿಗಳನ್ನು ಕೊಡತಕ್ಕುದು. ಮಂತ್ರದ್ರವ್ಯಕ್ರಿಯಾಗುಣಗಳಿಂದ ಪೂಜೆಯು ಸಂಪೂರ್ಣವಾಗದಿದ್ದರೂ, ಶಿವಲಿಂಗದಲ್ಲಿ ಮಾಡಿದ ಪೂಜೆಯನ್ನು ಸಂಪೂರ್ಣವಾದುದೆಂದು ಶಿವನು ಒಪ್ಪಿಕೊಳ್ಳುವನು. ಸಮಸ್ತಭೂತಗಳೂ, ಎಲ್ಲಿ ಲಯವನ್ನು ಹೊಂದುವುವೋ, ಎಲ್ಲಿಂದ ಮತ್ತೆ ಹೊರಬೀಳುವುವೋ, ಅದನ್ನು ಲಿಂಗವೆಂದು ಹೇಳುವರು. ಅಥವಾ ಪರಾಕಾಶಸ್ವರೂಪನಾದ ನಿಷ್ಕಲನಾದ ಶಿವನನ್ನು ಮನೋಭಾವದಿಂದ ವ್ಯಕ್ತ, ಅವ್ಯಕ್ತ, ವ್ಯಕ್ತಾವ್ಯಕ್ತ, ಎಂದು ಮೂರು ಬಗೆಯಾಗಿ ಯೋಗಿಗಳು ಚಿಂತಿಸುವುದರಿಂದ ಲಿಂಗವೆಂದು ಹೆಸರಾಗಿರುವುದು. ವ್ಯಕ್ತವೆಂಬುದು ಸಗುಣಸ್ವರೂಪವು. ಅವ್ಯಕ್ತವು ನಿರ್ಗುಣವು, ಜ್ಞಾನಜ್ಯೋತಿಸ್ವರೂಪವಾದುದು ವ್ಯಕ್ತಾವ್ಯಕ್ತವೆನಿಸುವುದು. ಸ್ಫಟಿಕಲಿಂಗವು ಕೆಂಪು, ಬಿಳುಪು, ಹಳದಿ

ಆದಾಯ ಶ್ರದ್ಧಯಾ ವಿಪ್ರಾಃ ಶಿವಲಿಂಗಂ ಸಮಾಹಿತಃ ।
ತತ್ರೈವಾವಾಹ್ಯ ದೇವೇಶಂ ಪ್ರಣವೇನ ಹೃದಿ ಸ್ಥಿತಂ ॥೫॥

ಅರ್ಘ್ಯಂ ದತ್ವಾ ಮುನಿಶ್ರೇಷ್ಠಾಃ ಪೂರ್ವೋಕ್ತೇನೈವ ಮಂತ್ರತಃ ।
ಪಾದ್ಯಮಾಚಮನಂ ಚೈವ ಪುನಃ ಪೂರ್ವೋಕ್ತಮಂತ್ರತಃ ॥೬॥

ಪುನಃ ಸ್ನಾಪ್ಯ ಮಹಾದೇವಮಾಪೋಹಿಷ್ಠಾದಿಭಿಸ್ತ್ರಿಭಿಃ ।
ತಥಾ ಪುರುಷಸೂಕ್ತೇನ ಶ್ರೀಮತ್ಪಂಚಾಕ್ಷರೇಣ ಚ ॥೭॥

ಪುನರಾಚಮನಂ ದತ್ವಾ ಪ್ರತಿಷ್ಠಾಪ್ಯಾಸನೇ ಹರಂ ।
ದತ್ವಾ ವಸ್ತ್ರಂ ಮುನಿಶ್ರೇಷ್ಠಾಃ ಪ್ರಣವೇನ ಸಮಾಹಿತಃ ॥೮॥

ಬಣ್ಣದಿಂದ ಕೂಡಿ, ಸೂರ್ಯ, ಚಂದ್ರ, ಅಗ್ನಿ ಸ್ವರೂಪವಾಗಿ ಮೂರು ಬಗೆಯಾಗಿರುವುದು. ಈ ಮೂರು ಬಗೆಯಾದ ಲಿಂಗಗಳಲ್ಲಿಯೂ, ನಡುವೆ ಕಪ್ಪುಕಾಂತಿಯಿದ್ದರೆ ಹಿಂದೆ ಹೇಳಿದ ಲಿಂಗಗಳಿಗಿಂತ ಗುಣದಲ್ಲಿ ಹದಿನೈದು ಪಾಲಿಗಿಂತ ಹೆಚ್ಚಾದುದಾಗಿ ಬಾಣಲಿಂಗವೆನಿಸುವುದು. ಮಿಕ್ಕ ಲಿಂಗಗಳೆಲ್ಲ ಕಲ್ಲಿನಿಂದಾದುವುಗಳು. ಬಾಣಲಿಂಗವನ್ನು ನದಿಯೊಳಗೆ ಹಾಕಿದರೂ, ಪ್ರಕಾಶಮಾನವಾಗಿ ಕಾಣುವುದು. ಬಾಣಲಿಂಗವೊಂದನ್ನು ಪ್ರತಿಷ್ಠೆಮಾಡಿದರೆ ರತ್ನಲಿಂಗವನ್ನು ಪ್ರತಿಷ್ಠೆಮಾಡಿದುದರ ಕೋಟಿಪಾಲು ಗುಣಾಧಿಕವಾಗುವುದು. ಬಾಣಲಿಂಗಕ್ಕಿಂತಲೂ ರಸಲಿಂಗವು ಕೋಟಿಪಾಲು ಹೆಚ್ಚಾದುದು. ಇದರಿಂದ ಅಣಿಮಾದಿ ಸಿದ್ಧಿಗಳು ಲಭಿಸುವುವು. ॥೪॥

ಮನಸ್ಸಿನಲ್ಲಿ ಧ್ಯಾನಿಸುತ್ತಿರುವ ಪರಮೇಶ್ವರನನ್ನು ಪೀಠದ ಮೇಲಿರುವ ಲಿಂಗದಲ್ಲಿ ಪ್ರಣವಮಂತ್ರದಿಂದ ಪೂಜಿಸಿ ಅದೇ ಮಂತ್ರದಿಂದ ಅರ್ಘ್ಯ ಪಾದ್ಯ ಆಚಮನೀಯಗಳನ್ನು ಸಮರ್ಪಿಸಬೇಕು. ॥೫-೬॥

ಮತ್ತೆ ಆ ಮಹಾದೇವನನ್ನು ಆಪೋಹಿಷ್ಠಾ ಎಂಬ ಮೂರು ಮಂತ್ರಗಳಿಂದಲೂ, ಪುರುಷಸೂಕ್ತದಿಂದಲೂ, ಪಂಚಾಕ್ಷರೀ ಮಂತ್ರದಿಂದಲೂ ಸ್ನಾನ ಮಾಡಿಸಬೇಕು. ॥೭॥

ಪುನಃ ಆಚಮನವನ್ನು ಸಮರ್ಪಿಸಿ ಪೀಠದ ಮೇಲೆ ಶಿವನನ್ನು ಕೂಡಿಸಿ ಪ್ರಣವಮಂತ್ರದಿಂದಲೇ ವಸ್ತ್ರ, ಉಪವೀತ, ಅಕ್ಷತೆ, ಆಭರಣಗಳು, ಶ್ರೀಗಂಧ,

ಉಪವೀತಂ ಪುನರ್ದತ್ವಾ ಭೂಷಣಾನಿ ಚ ಸಾದರಂ ।
ಗಂಧಂ ಪುಷ್ಪಂ ತಥಾ ಧೂಪಂ ದೀಪಂ ಚೈವಾದರೇಣ ಚ ॥೯॥

ಶ್ರೀಮತ್ಪಂಚಾಕ್ಷರೇಣೈವ ಪ್ರಣವೇನ ಯುತೇನ ಚ ।
ಹವಿರ್ನಿವೇದ್ಯ ದೇವಾಯ ಪಾನೀಯೇನ ಸಹಾದರಾತ್ ॥೧೦॥

ಪುನರಾಚಮನಂ ದತ್ವಾ ತಾಂಬೂಲಂ ಸೋಪದಂಶಕಂ ।
ಮಾಲ್ಯಂ ದತ್ವಾಽನುಲೇಪಂ ಚ ಪ್ರಣಮ್ಯ ಭುವಿ ದಂಡವತ್ ॥೧೧॥

ಲೌಕಿಕೈರ್ವೈದಿಕೈಃ ಸ್ತೋತ್ರೈಃ ಸ್ತುತ್ವಾ ಹೃದಿ ವಿಸರ್ಜಯೇತ್ ।
ಪ್ರಣವೇನ ಮಹಾದೇವಂ ಸರ್ವಜ್ಞಂ ಸರ್ವಕಾರಣಂ ॥೧೨॥

ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥಶ್ಚ ಸುವ್ರತಾಃ ।
ಏವಂ ದಿನೇ ದಿನೇ ದೇವಂ ಪೂಜಯೇದಂಬಿಕಾಪತಿಂ ॥೧೩॥

ಪುಷ್ಪ, ಧೂಪ ದೀಪಗಳನ್ನು ಪ್ರೀತಿಯಿಂದ ಸಮರ್ಪಿಸಿ ಪ್ರಣವಸಹಿತವಾದ ಪಂಚಾಕ್ಷರೀ ಮಂತ್ರದಿಂದ ಗಂಗೋದಕದೊಡನೆ ಹವಿಸ್ಸನ್ನು ನಿವೇದನಮಾಡಬೇಕು. ||೮-೯-೧೦||

ಮತ್ತೆ ಆಚಮನವನ್ನು ಸಮರ್ಪಿಸಿ, ತಾಂಬೂಲವನ್ನೂ, ಹೂವನ್ನೂ, ಗಂಧವನ್ನೂ ಸಮರ್ಪಿಸಿ ಭೂಮಿಯಮೇಲೆ ಸಾಷ್ಟಾಂಗನಮಸ್ಕಾರ ಮಾಡಿದ ಬಳಿಕ ವೇದೋಕ್ತವಾದ ಮತ್ತೂ ಲೌಕಿಕವಾದ ಸ್ತೋತ್ರಗಳಿಂದ ಹೊಗಳಿ, ಸರ್ವಜ್ಞನೂ, ಸಮಸ್ತಕ್ಕೂ ಕಾರಣನೂ ಆದ ಆ ಮಹಾದೇವನನ್ನು ಪ್ರಣವಮಂತ್ರದಿಂದಲೇ ತನ್ನ ಹೃದಯಾಕಾಶದಲ್ಲಿ ವಿಸರ್ಜಿಸಬೇಕು. ಅಂದರೆ ಮನಸ್ಸಿನಲ್ಲಿ ಶಿವನನ್ನು ಅನುಸಂಧಾನ ಮಾಡಬೇಕು. "ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ । ಭ್ರಾಮಯನ್ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥" ಸ ಬ್ರಹ್ಮಾ ಸ ಶಿವಃ ಸ ಹರಿಃ ಸೇಂದ್ರಃ ಸೋಽಕ್ಷರಃ ಪರಮಃ ಸ್ವರಾಟ್" ಇತ್ಯಾದಿ ವಾಕ್ಯಗಳಿಂದ ಹೃದಯಾಕಾಶವು ಶಿವನಿಗೇ ಗೊತ್ತಾದ ಸ್ಥಾನವೆಂದು ಗೊತ್ತಾಗುವುದು. ಸಂಗ್ರಹವಾಗಿ ಶಿವಪೂಜಾವಿಧಾನವು ಹೇಳಲ್ಪಟ್ಟಿರುವುದು. ಇಷ್ಟಾದರೂ ಇದು ಸಂಪೂರ್ಣವಾದ ಶಿವಪೂಜೆಯಾಗಿರುವುದು. ||೧೧-೧೨||

ಎಲೈ ತಪಸ್ವಿಗಳೇ, ಬ್ರಹ್ಮಚಾರಿಗಳೂ, ಗೃಹಸ್ಥಸ್ಥರೂ, ವಾನಪ್ರಸ್ಥರೂ ಈ ರೀತಿಯಾಗಿ ಅಂಬಿಕಾಪತಿಯಾದ ಪರಮೇಶ್ವರನನ್ನು ಪ್ರತಿದಿನವೂ ಪೂಜಿಸಬೇಕು. ||೧೩||

ಸನ್ಯಾಸೀ ದೇವದೇವೇಶಂ ಪ್ರಣವೇನೈವ ಪೂಜಯೇತ್ ।
ನಮೋಽನ್ತೇನ ಶಿವೇನೈವ ಸ್ತ್ರೀಣಾಂ ಪೂಜಾ ವಿಧೀಯತೇ ॥೧೪॥

ವಿರಕ್ತಾನಾಂ ಚ ಶೂದ್ರಾಣಾಮೇವಂ ಪೂಜಾ ಪ್ರಕೀರ್ತಿತಾ ।
ಅನ್ಯೇಷಾಮಪಿ ಸರ್ವೇಷಾಂ ನರಾಣಾಂ ಮುನಿಪುಂಗವಾಃ ॥೧೫॥

ಪೂಜಾ ದೇವಾಲಯಂ ದೃಷ್ಟ್ವಾ ಪ್ರಣಾಮಸ್ತಸ್ಯ ಕೀರ್ತಿತಃ ।
ಏವಂ ಪೂಜಾ ಕೃತಾ ಯೇನ ಸಫಲಂ ತಸ್ಯ ಜೀವಿತಂ ॥೧೬॥

ಪುರಾ ಕಶ್ಚಿನ್ಮಹಾಪಾಪೀ ಪುಲ್ಕಸಃ ಪುರುಷಾಧಮಃ ॥೧೭॥
ಬ್ರಾಹ್ಮಣಾನಾಂ ಕುಲಂ ಹತ್ವಾ ಗವಾಂ ವೇದವಿದಾಂ ವರಾಃ ।

ಸನ್ಯಾಸಿಗಳು ಪ್ರಣವಮಂತ್ರ ಒಂದರಿಂದಲೇ ಶಿವನ ಪೂಜೆಯನ್ನು ಮಾಡಬೇಕು. ಸ್ತ್ರೀಯರೂ, ವಿರಕ್ತರಾದ ಶೂದ್ರರೂ, ಪ್ರಣವಮಂತ್ರವನ್ನುಚ್ಚರಿಸದೇ ಶಿವಾಯ ನಮಃ ಎಂಬ ಮಂತ್ರದಿಂದ ಪೂಜಿಸಬೇಕು. ॥೧೪॥

ಮಿಕ್ಕ ಸಂಕರಜಾತಿಯ ಜನರು ದೇವಾಲಯವನ್ನು ನೋಡಿ ನಮಸ್ಕಾರ ಮಾಡಿದ ಮಾತ್ರಕ್ಕೇ ಅವರಿಗೆ ಪೂಜಾಫಲವು ಪ್ರಾಪ್ತವಾಗುವುದು. ಈ ರೀತಿಯಲ್ಲಿ ಶಿವಪೂಜೆಯನ್ನು ಮಾಡಿದವರ ಹುಟ್ಟು ಸಫಲವಾಗುವುದು. ಬ್ರಾಹ್ಮಣರೂ, ಕ್ಷತ್ರಿಯರೂ, ಪ್ರಣವಬೀಜಾಕ್ಷರಸಹಿತವಾದ ಪಂಚಾಕ್ಷರೀಮಂತ್ರವನ್ನು ಉಚ್ಚರಿಸಬಹುದು. ಮಿಕ್ಕ ವರ್ಣದವರೂ, ಸ್ತ್ರೀಯರೂ, ಸಂಕರಜಾತಿಯವರೂ, ಪ್ರಣವವನ್ನು ಬಿಟ್ಟು "ನಮಃ ಶಿವಾಯ" ಎಂಬ ಪಂಚಾಕ್ಷರಮಂತ್ರವನ್ನು ಜಪಮಾಡಬೇಕು. ಈ ಮಂತ್ರದಿಂದಲೇ ಪೂಜೆಯನ್ನೂ ಮಾಡಬೇಕು. ಇದನ್ನು ಬಿಟ್ಟು ಬೇರೆ ವೇದಮಂತ್ರಗಳನ್ನು ಪೂಜೆಗೆ ಉಪಯೋಗಿಸಿದರೆ ನರಕಪ್ರಾಪ್ತಿಯಾಗುವುದು. ಎಂದು ಶೈವಪುರಾಣಗಳಲ್ಲಿ ಹೇಳಿರುವುದು. "ಪೂಜಯಾ ಭುಕ್ತಿಮಾಪ್ನೋತಿ ಪೂಜಯಾ ಮುಕ್ತಿಮಾಪ್ನುಯಾತ್" ಶಿವಪೂಜೆಯನ್ನು ಮಾಡಿದವರು ಭುಕ್ತಿಮುಕ್ತಿಗಳೆರಡನ್ನೂ ಪಡೆಯುವರು. ॥೧೫-೧೬॥

ಎಲೈ ಋಷಿಗಳೇ, ಈ ವಿಷಯದಲ್ಲಿ ಒಂದು ಕಥೆಯನ್ನು ಹೇಳುವೆನು. ಕೇಳಿ. ಬಹುಕಾಲದ ಹಿಂದೆ ದೊಡ್ಡ ಪಾಪಕಾರ್ಯಗಳನ್ನು ಮಾಡಿದವನೂ, ನೀಚನೂ ಆದ ಪುಲ್ಕಸನೊಬ್ಬನು (ಕ್ಷತ್ರಿಯ ಸ್ತ್ರೀಯಲ್ಲಿ ಶೂದ್ರನಿಂದ ಹುಟ್ಟಿದವನು ಪುಲ್ಕಸನು

ಅಪಹೃತ್ಯ ಧನಂ ಮಾರ್ಗೇ ಪ್ರಾಣಿಹಿಂಸಾಪುರಃಸರಂ ॥೧೮॥

ಸ್ವಚ್ಛಂದಂ ನಿರ್ಘೃಣೋ ವಿಪ್ರಾಶ್ಚಚಾರ ಪೃಥಿವೀತಲೇ ।
ತಸ್ಯ ಮಿತ್ರಮಭೂತ್ಕಶ್ಚಿದ್ಬ್ರಾಹ್ಮಣೋ ಗಣಿಕಾಪತಿಃ ॥೧೯॥

ತಸ್ಮೈ ದತ್ತಂ ಧನಂ ಕಿಂಚಿತ್ಪುಲ್ಕಸೇನ ದ್ವಿಜೋತ್ತಮಾಃ ।
ಸ ಪುನರ್ಬ್ರಾಹ್ಮಣಸ್ತುಷ್ಟೋ ಮತಿಂ ತಸ್ಮೈ ಪ್ರದತ್ತವಾನ್ ॥೨೦॥

॥ ಬ್ರಾಹ್ಮಣ ಉವಾಚ ॥

ಸುಬಂಧೋ ಮಮ ದುರ್ಬುದ್ಧೇ ತ್ವಯಾ ಪಾಪಾನಿ ನಿರ್ಘೃಣ ।
ಕೃತಾನಿ ಸರ್ವದಾ ಮೂಢ ತ್ವಂ ಹೋ ಕಿಂ ತೇ ಫಲಿಷ್ಯತಿ ॥೨೧॥

ಇತ್ಯೇವಂ ಬಹುಧಾ ವಿಪ್ರಃ ಪುಲ್ಕಸಂ ಪ್ರತ್ಯಭಾಷತ ।
ಸೋಽಪಿ ವಿಪ್ರವಚಃ ಶ್ರುತ್ವಾ ಬಹುಶಃ ಪಂಡಿತೋತ್ತಮಾಃ ॥೨೨॥
ಕಾಲೇನ ಮಹತಾ ದಾಂತಃ ಪುಲ್ಕಸಃ ಪುರುಷಾಧಮಃ ।

ಗುವನು. ಇವನು ಚಂಡಾಲಜಾತಿಗೆ ಸಮಾನನು.) ಅನೇಕ ಬ್ರಾಹ್ಮಣರನ್ನೂ, ಗೋವುಗಳನ್ನೂ, ಕೊಂದು ಹಿಂಸೆಮಾಡುತ್ತ, ದಾರಿಕಟ್ಟಿ ತಿರುಗುವವರ ಧನವನ್ನು ಅಪಹರಿಸುತ್ತ ದಯೆಯಿಲ್ಲದವನಾಗಿ ಭೂಮಿಯಲ್ಲಿ ತನ್ನ ಮನಬಂದೆಡೆಗೆ ಸಂಚರಿಸುತ್ತಿದ್ದನು. ॥೧೭-೧೮॥

ಆ ಪುಲ್ಕಸನಿಗೆ ಸೂಳೆಯನ್ನಿಟ್ಟುಕೊಂಡಿದ್ದ ಒಬ್ಬ ಬ್ರಾಹ್ಮಣನು ಸ್ನೇಹಿತನಾಗಿದ್ದನು. ಅವನು ಸ್ನೇಹಿತನಾದ ಆ ಬ್ರಾಹ್ಮಣನಿಗೆ ಸ್ವಲ್ಪಹಣವನ್ನು ಕೊಟ್ಟನು. ಇದರಿಂದ ಆ ಬ್ರಾಹ್ಮಣನು ಸಂತೋಷಪಟ್ಟು ಅವನಿಗೆ ಬುದ್ಧಿವಾದವನ್ನು ಹೇಳಿದನು. ॥೧೯-೨೦॥

ಬ್ರಾಹ್ಮಣನು ಹೇಳಿದನು—ಎಲೈ ಮಿತ್ರನೇ, ನೀನು ದಯಾಶೂನ್ಯನಾಗಿ ಅನೇಕ ಪಾಪಗಳನ್ನು ಯಾವಾಗಲೂ ಮಾಡುತ್ತಿರುವೆ. ಇದರಿಂದ ನಿನಗೇನು ಪ್ರಯೋಜನ? ವಿಚಾರಮಾಡು. ಎಂದು ಅನೇಕಬಾರಿ ಆ ಪುಲ್ಕಸನಿಗೆ ಹೇಳಿದನು. ॥೨೧॥

ಎಲೈ ವಿದ್ವಾಂಸರಾದ ಮುನಿಗಳೇ, ಕೇಳಿರಿ. ಆ ಪುಲ್ಕಸನಾದರೋ, ಅನೇಕ ಬಾರಿ ಹೇಳಿದ ಬ್ರಾಹ್ಮಣನ ಮಾತನ್ನು ಕೇಳಿ, ಬಹಳ ದಿನಗಳ ಮೇಲೆ ತಾನು

ಜನ್ಮಾಂತರಸಹಸ್ರೇಷು ಕೃತಪುಣ್ಯವಶೇನ ತು ॥೨೩॥
ಪ್ರಣಮ್ಯ ದಂಡವದ್ವಿಪ್ರಂ ಪಪ್ರಚ್ಛ ಬ್ರಹ್ಮವಿತ್ತಮಾಃ ।

॥ ಪುಲ್ಕಸ ಉವಾಚ ॥

ದೇವ ವಿಪ್ರ ಸುಬಂಧೋ ಮೇ ಮಯಾ ಸರ್ವತ್ರ ಸರ್ವದಾ ॥೨೪॥
ಮಹಾಘೋರಾಣಿ ಪಾಪಾನಿ ಕೃತಾನಿ ಮಮ ನಾಯಕ ।
ಕಿಂ ಕರೋಮ್ಯಹಮದ್ಯಾಸ್ಮಿನ್ ಲೋಕೇ ಮೂಢೋಽತಿನಿರ್ಘೃಣಃ॥೨೫॥
ತದ್ವದಾಮಿ ಭಯಾವಿಷ್ಟಂ ಮಾನಸಂ ಮಮ ಸಂತತಂ ।

॥ ಬ್ರಾಹ್ಮಣ ಉವಾಚ ॥

ಸಾಧು ಸಾಧು ತ್ವಯಾಽದ್ಯೋಕ್ತಂ ತವ ವಕ್ಷ್ಯೇ ಹಿತಂ ಶೃಣು ॥೨೬॥
ಪುಣ್ಯಕ್ಷೇತ್ರೇ ಮಹಾತೀರ್ಥೇ ಪುರಾಣೇ ವಸುಧಾತಲೇ ।
ಮುನಿಭಿಃ ಸಿದ್ಧಗಂಧರ್ವೈರಮರೈಶ್ಚ ಸುಸೇವಿತೇ ॥೨೭॥
ಶ್ರೀಮದ್ವ್ಯಾಘ್ರಪುರೇ ಯತ್ರ ಪ್ರನೃತ್ಯತ್ಯಂಬಿಕಾಪತಿಃ ।
ತತ್ರ ಭಕ್ತಿಪರೋ ಭೂತ್ವಾ ಸ್ನಾತ್ವಾ ಪ್ರಾತಃ ಸಮಾಹಿತಃ ॥೨೮॥

ಹಿಂದೆ ಸಾವಿರಾರು ಜನ್ಮಗಳಲ್ಲಿ ಮಾಡಿದ ಪುಣ್ಯಕರ್ಮಗಳ ಪರಿಪಾಕದಿಂದ ಆ ಬ್ರಾಹ್ಮಣನಿಗೆ ಸಾಷ್ಟಾಂಗನಮಸ್ಕಾರಮಾಡಿ ಪ್ರಶ್ನೆಮಾಡಿದನು. ॥೨೨-೨೩॥

ಪುಲ್ಕಸನು ಹೇಳಿದನು—ತೇಜಸ್ವಿಯಾದ ಬ್ರಾಹ್ಮಣನೇ, ನೀನು ನನ್ನ ಮಿತ್ರನೂ, ಬಂಧುಸಮಾನನೂ ಆಗಿರುವೆ. ನಾನು ಯಾವಾಗಲೂ, ಎಲ್ಲೆಡೆಯಲ್ಲಿಯೂ ಕ್ರೂರವಾದ ಅನೇಕ ಪಾಪಗಳನ್ನು ಮಾಡಿರುವೆನು. ಜ್ಞಾನವಿಲ್ಲದೆ ದಯಾಹೀನನಾಗಿ ಪಾಪಕಾರ್ಯಗಳನ್ನು ಮಾಡಿದ ನಾನು ಈಗ ಏನನ್ನು ಮಾಡಲಿ? ನನ್ನ ಮನಸ್ಸಿಗೆ ವಿಶೇಷವಾಗಿ ಭಯವುಂಟಾಗಿರುವುದು. ನೀನೇ ನನಗೆ ಸರಿಯಾದ ಮಾರ್ಗವನ್ನು ತೋರಿಸತಕ್ಕವನು. ಎಂದನು. ॥೨೪-೨೫॥

ಬ್ರಾಹ್ಮಣನು ಹೇಳಿದನು.—ಈಗಲಾದರೂ ನಿನಗೆ ವಿವೇಕವು ಬಂದುದು ಒಳ್ಳೆಯದಾಯಿತು! ನಿನಗೊಂದು ಹಿತವಾದ ಮಾತನ್ನು ಹೇಳುವೆನು. ಕೇಳು. ಭೂಮಿಯಲ್ಲಿ ಮುನಿಗಳೂ, ಸಿದ್ಧರೂ, ಗಂಧರ್ವರೂ, ದೇವತೆಗಳೂ, ಸೇವಿಸುತ್ತಿರುವ ಪುರಾತನವಾದ, ಮಹಾತೀರ್ಥದಿಂದ ಕೂಡಿದ, ಪುಣ್ಯಕ್ಷೇತ್ರವಾದ ವ್ಯಾಘ್ರಪುರದಲ್ಲಿ ಪಾರ್ವತೀಪತಿಯಾದ ಪರಮೇಶ್ವರನು ಸಂತೋಷದಿಂದಿರುವನು. ನೀನು ಅಲ್ಲಿಗೆ ಹೋಗಿ ಭಕ್ತಿಯಿಂದ ಪ್ರಾತಃಕಾಲದಲ್ಲಿ ಸ್ನಾನವನ್ನು ಮಾಡಿ ಏಕಾಗ್ರಚಿತ್ತದಿಂದ

ದೃಷ್ಟ್ವಾ(ಽ)ದಭ್ರಸಭಾಂ ದೂರೇ ಪ್ರಣಮ್ಯ ಭುವಿ ದಂಡವತ್ ।
ಯೋಗಿನಾಂ ಭೋಗಿನಾಂ ನೃಣಾಂ ದತ್ವಾ ಸರ್ವಸ್ವಮಾರ್ಜಿತಂ॥೨೯॥

ಸ್ಥಾನಸ್ಯಾಸ್ಯ ಭಯೇ ಜಾತೇ ರಕ್ಷಣಂ ಕುರು ಯತ್ನತಃ ।

॥ ಸೂತ ಉವಾಚ ॥

ಏವಂ ದ್ವಿಜೋತ್ತಮೇನೋಕ್ತಂ ಪುಲ್ಕಸಃ ಪುರುಷಾಧಮಃ ॥೩೦॥

ಶ್ರೀಮದ್ವ್ಯಾಘ್ರಪುರಂ ಪುಣ್ಯಂ ಗತಃ ಶ್ರದ್ಧಾಪುರಃಸರಂ ।
ಬ್ರಾಹ್ಮಣೋಽಪಿ ಸಹಾಽನೇನ ಶ್ರದ್ಧಯಾ ಮುನಿಪುಂಗವಾಃ ॥೩೧॥

ಪ್ರಾಪ್ತವಾನೇತದತ್ಯಂತಂ ಶ್ರದ್ಧಯಾ ಸ್ಥಾನಮುತ್ತಮಂ ।
ಪುಲ್ಕಸಃ ಶ್ರದ್ಧಯಾ ಸ್ನಾತ್ವಾ ಬ್ರಾಹ್ಮಣಾ ವೇದವಿತ್ತಮಾಃ ॥೩೨॥

ಯೋಗಿಭ್ಯಶ್ಚ ತಥಾಽನ್ಯೇಭ್ಯೋ ದತ್ವಾ ಸರ್ವಸ್ವಮಾರ್ಜಿತಂ ।
ಶ್ರೀಮದ್ದಭ್ರಸಭಾಂ ನಿತ್ಯಂ ಬ್ರಾಹ್ಮಣಾ ವೇದಪಾರಗಾಃ ॥೩೩॥

ದೂರೇ ದೃಷ್ಟ್ವಾ ನಮಸ್ಕೃತ್ವಾ ಪಂಚಕ್ರೋಶಾದ್ಬಹಿರ್ದ್ವಿಜಾಃ ।
ಉವಾಸ ಸುಚಿರಂ ಕಾಲಮೇವಂ ಕೃತ್ವಾ ದಿನೇ ದಿನೇ ॥೩೪॥

ದೂರದಲ್ಲಿ ಆ ಶಿವನ ಭಕ್ತರ ದೊಡ್ಡ ಗುಂಪನ್ನು ನೋಡಿ ಭೂಮಿಯಲ್ಲಿ ಸಾಷ್ಟಾಂಗ ನಮಸ್ಕರಿಸಿ ನೀನು ಸಂಪಾದಿಸಿದ ಧನವನ್ನೆಲ್ಲವನ್ನೂ ಯೋಗಿಗಳಿಗೂ, ಭೋಗಿಗಳಿಗೂ, ದಾನಮಾಡಿ ನಿನ್ನ ಭಯವನ್ನು ಕಳೆದುಕೊಂಡು ಪ್ರಯತ್ನಪೂರ್ವಕವಾಗಿ ನಿನ್ನ ಜೀವನವನ್ನು ಕಾಪಾಡು ಎಂದು ಹೇಳಿದನು. ||೨೬-೨೭-೨೮-೨೯||

ಸೂತಮಹರ್ಷಿಯು ಹೇಳಿದನು—ಎಲೈ ಬ್ರಾಹ್ಮಣಶ್ರೇಷ್ಠರೇ, ಕೇಳಿ ಈ ರೀತಿಯಲ್ಲಿ ಬ್ರಾಹ್ಮಣಶ್ರೇಷ್ಠನು ಹೇಳಿದ ಮಾತನ್ನು ಕೇಳಿ ಆ ನೀಚನಾದ ಪುಲ್ಕಸನು ಭಕ್ತಿಯಿಂದ ಪುಣ್ಯಕ್ಷೇತ್ರವಾದ ವ್ಯಾಘ್ರಪುರಕ್ಕೆ ಹೋದನು. ಬ್ರಾಹ್ಮಣನೂ ಕೂಡ ಅತ್ಯಂತ ಭಕ್ತಿಯಿಂದ, ಅವನ ಜೊತೆಯಲ್ಲಿಯೇ ಹೋದನು. ಆ ಪುಲ್ಕಸನು ಭಕ್ತಿಯಿಂದ ಸ್ನಾನಮಾಡಿ, ತಾನು ಸಂಪಾದಿಸಿದ ಧನವನ್ನು ಯೋಗಿಗಳಿಗೂ ಇತರರಿಗೂ, ದಾನಮಾಡುತ್ತ ದೂರದಲ್ಲಿಯೇ ಶಿವನ ಭಕ್ತರ ಸಭೆಯನ್ನು ನೋಡಿ ಪ್ರತಿದಿನವೂ ನಮಸ್ಕಾರ ಮಾಡುತ್ತ ಐದು ಕ್ರೋಶದಿಂದ ಹೊರಭಾಗದಲ್ಲಿ ವಾಸಮಾಡುತ್ತ ಬಹಳ ದಿನಗಳವರೆಗೆ ಅಲ್ಲಿಯೇ ವಾಸಮಾಡಿಕೊಂಡಿದ್ದನು. ||೩೦-೩೧-೩೨-೩೩-೩೪||

ಏವಂ ಚಿರಗತೇ ಕಾಲೇ ಪುಲ್ಕಸಃ ಪುಣ್ಯಗೌರವಾತ್ ।
ಸ್ಥಾನಸಂರಕ್ಷಣವ್ಯಾಜಾತ್ತತ್ರೈವ ಮರಣಂ ಗತಃ ॥೩೫॥

ಸ ಪುನರ್ಮರಣಾದೂರ್ಧ್ವಂ ಭುಕ್ತ್ವಾ ಭೋಗಾನನೇಕಶಃ ।
ಶ್ರೀಮದ್ವ್ಯಾಘ್ರಪುರೇಶಸ್ಯ ಪ್ರಸಾದಾದಂಬಿಕಾಪತೇಃ ॥೩೬॥

ಆವಾಪ ಪರಮಾಂ ಮುಕ್ತಿಮವಿಘ್ನೇನ ದ್ವಿಜೋತ್ತಮಾಃ ।
ಬ್ರಾಹ್ಮಣೋಽಪಿ ತಥೈವಾಸ್ಮಿಂಸ್ಥಾನೇ ಪ್ರಾತಃ ಸಮಾಹಿತಃ ॥೩೭॥

ಸ್ನಾನಂ ಕೃತ್ವಾ ಮಹಾದೇವಮಂಬಿಕಾಪತಿಮೀಶ್ವರಂ ।
ಪೂಜಯಾಮಾಸ ಪೂರ್ವೋಕ್ತಪ್ರಕಾರೇಣ ಮಹೇಶ್ವರಂ ॥೩೮॥

ತಸ್ಯಾಽಪಿ ಬ್ರಹ್ಮವಿಚ್ಛ್ರೇಷ್ಠಾಃ ಪ್ರದದೌ ಮುಕ್ತಿಮೀಶ್ವರಃ ।
ಬಹವೋ ವೇದವಿಚ್ಛ್ರೇಷ್ಠಾಃ ಪೂರ್ವೋಕ್ತೇನೈವ ವರ್ತ್ಮನಾ ।
ಶಿವಲಿಂಗಾರ್ಚನಂ ಕೃತ್ವಾ ವಿಮುಕ್ತಾ ಭವಬಂಧನಾತ್ ॥೪೦॥

ಹೀಗೆಯೇ ಬಹಳ ಕಾಲವು ಕಳೆದುದರಿಂದ ಪುಲ್ಕಸನಿಗೆ ಪುಣ್ಯವು ಹೆಚ್ಚಿ ತನ್ನ ಆ ಸ್ಥಳವನ್ನು ಕಾಪಾಡಿಕೊಳ್ಳುವ ಒಂದು ನೆಪದಿಂದ ಆ ಕ್ಷೇತ್ರದಲ್ಲಿಯೇ ಅವನಿಗೆ ಮರಣವು ಪ್ರಾಪ್ತಿಯಾಯಿತು. ||೩೫||

ಆ ಪುಲ್ಕಸನು ಮರಣಹೊಂದಿದಮೇಲೆ ಸ್ವರ್ಗಲೋಕದಲ್ಲಿ ಅನೇಕ ಸುಖಗಳನ್ನು ಅನುಭವಿಸಿ ಅಂಬಿಕಾಪತಿಯಾದ ವ್ಯಾಘ್ರಪುರೇಶ್ವರನ ಅನುಗ್ರಹದಿಂದ ನಿರ್ವಿಘ್ನವಾಗಿ ಮುಕ್ತಿಯನ್ನು ಪಡೆದನು. ||೩೬||

ವೇಶ್ಯಾಪತಿಯಾದರೂ, ಸಭಾದರ್ಶನದಿಂದ ಪ್ರಾಯಶ್ಚಿತ್ತವಾದಂತಾಗಲು ಬ್ರಾಹ್ಮಣನೂ ಕೂಡ ಆ ವ್ಯಾಘ್ರಪುರಕ್ಷೇತ್ರದಲ್ಲಿ ಏಕಾಗ್ರಚಿತ್ತದಿಂದ ಪ್ರಾತಃಕಾಲದಲ್ಲಿ ಸ್ನಾನವನ್ನು ಮಾಡಿ ಅಂಬಿಕಾಪತಿಯಾದ ಮಹಾದೇವನನ್ನು ಹಿಂದೆ ಹೇಳಿದ ವಿಧಿಯಿಂದ (ಪ್ರಣವಮಂತ್ರದಿಂದ) ಪೂಜಿಸಿದನು. ಅವನಿಗೂ ಪರಮೇಶ್ವರನು ಅನುಗ್ರಹಿಸಿ ಮುಕ್ತಿಯನ್ನು ಕೊಟ್ಟನು. ||೩೭-೩೮||

ವೇದವನ್ನು ತಿಳಿದವರಲ್ಲಿ ಶ್ರೇಷ್ಠರಾದ ಎಲೈ ಮುನಿಗಳೇ, ಹಿಂದೆ ಹೇಳಿದ ಮಾರ್ಗದಿಂದ ಅನೇಕರು ಲಿಂಗಾರ್ಚನೆಯನ್ನು ಮಾಡಿ ಸಂಸಾರರೂಪವಾದ ಬಂಧನೆಯನ್ನು ಕಳೆದುಕೊಂಡರು. ||೪೦||

ಕೇಚಿದ್ವಾರಾಣಸೀಂ ಗತ್ವಾಽಽಪೂಜ್ಯ ಪೂರ್ವೋಕ್ತವರ್ತ್ಮನಾ ।
ಮಹಾದೇವಂ ಮಹಾತ್ಮಾನಂ ವಿಮುಕ್ತಾ ಭವಬಂಧನಾತ್ ॥೪೧॥

ಕೇಚಿಚ್ಛ್ರೀಸೋಮನಾಥಾಖ್ಯಂ ಕೇಚಿತ್ಕೇದಾರಮದ್ಭುತಂ ।
ಕೇಚಿಚ್ಛ್ರೀಪರ್ವತಂ ಮುಖ್ಯಂ ಕೇಚಿದ್ಗೋಪರ್ವತಂ ನರಾಃ ॥೪೨॥

ಕೇಚಿದ್ದಕ್ಷಿಣಕೈಲಾಸಂ ಕೇಚಿದಗ್ನೀಶ್ವರಾಭಿಧಂ ।
ಕೇಚಿಚ್ಛ್ರೀಹರತೀರ್ಥಾಖ್ಯಂ ಕೇಚಿದ್ವೃದ್ಧಾಚಲಾಭಿಧಂ ॥೪೩॥

ಕೇಚಿದ್ವಲ್ಮೀಕಮಾಶ್ಚರ್ಯಂ ಕೇಚಿದ್ಧಾಲಾಸ್ಯಸಂಜ್ಞಿತಂ ।
ಕೇಚಿದ್ರಾಮೇಶ್ವರಂ ಪುಣ್ಯಂ ಕೇಚಿತ್ಕಾಂತಾರಮಾದರಾತ್ ॥೪೪॥

ಪ್ರಾಪ್ಯ ಪೂರ್ವೋಕ್ತಮಾರ್ಗೇಣ ಶಿವಂ ಪೂಜ್ಯ ದ್ವಿಜೋತ್ತಮಾಃ ।
ಅನಾಯಾಸೇನ ಸಂಸಾರಾದ್ವಿಮುಕ್ತಾ ವೇದವಿತ್ತಮಾಃ ॥೪೫॥

ಕೇಚಿತ್ಸ್ವೇ ಸ್ವೇ ಗೃಹೇ ದೇವಂ ಸಮಾರಾಧ್ಯ ಯಥಾಬಲಂ ।
ಪೂರ್ವೋಕ್ತೇನೈವ ಮಾರ್ಗೇಣ ವಿಮುಕ್ತಾ ಭವಬಂಧನಾತ್ ॥೪೬॥

ಬ್ರಾಹ್ಮಣಶ್ರೇಷ್ಠರೇ, ಕೆಲ ಕೆಲವು ಭಕ್ತರು ಕಾಶೀವಿಶ್ವೇಶ್ವರ, ಸೋಮನಾಥೇಶ್ವರ, ಕೇದಾರೇಶ್ವರ, ಶ್ರೀಪರ್ವತ, ಗೋಪರ್ವತ, ದಕ್ಷಿಣಕೈಲಾಸಪರ್ವತ, ಇವುಗಳಲ್ಲಿರುವ ಲಿಂಗಗಳು, ಅಗ್ನೀಶ್ವರ, ಹರತೀರ್ಥ, ವೃದ್ಧಾಚಲ, ವಲ್ಮೀಕ, ಹಾಲಾಸ್ಯ, ರಾಮೇಶ್ವರ, ಕಾಂತಾರಕ್ಷೇತ್ರಗಳಲ್ಲಿರುವ ಶಿವಲಿಂಗಗಳನ್ನು ಹಿಂದೆ ಹೇಳಿದ ವಿಧಿಯಿಂದ ಪೂಜಿಸಿ ಸ್ವಲ್ಪವೂ ಶ್ರಮವಿಲ್ಲದೆ ಮುಕ್ತಿಯನ್ನು ಪಡೆದರು.॥೪೧-೪೨-೪೩-೪೪-೪೫॥

ಕೆಲವರು ತಮ್ಮ ತಮ್ಮ ಮನೆಗಳಲ್ಲಿಯೇ, ಶಕ್ತ್ಯನುಸಾರವಾಗಿ ವಂಚನೆ ಮಾಡದೆ ಭಕ್ತಿಯಿಂದ ವಿಧಿಗನುಸಾರವಾಗಿ ಶಿವನನ್ನು ಪೂಜಿಸಿ ಸಂಸಾರದ ಕಟ್ಟಿನಿಂದ ಬಿಡುಗಡೆಯನ್ನು ಹೊಂದಿದರು. ಭವವೆಂದರೆ ಉತ್ಪತ್ತಿಯು, ಇದೇ ದುಃಖದಿಂದ ತುಂಬಿದ ಸಂಸಾರದ ಕಟ್ಟಿಗೆ ಕಾರಣವು. ಉತ್ಪತ್ತಿಯಿಲ್ಲದಿದ್ದರೆ ದುಃಖವಿಲ್ಲದುದರಿಂದ ಅದೇ ಮೋಕ್ಷವೆನಿಸುವುದು. ಗೌತಮಸೂತ್ರದಲ್ಲಿ "ದುಃಖಜನ್ಮಪ್ರವೃತ್ತಿದೋಷಮಿಥ್ಯಾಜ್ಞಾನಾನಾಮುತ್ತರೋತ್ತರಾಪಾಯೇ ತದನಂತರಾಪಾಯಾದಪವರ್ಗಃ" ಎಂದರೆ ಶಾಸ್ತ್ರದಿಂದುಂಟಾದ ತತ್ವಜ್ಞಾನದಿಂದ ನಾನು ಮನುಷ್ಯನೆಂಬ ಮಿಥ್ಯಾಜ್ಞಾನವು ನಾಶವಾದರೆ, ರಾಗಾದಿದೋಷಗಳೂ ನಿವೃತ್ತಿಯಾಗುವುದರಿಂದ, ಧರ್ಮಾಧರ್ಮದ

ಕೇಚಿದ್ಭೋಗೇಚ್ಛಯಾ ದೇವಂ ಪೂರ್ವೋಕ್ತೇನೈವ ವರ್ತ್ಮನಾ ।
ಶ್ರದ್ಧಯಾಽಽಪೂಜ್ಯ ದೇವೇಶಂ ಭುಕ್ತವಂತೋ ಮಹಾಸುಖಂ ॥೪೭॥

ಕಿಮತ್ರ ಬಹುನೋಕ್ತೇನ ಶ್ರೂಯತಾಂ ಮುನಿಪುಂಗವಾಃ ।
ಪೂಜಯಾ ಸರ್ವಜಂತೂನಾಂ ಭೋಗಮೋಕ್ಷೌ ಚ ನಾನ್ಯಥಾ ॥೪೮॥

ತಸ್ಮಾದ್ಭವಂತೋಽಪ್ಯಮುನಾ ಪೂರ್ವೋಕ್ತೇನೈವ ವರ್ತ್ಮನಾ ।
ಪೂಜಯಧ್ವಂ ಮಹಾದೇವಂ ಭುಕ್ತಿಮುಕ್ತಿಫಲಪ್ರದಂ ॥೪೯॥

ಇತಿ ಶ್ರುತ್ವಾ ಮುನಿಶ್ರೇಷ್ಠಾಃ ಸೂತಂ ಸರ್ವಾರ್ಥಸಾಗರಂ ।
ಪ್ರಣಮ್ಯ ಪೂಜಯಾಮಾಸುಃ ಶಂಕರಂ ಶಶಿಭೂಷಣಂ ॥೫೦॥

ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಜ್ಞಾತಯಃ ಸುಹೃದೋ ಜನಾಃ ।
ಪೂಜಯಾಮಾಸುರೀಶಾನಂ ಮುನಿಭಿಸ್ತೈಃ ಪ್ರಚೋದಿತಾಃ ॥೫೧॥

ಪ್ರವೃತ್ತಿಯುಂಟಾಗದ ಕಾರಣ ಇವುಗಳ ಸಂಬಂಧವಾದ ಜನನವೂ ಉಂಟಾಗದಿರುವುದರಿಂದ ಸಂಪೂರ್ಣದುಃಖನಿವೃತ್ತಿರೂಪವಾದ ಮೋಕ್ಷವುಂಟಾಗುವುದು. ಎಂದು ಹೇಳಿರುವುದು. ॥೪೬॥

ಕೆಲವರು ಸುಖಾಪೇಕ್ಷೆಯಿಂದ ಕೂಡಿ ಹಿಂದೆ ಹೇಳಿದ ಮಾರ್ಗದಿಂದ ಶಿವನನ್ನು ಭಕ್ತಿಯಿಂದ ಪೂಜಿಸಿ ವಿಶೇಷವಾದ ಸುಖವನ್ನು ಅನುಭವಿಸಿದರು. ॥೪೭॥

ಮುನಿಶ್ರೇಷ್ಠರೇ, ಕೇಳಿರಿ. ಹೆಚ್ಚು ಹೇಳುವುದೇನು? ಸಮಸ್ತ ಪ್ರಾಣಿಗಳಿಗೂ ಆ ಪರಮೇಶ್ವರಪೂಜೆಯಿಂದಲೇ ಭೋಗಮೋಕ್ಷಗಳೆರಡೂ ಉಂಟಾಗುವುವು. ಮತ್ತೆ ಬೇರೆ ಇಲ್ಲ. ॥೪೮॥

ಆದುದರಿಂದ ನೀವೂ ಕೂಡ ಹಿಂದೆ ಹೇಳಿದ ಮಾರ್ಗದಿಂದಲೇ ಭುಕ್ತಿಮುಕ್ತಿಗಳೆರಡನ್ನೂ ಕೊಡುವ ಮಹಾದೇವನನ್ನು ಪೂಜೆಮಾಡಿರಿ. ॥೪೯॥

ಹೀಗೆಂದು ಹೇಳಿದ ಸರ್ವಜ್ಞನಾದ ಸೂತನಿಗೆ ಆ ಮುನಿಶ್ರೇಷ್ಠರೆಲ್ಲರೂ ನಮಸ್ಕರಿಸಿ ಚಂದ್ರಶೇಖರನಾದ ಶಿವನನ್ನು ಪೂಜಿಸಿದರು. ॥೫೦॥

ಆ ಮುನಿಗಳಿಂದ ಪ್ರೇರಿತರಾದ, ಅವರ ಮಕ್ಕಳೂ, ಮೊಮ್ಮಕ್ಕಳೂ, ಬಂಧುಗಳೂ ಸ್ನೇಹಿತರೂ, ಎಲ್ಲರೂ ಈಶ್ವರನನ್ನು ಪೂಜೆಮಾಡಿದರು. ॥೫೧॥

ಪೂಜಯಾ ಸದೃಶಂ ಪುಣ್ಯಂ ನಾಸ್ತಿ ಲೋಕತ್ರಯೇಷ್ವಪಿ ।
ಪೂಜಯೈವ ಮಹಾದೇವಃ ಶಂಕರಃ ಪರಮೇಶ್ವರಃ ॥೫೨॥

ನೀಲಕಂಠೋ ವಿರೂಪಾಕ್ಷಃ ಶಿವೋ ನಿತ್ಯಂ ಪ್ರಸೀದತಿ ।
ಪೂಜಿತೇ ದೇವದೇವೇಶೇ ಪುರಾಣೇ ಸರ್ವಕಾರಣೇ ॥೫೩॥

ಪೂಜಿತಾ ದೇವತಾಃ ಸರ್ವ ಇತಿ ವೇದಾಂತನಿಶ್ಚಯಃ ।
ಭೋಗಂ ಮೋಕ್ಷಂ ಚ ಲಭತೇ ನಾತ್ರ ಕಾರ್ಯಾ ವಿಚಾರಣಾ ॥೫೪॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ ಈಶ್ವರಪೂಜಾವಿಧಾನಂ ನಾಮ ಚತುರ್ಥೋಽಧ್ಯಾಯಃ ಸಮಾಪ್ತಃ

ಮೂರು ಲೋಕದಲ್ಲಿಯೂ, ಪೂಜೆಗೆ ಸಮಾನವಾದ ಪುಣ್ಯಕಾರ್ಯವಾವುದೂ ಇಲ್ಲ. ನೀಲಕಂಠನೂ, ಮುಕ್ಕಣ್ಣನೂ ಆಗಿದ್ದರೂ, ಮಂಗಲಸ್ವರೂಪನಾಗಿ ಲೋಕಕ್ಕೆ ಸುಖವನ್ನುಂಟುಮಾಡುವ ಪರಮೇಶ್ವರನು ಪೂಜೆಯಿಂದಲೇ ಯಾವಾಗಲೂ ಪ್ರಸನ್ನನಾಗಿ, ಅನುಗ್ರಹವನ್ನುಂಟುಮಾಡುವನು. ॥೫೨॥

ಅನಾದಿಯಾದವನೂ, ಸಮಸ್ತಕ್ಕೂ ಕಾರಣನೂ ಆದ ದೇವತೆಗಳೆಲ್ಲರಿಗೂ ದೇವನಾದ ಶಿವನನ್ನು ಪೂಜೆಮಾಡಿದ ಮೇಲೆ ಸಮಸ್ತ ದೇವತೆಗಳನ್ನೂ ಪೂಜೆಮಾಡಿದಂತಾಗುವುದು. ಎಂದು ಉಪನಿಷತ್ತುಗಳಲ್ಲಿ ನಿಶ್ಚಯಿಸಿರುವುದು. ಶಿವನ ಪೂಜೆಯಿಂದ ಸುಖಾನುಭವವನ್ನೂ, ಮೋಕ್ಷವನ್ನೂ ಹೊಂದುವುದರಲ್ಲಿ ಸಂದೇಹವಿರುವುದಿಲ್ಲವು. ॥೫೩॥

ಇಲ್ಲಿಗೆ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ ಈಶ್ವರಪೂಜಾವಿಧಾನ ಎಂಬ ನಾಲ್ಕನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

|| ಪಂಚಮೋಽಧ್ಯಾಯಃ ||

ಐದನೆಯ ಅಧ್ಯಾಯವು

|| ನೈಮಿಷೀಯಾ ಊಚುಃ ||

ಭಗವನ್ ಸರ್ವಶಾಸ್ತ್ರಾರ್ಥಪರಿಜ್ಞಾನವತಾಂ ವರ ।
ಬ್ರೂಹಿ ಪೂಜಾವಿಧಿಂ ಶಕ್ತೇಃ ಪರಾಯಾಃ ಸಂಗ್ರಹೇಣ ತು ||೧||

ಮುನಿಗಳು, ಮಹಾಮಹಿಮನಾದ ಸಮಸ್ತ ಶಾಸ್ತ್ರಾರ್ಥಗಳನ್ನೂ ಬಲ್ಲ ಸೂತನೇ, ಪರಾಶಕ್ತಿಯ ಪೂಜಾವಿಧಾನವನ್ನು ಸಂಗ್ರಹವಾಗಿ ಹೇಳು. ಎಂದು ಪ್ರಶ್ನೆಯನ್ನು ಮಾಡಿದರು. ಹಿಂದೆ ಹೇಳಿದ ಭೋಗಮೋಕ್ಷರೂಪ ಫಲಗಳನ್ನು ಪರಮೇಶ್ವರನು ತನ್ನ ಶಕ್ತಿಯಿಂದಲೇ ಕೊಡಲು ಸಮರ್ಥನಾಗಿರುವನು. ಈ ವಿಷಯದಲ್ಲಿ— "ಶಕ್ತ್ಯೋ ಯಯಾ ಸ ಶಂಭುರ್ಭುಕ್ತೌ ಮುಕ್ತೌ ಚ ಪಶುಗಣಸ್ಯಾಸ್ಯ । ತಾಮೇನಾಂ ಚಿದ್ರೂಪಾಮಾದ್ಯಾಂ ಸರ್ವಾತ್ಮನಾಽಸ್ಮಿ ನತಃ ||" ಎಂದು ಹೇಳಿರುವುದರಿಂದ ಶಿವಪೂಜಾಫಲಪ್ರಾಪ್ತಿಗಾಗಿ ಅವಶ್ಯಕವಾಗಿ ಬೇಕಾಗಿರುವ ಶಕ್ತಿಪೂಜಾವಿಷಯವನ್ನು ಮುನಿಗಳು ಪ್ರಶ್ನೆಮಾಡಿದರು. ಪರಾಶಕ್ತಿಯೆಂಬೊಂದು ಶಕ್ತಿದೇವತೆಯಿರುವುದು. ಆ ದೇವತೆಯ ಪೂಜೆಯಿಂದ ಶಿವಪೂಜಾಫಲಪ್ರಾಪ್ತಿಯಾಗುವುದು. ಎಂದು ಸಾಮಾನ್ಯವಾಗಿ ತಿಳಿದಿದ್ದ ಮುನಿಗಳು, ಶಕ್ತಿಸ್ವರೂಪವನ್ನೂ, ಆ ಶಕ್ತಿದೇವತಾಭೇದಗಳನ್ನೂ, ಆ ದೇವತೆಗಳ ಪೂಜಾವಿಧಾನವನ್ನೂ ವಿಸ್ತಾರವಾಗಿ ತಿಳಿಯಬೇಕೆಂದು ಈ ಪ್ರಶ್ನೆಯನ್ನು ಮಾಡಿರುವರು. ಅಗ್ನಿಯಲ್ಲೂ ಸುಡುವ, ಬೇಯಿಸುವ, ಬೆಳಗುವ ಶಕ್ತಿಗಳಿರುತ್ತವೆ. ಶಿವನಲ್ಲಿಯಾದರೋ ಪ್ರಪಂಚವನ್ನು ಸೃಷ್ಟಿಮಾಡುವುದೇ ಮುಂತಾದ ಶಕ್ತಿಗಳು ವಿಶೇಷರೂಪವಾಗಿರುವುದರಿಂದ ಆಶಕ್ತಿಯನ್ನು ಪರಾಶಕ್ತಿ ಎಂದು ಹೇಳಿದೆ.||೧||

|| ಸೂತ ಉವಾಚ ||

ವಕ್ಷ್ಯೇ ಪೂಜಾವಿಧಿಂ ಶಕ್ತೇಃ ಪರಾಯಾ ಆಸ್ತಿಕೋತ್ತಮಾಃ ।
ಅತ್ಯಂತ ಶ್ರದ್ಧಯಾ ಸಾರ್ಧಂ ಶೃಣುಧ್ವಂ ಭುಕ್ತಿಮುಕ್ತಿದಂ ॥೨॥

ಪೂಜಾ ಶಕ್ತೇಃ ಪರಾಯಾಸ್ತು ದ್ವಿವಿಧಾ ಪರಿಕೀರ್ತಿತಾ ।
ಬಾಹ್ಯಾಭ್ಯಂತರಭೇದೇನ ಬಾಹ್ಯಾ ತು ದ್ವಿವಿಧಾ ಮತಾ ॥೩॥

ಸೂತನು ಹೇಳಿದನು— ಆಸ್ತಿಕರಲ್ಲಿ ಶ್ರೇಷ್ಠರಾದ ಎಲೈ ಮಹರ್ಷಿಗಳೇ, ಪರಾಶಕ್ತಿಯ ಪೂಜಾವಿಧಾನವನ್ನು ಹೇಳುವೆನು. ಭಕ್ತಿಮುಕ್ತಿಫಲಗಳನ್ನು ಕೊಡತಕ್ಕ ಆ ಪೂಜಾವಿಧಿಯನ್ನು ವಿಶೇಷವಾದ ಭಕ್ತಿಯಿಂದ ಕೇಳಿರಿ, ಎಂದು ಸೂತನು ಹೇಳಿದನು. ಶಿವಪೂಜೆಯು ಫಲಪ್ರದವಾಗಬೇಕಾದರೆ ಶಕ್ತಿಪೂಜಾಧೀನವಾಗಿಯೇ ಆಗಬೇಕಾಗಿರುವುದು. ಘಟಕಾರ್ಯವು ಆಗಬೇಕಾದರೆ ದಂಡಚಕ್ರಾದಿಗಳು ಸಾಕ್ಷಾತ್ತಾಗಿ ಕಾರಣವಲ್ಲದಿದ್ದರೂ, ಪರಂಪರೆಯಾಗಿ ಹೇಗೆ ಕಾರಣಗಳಾಗಿರುವುವೋ ಹಾಗೆ ಪರಶಿವನು ಫಲಪ್ರದನಾಗಬೇಕಾದರೆ ತನ್ನ ಪಂಚಕೃತ್ಯಗಳಾದ ಶಕ್ತಿಸ್ವರೂಪದಿಂದಲೇ ಆಗಬೇಕಾಗಿರುವುದು. ಸ್ವಸ್ವರೂಪದಿಂದಲ್ಲ. ಆ ಪಂಚಕೃತ್ಯಗಳನ್ನೇ ಶಕ್ತಿಯೆಂದು ಕರೆಯುವರು. ಅವನ ಪಂಚಕೃತ್ಯಗಳಾವುವೆಂದರೆ:—" ಪಂಚವಿಧಂ ತತ್ಕೃತ್ಯಂ ಸೃಷ್ಟಿಸ್ಥಿತಿಸಂಹೃತಿತಿರೋಭಾವಾಃ । ತದ್ವದನುಗ್ರಹಕರಣಂ ಪ್ರೋಕ್ತಂ ಸತತೋದಿತಸ್ಯಾಸ್ಯ " ॥ ಎಂದು ಹೇಳಿರುವುದು. ಸೃಷ್ಟಿ, ಸ್ಥಿತಿ, ಸಂಹಾರ, ತಿರೋಭಾವ, ಅನುಗ್ರಹ ಇವುಗಳೇ ಆ ಪಂಚಕೃತ್ಯಗಳು. ಶಕ್ತಿಯು ಶಿವನಿಂದ ಬೇರೆಯಲ್ಲವೆಂದು ವೇದಗಳಲ್ಲಿ ಅನೇಕ ಬಗೆಯಾಗಿ ವಿವರಿಸಿರುವುದು. ಅಗ್ನಿಗೆ ಉಷ್ಣವೂ, ಸೂರ್ಯನಿಗೆ ಕಿರಣವೂ ಚಂದ್ರನಿಗೆ ಬೆಳದಿಂಗಳೂ ಹೇಗೆ ಸ್ವಭಾವವಾದುದಾಗಿಯೂ, ಸ್ಥಿರವಾದುದಾಗಿಯೂ, ಇರುವುದೋ ಹಾಗೆಯೇ ಶಿವನಿಗೆ ಶಕ್ತಿಯು ಸ್ವಭಾವವು. ಮತ್ತೂ ಸ್ಥಿರವು. ಆದುದರಿಂದ ಪರಾಶಕ್ತಿಯ ಪೂಜೆಯು ಆವಶ್ಯಕವಾದುದಾಯಿತು. ||೨||

ಅಧಿಕಾರಭೇದದಿಂದ ಶಕ್ತಿಪೂಜೆಯನ್ನು ವಿಭಾಗಮಾಡುವರು. ಶಕ್ತಿಪೂಜೆಯು ಬಾಹ್ಯವೆಂದೂ, ಆಭ್ಯಂತರವೆಂದೂ ಎರಡುಬಗೆಯಾಗಿದೆ. ಹಾಗೆಯೇ ಬಾಹ್ಯಪೂಜೆಯು ವೈದಿಕ, ತಾಂತ್ರಿಕ, ಎಂದು ಎರಡುಬಗೆಯಾಗಿರುವುದು. ||೩||

ವೈದಿಕೀ ತಾಂತ್ರಿಕೀ ಚೇತಿ ದ್ವಿಜೇಂದ್ರಾಸ್ತಾಂತ್ರಿಕೀ ತು ಸಾ ।
ತಾಂತ್ರಿಕಸ್ಯೈವ ನಾನ್ಯಸ್ಯ ವೈದಿಕೀ ವೈದಿಕಸ್ಯ ಹಿ ॥೪॥

ಇತ್ಥಂ ಸಮಸ್ತದೇವಾನಾಂ ಪೂಜಾ ವಿಪ್ರಾ ವ್ಯವಸ್ಥಿತಾ ।
ಅವಿಜ್ಞಾಯಾನ್ಯಥಾ ಪೂಜಾಂ ಕುರ್ವನ್ಪತತಿ ಮಾನವಃ ॥೫॥

ಆಸನಾವಾಹನೇ ಚಾರ್ಘ್ಯಂ ಪಾದ್ಯಮಾಚಮನಂ ತಥಾ ।
ಸ್ನಾನಂ ವಾಸೋತ್ತರೀಯಂ ಚ ಭೂಷಣಾನಿ ಚ ಸರ್ವಶಃ ॥೬॥

ಗಂಧ ಪುಷ್ಪಂ ತಥಾ ಧೂಪಂ ದೀಪಮನ್ನೇನ ತರ್ಪಣಂ ।
ಮಾಲ್ಯಾನುಲೇಪನಂ ಚೈವ ನಮಸ್ಕಾರಂ ವಿಸರ್ಜನಂ ॥೭॥

ಬ್ರಾಹ್ಮಣಶ್ರೇಷ್ಠರೇ, ವೈದಿಕವಾದ ಬಾಹ್ಯಪೂಜೆಯು ವೇದಮೂಲಕವಾದ ಅವರವರ ಗೃಹ್ಯಸೂತ್ರಗಳಲ್ಲಿ ಹೇಳಿದಂತೆ ಸಂಸ್ಕಾರಗಳಿಂದ ಸಂಸ್ಕೃತರಾದವರಿಗೆ ಹೇಳಿರುವುದು. ಈ ಪೂಜೆಯನ್ನು ಸ್ಮೃತಿಗಳಲ್ಲಿಯೂ, ಪುರಾಣಗಳಲ್ಲಿಯೂ ವಿವರಿಸಿರುವುದು. ತಾಂತ್ರಿಕಪೂಜೆಯನ್ನು ಶಿವನು ಹೇಳಿದ ಕಾಮಿಕಾದಿ ಆಗಮಶಾಸ್ತ್ರಗಳಲ್ಲಿ ಹೇಳಿರುವುದು. ಆ ಶಾಸ್ತ್ರಪ್ರಕಾರವಾಗಿ, ಕುಂಡ ಮಂಟಪ ಮುಂತಾದ ಸಂಸ್ಕಾರ ದೀಕ್ಷೆಯಿಂದ ಕೂಡಿದವರಿಗೆ ಅದು ವಿಹಿತವಾದುದು. ॥೪॥

ಎಲೈ ಬ್ರಾಹ್ಮಣರೇ, ಈ ರೀತಿಯಲ್ಲಿ ಶಿವ, ವಿಷ್ಣು, ವಿನಾಯಕಾದಿ ದೇವತೆಗಳ ಪೂಜೆಯ ರೀತಿಯು ಅಧಿಕಾರಿಭೇದದಿಂದ ವಿಹಿತವಾಗಿರುವುದು. ಇದನ್ನು ತಿಳಿಯದೆ ತನ್ನ ಅಧಿಕಾರಕ್ಕೆ ವಿರುದ್ಧವಾಗಿ ಪೂಜೆಮಾಡುವುದರಿಂದ ಮನುಷ್ಯನು ಪಾಪಿಯಾಗುವನು. ವೇದದಲ್ಲಿ “ಯೋ ವೈ ಸ್ವಾಂ ದೇವತಾಮಪಿ ತ್ಯಜತೇ ಸ ಸ್ವಾಯೈ ಚ್ಯವತೇ ನ ಪರಾಂ ಪ್ರಾಪ್ನೋತಿ ಪಾಪೀಯಾನ್ಭವತಿ.” ಎಂದು ತನ್ನ ಮಾರ್ಗವನ್ನು ಬಿಡುವುದರಿಂದ ತನ್ನ ದೇವತೆಯನ್ನು ಬಿಟ್ಟು, ಮತ್ತೊಂದು ಸಿಕ್ಕದೆ, ಪಾಪಿಯಾಗುವನೆಂದು ಹೇಳಿರುವುದರಿಂದ ತಮಗೆ ವಿಹಿತವಾಗಿರುವ ಪೂಜಾಮಾರ್ಗವನ್ನು ಯಾರೂ ಬಿಡಬಾರದು. ॥೫॥

ಆಸನ, ಆವಾಹನ, ಅರ್ಘ್ಯ, ಪಾದ್ಯ, ಆಚಮನ, ಸ್ನಾನ, ವಸ್ತ್ರ, ಉತ್ತರೀಯ, ಆಭರಣ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ಮಾಲ್ಯ, ಅನುಲೇಪನ, ನಮಸ್ಕಾರ, ವಿಸರ್ಜನ, ಇವೇ ಮುಂತಾದ ಬಾಹ್ಯೋಪಕರಣಗಳಿಂದ ಕೂಡಿದ ಪೂಜೆಯು ಬಾಹ್ಯಪೂಜೆಯು. ॥೬-೭॥

ಸರ್ವಂ ಮಾತೃಕಯಾ ಕುರ್ಯಾನ್ಮಾತೃಕಾ ಮಂತ್ರನಾಯಿಕಾ ।
ಮಾತೃಕಾವ್ಯತಿರೇಕೇಣ ಮಂತ್ರಾ ನೈವ ಹಿ ಸತ್ತಮಾಃ ॥೮॥

ಮಾತೃಕಾ ಚ ತ್ರಿಧಾ ಸ್ಥೂಲಾ ಸೂಕ್ಷ್ಮಾ ಸೂಕ್ಷ್ಮತರಾಽಪಿ ಚ ।
ಗುರೂಪದೇಶತೋ ಜ್ಞೇಯೋ ನಾನ್ಯಥಾ ಶಾಸ್ತ್ರಕೋಟಿಭಿಃ ॥೯॥

ಈ ಬಾಹ್ಯೋಪಚಾರರೂಪವಾದ ಪೂಜೆಗಳೆಲ್ಲವನ್ನೂ ಅಕಾರಾದಿಕ್ಷಕಾರಾಂತವಾದ ವರ್ಣಗಳ ಉಚ್ಚಾರಣೆಯಿಂದ ಮಾಡಬೇಕು. ಇದನ್ನೇ ಮಾತೃಕಾಕ್ಷರಗಳೆನ್ನುವರು. ಮಾತೃಕಾಕ್ಷರಗಳೇ ಮಂತ್ರವನ್ನು ಪ್ರಕಟಪಡಿಸುವುವು. ಮಾತೃಕಾಕ್ಷರಗಳಿಲ್ಲದಿದ್ದರೆ ಮಂತ್ರಗಳೇ ಇರುತ್ತಿರಲಿಲ್ಲ. ಆದುದರಿಂದ, ಅಕಾರಾದಿಕ್ಷಕಾರಾಂತ ವರ್ಣೋಚ್ಚಾರಣೆಯಿಂದ ಪೂಜೆಮಾಡಿದರೆ ಸಕಲ ಮಂತ್ರಗಳಿಂದಲೂ ಪೂಜೆ ಮಾಡಿದಂತಾಗುವುದು. ॥೮॥

ಮಾತೃಕಾವರ್ಣಗಳು ಸ್ಥೂಲ, ಸೂಕ್ಷ್ಮ, ಸೂಕ್ಷ್ಮತರ ಎಂದು ಮೂರು ಬಗೆಯಾಗಿರುವುವು. ಅಧಿಕಾರಿಭೇದದಿಂದ ಪ್ರಥಮಾಧಿಕಾರಿಯು ಸ್ಥೂಲಮಾತೃಕೆಯಿಂದಲೂ, ಮಧ್ಯಮಾಧಿಕಾರಿಯು ಸೂಕ್ಷ್ಮಮಾತೃಕೆಯಿಂದಲೂ, ಉತ್ತಮಾಧಿಕಾರಿಯು ಸೂಕ್ಷ್ಮತರಮಾತೃಕೆಯಿಂದಲೂ, ಪೂಜಿಸಬೇಕೆಂದು ವಿಭಾಗಿಸಿದಂತಾಯಿತು. ಇವುಗಳನ್ನು ಗುರೂಪದೇಶದಿಂದಲೇ ತಿಳಿಯಬೇಕು. ಅನೇಕ ಶಾಸ್ತ್ರಗಳಿಂದ ತಿಳಿಯಲು ಸಾಧ್ಯವಿಲ್ಲ. ಪ್ರಾಣಿಕರ್ಮಗಳು ಒಂದು ಗೊತ್ತಾದ ಕಾಲದಲ್ಲಿ ಪರಿಪಕ್ವವಾಗಿ ಫಲವನ್ನು ಕೊಡುವುದಕ್ಕೆ ಸಿದ್ಧವಾಗಿರುವುವು. ಪರಿಪಕ್ವವಾದ ಕರ್ಮಫಲಗಳನ್ನು ಅನುಭವಿಸುವುದರಿಂದ ಅವು ನಾಶವಾಗುವುವು. ಮಿಕ್ಕ ಕರ್ಮಗಳು ಪರಿಪಕ್ವವಾಗದಿರುವುದರಿಂದ ಅನುಭವಕ್ಕೆ ಬಾರದೆ ಅವು ಸೃಷ್ಟಿಕಾರ್ಯಕ್ಕೆ ಉಪಯುಕ್ತವಾಗದೆ ಹೋಗುವುವು. ಪ್ರಾಕೃತಪ್ರಳಯದಲ್ಲಿ ಸಮಸ್ತ ಪ್ರಪಂಚವನ್ನೂ ತನ್ನಲ್ಲಿ ಲೀನಮಾಡಿಕೊಂಡು, ಮಾಯೆಯು ತನಗೆ ಆಶ್ರಯನಾದ ನಿರ್ಗುಣನಾದ ಪರಶಿವನಲ್ಲಿ ಮಿಕ್ಕ ಕರ್ಮಗಳು ಪರಿಪಾಕಾವಸ್ಥೆಗೆ ಬರುವವರೆಗೂ, ವಿಲೀನವಾಗಿರುವುದು. ಪ್ರಳಯದಲ್ಲಿ ಭೂಮಿಯು ನೀರಿನಲ್ಲಿಯೂ, ನೀರು ತೇಜಸ್ಸಿನಲ್ಲಿಯೂ, ತೇಜಸ್ಸು ವಾಯುವಿನಲ್ಲಿಯೂ, ವಾಯುವು ಆಕಾಶದಲ್ಲಿಯೂ, ಆಕಾಶವು ಅವ್ಯಕ್ತ (ಪ್ರಕೃತಿ) ದಲ್ಲಿಯೂ, ಅವ್ಯಕ್ತವು ನಿರ್ಗುಣನಾದ ಪುರುಷನಲ್ಲಿಯೂ, ಲೀನವಾಗುವುದೆಂದು ಹೇಳಿರುವುದು. ಅವ್ಯಕ್ತವೆಂಬುದೇ ಮಾಯೆಯು, (ಪ್ರಕೃತಿಯು). ಪ್ರಕೃತಿಪ್ರಳಯವೆಂಬುದು ಮುಕ್ತಿಯಲ್ಲಾದಂತೆ ಮಾಯೆಯ ಸಂಪೂರ್ಣವಾದ ನಾಶವಲ್ಲ. ನಿದ್ರೆಯಲ್ಲಿ

ಮಾಯಾಸಂಬಂಧವಾದ ವೃತ್ತಿಗಳಿಲ್ಲದ್ದರಿಂದ, ಸ್ವಾಧಿಷ್ಠಾನಾತ್ಮರೂಪದಿಂದ ಪ್ರಕಾಶಿಸುತ್ತಿದ್ದರೂ, ಮಿಥ್ಯಾವಸ್ತುವಾದ ಮಾಯೆಯು ಪ್ರಕಾಶಿಸದಿರುವಂತೆ, ಪ್ರಕೃತಿಯು ಪ್ರಕಾಶಕ್ಕೆ ಬರದಿರುವುದು. ಎಂದರೆ ಪ್ರಾಣಿಕರ್ಮಗಳು ಪರಿಪಾಕಾವಸ್ಥೆಗೆ ಬರುವವರೆಗೆ ಮಾಯೆಯು ಆತ್ಮನಲ್ಲಿ ಲೀನವಾಗಿರುವುದು. ಕ್ರಮವಾಗಿ ಪ್ರಾಣಿಕರ್ಮಗಳು ಪರಿಪಾಕಾವಸ್ಥೆಗೆ ಬಂದು ಫಲಕೊಡಲು ಸಿದ್ಧವಾಗಲು ಪರಮೇಶ್ವರನಿಗೆ ಸೃಷ್ಟಿಮಾಡಬೇಕೆಂಬ ಮಾಯಾವೃತ್ತಿಯುಂಟಾಗುವುದು. ಅದನ್ನೇ ಈಕ್ಷಣ, ಕಾಮ, ತಪಸ್ಸು, ಚಿಕೀರ್ಷಾ, ಮುಂತಾದ ಶಬ್ದಗಳಿಂದ ಹೇಳಿರುವುದು. ತದೈಕ್ಷತಬಹುಸ್ಯಾಂ ಪ್ರಜಾಯೇಯ (ಛಾಂ) ಸ ಐಕ್ಷತ ಲೋಕಾನ್ನು ಸೃಜೈ (ಐ) ಸೋಕಾಮಯತ ಬಹುಸ್ಯಾಂ ಪ್ರಜಾಯೇಯ (ತೈ) ತಪಸಾ ಚೀಯತೇ ಬ್ರಹ್ಮ(ಮುಂ) ವಿಚಿಕೀರ್ಷುರ್ಘನೀಭೂತಾ ಕ್ವಚಿದಭ್ಯೇತಿ ಬಿಂದುಕಾಂ (ಪ್ರಪಂಚಸಾರ) ಇವುಗಳೇ ಪ್ರಮಾಣಗಳು. ಅಪರಿಪಕ್ವಗಳಾದ ಪ್ರಾಣಿಕರ್ಮಗಳ ಅಭೇದದಿಂದ ಘನರೂಪವಾದ ಆತ್ಮವ್ಯಾಪಾರವನ್ನೂ ಚಿಕೀರ್ಷಾ ಎಂದು ಹೇಳುವರು. ಪರಿಪಕ್ವವಾದ ಕರ್ಮಾಕಾರದಿಂದ ಪರಿಣಾಮ ಹೊಂದಿದ ಮಾಯಾವಿಶಿಷ್ಟವಾದ ಚೈತನ್ಯವನ್ನು ಬಿಂದುವೆಂದು ಕರೆಯುವರು. ಈ ಅವಿಭಾಗಾವಸ್ಥೆಯೇ ಪ್ರಕೃತಿಯು (ಅವ್ಯಕ್ತವು) ಸತ್ವರಜಸ್ತಮೋಗುಣಗಳಿಂದ ಕೂಡಿದುದು. ಈ ಪ್ರಕೃತಿಯೇ ಪ್ರಪಂಚಕ್ಕೆ ಅಂಕುರರೂಪವಾಗಿ, ಪ್ರತಿಯೊಂದು ಪ್ರಾಣಿಯ ಆಧಾರ ಮುಂತಾದ ಸ್ಥಳದಲ್ಲಿ ಗೋಚರಿಸುತ್ತ ಕುಂಡಲಿನೀ ಮುಂತಾದ ಹೆಸರನ್ನು ಪಡೆದಿರುವುದು.

ಕುಂಡಲಿನಿಯ ಮಹಿಮೆಯನ್ನು—"ಶಕ್ತಿಃ ಕುಂಡಲಿನೀತಿ ವಿಶ್ವಜನನವ್ಯಾಪಾರಬದ್ಧೋದ್ಯಮಾಂ । ಜ್ಞಾತ್ವೇತ್ಥಂ · ನ ಪುನರ್ವಿಶಂತಿ ಜನನೀಗರ್ಭೇಽರ್ಭಕತ್ವಂ ನರಾಃ" ಎಂದು ಕುಂಡಲಿನೀ ಶಕ್ತಿಯನ್ನು ತಿಳಿದವರಿಗೆ ಪುನರ್ಜನ್ಮವಿಲ್ಲವೆಂದೂ, "ಕುಂಡಲೀ ಸರ್ವಥಾ ಜ್ಞೇಯಾ ಸುಷುಮ್ನಾಽಂತರ್ಗತೈವ ಸಾ" ಎಂದು ಆ ಕುಂಡಲಿನೀ ಶಕ್ತಿಯು ಸುಷುಮ್ನಾನಾಡಿಯೊಳಗಿರುವುದೆಂದೂ ಹೇಳಿರುವರು. ಬಿಂದುವು (ಮಾಯಾವಿಶಿಷ್ಟಚೈತನ್ಯವು) ಕಾಲಕ್ರಮದಿಂದ ಮೂರು ವಿಧವಾಗಿರುವುದು.— "ಕಾಲೇನ ವಿ(ಭಿ)ದ್ಯಮಾನಸ್ತು ಸ ಬಿಂದುರ್ಭವತಿ ತ್ರಿಧಾ, ಸ್ಥೂಲಸೂಕ್ಷ್ಮಪರತ್ವೇನ ತಸ್ಯ ತ್ರೈವಿಧ್ಯಮಿಷ್ಯತೇ । ಸ ಬಿಂದುನಾದ ಬೀಜತ್ವಭೇದೇನ ಚ ನಿಗದ್ಯತೇ" ಎಂದು ಅಚಿತ್ತಿನ ಅಂಶವಾದ ಸ್ಥೂಲವು ಬೀಜವೆಂದೂ, ಚಿತ್ತು ಅಚಿತ್ತು ಮಿಶ್ರವಾದ ಸೂಕ್ಷ್ಮವು ನಾದವೆಂದೂ, ಚಿದಂಶವಾದ ಪರಮಪುರುಷನೇ ಬಿಂದುವೆಂದೂ, ಅವನೇ ಈಶ್ವರನೆಂದೂ, ಮೂರು ವಿಧವು. ಈ ಮೂರು ಭಾಗವಾಗುವ ಸಮಯದಲ್ಲಿಯೇ

ಶಬ್ದಬ್ರಹ್ಮವೆಂಬ ಹೆಸರಿನ ಧ್ವನಿಯು ಉತ್ಪತ್ತಿಯಾಗುವುದು. “ ಬಿಂದೋಸ್ತಸ್ಮಾದ್ಭಿದ್ಯಮಾನಾದ್ರವೋಽವ್ಯಕ್ತಾತ್ಮಕೋ ಭವೇತ್ | ಸ ರವಃ ಶ್ರುತಿಸಂಪನ್ನೈಃ ಶಬ್ದಬ್ರಹ್ಮೇತಿ ಗೀಯತೇ ” ಎಂದು ಆ ಶಬ್ದಬ್ರಹ್ಮವೆಂಬ ಧ್ವನಿಯೇ ಪ್ರಪಂಚಕ್ಕೆ ಉಪಾದಾನಕಾರಣವು. ಇದು ಬಿಂದುರೂಪವಾಗಿ ಸಮಸ್ತಪ್ರಾಣಿಗಳಲ್ಲಿ ಇದ್ದರೂ, ಮೂಲಾಧಾರವೆಂಬ ಸ್ಥಳದಲ್ಲಿ ವ್ಯಕ್ತವಾಗುತ್ತಿರುವುದು. “ ಸ ತು ಸರ್ವತ್ರ ಸಂಸ್ಯೂತೋ ಮೂಲೇ ವ್ಯಕ್ತಸ್ತಥಾ ಪುನಃ | ಆವಿರ್ಭವತಿ ದೇಹೇಷು ಪ್ರಾಣಿನಾಮರ್ಥವಿಸ್ತೃತಃ ” ಎಂದು ಎಲ್ಲೆಡೆಯಲ್ಲೂ ಇರುವ ಧ್ವನಿಯು ಮೂಲಾಧಾರದಲ್ಲಿರುವ ವಾಯುವಿನ ಬಲದಿಂದ ವ್ಯಕ್ತವಾಗುವುದು. “ ದೇಹೇಪಿ ಮೂಲಾಧಾರೇಽಸ್ಮಿನ್ ಸಮುದ್ಯತಿ ಸಮೀರಣಃ ” ಎಂದು ಮೂಲಾಧಾರದಲ್ಲಿಯೇ ವಾಯುವಿನ ಉತ್ಪತ್ತಿಯನ್ನು ಹೇಳಿರುವುದು. ಮನುಷ್ಯನು ತಾನು ತಿಳಿದ ಅಂಶವನ್ನು ಹೇಳಬೇಕೆಂದು ಅಪೇಕ್ಷಿಸಿದರೆ ಆ ಅಪೇಕ್ಷಾನುರೂಪವಾದ ಪ್ರಯತ್ನದಿಂದ ಮೂಲಾಧಾರದಲ್ಲಿದ್ದ ವಾಯುವು ಚಲಿಸುವುದು. ಆ ಚಲನೆಯಿಂದ ಎಲ್ಲೆಡೆಯಲ್ಲಿಯೂ ಇರುವ ಶಬ್ದಬ್ರಹ್ಮವು ಆ ಮೂಲಾಧಾರದಲ್ಲಿ ವ್ಯಕ್ತವಾಗುವುದು. ವ್ಯಕ್ತವಾದ ಆ ಶಬ್ದಬ್ರಹ್ಮವು ಕಾರಣವಾದ ಬಿಂದುರೂಪವಾಗಿ ಚಲಿಸದಿರುವಾಗ ಅದನ್ನು ಪರಾವಾಕ್ಕೆಂದು ಹೇಳುವರು. ಅದೇ ನಾಭಿಪರ್ಯಂತವಾಗಿ ಬರುವ ವಾಯುವಿನಿಂದ ವ್ಯಕ್ತವಾಗಿ, ವಿಮರ್ಶರೂಪವಾದ ಮನಸ್ಸೆಂಬ ತತ್ವದಿಂದ ಕೂಡಿ, ಸಾಮಾನ್ಯವಾದ ಚಲನಪ್ರಕಾಶರೂಪವಾಗಿ, ಕಾರ್ಯವಾದ ಬಿಂದುತತ್ವವೆಂಬ ಈಶ್ವರಾಧಿದೇವತೆಯುಳ್ಳದ್ದಾಗಿ, ಪಶ್ಯಂತೀವಾಕ್ಕೆಂಬ ಹೆಸರನ್ನು ಹೊಂದುವುದು. ಅದೇ ಶಬ್ದಬ್ರಹ್ಮವು ಅದೇ ವಾಯುವಿನಿಂದ ಹೃದಯಪರ್ಯಂತವಾಗಿ ಬಂದು, ನಿಶ್ಚಯರೂಪವಾದ ಬುದ್ಧಿತತ್ವದಿಂದ ಕೂಡಿ, ವಿಶೇಷವಾದ ಚಲನೆಯಿಂದ ನಾದಬಿಂದುಸ್ವರೂಪವಾಗಿ ಹಿರಣ್ಯಗರ್ಭದೇವತೆಯುಳ್ಳದ್ದಾಗಿ ಮಧ್ಯಮಾವಾಕ್ಕೆನಿಸುವುದು. ಅದೇ ಶಬ್ದಬ್ರಹ್ಮವು ಅದೇ ವಾಯುವಿನಿಂದ ಬಾಯಿಯವರೆಗೆ ಬಂದು ಕಂಠಮುಂತಾದ ಸ್ಥಾನಗಳಲ್ಲಿ ವ್ಯಕ್ತವಾಗಿ, ಅಕಾರಾದಿ ಕ್ಷಕಾರಾಂತವರ್ಣಮಾಲಾರೂಪವಾಗಿ, ಮತ್ತೊಬ್ಬರ ಕಿವಿಗೂ ಕೇಳತಕ್ಕುದಾಗಿ, ಬೀಜಾಕ್ಷರರೂಪವಾಗಿ, ವಿರಾಡ್ರೂಪದೇವತೆಯುಳ್ಳದ್ದಾಗಿ ವೈಖರೀವಾಕ್ಕೆನಿಸುವುದು. ಇದನ್ನೇ ಶಂಕರಾಚಾರ್ಯರು—

ಮೂಲಾಧಾರಾತ್ಪ್ರಥಮಮುದಿತೋ ಯಸ್ತು ಭಾವಃ (ತಾರಃ) ಪರಾಖ್ಯಃ |
ಪಶ್ಚಾತ್ಪಶ್ಯಂತ್ಯಥ ಹೃದಯಗೋ ಬುದ್ಧಿಯುಙ್ಮಧ್ಯಮಾಖ್ಯಃ ||
ವಕ್ತ್ರೇ ವೈಖರ್ಯಥ ರುರುದಿಷೋರಸ್ಯ ಜಂತೋಃ ಸುಷುಮ್ನಾ(ಂ) |
ಬದ್ಧಸ್ತಸ್ಮಾದ್ಭವತಿ ಪವನ(ಃ) ಪ್ರೇರಿತೋ ವರ್ಣಸಂಜ್ಞ(ಃ)ಃ ||

ಅಥಾಽಭ್ಯಂತರಪೂಜಾಯಾಮಧಿಕಾರೋ ಭವೇದ್ಯದಿ ।
ತ್ಯಕ್ತ್ವಾ ಬಾಹ್ಯಾಮಿಮಾಂ ಪೂಜಾಮಾಶ್ರಯೇದಪರಾಂ ಬುಧಃ॥೧೦॥

ಪೂಜಾ ಯಾಽಭ್ಯಂತರಾ ಸಾಽಪಿ ದ್ವಿವಿಧಾ ಪರಿಕೀರ್ತಿತಾ ।
ಸಾಧಾರಾ ಚ ನಿರಾಧಾರಾ ನಿರಾಧಾರಾ ಮಹತ್ತರಾ ॥೧೧॥

ಸಾಧಾರಾ ಯಾ ತು ಸಾಽಽಧಾರೇ ನಿರಾಧಾರಾ ತು ಸಂವಿದಿ ।
ಆಧಾರೇ ವರ್ಣಸಂಕ್ಲಪ್ತ ವಿಗ್ರಹೇ ಪರಮೇಶ್ವರೀಂ ॥೧೨॥

ಎಂದು ಹೇಳಿರುವರು. ವೈಖರೀರೂಪವಾದ ಅಕ್ಷರಗಳು ಪ್ರಥಮಾಧಿಕಾರಿಗಳಿಗೂ, ಮಧ್ಯಮಾರೂಪವಾದ ಸೂಕ್ಷ್ಮಾಕ್ಷರಗಳು ಮಧ್ಯಮಾಧಿಕಾರಿಗಳಿಗೂ, ಕಾರ್ಯಕಾರಣರೂಪವಾದ ಬಿಂದುಸ್ವರೂಪವಾದ ಪರಾಪಶ್ಯಂತೀ ಎಂಬ ಸೂಕ್ಷ್ಮತರವಾದ ಅಕ್ಷರಗಳು ಉತ್ತಮಾಧಿಕಾರಿಗಳಿಗೂ ಪೂಜೋಪಕರಣಗಳಾಗಿರುವುವು. ಹೀಗೆಯೇ ಸಮಸ್ತ ಮಂತ್ರಗಳೂ, ಸ್ಥೂಲಸೂಕ್ಷ್ಮಸೂಕ್ಷ್ಮತರಗಳಾಗಿ ಪ್ರಥಮ ಮಧ್ಯಮೋತ್ತಮ ಅಧಿಕಾರಿಗಳ ವಿಷಯಗಳಾಗಿರುವುವು. ಈ ವಿಷಯದಲ್ಲಿ ಇನ್ನೂ ವಿಶೇಷವಾಗಿ ಹೇಳುವುದಿದ್ದರೂ ಪ್ರಕೃತಕ್ಕೆ ಬೇಕಾದುದನ್ನು ಹೇಳಿರುವುದು. ಗುರೂಪದೇಶದಿಂದ ಶಾಸ್ತ್ರವು ಸುಲಭವಾಗಿ ತಿಳಿಯುವುದಲ್ಲದೆ ಫಲವೂ ಹೆಚ್ಚಾದುದಾಗಿರುವುದು. ಆದುದರಿಂದ ಗುರೂಪದೇಶದಿಂದ ತಿಳಿಯಬೇಕೆಂದು ಹೇಳಿರುವುದು. ॥೯॥

ಆಭ್ಯಂತರಪೂಜೆ ಮಾಡುವುದರಲ್ಲಿ ಅಧಿಕಾರವಿದ್ದ ಮನುಷ್ಯನು ಈ ಬಾಹ್ಯಪೂಜೆಯನ್ನು ಬಿಟ್ಟು ಆಭ್ಯಂತರಪೂಜೆಯನ್ನೇ ಮಾಡಬಹುದು. ಬಾಹ್ಯಪೂಜೆಯನ್ನು ಮೊದಲು ಹೇಳಿದುದರಿಂದ ಇದೇ ಮುಖ್ಯವು. ಇತರ ಪೂಜೆಗಳು ನಿಕೃಷ್ಟವು ಎಂಬ ಭ್ರಾಂತಿಯನ್ನು ನಿವಾರಣೆಮಾಡುವುದಕ್ಕಾಗಿ ಸುಲಭವಾದ ಬಾಹ್ಯಪೂಜೆಯನ್ನು ಮೊದಲು ಹೇಳಿರುವುದೆಂದು ತಿಳಿಯಬೇಕು. ಆಭ್ಯಂತರಪೂಜೆಯೇ ಉತ್ತಮವಾದುದು. ಪೂಜಾಸ್ವರೂಪವನ್ನು ಶಾಸ್ತ್ರಗಳಿಂದ ಚನ್ನಾಗಿ ತಿಳಿದುಕೊಳ್ಳುವುದು ಅಥವಾ ಏಕಾಗ್ರಚಿತ್ತತೆಯೇ ಅಧಿಕಾರವೆನಿಸುವುದು. ॥೧೦॥

ಆಭ್ಯಂತರಪೂಜೆಯು ಸಾಧಾರಾ, ನಿರಾಧಾರಾ ಎಂದು ಎರಡು ಬಗೆಯಾಗಿರುವುದು. ನಿರಾಧಾರಪೂಜೆಯೇ ಅತ್ಯುತ್ತಮವಾದುದು. ॥೧೧॥

ಮನಸ್ಸಿನಲ್ಲಿ ಒಂದು ಮೂರ್ತಿಯನ್ನು ಕಲ್ಪಿಸಿಕೊಂಡು ಸಚ್ಚಿದಾನಂದೈಕರಸನಾದ ಪರಶಿವನನ್ನು ಆ ಮೂರ್ತಿಯಲ್ಲಿ ಆವಾಹನಮಾಡುವುದೇ ಸಾಧಾರಪೂಜೆಯು.

ಆರಾಧಯೇದತಿ ಪ್ರೀತ್ಯಾ ಗುರುಣೋಕ್ತೇನ ವರ್ತ್ಮನಾ ।
ಯಾ ಪೂಜಾ ಸಂವಿದಿ ಪ್ರೋಕ್ತಾ ಸಾ ತು ತಸ್ಯಾಂ ಮನೋಲಯಃ ॥೧೩॥

ಸಂವಿದೇವ ಪರಾ ಶಕ್ತಿರ್ನೇತರಾ ಪರಮಾರ್ಥತಃ ।
ಅತಃ ಸಂವಿದಿ ತಾಂ ನಿತ್ಯಂ ಪೂಜಯೇನ್ಮುನಿಸತ್ತಮಾಃ ॥೧೪॥

ಸಂವಿದ್ರೂಪಾತಿರೇಕೇಣ ಯತ್ಕಿಂಚಿತ್ಪ್ರತಿಭಾಸತೇ ।
ಸ ಹಿ ಸಂಸಾರ ಆಖ್ಯಾತಃ ಸರ್ವೇಷಾಮಾತ್ಮನಾಮಪಿ ॥೧೫॥

ಅತಃ ಸಂಸಾರನಾಶಾಯ ಸಾಕ್ಷಿಣೀಮಾತ್ಮರೂಪಿಣೀಂ ।
ಆರಾಧಯೇತ್ಪರಾಂ ಶಕ್ತಿಂ ಪ್ರಪಂಚೋಲ್ಲಾಸವರ್ಜಿತಾಂ ॥೧೬॥

ಸಾಕ್ಷಾತ್ ಜ್ಞಾನಸ್ವರೂಪನಾದ ಆತ್ಮನ ಅನುಸಂಧಾನವೇ ನಿರಾಧಾರವಾದುದು. ಮೂಲಾಧಾರಚಕ್ರದಲ್ಲಿ ವ್ಯಕ್ತವಾದ, ಕಮಲನಾಳದ ಎಳೆಯಂತೆ ಸೂಕ್ಷ್ಮವಾದ, ಕಾಂತಿಯಿಂದ ಕೂಡಿದ ಆಶ್ರಯದಲ್ಲಿ ಬುದ್ಧಿಯಿಂದ ಬಣ್ಣವನ್ನೂ ಮುಖ ಕೈಕಾಲು ಮುಂತಾದ ಅವಯವಗಳನ್ನೂ ಕಲ್ಪಿಸಿ ಆ ಮೂರ್ತಿಯಲ್ಲಿ ಗುರುವು ಹೇಳಿದ ಮಾರ್ಗದಿಂದ ಅತ್ಯಂತ ಪ್ರೀತಿಯಿಂದ ದೇವಿಯನ್ನು ಪೂಜಿಸಬೇಕು. ಜ್ಞಾನಸ್ವರೂಪನಾದ ಆತ್ಮನಲ್ಲಿ ಮನಸ್ಸನ್ನು ಲಯಮಾಡುವುದೇ ನಿರಾಧಾರವಾದ ಪೂಜೆಯು. ಮನೋಲಯವೆಂಬುದು ಮನಸ್ಸಿಗೆ ಮತ್ತೊಂದು ವಿಷಯವು ಬರದೆ ಒಂದೇ ವಿಷಯವು ಪ್ರವಾಹರೂಪವಾಗಿ ಗೋಚರಿಸುವುದು. ||೧೨-೧೩||

ಜ್ಞಾನವೇ ಪರಾಶಕ್ತಿಯೆನಿಸುವುದು. ಶಕ್ತಿ ಎಂಬ ಬೇರೆ ದೇವತೆಯಿಲ್ಲ. ಆತ್ಮನಿಗೂ ಶಕ್ತಿಗೂ ಭೇದವಿಲ್ಲ. ಆದುದರಿಂದಲೇ ಪರಮಾರ್ಥವಾದ ಜ್ಞಾನಸ್ವರೂಪನಾದ ಆತ್ಮನಲ್ಲಿಯೇ, ಆ ಶಕ್ತಿದೇವಿಯನ್ನೂ ಪೂಜಿಸಬೇಕು. ||೧೪||

ಸಮಸ್ತ ಜೀವರುಗಳಿಗೂ, ಜ್ಞಾನಸ್ವರೂಪವನ್ನು ಬಿಟ್ಟು ಬೇರೆಯಾಗಿ ಯಾವ ವಸ್ತುಗಳು ಗೋಚರಿಸುವುವೋ, ಅವುಗಳೆಲ್ಲವೂ ಸಂಸಾರಸ್ವರೂಪಗಳು. ಎಂದರೆ ಪೂಜೆಗೆ ಆಶ್ರಯವಾದುದು, ಪೂಜಿಸುವವನು, ಪೂಜಾಸಾಮಗ್ರಿ, ಈ ಸಮಸ್ತವೂ ಸಂಸಾರಸ್ವರೂಪವಾದುದು. ||೧೫||

ಆದುದರಿಂದ ಜನನಮರಣರೂಪವಾದ ಸಂಸಾರದುಃಖನಾಶಕ್ಕೋಸ್ಕರವಾಗಿ ಆತ್ಮಸ್ವರೂಪಳೂ ಆದ ಪರಾಶಕ್ತಿಯನ್ನು ಪೂಜಿಸಬೇಕು. ||೧೬||

ಸಂವಿದ್ವಾಚಕಶಬ್ದೇನ ಸಂವಿದ್ರೂಪಾಮನಾಕುಲಃ ।
ಅರ್ಚಯೇದಾದರೇಣೈವ ಶಿವಾಮಾದೌ ಮಹಾಮತಿಃ ॥೧೭॥

ಪುನಃ ಸಮಸ್ತಮುತ್ಸೃಜ್ಯ ಸ್ವಪೂರ್ಣಾಂ ಪರಸಂವಿದಂ ।
ಸ್ವಾತ್ಮಸ್ನೈವಾನುಸಂಧಾಯ ಪುನಸ್ತಚ್ಚ ವಿಸರ್ಜಯೇತ್ ॥೧೮॥

ಸ್ವಾನುಭೂತ್ಯಾ ಸ್ವಯಂ ಸಾಕ್ಷಾತ್ ಸ್ವಾತ್ಮಭೂತಾಂ ಮಹೇಶ್ವರೀಂ ।
ಪೂಜಯೇದಾದರೇಣೈವ ಪೂಜಾ ಸಾ ಪುರುಷಾರ್ಥದಾ ॥೧೯॥

ಬುದ್ಧಿವಂತನಾದವನು ಚಿತ್ತಚಾಂಚಲ್ಯವಿಲ್ಲದೆ, ಮೊದಲು ದೇವಿಯನ್ನು ಜ್ಞಾನಸ್ವರೂಪಳನ್ನಾಗಿ ಧ್ಯಾನವಾಚಕವಾದ ಪ್ರಣವ ಮತ್ತೂ ಹೃಲ್ಲೇಖಾಮಂತ್ರಗಳಿಂದ ಭಕ್ತಿಯಿಂದ ಪೂಜಿಸಬೇಕು. ಅಕಾರ, ಉಕಾರ, ಮಕಾರ ಸ್ವರೂಪವೂ, ಬಿಂದುನಾದಶಕ್ತಿಶಾಂತಸ್ವರೂಪವೂ, ತುರೀಯತುರಿಯಾತೀತಶಕ್ತಿ ಶಾಂತಸ್ವರೂಪವೂ, ಆದ ಓಂಕಾರವು ಜಾಗ್ರತ್‌ಸ್ವಪ್ನಸುಷುಪ್ತ್ಯವಸ್ಥೆಗಳಿಗೆ ಸಾಕ್ಷಿಯಾದ ಜ್ಞಾನವನ್ನು ಪ್ರತಿಪಾದಿಸುವುದು. ಕೊನೆಗೆ ಅದು ನಿಷ್ಪ್ರಪಂಚವಾದ ಜ್ಞಾನದಲ್ಲಿ ಪರ್ಯವಸಾನವಾಗುವುದು. ಹೀಗೆಯೇ ಹೃಲ್ಲೇಖಾಮಂತ್ರವಾದ ಹ್ರೀಂಕಾರವು ಹಕಾರ ರೇಫ ಈಕಾರ, ಬಿಂದುನಾದ ಶಕ್ತಿ ಶಾಂತಸ್ವರೂಪವಾದ, ಏಳು ಮಾರ್ಗಗಳಿಂದ ಜ್ಞಾನಸ್ವರೂಪವಾಗಿ ಪರ್ಯವಸಾನವಾಗುವುದು. ॥೧೭॥

ಯೋಗಿಯಾದವನು ಆಲಂಬನೆಯನ್ನೂ, ಜಾಗರಾದಿಕ್ರಮವನ್ನೂ ಬಿಟ್ಟು, ಶ್ರೇಷ್ಠವಾದ ಜ್ಞಾನವನ್ನೇ ಸ್ವಸ್ವರೂಪವನ್ನಾಗಿ ಚಿಂತಿಸುತ್ತ ಆ ಜ್ಞಾನಸ್ವರೂಪನಾಗಿ, ಧ್ಯಾನ, ಧ್ಯಾತೃ, ಧ್ಯೇಯರೂಪವಾದ ವಿಭಾಗಗಳನ್ನು ಚಿಂತಿಸದೆ ಇರಬೇಕು. ॥೧೮॥

ಯಾವಯೋಗಿಗೆ ತಾನು ಮಾಡುವ ಧ್ಯಾನದಲ್ಲಿ ಧ್ಯಾನ, ಧ್ಯಾತೃ, ಧ್ಯೇಯರೂಪವಾದ ವಿಭಾಗಗಳು ಕಾಣದೆ ಜ್ಞಾನಸ್ವರೂಪ ಒಂದೇ ಸಂತತವಾಗಿರುವುದೋ, ಅದೇ ಪರಮಾನಂದರೂಪವೂ ಸ್ವಪ್ರಕಾಶವೂ, ಸ್ವಸ್ವರೂಪವೂ ಆಗಿರುವುದು. ತನ್ನ ಈ ಅನುಭವದಿಂದ ದೇವಿಯೂ ಸ್ವಸ್ವರೂಪವಾಗಿರುವುದರ ಸಾಕ್ಷಾತ್ಕಾರವಾಗುವುದು. ಇದೇ ಪ್ರೀತಿಯಿಂದ ಮಾಡತಕ್ಕ ಜ್ಞಾನಪೂಜೆಯು. ಇದೇ ಸಮಸ್ತ ಸಂಸಾರಕ್ಕೆ ಕಾರಣವಾದ ಅವಿದ್ಯೆಯನ್ನು ನಾಶಗೊಳಿಸಿ ಪ್ರಾರಬ್ಧಕರ್ಮಫಲಾನುಭವಪರ್ಯಂತವಾಗಿ ಜೀವನ್ಮುಕ್ತಿಯನ್ನೂ, ಬಳಿಕ ಪರಮಕೈವಲ್ಯರೂಪವಾದ ಪುರುಷಾರ್ಥವನ್ನೂ ಕೊಡುವುದು. ॥೧೯॥

ಪೂಜಾವಿಧಿರ್ಮಯಾ ಶಕ್ತೇಃ ಪ್ರೋಕ್ತೋ ವೇದೈಕದರ್ಶಿತಃ ।
ಪೂಜಯಧ್ವಂ ಭವಂತೋಽಪಿ ಮುದಾ ತಾಮುಕ್ತವರ್ತ್ಮನಾ ॥೨೦॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ ಶಕ್ತಿಪೂಜಾವಿಧಿರ್ನಾಮ ಪಂಚಮೋಽಧ್ಯಾಯಃ ಸಮಾಪ್ತಃ.

ವೇದದಲ್ಲಿ ಮುಖ್ಯವಾಗಿ ಹೇಳಿರುವ ಶಕ್ತಿಪೂಜಾವಿಧಾನವನ್ನು ಹೇಳಿರುವೆನು. ನೀವೂ ಕೂಡ, ನಾನು ಹೇಳಿದ ಮಾರ್ಗದಿಂದ ಆ ಶಕ್ತಿದೇವಿಯನ್ನು ಪೂಜೆಮಾಡಿರಿ. ಶ್ವೇತಾಶ್ವತರೋಪನಿಷತ್ತಿನಲ್ಲಿ—"ತೇ ಧ್ಯಾನಯೋಗಾನುಗತಾ ಅಪಶ್ಯನ್ ದೇವಾತ್ಮ ಶಕ್ತಿಂ ಸ್ವಗುಣೈರ್ನಿಗೂಢಾಂ" ಎಂದು ಹೇಳಿರುವುದರಿಂದ ಧ್ಯಾನಯೋಗದಿಂದುಂಟಾ ಗುವ, ಜ್ಞಾನಸ್ವರೂಪವಾದ ಮುಕ್ತಿಯನ್ನು ಪಡೆಯಿರಿ. ಎಂದು ಅಭಿಪ್ರಾಯವು.॥೨೦॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ ಶಕ್ತಿಪೂಜೆಯ ಪ್ರಕಾರಗಳವರ್ಣನೆ ಎಂಬ ಐದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಂದಪುರಾಣಾಂತರ್ಗತಾ ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

|| ಷಷ್ಠೋಽಧ್ಯಾಯಃ ||

ಆರನೆಯ ಅಧ್ಯಾಯವು

|| ನೈಮಿಷೀಯಾ ಊಚುಃ ||

ಭಗವನ್ ಶಿವಭಕ್ತಸ್ಯ ಕಥಂ ಪೂಜಾ ಪ್ರಕೀರ್ತಿತಾ ।
ಫಲಂ ಚ ಕೀದೃಶಂ ಪ್ರೋಕ್ತಂ ಪೂಜಾಯಾಸ್ತದ್ವದಾದರಾತ್ ॥೧॥

|| ಸೂತ ಉವಾಚ ||

ವಕ್ಷ್ಯೇ ಪೂಜಾವಿಧಿಂ ವಿಪ್ರಾಃ ಶಿವಭಕ್ತಸ್ಯ ಸಾದರಂ ।
ಶೃಣುಧ್ವಂ ಶ್ರದ್ಧಯೋಪೇತಾಃ ಕುರುಧ್ವಂ ಯತ್ನತಃ ಸದಾ ॥೨॥

ನೈಮಿಷಾರಣ್ಯವಾಸಿಗಳಾದ ಮುನಿಗಳು ಮಹಾಮಹಿಮನಾದ ಸೂತನನ್ನು ಕುರಿತು ವೇದದಲ್ಲಿ ಹೇಳಿದ ಮುಖ್ಯವಾದ ಜ್ಞಾನಸ್ವರೂಪದ ಪೂಜೆಯನ್ನು ಮಾಡಲು ಯಾರು ಶಕ್ತರಲ್ಲವೋ ಅಂಥವರಿಗೆ ಜ್ಞಾನರೂಪವಾದ ಫಲಪ್ರಾಪ್ತಿಯು ಶಿವಭಕ್ತರ ಪೂಜೆಯಿಂದ ಉಂಟಾಗುವುದೆಂದು ತಿಳಿದು ಆ ಶಿವಭಕ್ತರ ಪೂಜಾಕ್ರಮ ವೆಂತು? ಆ ಪೂಜೆಯ ಫಲವೆಂತಹುದು? ಅದನ್ನು ಪ್ರೀತಿಯಿಂದ ಹೇಳಬೇಕೆಂದು ಪ್ರಶ್ನೆಮಾಡಿದರು. ||೧||

ಸೂತನು ಹೇಳಿದನು---ಎಲೈ ಬ್ರಾಹ್ಮಣರೇ, ಶಿವಭಕ್ತರ ಪೂಜಾವಿಧಾನವನ್ನು ಹೇಳುವೆನು. ಆದರದಿಂದಲೂ, ಭಕ್ತಿಯಿಂದಲೂ, ಕೂಡಿ ಅದನ್ನು ಯಾವಾಗಲೂ ಪ್ರಯತ್ನಪೂರ್ವಕವಾಗಿ ಕೇಳಿರಿ. ||೨||

ಯೇನ ಕೇನ ಪ್ರಕಾರೇಣ ಶಿವಭಕ್ತಸ್ಯ ಜಾಯತೇ ।
ಮನಸ್ತೃಪ್ತಿಸ್ತಥಾ ಕುರ್ಯಾತ್ಪೂಜಾ ಸೈವ ಮಯೋದಿತಾ ॥೩॥

ಶುದ್ಧತೋಯಂ ಸಮಾದಾಯ ಶಿವಭಕ್ತಸ್ಯ ಸಾದರಂ ।
ಪಾದಂ ಪ್ರಕ್ಷಾಲಯೇತ್ಸಾಽಪಿ ಪೂಜಾ ವಿಪ್ರಾ ಗರೀಯಸೀ ॥೪॥

ತೈಲಾಭ್ಯಂಗಂ ತಥಾ ಪೂಜಾಂ ಪ್ರವದಂತಿ ಮನೀಷಿಣಃ ।
ಗಾತ್ರಮರ್ದನಮಪ್ಯಸ್ಯ ಶಿವಭಕ್ತಸ್ಯ ಸುವ್ರತಾಃ ॥೫॥

ಅನ್ನಪಾನಪ್ರದಾನಂ ಚ ಪ್ರೋಕ್ತಾ ಪೂಜಾ ಗರೀಯಸೀ ।
ಅರ್ಥದಾನಂ ಚ ಪೂಜಾಸ್ಯಾದ್ವಸ್ತ್ರದಾನಮಪಿ ದ್ವಿಜಾಃ ॥೬॥

ಸ್ರಕ್ಚಂದನಾದಿದಾನಂ ಚ ವನಿತಾದಾನಮೇವ ಚ ।
ಭೂಮಿದಾನಂ ಚ ಗೋದಾನಂ ತಿಲದಾನಮಪಿ ದ್ವಿಜಾಃ ॥೭॥

ಜಲಪಾತ್ರಪ್ರದಾನಂ ಚ ಗೃಹದಾನಂ ತಥೈವ ಚ ।
ತಾಲವೃಂತಪ್ರದಾನಂ ಚ ಪಾತ್ರದಾನಂ ತಥೈವ ಚ ॥೮॥

ಛತ್ರಪಾದುಕಯೋರ್ದಾನಂ ಶಯ್ಯಾದಾನಂ ತಥೈವ ಚ ।
ಶಿವಭಕ್ತಸ್ಯ ಪೂಜೇತಿ ಪ್ರವದಂತಿ ವಿಪಶ್ಚಿತಃ ॥೯॥

ಯಾವ ರೀತಿಯಿಂದಲಾದರೂ, ಶಿವಭಕ್ತನಾದವನ ಮನಸ್ಸಿಗೆ ಸಂತೋಷ ವುಂಟಾಗುವಂತೆ ಮಾಡುವುದೇ ಭಕ್ತರ ಪೂಜೆಯೆಂದು ನಾನು ಹೇಳುವೆನು. ॥೩॥

ಎಲೈ ಬ್ರಾಹ್ಮಣರೇ, ಶುದ್ಧವಾದ ನೀರನ್ನು ತಂದು ಪ್ರೀತಿಯಿಂದ ಶಿವಭಕ್ತರ ಪಾದವನ್ನು ತೊಳೆಯುವುದು ಒಂದು ದೊಡ್ಡ ಪೂಜೆಯು. ॥೪॥

ಎಲೈ ಬ್ರಾಹ್ಮಣರೇ, ಶಿವಭಕ್ತನಿಗೆ ಎಣ್ಣೆಯನ್ನೊತ್ತಿ ನೀರೆರೆಯುವುದು, ಕೈಕಾಲುಗಳನ್ನೊತ್ತುವುದು, ಅನ್ನ, ಹಣ, ವಸ್ತ್ರ, ಹೂವು, ಗಂಧ, ಕನ್ಯಾ, ಭೂಮಿ, ಗೋವು, ಎಳ್ಳು, ನೀರಿನಪಾತ್ರೆ, ಮನೆ, ಬೀಸಣಿಗೆ, ಆವಶ್ಯಕವಾದ ಪಾತ್ರೆ ಛತ್ರಿ, ಪಾದುಕೆ, ಹಾಸಿಗೆ, ಇವುಗಳನ್ನು ದಾನಮಾಡುವುದೂ, ದೊಡ್ಡ ಪೂಜೆಗಳಾಗುವುವು. ॥೫-೬-೭-೮-೯॥

ಪುರಾ ಕಶ್ಚಿದ್ದ್ವಿಜಾ ವೈಶ್ಯಃ ಸಮೃದ್ಧೋಽಭೂನ್ಮಹೀತಲೇ ।
ತಸ್ಯ ಪುತ್ರಾಃ ಸಮುತ್ಪನ್ನಾಶ್ಚತ್ವಾರೋ ವೇದವಿತ್ತಮಾಃ ॥೧೦॥

ತೇಷಾಂ ಜ್ಯೇಷ್ಠತಮಃ ಪುತ್ರಃ ಸತ್ಯವಾದೀ ಮಹಾಧನಃ ।
ಸರ್ವಭೂತಾನುಕಂಪೀ ಚ ಬ್ರಹ್ಮಚರ್ಯಪರಾಯಣಃ ॥೧೧॥

ಶಿವಭಕ್ತಃ ಸದಾ ವಿಪ್ರಾಃ ಪ್ರಸನ್ನೋ ನಿಯತಾಶನಃ ।
ಜನ್ಮಮೃತ್ಯುಭಯಾಕ್ರಾಂತಸ್ತ್ವರಮಾಣೋ ವಿಮುಕ್ತಯೇ ॥೧೨॥

ಶ್ರೀಮದ್ವಾರಾಣಸೀಮೇತ್ಯ ಬ್ರಹ್ಮವಿಷ್ಣ್ವಾದಿಸೇವಿತಾಂ ।
ಸ್ವಧನಂ ಶಿವಭಕ್ತೇಭ್ಯಃ ಪ್ರದತ್ವಾ ಶ್ರದ್ಧಯಾ ಸಹ ॥೧೩॥

ಪೂಜಯಾ ಶಿವಭಕ್ತಾನಾಂ ವಿಮುಕ್ತಃ ಕರ್ಮಬಂಧನಾತ್ ।
ದ್ವಿತೀಯೋ ವೈಶ್ಯಪುತ್ರಸ್ತು ಧನಿಕೋಽತೀವ ಸುವ್ರತಾಃ ॥೧೪॥
ಸೋಮನಾಥಂ ಮಹಾಸ್ಥಾನಂ ಸರ್ವಕಾಮಫಲಪ್ರದಂ ।

ವೇದಜ್ಞರಲ್ಲಿ ಶ್ರೇಷ್ಠರಾದ ಬ್ರಾಹ್ಮಣರೇ, ಕೇಳಿರಿ. ಪೂರ್ವಕಾಲದಲ್ಲಿ, ಭೂಮಿಯಲ್ಲಿ ಒಬ್ಬ ವೈಶ್ಯನು ಸಮಸ್ತ ಸಂಪತ್ತುಗಳಿಂದ ಕೂಡಿದ್ದನು. ಅವನಿಗೆ ನಾಲ್ವರು ಮಕ್ಕಳು ಹುಟ್ಟಿದರು. ಅವರಲ್ಲಿ ಹಿರಿಯನಾದವನು ಸತ್ಯವಾದಿಯಾಗಿಯೂ, ಬ್ರಹ್ಮಚರ್ಯವ್ರತದಲ್ಲಿ ಆಸಕ್ತನಾಗಿಯೂ, ಸಮಸ್ತ ಪ್ರಾಣಿಗಳಲ್ಲಿಯೂ ದಯೆಯುಳ್ಳವನಾಗಿಯೂ, ಮಹಾಧನವಂತನಾಗಿಯೂ ಇದ್ದನು. ॥೧೦-೧೧॥

ಅವನು ಯಾವಾಗಲೂ, ಶಿವನಲ್ಲಿ ಭಕ್ತಿಯುಳ್ಳವನಾಗಿ, ನಿಯತವಾಗಿ ಭೋಜನ ಮಾಡುತ್ತ ಸಂತೋಷಚಿತ್ತವುಳ್ಳವನಾಗಿದ್ದು ಜನ್ಮಮರಣಗಳ ಭಯವುಳ್ಳವನಾಗಿ ಮುಕ್ತನಾಗಬೇಕೆಂಬ ಆತುರದಿಂದ ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಸೇವಿಸುತ್ತಿರುವ ಸಂಪದ್ಯುಕ್ತವಾದ ಕಾಶೀಪಟ್ಟಣಕ್ಕೆ ಹೋಗಿ, ಭಕ್ತಿಯಿಂದ ತನ್ನಲ್ಲಿದ್ದ ಹಣವನ್ನು ಶಿವಭಕ್ತರಿಗೆ ದಾನಮಾಡಿ ಆ ಶಿವಭಕ್ತರ ಪೂಜೆಯಿಂದ ಕರ್ಮದ ಕಟ್ಟನ್ನು ಕಳೆದುಕೊಂಡು ಮೋಕ್ಷವನ್ನು ಪಡೆದನು. ॥೧೨-೧೩॥

ಎರಡನೆಯ ಮಗನು ಅತ್ಯಂತ ಧನಿಕನಾಗಿದ್ದನು. ಅವನು ಸೋಮನಾಥ ಕ್ಷೇತ್ರಕ್ಕೆ ತನ್ನ ಪತ್ನಿಯೊಡನೆ ಪ್ರಯಾಣಮಾಡಿ ಸಮಸ್ತ ಇಷ್ಟಾರ್ಥಗಳನ್ನು ಕೊಡುವ ಆ ಸೋಮನಾಥೇಶ್ವರನ ಸನ್ನಿಧಿಯಲ್ಲಿ ತನ್ನ ಸಮಸ್ತ ಧನವನ್ನೂ ಶಿವಭಕ್ತರಿಗೆ

ಸಮಾಗತ್ಯ ಸಹ ಸ್ವಸ್ಯ ಭಾರ್ಯಯಾ ವೇದವಿತ್ತಮಾಃ ॥೧೫॥

ಸರ್ವಸ್ವಂ ಶಿವಭಕ್ತೇಭ್ಯಃ ಪ್ರದತ್ವಾ ಶ್ರದ್ಧಯಾ ಸಹ ।
ಪೂಜಯಾ ಶಿವಭಕ್ತಾನಾಂ ತಥಾ ಮುಕ್ತಿಮವಾಪ್ತವಾನ್ ॥೧೬॥

ಪುತ್ರಸ್ತೃತೀಯೋ ವೈಶ್ಯಸ್ಯ ಪ್ರೋಜ್ಝಿತಾಶೇಷಬಾಂಧವಃ ।
ಅನ್ಯಾಯೇನೈವ ಮಾರ್ಗೇಣ ವರ್ತಮಾನಶ್ಚಿರಂ ದ್ವಿಜಾಃ ॥೧೭॥

ಮಹಾಧನಪತಿರ್ಭೂತ್ವಾ ಪೂರ್ವಪುಣ್ಯಬಲೇನ ಸಃ ।
ಶ್ರೀಮದ್ವ್ಯಾಘ್ರಪುರಂ ಪುಣ್ಯಂ ಸಮಾಗತ್ಯ ದ್ವಿಜೋತ್ತಮಃ ॥೧೮॥

ಅನ್ನಪಾನಂ ತಥಾ ವಸ್ತ್ರಂ ಚಂದನಂ ಪುಷ್ಪಮೇವ ಚ ।
ತಾಂಬೂಲಂ ಶಿವಭಕ್ತೇಭ್ಯಃ ಪ್ರದತ್ವಾ ಶ್ರದ್ಧಯಾ ಸಹ ॥೧೯॥

ಸಂವತ್ಸರತ್ರಯಂ ಕೃತ್ವಾ ಪೂಜಾಮೇವ ದ್ವಿಜೋತ್ತಮಾಃ ।
ಪೂಜಯಾ ಶಿವಭಕ್ತಾನಾಂ ವಿಮುಕ್ತಃ ಕರ್ಮಬಂಧನಾತ್ ॥೨೦॥

ವೈಶ್ಯಪುತ್ರಶ್ಚತುರ್ಥೋಽಪಿ ಬ್ರಾಹ್ಮಣಾನವಿಚಾರತಃ ।
ಹತ್ವಾ ಸರ್ವಧನಂ ತೇಷಾಂ ಸಮಾದಾಯ ಮುನೀಶ್ವರಾಃ ॥೨೧॥

ಪ್ರೀತಿಯಿಂದ ಕೊಟ್ಟು ಆ ಶಿವಭಕ್ತರ ಪೂಜೆಯಿಂದುಂಟಾದ ಫಲದಿಂದ ಮೋಕ್ಷವನ್ನು ಪಡೆದನು. ||೧೪-೧೫-೧೬||

ಮೂರನೆಯ ಮಗನು ತನ್ನ ಬಂಧುಗಳೆಲ್ಲರನ್ನೂ ಬಿಟ್ಟು ಬಹಳ ಕಾಲದ ವರೆಗೆ ಅನ್ಯಾಯಮಾರ್ಗದಿಂದ ನಡೆಯುತ್ತಾ ವಿಶೇಷ ಧನವನ್ನು ಸಂಪಾದಿಸಿ ಯಾವುದೋ ಪೂರ್ವಜನ್ಮದ ಮಹಿಮೆಯಿಂದ ಪುಣ್ಯಕರವಾದ ವ್ಯಾಘ್ರಪುರಕ್ಕೆ ಹೋಗಿ, ಅನ್ನ ನೀರು, ವಸ್ತ್ರ, ಹೂ, ಗಂಧ, ತಾಂಬೂಲ, ಇವುಗಳನ್ನು ಭಕ್ತಿಯಿಂದ ಶಿವಭಕ್ತರಿಗೆ ಕೊಡುತ್ತ ಮೂರು ವರ್ಷಗಳ ವರೆಗೆ ಶಿವಭಕ್ತರ ಪೂಜೆಯನ್ನು ಮಾಡಿ ಇದರ ಫಲದಿಂದ ತಾನು ಮಾಡಿದ ಪಾಪಕರ್ಮಗಳ ಫಲವನ್ನು ನಾಶಮಾಡಿಕೊಂಡು ಮೋಕ್ಷವನ್ನು ಹೊಂದಿದನು. ||೧೭-೧೮-೧೯-೨೦||

ನಾಲ್ಕನೆಯ ಮಗನು ಯುಕ್ತಾಯುಕ್ತ ವಿವೇಚನೆಯನ್ನು ಮಾಡದೆ ಬ್ರಾಹ್ಮಣರನ್ನು ಕೊಂದು ಅವರ ಹಣವನ್ನೆಲ್ಲವನ್ನೂ ತೆಗೆದುಕೊಂಡು, ವಿಟರಿಗೂ ನಟರಿಗೂ,

ವಿಟಾನಾಂ ಚ ನಟಾನಾಂ ಚ ಗಾಯಕೀನಾಂ ತಥೈವ ಚ ।
ಮೂರ್ಖಾಣಾಮಪಿ ದತ್ವಾ ಸ ಸದಾ ವೇಶ್ಯಾಪರೋಽಭವತ್ ॥೨೨॥

ಸ ಪುನಃ ಸರ್ವರೋಗಾರ್ತೋ ಗೃಹೀತೋ ಬ್ರಹ್ಮರಕ್ಷಸಾ ।
ಏವಂ ಚಿರಗತೇ ಕಾಲೇ ಪಿತಾ ತಸ್ಯ ಮಹಾಧನಃ ॥೨೩॥

ಪುತ್ರಸ್ನೇಹೇನ ಸಂತಪ್ತಃ ಸತ್ವರಂ ದ್ವಿಜಪುಂಗವಂ ।
ಸರ್ವಶಾಸ್ತ್ರಾರ್ಥತತ್ವಜ್ಞಂ ಸಮಾಗತ್ಯ ಮುನೀಶ್ವರಾಃ ॥೨೪॥

ಪ್ರಣಮ್ಯ ದಂಡವದ್ವಿಪ್ರಂ ದತ್ವಾ ತಸ್ಮೈ ಮಹಾಧನಂ ।
ಪುನರ್ವಿಜ್ಞಾಪಯಾಮಾಸ ಪುತ್ರವೃತ್ತಮಶೇಷತಃ ॥೨೫॥

ಶ್ರುತ್ವಾ ವೃತ್ತಂ ದ್ವಿಜಸ್ತಸ್ಯ ಬ್ರಾಹ್ಮಣೈಃ ಪಂಡಿತೋತ್ತಮೈಃ ।
ವಿಚಾರ್ಯ ಸುಚಿರಂ ಕಾಲಂ ವಿನಿಶ್ಚಿತ್ಯಾಬ್ರವೀದ್ದ್ವಿಜಾಃ ॥೨೬॥

॥ ಬ್ರಾಹ್ಮಣ ಉವಾಚ ॥

ಶ್ರೀಮದ್ವೃದ್ಧಾಚಲಂ ನಾಮ ಸ್ಥಾನಂ ಸರ್ವನಿಷೇವಿತಂ ।
ಸರ್ವೋಪದ್ರವನಾಶಾಯ ಶಂಕರೇಣ ವಿನಿರ್ಮಿತಂ । ॥೨೭॥

ಗಾಯಕರಿಗೂ, ಮೂರ್ಖರಿಗೂ ಕೊಟ್ಟು, ತಾನು ಯಾವಾಗಲೂ ವೇಶ್ಯಾಸಕ್ತನಾಗಿದ್ದನು. ಇವನ ಈ ನಡತೆಗಳಿಂದ ಅನೇಕ ರೋಗಗಳು ಪ್ರಾಪ್ತವಾಗಿ, ನರಳುತ್ತ ಕೊನೆಗೆ ಬ್ರಹ್ಮರಾಕ್ಷಸನ ಬಾಧೆಯನ್ನೂ ಹೊಂದಿದನು. ॥೨೧-೨೨॥

ಹೀಗೆಯೇ ಬಹಳಕಾಲ ಕಳೆಯಲು ಮಹಾಧನವಂತನಾದ ಅವನ ತಂದೆಯು ಮಗನ ಮೇಲಿನ ಪ್ರೀತಿಯಿಂದ ಅವನ ನಡತೆಯಿಂದ ದುಃಖಿಸುತ್ತ ಸಕಲಶಾಸ್ತ್ರಾರ್ಥಗಳನ್ನೂ ತಿಳಿದ ಒಬ್ಬ ಬ್ರಾಹ್ಮಣನ ಸಮೀಪಕ್ಕೆ ಬಂದು ಸಾಷ್ಟಾಂಗನಮಸ್ಕಾರವನ್ನು ಮಾಡಿ ವಿಶೇಷವಾಗಿ ಧನವನ್ನು ಕೊಟ್ಟು ತನ್ನ ಮಗನ ಎಲ್ಲಾ ನಡತೆಯನ್ನು ಹೇಳಿದನು. ॥೨೩-೨೪-೨೫॥

ಬ್ರಾಹ್ಮಣನು ಅವನ ನಡತೆಯನ್ನು ಕೇಳಿ ವಿದ್ವಾಂಸರಲ್ಲಿ ಬಹಳ ದಿನ ವಿಚಾರಮಾಡಿ ನಿಶ್ಚಯಿಸಿ ಹೇಳಿದನು. ॥೨೬॥

ಜೀವರುಗಳ ಸಮಸ್ತ ಬಾಧೆಗಳನ್ನೂ ನಾಶಮಾಡುವುದಕ್ಕಾಗಿ ಶಿವನು ವೃದ್ಧಾಚಲವೆಂಬ ಸ್ಥಾನವನ್ನು ನಿರ್ಮಿಸಿರುವನು. ಬ್ರಹ್ಮ ವಿಷ್ಣು ಮುಂತಾದ ದೇವತೆ

ಬ್ರಹ್ಮವಿಷ್ಣ್ವಾದಿಭಿರ್ನಿತ್ಯಂ ಸೇವಿತಂ ಸರ್ವದಾಽಽದರಾತ್ ।
ನರಾಣಾಂ ದರ್ಶನಾದೇವ ವತ್ಸರಾದ್ಭುಕ್ತಿಮುಕ್ತಿದಂ ॥೨೮॥

ಅಲ್ಪದಾನೇನ ಸರ್ವೇಷಾಂ ಮಹಾದಾನಫಲಪ್ರದಂ ।
ಬ್ರಹ್ಮಹತ್ಯಾಸುರಾಪಾನಸ್ವರ್ಣಸ್ತೇಯಾದಿನಾಶನಂ ॥೨೯॥

ಅಗಸ್ತ್ಯೇನ ಚ ರಕ್ಷಾರ್ಥಂ ಲೋಕಾನಾಂ ಪೂಜಿತಂ ಪುರಾ ।
ಮಣಿಮುಕ್ತಾ ನದೀತೀರೇ ಸರ್ವತೀರ್ಥ ಸಮಾವೃತೇ ॥೩೦॥

ಅಸ್ತಿ ತತ್ಸಹಪುತ್ರೇಣ ಸಮಾಗತ್ಯ ಮಮ ಪ್ರಿಯಃ ।
ನದ್ಯಾಮಸ್ಯಾಂ ಸ್ವಪುತ್ರೇಣ ಸಹ ಸ್ನಾತ್ವಾ ದಿನೇ ದಿನೇ ॥೩೧॥

ಶ್ರೀಮದ್ವೃದ್ಧಾಚಲೇಶಾನಂ ದಂಡವತ್ಪ್ರಣಿಪತ್ಯ ಚ ।
ಕೃತ್ವಾ ಪ್ರದಕ್ಷಿಣಂ ಭಕ್ತ್ಯಾ ಶತಮಷ್ಟೋತ್ತರಂ ವರಂ ॥೩೨॥

ಗಳೂ ಯಾವಾಗಲೂ ಅಲ್ಲಿ ಸೇವೆಯನ್ನು ಮಾಡುತ್ತಿರುವರು. ಮನುಷ್ಯರು ಆ ಸ್ಥಳವನ್ನು ದರ್ಶನಮಾಡಿದ ಮಾತ್ರಕ್ಕೇ ಒಂದು ವರ್ಷದೊಳಗಾಗಿ ಭುಕ್ತಿಮುಕ್ತಿ ರೂಪವಾದ ಫಲವನ್ನು ಹೊಂದುವರು. ಅಲ್ಲಿ ಮಾಡಿದ ಅಲ್ಪವಾದ ದಾನವೂ, ಮಹಾದಾನ ಫಲವನ್ನು ಕೊಡುವುದು. ಬ್ರಹ್ಮಹತ್ಯ, ಸುರಾಪಾನ, ಸುವರ್ಣಸ್ತೇಯ ಮುಂತಾದ ಮಹಾಪಾಪಗಳೂ ಅಲ್ಲಿ ನಾಶವಾಗುವುವು. ||೨೭-೨೮-೨೯||

ಲೋಕರಕ್ಷಣೆಗಾಗಿ ಅಗಸ್ತ್ಯಮುನಿಯು ವೃದ್ಧಾಚಲೇಶ್ವರನನ್ನು ಅಲ್ಲಿ ಮೊದಲು ಪೂಜಿಸಿದನು. ಅದು ಮಣಿಮುಕ್ತಾ ಎಂಬ ನದಿಯ ದಡದಲ್ಲಿ, ಸಮಸ್ತ ತೀರ್ಥಗಳಿಂದಲೂ ಕೂಡಿರುವುದು. ಅಲ್ಲಿಗೆ ನಿನ್ನ ಪುತ್ರನೊಡನೆ ಹೋಗಿ ಸ್ನಾನವನ್ನು ಮಾಡಿ ವೃದ್ಧಾಚಲೇಶ್ವರನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಶಿವನಿಗೆ ಭಕ್ತಿಯಿಂದ ನೂರೆಂಟು ಪ್ರದಕ್ಷಿಣೆಯನ್ನು ಮಾಡಿ, ವೈಶ್ಯರು, ಬ್ರಾಹ್ಮಣರು, ಇತರರು ಯಾರಾದರೂ, ಶಿವಭಕ್ತರನ್ನು ಪೂಜಿಸಿ ಆ ಸ್ಥಳದಲ್ಲಿಯೇ ಪ್ರಯತ್ನ ಪೂರ್ವಕವಾಗಿ ನಿನ್ನ ಮಗನ ಕಷ್ಟವನ್ನು ನಿವಾರಿಸಿ ಕಾಪಾಡು. ಎಂದು ಬ್ರಾಹ್ಮಣನು ಹೇಳಿದನು.

ವಾರಾಣಸೀ, ಸೋಮನಾಥ, ವ್ಯಾಘ್ರಪುರ, ವೃದ್ಧಾಚಲ ಎಂಬ ಕ್ಷೇತ್ರಗಳು ಮಹಾಪುಣ್ಯಸ್ಥಳಗಳಾದರೂ ಅದರ ಬಲದಿಂದ ವಿವೇಕವು ಪ್ರಾಪ್ತವಾಗಲು ಕೊನೆಗೆ ಶಿವಭಕ್ತರ ಪೂಜೆಯಿಂದಲೇ ಪರಮ ಪುರುಷಾರ್ಥವು ಉಂಟಾಯಿತೆಂದು ತಿಳಿಸುವುದ

ಪ್ರಸಾದಯಿತ್ವಾ ಸದ್ವೈಶ್ಯ ಬ್ರಾಹ್ಮಣಂ ಚಾನ್ಯಮೇವ ಚ ।
ಶಿವಭಕ್ತಂ ಸಮಾರಾಧ್ಯ ಸ್ಥಾನೇಽಸ್ಮಿನ್ ಶ್ರದ್ಧಯಾ ಸಹ ॥೩೩॥

॥ ಸೂತ ಉವಾಚ ॥

ಪೂಜಯಾ ಶಿವಭಕ್ತಸ್ಯ ಪುತ್ರಮುದ್ಧರ ಯತ್ನತಃ ।
ಏವಮುಕ್ತಸ್ತು ವೈಶ್ಯೋಽಪಿ ಬ್ರಾಹ್ಮಣೇನ ಸಮಾಹಿತಃ ।
ಸಹ ಪುತ್ರೇಣ ಚಾರ್ಥೇನ ಭಾರ್ಯಯಾ ಬಂಧುಬಾಂಧವೈಃ ॥೩೪॥

ಶ್ರೀಮದ್ವೃದ್ಧಾಚಲಂ ಪುಣ್ಯಂ ಸಮಾಗತ್ಯ ಮುನೀಶ್ವರಾಃ ।
ಮಣಿಮುಕ್ತಾನದೀತೋಯೇ ಮಹಾಪಾಪವಿನಾಶನೇ ॥೩೫॥

ಸ್ನಾನಂ ಕೃತ್ವಾ ಮಹಾದೇವಂ ಶ್ರಿಮದ್ವೃದ್ಧಾಚಲೇಶ್ವರಂ ।
ಭಕ್ತ್ಯಾ ಪ್ರದಕ್ಷಿಣೀಕೃತ್ಯ ನಿತ್ಯಮಷ್ಟೋತ್ತರಂ ಶತಂ ॥೩೬॥

ಮನೋರಮಂ ಮಠಂ ಕೃತ್ವಾ ದತ್ವಾ ತಚ್ಛಿವಯೋಗಿನೇ ।
ನಿತ್ಯಂ ಪ್ರಪೂಜಯಾಮಾಸ ಶಿವಭಕ್ತಾನತಿಪ್ರಿಯಃ ॥೩೭॥

ಕ್ಕಾಗಿ ನಾಲ್ಕು ಉದಾಹರಣೆಗಳನ್ನು ಕೊಟ್ಟಿರುವುದು. ಆದುದರಿಂದಲೇ,—ಅದತ್ವಾ ಮುಷ್ಟಿಮಾತ್ರಂ ಯೋ ದೇಶೇಽಸ್ಮಿನ್ ಮುನಿಪುಂಗವಾಃ । ಯೋ ಭುಙ್ಕ್ತೇ ತಸ್ಯ ಸಂಸಾರಾನ್ನಹಿ ಮುಕ್ತಿಃ ಕದಾಚನ ॥ ಎಂದೂ, “ ಪೂಜಯಾ ಶಿವಭಕ್ತಾನಾಂ ಭೋಗಮೋಕ್ಷೌ ಚ ನಾನ್ಯತಃ ” ॥ ಎಂದೂ ಮುಂದೆ ಹೇಳುವರು. ॥೩೦-೩೧-೩೨-೩೩॥

ಸೂತನು ಹೇಳಿದನು—ಬ್ರಾಹ್ಮಣನು ಹೀಗೆ ಹೇಳಲು ವೈಶ್ಯನು ಒಂದೇ ಮನಸ್ಸಿನಿಂದ ಕೇಳಿ ಮಗನೊಡನೆ ಬೇಕಾದಷ್ಟು ಹಣವನ್ನು ತೆಗೆದುಕೊಂಡು ನಂಟರಿಷ್ಟರೊಡಗೂಡಿ ಪುಣ್ಯಕ್ಷೇತ್ರವಾದ ವೃದ್ಧಾಚಲಕ್ಕೆ ಬಂದು ಮಣಿಮುಕ್ತಾ ನದಿಯಲ್ಲಿ ಸ್ನಾನಮಾಡಿ ಪ್ರತಿದಿನವೂ, ವೃದ್ಧಾಚಲೇಶ್ವರನಿಗೆ ಭಕ್ತಿಯಿಂದ ನೂರೆಂಟು ಪ್ರದಕ್ಷಿಣೆಯನ್ನು ಮಾಡಿ ಒಂದು ಮನೋಹರವಾದ ಮಠವನ್ನು ಕಟ್ಟಿಸಿ ಅದನ್ನೊಬ್ಬ ಶಿವಯೋಗಿಗೆ ಕೊಟ್ಟು ಪ್ರತಿದಿನವೂ ಅತ್ಯಂತ ಪ್ರೀತಿಯಿಂದ ಶಿವಭಕ್ತರನ್ನು ಪೂಜಿಸುತ್ತಿದ್ದನು. ॥೩೪-೩೫-೩೬-೩೭॥

ಧನೇನ ಧಾನ್ಯೇನ ತಿಲೇನ ತಂಡುಲೈ
ಸ್ತಥೈವ ತೈಲೇನ ತಥೋದಕೇನ ಚ ।
ದುಕೂಲಪುಷ್ಪಾಭರಣೈರಪಿ ದ್ವಿಜಾ
ಮನೋಽನುಕೂಲೇನ ಚ ಪೂಜನೇನ ॥೩೮॥

ಏವಂ ಸಂವತ್ಸರೇಽತೀತೇ ಪುತ್ರೋ ನೀರೋಗತಾಂ ಗತಃ ।
ಪೂಜಯಾ ಶಿವಭಕ್ತಾನಾಂ ನಿವೃತ್ತೋ ಬ್ರಹ್ಮರಾಕ್ಷಸಃ ॥೩೯॥

ಸ ಪುನಃ ಶಿವಭಕ್ತೇಭ್ಯಃ ಪ್ರದತ್ವಾ ಧನಮಾರ್ಜಿತಂ ।
ಅಸ್ಮಿನ್ ದೇಶೇ ವಿಮುಕ್ತೋಽಭೂತ್ಪೂಜಯಾ ಪರಯಾಽನಯಾ ॥೪೦॥

ಪಿತಾ ತಸ್ಯ ಮಹಾಧೀಮಾನ್ ದೇಶಸ್ಯಾಸ್ಯ ತಪೋಧನಾಃ ।
ಜ್ಞಾತ್ವಾ ಮಾಹಾತ್ಮ್ಯಮಾಹ್ಲಾದಾತ್ಸರ್ವಸ್ವಂ ವೇದವಿತ್ತಮಾಃ ॥೪೧॥

ಪ್ರದತ್ವಾ ಶಿವಭಕ್ತಾನಾಂ ವಿಮುಕ್ತಃ ಕರ್ಮಬಂಧನಾತ್ ।
ತಸ್ಯ ಬಂಧುಜನಾಶ್ಚೈವ ಶಿವಭಕ್ತಸ್ಯ ಪೂಜಯಾ ॥೪೨॥
ಅನಾಯಾಸೇನ ಸಂಸಾರಾದ್ವಿಮುಕ್ತಾಸ್ತತ್ರ ಸುವ್ರತಾಃ ।

ಧನ, ಧಾನ್ಯ, ಎಳ್ಳು, ಅಕ್ಕಿ, ಎಣ್ಣೆ, ನೀರು, ವಸ್ತ್ರ, ಹೂ, ಆಭರಣ ಮುಂತಾದ ಮನಸ್ಸಿಗೆ ಬೇಕಾದ ವಸ್ತುಗಳಿಂದ ಶಿವಭಕ್ತರನ್ನು ಪೂಜಿಸಿದನು. ॥೩೮॥

ಹೀಗೆ ಒಂದು ವರ್ಷ ಕಳೆಯಲು ಶಿವಭಕ್ತರ ಪೂಜೆಯಿಂದ ವೈಶ್ಯಪುತ್ರನ ರೋಗವು ನಾಶವಾಯಿತು. ಬ್ರಹ್ಮರಾಕ್ಷಸನೂ ಬಿಟ್ಟುಹೋದನು. ಆ ಮಗನು ತಾನು ಸಂಪಾದಿಸಿದ್ದ ಧನವನ್ನೆಲ್ಲವನ್ನೂ ಶಿವಭಕ್ತರಿಗೆ ದಾನಮಾಡಿ ಶ್ರೇಷ್ಠವಾದ ಪೂಜೆಯಿಂದ ಆ ಪ್ರದೇಶದಲ್ಲಿಯೇ ಮುಕ್ತಿಯನ್ನು ಹೊಂದಿದನು. ॥೩೯-೪೦॥

ಎಲೈ ತಪಸ್ವಿಗಳೇ, ಬುದ್ಧಿವಂತನಾದ ಆ ವೈಶ್ಯನ ತಂದೆಯೂ ಕೂಡ ಆ ಕ್ಷೇತ್ರದ ಮತ್ತು ಶಿವಭಕ್ತರ ಪೂಜೆಯ ಮಹಿಮೆಯನ್ನು ತಿಳಿದು ಸಂತೋಷದಿಂದ ತನ್ನ ಸರ್ವಸ್ವವನ್ನೂ ಶಿವಭಕ್ತರಿಗೆ ದಾನಮಾಡಿ ಕರ್ಮಬಂಧನವನ್ನು ಕಳೆದುಕೊಂಡನು. ಅವನ ನಂಟರಿಷ್ಟರೂ ಶಿವಭಕ್ತರ ಪೂಜೆಯಿಂದ ಆಯಾಸವಿಲ್ಲದೆ ಸಂಸಾರದಿಂದ ಮುಕ್ತರಾದರು. ॥೪೧-೪೨॥

ಅಸ್ಮಿನ್ ದೇಶೇ ಪ್ರದತ್ತಂ ಯನ್ಮುಷ್ಟಿಮಾತ್ರಮಪಿ ದ್ವಿಜಾಃ ॥೪೩॥
ತದನಂತಂ ಭವತ್ಯೇವ ನಾತ್ರ ಕಾರ್ಯಾ ವಿಚಾರಣಾ ।
ಅದತ್ವಾ ಮುಷ್ಟಿಮಾತ್ರಂ ಯೋ ದೇಶೇಽಸ್ಮಿನ್ಮುನಿಸತ್ತಮಾಃ ॥೪೪॥
ಯೋ ಭುಂಜ್ತೇ ತಸ್ಯ ಸಂಸಾರಾನ್ನ ಹಿ ಮುಕ್ತಿಃ ಕದಾಚನ ।
ಅಗಸ್ತ್ಯಶಿಷ್ಯೋ ಧರ್ಮಿಷ್ಠಃ ಶ್ವೇತಾಖ್ಯೋ ಭಗವಾನ್ಮುನಿಃ ॥೪೫॥
ವೈಶ್ಯಪುತ್ರಸ್ಯ ವೈಶ್ಯಸ್ಯ ಬಂಧೂನಾಮಪಿ ಸುವ್ರತಾಃ ।
ಶ್ರುತ್ವಾ ಮುಕ್ತಿಮಗಸ್ತ್ಯೇನ ಪ್ರೇರಿತೋ ಮುನಿಸತ್ತಮಾಃ ॥೪೬॥
ಪ್ರಾಪ್ಯೈತಚ್ಛ್ರದ್ಧಯಾ ಸ್ಥಾನಂ ಶ್ರೀಮದ್ವೃದ್ಧಾಚಲಾಭಿದಂ ।
ಮಣಿಮುಕ್ತಾನದೀತೋಯೇ ಸ್ನಾನಂ ಕೃತ್ವಾ ಸಮಾಹಿತಃ ॥೪೭॥
ಅರ್ಕವಾರೇ ತಥಾಽಷ್ಟಮ್ಯಾಂ ಪರ್ವಣ್ಯಾದ್ರಾದಿನೇ ತಥಾ ।
ಮಘರ್ಕ್ಷೇ ಚ ಮಹಾದೇವಂ ಶ್ರೀಮದ್ವೃದ್ಧಾಚಲೇಶ್ವರಂ ॥೪೮॥
ಪೂಜಯಾಮಾಸ ಧರ್ಮಾತ್ಮಾ ಮಣಿಮುಕ್ತಾನದೀಜಲೈಃ ।

ಈ ಶಿವಕ್ಷೇತ್ರದಲ್ಲಿ ದಾನಮಾಡಿದುದು ಒಂದು ಹಿಡಿಯಷ್ಟಾದರೂ, ಅದು ಅನೇಕವಾದ ಫಲವನ್ನು ಕೊಡುವುದೆಂಬ ವಿಷಯದಲ್ಲಿ ಸಂದೇಹಪಡಬೇಕಾಗಿಲ್ಲ. ಈ ಕ್ಷೇತ್ರದಲ್ಲಿ ಒಂದು ಹಿಡಿಯನ್ನಾದರೂ, ದಾನಮಾಡದೆ ಯಾವನು ಊಟ ಮಾಡುವನೋ ಅವನಿಗೆ ಯಾವಾಗಲೂ ಸಂಸಾರದ ಕಟ್ಟಿನಿಂದ ಬಿಡುಗಡೆಯಾಗುವುದಿಲ್ಲ. ||೪೩-೪೪||

ಎಲೈ ಮುನಿಶ್ರೇಷ್ಠರೇ, ಕೇಳಿರಿ. ವೈಶ್ಯಪುತ್ರನಿಗೂ, ವೈಶ್ಯನಿಗೂ, ಅವನ ಬಂಧುಗಳಿಗೂ, ಮುಕ್ತಿಯಾದುದನ್ನು ಅಗಸ್ತ್ಯಮುನಿಯ ಶಿಷ್ಯನಾದ ಶ್ವೇತನೆಂಬ ಮಹಾಮುನಿಯು ಕೇಳಿ ಅಗಸ್ತ್ಯರ ಮಾತಿನಿಂದ ವೃದ್ಧಾಚಲಕ್ಷೇತ್ರಕ್ಕೆ ಹೋಗಿ ಭಕ್ತಿಯಿಂದ ಮಣಿಮುಕ್ತಾನದಿಯಲ್ಲಿ ಸ್ನಾನವನ್ನು ಮಾಡಿ, ಭಾನುವಾರ, ಅಷ್ಟಮಿ, ಅಮಾವಾಸ್ಯ, ಪೂರ್ಣಿಮಾ, ಆರ್ದ್ರಾನಕ್ಷತ್ರ, ಮಘಾನಕ್ಷತ್ರ ಈ ದಿನಗಳಲ್ಲಿ ಮಣಿಮುಕ್ತಾನದಿಯ ನೀರಿನಿಂದ ವೃದ್ಧಾಚಲೇಶ್ವರನನ್ನು ಅಭಿಷೇಕಮಾಡಿ ಪೂಜಿಸಿದನು. ||೪೫-೪೬-೪೭-೪೮||

ತಜ್ಜಲಂ ಪೂಜಿತಂ ತೇನ ಶ್ವೇತೇನೈವಾಭವನ್ನದೀ ॥೪೯॥

ನಾಮ್ನಾ ಶ್ವೇತನದೀತ್ಯುಕ್ತಾ ಸರ್ವದಾ ಪಾಪನಾಶಿನೀ ।
ಪುನಃ ಶ್ವೇತೋ ಮುನಿಃ ಶ್ರೀಮಾನ್ ಶ್ರದ್ಧಯಾ ಪರಯಾ ಸಹ॥೫೦॥

ಪೂಜಯಾಮಾಸ ಧರ್ಮಜ್ಞಃ ಶಿವಭಕ್ತಾನನೇಕಧಾ ।
ದೇವದೇವೋ ಮಹಾದೇವಃ ಶ್ರೀಮದ್ವೃದ್ಧಾಚಲೇಶ್ವರಃ ॥೫೧॥

ಸಾನ್ನಿಧ್ಯಮಕರೋತ್ತಸ್ಯ ಭಕ್ತಾನಾಂ ಪೂಜಯಾ ತಥಾ ।
ಮುನಿಶ್ಚ ದೇವದೇವೇಶಂ ಶ್ರೀಮದ್ವೃದ್ಧಾಚಲೇಶ್ವರಂ ॥೫೨॥

ಪೂಜಯಾಮಾಸ ಪುಣ್ಯೇನ ಪತ್ರೇಣೈವೋದಕೇನ ಚ ।
ಏತಸ್ಮಿನ್ನಂತರೇ ವಿಪ್ರಾಃ ಶಿವಸ್ಯ ಪರಮಾತ್ಮನಃ ॥೫೩॥

ಪ್ರಸಾದಾಚ್ಛಿವಭಕ್ತಾನಾಂ ಪೂಜಯಾ ಪರಯಾ ತಥಾ ।
ಅವಾಪ ಪರಮಾಂ ಮುಕ್ತಿಂ ಮುನಿಃ ಶ್ವೇತೋ ಮಹಾಮತಿಃ ॥೫೪॥

ಶ್ವೇತಮಹಾಮುನಿಯು ಆ ನದಿಯ ನೀರಿನಿಂದ ಶಿವನ ಪೂಜೆಯನ್ನು ಮಾಡಿದುದರಿಂದ ಆ ನದಿಗೆ ಶ್ವೇತನದಿ ಎಂದು ಹೆಸರಾದುದಲ್ಲದೆ ಸಕಲ ಪಾಪಗಳನ್ನೂ ನಾಶಮಾಡುವ ಶಕ್ತಿಯು ಬಂದಿತು. ಮತ್ತೆ ಆ ಶ್ವೇತಮುನಿಯು ಧರ್ಮವನ್ನು ತಿಳಿದವನಾದುದರಿಂದ ಅತ್ಯಂತ ಭಕ್ತಿಯಿಂದ ವಿಶೇಷವಾಗಿ ಶಿವಭಕ್ತರ ಪೂಜೆಯನ್ನೂ ಮಾಡಿದನು. ||೪೯-೫೦||

ಭಕ್ತರ ಪೂಜೆಯನ್ನು ಮಾಡಿದುದರಿಂದ ವೃದ್ಧಾಚಲೇಶ್ವರನು ಶ್ವೇತಮುನಿಗೆ ಪ್ರತ್ಯಕ್ಷನಾದನು. ಮುನಿಯೂ, ಪುಣ್ಯಕರವಾದ ನೀರಿನಿಂದಲೂ, ಪತ್ರೆಗಳಿಂದಲೂ ವೃದ್ಧಾಚಲೇಶ್ವರನನ್ನು ಪೂಜಿಸಿದನು. ||೫೧-೫೨||

ಎಲೈ ಬ್ರಾಹ್ಮಣರೇ, ಶಿವನ ಅನುಗ್ರಹದಿಂದಲೂ, ಶಿವಭಕ್ತರ ಪೂಜೆಯಿಂದಲೂ ಶ್ವೇತಮಹಾಮುನಿಯು ಜ್ಞಾನಿಯಾಗಿ ಶ್ರೇಷ್ಠವಾದ ಮೋಕ್ಷವನ್ನು ಪಡೆದನು. ||೫೩-೫೪||

ಬಹುನಾಽತ್ರ ಕಿಮುಕ್ತೇನ ಬ್ರಾಹ್ಮಣಾ ವೇದವಿತ್ತಮಾಃ ।
ಪೂಜಯಾ ಶಿವಭಕ್ತಾನಾಂ ಭೋಗಮೋಕ್ಷೌ ನ ಚಾನ್ಯತಃ ॥೫೫॥

ಇತಿ ಶ್ರುತ್ವಾ ಮಹಾತ್ಮಾನೋ ನೈಮಿಷಾರಣ್ಯವಾಸಿನಃ ।
ಸಾದರಂ ಪೂಜಯಾಮಾಸುಃ ಶಿವಭಕ್ತಾನನೇಕಧಾ ॥೫೬॥

ಪೂಜಯಾ ಶಿವಭಕ್ತಾನಾಂ ಪ್ರಸನ್ನಃ ಪರಮೇಶ್ವರಃ ।
ನನರ್ತ ಪುರತಸ್ತೇಷಾಂ ಮುನೀನಾಮಂಬಿಕಾಪತಿಃ ॥೫೭॥

ಮುನಯೋ ದೇವದೇವಸ್ಯ ಶಂಕರಸ್ಯ ಶಿವಸ್ಯ ತು ।
ದೃಷ್ಟ್ವಾಽಽನಂದಮಹಾನೃತ್ತಮವಶಾ ಅಭವನ್ಮುದಾ ॥೫೮॥

ಇತಿಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ
ಶಿವಭಕ್ತಪೂಜಾವಿಧಿರ್ನಾಮ ಷಷ್ಠೋಽಧ್ಯಾಯಃ ಸಮಾಪ್ತಃ

ವೇದವನ್ನು ತಿಳಿದವರಲ್ಲಿ ಶ್ರೇಷ್ಠರಾದ ಬ್ರಾಹ್ಮಣರೇ, ಹೆಚ್ಚಾಗಿ ಹೇಳುವುದರಿಂದ ಪ್ರಯೋಜನವೇನು? ಶಿವಭಕ್ತರ ಪೂಜೆಯಿಂದಲೇ ಭೋಗಮೋಕ್ಷಗಳೆರಡೂ ಲಭಿಸುವುವು. ಮತ್ತೊಂದರಿಂದ ಅಲ್ಲ. ॥೫೫॥

ಇದನ್ನು ಕೇಳಿ ಮಹಾತ್ಮರಾದ ನೈಮಿಷಾರಣ್ಯವಾಸಿಗಳಾದ ಮುನಿಗಳು ಪ್ರೀತಿಯಿಂದ ಶಿವಭಕ್ತರನ್ನು ಅನೇಕ ಬಗೆಯಲ್ಲಿ ಪೂಜಿಸಿದರು. ॥೫೬॥

ಶಿವಭಕ್ತರ ಪೂಜೆಯಿಂದ ಅಂಬಿಕಾಪತಿಯಾದ ಪರಮೇಶ್ವರನು ಸಂತೋಷದಿಂದ ಆ ನೈಮಿಷಾರಣ್ಯವಾಸಿಗಳಾದ ಮುನಿಗಳ ಮುಂದೆ ನರ್ತನಮಾಡಿದನು.॥೫೭॥

ಲೋಕಕ್ಕೆಲ್ಲಕ್ಕೂ ಸುಖವನ್ನುಂಟುಮಾಡುವ ದೇವತೆಗಳಿಗೆಲ್ಲರಿಗೂ ದೇವನಾದ ಶಿವನ ಆನಂದದಿಂದುಂಟಾದ ಮಹಾನರ್ತನವನ್ನು ನೋಡಿ ಮುನಿಗಳೆಲ್ಲರೂ ಸಂತೋಷದಿಂದ ಪರವಶರಾದರು. ಎಂದರೆ ಅವರೂ ಪರಮೇಶ್ವರನ ಆನಂದಸ್ವರೂಪರಾಗಿ ವ್ಯವಹಾರವನ್ನು ಸಂಪೂರ್ಣವಾಗಿ ಮರೆತುಬಿಟ್ಟರು. ॥೫೮॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ
ಶಿವಭಕ್ತರ ಪೂಜಾವಿಧಾನವೆಂಬ ಆರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

|| ಸಪ್ತಮೋಽಧ್ಯಾಯಃ ||

ಏಳನೆಯ ಅಧ್ಯಾಯವು

|| ನೈಮಿಷೀಯಾ ಊಚುಃ ||

ಭಗವನ್ ಶ್ರೋತುಮಿಚ್ಛಾಮಃ ಸರ್ವತತ್ವವಿಶಾರದ ।
ಕೇಚಿತ್ಕೇವಲವಿಜ್ಞಾನಂ ಪ್ರಶಂಸಂತಿ ವಿಮುಕ್ತಯೇ ||೧||

ಶಿವನು ಮುನಿಗಳ ಮುಂದೆ ನರ್ತನಮಾಡಿ ಅಭಿನಯರೂಪದಿಂದ ಪರತತ್ವವನ್ನು ಉಪದೇಶಿಸುತ್ತಲು ಅದನ್ನು ತಿಳಿದು ಜೀವನ್ಮುಕ್ತರಾದ ನೈಮಿಷಾರಣ್ಯವಾಸಿಗಳಾದ ಮುನಿಗಳು ತಾವು ಕೃತಾರ್ಥರಾದರೂ, ಸಮಸ್ತ ಲೋಕೋಪಕಾರಕ್ಕಾಗಿ ಮುಕ್ತಿಗೆ ಸಾಧನವಾದ, ಸುಲಭವಾದ ಮಾರ್ಗವನ್ನು ತಿಳಿಯಬೇಕೆಂಬ ಅಪೇಕ್ಷೆಯಿಂದ ಸಂದೇಹಕ್ಕೆ ಕಾರಣವಾದ ಭಿನ್ನಾಭಿಪ್ರಾಯಗಳನ್ನು ಹೇಳುವವರಾಗಿ ಸೂತಮುನಿಯನ್ನು ಕುರಿತು, ಸಮಸ್ತ ತತ್ವಗಳನ್ನೂ ಚನ್ನಾಗಿ ತಿಳಿದಿರುವ ಮಹಾಮಹಿಮನಾದ ಸೂತಮುನಿಯೇ, ನಮ್ಮ ಪ್ರಶ್ನೆಗೆ ಉತ್ತರವನ್ನು ಹೇಳಬೇಕೆಂದು ಅಪೇಕ್ಷಿಸುತ್ತಿರುವೆವು. ಆ ಪ್ರಶ್ನೆಗಳಾವುವೆಂದರೆ, ಕೆಲವರು ಅಂದರೆ ವೇದಾಂತತತ್ವವನ್ನು ತಿಳಿದವರು ಮುಕ್ತಿಗೆ ಕೇವಲ ಜ್ಞಾನವೇ ಕಾರಣವೆಂದು ಹೇಳುವರು. "ಪ್ರಜ್ಞಾನಂ ಬ್ರಹ್ಮ" ಎಂಬುದೇ ಅವರು ಹೇಳುವ ಪ್ರಮಾಣವಚನವು. ||೧||

ಕೇಚಿತ್ಸಮುಚ್ಚಿತಂ ಕರ್ಮ ಜ್ಞಾನೇನ ಬ್ರಹ್ಮವಿತ್ತಮ ।
ಕೇಚಿದ್ದಾನಂ ಪ್ರಶಂಸಂತಿ ತಥಾ ಕೇಚಿದ್ವ್ರತಂ ಬುಧಾಃ ॥೨॥

ಕೇಚಿದ್ಯಜ್ಞಂ ಪ್ರಶಂಸಂತಿ ತಪಃ ಕೇಚಿತ್ತಪೋಧನಾಃ ।
ಬ್ರಹ್ಮಚರ್ಯಾಶ್ರಮಂ ಕೇಚಿದ್ಗಾರ್ಹಸ್ಥ್ಯಂ ಭುವಿ ಕೇಚನ ॥೩॥

ವಾನಪ್ರಸ್ಥಾಶ್ರಮಂ ಕೇಚಿತ್ಸನ್ಯಾಸಂ ಭುವಿ ಕೇಚನ ।
ತೀರ್ಥಸೇವಾಂ ಪ್ರಶಂಸಂತಿ ಸ್ವಾಧ್ಯಾಯಂ ಭುವಿ ಕೇಚನ ॥೪॥

ಕೆಲವರು ಕರ್ಮಜ್ಞಾನಗಳೆರಡೂ ಕಾರಣವೆಂದು ಹೇಳುವರು.
ವಿದ್ಯಾಂ ಚಾ ವಿದ್ಯಾಂ ಚ ಯಸ್ತದ್ವೇದೋಭಯಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ ॥
ಯಥಾನ್ನಂ ಮಧುಸಂಯುಕ್ತಂ ಮಧುಚಾನ್ನೇನ ಸಂಯುತಂ ।
ಏವಂ ತಪಶ್ಚ ವಿದ್ಯಾ ಚ ಸಂಯುಕ್ತಂ ಭೇಷಜಂ ಮಹತ್ ॥

ಎಂಬ ಶ್ರುತಿಸ್ಮೃತಿಗಳೇ ಅವರಿಗೆ ಪ್ರಮಾಣವು. ಕೆಲವರು ದಾನಪರರು ದಾನವೇ ಮೋಕ್ಷಕ್ಕೆ ಕಾರಣವೆನ್ನುವರು. "ಕಿಂ ಭಗವಂತಃ ಪರಮಂ" ಎಂದು ಪ್ರಾರಂಭಿಸಿ, "ದಾನೇ ಸರ್ವಂ ಪ್ರತಿಷ್ಠಿತಂ ತಸ್ಮಾದ್ದಾನಂ ಪರಮಂ ವದಂತಿ" ಎಂದು ವೇದವನ್ನೇ ಪ್ರಮಾಣವಾಗಿ ಹೇಳುವರು. ಕೆಲವರು ವ್ರತವೇ ಮೋಕ್ಷಕ್ಕೆ ಕಾರಣವೆಂದು ಹೇಳುವರು. "ನ ಕಂಚನ ವಸತೌ ಪ್ರತ್ಯಾಚಕ್ಷೀತ ತದ್ವ್ರತಂ ತಸ್ಮಾದ್ಯಯಾಕಯಾ ಚ ವಿಧಯಾ ಬಹ್ವನ್ನಂ ಪ್ರಾಪ್ನುಯಾತ್. ಅನ್ನಂ ನ ನಿಂದ್ಯಾತ್ ತದ್ವ್ರತಂ" ಎಂದು ವೇದವನ್ನೇ ಪ್ರಮಾಣವನ್ನಾಗಿ ಹೇಳುವರು. ॥೨॥

ಕೆಲವರು "ಯಜ್ಞೇನ ಹಿ ದೇವಾ ದಿವಂಗತಾಃ" ಎಂದು ಪ್ರಾರಂಭಿಸಿ, "ತಸ್ಮಾದ್ಯಜ್ಞಂ ಪರಮಂ ವದಂತಿ" ಎಂಬ ಪ್ರಮಾಣದಿಂದ ಯಜ್ಞವನ್ನೂ, "ತಪೋನಾನಶನಾತ್ಪರಂ" ಎಂದು ಪ್ರಾರಂಭಿಸಿ "ತಸ್ಮಾತ್ತಪಃ ಪರಮಂ ವದಂತಿ" ಎಂಬ ಪ್ರಮಾಣದಿಂದ ತಪಸ್ಸನ್ನೂ, "ಯೇಷಾಂ ತಪೋಬ್ರಹ್ಮಚರ್ಯಂ ನೈಷ್ಠಿಕೋ ಬ್ರಹ್ಮಚಾರೀ ವಾ ವಸೇದಾಮರಣಾಂತಿಕಂ" ಎಂಬ ಶ್ರುತಿಪ್ರಮಾಣದಿಂದ ಬ್ರಹ್ಮಚರ್ಯಾಶ್ರಮವನ್ನೂ, "ಐಕಾಶ್ರಮ್ಯಂ ತ್ವಾಚಾರ್ಯಾಃ ಪ್ರತ್ಯಕ್ಷವಿಧಾನಾದ್ಗಾರ್ಹಸ್ಥ್ಯಸ್ಯ" ಎಂಬ ಗೌತಮಸೂತ್ರದಿಂದ ಗೃಹಸ್ಥಾಶ್ರಮವನ್ನೂ, ॥೩॥

"ತಪಃ ಶ್ರದ್ಧೇ ಯೇ ಹ್ಯುಪವಸಂತ್ಯರಣ್ಯೇ ಶಾಂತಾ ವಿದ್ವಾಂಸೋಭೈಕ್ಷಚರ್ಯಾಂ ಚರಂತಃ" ಎಂಬ ವೇದವಚನದಿಂದ ವಾನಪ್ರಸ್ಥಾಶ್ರಮವನ್ನೂ, "ನ್ಯಾಸ

ಕೇಚಿತ್ಸ್ಥಾನೇ ಮಹೇಶಸ್ಯ ವಿಶಿಷ್ಟೇ ವರ್ತನಂ ಸದಾ ।
ಏವಮನ್ಯಾನಿ ಲೋಕೇಽಸ್ಮಿನ್ ಪ್ರಶಂಸಂತಿ ವಿಮುಕ್ತಯೇ ॥೫॥

ಏಷಾಂ ಯತ್ಸರ್ವಜಂತೂನಾಂ ಕರ್ತುಂ ಶಕ್ಯಂ ವಿಮುಕ್ತಿದಂ ।
ತದಸ್ಮಾಕಂ ಮಹಾಭಾಗ ವದ ಸೂತ ಹಿತೇ ರತ ॥೬॥

॥ ಸೂತ ಉವಾಚ ॥

ಶೃಣುಧ್ವಂ ಮುನಯಃ ಸರ್ವೇ ಸಮಾಧಾಯ ಮನಃ ಸದಾ ।
ಪುರಾ ನಾರಾಯಣಂ ವ್ಯಾಸಃ ಶ್ರೀವೈಕುಂಠನಿವಾಸಿನಂ ॥೭॥

ಇತಿ ಬ್ರಹ್ಮ" ಎಂದು ಪ್ರಾರಂಭಿಸಿ "ತಾನಿ ವಾ ಏತಾನ್ಯವರಾಣಿ ತಪಾಂಸಿ ನ್ಯಾಸ ಏವಾತ್ಯರೇಚಯತ್" ಎಂಬ ವೇದವಾಕ್ಯದಿಂದ ಸನ್ಯಾಸಾಶ್ರಮವನ್ನೂ, "ತೀರ್ಥೇ ಸ್ನಾತಿ ತೀರ್ಥಮೇವ ಸಮಾನಾನಾಂ ಭವತಿ" ಎಂಬ ವೇದವಚನದಿಂದ ತೀರ್ಥ ಸೇವೆಯನ್ನೂ, "ಅಪಹತಪಾಪ್ಮಾ ಸ್ವಾಧ್ಯಾಯೋ ದೇವಪವಿತ್ರಂ ವಾ ತಸ್ಮಾತ್ಸ್ವಾಧ್ಯಾಯೋಽಧ್ಯೇತವ್ಯೋ ಯಂ ಯಂ ಕ್ರತುಮಧೀತೇ ತೇನ ತೇನಾಸ್ಯೇಷ್ಟಂ ಭವತಿ" ಎಂಬ ವೇದಪ್ರಮಾಣದಿಂದ ವೇದಾಧ್ಯಯನವನ್ನೂ, ॥೪॥

ಕೆಲವರು–ಸಂಪ್ರಾಪ್ಯ ಕಾಶೀಂ ಶಿವರಾಜಧಾನೀಂ, ಮಜ್ಜಿತ್ವಾ ತದಗ್ರೇ ಮಣಿಕರ್ಣಿಕಾಯಾಂ । ದೃಷ್ಟ್ವಾಽಥ ವಿಶ್ವೇಶ್ವರಮೇಕದಾಽಽರ್ಯೇ, ಸ್ಪೃಷ್ಟ್ವಾ ಪ್ರಣಾಮಃ ಪರಮೋ ಹಿ ಧರ್ಮಃ ॥ ಎಂಬಿವೇ ಮೊದಲಾದ ಪ್ರಮಾಣಗಳಿಂದ ಶಿವಕ್ಷೇತ್ರಗಳಲ್ಲಿ ಯಾವಾಗಲೂ, ವಾಸಮಾಡುವುದನ್ನೂ, "ಯಃ ಪುನರೇತಂ ತ್ರಿಮಾತ್ರೇಣ ಪರಂ ಪುರುಷ ಮಭಿಧ್ಯಾಯಿೀತ" ಎಂದು ಮೊದಲುಮಾಡಿಕೊಂಡು, "ಪರಾತ್ಪರಂ ಪುರಿಶಯಂ ಪುರುಷಮೀಕ್ಷತೇ" ಎಂಬ ಶ್ರುತಿಯಿಂದ ಪ್ರಣವಧ್ಯಾನವೇ ಮುಂತಾದುವುಗಳನ್ನೂ, ಮುಕ್ತಿಗೆ ಕಾರಣವೆಂಬುದಾಗಿ ಈ ಭೂಲೋಕದಲ್ಲಿ ವಿಶೇಷವಾಗಿ ಹೊಗಳುತ್ತಲಿರುವರು. ॥೫॥

ಸಮಸ್ತರಿಗೂ ಹಿತವನ್ನು ಮಾಡುವುದರಲ್ಲಿ ಆಸಕ್ತನಾದ ಮಹಾಮಹಿಮನಾದ ಸೂತನೇ, ಇವುಗಳಲ್ಲಿ ಸಕಲ ಪ್ರಾಣಿಗಳಿಗೂ, ಆಚರಿಸಲು ಸಾಧ್ಯವಾದ ಮುಕ್ತಿಸಾಧನವಾದ ಮಾರ್ಗವಾವುದೆಂಬುದನ್ನು ನಿಶ್ಚಯಿಸಿ ಹೇಳಬೇಕು. ಎಂದು ಪ್ರಶ್ನೆ ಮಾಡಿದರು. ॥೬॥

ಸೂತನು ಹೇಳಿದನು—ಎಲೈ ಮುನಿಗಳೇ, ಏಕಾಗ್ರಚಿತ್ತರಾಗಿ ಕೇಳಿರಿ. ಪೂರ್ವಕಾಲದಲ್ಲಿ ವ್ಯಾಸಮಹರ್ಷಿಯು ವೈಕುಂಠಲೋಕದಲ್ಲಿ ವಾಸಿಸುವ ನಾರಾ

ಪ್ರಣಮ್ಯ ದಂಡವದ್ಭಕ್ತ್ಯಾ ಪರ್ಯಪೃಚ್ಛದಿದಂ ಬುಧಾಃ ।
ಸೋಽಪಿ ನಾರಾಯಣಃ ಶ್ರೀಮಾನತೀವ ಪ್ರೀತಮಾನಸಃ ॥೮॥

ಸಮುತ್ಥಾಯ ಮಹಾಲಕ್ಷ್ಮ್ಯಾ ಬ್ರಹ್ಮಣಾ ಚ ಸುರೈಃ ಸಹ ।
ವೇದವ್ಯಾಸೇನ ಕೈಲಾಸಮಗಮತ್ಪರಮರ್ಷಯಃ ॥೯॥

ತತ್ರ ದೇವ್ಯಾ ಸಮಾಸೀನಂ ನೀಲಕಂಠಮುಮಾಪತಿಂ ।
ತೇಜಸಾ ಭಾಸಯನ್ ಸರ್ವಂ ಚತುರ್ವರ್ಗಫಲಪ್ರದಂ ॥೧೦॥

ಈಶ್ವರಾಣಾಂ ಚ ಸರ್ವೇಷಾಮೀಶ್ವರಂ ಪರಮೇಶ್ವರಂ ।
ಪತಿಂ ಪತೀನಾಂ ಪರಮಂ ದೈವತಾನಾಂ ಚ ದೈವತಂ ॥೧೧॥

ಸ್ಮೃತಿಮಾತ್ರೇಣ ಸರ್ವೇಷಾಮಭೀಷ್ಟಫಲದಾಯಿನಂ ।
ಸತ್ಯಂ ವಿಜ್ಞಾನಮಾನಂದಂ ಸಂಪೂರ್ಣಂ ಸರ್ವಸಾಕ್ಷಿಣಂ ॥೧೨॥
ಪ್ರಣಮ್ಯ ಪರಯಾ ಭಕ್ತ್ಯಾ ಪಪ್ರಚ್ಛೇದಂ ಜಗದ್ಧಿತಂ ।

ಯಣನ ಸಮೀಪಕ್ಕೆ ಹೋಗಿ ಭಕ್ತಿಯಿಂದ ನಮಸ್ಕರಿಸಿ ಇದೇ ಪ್ರಶ್ನೆಯನ್ನು ಮಾಡಿದನು. ॥೭॥

ಮಹರ್ಷಿಗಳೇ, ಕೇಳಿರಿ. ಸಮಸ್ತ ಐಶ್ವರ್ಯಗಳಿಂದ ಕೂಡಿದ ಶ್ರೀಮನ್ನಾರಾಯಣನು ಅತ್ಯಂತ ಸಂತೋಷದಿಂದ ಎದ್ದು ಮಹಾಲಕ್ಷ್ಮೀ, ಬ್ರಹ್ಮ, ವೇದವ್ಯಾಸ ಮತ್ತೂ ಸಮಸ್ತ ದೇವತೆಗಳು ಇವರೊಡನೆ ಕೈಲಾಸಕ್ಕೆ ಹೋದನು. ॥೮-೯॥

ಅಲ್ಲಿ ದೇವಿಯೊಡನೆ ಕುಳಿತಿರುವ, ನೀಲಕಂಠನೂ, ಉಮಾಪತಿಯೂ, ಸರ್ವೇಶ್ವರನೂ, ಪಶುಪತಿಯೂ, ದೇವದೇವನೂ, ಆದ, ತನ್ನ ತೇಜಸ್ಸಿನಿಂದ ಸಮಸ್ತವನ್ನೂ ಪ್ರಕಾಶಿಸುತ್ತಿರುವ, ನಾಲ್ಕು ವಿಧವಾದ ಪುರುಷಾರ್ಥವನ್ನು ಕೊಡುವ, ತನ್ನನ್ನು ಸ್ಮರಿಸಿದ ಮಾತ್ರಕ್ಕೆ ಎಲ್ಲರಿಗೂ ಸಮಸ್ತ ಇಷ್ಟಾರ್ಥಗಳನ್ನು ಕೊಡುವ, ಸತ್ಯಜ್ಞಾನಾನಂದಸ್ವರೂಪನೂ, ಪೂಜ್ಯನೂ, ಸರ್ವಸಾಕ್ಷಿಸ್ವರೂಪನೂ, ಆದ ಪರಮೇಶ್ವರನಿಗೆ ಭಕ್ತಿಯಿಂದ ನಮಸ್ಕಾರವನ್ನು ಮಾಡಿ ಲೋಕಹಿತಕ್ಕಾಗಿ ಇದೇ ಪ್ರಶ್ನೆಯನ್ನು ಮಾಡಿದರು. ॥೧೦-೧೧-೧೨॥

ಮಹಾದೇವೋಽಪಿ ಸರ್ವಜ್ಞಃ ಸರ್ವಭೂತಹಿತೇ ರತಃ ॥೧೩॥

ಪ್ರಾಹ ಸರ್ವಾಮರೇಶಾನೋ ವಾಚಾ ಮಧುರಯಾ ಬುಧಾಃ ।

॥ ಈಶ್ವರ ಉವಾಚ ॥

ಸಾಧು ಸಾಧು ಮಹಾವಿಷ್ಣೋ ಭವತಾ ಪೃಷ್ಟಮಚ್ಯುತ ॥೧೪॥

ಪುರಾ ದೇವೀ ಜಗನ್ಮಾತಾ ಸರ್ವಭೂತಹಿತೇ ರತಾ ।
ಮಾಮಪೃಚ್ಛದಿದಂ ಭಕ್ತ್ಯಾ ಪ್ರಣಮ್ಯ ಪರಮೇಶ್ವರೀ ॥೧೫॥

ತದಿದಂ ಕೃಪಯಾ ವಕ್ಷ್ಯೇ ತವ ಸರ್ವಜಗದ್ಧಿತಂ ।
ಜ್ಞಾನಮೇವ ಮಹಾವಿಷ್ಣೋ ಮೋಕ್ಷಸಾಧನಮಚ್ಯುತ ॥೧೬॥

ಜ್ಞಾನಂ ವೇದಶಿರೋದ್ಭೂತಮಿತಿ ಮೇ ನಿಶ್ಚಿತಾ ಮತಿಃ ।
ಅನೇಕಜನ್ಮಶುದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಂ ॥೧೭॥

ಸಮಸ್ತದೇವತೆಗಳಿಗೂ ಸ್ವಾಮಿಯೂ, ಸರ್ವಜ್ಞನೂ ಆದ ಮಹಾದೇವನು ಸಮಸ್ತಪ್ರಾಣಿಗಳಿಗೂ ಹಿತವನ್ನು ಮಾಡಬೇಕೆಂದು ಆಸಕ್ತಿಯುಳ್ಳವನಾಗಿ ಇಂಪಾದ ಮಾತಿನಿಂದ ಉತ್ತರಹೇಳಿದನು. ॥೧೩॥

ಈಶ್ವರನು ಹೇಳಿದನು—ಎಲೈ ಮಹಾವಿಷ್ಣುವೇ, ನಾಶರಹಿತನಾದ ನೀನು ಒಳ್ಳೆಯ ಪ್ರಶ್ನೆಯನ್ನು ಮಾಡಿರುವೆ. ಹಿಂದೆ ಲೋಕಕ್ಕೆಲ್ಲಕ್ಕೂ ತಾಯಿಯಾದ ಸಮಸ್ತ ಪ್ರಾಣಿಗಳಿಗೆ ಹಿತವನ್ನುಂಟುಮಾಡುವ ದೇವಿಯು ಭಕ್ತಿಯಿಂದ ನನಗೆ ನಮಸ್ಕರಿಸಿ ಇದೇ ಪ್ರಶ್ನೆಯನ್ನು ಮಾಡಿದಳು. ॥೧೪-೧೫॥

ಸಮಸ್ತಲೋಕಕ್ಕೂ ಹಿತಕರವಾದ ಆ ಉತ್ತರವನ್ನೇ ನಿನಗೂ ದಯೆಯಿಂದ ಹೇಳುವೆನು. ಎಲೈ ಮಹಾವಿಷ್ಣುವೇ, ಜ್ಞಾನವೇ ಮೋಕ್ಷಸಾಧನವಾದುದು. “ತಮೇವ ವಿದಿತ್ವಾ ಅತಿಮೃತ್ಯುಮೇತಿ ನಾನ್ಯಃ ಪಂಥಾವಿದ್ಯತೇಽಯನಾಯ” ಎಂಬ ವೇದವಚನವೇ ಅದಕ್ಕೆ ಪ್ರಮಾಣವು. ॥೧೬॥

ಆ ಜ್ಞಾನವು ಉಪನಿಷದ್ವಾಕ್ಯಗಳಿಂದುಂಟಾಗುವುದು. ಈ ವಿಷಯದಲ್ಲಿ “ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ. ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ” ಇತ್ಯಾದಿಶ್ರುತಿಗಳೇ ಪ್ರಮಾಣವು. ಅನೇಕಜನ್ಮಗಳಲ್ಲಿ ಮಾಡಿದ ನಿಷ್ಕಾಮಕರ್ಮ ಗಳಿಂದ, ಶ್ರುತಿಸ್ಮೃತಿಗಳನ್ನನುಸರಿಸಿ, ಭಗವಂತನನ್ನು ಪೂಜಿಸುವುದರಿಂದಲೇ, ತತ್ವಜ್ಞಾನವು ಉಂಟಾಗುವುದೆಂದು ನನ್ನ ನಿಶ್ಚಯವು. ॥೧೭॥

ಜಾಯತೇ ತಚ್ಛಿವಜ್ಞಾನಂ ಪ್ರಸಾದಾದೇವ ಮೇ ಹರೇ ।
ನಿವೃತ್ತಿಧರ್ಮನಿಷ್ಠಸ್ತು ಬ್ರಾಹ್ಮಣಃ ಪಂಕಜೇಕ್ಷಣ ॥೧೮॥

ಉಕ್ತೋ ಮುಖ್ಯಾಧಿಕಾರೀತಿ ಜ್ಞಾನಾಭ್ಯಾಸೇ ಮಯಾ ಹರೇ ।
ಅನ್ಯೇಚ ಬ್ರಾಹ್ಮಣಾ ವಿಷ್ಣೋ ರಾಜಾನಶ್ಚ ತಥೈವ ಚ ॥೧೯॥

ವೈಶ್ಯಾಶ್ಚ ತಾರತಮ್ಯೇನ ಜ್ಞಾನಾಭ್ಯಾಸೇಽಧಿಕಾರಿಣಃ ।
ದ್ವಿಜಸ್ತ್ರೀಣಾಮಪಿ ಶ್ರೌತಜ್ಞಾನಾಭ್ಯಾಸೇಽಧಿಕಾರಿತಾ ॥೨೦॥

ಅಸ್ತಿ ಶೂದ್ರಸ್ಯ ಶುಶ್ರೂಷೋಃ ಪುರಾಣೇನೈವ ವೇದನಂ ।
ವದಂತಿ ಕೇಚಿದ್ವಿದ್ವಾಂಸಃ ಸ್ತ್ರೀಣಾಂ ಶೂದ್ರಸಮಾನತಾಂ ॥೨೧॥

ಎಲೈ ಹರಿಯೇ, ಆ ಶಿವಜ್ಞಾನವು ಎಂದರೆ ನಿಷ್ಕಲತತ್ವಜ್ಞಾನವು ನನ್ನ ಅನುಗ್ರಹದಿಂದಲೇ ಉಂಟಾಗುವುದು. ಅದಕ್ಕೆ ಅಧಿಕಾರಿಯು ಸನ್ಯಾಸಧರ್ಮನಿಷ್ಠನಾದ ಬ್ರಾಹ್ಮಣನೇ. ಎಂದು ಉಪನಿಷತ್ತುಗಳು ಹೇಳುವುವು. "ಯಾಜ್ಞವಲ್ಕ್ಯಃ ಪ್ರವವ್ರಾಜ. ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ" ಎಂಬ ಉಪನಿಷತ್ತುಗಳೇ ಪ್ರಮಾಣಗಳು. ॥೧೮॥

ಜ್ಞಾನಾಭ್ಯಾಸಕ್ಕೆ ಬ್ರಾಹ್ಮಣಸನ್ಯಾಸಿಯೇ ಮುಖ್ಯಾಧಿಕಾರಿಯೆಂದು ನಾನೂ ಹೇಳಿರುವೆನು. ಎಲೈ ವಿಷ್ಣುವೇ, ಸನ್ಯಾಸಾಶ್ರಮವನ್ನು ಅನುಷ್ಠಾನಮಾಡಿದ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಅವರವರ ವರ್ಣಾಶ್ರಮದ ಧರ್ಮಾನುಷ್ಠಾನದ ಯೋಗ್ಯತೆಯನ್ನು ಅನುಸರಿಸಿ ಹೆಚ್ಚುಕಡಿಮೆಯಾದ ಅಧಿಕಾರವನ್ನು ಹೊಂದಿರುವರು. "ಅಥ ಹೈನಂ ಗಾರ್ಗೀವಾಚಕ್ನವೀ ಪಪ್ರಚ್ಛ" ಎಂಬ ಉಪನಿಷದ್ವಾಕ್ಯದಿಂದ ದ್ವಿಜರ ಸ್ತ್ರೀಯರಿಗೆ ಶ್ರುತಿಸಂಬಂಧವಾದ ಜ್ಞಾನಾಭ್ಯಾಸದಲ್ಲಿ ಅಧಿಕಾರವಿರುವುದೆಂದು ವ್ಯಕ್ತವಾಗುವುದು. ದ್ವಿಜರ ಶುಶ್ರೂಷೆಯನ್ನು ಮಾಡುವ ಶೂದ್ರನಿಗೆ ವೇದವಾಕ್ಯಶ್ರವಣನಿಷೇಧವಿರುವುದರಿಂದ ಪುರಾಣಗಳಿಂದಲೇ ಜ್ಞಾನವುಂಟಾಗಬೇಕಾಗಿರುವುದು. ॥೧೯-೨೦॥

ಕೆಲವು ವಿದ್ವಾಂಸರು ಸ್ತ್ರೀಯರಿಗೂ ಶೂದ್ರರಂತೆ ವೇದಾಧಿಕಾರವಿಲ್ಲವೆಂದು ಹೇಳುವರು. "ಸ್ತ್ರೀ ಶೂದ್ರದ್ವಿಜಬಂಧೂನಾಂ ತ್ರಯೀ ನ ಶ್ರುತಿಗೋಚರಾ" ಇತಿ ಭಾರತಮಾಖ್ಯಾನಂ ಕೃಪಯಾ ಮುನಿನಾ ಕೃತಂ ॥" ಎಂದು ಭಾಗವತಪುರಾಣವಚನದಿಂದ, ಗಾರ್ಗೀ, ಮೈತ್ರೇಯೀ ಎಂಬುವವರೂ, ಪುರಾಣವಾಕ್ಯಗ

ಅನ್ಯೇಷಾಮಪಿ ಸರ್ವೇಷಾಂ ಜ್ಞಾನಾಭ್ಯಾಸೋ ವಿಧೀಯತೇ ।
ಭಾಷಾಂತರೇಣ ಕಾಲೇನ ತೇಷಾಂ ಸೋಽಪ್ಯುಪಕಾರಕಃ ॥೨೨॥

ಯೇಷಾಮಸ್ತಿ ಪರಿಜ್ಞಾನಂ ವಿನೇಹ ಜ್ಞಾನಸಾಧನಂ ।
ಕಲ್ಪ್ಯಂ ತತ್ಸಾಧನಂ ತೇಷಾಂ ಪೂರ್ವಜನ್ಮಸು ಸೂರಿಭಿಃ ॥೨೩॥

ಮುಖ್ಯಾಧಿಕಾರಿಣಾಂ ನೃಣಾಂ ಪ್ರತಿಬಂಧವಿವರ್ಜಿತಂ ।
ಜ್ಞಾನಮುತ್ಪದ್ಯತೇಽನ್ಯೇಷಾಂ ಪ್ರತಿಬದ್ಧಂ ವಿಜಾಯತೇ ॥೨೪॥

ಪ್ರತಿಬದ್ಧಂ ಪರಿಜ್ಞಾನಂ ನೇಹ ಮುಕ್ತಿಂ ಪ್ರಯಚ್ಛತಿ ।
ವಿಶುದ್ಧಂ ಬ್ರಹ್ಮವಿಜ್ಞಾನಂ ವಿಶುದ್ಧಸ್ಯೈವ ಸಿದ್ಧ್ಯತಿ ॥೨೫॥

ಅತಃ ಸರ್ವಮನುಷ್ಯಾಣಾಂ ನ ಹಿ ಮುಕ್ತಿರಯತ್ನತಃ ।
ಯಜ್ಞದಾನಾದಿಕರ್ಮಾಣಿ ನ ಸಾಕ್ಷಾನ್ಮುಕ್ತಿಸಿದ್ಧಯೇ ॥೨೬॥

ಇಂದಲೇ ಜ್ಞಾನವನ್ನು ಪಡೆದರೆಂದು ಹೇಳುವರು. ಯಾರಿಗೆ ಪುರಾಣದಲ್ಲಿಯೂ ಅಧಿಕಾರವಿಲ್ಲವೋ ಅಂಥವರು ತಮ್ಮ ದೇಶಭಾಷೆಯಿಂದ ತತ್ವವಿದ್ಯಾಭ್ಯಾಸವನ್ನು ಮಾಡಬಹುದು. ಕಾಲಕ್ಕನುಸಾರವಾಗಿ ಅದೂ ಫಲವನ್ನು ಕೊಡುವುದು.॥೨೧-೨೨॥

ಈ ಜನ್ಮದಲ್ಲಿ ಜ್ಞಾನಸಾಧನವಿಲ್ಲದೆ, ಯಾರಿಗಾದರೂ ಜ್ಞಾನವುಂಟಾಗಿದ್ದರೆ ಹಿಂದಿನ ಜನ್ಮದಲ್ಲಿ ಅವರು ಜ್ಞಾನಕ್ಕಾಗಿ ಪ್ರಯತ್ನಮಾಡಿದ್ದರೆಂದು ತಿಳಿಯಬೇಕು. ವಾಮದೇವನು ಗರ್ಭದಲ್ಲಿದ್ದಾಗಲೇ ಜ್ಞಾನಿಯಾಗಿದ್ದನು. ಇದಕ್ಕೆ ಅವನ ಹಿಂದಿನ ಜನ್ಮದ ಸಂಸ್ಕಾರವೇ ಕಾರಣವು. ॥೨೩॥

ಮುಖ್ಯಾಧಿಕಾರಿಗೆ ಜ್ಞಾನವು ಉತ್ಪತ್ತಿಯಾಗಲು ವಿಘ್ನಗಳಿರುವುದಿಲ್ಲವು. ಇತರರಿಗೆ ವಿಘ್ನಗಳಿರುವುವು. ಇಷ್ಟೇ ಅಧಿಕಾರಿಗಳ ತಾರತಮ್ಯವು. ॥೨೪॥

ಜ್ಞಾನೋತ್ಪತ್ತಿಗೆ ಪ್ರತಿಬಂಧಕವಿದ್ದರೆ ಈ ಜನ್ಮದಲ್ಲಿ ಮುಕ್ತಿಯಾಗುವುದಿಲ್ಲ. "ಅನೇಕ ಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಂ" ಎಂಬ ಗೀತಾವಾಕ್ಯದಂತೆ ಪ್ರತಿಬಂಧಕನಿವೃತ್ತಿಗಾಗಿ ಕೆಲವು ಜನ್ಮಗಳನ್ನು ಕಳೆಯಬೇಕಾಗುವುದು. ಮುಖ್ಯಾಧಿಕಾರಿಗೆ ಶುದ್ಧಬ್ರಹ್ಮಜ್ಞಾನವು ಎಂದರೆ ಅಪರೋಕ್ಷಜ್ಞಾನವು ಸಿದ್ಧಿಸುವುದು. ಮಿಕ್ಕವರಿಗೆ ಅಧಿಕಾರತಾರತಮ್ಯದಿಂದ ಪರೋಕ್ಷಜ್ಞಾನವುಂಟಾಗುವುದು. ॥೨೫॥

ಆದುದರಿಂದ ಎಲ್ಲರಿಗೂ ಪ್ರಯತ್ನವಿಲ್ಲದೆ ಮೋಕ್ಷವು ಲಭಿಸುವುದಿಲ್ಲ. ಯಜ್ಞದಾನಾದಿಕರ್ಮಗಳು ಮುಕ್ತಿಗೆ ಸಾಕ್ಷಾತ್ತಾಗಿ ಕಾರಣವಾಗಲಾರವು. ನಿಷ್ಕಾಮದಿಂದ

ತಸ್ಮಾದಯತ್ನತೋ ಮುಕ್ತಿಃ ಸರ್ವೇಷಾಂ ಯೇನ ಹೇತುನಾ ।
ತಂ ವದಾಮಿ ಮಹಾವಿಷ್ಣೋ ಹಿತಾಯ ಜಗತಾಂ ಶೃಣು ॥೨೭॥

ಸಂತಿ ಲೋಕೇ ವಿಶಿಷ್ಟಾನಿ ಸ್ಥಾನಾನಿ ಮಮ ಮಾಧವ ।
ತೇಷಾಮನ್ಯತಮೇ ಸ್ಥಾನೇ ವರ್ತನಂ ಭುಕ್ತಿಮುಕ್ತಿದಂ ॥೨೮॥

ಶ್ರೀಮದ್ವಾರಾಣಸೀ ಪುಣ್ಯಾ ಪುರೀ ನಿತ್ಯಂ ಮಮ ಪ್ರಿಯಾ ।
ಯಸ್ಯಾಮುತ್ಕ್ರಮಮಾಣಸ್ಯ ಪ್ರಾಣೈರ್ಜಂತೋಃ ಕೃಪಾಬಲಾತ್ ॥೨೯॥

ತಾರಕಂ ಬ್ರಹ್ಮವಿಜ್ಞಾನಂ ದಾಸ್ಯಾಮಿ ಶ್ರೇಯಸೇ ಹರೇ ।
ತಸ್ಯಾಮೇವ ಮಹಾವಿಷ್ಣೋ ಪ್ರಾಣತ್ಯಾಗೋ ವಿಮುಕ್ತಿದಃ ॥೩೦॥

ಮಾಡಿದ ಯಜ್ಞದಾನಾದಿಗಳು ಪ್ರತಿಬಂಧಕರೂಪವಾದ ಪಾಪಗಳನ್ನು ನಾಶಮಾಡಿ ಸತ್ವಶುದ್ಧಿಯನ್ನುಂಟುಮಾಡುವುವು. ಆಮೇಲೆ ವಿಷಯಾನುಭವದಲ್ಲಿ ದೋಷಜ್ಞಾನವುಂಟಾಗಿ ವೈರಾಗ್ಯವೂ, ತರುವಾಯ ಸನ್ಯಾಸಪೂರ್ವಕವಾದ ಶ್ರವಣ ಮನನ ನಿದಿಧ್ಯಾಸನಗಳಿಂದ ತತ್ವಜ್ಞಾನವೂ ತತ್ವಜ್ಞಾನದಿಂದ ಮೋಕ್ಷವೂ ಉಂಟಾಗುವುದು. ||೨೬||

ಎಲೈ ಮಹಾವಿಷ್ಣುವೇ, ಆದುದರಿಂದ ಎಲ್ಲರಿಗೂ ಪ್ರಯತ್ನವಿಲ್ಲದೆ ಮುಕ್ತಿಯು ಯಾವ ಕಾರಣದಿಂದುಂಟಾಗುವುದೋ ಆ ಕಾರಣವನ್ನು ಲೋಕಹಿತಕ್ಕಾಗಿ ಹೇಳುವೆನು, ಕೇಳು. ||೨೭||

ಎಲೈ ಲಕ್ಷ್ಮೀಪತಿಯೇ, ಲೋಕದಲ್ಲಿ ನಾನು ವಾಸವಾಗಿರುವ ಕ್ಷೇತ್ರಗಳು ಅನೇಕವಾಗಿರುವುವು. ಮನುಷ್ಯನು ಆ ಕ್ಷೇತ್ರಗಳಲ್ಲೊಂದರಲ್ಲಿ ವಾಸಮಾಡುತ್ತಿದ್ದರೆ ಭುಕ್ತಿಮುಕ್ತಿಗಳೆರಡೂ ಅವನಿಗೆ ಪ್ರಾಪ್ತವಾಗುವುವು. ಆ ಕ್ಷೇತ್ರಗಳಲ್ಲಿ ಶ್ರೀಕಾಶೀಕ್ಷೇತ್ರವು ಪುಣ್ಯಕರವಾದುದಾಗಿಯೂ, ನನಗೆ ಅತ್ಯಂತ ಪ್ರೀತಿಪಾತ್ರವಾದುದಾಗಿಯೂ ಇರುವುದು. ಅಲ್ಲಿ ಪ್ರಾಣತ್ಯಾಗಮಾಡುವ ಪ್ರಾಣಿಗೆ ನಾನು ದಯೆಯಿಟ್ಟು ತಾರಕಬ್ರಹ್ಮಜ್ಞಾನವನ್ನು ಅನುಗ್ರಹಿಸುವೆನು. ಆದುದರಿಂದ ಕಾಶೀಕ್ಷೇತ್ರದಲ್ಲಿ ಪ್ರಾಣತ್ಯಾಗಮಾಡುವುದು ಮುಕ್ತಿಯನ್ನು ಕೊಡತಕ್ಕದಾಗಿರುವುದು. ||೨೮-೨೯-೩೦||

ಸ್ಥಾನಂ ದಕ್ಷಿಣಕೈಲಾಸಸಮಾಖ್ಯಂ ಸತ್ಕೃತಂ ಮಯಾ ।
ಯತ್ರ ಸರ್ವಾಣಿ ತೀರ್ಥಾನಿ ಸರ್ವಲೋಕಗತಾನಿ ತು ॥೩೧॥

ಸುವರ್ಣಮುಖರೀತೋಯೇ ಪವಿತ್ರೇ ಪಾಪನಾಶನೇ ।
ಮಾಸಿ ಮಾಸಿ ವ್ಯತೀಪಾತೇ ಮಘರ್ಕ್ಷೇ ಮಾಘಮಾಸಿ ಚ ॥೩೨॥

ಅರ್ಕವಾರೇಽಪ್ಯಮಾವಾಸ್ಯಾಂ ಸ್ನಾನಂ ಕೃತ್ವಾ ಮಹೇಶ್ವರಂ ।
ಶ್ರೀಕಾಲಹಸ್ತಿಶೈಲೇಶಂ ಪೂಜಯೇನ್ಮಾಂ ಸುರೇಶ್ವರಂ ॥೩೩॥

ಯತ್ರ ಸಂವತ್ಸರಂ ಭಕ್ತ್ಯಾ ಯೋ ವಾ ಕೋ ವಾ ದಿನೇ ದಿನೇ ।
ದೃಷ್ಟ್ವಾ ದಕ್ಷಿಣಕೈಲಾಸವಾಸಿನಂ ಕರುಣಾನಿಧಿಂ ॥೩೪॥

ಭುಙ್ತ್ತೇ ತಸ್ಯ ಮಹಾವಿಷ್ಣೋ ಜ್ಞಾನಂ ತಸ್ಯ ವಿಮುಕ್ತಿದಂ ।
ಜಾಯತೇ ಮರಣೇ ಕಾಲೇ ತೇನ ಮುಕ್ತೋ ಭವೇನ್ನರಃ ॥೩೫॥

ಶ್ರೀಮದ್ವ್ಯಾಘ್ರಪುರೇ ನಿತ್ಯಂ ಯೋವಾ ಕೋವಾ ಮಹೇಶ್ವರಂ ।
ಪ್ರಣಮ್ಯ ದಂಡವದ್ಭೂಮೌ ಮಾಸದ್ವಾದಶಕಂ ಮುದಾ ॥೩೬॥
ತಸ್ಯ ಸಿದ್ಧಾ ಪರಾ ಮುಕ್ತಿರ್ನ ಹಿ ಸಂಶಯಕಾರಣಂ ।

ದಕ್ಷಿಣಕೈಲಾಸವೆಂಬ ಕ್ಷೇತ್ರವು ನನಗೆ ಪೂಜ್ಯವಾದುದಾಗಿರುವುದು. ಅಲ್ಲಿ ಸಮಸ್ತ ಲೋಕದ ಸಕಲ ತೀರ್ಥಗಳೂ ಸುವರ್ಣಮುಖರೀ ನದಿಯಲ್ಲಿರುವುವು. ಪರಿಶುದ್ಧವೂ, ಪಾಪನಾಶಕವೂ ಆದ ಆ ನೀರಿನಲ್ಲಿ ಪ್ರತಿ ತಿಂಗಳಲ್ಲಿಯೂ, ವ್ಯತೀಪಾತ ದಿನಗಳಲ್ಲಿಯೂ, ಮಾಘಮಾಸದಲ್ಲಿ ಮಘಾನಕ್ಷತ್ರದಲ್ಲಿಯೂ ಅಮಾವಾಸ್ಯೆಯ ಭಾನುವಾರದಲ್ಲಿಯೂ ಸ್ನಾನಮಾಡಿ ಶ್ರೀಕಾಲಹಸ್ತಿಗಿರೀಶ್ವರನಾದ ನನ್ನನ್ನು ಪೂಜಿಸಬೇಕು. ||೩೧-೩೨-೩೩||

ಆ ಕ್ಷೇತ್ರದಲ್ಲಿ ಯಾರಾದರೂ ಒಂದು ವರ್ಷವಾಸವಾಗಿದ್ದು, ಪ್ರತಿದಿನವೂ ದಕ್ಷಿಣಕೈಲಾಸೇಶ್ವರನ ದರ್ಶನವನ್ನು ಮಾಡಿದ ಮೇಲೆ ಭೋಜನಮಾಡುತ್ತಿದ್ದರೆ ಅಂಥವನಿಗೆ ಮರಣಕಾಲದಲ್ಲಿ ಮೋಕ್ಷಕಾರಣವಾದ ಜ್ಞಾನವುಂಟಾಗುವುದು. ಆ ಮನುಜನು ಮುಕ್ತನಾಗುವನು. ||೩೪-೩೫||

ಯಾವ ಮನುಷ್ಯನಾಗಲಿ ವ್ಯಾಘ್ರಪುರದಲ್ಲಿ ಹನ್ನೆರಡು ತಿಂಗಳು ವಾಸವಾಗಿದ್ದು ಪ್ರತಿದಿನವೂ ಪರಮೇಶ್ವರನಿಗೆ ಸಾಷ್ಟಾಂಗ ನಮಸ್ಕಾರಮಾಡುತ್ತಿದ್ದರೆ ಅವನಿಗೆ ಶ್ರೇಷ್ಠವಾದ ಮುಕ್ತಿಯುಂಟಾಗುವ ವಿಷಯದಲ್ಲಿ ಸಂದೇಹವಿಲ್ಲ. ||೩೬||

ಶ್ರೀಮದ್ವೃದ್ಧಾಽಚಲೇ ಭಕ್ತ್ಯಾ ವರ್ತತೇ ವತ್ಸರದ್ವಯಂ ॥೩೭॥

ಯೋ ವಾ ಕೋ ವಾ ಮಹಾದೇವಂ ಶ್ರೀಮದ್ವೃದ್ಧಾಚಲೇಶ್ವರಂ ।
ಪ್ರದಕ್ಷಿಣತ್ರಯಂ ಕೃತ್ವಾ ಪ್ರಣಮ್ಯ ಪರಮೇಶ್ವರಂ ॥೩೮॥

ತಸ್ಯ ಮುಕ್ತಿರಯತ್ನೇನ ಸಿಧ್ಯತ್ಯೇವ ನ ಸಂಶಯಃ ।
ಸ್ಥಾನೇ ವರ್ತನಮಾತ್ರೇಣ ವಿಶಿಷ್ಟೇ ಮಾನವೋಽಚ್ಯುತ ॥೩೯॥

ಅಯತ್ನೇನ ವಿಮುಚ್ಯೇತ ಸ್ವಸಂಸಾರಮಹದ್ಭ(ಹಾಭ)ಯಾತ್ ।
ತಸ್ಮಾದ್ವಿಮುಕ್ತಿಮನ್ವಿಚ್ಛನ್ನಯತ್ನೇನೈವ ಮಾನವಃ ॥೪೦॥

ಭಜೇದನ್ಯತಮಂ ಸ್ಥಾನಮೇತೇಷಾಂ ಶ್ರದ್ಧಯಾ ಸಹ ।

॥ ಸೂತ ಉವಾಚ ॥

ಇತಿ ಶ್ರುತ್ವಾ ಹರಿರ್ಬ್ರಹ್ಮಪ್ರಮುಖೈರಮರೈರಪಿ ॥೪೧॥

ವೇದವ್ಯಾಸೇನ ಲಕ್ಷ್ಮ್ಯಾ ಚ ಸಹ ವೇದವಿದಾಂ ವರಾಃ ।
ಪ್ರಣಮ್ಯ ಪರಯಾ ಭಕ್ತ್ಯಾ ಭವಂ ಭಕ್ತಪ್ರಿಯೇ ರತಂ ॥೪೨॥

ಯಾವ ಮನುಜನಾದರೂ ವೃದ್ಧಾಚಲಕ್ಷೇತ್ರದಲ್ಲಿ ಎರಡು ವರ್ಷಗಳ ವರೆಗೆ ವಾಸಮಾಡಿಕೊಂಡು ಪ್ರತಿ ದಿವಸವೂ ಭಕ್ತಿಯಿಂದ ವೃದ್ಧಾಚಲೇಶ್ವರನಿಗೆ ಮೂರು ಪ್ರದಕ್ಷಿಣೆ ನಮಸ್ಕಾರಮಾಡುತ್ತಿದ್ದರೆ ಅವನಿಗೆ ಪ್ರಯತ್ನವಿಲ್ಲದೆ ಮುಕ್ತಿಯು ಸಿದ್ಧವಾಗುವುದರಲ್ಲಿ ಸಂದೇಹವಿಲ್ಲವು. ॥೩೭-೩೮॥

ಎಲೈ ನಾಶರಹಿತನಾದ ವಿಷ್ಣುವೇ, ಹಿಂದೆ ಹೇಳಿದ ಶಿವಕ್ಷೇತ್ರಗಳಲ್ಲಿ ವಾಸಮಾಡಿದ ಮಾತ್ರಕ್ಕೆ ಯತ್ನವಿಲ್ಲದೆ ಸಂಸಾರವೆಂಬ ಮಹಾಭಯದಿಂದ ಬಿಡುಗಡೆಯಾಗುವುದು. ಆದುದರಿಂದ ಮನುಷ್ಯನು ಪ್ರಯತ್ನವಿಲ್ಲದೆ ಮುಕ್ತಿಯನ್ನು ಪಡೆಯಬೇಕಾದರೆ ಈ ಶಿವಕ್ಷೇತ್ರಗಳಲ್ಲೊಂದು ಕ್ಷೇತ್ರದಲ್ಲಿ ಶಿವನನ್ನು ಭಕ್ತಿಯಿಂದ ಸೇವಿಸಿದರೆ ಮುಕ್ತಿಯುಂಟಾಗುವುದು. ಇದು ಸರ್ವರಿಗೂ ಸುಲಭವಾದುದೆಂದು ಅಭಿಪ್ರಾಯವು. ॥೩೯-೪೦॥

ಸೂತನು ಹೇಳಿದನು—ಶಿವನು ಹೇಳಿದ ಈ ಮಾತನ್ನು ಕೇಳಿ ಹರಿಯು ಬ್ರಹ್ಮನೇ ಮೊದಲಾದ ದೇವತೆಗಳೊಡನೆಯೂ, ವೇದವ್ಯಾಸ ಮತ್ತು ಲಕ್ಷ್ಮೀ

ವಿಹಾಯ ಪದ್ಮಸಂಭೂತಂ ಪಾರಾಶರ್ಯಂ ಸುರಾನಪಿ ।
ಶ್ರೀಮದ್ದಕ್ಷಿಣಕೈಲಾಸಂ ಸರ್ವದೇಶೋತ್ತಮೋತ್ತಮಂ ॥೪೩॥

ಪಂಚಯೋಜನವಿಸ್ತೀರ್ಣಂ ದಶಯೋಜನಮಾಯತಂ ।
ಬ್ರಹ್ಮಣಾ ಚ ಸರಸ್ವತ್ಯಾ ವಜ್ರಿಣಾ ನೀಲಯಾ ತಥಾ ॥೪೪॥

ಕಾಲೇನ ಹಸ್ತಿನಾ ಚಾನ್ಯೈರ್ದೇವಗಂಧರ್ವರಾಕ್ಷಸೈಃ ।
ಮುನಿಭಿಃ ಪೂಜಿತಂ ಸ್ಥಾನಂ ಭುಕ್ತಿಮುಕ್ತಿಫಲಪ್ರದಂ ॥೪೫॥

ಅವಾಪ ಪದ್ಮಯಾ ವಿಷ್ಣುಃ ಸಹ ಸರ್ವಜಗತ್ಪತಿಃ ।
ಬ್ರಹ್ಮಾ ವೇದವಿದಾಂ ಮುಖ್ಯಃ ಶ್ರೀಮದ್ವೃದ್ಧಾಚಲಂ ಮುದಾ ॥೪೬॥

ಪ್ರಾಪ್ತವಾನಾಶು ಭಾರತ್ಯಾ ಪ್ರಸನ್ನಃ ಪಾಪನಾಶನಂ ।
ವೇದವ್ಯಾಸೋ ಮುನಿಃ ಶ್ರೀಮಾನ್ವಿಶ್ವವಿಜ್ಞಾನಸಾಗರಃ ॥೪೭॥
ಪ್ರಾಪ್ತವಾನಾದರೇಣೈವ ಶ್ರೀಮದ್ವಾರಾಣಸೀಂ ಪ್ರತಿ ।

ಸಮೇತನಾಗಿ, ಭಕ್ತಿಯಿಂದ ಭಕ್ತರಿಗೆ ಹಿತವನ್ನು ಮಾಡುವ ಶಿವನಿಗೆ ನಮಸ್ಕಾರ ಮಾಡಿದರು. ॥೪೨॥

ಆಮೇಲೆ ವಿಷ್ಣುವು ಬ್ರಹ್ಮನನ್ನೂ, ವ್ಯಾಸನನ್ನೂ, ದೇವತೆಗಳನ್ನೂ ಬಿಟ್ಟು ಲಕ್ಷ್ಮೀದೇವಿಯೊಡನೆ ಸಮಸ್ತ ಕ್ಷೇತ್ರಗಳಿಗಿಂತಲೂ ಅತ್ಯಂತ ಶ್ರೇಷ್ಠವಾದ ಹತ್ತು ಯೋಜನ ಉದ್ದವೂ, ಐದು ಯೋಜನ ಅಗಲವೂ ಇರುವ ಬ್ರಹ್ಮ, ಸರಸ್ವತಿ, ದೇವೇಂದ್ರ, ನೀಲಾದೇವಿ, ಕಾಲ, ಆನೆ ಮತ್ತು ಇತರ ದೇವತೆಗಳೂ, ಗಂಧರ್ವರೂ, ರಾಕ್ಷಸರೂ, ಮುನಿಗಳೂ ಪೂಜಿಸಿದ ಭುಕ್ತಿಮುಕ್ತಿಗಳನ್ನು ಕೊಡತಕ್ಕ ದಕ್ಷಿಣ ಕೈಲಾಸಕ್ಕೆ ಹೋದನು. ॥೪೩-೪೪-೪೫॥

ವೇದವನ್ನು ತಿಳಿದವರಲ್ಲಿ ಮುಖ್ಯನಾದ ಬ್ರಹ್ಮನು ಸರಸ್ವತೀದೇವಿಯೊಡನೆ ಪಾಪನಾಶಕವಾದ ವೃದ್ಧಾಚಲಕ್ಷೇತ್ರಕ್ಕೆ ಸಂತೋಷದಿಂದ ಪ್ರಯಾಣಮಾಡಿದನು. ॥೪೬॥

ವಿಷ್ಣುವಿನ ಅವತಾರನಾದ ಸಮಸ್ತ ಪ್ರಪಂಚದ ಸ್ವರೂಪಜ್ಞಾನವನ್ನು ಬಲ್ಲ ವೇದವ್ಯಾಸನು ಪ್ರೀತಿಯಿಂದ ಕಾಶೀಕ್ಷೇತ್ರಕ್ಕೆ ಹೋದನು. ॥೪೭॥

ತಥಾ ಸರ್ವೇ ಸುರಾ ವಿಪ್ರಾಃ ಪ್ರಸನ್ನಾ ಭುಕ್ತಿಮುಕ್ತಿದಂ ॥೪೮॥

ಶ್ರೀಮದ್ವ್ಯಾಘ್ರಪುರಂ ಭಕ್ತ್ಯಾ ಪ್ರಾಪ್ತವಂತೋ ಮುನೀಶ್ವರಾಃ ।
ತಥಾಽನ್ಯೇ ಮುನಯೋ ವ್ಯಾಘ್ರಪುರಂ ಪೂರ್ವತಪೋಬಲಾತ್ ॥೪೯॥

ಅವಾಪುರ್ಯತ್ರ ದೇವೇಶಃ ಪ್ರನೃತ್ಯತ್ಯಂಬಿಕಾಪತಿಃ ।
ಅಹಂ ವ್ಯಾಸವಚಃ ಶ್ರುತ್ವಾ ಶ್ರದ್ಧಯಾ ಪರಯಾ ಸಹ ॥೫೦॥

ಶ್ರೀಮದ್ದಕ್ಷಿಣಕೈಲಾಸೇಽಪ್ಯುಷಿತ್ವಾ ವತ್ಸರಂ ಬುಧಾಃ ।
ಪುಂಡರೀಕಪುರೇ ತದ್ವಚ್ಛ್ರೀಮದ್ವೃದ್ಧಾಚಲೇ ತಥಾ ॥೫೧॥

ವಾರಾಣಸ್ಯಾಮಪಿ ಜ್ಞಾನಂ ಲಬ್ಧವಾನತಿ ಶೋಭನಂ ।
ಭವಂತೋಽಪಿ ಯಥಾಶ್ರದ್ಧಂ ವರ್ತಧ್ವಂ ಪಂಡಿತೋತ್ತಮಾಃ ॥೫೨॥

ಏಷಾಮನ್ಯತಮೇ ಸ್ಥಾನೇ ವಿಶಿಷ್ಟೇ ಮುಕ್ತಿಸಿದ್ಧಯೇ ।
ಬಹವೋ ವರ್ತನಾದೇಷು ವಿಮುಕ್ತಾ ಭವಬಂಧನಾತ್ ॥೫೩॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ ಮುಕ್ತಿಸಾಧನಪ್ರಕಾರೋ ನಾಮ ಸಪ್ತಮೋಽಧ್ಯಾಯಃ ಸಮಾಪ್ತಃ

ಎಲೈ ಋಷಿಗಳೇ, ಸಮಸ್ತ ದೇವತೆಗಳೂ ಸಂತೋಷದಿಂದ ಭುಕ್ತಿಮುಕ್ತಿಗಳನ್ನು ಕೊಡತಕ್ಕ ವ್ಯಾಘ್ರಪುರಕ್ಕೆ ಹೋದರು. ಮಿಕ್ಕ ಮುನಿಗಳೆಲ್ಲರೂ ತಾವು ಹಿಂದೆ ಮಾಡಿದ ತಪಸ್ಸಿನ ಮಹಿಮೆಯಿಂದ ಯಾವ ಪ್ರದೇಶದಲ್ಲಿ ಅಂಬಿಕಾಪತಿಯಾದ ಪರಮೇಶ್ವರನು ಸಂತೋಷದಿಂದ ನರ್ತನಮಾಡುತ್ತಿರುವನೋ ಆ ವ್ಯಾಘ್ರಪುರಕ್ಕೆ ಹೋದರು. ॥೪೮-೪೯॥

ನಾನು ಕೂಡ ವ್ಯಾಸರ ಮಾತನ್ನು ಕೇಳಿ ಅತ್ಯಂತ ಭಕ್ತಿಯಿಂದ ಕೂಡಿ, ದಕ್ಷಿಣಕೈಲಾಸ, ಪುಂಡರೀಕಪುರ, ವೃದ್ಧಾಚಲಕ್ಷೇತ್ರಗಳಲ್ಲಿ ಒಂದೊಂದು ವರ್ಷ ವಾಸಮಾಡಿ ಕಾಶಿಯಲ್ಲಿಯೇ ಮಂಗಳಕರವಾದ ಜ್ಞಾನವನ್ನು ಪಡೆದೆನು. ॥೫೦-೫೧॥

ಪಂಡಿತರಲ್ಲಿ ಶ್ರೇಷ್ಠರಾದ ಎಲೈ ಮುನಿಗಳೇ, ನೀವೂ ಕೂಡಾ ನಿಮ್ಮ ಭಕ್ತಿಗನುಸಾರವಾಗಿ ಈಗ ಹೇಳಿದ ಕ್ಷೇತ್ರಗಳಲ್ಲೊಂದನ್ನು ಆಶ್ರಯಿಸಿ ಮುಕ್ತಿಯನ್ನು

ಹೊಂದಿರಿ. ಅನೇಕ ಜನರು ಈ ಕ್ಷೇತ್ರಗಳಲ್ಲಿ ವಾಸಮಾಡುವುದರಿಂದಲೇ ಸಂಸಾರ ಬಂಧನವನ್ನು ಕಳೆದುಕೊಂಡು ಮುಕ್ತಿಯನ್ನು ಹೊಂದಿದರು. ||೫೨-೫೩||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ ಮುಕ್ತಿಸಾಧನಗಳನ್ನು ಹೇಳಿರುವ ಏಳನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

|| ಅಷ್ಟಮೋಽಧ್ಯಾಯಃ ||

ಎಂಟನೆಯ ಅಧ್ಯಾಯವು

|| ನೈಮಿಷೀಯಾ ಊಚುಃ ||

ಕಾಲಸಂಖ್ಯಾ ಕಥಂ ವಿದ್ವನ್ಕಥಿತಂ ಕಾಲವೇದಿಭಿಃ ।
ಕಃ ಕಾಲೇನಾನವಚ್ಛಿನ್ನೋ ವದ ಕಾರುಣ್ಯತೋಽನಘ ॥೧॥

|| ಸೂತ ಉವಾಚ ||

ಕಾಲಸಂಖ್ಯಾ ಮಯಾ ವಕ್ತುಂ ನ ಶಕ್ಯಾ ಜನ್ಮಕೋಟಿಭಿಃ ।
ಮುನೀಂದ್ರೈರಪಿ ದೇವೈಶ್ಚ ಶಿವೇನಾಪಿ ಮಹಾತ್ಮನಾ ॥೨॥

ನೈಮಿಷಾರಣ್ಯವಾಸಿಗಳಾದ ಮುನಿಗಳು ಹೇಳಿದರು—ಹಿಂದೆ ಹೇಳಿದ ತೀರ್ಥ ಸೇವನೆಯಿಂದ ಜ್ಞಾನವುಂಟಾಗಿ ಮುಕ್ತರಾದವರಿಗೂ, ಸಂಸಾರಿಗಳಿಗೂ ಕಾಲದ ಅಳತೆಯು ಸಮಾನವಾದುದರಿಂದ ಕಾಲದ ವಿಶೇಷಸ್ವರೂಪವನ್ನು ತಿಳಿದುಕೊಳ್ಳ ಬೇಕೆಂಬ ಅಪೇಕ್ಷೆಯಿಂದ ಋಷಿಗಳು ಪ್ರಶ್ನೆಮಾಡುವರು. ಓ ವಿದ್ವಾಂಸನಾದ ಸೂತನೇ, ಕಾಲವನ್ನು ಲೆಕ್ಕಮಾಡುವುದೆಂತು? ಕಾಲದ ಅಳತೆಗೆ ಸಿಕ್ಕದವನು ಯಾರು? ಈ ವಿಷಯಗಳನ್ನು ದಯೆಯಿಂದ ನಮಗೆ ಹೇಳಬೇಕು. ||೧||

ಸೃಷ್ಟಿಪ್ರಳಯಗಳು ಅನಾದಿಪ್ರವಾಹರೂಪವಾಗಿ ನಡೆದುಕೊಂಡು ಬಂದಿರುವುದರಿಂದ ನೀವು ಕೇಳುವ ಕಾಲದ ಅಳತೆಯನ್ನು ನಾನು ಹೇಳಿಮುಗಿಸಲು ಸಾಧ್ಯವಿಲ್ಲವು. ಅದನ್ನು ಮುನಿಶ್ರೇಷ್ಠರೂ, ದೇವತೆಗಳೂ, ಮಹಾಮಹಿಮನಾದ ಶಿವನೂ ಕೂಡ ಹೇಳಲಾರನು. ಆ ಕಾಲವೆಂಬುದು ಮನುಷ್ಯರ ಕೊಂಬಿನಂತೆ ಅಸತ್ತಾದ ಇಂದ್ರಿಯಾ

ತಥಾಽಪಿ ಸಂಗ್ರಹೇಣಾಽಹಂ ವಕ್ಷ್ಯೇ ಯುಷ್ಮಾಕಮಾದರಾತ್ ।
ಕಾಷ್ಠಾ ಪಂಚದಶ ಪ್ರೋಕ್ತಾ ನಿಮೇಷಾಃ ಪಂಡಿತೋತ್ತಮಾಃ ॥೩॥

ತಾಸಾಂ ತ್ರಿಂಶತ್ಕಲಾ ತಾಸಾಂ ತ್ರಿಂಶನ್ಮೌಹೂರ್ತಿಕೀ ಗತಿಃ ।
ಮುಹೂರ್ತಾನಾಂ ದ್ವಿಜಾಸ್ತ್ರಿಂಶದ್ದಿವಾರಾತ್ರಂ ತು ಮಾನವಂ ॥೪॥

ಅಹೋರಾತ್ರಾಣಿ ವಿಪ್ರೇಂದ್ರಾಃ ಪಕ್ಷಃ ಪಂಚದಶ(ಃ)ಸ್ಮೃತಃ ।
ಪಕ್ಷದ್ವಯೇನ ಮಾಸಃ ಸ್ಯಾನ್ಮಾಸೈಃ ಷಡ್ಭಿರ್ದ್ವಿಜೋತ್ತಮಾಃ ॥೫॥

ಗೋಚರವಾದ ವಸ್ತುವು. ಆದರೂ ಯುಗ, ಮನ್ವಂತರ, ಮಹಾಕಲ್ಪಗಳ ವರ್ಷಗಳ ಕಲ್ಪಿತಕಾಲಭಾಗಗಳ ಸಂಖ್ಯೆಯನ್ನು ನೀವು ಕೇಳುವುದಾದರೆ ಅದನ್ನು ಹೇಳುವೆನು. ||೨||

ವಿದ್ವಾಂಸರಲ್ಲಿ ಶ್ರೇಷ್ಠರಾದ ಮುನಿಗಳೇ, ಹದಿನೈದು ಕಾಷ್ಠಗಳಿಗೆ ಒಂದು ನಿಮಿಷವು. ಮೂವತ್ತು ನಿಮಿಷಗಳಿಗೆ ಒಂದು ಕಲೆಯು. ಮೂವತ್ತು ಕಲೆಗಳಿಗೆ ಒಂದು ಮುಹೂರ್ತವು. ಮೂವತ್ತು ಮುಹೂರ್ತಗಳಿಗೆ ಮನುಷ್ಯರ ಅಳತೆಯು ಒಂದು ದಿನವು. ಈ ವಿಭಾಗವು ಮನುಷ್ಯರಿಗೆ ಸೂರ್ಯಮಾನದಿಂದ ಆದ ಅಳತೆಯ ಪ್ರಮಾಣವು. ಚಾಂದ್ರಮಾನದ ಅಳತೆಯು ಪಿತೃಗಳಿಗೂ, ಸೌರಮಾನದ ಅಳತೆಯು ದೇವತೆಗಳಿಗೂ ಗೊತ್ತಾಗಿರುವುದು. ಸೂರ್ಯೋದಯದಿಂದ ಸೂರ್ಯಾಸ್ತಮಯ ಪರ್ಯಂತವಾಗಿ ಮೂವತ್ತು ಘಳಿಗೆಯು ರಾತ್ರಿಯು. ಈ ಅಳತೆಯು ಮನುಷ್ಯರಿಗೆ. ಪಿತೃಗಳಿಗೆ ಕೃಷ್ಣಪಕ್ಷದ ಅಷ್ಟಮಿಯ ದಿನ ಸೂರ್ಯೋದಯವು, ಅಮಾವಾಸ್ಯೆಯು ಹಗಲಿನ ಮಧ್ಯಭಾಗವು. ಶುಕ್ಲಪಕ್ಷದ ಅಷ್ಟಮಿಯ ದಿನ ಸೂರ್ಯಾಸ್ತವು, ಪೂರ್ಣಿಮೆಯು ನಡುರಾತ್ರಿಯು. ಇದು ಚಾಂದ್ರಮಾನದಿಂದ ಪಿತೃಗಳ ಅಹೋರಾತ್ರಿಯು. ||೩-೪||

ಹದಿನೈದು ಹಗಲು ರಾತ್ರಿಗಳಾದರೆ ಎಂದರೆ ಶುಕ್ಲಪಕ್ಷದ ಪ್ರತಿಪತ್ತಿಥಿಯಿಂದ ಪೂರ್ಣಿಮಾತಿಥಿಪರ್ಯಂತವಾಗಿ ಹದಿನೈದು ದಿನಗಳಾದರೇ ಮನುಷ್ಯನಿಗೆ ಒಂದು ಪಕ್ಷವಾಗುವುದು. ಮಿಕ್ಕ ಹದಿನೈದು ದಿನಗಳಿಗೆ ಕೃಷ್ಣಪಕ್ಷವೆಂದು ಹೆಸರು. ಎರಡು ಪಕ್ಷಗಳೂ ಸೇರಿದರೆ ಚಾಂದ್ರಮಾನದ ಒಂದು ತಿಂಗಳಾಗುವುದು. ಸೌರಮಾಸ ವೆಂಬುದು ಯಾವ ತಿಥಿಯಿಂದಲಾದರೂ ಪ್ರಾರಂಭಿಸಿ ಮೂವತ್ತು ಸೂರ್ಯೋದಯಗಳ ಲೆಕ್ಕವುಳ್ಳದ್ದಾಗಿರುವುದು. ಸೌರಮಾಸವು ಸೂರ್ಯನು ಒಂದು ರಾಶಿಯಲ್ಲಿರುವ ಕಾಲವನ್ನು ಸೂಚಿಸುವುದು. ಇವೆರಡಕ್ಕೂ ಪಕ್ಷಗಳ ವ್ಯವಹಾರವಿಲ್ಲವು. ||೫||

ಅಯನಂ ದ್ವೇಽಯನೇ ವರ್ಷಂ ಕ್ರಮಾತ್ತೇ ದಕ್ಷಿಣೋತ್ತರೇ ।
ರಾತ್ರಿರ್ದಿವೌಕಸಾಂ ಪೂರ್ವಂ ದಿವಾ ಚೈವೋತ್ತರಾಯಣಂ ॥೬॥
ಮನುಷ್ಯಾಣಾಂ ಯಥಾ ತದ್ವದ್ದೇವಾನಾಮಪಿ ಸೂರಿಭಿಃ ।
ಪಕ್ಷಮಾಸಾಯನಾಬ್ದಾನಾಂ ವಿಭಾಗಃ ಕಥಿತೋ ದ್ವಿಜಾಃ ॥೭॥

ಆರು ಮಾಸಗಳಾದರೆ ಒಂದು ಅಯನವು. ಎರಡು ಅಯನಗಳಿಂದ ದೇವತೆಗಳಿಗೆ ಒಂದು ದಿನವಾಗುವುದು. ದಕ್ಷಿಣಾಯನವು ರಾತ್ರಿಯು. ಉತ್ತರಾಯಣವು ಹಗಲಾಗುವುದು. ಚಾಂದ್ರಮಾನಕ್ಕೂ ಅಯನಗಳುಂಟು. ಆದರೆ ಈ ಅಳತೆಯು ಆರು ಮಾಸಗಳಲ್ಲ. ಕಟಕಾಯನದಿಂದ ಮಕರಾಯನದ ವರೆಗೆ ದಕ್ಷಿಣಾಯನವು. ಆ ಕಾಲದಲ್ಲಿ ಸೂರ್ಯನು ಕ್ರಾಂತಿಚಕ್ರದ ಉತ್ತರದ ತುದಿಯಿಂದ ಪ್ರತಿದಿನವೂ ದಕ್ಷಿಣಕ್ಕೆ ಬರುತ್ತಿರುವನು. ಮಕರಾಯನದಿಂದ ಕಟಕಾಯನದ ಪರ್ಯಂತವಾಗಿ ಸೂರ್ಯನು ಕ್ರಾಂತಿಚಕ್ರದ ದಕ್ಷಿಣದ ತುದಿಯಿಂದ ಪ್ರತಿದಿನವೂ ಉತ್ತರಕ್ಕೆ ಹೋಗುವನು. ಈ ಕಾಲವೇ ಉತ್ತರಾಯಣವು. ದಕ್ಷಿಣಾಯನವು ದೇವತೆಗಳಿಗೆ ರಾತ್ರಿಯು. ಉತ್ತರಾಯಣವು ಹಗಲು. ಸೂರ್ಯಸಿದ್ಧಾಂತದಲ್ಲಿ. “ಸುರಾಸುರಾಣಾಮನ್ಯೋನ್ಯಮಹೋರಾತ್ರಂ ವಿಪರ್ಯಯಾತ್” ಎಂದು ಹೇಳಿದೆ. ಮೇಷಾದಿ ಆರು ರಾಶಿಗಳು ನಿರಕ್ಷರೇಖೆಯಿಂದ ಉತ್ತರದಲ್ಲಿ ಇರುವುವು. ಆ ರಾಶಿಗಳಲ್ಲಿರುವ ಸೂರ್ಯನನ್ನು ದೇವತೆಗಳು ಯಾವಾಗಲೂ, ನೋಡುತ್ತಿರುವುದರಿಂದ ಅವರಿಗೆ ಆ ಕಾಲವು ಹಗಲಾಗಿರುವುದು. ತುಲಾದಿ ಆರು ರಾಶಿಗಳು ನಿರಕ್ಷರೇಖೆಯ ದಕ್ಷಿಣದಲ್ಲಿ ಇರುವುವು. ಅಲ್ಲಿರುವ ಸೂರ್ಯನನ್ನು ಅಸುರರು ಯಾವಾಗಲೂ ನೋಡುತ್ತಿರುವರು. ಆದುದರಿಂದ ಅಸುರರಿಗೆ ಅದು ಹಗಲಾಗುವುದು. ದೇವತೆಗಳಿಗೆ ಅದು ರಾತ್ರಿಯು ಎಂದು ಹೇಳಿರುವುದು. ಈ ವಿಷಯದಲ್ಲಿ ವಿವರಣವೇನೆಂದರೆ—ದಿವಾಶಬ್ದದಿಂದ ಸೂರ್ಯನಿಗೆ ಉನ್ನತಿಕಾಲವನ್ನೂ ರಾತ್ರಿ ಶಬ್ದದಿಂದ ಅವನತಿ ಕಾಲವನ್ನೂ ಇಟ್ಟುಕೊಂಡು, ಮಕರಾದಿಯಾದ ಆರು ಮಾಸಗಳು ಸೂರ್ಯನಿಗೆ ಉನ್ನತಿಕಾಲವಾದುದರಿಂದ ದೇವತೆಗಳಿಗೆ ಹಗಲೆಂದೂ, ಕರ್ಕಟಾದಿ ಆರು ಮಾಸಗಳು ಸೂರ್ಯನಿಗೆ ನತಕಾಲವಾದುದರಿಂದ ಅವರಿಗೆ ರಾತ್ರಿ ಎಂದೂ ಹೇಳಿರುವುದು. ನಿರಕ್ಷರೇಖೆಯಿಂದ ಸೂರ್ಯನು ದಕ್ಷಿಣಕ್ಕೂ, ಉತ್ತರಕ್ಕೂ ಹೋಗುವ ಕಾಲವನ್ನು ನತೋನ್ನತಕಾಲವೆಂದಿಟ್ಟುಕೊಂಡಾದರೂ ದೇವತೆಗಳಿಗೆ ರಾತ್ರಿ ಮತ್ತು ಹಗಲನ್ನು ಗೊತ್ತುಮಾಡಿಕೊಳ್ಳಬಹುದು. ॥೬॥

ಎಲೈ ಬ್ರಾಹ್ಮಣರೇ, ಮನುಷ್ಯರಿಗೆ ಹೇಗೋ ಹಾಗೆಯೇ ದೇವತೆಗಳಿಗೂ, ಹದಿನೈದು ತಿಥಿಗೊಂದು ಪಕ್ಷವೂ, ಎರಡು ಪಕ್ಷಕ್ಕೊಂದು ಮಾಸವೂ, ಆರು ಮಾಸ

ದಿವ್ಯೈರ್ದ್ವಾದಶಸಾಹಸ್ರೈರ್ವರ್ಷೈಃ ಪ್ರೋಕ್ತಂ ಚತುರ್ಯುಗಂ ।
ಕೃತಂ ತತ್ರ ಯುಗಂ ವಿಪ್ರಾಃ ಸಹಸ್ರಾಣಾಂ ಚತುಷ್ಟಯಂ ॥೮॥

ತಸ್ಯ ಸಂಧ್ಯಾ ಚ ಸಂಧ್ಯಾಂಶಃ ಪ್ರೋಕ್ತಶ್ಚಾಷ್ಟಶತಾಽನಘಾಃ ।
ತ್ರಿಭಿರ್ವರ್ಷಸಹಸ್ರೈಸ್ತು ತ್ರೇತಾ ದಿವ್ಯೈಃ ಪ್ರಕೀರ್ತಿತಾ ॥೯॥

ಕೃತಾರ್ಧಂ ದ್ವಾಪರಃ ಪ್ರೋಕ್ತಸ್ತದರ್ಧಂ ಕಲಿರುಚ್ಯತೇ ।
ಕ್ರಮಾತ್ಸಂಧ್ಯಾ ಚ ಸಂಧ್ಯಾಂಶಸ್ತುರೀಯಾಂಶವಿವರ್ಜಿತಃ ॥೧೦॥

ತ್ರೇತಾ ದ್ವಾಪರಶಿಷ್ಯಾಣಾಂ ಯುಗಾನಾಂ ಮುನಿಪುಂಗವಾಃ ।
ಏವಂ ದ್ವಾದಶಸಾಹಸ್ರಂ ಪ್ರೋಕ್ತಂ ವಿಪ್ರಾಶ್ಚತುರ್ಯುಗಂ ॥೧೧॥

ಗಳು ಎಂದರೆ ಸೂರ್ಯನ ಆರು ರಾಶಿಗಳ ಸಂಚಾರ ಕಾಲವು ಅಯನವೆಂದೂ, ಎರಡು ಅಯನಗಳು ಒಂದು ಸಂವತ್ಸರವೆಂದೂ, ಅವರವರ ಅಳತೆಯಿಂದ ತಿಳಿದು ಕೊಳ್ಳಬೇಕೆಂದು ವಿದ್ವಾಂಸರು ಹೇಳುವರು. ||೭||

ದೇವಮಾನದಿಂದ ಹನ್ನೆರಡು ಸಾವಿರ ವರ್ಷವಾದರೆ ನಾಲ್ಕು ಯುಗಗಳಾಗು ವುವು. ಆದರಲ್ಲಿ ಕೃತಯುಗವು ನಾಲ್ಕು ಸಾವಿರ ವರ್ಷಗಳು. ಇನ್ನೂರಿನ್ನೂರು ವರ್ಷಗಳು ಸಂಧಿಕಾಲಗಳು. ಮತ್ತೆ ಇನ್ನೂರಿನ್ನೂರು ವರ್ಷಗಳು ಸಂಧ್ಯಂಶವು. ಒಟ್ಟು ನಾಲ್ಕು ಸಾವಿರದ ಎಂಟುನೂರು ವರ್ಷಗಳು ಕೃತಯುಗ ಪ್ರಮಾಣವಾಗು ವುದು. ||೮||

ದೇವಮಾನದ ಮೂರುಸಾವಿರ ವರ್ಷಗಳಿಗೆ ತ್ರೇತಾಯುಗವೂ, ಕೃತಯುಗದ ಅರ್ಧವಾದ ಎರಡು ಸಾವಿರ ವರ್ಷಗಳಿಗೆ ದ್ವಾಪರಯುಗವೂ, ಇದರ ಅರ್ಧವಾದ ವಾದ ಒಂದು ಸಾವಿರ ವರ್ಷಕ್ಕೆ ಕಲಿಯುಗವೂ, ಸಂಧಿಕಾಲವೂ, ಸಂಧ್ಯಾಂಶವೂ, ಕ್ರಮವಾಗಿ ಕೃತಯುಗದ ನಾಲ್ಕು ಭಾಗದಲ್ಲೊಂದು ಭಾಗ ಕಡಿಮೆಯಾಗಿ ಅಂದರೆ ತ್ರೇತಾಯುಗಕ್ಕೆ ಮುನ್ನೂರು ಮುನ್ನೂರು ವರ್ಷಗಳೂ, ದ್ವಾಪರಯುಗಕ್ಕೆ ಇನ್ನೂರಿ ನ್ನೂರು ವರ್ಷಗಳೂ, ಕಲಿಯುಗಕ್ಕೆ ನೂರು ನೂರು ವರ್ಷಗಳೂ ಆಗುವುವು. ಸೂರ್ಯಸಿದ್ಧಾಂತದಲ್ಲಿ—“ ದಿವ್ಯೈರ್ದ್ವಾದಶಸಾಹಸ್ರೈರ್ಭಿನ್ನೈರೇಕಂ ಚತುರ್ಯುಗಂ ಯುಗಸ್ಯ ದಶಮೋ ಭಾಗಶ್ಚತುಸ್ತ್ರಿದ್ವ್ಯೇಕಸಂಗುಣಃ । ಕ್ರಮಾತ್ಕೃತಯುಗಾ ದೀನಾಂ ಷಷ್ಠೋಂಶಃ ಸಂಧ್ಯಯೋಃ ಸ್ವಕಃ ॥ ” ಎಂದು ಹನ್ನೆರಡು ಸಾವಿರ ದೇವ ಮಾನದ ವರ್ಷಗಳಿಗೆ ಒಂದು ಚತುರ್ಯುಗವೆಂದೂ, ಇದರ ಹತ್ತನೆಯ ಒಂದು

ಯುಗಾನಾಮೇಕಸಪ್ತತ್ಯಾ ಮನ್ವಂತರಮಿಹೋಚ್ಯತೇ ।
ಮನವೋ ಬ್ರಹ್ಮಣಃ ಪ್ರೋಕ್ತಾ ದಿವಸೇ ಚ ಚತುರ್ದಶ ॥೧೨॥

ಬ್ರಾಹ್ಮಮೇಕ ಮಹರ್ವಿಪ್ರಾಃ ಕಲ್ಪ ಇತ್ಯುಚ್ಯತೇ ಬುಧೈಃ ।
ತಾವತೀ ರಾತ್ರಿರಪ್ಯುಕ್ತಾ ಬ್ರಹ್ಮಣಃ ಪಂಡಿತೋತ್ತಮಾಃ ॥೧೩॥

ತ್ರಿಶತೈಃ ಷಷ್ಟಿಭಿಃ ಕಲ್ಪೈಬ್ರಹ್ಮಣೋ ವರ್ಷಮೀರಿತಂ ।
ವರ್ಷಾಣಾಂ ಯಚ್ಛತಂ ತಸ್ಯ ದ್ವಿಪರಾರ್ಧಮಿಹೋಚ್ಯತೇ ॥೧೪॥

ಭಾಗವನ್ನು ನಾಲ್ಕು ಮೂರು ಎರಡು ಒಂದರಿಂದ ಗುಣಿಸಿದರೆ ಕ್ರಮವಾಗಿ ಕೃತ, ತ್ರೇತ, ದ್ವಾಪರ, ಕಲಿ ಯುಗಪ್ರಮಾಣವಾಗುವುದೆಂದೂ, ಆಯಾಯ ಯುಗದ ಆರನೆಯ ಒಂದು ಪಾಲು ಸಂಧಿ ಮತ್ತು ಸಂಧ್ಯಾಂಶಗಳೆಂದೂ ಹೇಳಿರುವುದು. ||೯-೧೦-೧೧||

ಇಪ್ಪತ್ತೊಂದು ಚತುರ್ಯುಗಗಳಿಗೆ ಒಂದು ಮನ್ವಂತರವು. ಬ್ರಹ್ಮನ ಒಂದು ಹಗಲಿನಲ್ಲಿ ಹದಿನಾಲ್ಕು ಮನುಗಳ ಅಧಿಕಾರವು ಮುಗಿಯುವುದು. ||೧೨||

ಬ್ರಹ್ಮನ ಹಗಲಿಗೆ ಎಂದರೆ ಒಂದು ಸಾವಿರ ಚತುರ್ಯುಗಕ್ಕೆ ಕಲ್ಪವೆಂದು ಹೆಸರು. ಬ್ರಹ್ಮನ ರಾತ್ರಿ ಪ್ರಮಾಣವೂ ಇಷ್ಟೇ ಇರುವುದು. ಕಲ್ಪದ ಪ್ರಾರಂಭದಲ್ಲಿ ಒಂದು ಸಂಧಿಕಾಲವೂ ಒಂದೊಂದು ಮನ್ವಂತರದ ಕೊನೆಯಲ್ಲಿ ಒಂದೊಂದು ಸಂಧಿ ಕಾಲವೂ ಸೇರಿ ಒಟ್ಟುಸಂಧಿಕಾಲಗಳು ಹದಿನೈದಾಗುವುವು. ಒಂದೊಂದು ಸಂಧಿ ಕಾಲಕ್ಕೆ ಕೃತಯುಗಪ್ರಮಾಣ ಅಥವಾ ಕಲಿಯುಗದ ನಾಲ್ಕರಷ್ಟು ವರ್ಷಗಳಾಗುವುವು. ಹದಿನೈದು ಸಂಧಿಕಾಲಗಳಿಗೆ ಆರು ಚತುರ್ಯುಗಗಳಾಗುವುವು. ಹದಿನಾಲ್ಕು ಮನ್ವಂತರಗಳಿಗೆ ೭೧ × ೧೪=೯೯೪ ಚತುರ್ಯುಗಗಳು ಸಂಧಿಕಾಲವು ೬ ಚತುರ್ಯುಗಗಳು ಒಟ್ಟು ಬ್ರಹ್ಮನ ಒಂದು ಹಗಲಾಗುವುದು. ||೧೩||

ಮುನ್ನೂರು ಅರವತ್ತು ಕಲ್ಪಗಳಿಂದಲೂ ಅಷ್ಟೇ ರಾತ್ರಿಗಳಿಂದಲೂ ಕೂಡಿದ ಕಾಲಕ್ಕೆ ಬ್ರಹ್ಮನಿಗೆ ಒಂದು ವರ್ಷವಾಗುವುದು. ಇಂತಹ ಒಂದುನೂರು ವರ್ಷಗಳು ಎಂದರೆ ಎರಡು ಪರಾರ್ಧಗಳ ಸಂವತ್ಸರಗಳ ಕಾಲಕ್ಕೆ ಬ್ರಹ್ಮನ ಆಯುಸ್ಸು ಮುಗಿಯುವುದು. ||೧೪||

ಬ್ರಹ್ಮಣೋಽಂತೇ ಮುನಿಶ್ರೇಷ್ಠಾ ಮಾಯಾಯಾಂ ಲೀಯತೇ ಜಗತ್ ।
ತಥಾ ವಿಷ್ಣುಶ್ಚ ರುದ್ರಶ್ಚ ಪ್ರಕೃತೌ ವಿಲಯಂ ಗತೌ ॥೧೫॥

ಬ್ರಹ್ಮಣಶ್ಚ ತಥಾ ವಿಷ್ಣೋ ಸ್ತಥಾ ರುದ್ರಸ್ಯ ಸುವ್ರತಾಃ ।
ಮೂರ್ತಯೋ ವಿವಿಧಾಃ ಸ್ವೇಷು ಕಾರಣೇಷು ಲಯಂ ಯಯುಃ ॥೧೬॥

ಮಾಯಯಾ ಚ ಪ್ರಲಯೇ ಕಾಲೇ ಪರಸ್ಮಿನ್ಪರಮೇಶ್ವರೇ ।
ಸತ್ಯಬೋಧಸುಖಾನಂತ ಬ್ರಹ್ಮರುದ್ರಾದಿಸಂಜ್ಞಿತೇ ॥೧೭॥

ಅಭೇದೇನ ಸ್ಥಿತಿಂ ಯಾತಿ ಹೇತುಸ್ತತ್ರಸುದುರ್ಗಮಃ ।
ಅನ್ಯಥಾ ಭಾನಹೇತುತ್ವಾದಿಯಂ ಮಾಯೇತಿ ಕೀರ್ತಿತಾ ॥೧೮॥

ಬ್ರಹ್ಮನ ಆಯುಸ್ಸಿನ ಕೊನೆಯಲ್ಲಿ ಪ್ರಪಂಚವು ಕ್ರಮವಾಗಿ ಸ್ಥೂಲಭೂತವು ಸೂಕ್ಷ್ಮಭೂತಗಳಲ್ಲಿಯೂ, ಅವುಗಳೆಲ್ಲವೂ ಮಾಯೆಯಲ್ಲಿಯೂ, ಲೀನವಾಗುವುವು. ವಿಷ್ಣುರುದ್ರರೂ ಪ್ರಕೃತಿಯಲ್ಲಿ ಲಯವನ್ನು ಹೊಂದುವರು. ॥೧೫॥

ಬ್ರಹ್ಮವಿಷ್ಣುರುದ್ರರ ಅವತಾರ ಮೂರ್ತಿಗಳು ತಮಗೆ ಕಾರಣವಾದ ಮಾಯಾ ಸಂಬಂಧವಾದ ಸತ್ವರಜಸ್ತಮೋಗುಣಗಳಲ್ಲಿ ಪ್ರವೇಶಿಸುವುವು. ॥೧೬॥

ಪ್ರಾಕೃತಪ್ರಳಯದಲ್ಲಿ ಮಾಯೆಯು ಸತ್ಯಜ್ಞಾನಾನಂತರೂಪನಾದ ಬ್ರಹ್ಮ ರುದ್ರ ಮುಂತಾದ ಹೆಸರುಳ್ಳ ಪರಮಾತ್ಮನಾದ ಪರಮೇಶ್ವರನಲ್ಲಿ ಅಭೇದವಾಗಿರುವುದು. ಹೀಗಿರುವಿಕೆಗೆ ಕಾರಣವನ್ನು ಹೇಳಲು ಸಾಧ್ಯವಿಲ್ಲ. ಮುಂದಿನ ಸೃಷ್ಟಿಗಾಗಿ ಮಾಯೆಯ ಈ ಸ್ಥಿತಿ ಎಂದು ಹೇಳುವರು. ಆದೂ ಸಂಗತವಲ್ಲವು. ತನ್ನ ಮಹಿಮೆಯಿಂದ ಯಾವಾಗಲೂ ಇರುತ್ತಿರುವ ಪರಮೇಶನಿಗೆ ಮುಂದಿನ ಸೃಷ್ಟಿಯಿಂದ ಪ್ರಯೋಜನವೇನು? ಈ ವಿಷಯದಲ್ಲಿ ಆಚಾರ್ಯರು—"ಭೋಗಾರ್ಥಂ ಸೃಷ್ಟಿರಿತ್ಯನ್ಯೇ ಕ್ರೀಡಾರ್ಥಮಿತಿ ಚಾಪರೇ । ದೇವಸ್ಯೈಷ ಸ್ವಭಾವೋಽಯಮಾಪ್ತಕಾಮಸ್ಯ ಕಾ ಸ್ಪೃಹಾ" ಎಂದೂ, ವ್ಯಾಸರು ಬ್ರಹ್ಮಸೂತ್ರದಲ್ಲಿ—"ಲೋಕವತ್ತು ಲೀಲಾಕೈವಲ್ಯಂ" ಎಂದೂ, ವಿಷ್ಣುಪುರಾಣದಲ್ಲಿ—"ಕ್ರೀಡತೋ ಬಾಲಕಸ್ಯೇವ ಚೇಷ್ಟಾಸ್ತಸ್ಯ ನಿಶಾಮಯ" ಎಂದೂ ಹೇಳಿರುವರು. ॥೧೭॥

ಪರಮಾತ್ಮನ ಈ ಶಕ್ತಿಗೆ ಬೇರೆ ಬೇರೆಯಾದ ಹೆಸರುಗಳು ಬಂದಿರಲು ಕಾರಣವೇನೆಂದರೆ—ತನ್ನ ಸ್ವಸ್ವರೂಪದಿಂದಲ್ಲದೆ ಬೇರೆ ರೂಪದಿಂದ ಕಾಣುವುದರಿಂದ ಮಾಯೆಯೆಂದೂ, ಆತ್ಮತತ್ವವನ್ನು ಮುಚ್ಚುವುದರಿಂದ ತಮವೆಂದೂ, ವಿದ್ಯೆಯಿಂದ

ಆತ್ಮತತ್ವತಿರಸ್ಕಾರಾತ್ತಮ ಇತ್ಯುಚ್ಯತೇ ಬುಧೈಃ ।
ವಿದ್ಯಾನಾಶ್ಯತ್ವತೋಽವಿದ್ಯಾ ಮೋಹಸ್ತತ್ಕಾರಣತ್ವತಃ ॥೧೯॥

ಸದ್ವೈಲಕ್ಷಣ್ಯದೃಷ್ಟ್ಯೇಯಮಸದಿತ್ಯುದಿತಾ ಬುಧೈಃ ।
ಕಾರ್ಯನಿಷ್ಪತ್ತಿಹೇತುತ್ವಾತ್ಕಾರಣಂ ಪ್ರೋಚ್ಯತೇ ಬುಧೈಃ ॥೨೦॥

ಕಾರ್ಯವದ್ವ್ಯಕ್ತತಾಭಾವಾದವ್ಯಕ್ತಮಿತಿ ಗೀಯತೇ ।
ಏಷಾ ಮಾಹೇಶ್ವರೀ ಶಕ್ತಿರ್ನ ಸ್ವತಂತ್ರಾ ಪರಾತ್ಮವತ್ ॥೨೧॥

ಅನಯಾ ದೇವದೇವಸ್ಯ ಶಿವಸ್ಯ ಪರಮಾತ್ಮನಃ ।
ಉದಿತಃ ಪರಮಃ ಕಾಲಸ್ತದ್ವಶಾಃ ಸರ್ವಜಂತವಃ ॥೨೨॥

ಸೋಽಪಿ ಸಾಕ್ಷಾನ್ಮಹಾದೇವೇ ಕಲ್ಪಿತೋ ಮಾಯಯಾ ಸದಾ ।
ಸರ್ವೇ ಕಾಲೇ ವಿಲೀಯಂತೇ ನ ಕಾಲೋ ಲೀಯತೇ ಸದಾ ॥೨೩॥

ನಾಶವಾಗುವುದರಿಂದ ಅವಿದ್ಯೆ ಎಂದೂ, ಅಜ್ಞಾನಕ್ಕೆ ಕಾರಣವಾದುದರಿಂದ ಮೋಹವೆಂದೂ, ಸತ್ಪದಾರ್ಥಕ್ಕಿಂತಲೂ ವಿಲಕ್ಷಣವಾದುದರಿಂದ ಅಸತ್ತೆಂದೂ, ಕಾರ್ಯೋತ್ಪತ್ತಿಯಾಗಲು ಇದೇ ಮುಖ್ಯವಾದುದರಿಂದ ಕಾರಣವೆಂದೂ ದೃಷ್ಟಿಭೇದದಿಂದಲೇ ಬೇರೆ ಬೇರೆ ಹೆಸರನ್ನು ಹೇಳುವರು. ॥೧೮-೧೯-೨೦॥

ಕಾರ್ಯವು ವ್ಯಕ್ತವಾಗುವಂತೆ ಇದು ವ್ಯಕ್ತವಾಗದಿರುವುರಿಂದ ಅವ್ಯಕ್ತವೆಂದೂ, ಹೇಳುವರು. ಈ ಮಹೇಶ್ವರನ ಶಕ್ತಿಯು ಪರಮಾತ್ಮನಂತೆ ಸ್ವತಂತ್ರವಾದುದಲ್ಲ. ಆದುದರಿಂದಲೇ ಶಕ್ತಿ ಎಂದು ಹೇಳಿರುವುದು. ॥೨೧॥

ಕಾಲವು ಎರಡು ಬಗೆಯಾಗಿರುವುದು. ಪರಮಾತ್ಮನಾದ ಶಿವನಿಗೂ, ಮಾಯೆಗೂ ಸಂಬಂಧರೂಪವಾದುದು ಪರಮಕಾಲವು. "ಕಾಲೋ ಮಾಯಾತ್ಮ ಸಂಬಂಧಃ ಸರ್ವಸಾಧಾರಣಾತ್ಮಕಃ" ಎಂದು ಹೇಳಿರುವುದು. ಕಲ್ಪ ಮನ್ವಂತರ, ಸಂವತ್ಸರ, ಮಾಸ, ಮುಂತಾದ ಹೆಸರಿನಿಂದ ಪದಾರ್ಥಗಳು ಮತ್ತು ಕಾರ್ಯಗಳು ಅಳತೆಗೆ ಸಿಕ್ಕುವುವು. ಇದೇ ಅಪರಕಾಲವು. ಇದು ಭೂತಭವಿಷ್ಯದ್ವರ್ತಮಾನರೂಪವಾದುದು. ಸಮಸ್ತ ಪ್ರಾಣಿಗಳೂ ಈ ಮೂರು ಕಾಲಕ್ಕೆ ಅಧೀನವಾಗಿರುವುವು. ॥೨೨॥

ಆ ಕಾಲವೂ ಸಾಕ್ಷಾತ್ಪರಮಾತ್ಮನಲ್ಲಿ ಮಾಯೆಯಿಂದ ಕಲ್ಪಿತವಾಗಿರುವುದು. ಎಲ್ಲವನ್ನೂ ಕಾಲದಿಂದ ಅಳತೆಮಾಡಬಹುದು. ಎಲ್ಲ ಕಾರ್ಯಗಳೂ ಕ್ರಮವಾಗಿ

ಕಾಲೋ ಮಾಯಾ ಚ ತತ್ಕಾರ್ಯಂ ಶಿವೇನೈವಾವೃತಂ ಬುಧಾಃ ।
ಶಿವಃ ಕಾಲಾನವಚ್ಛಿನ್ನಃ ಕಾಲತತ್ವಂ ಯಥಾ ತಥಾ ॥೨೪॥

ತಥಾಽಪಿ ಕಾಲೋಽಸತ್ಯತ್ವಾನ್ಮಾಯಯಾ ಸಹ ಲೀಯತೇ ।
ಶಿವೋ ನ ವಿಲಯಂ ಯಾತಿ ದ್ವಿಜಾಃ ಸತ್ಯಸ್ವಭಾವತಃ ॥೨೫॥

ಉತ್ಪನ್ನಾನಾಂ ಪ್ರಣಷ್ಟಾನಾ ಮುತ್ಪಾದ್ಯಾನಾಂ ತಥೈವ ಚ ।
ಶಿವಃ ಕಾಲಾನವಚ್ಛಿನ್ನಃ ಕಾರಣಂ ತ್ವಿತಿ ಕೀರ್ತಿತಃ ॥೨೬॥

ಪ್ರಸಾದಾದಸ್ಯ ದೇವಸ್ಯ ಬ್ರಹ್ಮವಿಷ್ಣ್ವಾದಿಕಂ ಪದಂ ।
ತದಧೀನಂ ಜಗತ್ಸರ್ವಮಿತ್ಯೇಷಾ ಶಾಶ್ವತೀ ಶ್ರುತಿಃ ॥೨೭॥

ಮೂಲಕಾರಣದಲ್ಲಿ ಲಯವಾಗಲು ಅಪೇಕ್ಷಿತವಾದ ಈ ಕಾಲವನ್ನು ಅಳತೆಮಾಡಲು ಯಾವುದೂ ಇರುವುದಿಲ್ಲ. ಆದುದರಿಂದ ಎಲ್ಲವೂ ಕಾಲದಲ್ಲಿ ಲಯಹೊಂದುವುವು. ಕಾಲವು ಯಾವಾಗಲೂ ಯಾವುದರಲ್ಲೂ ಲಯಹೊಂದದು. ॥೨೩॥

ಕಾಲ, ಮಾಯಾ, ಮಾಯಾಕಾರ್ಯ ಈ ಮೂರೂ ಶಿವತತ್ವದಿಂದ ಆವೃತವಾಗಿರುವುವು. ಅವು ಶಿವತತ್ವದಜ್ಞಾನಹೊರತು ಬೇರೆ ಉಪಾಯದಿಂದ ನಾಶವಾಗಲಾರವು. ಎಂಬ ಅಭಿಪ್ರಾಯದಿಂದ "ನ ಕಾಲೋ ಲೀಯತೇ ಸದಾ" ಎಂದು ಹೇಳಿರುವುದು. ಸರ್ವಕಾರಣನಾದ ಶಿವನನ್ನು ಕಾಲವು ಅಳತೆಮಾಡಿ ತೋರಿಸಲಾರದು. ॥೨೪॥

ಹೀಗಿದ್ದರೂ ಕಾಲವು ಅಸತ್ಯವಾದುದರಿಂದ ಮಾಯೆಯೊಡನೆ ಲಯವನ್ನು ಹೊಂದುವುದು. ಶಿವನು ಸತ್ತತ್ವವಾದುದರಿಂದ ನಾಶವಾಗನು. ॥೨೫॥

ಪ್ರಪಂಚವು ಶಿವನಿಂದಲೇ ಹುಟ್ಟಿ, ಅವನಲ್ಲಿಯೇ ಇದ್ದು, ಅವನಲ್ಲಿಯೇ ಲಯಹೊಂದುವುದರಿಂದ ಯಾವಾಗಲೂ ಇರುವ ಶಿವನನ್ನು ಭೂತಭವಿಷ್ಯದ್ವರ್ತಮಾನಕಾಲಗಳು ಅಳತೆಮಾಡಿ ತೋರಿಸಲಾರವು. ॥೨೬॥

ಶಿವನ ಅಧೀನವಾದ ಕಾಲದ ಅಳತೆಗೆ ತಕ್ಕಂತೆ ಬ್ರಹ್ಮ, ವಿಷ್ಣು ಮುಂತಾದವರ ಅಧಿಕಾರವು ದೊರೆತಿರುವುದು. ಸಮಸ್ತ ಪ್ರಪಂಚವೂ ಶಿವನ ಅಧೀನವೆಂದು "ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ನಿಮೇಷಾ ಮುಹೂರ್ತಾ ಅರ್ಧಮಾಸಾಮಾಸ ಇತಿ ವಿಧೃತಾಸ್ತಿಷ್ಠಂತಿ" ಎಂಬ ವೇದವಾಕ್ಯವು ಹೇಳುವುದು. ॥೨೭॥

ಅಸಂಖ್ಯಾ ವಿಲಯಂ ಯಾತಾ ಬ್ರಹ್ಮಾಣಃ ಪಂಡಿತೋತ್ತಮಾಃ ।
ಅಸಂಖ್ಯಾ ವಿಷ್ಣವೋ ರುದ್ರಾ ಅಸಂಖ್ಯಾ ವಾಸವಾದಯಃ ॥೨೮॥

ಏಕ ಏವ ಶಿವಃ ಸಾಕ್ಷಾತ್ಸೃಷ್ಟಿಸ್ಥಿತ್ಯಂತಸಿದ್ಧಯೇ ।
ಬ್ರಹ್ಮವಿಷ್ಣುಶಿವಾಖ್ಯಾಭಿಃ ಕಲ್ಪನಾಭಿರ್ವಿಜೃಂಭಿತಃ ॥೨೯॥

ರಜೋಗುಣೇನ ಸಂಛನ್ನೋ ಬ್ರಹ್ಮಾಧಿಷ್ಠಾಯ ತಂ ಗುಣಂ ।
ಸ್ರಷ್ಟಾ ಭವತಿ ಸರ್ವಸ್ಯ ಜಗತಃ ಪಂಡಿತೋತ್ತಮಾಃ ॥೩೦॥

ಗುಣೇನ ತಮಸಾ ಛನ್ನೋ ವಿಷ್ಣುಃ ಸತ್ವಗುಣಂ ಬುಧಾಃ ।
ಅಧಿಷ್ಠಾಯ ಭವೇತ್ಸರ್ವಜಗತಃ ಪಾಲಕಃ ಪ್ರಭುಃ ॥೩೧॥

ತಥಾ ಸತ್ವಗುಣಛನ್ನೋ ರುದ್ರೋ ವಿಪ್ರಾಸ್ತಮೋಗುಣಂ ।
ಅಧಿಷ್ಠಾಯ ಭವೇದ್ಧಂತಾ ಜಗತಃ ಸತ್ಯವಾದಿನಃ ॥೩೨॥

ಬ್ರಹ್ಮಣೋ ಮೂರ್ತಯೋಽನಂತಾ ಜಾಯಂತೇ ಗುಣಭೇದತಃ ।
ತಥಾ ವಿಷ್ಣೋಸ್ತಥೇಶಸ್ಯ ಗುಣಭೇದೇನ ಸುವ್ರತಾಃ ॥೩೩॥

ವಿದ್ವಾಂಸರಾದ ಬ್ರಾಹ್ಮಣರೇ, ಕೇಳಿರಿ. ಲೆಕ್ಕವಿಲ್ಲದಷ್ಟು ಬ್ರಹ್ಮ, ರುದ್ರ ವಿಷ್ಣು, ದೇವೇಂದ್ರರುಗಳು ಕಳೆದುಹೋದರು. ॥೨೮॥

ಸಾಕ್ಷಾತ್ ಶಿವನೊಬ್ಬನೇ ಸೃಷ್ಟಿ ಸ್ಥಿತಿ ಸಂಹಾರಕಾರ್ಯಸಿದ್ಧಿಗಾಗಿ ಬ್ರಹ್ಮ, ವಿಷ್ಣು, ಶಿವನೆಂಬ ಹೆಸರಿನ ಕಲ್ಪನೆಯಿಂದ ಪ್ರಕಾಶಿಸುತ್ತಿರುವನು. ॥೨೯॥

ಬ್ರಹ್ಮನು ಒಳಗೂ, ಹೊರಗೂ ರಜೋಗುಣದಿಂದ ಕೂಡಿ ಸಮಸ್ತಜಗತ್ತನ್ನೂ ಸೃಷ್ಟಿಸುವನು. ವಿಷ್ಣುವು ಒಳಗೆ ತಮೋಗುಣದಿಂದಲೂ ಹೊರಗೆ ಸತ್ವಗುಣದಿಂದಲೂ, ಕೂಡಿ ಸಮಸ್ತಜಗತ್ತನ್ನು ಧರ್ಮಾನುಸಾರವಾಗಿ ಪಾಲಿಸುವನು. ರುದ್ರನು ಒಳಗೆ ಸತ್ವಗುಣದಿಂದಲೂ, ಹೊರಗೆ ತಮೋಗುಣದಿಂದಲೂ ಕೂಡಿ ಸಕಲ ಜಗತ್ತನ್ನೂ ಪ್ರಾಣಿಕರ್ಮಾನುಸಾರವಾಗಿ ಸಂಹರಿಸುವನು. ॥೩೦-೩೧-೩೨॥

ಎಲೈ ತಪಸ್ವಿಗಳೇ, ಗುಣಗಳ ವ್ಯತ್ಯಾಸದಿಂದ ಬ್ರಹ್ಮ, ವಿಷ್ಣು, ರುದ್ರರ ಅವತಾರಾದಿ ಮೂರ್ತಿಗಳು ಅಸಂಖ್ಯಾಕವಾಗಿರುವುವು. ॥೩೩॥

ಕಾಶ್ಚಿತ್ಸತ್ವಗುಣೋದ್ರೇಕಾದ್ವಿಶಿಷ್ಟಾ ಮೂರ್ತಯೋ ದ್ವಿಜಾಃ ।
ಕಾಶ್ಚಿತ್ತಮೋಗುಣೋದ್ರೇಕಾತ್ ನಿಹಂತ್ರ್ಯೋ ವೇದವಿತ್ತಮಾಃ॥೩೪॥

ಪರಸ್ಪರೋಪಜೀವ್ಯಾಃ ಸ್ಯುರ್ಹಿತಾಯ ಜಗತಾಂ ದ್ವಿಜಾಃ ।
ಸರ್ವಮೂರ್ತಿಷ್ವಯಂ ಸಾಕ್ಷಾಚ್ಛಿವಃ ಸತ್ಯಾದಿಲಕ್ಷಣಃ ॥೩೫॥

ಅಪ್ರಚ್ಯುತಾತ್ಮಭಾವೇನ ಸದಾ ತಿಷ್ಠತಿ ಸುವ್ರತಾಃ ।
ತಮಹಂ ಪ್ರತ್ಯಯವ್ಯಾಜಾತ್ಸರ್ವೇ ಜಾನಂತಿ ಜಂತವಃ ॥೩೬॥

ತಥಾಽಪಿ ಶಿವರೂಪೇಣ ನ ವಿಜಾನಂತಿ ಮಾಯಯಾ ।
ಪ್ರಸಾದಾದ್ದೇವದೇವಸ್ಯ ಶ್ರುತ್ಯುತ್ಪನ್ನಾತ್ಮವಿದ್ಯಯಾ ॥೩೭॥
ಬಹೂನಾಂ ಜನ್ಮನಾಮಂತೇ ಜಾನಂತ್ಯೇವ ಶಿವಂ ಬುಧಾಃ ।

ಕೆಲವು ಮೂರ್ತಿಗಳು ಹೆಚ್ಚಾದ ಸತ್ವಗುಣದಿಂದ ಕೂಡಿದವು, ಮತ್ತೆ ಕೆಲವು ವಿಶೇಷವಾದ ತಮೋಗುಣದಿಂದ ಸಂಹಾರಕಾರ್ಯವನ್ನು ಮಾಡುವುವು. "ಯೇ ಅನ್ನೇಷು ವಿವಿಧ್ಯಂತಿ" "ಯೇ ಪಥಾಂ ಪಥಿ ರಕ್ಷಯ" ಇತ್ಯಾದಿ ವೇದಪ್ರಮಾಣ ವಾಕ್ಯಗಳು ನಿಗ್ರಹಾನುಗ್ರಹವ್ಯಾಪಾರಗಳನ್ನು ಮಾಡುವ ಶಿವನ ಮೂರ್ತಿಗಳು ಅಸಂಖ್ಯಾಕವಾಗಿರುವುವೆಂದು ಹೇಳಿರುವುದು. ॥೩೪॥

ಪ್ರಪಂಚದ ಹಿತಕ್ಕಾಗಿ ಸೃಷ್ಟಿ ಸ್ಥಿತಿ ಸಂಹಾರಕಾರ್ಯಗಳು ಒಂದಕ್ಕೊಂದು ಪೂರಕಪೋಷಕಗಳಾಗಿ ಸಾಧಕಗಳಾಗಿರುವುವು. ಸಮಸ್ತಮೂರ್ತಿಗಳಲ್ಲಿಯೂ, ಸತ್ಯ ಜ್ಞಾನಾನಂದಸ್ವರೂಪನಾದ ಶಿವನು ವ್ಯಾಪಿಸಿರುವನು. ಆದುದರಿಂದ ಈ ಕಾರ್ಯಗಳು ಲೋಕಹಿತವಾದುವಾಗಿರುವುವು. ॥೩೫॥

ಆ ಶಿವನು ಯಾವಾಗಲೂ, ಆತ್ಮಸ್ವರೂಪವನ್ನು ಬಿಡದಿರುವನು. ನಾನು ಎಂಬ ಜ್ಞಾನದ ನೆಪದಿಂದ ಆ ಶಿವನನ್ನು ಎಲ್ಲ ಪ್ರಾಣಿಗಳು ತಿಳಿಯುವುವು. "ಅಂತಃ ಪ್ರವಿಷ್ಟಃ ಶಾಸ್ತಾ ಜನಾನಾಂ ಸರ್ವಾತ್ಮಾ" ಎಂಬ ವೇದವಾಕ್ಯದಿಂದ ಶಿವನು ಸರ್ವ ಜೀವರ ಅಂತರ್ಗತನಾಗಿರುವನೆಂದು ತಿಳಿಯುವುದು. ಆದುದರಿಂದ ನಾನು ಎಂಬುದೇ ಪ್ರತ್ಯಗಾತ್ಮಜ್ಞಾನವು. ಈ ಜ್ಞಾನವೇ ಶಿವನ ಸಂಬಂಧವಾದುದು. ॥೩೬॥

ಹಾಗಾದರೆ ಸಮಸ್ತಪ್ರಾಣಿಗಳೂ ಕೃತಾರ್ಥರಾದರು! ಹೀಗಾದಮೇಲೆ ಶಾಸ್ತ್ರ ಗಳಿಂದಲೂ, ಗುರುಗಳಿಂದಲೂ, ಪ್ರಯೋಜನವೇನು? ಎಂದರೆ ಪ್ರಾಣಿಗಳು ಮಾಯೆ ಯಿಂದ ನಿರುಪಾಧಿಕವಾದ ಶಿವಸ್ವರೂಪವನ್ನು ತಿಳಿದಿಲ್ಲ. ಅದನ್ನು ದೇವದೇವನಾದ

ಪ್ರಸಾದಹೀನಾಃ ಪಾಪಿಷ್ಠಾ ಮೋಹಿತಾ ಮಾಯಯಾ ಜನಾಃ ।
ನೈವ ಜಾನಂತಿ ದೇವೇಶಂ ಜನ್ಮನಾಶಾದಿಪೀಡಿತಾಃ ॥೩೯॥

ರುದ್ರಸ್ಯ ಮೂರ್ತಿಮಾರಾಧ್ಯ ಪ್ರಸಾದಾತ್ಕ್ರಮವರ್ಜಿತಾಃ ।
ಅಯತ್ನೇನೈವ ಜಾನಂತಿ ಶಿವಂ ಸರ್ವತ್ರ ಸಂಸ್ಥಿತಂ ॥೪೦॥

ರುದ್ರಮೂರ್ತಿಷು ಸರ್ವಾಸು ರುದ್ರೋಽತೀವ ಪ್ರಕಾಶತೇ ।
ಅನ್ಯಾಸು ತಾರತಮ್ಯೇನ ಶಿವಃ ಸಾಕ್ಷಾತ್ಪ್ರಕಾಶತೇ ॥೪೧॥

ಆದರ್ಶೇ ವಿಮಲೇ ಯದ್ವದ್ಭೃಶಂ ಭಾತಿ ಮುಖಂ ದ್ವಿಜಾಃ ।
ತಥಾಽತೀವ ಮಹಾದೇವೋ ಭಾತಿ ಶುದ್ಧಾಸು ಮೂರ್ತಿಷು ॥೪೨॥

ಕಾನಿಚಿದ್ವೇದವಾಕ್ಯಾನಿ ಬ್ರಾಹ್ಮಣಾ ವೇದವಿತ್ತಮಾಃ ।
ರುದ್ರಮೂರ್ತಿಂ ಸಮಾಶ್ರಿತ್ಯ ಶಿವೇ ಪರಮಕಾರಣೇ ॥೪೩॥

ಶಿವನ ಅನುಗ್ರಹದಿಂದಲೂ, ವೇದೋಕ್ತವಾದ ಆತ್ಮವಿದ್ಯೆಯಿಂದಲೂ, ತಿಳಿಯಬೇಕು. ಆದುದರಿಂದಲೇ ಅನೇಕಜನ್ಮಗಳನ್ನು ಕಳೆದು ಕೊನೆಯಲ್ಲಿ ಶಿವನ ಸ್ವರೂಪವನ್ನು ತಿಳಿಯುವರೆಂದು ಹೇಳಿರುವುದು. ಭಗವದ್ಗೀತಾ ೭.೧೯. ||೩೭-೩೮||

ಶಿವನ ಅನುಗ್ರಹವಿಲ್ಲದ ಪಾಪಿಗಳಾದ ಕೆಲವರು ಮಾಯೆಯಿಂದ ಮೋಹಿತರಾಗಿ ಹುಟ್ಟುಸಾವುಗಳ ತೊಂದರೆಗೆ ಸಿಕ್ಕಿ ಆ ದೇವದೇವನನ್ನು ತಿಳಿಯುವುದೇ ಇಲ್ಲವು. ||೩೯||

ಶಿವಸಂಬಂಧವಾದ ಸಮಸ್ತ ಮೂರ್ತಿಗಳಲ್ಲಿಯೂ ಶಿವನು ಹೆಚ್ಚಾಗಿ ಪ್ರಕಾಶಿಸುವನು. ಆದುದರಿಂದ ಶಿವನ ಮೂರ್ತಿಗಳನ್ನು ಪೂಜಿಸಿದರೆ ಅವನ ಅನುಗ್ರಹದಿಂದ ಕ್ರಮವನ್ನು ಅಪೇಕ್ಷಿಸದೆ ಆಯತ್ನವಾಗಿ ಎಲ್ಲೆಡೆಯಲ್ಲಿಯೂ ಇರುವ ಶಿವನನ್ನು ತಿಳಿಯುವರು. ಇತರ ಮೂರ್ತಿಗಳಲ್ಲಿ ಶಿವನು ಮೂರ್ತಿಗುಣದ ತಾರತಮ್ಯಾನುಸಾರವಾಗಿ ಪ್ರಕಾಶಿಸುವನು. ||೪೦-೪೧||

ಎಲೈ ಬ್ರಾಹ್ಮಣರೇ, ಪರಿಶುದ್ಧವಾದ ಕನ್ನಡಿಯಲ್ಲಿ ಮುಖವು ಸ್ಪಷ್ಟವಾಗಿ ಪ್ರತಿಬಿಂಬಿಸುವಂತೆ ಪರಿಶುದ್ಧವಾದ ದೇವಮೂರ್ತಿಗಳಲ್ಲಿ ಶಿವನು ವಿಶೇಷವಾಗಿ ಪ್ರಕಾಶಿಸುವನು. ||೪೨||

ವೇದವಾಕ್ಯಗಳಲ್ಲಿ ಕೆಲವು ಶಿವಮೂರ್ತಿಯನ್ನಾಶ್ರಯಿಸಿಯೂ, ಮತ್ತೆ ಕೆಲವು ವಿಷ್ಣುಮೂರ್ತಿಯನ್ನೂ, ಬ್ರಹ್ಮಮೂರ್ತಿಯನ್ನೂ, ಅಗ್ನಿಮೂರ್ತಿಯನ್ನೂ, ಸೂರ್ಯ

ಪರ್ಯವಸ್ಯಂತಿ ವಿಪ್ರೇಂದ್ರಾಸ್ತಥಾ ವಾಕ್ಯಾನಿ ಕಾನಿಚಿತ್ ।
ವಿಷ್ಣುಮೂರ್ತಿಂ ಸಮಾಶ್ರಿತ್ಯ ಬ್ರಹ್ಮಮೂರ್ತಿಂ ಚ ಕಾನಿಚಿತ್ ॥೪೪॥

ಆಗ್ನೇಯೀಂ ಮೂರ್ತಿಮಾಶ್ರಿತ್ಯ ಶ್ರುತಿವಾಕ್ಯಾನಿ ಕಾನಿಚಿತ್ ।
ಸೂರ್ಯಮೂರ್ತಿಂ ತಥಾಽನ್ಯೇಷಾಂ ಮೂರ್ತಿಂ ಚಾಶ್ರಿತ್ಯ ಕಾನಿಚಿತ್ ॥೪೫॥

ಪುರಾಣೈರ್ದಶಭಿರ್ವಿಪ್ರಾಃ ಪ್ರೋಕ್ತಃ ಶಂಭುಸ್ತಥೈವ ಚ ।
ಚತುರ್ಭಿರ್ಭಗವಾನ್ವಿಷ್ಣುರ್ದ್ವಾಭ್ಯಾಂ ಬ್ರಹ್ಮಾ ಪ್ರಕೀರ್ತಿತಃ ॥೪೬॥

ಅಗ್ನಿರೇಕೇನ ವಿಪ್ರೇಂದ್ರಾಸ್ತಥೈಕೇನ ದಿವಾಕರಃ ।
ಏವಂ ಮೂರ್ತ್ಯಭಿಧಾನೇನ ದ್ವಾರೇಣೈವ ಮುನೀಶ್ವರಾಃ ॥೪೭॥

ಪ್ರತಿಪಾದ್ಯೋ ಮಹಾದೇವಃ ಸ್ಥಿತಃ ಸರ್ವಾಸು ಮೂರ್ತಿಷು ।
ಸ ಏವ ಮೋಚಕಃ ಸಾಕ್ಷಾಚ್ಛಿವಃ ಸತ್ಯಾದಿಲಕ್ಷಣಃ ॥೪೮॥

ಬ್ರಹ್ಮವಿಷ್ಣುಮಹಾದೇವೈರುಪಾಸ್ಯಃ ಸರ್ವದಾ ದ್ವಿಜಾಃ ।
ಅತೋಽನ್ಯದಾರ್ತಂ ವಿಪ್ರೇಂದ್ರಾ ಅವಿನಾಶೋಽಯಮೇವ ಹಿ ॥೪೯॥

ಮೂರ್ತಿಯನ್ನೂ ಆಶ್ರಯಿಸಿ ವರ್ಣನೆಮಾಡಿ ಕೊನೆಗೆ ಪರಮಕಾರಣನಾದ ಶಿವನಲ್ಲಿ ಪರ್ಯವಸಾನ ಹೊಂದುವಂತೆ ಹೇಳಿರುವುವು. ||೪೩-೪೪-೪೫||

ಹತ್ತು ಪುರಾಣಗಳಲ್ಲಿ ಶಿವನನ್ನು ಹೊಗಳಿರುವರು. ನಾಲ್ಕು ಪುರಾಣಗಳಲ್ಲಿ ಮಹಾಮಹಿಮನಾದ ವಿಷ್ಣುವನ್ನೂ, ಎರಡರಲ್ಲಿ ಬ್ರಹ್ಮನನ್ನೂ, ಒಂದರಲ್ಲಿ ಅಗ್ನಿಯನ್ನೂ, ಒಂದರಲ್ಲಿ ಸೂರ್ಯನನ್ನೂ ಸರ್ವೋತ್ತಮನೆಂದು ಹೊಗಳಿರುವರು. ಹೀಗಿದ್ದರೂ ಮೋಕ್ಷವನ್ನು ಕೊಡತಕ್ಕವನು ಸತ್ಯಜ್ಞಾನಾನಂದಸ್ವರೂಪನಾದ ಪರಶಿವನೊಬ್ಬನೇ ಎಂಬುದು ಸಿದ್ಧಾಂತವು. ಮಿಕ್ಕ ಮೂರ್ತಿಗಳು ಆ ಪರಶಿವನ ಮೂಲಕವಾಗಿಯೇ ಮೋಕ್ಷವನ್ನು ಕೊಡತಕ್ಕವರಾಗಿರುವರು. ಸಮಸ್ತದೇವಮೂರ್ತಿಗಳಲ್ಲಿಯೂ ಮಹಾದೇವನು ಇರುವನೆಂದು ಪುರಾಣಗಳು ಹೇಳುವುವು. ||೪೬-೪೭-೪೮||

ಬ್ರಾಹ್ಮಣಶ್ರೇಷ್ಠರೇ, ಸಮಸ್ತ ಉಪಾಧಿಗಳಿಂದ ಬಿಡಲ್ಪಟ್ಟ ಸಚ್ಚಿದಾನಂದೈಕರಸಸ್ವರೂಪವೇ ಪರಶಿವನ ಸ್ವರೂಪವು. ಬ್ರಹ್ಮವಿಷ್ಣುರುದ್ರರು ಉಪಾಧಿವಿಶಿಷ್ಟರು. ಉಪಾಧಿಗಳು ನಾಶವಾಗತಕ್ಕವುಗಳಾದುದರಿಂದ ಅದಕ್ಕೆ ಸಂಬಂಧಿಸಿದ ರೂಪವೂ ನಾಶವಾಗುವ ಕಾರಣ "ಏಷ ತ ಆತ್ಮಾಂತರ್ಯಾಮ್ಯಮೃತೋಽತೋಽನ್ಯದಾರ್ತಂ"

ಅಯಮಾತ್ಮವಿದಾಮಾತ್ಮಾ ಹ್ಯಯಮಜ್ಞಾನಿನಾಮಪಿ ।
ಅಸ್ಮಾದೇವ ಸಮುತ್ಪನ್ನಂ ಸ್ಥಿತಮಸ್ಮಿನ್ ದ್ವಿಜೋತ್ತಮಾಃ ॥೫೦॥

ಅಸ್ಮಿನ್ನಷ್ಟಮಿದಂ ಸರ್ವಂ ಜಗನ್ಮಾಯಾಮಯಂ ಬುಧಾಃ ।
ಪ್ರತಿಕಲ್ಪಂ ಮುನಿಶ್ರೇಷ್ಠಾ ಬ್ರಹ್ಮನಾರಾಯಣಾದಯಃ ॥೫೧॥

ಅಸ್ಮಾದೇವ ವಿಜಾಯಂತೇ ವಿಲೀಯಂತೇ ಯಥಾ ಪುರಾ ।
ಅಯಮೇಕೋ ಮಹಾದೇವಃ ಸಾಕ್ಷೀ ಸರ್ವಾಂತರೋ ಹರಃ ॥೫೨॥

ಅಂಬಿಕಾಸಹಿತೋ ನಿತ್ಯಂ ನೀಲಕಂಠಸ್ತ್ರಿಲೋಚನಃ ।
ಚಂದ್ರಾರ್ಧಶೇಖರಃ ಶ್ರೀಮಾನ್ ಶ್ರೀಮದ್ವ್ಯಾಘ್ರಪುರೇ ತಥಾ ॥೫೩॥

ಎಂಬ ವೇದವಚನದಂತೆ, ನಿರುಪಾಧಿಕನಾದ ಸತ್ಯಜ್ಞಾನಾನಂತನಾದ, ನಾಶರಹಿತನಾದ ಶಿವನೇ ಸಮಸ್ತರಿಗೂ ಉಪಾಸನೆಗೆ ತಕ್ಕವನೆಂದು ಮುಖ್ಯಾಭಿಪ್ರಾಯವು. ॥೪೯॥

ವಿದ್ವಾಂಸರಾದ ಬ್ರಾಹ್ಮಣಶ್ರೇಷ್ಠರೇ, ಕೇಳಿರಿ. ಈ ಶಿವನು ಆತ್ಮಜ್ಞಾನಿಗಳಿಗೆ ಹೇಗೆ ಆತ್ಮಸ್ವರೂಪನೋ ಹಾಗೆಯೇ ಅಜ್ಞಾನಿಗಳಿಗೂ ಆತ್ಮಸ್ವರೂಪನು. ಪ್ರಪಂಚವು ಇವನಲ್ಲಿಯೇ ಹುಟ್ಟಿ ಇವನಲ್ಲಿಯೇ ಇದ್ದು ಇವನಲ್ಲಿಯೇ ಲಯವನ್ನು ಹೊಂದು ವುದು. ಈ ಪ್ರಪಂಚವು ಮಾಯಾಸ್ವರೂಪವಾದುದು. ಕಲ್ಪಿತವಾದುದು. ಶಿವನು ಪ್ರಪಂಚಕ್ಕೆ ಆಶ್ರಯನಾಗಿ ಶಾಶ್ವತನಾದುದರಿಂದ ಸರ್ವಗತನಾಗಿ ಆತ್ಮಸ್ವರೂಪದಿಂದ ಪೂಜ್ಯನಾಗಿರುವನು. ॥೫೦॥

ಪ್ರತಿಯೊಂದು ಕಲ್ಪದಲ್ಲಿಯೂ ಬ್ರಹ್ಮಾ ನಾರಾಯಣ ಮೊದಲಾದ ದೇವತೆಗಳು ಅದ್ವಿತೀಯನೂ, ಸರ್ವಸಾಕ್ಷಿಸ್ವರೂಪನೂ ಆದ ಮಹಾದೇವನಿಂದಲೇ ಹುಟ್ಟಿ ಕೊನೆಗೆ ಅವನಲ್ಲಿಯೇ ಲಯಹೊಂದುವರು. "ಏಷ ತ ಆತ್ಮಾ ಸರ್ವಾಂತರಃ" ಎಂಬ ವೇದವಾಕ್ಯದಿಂದ ಸರ್ವಾಂತರನಾಗಿ ಅಧಿಷ್ಠಾನಸ್ವರೂಪನಾದ ಪರಮೇಶ್ವರನಿಗೆ ಜನನ ಮರಣಾದಿಗಳ ಸಂಭವವೇ ಇರುವುದಿಲ್ಲ. ॥೫೧-೫೨॥

"ಯತೋ ವಾಚೋ ನಿವರ್ತಂತೇ । ಅಪ್ರಾಪ್ಯ ಮನಸಾ ಸಹ ॥ ಎಂಬ ವೇದವಚನದಿಂದ ನಿರುಪಾಧಿಕನೂ, ಮಾತಿಗೂ, ಮನಸ್ಸಿಗೂ ನಿಲುಕದವನೂ, ಆದ ಶಿವನನ್ನು ಹೇಗೆ ಪೂಜಿಸಬೇಕೆಂಬ ವಿಷಯದಲ್ಲಿ ಅಂಬಿಕಾಪತಿಯಾಗಿ, ಯಾವಾಗಲೂ

ವಾರಾಣಸ್ಯಾಂ ತಥಾ ಸೋಮನಾಥೇ ವೃದ್ಧಾಚಲಾಭಿಧೇ ।
ವೇದಾರಣ್ಯೇ ಚ ವಲ್ಮೀಕೇ ಶ್ರೀಮತ್ಕೇದಾರಸಂಜ್ಞಿತೇ ॥೫೪॥

ಶ್ರೀಮದ್ದಕ್ಷಿಣಕೈಲಾಸೇ ಸರ್ವಸ್ಥಾನೋತ್ತಮೋತ್ತಮೇ ।
ನಿತ್ಯಂ ಸನ್ನಿಹಿತೋ ಭಕ್ತೈರಖಿಲೈರಮರೈರಪಿ ॥೫೫॥

ಉಪಾಸ್ಯಃ ಸರ್ವದಾ ವಿಪ್ರಾಃ ಸರ್ವೈರ್ನಿತ್ಯತ್ವಕಾಂಕ್ಷಿಭಿಃ ।
ಕೋಽನ್ಯಃ ಸಂಸಾರಮಗ್ನಾನಾಮುಪಾಸ್ಯೋ ಮೋಚಕಃ ಪ್ರಭುಃ ॥೫೬॥

ಋತೇ ಸಾಕ್ಷಾನ್ಮಹಾದೇವಮಿತ್ಯೇಷಾ ಶಾಶ್ವತೀ ಶ್ರುತಿಃ ।
ಅತಃ ಸರ್ವಪ್ರಯತ್ನೇನ ಭವದ್ಭಿರ್ಮುನಿಸತ್ತಮೈಃ ॥೫೭॥

ಕಾಲಪಾಶವಿನಾಶಾಯ ಶಂಕರಃ ಶಶಿಶೇಖರಃ ।
ಉಪಾಸನೀಯಃ ಶ್ರೋತವ್ಯೋ ಮಂತವ್ಯಶ್ಚ ದ್ವಿಜೋತ್ತಮಾಃ ॥೫೮॥

ಉಮಾದೇವಿಯೊಡನೆ ಇರುವವನೂ, ನೀಲಕಂಠನೂ, ಮುಕ್ಕಣ್ಣನೂ, ಚಂದ್ರಶೇಖರನೂ ಆದ ಶಿವನನ್ನು ವ್ಯಾಘ್ರಪುರ, ಕಾಶಿ, ಸೋಮನಾಥ, ವೃದ್ಧಾಚಲ, ವೇದಾರಣ್ಯ, ವಲ್ಮೀಕ, ಕೇದಾರ, ದಕ್ಷಿಣ ಕೈಲಾಸ (ಕಾಳಹಸ್ತಿ) ಮುಂತಾದ ಕ್ಷೇತ್ರಗಳಲ್ಲಿ ಭಕ್ತರುಗಳಿಂದಲೂ ಸಮಸ್ತ ದೇವತೆಗಳಿಂದಲೂ ಕೂಡಿ ಯಾವಾಗಲೂ, ಸನ್ನಿಹಿತನಾಗಿರುವ ಪರಮೇಶ್ವರನನ್ನು ಮೋಕ್ಷಾಪೇಕ್ಷೆಯುಳ್ಳ ಸಮಸ್ತರೂ ಪೂಜಿಸಿ ಫಲವನ್ನು ಪಡೆಯಬಹುದೆಂದು ಹೇಳಿರುವುದು. ಇದೇ ಸುಲಭೋಪಾಯವು. ||೫೩-೫೪-೫೫||

ಜನನಮರಣ ಸಂಸಾರರೂಪ ಸಮುದ್ರದಲ್ಲಿ ಮುಳುಗಿದ ಜನರಿಗೆ ಸಾಕ್ಷಾತ್ ಮಹಾದೇವನು ಹೊರತಾಗಿ ಮತ್ತಾರು ರಕ್ಷಕರಾಗಿ ಪೂಜ್ಯವಾಗಿರುವರೆಂಬ ವಿಷಯದಲ್ಲಿ "ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ । ತದಾ ಶಿವಮವಿಜ್ಞಾಯ ದುಃಖಸ್ಯಾಂತೋ ಭವಿಷ್ಯತಿ ॥ ಎಂದು ಮನುಷ್ಯರು ಆಕಾಶವನ್ನು ಚರ್ಮದಂತೆ ತಮ್ಮ ಶರೀರಕ್ಕೆ ಹೊದಿಕೆ ಮಾಡಿಕೊಂಡಾಗ ಶಿವನ ಸ್ವರೂಪವನ್ನು ತಿಳಿಯದಿದ್ದರೂ, ಅವರಿಗೆ ಮೋಕ್ಷವಾಗುವುದು ಎಂದು ಹೇಳಿ, ಮೋಕ್ಷಪ್ರಾಪ್ತಿಗೆ ಶಿವನೇ ಮುಖ್ಯವಾಗಿ ಪೂಜಾಯೋಗ್ಯನೆಂದೂ ಹೇಳಿರುವುದು. ||೫೬||

ಆದುದರಿಂದ ಮುನಿಶ್ರೇಷ್ಠರೇ, ನೀವು ಯಮಪಾಶದ ಭಯನಿವಾರಣೆಗಾಗಿ ಚಂದ್ರಶೇಖರನಾದ ಶಿವನನ್ನು ಸರ್ವಪ್ರಯತ್ನದಿಂದಲೂ, ಪೂಜಿಸಿರಿ; ಮತ್ತೂ

ಇತಿ ಸೂತವಚಃ ಶ್ರುತ್ವಾ ನೈಮಿಷಾರಣ್ಯವಾಸಿನಃ ।
ಶಿವಃ ಕಾಲಾನವಚ್ಛಿನ್ನ ಇತ್ಯಜಾನಂತ ಪಂಡಿತಾಃ ॥೫೯॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ ಕಾಲಪರಿಮಾಣ ತದನವಚ್ಛಿನ್ನ ಸ್ವರೂಪಕಥನಂ ನಾಮ ಅಷ್ಟಮೋಽಧ್ಯಾಯಃ ಸಮಾಪ್ತಃ

ಉಪನಿಷದ್ವಾಕ್ಯಗಳಿಂದ ಅವನ ಸ್ವರೂಪವನ್ನು ಗುರುಗಳಿಂದ ಕೇಳಿ, ಮನಸ್ಸಿನಲ್ಲಿ ಯಾವಾಗಲೂ ಅವನ ಧ್ಯಾನವನ್ನು ಮಾಡಿರಿ. ॥೫೭-೫೮॥

ಈ ರೀತಿಯಲ್ಲಿ ಹೇಳಿದ ಸೂತನ ಮಾತನ್ನು ಕೇಳಿ ಪಂಡಿತರಾದ ನೈಮಿಷಾರಣ್ಯವಾಸಿಗಳಾದ ಮುನಿಗಳು ಶಿವನು ಕಾಲದ ಅಳತೆಗೆ ಸಿಕ್ಕತಕ್ಕವನಲ್ಲವೆಂದು ತಿಳಿದುಕೊಂಡರು. ॥೫೯॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ ಕಾಲದ ಅಳತೆಗೆ ಪರತತ್ವವು ಸಿಕ್ಕದೆಂದು ವಿವರಿಸುವ ಎಂಟನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಂದಪುರಾಣಾಂತರ್ಗತಾ
ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

|| ನವಮೋಽಧ್ಯಾಯಃ ||

ಒಂಬತ್ತನೆಯ ಅಧ್ಯಾಯವು

|| ನೈಮಿಷೀಯಾ ಊಚುಃ ||

ಭಗವನ್ವಿಷ್ಣುನಾ ತೋಯಾತ್ಕಥಂ ಭೂಮಿಃ ಸಮುದ್ಧೃತಾ ।
ತದಸ್ಮಾಕಂ ಸಮಾಸೇನ ವದ ಸರ್ವಾರ್ಥವಿತ್ತಮ ||೧||

|| ಸೂತ ಉವಾಚ ||

ಆಸೀದೇಕಾರ್ಣವಂ ಘೋರಮವಿಭಾಗಂ ತಮೋಮಯಂ ।
ಶಾಂತಾನಲಾದಿಕಂ ಸರ್ವಂ ನ ಪ್ರ(ಪ್ರಾ)ಜ್ಞಾಯತ ಕಿಂಚನ ||೨||

ನೈಮಿಷಾರಣ್ಯವಾಸಿಗಳಾದ ಋಷಿಗಳು ಹೇಳಿದರು—ಮಹಾಮಹಿಮನಾದ ಸೂತನೇ, ಬ್ರಹ್ಮನ ಹಗಲಿನ ಒಂದು ಕಲ್ಪದ ಕೊನೆಯಲ್ಲಿ ಭೂಮಿಯೇ ಮುಂತಾದ ಮೂರು ಲೋಕಗಳು ಲೀನವಾಗಿರುವುವಷ್ಟೆ! ಮತ್ತೆ ಕಲ್ಪಪ್ರಾರಂಭದಲ್ಲಿ ಸೃಷ್ಟಿ ಕಾರ್ಯವನ್ನು ಮಾಡುವುದಕ್ಕೆ ನೀರಿನಲ್ಲಿ ಲೀನವಾದ ಭೂಮಿಯನ್ನು ವಿಷ್ಣುವು ಹೇಗೆ ಎತ್ತಿದನು? ಅದನ್ನು ಸಂಗ್ರಹವಾಗಿ ವಿಶದವಾಗಿ ನಮಗೆ ಹೇಳಬೇಕು. ||೧||

ಸೂತನು ಹೇಳಿದನು— ಹಿಂದಿನ ಕಲ್ಪದ ಕೊನೆಯಲ್ಲಿ ಭಯಂಕರವಾದ, ವಿಸ್ತಾರವಾದ ಸಮುದ್ರವು ಉಕ್ಕಿ, ಸೂರ್ಯ, ಚಂದ್ರ ಅಗ್ನಿ ಮುಂತಾದ ತೇಜಸ್ಸುಗಳಿಲ್ಲದುದರಿಂದ ಕತ್ತಲೆಯಿಂದ ತುಂಬಿಕೊಂಡು, ಯಾವುದೊಂದೂ ವಿವೇಚಿಸಿ ತಿಳಿಯಲಾಗದೆ ಇದ್ದುದರಿಂದ ವಿಭಾಗಿಸುವುದಕ್ಕೆ ಅಸಾಧ್ಯವಾಗಿ ಜಲಮಯವಾಗಿದ್ದಿತು. ||೨||

ತದೈವೈಕಾಂಬುಧೌ ನಷ್ಟೇ ಜಗತಿ ಸ್ಥಾವರಾದಿಕೇ ।
ವಿಷ್ಣುಃ ಸಾಕ್ಷಾತ್ಸಮುದ್ಭೂತಸ್ತದಾ ತಸ್ಮಿನ್ಮಹೋದಧೌ ॥೩॥

ಸ ಪುನರ್ವೇದವಿಚ್ಛ್ರೇಷ್ಠಃ ಸಹಸ್ರಾಕ್ಷಃ ಸಹಸ್ರಪಾತ್ ।
ಸಹಸ್ರಶೀರ್ಷಾ ಪುರುಷೋ ದ್ವಿಜಾ ನಾರಾಯಣಾಭಿಧಃ ॥೪॥

ಸುಷ್ವಾಪ ಸಲಿಲೇ ಸಾಕ್ಷಾಚ್ಛಿವಂ ಪರಮಕಾರಣಂ ।
ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಸಾಂಬಮೀಶ್ವರಂ ॥೫॥

ಊರ್ಧ್ವರೇತಂ ವಿರೂಪಾಕ್ಷಂ ಹೃದಿ ಧ್ಯಾಯೇ(ಯ)ನ್ಮಹೇಶ್ವರಂ ।
ಇಮಂ ಚೋದಾಹರಂತ್ಯತ್ರ ಶ್ಲೋಕಂ ನಾರಾಯಣಂ ಪ್ರತಿ ॥೬॥

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ।
ತಾ ಯದಸ್ಯಾಯನಂ ತೇನ ಪ್ರೋಕ್ತೋ ನಾರಾಯಣಃ ಸ್ವಯಂ ॥೭॥

ಆಗಲೇ ಆ ಏಕಾರ್ಣವದಲ್ಲಿ ಚರಾಚರಪ್ರಾಣಿಗಳಿಂದೊಡಗೂಡಿದ ಪ್ರಪಂಚವು ಲೀನವಾಗಿರಲು, ಆ ಮಹಾಸಮುದ್ರದಲ್ಲಿಯೇ ಸರ್ವವ್ಯಾಪಿಯಾದ ಅನೇಕ ಕಣ್ಣುಗಳೂ, ಕಾಲುಗಳೂ, ತಲೆಗಳೂ, ಉಳ್ಳ ನಾರಾಯಣನೆಂಬ ಹೆಸರಿನ ಪುರುಷನು ಉತ್ಪನ್ನನಾಗಿ, ಸಮಸ್ತ ಪ್ರಪಂಚಕ್ಕೂ ಕಾರಣನೂ, ಋತಸತ್ಯಸ್ವರೂಪನೂ, ಉಮಾದೇವೀಸಹಿತನೂ, ತ್ರಿಣೇತ್ರನೂ, ಪರಿಪೂರ್ಣ ಪರಬ್ರಹ್ಮಸ್ವರೂಪದಲ್ಲಿ ನಿರಾಕಾರನೂ, ಆದ ಮಹೇಶ್ವರನನ್ನು ಧ್ಯಾನಮಾಡುತ್ತಾ, ಆದಿಶೇಷನ ಹಾಸಿಗೆಯಲ್ಲಿ ಯೋಗರೂಪವಾದ ನಿದ್ರೆಯಿಂದ ಮಲಗಿದ್ದನು. ॥೩-೪-೫॥

ನಾರಾಯಣನ ವಿಷಯದಲ್ಲಿ ಈ ಮುಂದಿನ ಶ್ಲೋಕಗಳು ಅವನ ಮಹಿಮೆಯನ್ನು ವ್ಯಕ್ತಪಡಿಸುವುವು. ನರನೆಂದರೆ ಹಿರಣ್ಯಗರ್ಭನು. ಅವನಿಂದ ಹುಟ್ಟಿದುದರಿಂದ ನೀರಿಗೆ "ನರಸೂನವಃ" ಎಂದು ಹೆಸರು ಬಂದುದು. ಆ ನೀರೇ ಮಹಾವಿಷ್ಣುವಿಗೆ ವಾಸಸ್ಥಾನವಾದುದರಿಂದ ಇವನಿಗೆ ನಾರಾಯಣನೆಂದು ಹೆಸರಾಯಿತು. ॥೬-೭॥

ಸ ಪುನರ್ದೇವದೇವಸ್ಯ ಶಿವಸ್ಯ ಪರಮಾತ್ಮನಃ ।
ಆಜ್ಞಯಾ ಸಲಿಲೇ ಮಗ್ನಾಂ ಮಹೀಮುದ್ಧರ್ತುಮಿಚ್ಛಯಾ ॥೮॥

ವಾರಾಹಂ ರೂಪಮಾಸ್ಥಾಯ ಮಹಾಪರ್ವತಸನ್ನಿಭಂ ।
ಅಟ್ಟಹಾಸಂ ದ್ವಿಜಾಃ ಕೃತ್ವಾ ಪ್ರವಿಶ್ಯ ಚ ರಸಾತಲಂ ॥೯॥

ದಂಷ್ಟ್ರಾಭ್ಯಾಮುಜ್ಜಹಾರೈನಾಂ ಮಹೀಮಂತರ್ಗತಾಂ ಜಲೇ ।
ತಸ್ಯ ದಂಷ್ಟ್ರಾಗ್ರವಿನ್ಯಸ್ತಾಮಣುಮಾತ್ರಾಂ ಮಹೀಮಿಮಾಂ ॥೧೦॥

ದೃಷ್ಟ್ವಾ ವಿಸ್ಮಯಮಾಪನ್ನಾ ಜನಲೋಕನಿವಾಸಿನಃ ।
ತೇ ಪುನರ್ವೇದವಿಚ್ಛ್ರೇಷ್ಠಾಃ ಸಿದ್ಧಾ ಬ್ರಹ್ಮರ್ಷಯೋ ಹರಿಂ ॥೧೧॥

ಅಸ್ತುವನ್ ಶ್ರದ್ಧಯಾ ವಿಷ್ಣುಂ ಮಹಾಬಲಪರಾಕ್ರಮಂ ।

|| ಬ್ರಹ್ಮರ್ಷಯ ಊಚುಃ ||

ನಮಸ್ತೇ ದೇವದೇವಾನಾಮಾದಿಭೂತ ಸನಾತನ ।
ಪುರುಷಾಯ ಪುರಾಣಾಯ ನಮಸ್ತೇ ಪರಮಾತ್ಮನೇ ॥೧೨॥

ಆ ನಾರಾಯಣನು ದೇವದೇವನಾದ ಶಿವನ ಅಪ್ಪಣೆಯಿಂದ ನೀರಿನಲ್ಲಿ ಮುಳುಗಿದ್ದ ಭೂಮಿಯನ್ನು ಮೇಲಕ್ಕೆ ಎತ್ತಬೇಕೆಂಬ ಅಪೇಕ್ಷೆಯಿಂದ ದೊಡ್ಡ ಪರ್ವತಕ್ಕೆ ಸಮಾನವಾದ ಹಂದಿಯರೂಪವನ್ನು ಧರಿಸಿ ದೊಡ್ಡದಾಗಿ ಧ್ವನಿಮಾಡುತ್ತ ರಸಾತಲಲೋಕವನ್ನು ಹೊಕ್ಕು ಅಲ್ಲಿದ್ದ ಭೂಮಿಯನ್ನು ತನ್ನ ಕೋರೆದಾಡೆಗಳಿಂದ ಮೇಲಕ್ಕೆತ್ತಿದನು. ||೮-೯||

ಆ ವರಾಹರೂಪನಾದ ಹರಿಯು ಕೋರೆಹಲ್ಲಿನ ಮೇಲೆ ಅಣುಮಾತ್ರವಾಗಿ ಕಾಣಿಸುತ್ತಿರುವ ಭೂಮಿಯನ್ನು ಜನ ಲೋಕವಾಸಿಗಳಾದ ಸಿದ್ಧರೂ ಬ್ರಹ್ಮರ್ಷಿಗಳೂ, ನೋಡಿ, ಹೆಚ್ಚಾದ ಬಲಪರಾಕ್ರಮಗಳಿಂದ ಕೂಡಿದ ವಿಷ್ಣುವನ್ನು ಆಶ್ಚರ್ಯದಿಂದಲೂ ಭಕ್ತಿಯಿಂದಲೂ ಕೂಡಿದವರಾಗಿ ಸ್ತೋತ್ರಮಾಡಿದರು. ||೧೦-೧೧||

ಬ್ರಹ್ಮರ್ಷಿಗಳು ಹೇಳಿದರು— ಸಕಲದೇವತೆಗಳಿಗೂ ದೇವನೂ, ಅನಾದಿಯಾದವನೂ, ಪುರುಷಶ್ರೇಷ್ಠನೂ, ಪರಮಾತ್ಮನೂ ಆದ ನಿನಗೆ ನಮಸ್ಕಾರವು. ವೇದಗಳ ರಕ್ಷಣೆಗೂ, ಲೋಕಗಳಿಗೂ, ಅಧಿಪತಿಯಾದವನೂ, ಪ್ರಪಂಚಗಳಿಗೂ, ಲೋಕಾಲೋಕ

ಬ್ರಹ್ಮಣಾಂ ಪತಯೇ ತುಭ್ಯಂ ಜಗತಾಂ ಪತಯೇ ನಮಃ ।
ಲೋಕಾಲೋಕಸ್ವರೂಪಾಯ ಲೋಕಾನಾಂ ಪತಯೇ ನಮಃ ॥೧೪॥

ಶಂಖಚಕ್ರಗದಾಪದ್ಮಪಾಣಯೇ ವಿಷ್ಣವೇ ನಮಃ ।
ನಮೋ ಹಿರಣ್ಯಗರ್ಭಾಯ ಶ್ರೀಪತೇ ಭೂಪತೇ ನಮಃ ॥೧೫॥

ನಮಃ ಸ್ವಯಂಭುವೇ ತುಭ್ಯಂ ಸೂತ್ರಾತ್ಮಾದಿಸ್ವರೂಪಿಣೇ ।
ವಿರಾಟ್ಪ್ರಜಾಪತೇಃ ಸಾಕ್ಷಾಜ್ಜನಕಾಯ ನಮೋ ನಮಃ ॥೧೬॥

ವಿಶ್ವತೈಜಸರೂಪಾಯ ಪ್ರಾಜ್ಞರೂಪಾಯ ತೇ ನಮಃ ।
ಜಾಗ್ರತ್ಸ್ವಪ್ನಸ್ವರೂಪಾಯ ನಮಃ ಸುಪ್ತ್ಯಾತ್ಮನೇ ನಮಃ ॥೧೭॥

ಅವಸ್ಥಾಸಾಕ್ಷಿಣೇ ತುಭ್ಯಮವಸ್ಥಾವರ್ಜಿತಾಚ್ಯುತ ।
ತುರೀಯಾಯ ವಿಶುದ್ಧಾಯ ತುರ್ಯಾತೀತಾಯ ತೇ ನಮಃ ॥೧೮॥

ಸ್ವರೂಪನೂ, ಶಂಖ ಚಕ್ರ ಗದಾ ಕಮಲಗಳನ್ನು ಕೈಯ್ಯಲ್ಲಿ ಹಿಡಿದವನೂ, ವ್ಯಾಪಕನೂ ಆದ ನಿನಗೆ ನಮಸ್ಕಾರವು. ಹಿರಣ್ಯಗರ್ಭಸ್ವರೂಪನೂ, ಭೂದೇವಿಗೂ ಲಕ್ಷ್ಮೀ ದೇವಿಗೂ, ಪತಿಯಾದವನೂ ಆದ ನಿನಗೆ ನಮಸ್ಕಾರವು. ॥೧೩-೧೪-೧೫॥

ಸ್ವತಂತ್ರನಾಗಿ ತಾನೇ ವ್ಯಕ್ತನಾದವನೂ ಕ್ರಿಯಾಶಕ್ತಿಯೇ ಮುಖ್ಯವಾಗಿ ಉಳ್ಳ ಪ್ರಾಣೋಪಾಧಿಕನಾದ ಸೂತ್ರಾತ್ಮನೂ, ಜ್ಞಾನಶಕ್ತಿಯೇ ಮುಖ್ಯವಾಗಿ ಉಳ್ಳ ಹಿರಣ್ಯಗರ್ಭಸ್ವರೂಪನೂ, ಸಮಷ್ಟಿಸ್ಥೂಲಶರೀರಾಭಿಮಾನಿಯಾದ ವಿರಾಟ್ಸ್ವರೂಪನೂ, ಸೃಷ್ಟಿಕರ್ತನಾದ ಬ್ರಹ್ಮನ ಉತ್ಪತ್ತಿಗೆ ನೇರವಾಗಿ ಕಾರಣನೂ ಆದ ನಿನಗೆ ನಮಸ್ಕಾರ ಮಾಡುವೆವು. ॥೧೬॥

ವ್ಯಷ್ಟಿರೂಪದಿಂದ ಜಾಗ್ರದವಸ್ಥಾಭಿಮಾನಿಯಾಗಿ ವಿಶ್ವನೆಂಬ ಹೆಸರನ್ನು ಹೊಂದಿದವನೂ, ಸ್ವಪ್ನಾವಸ್ಥಾಭಿಮಾನಿಯಾಗಿ ತೈಜಸನೆಂಬ ಹೆಸರನ್ನು ಹೊಂದಿದವನೂ, ಸುಷುಪ್ತ್ಯವಸ್ಥಾಭಿಮಾನಿಯಾಗಿ ಪ್ರಾಜ್ಞನೆಂಬ ಹೆಸರನ್ನು ಹೊಂದಿದವನೂ ಆದ ನಿನಗೆ ನಮಸ್ಕಾರವು. ॥೧೭॥

ನಿಜವಾಗಿ ಜಾಗ್ರದವಸ್ಥಾದಿಗಳಿಲ್ಲದೆ ಆ ಅವಸ್ಥೆಗಳನ್ನೆಲ್ಲವನ್ನೂ ನೋಡುತ್ತಿರುವವನಾದುದರಿಂದ ಸಾಕ್ಷಿಸ್ವರೂಪನೂ, ವಿಶ್ವತೈಜಸಪ್ರಾಜ್ಞರಿಗಿಂತಲೂ, ಬೇರೆಯಾಗಿ ಈ ಮೂರು ಅವಸ್ಥೆಗಳೂ ಇಲ್ಲದುದರಿಂದ ತುರೀಯನೂ, ಪರಿಶುದ್ಧನಾದುದರಿಂದ ತುರ್ಯಾತೀತನೂ ಆದ ನಿನಗೆ ನಮಸ್ಕಾರವು. ॥೧೮॥

ಪ್ರಥಮಾಯ ಸಮಸ್ತಸ್ಯ ಜಗತಃ ಪರಮಾತ್ಮನೇ ।
ಓಂಕಾರೈಕಸ್ವರೂಪಾಯ ಶಿವಾಯ ಶಿವದ ಪ್ರಭೋ ॥೧೯॥

ಸರ್ವವಿಜ್ಞಾನಸಂಪನ್ನ ನಮೋ ವಿಜ್ಞಾನದಾಯಿನೇ ।
ಜಗತಾಂ ಯೋನಯೇ ತುಭ್ಯಂ ವೇಧಸೇ ವಿಶ್ವರೂಪಿಣೇ ॥೨೦॥

ನಿತ್ಯಶುದ್ಧಾಯ ಬುದ್ಧಾಯ ಮುಕ್ತಾಯ ಸುಖರೂಪಿಣೇ ।
ನಮೋ ವಾಚಾಮತೀತಾಯ ನಮೋಽಗಮ್ಯಾಯ ತೇ ನಮಃ ॥೨೧॥

ಅಪ್ರಮೇಯಾಯ ಶಾಂತಾಯ ಸ್ವಯಂಭಾನಾಯ ಸಾಕ್ಷಿಣೇ ।
ನಮಃ ಪುಂಸೇ ಪುರಾಣಾಯ ಶ್ರೇಯಃಪ್ರಾಪ್ತ್ಯೇಕ ಹೇತವೇ ॥೨೨॥

ಆಕಾಶಾದಿಪ್ರಪಂಚಾಯ ನಮಸ್ತದ್ರೂಪ ಶಂಕರ ।
ಮಾಯಾರೂಪಾಯ ಮಾಯಾಯಾಃ ಸತ್ತಾಹೇತೋ ಜನಾರ್ದನ॥೨೩॥

ನಮಃ ಪ್ರದ್ಯುಮ್ನರೂಪಾಯ ನಮಃ ಸಂಕರ್ಷಣಾತ್ಮನೇ ।
ನಮೋಽನಿರುದ್ಧರೂಪಾಯ ವಾಸುದೇವಾಯ ತೇ ನಮಃ ॥೨೪॥

ಸಮಸ್ತ ಜಗತ್ತಿಗೂ ಆದಿಕಾರಣನೂ "ಏತದ್ವೈ ಸತ್ಯಕಾಮ ಪರಂಚಾಪರಂಚ ಬ್ರಹ್ಮಯದೋಂಕಾರಃ" ಪ್ರಶ್ನ ಉ. ೫. ೨. ಎಂಬಂತೆ ಓಂಕಾರದ ಅರ್ಥಸ್ವರೂಪನೂ ಮಂಗಳಸ್ವರೂಪನೂ, ಮತ್ತೂ ಮಂಗಳವನ್ನು ಕೊಡತಕ್ಕವನೂ, ಸಮಸ್ತ ವಸ್ತು ಜ್ಞಾನದಿಂದ ಕೂಡಿದವನೂ, ಸರ್ವಜ್ಞ ಶಕ್ತಿಯನ್ನು ಕೊಡತಕ್ಕವನೂ, ಜಗತ್ತಿಗೆ ಕಾರಣನೂ, ಸೃಷ್ಟಿಕರ್ತನಾದ ಬ್ರಹ್ಮಸ್ವರೂಪನೂ ಪ್ರಪಂಚಸ್ವರೂಪನೂ ಆದ ನಿನಗೆ ನಮಸ್ಕಾರವು. ॥೧೯-೨೦॥

ಶಾಶ್ವತನೂ, ಪರಿಶುದ್ಧನೂ, ಜ್ಞಾನಸ್ವರೂಪನೂ, ಪ್ರಪಂಚಸಂಬಂಧವಾದ ದುಃಖವಿಲ್ಲದುದರಿಂದ ಸುಖಸ್ವರೂಪನೂ, ಮಾತಿಗೂ ಮನಸ್ಸಿಗೂ ಸಿಲುಕದವನೂ, ಅಳತೆಗೆ ಸಿಕ್ಕದವನೂ, ಶಾಂತನೂ, ತನಗೆ ತಾನೇ ಪ್ರಕಾಶಿಸತಕ್ಕವನೂ, ಸಾಕ್ಷಿಸ್ವರೂಪನೂ ಪುರಾಣಪುರುಷನೂ, ಸಕಲ ಜೀವರುಗಳ ಶ್ರೇಯಸ್ಸಿನ ಪ್ರಾಪ್ತಿಗೆ ಮುಖ್ಯ ಕಾರಣನೂ ಆದ ನಿನಗೆ ನಮಸ್ಕಾರವು. ॥೨೧-೨೨॥

ಆಕಾಶಾದಿ ಪ್ರಪಂಚನೂ ತತ್ಪದರೂಪನೂ, ಸುಖವನ್ನುಂಟುಮಾಡತಕ್ಕವನೂ ಮಾಯಾಸ್ವರೂಪನೂ ಆದ, ಮಾಯೆಗೂ ಅಧಿಷ್ಠಾನಕಾರಣನಾಗಿರುವ, ಜನರನ್ನು

ಯೋಗಾಯ ಯೋಗಗಮ್ಯಾಯ ಯೋಗಾ(ಗಿ)ನಾಮಿಷ್ಟಸಿದ್ಧಯೇ ।
ನಮಸ್ತೇ ಮತ್ಸ್ಯರೂಪಾಯ ನಮಸ್ತೇ ಕೂರ್ಮರೂಪಿಣೇ ॥೨೫॥

ನಮಸ್ತುಭ್ಯಂ ವರಾಹಾಯ ನಾರಸಿಂಹಾಯ ತೇ ನಮಃ ।
ನಮೋ ವಾಮನರೂಪಾಯ ನಮೋ ರಾಮತ್ರಯಾತ್ಮನೇ ॥೨೬॥

ನಮಃ ಕೃಷ್ಣಾಯ ಸರ್ವಜ್ಞ ನಮಸ್ತೇ ಕಲ್ಕಿರೂಪಿಣೇ ।
ಕರ್ಮಿಣಾಂ ಫಲರೂಪಾಯ ಕರ್ಮರೂಪಾಯ ತೇ ನಮಃ ॥೨೭॥

ಕರ್ಮಕರ್ತ್ರೇ ನಮಸ್ತುಭ್ಯಂ ನಮಸ್ತೇ ಕರ್ಮಸಾಕ್ಷಿಣೇ ।
ನಮೋ ವಿಜ್ಞಪ್ತಿರೂಪಾಯ ನಮೋ ವೇದಾಂತರೂಪಿಣೇ ॥೨೮॥

ಗುಣತ್ರಯಾತ್ಮನೇ ತುಭ್ಯಂ ನಮೋ ನಿರ್ಗುಣರೂಪಿಣೇ ।
ಅದ್ಭುತಾಯಾಮರೇಶಾಯ ಶಿವಪ್ರಾಪ್ತ್ಯೇಕಹೇತವೇ ॥೨೯॥

ಸನ್ಮಾರ್ಗದಲ್ಲಿ ನಡೆಯುವಂತೆ ನಿಯಮಿಸುವ ಮತ್ತೂ ಪ್ರದ್ಯುಮ್ನ, ಸಂಕರ್ಷಣ, ಅನಿರುದ್ಧ, ವಾಸುದೇವ, ಎಂಬ ಪೂಜೆಗೆ ಯೋಗ್ಯವಾದ ಚತುರ್ವ್ಯೂಹದ ಅವತಾರಗಳನ್ನು ಮಾಡಿದ ನಿನಗೆ ನಮಸ್ಕಾರವು. ||೨೩-೨೪||

ಯೋಗವಿದ್ಯೆಯಿಂದ ತಿಳಿಯತಕ್ಕವನೂ, ಯೋಗವಿದ್ಯಾಸ್ವರೂಪನೂ, ಯೋಗಿಗಳ ಯೋಗಸಿದ್ಧಿಸ್ವರೂಪನೂ, ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಬಲರಾಮ, ಶ್ರೀಕೃಷ್ಣ, ಬುದ್ಧ, ಕಲ್ಕಿ ಮುಂತಾದ ಅನೇಕಾವತಾರಸ್ವರೂಪನೂ ಆದ ನಿನಗೆ ನಮಸ್ಕಾರವು. ||೨೫-೨೬||

ಕರ್ಮಮಾಡಿದವರಿಗೆ ಫಲಸ್ವರೂಪನೂ, ಕರ್ಮಸ್ವರೂಪನೂ, ಕರ್ತೃಸ್ವರೂಪನೂ ಕರ್ಮಕ್ಕೆ ಸಾಕ್ಷಿಸ್ವರೂಪನೂ, ಆದ ನಿನಗೆ ನಮಸ್ಕಾರವು. ವಿಜ್ಞಾನಸ್ವರೂಪನೂ, ವೇದಾಂತ (ಉಪನಿಷತ್) ಸ್ವರೂಪನೂ, ಸತ್ವಾದಿಗುಣತ್ರಯಸ್ವರೂಪನೂ, ವಾಸ್ತವವಾಗಿ ನಿರ್ಗುಣಸ್ವರೂಪನೂ, ಆಶ್ಚರ್ಯಕರವಾದ ಇಚ್ಛಾಜ್ಞಾನಕ್ರಿಯಾಶಕ್ತಿಯುಳ್ಳವನೂ, ದೇವತೆಗಳಿಗೆ ಅಧಿಪತಿಯೂ, ಮಂಗಳಕರನಾದ ಪರಮಾತ್ಮಸ್ವರೂಪಪ್ರಾಪ್ತಿಗೆ ಮುಖ್ಯ ಕಾರಣನೂ ಆದ ನಿನಗೆ ನಮಸ್ಕಾರವು. ||೨೭-೨೮-೨೯||

ನಮೋ ನಕ್ಷತ್ರರೂಪಾಯ ನಮಸ್ತೇ ಸೋಮರೂಪಿಣೇ ।
ನಮಃ ಸೂರ್ಯಾತ್ಮನೇ ತುಭ್ಯಂ ನಮೋ ವಜ್ರಧರಾಯ ತೇ ॥೩೦॥

ನಮಸ್ತೇ ಪದ್ಮನಾಭಾಯ ನಮಸ್ತೇ ಶಾರ್ಙ್ಗಪಾಣಯೇ ।
ನಮಸ್ತುಭ್ಯಂ ವಿಶಾಲಕ್ಷ ನಮಃ ಶ್ರೀಧರ ನಾಯಕ ॥೩೧॥

ನಮಃ ಸಂಸಾರತಪ್ತಾನಾಂ ತಾಪನಾಶೈಕಹೇತವೇ ।
ಶ್ರೌತಸ್ಮಾರ್ತೈಕನಿಷ್ಠಾನಾಮಚಿರಾದೇವ ಮುಕ್ತಿದ ॥೩೨॥

ಅನ್ಯೇಷಾಮಪಿ ಸರ್ವೇಷಾಂ ಸಂಸಾರೈಕಪ್ರದಾವ್ಯಯ ।
ನಮೋಽಸುರವಿಮರ್ದಾಯ ನಮೋ ವಿದ್ಯಾಧರಾರ್ಚಿತ ॥೩೩॥

ಕ್ಷೀರೋದಶಾಯಿನೇ ತುಭ್ಯಂ ನಮೋ ವೈಕುಂಠವಾಸಿನೇ ।
ನಮೋ ರಾಗಾಭಿಭೂತಾನಾಂ ವೈರಾಗ್ಯಪ್ಲವದಾಯಿನೇ ॥೩೪॥

॥ ಸೂತ ಉವಾಚ ॥

ಇತ್ಥಂ ಬ್ರಹ್ಮರ್ಷಿಭಿಃ ಸಿದ್ಧೈಃ ಸನಕಾದ್ಯೈರಭಿಷ್ಟುತಃ ।
ಪ್ರಸಾದಮಕರೋತ್ತೇಷಾಂ ಶ್ರೀವಾರಾಹಶರೀರಭೃತ್ ॥೩೫॥

ನಕ್ಷತ್ರ, ಚಂದ್ರ, ಸೂರ್ಯ, ದೇವೇಂದ್ರ, ಇವರಸ್ವರೂಪನಾದವನೂ, ಬ್ರಹ್ಮನ ಉತ್ಪತ್ತಿಸ್ಥಾನವಾದ ಕಮಲವೇ ಹೊಕ್ಕುಳಲ್ಲುಳ್ಳವನೂ, ಶಾರ್ಙ್ಗವೆಂಬ ಧನುಸ್ಸನ್ನು ಧರಿಸಿದವನೂ, ವಿಶಾಲವಾದ ಕಣ್ಣುಗಳುಳ್ಳವನೂ, ಲಕ್ಷ್ಮಿಯನ್ನು ವಕ್ಷಸ್ಥಳದಲ್ಲಿ ಧರಿಸಿದವನೂ, ಸಕಲರಿಗೂ ಒಡೆಯನೂ, ಸಂಸಾರದಿಂದ ದುಃಖಪಡುತ್ತಿರುವ ಜನರ ದುಃಖನಾಶಕ್ಕೆ ಮುಖ್ಯಕಾರಣನೂ ಆದ ನಿನಗೆ ನಮಸ್ಕಾರವು. ॥೩೦-೩೧॥

ಶ್ರೌತಸ್ಮಾರ್ತವಿಧ್ಯುಕ್ತವಾದ ಕರ್ಮಗಳನ್ನು ಮಾಡುವವರಿಗೆ ಬೇಗನೆ ಮುಕ್ತಿಯನ್ನು ಕೊಡತಕ್ಕವನೂ, ಮಿಕ್ಕವರಿಗೆಲ್ಲರಿಗೂ ಸಂಸಾರಸ್ಥಿತಿಯನ್ನೇ ಕೊಡತಕ್ಕವನೂ, ನಾಶರಹಿತನೂ, ರಾಕ್ಷಸರನ್ನು ನಾಶಮಾಡತಕ್ಕವನೂ, ವಿದ್ಯಾಧರರ ಪೂಜೆಯನ್ನು ಸ್ವೀಕರಿಸುವವನೂ, ಕ್ಷೀರಸಮುದ್ರದಲ್ಲಿ ಮಲಗಿರುವವನೂ, ವೈಕುಂಠಲೋಕದಲ್ಲಿ ವಾಸಿಸತಕ್ಕವನೂ, ಕಾಮಗಳೆಂಬ ಸಮುದ್ರದಲ್ಲಿ ಬಿದ್ದು ದುಃಖಪಡತಕ್ಕವರಿಗೆ ವೈರಾಗ್ಯವೆಂಬ ತೆಪ್ಪವನ್ನು ಕೊಡತಕ್ಕವನೂ ಆದ ದೇವನಿಗೆ ನಮಸ್ಕಾರ ಮಾಡುವೆವು. ॥೩೨-೩೩-೩೪॥

ಈ ರೀತಿಯಲ್ಲಿ ಬ್ರಹ್ಮರ್ಷಿಗಳಿಂದಲೂ, ಸಿದ್ಧರಿಂದಲೂ, ಸನಕಾದಿದೇವರ್ಷಿ

ತತಃ ಪೂರ್ವವದಾನೀಯ ಮಹೀಂ ಸಾಕ್ಷಾನ್ಮಹೀಪತಿಃ ।
ವಿಸೃಜ್ಯ ರೂಪಂ ವಾರಾಹಂ ಸ್ವಯಂ ಬ್ರಹ್ಮಾಭವದ್ಧರಿಃ ॥೩೬॥

ಸಾ ಮಹೀ ಸಂಸ್ಥಿತಾ ವಿಪ್ರಾ ಜಲಸ್ಯೋಪರಿ ನೌರಿವ ।
ತಸ್ಯಾಂ ಬ್ರಹ್ಮಾ ಮಹಾದೇವಪ್ರಸಾದಾದೇವ ಸುವ್ರತಾಃ ॥೩೭॥

ಪೂರ್ವಸರ್ಗೋಽತ್ಥವಿಧ್ವಸ್ತಾನಖಿಲಾನಮರಪ್ರಭುಃ ।
ಯಥಾಪೂರ್ವಂ ದ್ವಿಜಾಃ ಸ್ರಷ್ಟುಂ ಮತಿಂ ಚಕ್ರೇ ಪ್ರಜಾಪತಿಃ ॥೩೮॥

ಇತಿ ಶ್ರುತ್ವಾ ಮುನಿಶ್ರೇಷ್ಠಾ ನೈಮಿಷಾರಣ್ಯವಾಸಿನಃ ।
ಪೂಜಯಾಮಾಸುರತ್ಯರ್ಥಂ ಸೂತಂ ಸರ್ವಹಿತಪ್ರದಂ ॥೩೯॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ
ಪೃಥಿವ್ಯುದ್ಧರಣಂ ನಾಮ ನವಮೋಽಧ್ಯಾಯಃ

ಗಳಿಂದಲೂ ವಿಶೇಷವಾಗಿ ಹೊಗಳಿಸಿಕೊಂಡ ವರಾಹಾವತಾರವನ್ನು ಮಾಡಿದ ನಾರಾಯಣನು ಅವರಿಗೆಲ್ಲರಿಗೂ ಅನುಗ್ರಹವನ್ನು ಮಾಡಿ ಭೂಮಿಯನ್ನು ತಂದು ಮೊದಲಿನಂತೆ ಸ್ಥಾಪಿಸಿ ತನ್ನ ವರಾಹರೂಪವನ್ನು ಬಿಟ್ಟು ಬ್ರಹ್ಮಸ್ವರೂಪನಾದನು. ||೩೫-೩೬||

ಎಲೈ ಬ್ರಾಹ್ಮಣರೇ, ಆ ಭೂಮಿಯು ನೀರಿನ ಮೇಲೆ ಹಡಗು ಇರುವಂತೆ ಆಕಾಶದಲ್ಲಿ ತೇಲುತ್ತಿದ್ದಿತು. ಆ ಭೂಮಿಯೊಳಗೆ ಬ್ರಹ್ಮನು ಪರಮೇಶ್ವರನ ಅನುಗ್ರಹ ದಿಂದಲೇ ಹಿಂದಿನ ಸೃಷ್ಟಿಯಲ್ಲಿ ಹುಟ್ಟಿ ಪ್ರಳಯದಲ್ಲಿ ನಾಶವಾಗಿದ್ದ ಸಮಸ್ತ ಜೀವರು ಗಳನ್ನೂ ಮೊದಲಿನಂತೆಯೇ ಆ ಜೀವರ ಕರ್ಮಾನುಸಾರವಾಗಿ ಭೋಗಾಪವರ್ಗ ಗಳನ್ನು ಕೊಡಲು ಅನುಕೂಲವಾಗುವಂತೆ ಸೃಷ್ಟಿಮಾಡಬೇಕೆಂದು ಸಂಕಲ್ಪಮಾಡಿ ದನು. ||೩೭-೩೮||

ಹೀಗೆ ಸೂತನು ಹೇಳಿದುದನ್ನು ಕೇಳಿ ನೈಮಿಷಾರಣ್ಯವಾಸಿಗಳಾದ ಮುನಿಗ ಳೆಲ್ಲರೂ ಸಮಸ್ತರಿಗೂ ಹಿತವನ್ನುಂಟುಮಾಡಿದ ಆ ಸೂತನನ್ನು ವಿಶೇಷವಾಗಿ ಪೂಜಿಸಿದರು ||೩೯||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ
ಭೂಮಿಯ ಉದ್ಧಾರದ ರೀತಿಯನ್ನು ವಿವರಿಸುವ
ಒಂಬತ್ತನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

|| ದಶಮೋಽಧ್ಯಾಯಃ ||

ಹತ್ತನೆಯ ಅಧ್ಯಾಯವು

|| ನೈಮಿಷೀಯಾ ಊಚುಃ ||

ಕಥಂ ಬ್ರಹ್ಮಾಽಸೃಜದ್ವಿದ್ವನ್ ಜಗತ್ಸರ್ವಂ ಚರಾಚರಂ ।
ಸಂಗ್ರಹೇಣ ತದಸ್ಮಾಕಂ ಬ್ರೂಹಿ ಪುಣ್ಯವತಾಂ ವರ ॥೧॥

|| ಸೂತ ಉವಾಚ ||

ಸಿಸೃಕ್ಷೋರ್ಬ್ರಹ್ಮಣಸ್ತಸ್ಯ ಬ್ರಾಹ್ಮಣಾ ವೇದವಿತ್ತಮಾಃ ।
ಅಬುದ್ಧಿಪೂರ್ವಕಃ ಸರ್ಗಃ ಕಲ್ಪಾದಿಷು ಯಥಾಪುರಾ ॥೨॥

ನೈಮಿಷಾರಣ್ಯವಾಸಿಗಳು ಹೇಳಿದರು—ಎಲೈ ವಿದ್ವಾಂಸನಾದ ಸೂತನೇ, ಬ್ರಹ್ಮನು ಸಮಸ್ತ ಚರಾಚರಜೀವರುಗಳಿಂದ ಕೂಡಿದ ಜಗತ್ತನ್ನು ಹೇಗೆ ಸೃಷ್ಟಿಸಿದನು ? ಪುಣ್ಯವಂತರಲ್ಲಿ ಶ್ರೇಷ್ಠನಾದ ನೀನು ಅದನ್ನು ಸಂಗ್ರಹವಾಗಿ ನಮಗೆ ಹೇಳಬೇಕು. ||೧||

ಸೂತನು ಹೇಳಿದನು—ವೇದವನ್ನು ಬಲ್ಲವರಲ್ಲಿ ಶ್ರೇಷ್ಠರಾದ ಬ್ರಾಹ್ಮಣರೇ, ಕೇಳಿರಿ. ಸೃಷ್ಟಿಮಾಡಬೇಕೆಂಬ ಅಪೇಕ್ಷೆಯುಳ್ಳ ಆ ಬ್ರಹ್ಮನ ಬುದ್ಧಿಪೂರ್ವಕವಲ್ಲದ ಸೃಷ್ಟಿಯು ಕಲ್ಪದ ಪ್ರಾರಂಭದಲ್ಲಿ ಹಿಂದಿನಂತೆಯೇ ಅಂಬಿಕಾಪತಿಯಾದ ಪರಮೇಶ್ವರನ ಆಜ್ಞೆಯಿಂದ ತಮೋಮಯವಾದುದಾಗಿ ವ್ಯಕ್ತವಾಯಿತು. ||೨||

ಪ್ರಾದುರ್ಭೂತೋಽಂಬಿಕಾಭರ್ತುರ್ರಾಜ್ಞಯೈವ ತಮೋಮಯಃ ।
ತಮೋ ಮೋಹೋ ಮಹಾಮೋಹಸ್ತಾಮಿಸ್ರೋ ಹ್ಯಂಧಸಂಜ್ಞಿತಃ ॥೩॥

ಅವಿದ್ಯಾ ಪಂಚ ಪರ್ವೈಷಾ ಪ್ರಾದುರ್ಭೂತಾ ಮಹಾತ್ಮನಃ ।
ಪಂಚಧಾಽವಸ್ಥಿತಃ ಸರ್ಗಃ ಪ್ರವೃತ್ತಸ್ತಾಮಸೋ ದ್ವಿಜಾಃ ॥೪॥

ಆ ಅವಿದ್ಯೆಯು ತಮ, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ ಎಂದು ಐದು ಬಗೆಯಾಗಿರುವುದು. ಮಹಾತ್ಮನಾದ ಆ ಬ್ರಹ್ಮನ ತಮೋಮಯವಾದ ಸೃಷ್ಟಿಯು ಈ ಐದು ಬಗೆಯಾಗಿರುವುದು.

ಇಲ್ಲಿ ತಿಳಿಯಬೇಕಾದ ಮುಖ್ಯಾಂಶವೇನೆಂದರೆ—ಸೃಷ್ಟಿಕರ್ತನಾದ ಬ್ರಹ್ಮನ ಆಯುಸ್ಸಿನ ಕೊನೆಯಲ್ಲಿ ಮಾಯೆಯಲ್ಲಿ ಸಮಸ್ತ ಪ್ರಪಂಚವೂ ಲೀನವಾಗಿರುವುದರಿಂದ ಆ ಮಾಯೆಯು ವಿಕಾರವಿಲ್ಲದುದಾಗಿ ಜಡವಾಗಿ ಪರಬ್ರಹ್ಮನಲ್ಲಿ ಲೀನವಾಗಿರುವುದು. ಆ ಪರಬ್ರಹ್ಮ ವಸ್ತುವು ಅಲೆಗಳಿಲ್ಲದ ಸಮುದ್ರದಂತೆ ತನ್ನಲ್ಲಿ ಲೀನವಾಗಿರುವ ಪ್ರಾಣಿಗಳ ಕರ್ಮವು ಪರಿಪಾಕಾವಸ್ಥೆಗೆ ಬರುವವರೆಗೂ ಚಲಿಸದೆ ಇರುವುದು. ಪ್ರಾಣಿಕರ್ಮಗಳು ಪರಿಪಕ್ವವಾದರೆ ಆ ಪರಬ್ರಹ್ಮನಿಗೆ ಜ್ಞಾನ ಇಚ್ಛೆ ಪ್ರಯತ್ನಗಳಿಲ್ಲದೆ ಇರುವುದರಿಂದ ಬುದ್ಧಿಪೂರ್ವಕವಲ್ಲದ ಸೃಷ್ಟಿಗೆ ಕಾರಣವಾದ ಮೊದಲನೆಯ ಚಲನೆಯು ಮುಂದೆ ಸೃಷ್ಟಿಯಾಗಬೇಕಾಗಿರುವ ಪ್ರಾಣಿಗಳ ಪರಿಪಕ್ವವಾದ ಕರ್ಮಗಳ ಪ್ರೇರಣೆಯಿಂದಲೇ ಉಂಟಾಗುವುದು. ಈ ಕಾರಣದಿಂದ ಪರಬ್ರಹ್ಮನಲ್ಲಿರುವ ಮಾಯೆಯಲ್ಲಿಯೂ ಚಲನೆಯುಂಟಾಗುವುದು. ಆ ಮಾಯೆಯ ಚಲನೆಯೇ ಅಬುದ್ಧಿಪೂರ್ವಕವಾದ ತಮೋಮಯವಾದ ಮೊದಲನೆಯ ಸೃಷ್ಟಿಯು. "ತಸ್ಮಾದವ್ಯಕ್ತಮುತ್ಪನ್ನಂ" "ನಾಸದಾಸೀತ್ . . . ತಮ ಆಸೀತ್ತಮಸಾ ಗೂಢಮಗ್ರೇ" ಇತ್ಯಾದಿ ವೇದವಾಕ್ಯಗಳೇ ಇದಕ್ಕೆ ಪ್ರಮಾಣಗಳು. ಈ ತಮೋಮಯವಾದ ಸೃಷ್ಟಿಯನ್ನು ಐದನೆಯದಾದ ಶಕ್ತಿಪೂಜಾಧ್ಯಾಯದಲ್ಲಿ ವಿವರಿಸಿರುವುದು. ತಮಸ್ಸೆಂಬ ಹೆಸರನ್ನು ಹೊಂದಿದ ಯಾವ ವಿಭಾಗವೂ ಇಲ್ಲದ ಮಾಯೆಯಲ್ಲಿ ಮೋಹ ಮಹಾಮೋಹ ತಾಮಿಸ್ರ ಅಂಧತಾಮಿಸ್ರ ಎಂದು ಬೇರೆ ಬೇರೆ ಹೆಸರುಳ್ಳ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ ಎಂಬ ನಾಲ್ಕು ವಿಕಲ್ಪಗಳು (ವಿಪರ್ಯಯ) ನಿದ್ರೆಮಾಡುವಂತೆ ಇರುವುವು. ಅನಾತ್ಮ ವಸ್ತುವಾದ ದೇಹಾದಿಗಳಲ್ಲಿ ಆತ್ಮವೆಂಬ ತಿಳಿವಳಿಕೆಯು ಅಸ್ಮಿತವೆನಿಸುವುದು. ಇದೇ ಮೋಹವು. ಇದರಿಂದ ದೇಹಕ್ಕೆ ಬೇಕಾದ ಸುಖಾನುಭವಗಳ ಉಪಕರಣವಾದ ಹೂಗಂಧ ಮುಂತಾದ ವಸ್ತುಗಳಲ್ಲಿ ಅಪೇಕ್ಷೆಯುಂಟಾಗುವುದೇ

ರಾಗವು. ಇದೇ ಮಹಾಮೋಹವು. ಈ ವಿಷಯಸುಖಗಳ ಅನುಭವಕ್ಕೆ ಅಡ್ಡಿಯಾಗುವ ವಸ್ತುಗಳ ಮೇಲಿನ ಕೋಪವೇ ದ್ವೇಷವೆನಿಸುವುದು. ಇದೇ ತಾಮಿಸ್ರವು. ಇದು ಅಹಿತವಾದುದೆಂದು ತಿಳಿದಿದ್ದರೂ ಕೂಡ ಅಜ್ಞಾನಿಯಂತೆ ಅದನ್ನು ಬಿಡದಿರುವುದೇ ಅಭಿನಿವೇಶವೆನಿಸುವುದು. ಇದೇ ಅಂಧತಾಮಿಸ್ರವು. ಅಥವಾ,

ತಮೋಽವಿವೇಕೋ ಮೋಹಸ್ಸ್ಯಾದಂತಃ ಕರಣವಿಭ್ರಮಃ ।
ಮಹಾಮೋಹಸ್ತು ವಿಜ್ಞೆಯೋ ಗ್ರಾಮ್ಯಭೋಗಸುಖೈಷಣಾ ॥
ಮರಣಂ ಹ್ಯಂಧತಾಮಿಸ್ರಂ ತಾಮಿಸ್ರಂ ಕ್ರೋಧ ಉಚ್ಯತೇ ।
ಅವಿದ್ಯಾ ಪಂಚ ಪರ್ವೈಷಾ ಪ್ರಾದುರ್ಭೂತಾ ಮಹಾತ್ಮನಃ ॥

ಯುಕ್ತಾಯುಕ್ತ ವಿವೇಕವಿಲ್ಲದಿರುವ ಮನಸ್ಸಿನ ಸ್ಥಿತಿಯನ್ನು ತಮಸ್ಸೆಂದೂ, ಒಂದನ್ನು ಇನ್ನೊಂದು ಬಗೆಯಾಗಿ ತಿಳಿಯುವ ಮನೋವೃತ್ತಿಯನ್ನು ಮೋಹವೆಂದೂ, ವಿಷಯಸುಖಾಪೇಕ್ಷೆಯ ಮನೋವೃತ್ತಿಯನ್ನು ಮಹಾಮೋಹವೆಂದೂ, ಮರಣಾಧೀನವಾದ ಮನೋವೃತ್ತಿಯನ್ನು ಅಂಧತಾಮಿಸ್ರವೆಂದೂ, ಕೋಪಕ್ಕೆ ಅಧೀನವಾದ ಮನೋವೃತ್ತಿಯನ್ನು ತಾಮಿಸ್ರವೆಂದೂ, ಅವಿದ್ಯೆಯು ಐದು ಬಗೆ. ಎಂದು ಕೆಲವರು ಹೇಳುವರು. ಸತ್ವರಜಸ್ತಮೋಗುಣಗಳ ಸಮಷ್ಟಿಯಿಂದ ತೋರುವ ತಮೋರೂಪವಾದ ಅವಿದ್ಯೆಯಿಂದ ಒಳಗೆ ಗುಣತ್ರಯಗಳು ಅವ್ಯಕ್ತವಾಗಿ ತೋರುವ ಮಹತ್ತತ್ವವುಂಟಾಗುವುದು. ಇದು ಎರಡನೆಯ ಸೃಷ್ಟಿಯು. ಆ ಮಹತ್ತತ್ವದ ದೆಸೆಯಿಂದ ಹೊರಗೂ ಗುಣತ್ರಯಗಳು ವ್ಯಕ್ತವಾಗಿ ತೋರುವ ಅಹಂಕಾರತತ್ವವು ಉತ್ಪತ್ತಿಯಾಗುವುದು. ಇದು ಮೂರನೆಯ ಸೃಷ್ಟಿಯು. "ವೈಕಾರಿಕಸ್ತೇಜಸಶ್ಚ ಭೂತಾದಿಶ್ಚೈವ ತಾಮಸಃ । ತ್ರಿವಿಧೋಽಯಮಹಂಕಾರೋ ಮಹತ್ತತ್ವಾದ್ವ್ಯಜಾಯತ ॥" ಎಂಬಂತೆ ಅಹಂಕಾರವು ವೈಕಾರಿಕ, ತೈಜಸ, ತಾಮಸ ಎಂದು ಮೂರು ಬಗೆಯಾಗಿರುವುದು. ಭೂತಾದಿ ಎಂದು ಹೆಸರುಳ್ಳ ತಾಮಸಾಹಂಕಾರವು ರಜೋಗುಣದಿಂದ ಕೂಡಿ ಪಂಚತನ್ಮಾತ್ರಗಳು ಉತ್ಪತ್ತಿಯಾಗುವುವು. ವೈಕಾರಿಕವೆಂಬ ಹೆಸರಿನ ಸಾತ್ವಿಕಾಹಂಕಾರವು ರಜೋಗುಣದಿಂದ ಕೂಡಿ ಹನ್ನೊಂದು ಇಂದ್ರಿಯಗಳು ಹುಟ್ಟುವುವು. ಇದು ಐದನೆಯ ಸೃಷ್ಟಿಯು. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಹತ್ತಕ್ಕೂ ಆಶ್ರಯವಾದ ದೇವತೆಗಳ ಸೃಷ್ಟಿಯು ಆರನೆಯದು. ಈ ಆರು ಸೃಷ್ಟಿಗಳೂ, ಈಶ್ವರಕರ್ತೃಕವಾದ ಪ್ರಾಕೃತಸೃಷ್ಟಿಯು. ಇದನ್ನೇ ಅವಿದ್ಯಾಪೂರ್ವಕವಾದಸೃಷ್ಟಿ ಎನ್ನುವರು. ಬ್ರಹ್ಮಸೃಷ್ಟಿಯಲ್ಲಿ ವೃಕ್ಷಾದಿಗಳೂ, ಪಶ್ವಾದಿಗಳೂ, ದೇವಾದಿಗಳೂ, ಮನುಷ್ಯಾದಿಗಳೂ, ಭೂತಪ್ರೇತಾದಿಗಳೂ, ಸೇರಿ ಆರು ವೈಕೃತ ಸೃಷ್ಟಿಯು ಮಹಾ

ಅಂತರ್ಬಹಿಶ್ಚ ವೇದಜ್ಞಾಸ್ತ್ವಪ್ರಕಾಶಸ್ತಥೈವ ಚ ।
ಸ್ತಬ್ಧೋ ನಿಸ್ಸಂಜ್ಞ ಏವಾಯಮಭವನ್ಮುನಿಪುಂಗವಾಃ ॥೫॥

ತಂ ದೃಷ್ಟ್ವಾ ಭಗವಾನ್ ಬ್ರಹ್ಮಾ ಸಿಸೃಕ್ಷುಃ ಸರ್ವಮಾಸ್ತಿಕಾಃ ।
ಅಸಾಧಕ ಇತಿ ಜ್ಞಾತ್ವಾ ಪುನಃ ಸೋಽಪರಮೀಶ್ವರಃ ॥೬॥

ಅಮನ್ಯತಾಸ್ಯ ವೇದಜ್ಞಾ ಬ್ರಹ್ಮಣೋ ಧ್ಯಾಯತಃ ಪುನಃ ।
ಸರ್ಗೋಽವರ್ತತ ದುಃಖಾದ್ಯಸ್ತಿರ್ಯಕ್ಸ್ರೋತಃ ಪ್ರಜಾಪತೇಃ ॥೭॥

ಪಶ್ವಾದಿಃ ಸ ತು ವಿಜ್ಞೇಯಸ್ತಿರ್ಯಕ್ಸ್ರೋತಃ ಸಮಾಸತಃ ।
ತಂ ಚಾಸಾಧಕಮಿತ್ಯೇವಂ ಜ್ಞಾತ್ವಾಽಮನ್ಯತ್ಪರಂ ಪ್ರಭುಃ ॥೮॥

ಪುನಶ್ಚಿಂತಯತಸ್ತಸ್ಯ ಸಾತ್ವಿಕೋಽವರ್ತತ ದ್ವಿಜಾಃ ।
ಊರ್ಧ್ವಸ್ರೋತ ಇತಿ ಖ್ಯಾತಃ ಸರ್ಗೋಽತೀವ ಸುಖಾವಹಃ ॥೯॥
ದೇವಸರ್ಗ ಇತಿ ಖ್ಯಾತಃ ಸ ತು ಸತ್ಯಪರಾಯಣಃ ।

ಕಲ್ಪದ ಮೊದಲಿನಲ್ಲಿ ಪರಬ್ರಹ್ಮನ ದೆಸೆಯಿಂದ ಐದು ಬಗೆಯಾದ ಅವಿದ್ಯೆಯು ವ್ಯಕ್ತವಾಗುವಂತೆ ಅವಾಂತರಕಲ್ಪದ ಆದಿಯಲ್ಲಿ ಬ್ರಹ್ಮನ ದೆಸೆಯಿಂದ ವೈಕಾರಿಕ ಸೃಷ್ಟಿಯು ವ್ಯಕ್ತವಾಗುವುದು. ॥೩-೪॥

ಎಲೈ ಋಷಿಶ್ರೇಷ್ಠರೇ, ಸ್ಥಾವರವಾದ ವೃಕ್ಷಾದಿಗಳ ಸೃಷ್ಟಿಯಲ್ಲಿ ಅವುಗಳಿಗೆ ಕಡಿಯುವುದು, ತೆಗೆದುಕೊಂಡು ಹೋಗುವುದು, ಮುಂತಾದುವುಗಳಿಂದ ದುಃಖಸುಖ ಗಳುಂಟಾದರೂ, ಅವುಗಳಿಗೆ ಪ್ರತೀಕಾರಮಾಡಬೇಕೆಂಬುದನ್ನು ಒಳಗೂ, ಹೊರಗೂ, ತಿಳಿಯದೆ, ಅದನ್ನು ಪ್ರಕಾಶಪಡಿಸುವ ಶಕ್ತಿಯಿಲ್ಲದೆ, ಅಜ್ಞಾನದಿಂದ ಚಲಿಸದಿರುವ ಸ್ಥಿತಿಯುಂಟಾಗಿರುವುದು. ॥೫॥

ಇದನ್ನು ನೋಡಿ ಮಹಾತ್ಮನಾದ ಬ್ರಹ್ಮನು ಇದು ಪ್ರಪಂಚಾಭಿವೃದ್ಧಿಗೆ ಸಾಧಕವಲ್ಲವೆಂದು ತಿಳಿದು ಮತ್ತೊಂದು ಸೃಷ್ಟಿಯನ್ನು ಮಾಡಲಪೇಕ್ಷಿಸಿ ಧ್ಯಾನ ಮಾಡುತ್ತಿರುವಲ್ಲಿ, ಸಂಚಾರಮಾಡುವುದು, ಆಹಾರಾದಿಗಳನ್ನು ತೆಗೆದುಕೊಳ್ಳುವುದು ಮುಂತಾದ ಕಾರ್ಯಗಳಿಂದ ತಿರ್ಯಕ್ಸ್ರೋತವೆಂಬ ಮೃಗಪಶ್ವಾದಿಸೃಷ್ಟಿಯು ವ್ಯಕ್ತವಾಯಿತು. ಈ ಸೃಷ್ಟಿಯಲ್ಲಿ ಅವುಗಳಿಗೆ ಕೇವಲ ದುಃಖಾನುಭವವೇ ಹೊರತು ಸುಖಾನುಭವವಿಲ್ಲವೆಂಬುದು ಬ್ರಹ್ಮನಿಗೆ ವ್ಯಕ್ತವಾಯಿತು. ॥೬-೭॥

ಪಶ್ವಾದಿಗಳ ಸೃಷ್ಟಿಯು ಪ್ರಪಂಚಾಭಿವೃದ್ಧಿಗೆ ಸಾಧಕವಾಗಲಿಲ್ಲವೆಂಬುದನ್ನು

ತಮುಷ್ಯಸಾಧಕಂ ಮತ್ವಾ ಬ್ರಹ್ಮಾ ಬ್ರಹ್ಮವಿದಾಂ ವರಾಃ ॥೧೦॥

ಅಮನ್ಯತ ಪರಂ ಸರ್ಗಂ ರಾಜಸಂ ವೈದಿಕೋತ್ತಮಾಃ ।
ತಸ್ಯ ಚಿಂತಯತಸ್ಸೃಷ್ಟಿಂ ಪ್ರಾದುರಾಸೀಚ್ಛಿವಾಜ್ಞಯಾ ॥೧೧॥

ಅರ್ವಾಕ್ಸ್ರೋತ ಇತಿ ಖ್ಯಾತಃ ಸರ್ಗೋ ವಿಪ್ರಾಸ್ತು ಮಾನುಷಃ ।
ಪುನಶ್ಚಿಂತಯತಸ್ತಸ್ಯ ಬ್ರಹ್ಮಣಃ ಪರಮೇಷ್ಠಿನಃ ॥೧೨॥

ಮಹಾದೇವಾಜ್ಞಯಾ ವಿಪ್ರಾಃ ಸರ್ಗೋ ಭೂತಾದಿಕೋಽಭವತ್ ।
ಇತಿ ಪಂಚ ವಿಧಾ ಸೃಷ್ಟಿಃ ಪ್ರವೃತ್ತಾ ಪರಮೇಷ್ಠಿನಃ ॥೧೩॥

ಸರ್ಗಸ್ತು ಪ್ರಥಮೋ ಜ್ಞೇಯೋ ಮಹತೋ ಬ್ರಹ್ಮಣಸ್ತು ಸಃ ।
ದ್ವಿತೀಯೋ ವೇದವಿಚ್ಛ್ರೇಷ್ಠಾಸ್ತನ್ಮಾತ್ರಾಣಾಂ ಚ ಭೌತಿಕಃ ॥೧೪॥

ವೈಕಾರಿಕಾಖ್ಯೋ ವೇದಜ್ಞಾಸ್ತೃತೀಯಃ ಪರಿಕೀರ್ತಿತಃ ।
ಸೋಽಯಮೈಂದ್ರಿಯಿಕಃ ಸರ್ಗ ಇತ್ಯೇತೇ ಪ್ರಾಕೃತಾಸ್ತ್ರಯಃ ॥೧೫॥

ಬ್ರಹ್ಮನು ತಿಳಿದು ಮತ್ತೆ ಆಲೋಚಿಸಿ ಊರ್ಧ್ವಸ್ರೋತಸ್ಸೆಂಬ ಅತ್ಯಂತಸುಖಾನುಭವವನ್ನೇ ಮಾಡುವ ದೇವತೆಗಳನ್ನು ಸತ್ವಗುಣದಿಂದ ಸೃಷ್ಟಿಮಾಡಿದನು. ||೮-೯||

ಊರ್ಧ್ವಂಗಚ್ಛಂತಿಸತ್ವಸ್ಥಾಃ ಭ ಗೀ. ೧೪. ೧೮. ಎಂಬಂತೆ ದೇವತೆಗಳು ಭೋಗಭೂಮಿಯಲ್ಲಿರುವವರು. ಕರ್ಮಭೂಮಿಯಲ್ಲಲ್ಲ. ಎಂದು ಈ ಸೃಷ್ಟಿಯೂ, ಉಪಯುಕ್ತವಾದುದಲ್ಲವೆಂದು ತಿಳಿದು ಬ್ರಹ್ಮನು ರಜೋಗುಣದಿಂದ ಕೂಡಿದ ಸೃಷ್ಟಿಯನ್ನು ಮಾಡಬೇಕೆಂದು ಚಿಂತಿಸಿದನು. ಹೀಗೆ ಆಲೋಚಿಸುತ್ತಿರುವಲ್ಲಿ ಶಿವನ ಅನುಗ್ರಹದಿಂದ ಅರ್ವಾಕ್ಸ್ರೋತವೆಂಬ ಪುತ್ರಪೌತ್ರಾದಿರೂಪವಾದ, ಪ್ರವಾಹರೂಪಗಮನವುಳ್ಳ ಪ್ರಸಿದ್ಧವಾದ ಮನುಷ್ಯಸೃಷ್ಟಿಯು ವ್ಯಕ್ತವಾಯಿತು. ||೧೦-೧೧||

ಮತ್ತು ಬ್ರಹ್ಮನು ಧ್ಯಾನಮಾಡುತ್ತಿರುವಲ್ಲಿ ಮಹಾದೇವನ ಅಪ್ಪಣೆಯಿಂದ ಕಡೆಗೆ ಭೂತಪ್ರೇತಪಿಶಾಚಾದಿಗಳ ಸೃಷ್ಟಿಯು ವ್ಯಕ್ತವಾಯಿತು. ಈ ರೀತಿಯಾಗಿ ಐದುವಿಧವಾದ ವೈಕೃತಸೃಷ್ಟಿಯಾಯಿತು. ||೧೨-೧೩||

ಪರಮಾತ್ಮನ ದೆಸೆಯಿಂದ ಗುಣತ್ರಯಾತ್ಮಕವಾದ ಮಹತ್ತತ್ವವು ಮೊದಲು ಹುಟ್ಟಿತು. ಆಮೇಲೆ ಸೂಕ್ಷ್ಮಪಂಚಭೂತಗಳೂ, ಪಂಚತನ್ಮಾತ್ರಗಳೂ, ಹುಟ್ಟಿ ಎರಡನೆಯ ಸೃಷ್ಟಿಯಾಯಿತು. ಇಂದ್ರಿಯಗಳೂ, ಇಂದ್ರಿಯಾಧಿಷ್ಠಾತೃದೇವತೆಗಳೂ,

ಚತುರ್ಥೋ ಮುಖ್ಯಸರ್ಗಾಖ್ಯೋ ಮುಖ್ಯಸ್ತು ಸ್ಥಾವರಾಭಿಧಃ ।
ತಿರ್ಯಕ್ಸ್ರೋತಸ್ತು ಪಶ್ವಾದಿಃ ಪಂಚಮಃ ಪರಿಕೀರ್ತಿತಃ ॥೧೬॥

ಷಷ್ಠಸ್ತು ದೇವಸರ್ಗಾಖ್ಯಃ ಸಪ್ತಮೋಽರ್ವಾಕ್ಸ್ರೋತಃ ಕೀರ್ತಿತಃ ।
ಅಷ್ಟಮೋ ಮುನಿಶಾರ್ದೂಲಾ ಭೂತಪ್ರೇತಾದಿಸಂಜ್ಞಿತಃ ॥೧೭॥

ಕೌಮಾರೋ ನವಮಃ ಪ್ರೋಕ್ತಃ ಪ್ರಾಕೃತೋ ವೈಕೃತಶ್ಚ ಸಃ ।
ಏಷಾಮವಾಂತರೋ ಭೇದೋ ಮಯಾ ವಕ್ತುಂ ನ ಶಕ್ಯತೇ ॥೧೮॥

ಅಲ್ಪತ್ವಾದುಪಯೋಗಸ್ಯ ದ್ವಿಜಾ ನಾದ್ಯ ವದಾಮ್ಯಹಂ ।
ಸನಕಂ ಚ ದ್ವಿಜಶ್ರೇಷ್ಠಾಸ್ತಥೈವ ಚ ಸನಾತನಂ ॥೧೯॥

ಸನಂದನ ಸಮಾಖ್ಯಂ ಚ ತಥೈವ ಬ್ರಹ್ಮವಿತ್ತಮಾಃ ।
ಋಭುಂ ಸನತ್ಕುಮಾರಂ ಚ ಸಸರ್ಜಾಗ್ರೇ ಪ್ರಜಾಪತಿಃ ॥೨೦॥

ಬ್ರಹ್ಮಣೋ ಮಾನಸಾಃ ಪುತ್ರಾ ಇಮೇ ಬ್ರಹ್ಮಸಮಾ ದ್ವಿಜಾಃ ।
ಮಹಾವೈರಾಗ್ಯಸಂಪನ್ನಾ ಅಭವನ್ಪಂಚ ಸುವ್ರತಾಃ ॥೨೧॥

ಹುಟ್ಟಿ ವೈಕಾರಿಕವೆಂಬ ಮೂರನೆಯ ಸೃಷ್ಟಿಯಾಯಿತು. ಈ ಮೂರೂ ಪ್ರಾಕೃತ ಸೃಷ್ಟಿಗಳು. ||೧೪-೧೫||

ನಾಲ್ಕನೆಯದು ಮುಖ್ಯಸೃಷ್ಟಿ ಎಂಬ ಸ್ಥಾವರವಾದ ವೃಕ್ಷಾದಿಗಳ ಸೃಷ್ಟಿಯು. ಐದನೆಯದು ತಿರ್ಯಕ್ಸ್ರೋತವೆಂಬ ಪಶ್ವಾದಿಗಳ ಸೃಷ್ಟಿಯು. ಆರನೆಯದು ದೇವತೆಗಳ ಸೃಷ್ಟಿಯು. ಏಳನೆಯದು ಮನುಷ್ಯ ಸೃಷ್ಟಿಯು. ಎಂಟನೆಯದು ಭೂತ ಪ್ರೇತಾದಿಗಳ ಸೃಷ್ಟಿಯು. ||೧೬-೧೭||

ಕೌಮಾರ ಸೃಷ್ಟಿಯು ಒಂಬತ್ತನೆಯದು. ಇದು ಪ್ರಾಕೃತ ವೈಕೃತ ಉಭಯ ರೂಪವಾದುದು. ಈ ಸೃಷ್ಟಿಗಳ ಒಳಭೇದಗಳನ್ನು ನಾನು ಈಗ ಹೇಳಲಾರೆನು. ಇದರ ಉಪಯೋಗವು ಅಷ್ಟೇನೂ ಕಾಣುವುದಿಲ್ಲ. ಅಲ್ಪವಾಗಿಯೇ ಇದೆ. ||೧೮||

ಪ್ರಜಾಪತಿಯಾದ ಬ್ರಹ್ಮನು ಮೊದಲು ಸನಕ, ಸನಾತನ, ಸನಂದ, ಋಭು, ಸನತ್ಕುಮಾರ ಎಂಬ ಐವರನ್ನು ಸೃಷ್ಟಿಸಿದನು. ಈ ಐವರೂ ಬ್ರಹ್ಮನ ಮಾನಸ ಪುತ್ರರು. ಇವರು ಯಾವಾಗಲೂ ಕೌಮಾರಾವಸ್ಥೆಯಲ್ಲಿರತಕ್ಕವರು. ಮಹಾ ವೈರಾಗ್ಯದಿಂದ ಕೂಡಿ ಬ್ರಹ್ಮನಿಗೆ ಸಮಾನರಾಗಿರುವರು. ||೧೯-೨೦-೨೧||

ಅಕರ್ತ್ರಾತ್ಮಾನುಸಂಧಾನಾಜ್ಞಾತಾ ಏತೇ ಪ್ರಜಾಪತೇಃ ।
ಶಿವಧ್ಯಾನೈಕಮನಸೋ ನ ಸೃಷ್ಟೌ ಚಕ್ರಿರೇ ಮತಿಂ ॥೨೨॥

ಸೃಷ್ಟ್ಯರ್ಥಂ ಭಗವಾನ್ಬ್ರಹ್ಮಾ ಲೋಕಾನಾಮಂಬಿಕಾಪತೇಃ ।
ಮುಮೋಹ ಮಾಯಯಾ ಸದ್ಯಸ್ತಂ ದೃಷ್ಟ್ವಾ ಪುರುಷೋತ್ತಮಃ ॥೨೩॥

ಬುಭೋಧ ಪುತ್ರಂ ಬ್ರಹ್ಮಾಣಂ ದ್ವಿಜಾ ನಾರಾಯಣಃ ಪಿತಾ ।
ಪ್ರಬೋಧಿತಶ್ಚತುರ್ವಕ್ತ್ರೋ ವಿಷ್ಣುನಾ ವಿಶ್ವಯೋನಿನಾ ।
ಮಹಾಘೋರಂ ತಪಶ್ಚಕ್ರೇ ಧ್ಯಾಯನ್ವಿಷ್ಣುಂ ಸನಾತನಂ ॥೨೪॥

ಏವಂ ಚಿರಗತೇ ಕಾಲೇ ನ ಕಿಂಚಿತ್ಪ್ರತ್ಯಪದ್ಯತ ।
ತತಃ ಕ್ರೋಧೋ ಮಹಾನಸ್ಯ ಬ್ರಹ್ಮಣೋಽಜಾಯತಾಸ್ತಿಕಾಃ ।
ಕ್ರೋಧೇನ ತಸ್ಯ ನೇತ್ರಾಭ್ಯಾಂ ಪ್ರಪತನ್ನಶ್ರುಬಿಂದವಃ ॥೨೫॥

ಬ್ರಹ್ಮಮಾನಸಪುತ್ರರಾದ ಇವರು ಆತ್ಮನು ಕರ್ತೃವಲ್ಲವೆಂದು ಧ್ಯಾನ ಮಾಡುತ್ತಾ ಶಿವಧ್ಯಾನವೊಂದರಲ್ಲಿಯೇ ನಟ್ಟ ಮನಸ್ಸುಳ್ಳವರಾಗಿ ಸೃಷ್ಟಿಮಾಡ ಬೇಕೆಂದು ಮನಸ್ಸುಳ್ಳವರಾಗಲಿಲ್ಲ. ॥೨೨॥

ಮಹಾಮಹಿಮನಾದ ಬ್ರಹ್ಮನು ಅಂಬಿಕಾಪತಿಯಾದ ಪರಮೇಶ್ವರನ ಆಜ್ಞೆ ಯಿಂದ ಲೋಕಗಳನ್ನು ಸೃಷ್ಟಿಮಾಡಬೇಕೆಂಬ ಮಾಯೆಯಿಂದ ಮೋಹಿತನಾದನು. ಅವನನ್ನು ನೋಡಿ, ಪುರುಷಶ್ರೇಷ್ಠನಾದವನೂ, ಬ್ರಹ್ಮನ ತಂದೆಯೂ ಆದ ನಾರಾಯಣನು ತನ್ನ ಪುತ್ರನಾದ ಬ್ರಹ್ಮನಿಗೆ ಪ್ರಪಂಚ ಮತ್ತು ಪರಮಾತ್ಮರ ಸ್ವರೂಪವನ್ನು ಬೋಧೆಮಾಡಿದನು. ॥೨೩॥

ಪ್ರಪಂಚಕ್ಕೆ ಕಾರಣನಾದ ವಿಷ್ಣುವಿನ ಉಪದೇಶವನ್ನು ಪಡೆದ ಬ್ರಹ್ಮನು ಆ ಅನಾದಿಯಾದ ವಿಷ್ಣುವನ್ನು ಧ್ಯಾನಮಾಡುತ್ತ ಕಠಿನವಾದ ತಪಸ್ಸನ್ನು ಮಾಡಿದನು. ಬಹಳಕಾಲ ತಪಸ್ಸು ಮಾಡಿದರೂ ಯಾವ ಫಲವೂ ಆಗಲಿಲ್ಲ. ॥೨೪॥

ಆಮೇಲೆ ಬ್ರಹ್ಮನಿಗೆ ವಿಶೇಷವಾಗಿ ಕೋಪವು ಉತ್ಪತ್ತಿಯಾಯಿತು. ಆ ಕೋಪದಿಂದ ಅವನ ಕಣ್ಣುಗಳಿಂದ ನೀರಿನ ಹನಿಗಳು ಬಿದ್ದುವು. ॥೨೫॥

ಏತಸ್ಮಿನ್ಸಮಯೇ ತಸ್ಯ ಬ್ರಹ್ಮಣಃ ಪರಮೇಶ್ವರಃ ।
ಅದದಾತ್ಕೃಪಯಾ ಬುದ್ಧಿಂ ಭಗವಾನ್ಕರುಣಾನಿಧಿಃ ॥೨೭॥

ಸ ಪುನರ್ದೇವದೇವಸ್ಯ ಪ್ರಸಾದಾದಂಬಿಕಾಪತೇಃ ।
ತತಾಪ ಪರಮಂ ಘೋರಂ ತಪೋ ವಿಪ್ರಾಶ್ಚತುರ್ಮುಖಃ ॥೨೮॥

ಸೃಷ್ಟ್ಯರ್ಥಂ ಬ್ರಹ್ಮಣಸ್ತಸ್ಯ ಭ್ರುವೋರ್ಘ್ರಾಣಸ್ಯ ಮಧ್ಯತಃ ।
ಅವಿಮುಕ್ತಾಭಿಧಾದ್ದೇಶಾತ್ಸ್ವಕೀಯಾತ್ತು ವಿಶೇಷತಃ ॥೨೯॥

ತ್ರಿಮೂರ್ತೀನಾಂ ಮಹೇಶಸ್ಯ ದ್ವಿಜಾ ವೇದಾರ್ಥವಿತ್ತಮಾಃ ।
ಅಸಂಭೂತೋ ಮಹಾದೇವಃ ಸರ್ವದೇವನಮಸ್ಕೃತಃ ॥೩೦॥

ಅರ್ಧನಾರೀಶ್ವರೋ ಭೂತ್ವಾ ಪ್ರಾದುರಾಸೀದ್ಘೃಣಾನಿಧಿಃ ।
ತಮಜಂ ಶಂಕರಂ ಸಾಕ್ಷಾತ್ತೇಜೋರಾಶಿಮುಮಾಪತಿಂ । ॥೩೧॥
ಸರ್ವಜ್ಞಂ ಸರ್ವಕರ್ತಾರಂ ನೀಲಲೋಹಿತಸಂಜ್ಞಿತಂ ।

ಆ ಸಮಯದಲ್ಲಿ ಪರಮೇಶ್ವರನು ದಯೆಯಿಂದ ಆ ಬ್ರಹ್ಮನಿಗೆ ಬುದ್ಧಿಯನ್ನು ಅನುಗ್ರಹಿಸಿದನು. ಬಳಿಕ ದೇವದೇವನಾದ ಅಂಬಿಕಾಪತಿಯಾದ ಪರಮೇಶ್ವರನ ಅನುಗ್ರಹದಿಂದ ಚತುರ್ಮುಖ ಬ್ರಹ್ಮನು ಮತ್ತೂ ಕಠಿನವಾದ ಶ್ರೇಷ್ಠವಾದ ತಪಸ್ಸನ್ನು ಮಾಡಿದನು. ॥೨೭-೨೮॥

ಸೃಷ್ಟಿಮಾಡಬೇಕೆಂಬ ಉದ್ದೇಶದಿಂದ ತಪಸ್ಸುಮಾಡುತ್ತಿರುವ ಬ್ರಹ್ಮನ ಹುಬ್ಬುಗಳ ಮತ್ತೂ ಮೂಗಿನ ನಡುವೆ ಭ್ರೂಮಧ್ಯದಲ್ಲಿ ಅವಿಮುಕ್ತವೆಂಬ ಕ್ಷೇತ್ರ ದಲ್ಲಿ, ತ್ರಿಮೂರ್ತಿಗಳಾದ ಬ್ರಹ್ಮವಿಷ್ಣುಮಹೇಶ್ವರರ ಉಪಲಬ್ಧಿಸ್ಥಾನವೂ, ವಿಶೇಷ ವಾಗಿ ಮಹೇಶ್ವರನ ಸ್ಥಾನವೂ ಆದ ಪ್ರದೇಶದಲ್ಲಿ, ಅನಾದಿಯಾದವನೂ, ದಯಾ ನಿಧಿಯೂ ಆದ ಪರಮೇಶ್ವರನು ಅರ್ಧನಾರೀಶ್ವರನಾಗಿ ವ್ಯಕ್ತನಾದನು. ಜಾಬಾಲೋಪ ನಿಷತ್ತಿನಲ್ಲಿ ಇಂದ್ರಿಯಕೃತವಾದ ದೋಷಗಳನ್ನು ನಿವಾರಣೆಮಾಡಿ ನಾಶಮಾಡುವುದ ರಿಂದ ವರಣಾ ನಾಸೀ ಎಂಬ ಭ್ರೂಮಧ್ಯಪ್ರದೇಶವು ಪರಮೇಶ್ವರನ ಸ್ಥಾನವಾದ ವಾರಾಣಸೀ (ಕಾಶಿ) ಕ್ಷೇತ್ರವೆಂದು ಹೇಳಿರುವುದು. ॥೨೯-೩೦॥

ಬ್ರಹ್ಮನು ಮಹಾತೇಜಸ್ವಿಯೂ, ಉಮಾದೇವೀಸಹಿತನೂ, ಸರ್ವಜ್ಞನೂ, ಉತ್ಪತ್ತಿರಹಿತನೂ, ಸರ್ವಕರ್ತೃವೂ, ಕಂಠದಲ್ಲಿ ಕಪ್ಪು ಉಳಿದ ಅವಯವವೆಲ್ಲ ಕೆಂಪೂ ಆಗಿರುವುದರಿಂದ ನೀಲಲೋಹಿತನೆಂಬ ಹೆಸರುಳ್ಳವನೂ ಆದ ಶಂಕರನನ್ನು

ದೃಷ್ಟ್ವಾ ನತ್ವಾ ಮಹಾಭಕ್ತ್ಯಾ ಸ್ತುತ್ವಾ ಹೃಷ್ಟಃ ಪ್ರಜಾಪತಿಃ ॥೩೨॥

ಉವಾಚ ದೇವದೇವೇಶಂ ಸೃಜೇಮಾ ವಿವಿಧಾಃ ಪ್ರಜಾಃ ।
ಬ್ರಹ್ಮಣೋ ವಚನಂ ದೇವಃ ಶ್ರುತ್ವಾ ವಿಶ್ವಜಗತ್ಪತಿಃ ॥೩೩॥

ಸಸರ್ಜ ಸ್ವಾತ್ಮನಾ ತುಲ್ಯಾನ್ ಶಿವೋ ರುದ್ರಾನ್ ದ್ವಿಜೋತ್ತಮಾಃ ।
ತಂ ಪುನಶ್ಚಾಹ ದೇವೇಶಂ ಬ್ರಹ್ಮಾ ವಿಶ್ವಜಗತ್ಪ್ರಭುಃ ॥೩೪॥

ಜನ್ಮಮೃತ್ಯುಭಯಾವಿಷ್ಟಾಃ ಸೃಜ ದೇವ ಪ್ರಜಾ ಇತಿ ।
ಏವಂ ಶ್ರುತ್ವಾ ಮಹಾದೇವಃ ಪ್ರಹಸ್ಯ ಕರುಣಾನಿಧಿಃ ॥೩೪॥

ಪ್ರೋವಾಚಾಶೋಭನಾಃ ಸ್ರಕ್ಷ್ಯೇ ನಾಹಂ ಬ್ರಹ್ಮನ್ಪ್ರಜಾ ಇಮಾಃ ।
ಅಹಂ ದುಃಖೋದಧೌ ಮಗ್ನಾ ಉದ್ಧರಾಮಿ ಪ್ರಜಾ ಇಮಾಃ ॥೩೫॥

ಸಮ್ಯಕ್ ಜ್ಞಾನಪ್ರದಾನೇನ ಗುರುಮೂರ್ತಿಪರಿಗ್ರಹಃ ।
ತ್ವಮೇವ ಸೃಜ ದುಃಖಾದ್ಯಾಃ ಪ್ರಜಾಃ ಸರ್ವಾಃ ಪ್ರಜಾಪತೇ ॥೩೬॥

ನೋಡಿ ಭಕ್ತಿಯಿಂದ ನಮಸ್ಕರಿಸಿ ಸ್ತೋತ್ರವನ್ನು ಮಾಡಿ ಸಂತೋಷದಿಂದ ಆ ದೇವದೇವನನ್ನು ಕುರಿತು ನಾನಾಬಗೆಯಾದ ಪ್ರಜೆಗಳನ್ನು ಸೃಷ್ಟಿಮಾಡಬೇಕೆಂಬುದಾಗಿ ಕೇಳಿಕೊಂಡನು. ||೩೧-೩೨||

ಸಮಸ್ತ ಜಗತ್ತಿಗೂ ಒಡೆಯನಾದ ದೇವಶ್ರೇಷ್ಠನಾದ ಶಿವನು ಬ್ರಹ್ಮನ ಮಾತನ್ನು ಕೇಳಿ ತನಗೆ ಸಮಾನರಾದ ರುದ್ರರನ್ನು ಸೃಷ್ಟಿಸಿದನು. ||೩೩||

ಸಮಸ್ತ ಜಗತ್ತಿಗೂ ಒಡೆಯನಾದ ಬ್ರಹ್ಮನು ಆ ಶಿವನನ್ನು ಕುರಿತು ಓ ಮಹಾದೇವನೇ, ಜನ್ಮಮರಣಗಳಿಂದ ಕೂಡಿದರೆ ಅವರು ಸಂಸಾರಾಭಿಮುಖರಾಗುವರು. ಅಂತಹ ಪ್ರಜೆಗಳನ್ನು ಸೃಷ್ಟಿಸು ಎಂದನು. ||೩೪||

ಈ ಮಾತನ್ನು ಕೇಳಿ ದಯಾನಿಧಿಯಾದ ಮಹಾದೇವನು ನಗುತ್ತ ಎಲೈ ಬ್ರಹ್ಮನೇ, ನಾನು ಅಮಂಗಳಕರವಾದ ಪ್ರಜೆಗಳನ್ನು ಸೃಷ್ಟಿಮಾಡುವುದಿಲ್ಲ. ದುಃಖವೆಂಬ ಸಮುದ್ರದಲ್ಲಿ ಮುಳುಗಿದ ಈ ಪ್ರಜೆಗಳನ್ನು ಗುರುಮೂರ್ತಿರೂಪದಿಂದ ಒಳ್ಳೆಯಜ್ಞಾನವನ್ನು ಕೊಟ್ಟು ಉದ್ಧಾರಮಾಡುವೆನು. ಎಲೈ ಬ್ರಹ್ಮನೇ, ದುಃಖದಿಂದ ಕೂಡಿದ ಪ್ರಜೆಗಳನ್ನು ನೀನೇ ಸೃಷ್ಟಿಮಾಡು. ಎಂದು ಹೇಳಿದನು.||೩೫-೩೬||

ಇತ್ಯುಕ್ತ್ವಾಽಂತರ್ಹಿತಃ ಶ್ರೀಮಾನ್ಭಗವಾನ್ನೀಲಲೋಹಿತಃ ।
ತತಸ್ತಸ್ಯ ಪ್ರಸಾದೇನ ನಿವಾರ್ಯ ಕಮಲಾಸನಃ ॥೩೭॥

ರುದ್ರಾನತ್ಯಂತ ಕಲ್ಪಾಯುಷ್ಮಾನ್ಪ್ರಜಾಸೃಷ್ಟೌ ಪ್ರವರ್ತಕಾನ್ ।
ಶಬ್ದಾದೀನಿ ಚ ಭೂತಾನಿ ಪಂಚೀಕೃತ್ಯ ದ್ವಿಜೋತ್ತಮಾಃ ॥೩೯॥

ತೇಭ್ಯಃ ಸ್ಥೂಲಾಂಬರಂ ವಾಯುಂ ವಹ್ನಿಂ ಚೈವ ಜಲಂ ಮಹೀಂ ।
ಪರ್ವತಾಂಶ್ಚ ಸಮುದ್ರಾಂಶ್ಚ ವೃಕ್ಷಾದೀನಪಿ ಸುವ್ರತಾಃ ॥೪೦॥

ಕಲಾದಿಯುಗಪರ್ಯಂತಾನ್ಕಾಲಾನನ್ಯಾನಪಿ ಪ್ರಭುಃ ।
ಸೃಷ್ಟ್ವಾ ವೇದವಿದಾಂ ಮುಖ್ಯಾಃ ಸಾಧಕಾನಸೃಜತ್ಪ್ರಭುಃ ॥೪೧॥

ಹೀಗೆಂದು ಹೇಳಿ ನೀಲಲೋಹಿತನಾದ ಮಹಾಮಹಿಮನಾದ ಶಂಕರನು ಮರೆಯಾದನು. ಆಮೇಲೆ ಆ ದೇವನ ಅನುಗ್ರಹದಿಂದ ಅನೇಕ ಕಲ್ಪಗಳ ವರೆಗೆ ಜೀವಿಸಿರುವ ಪ್ರಜೆಗಳನ್ನು ಸೃಷ್ಟಿಸುವುದಕ್ಕೆ ಪ್ರಾರಂಭಿಸಿದ್ದ ರುದ್ರರನ್ನು ತಡೆದು, ಬ್ರಹ್ಮನು ಪಂಚತನ್ಮಾತ್ರಗಳ ಪಂಚೀಕರಣವನ್ನು ಮಾಡಿ ಅವುಗಳಿಂದ ಸ್ಥೂಲವಾದ, ಆಕಾಶ, ವಾಯು, ಅಗ್ನಿ, ಜಲ, ಭೂಮಿ ಎಂಬ ಪಂಚಮಹಾಭೂತಗಳನ್ನೂ, ಪರ್ವತ ಸಮುದ್ರ ವೃಕ್ಷಾದಿಗಳನ್ನೂ, ಕಲಾ ಕಾಷ್ಠ ಮುಹೂರ್ತ ಮುಂತಾದ ಭಾಗಗಳಿಂದ ಕೂಡಿದ ಕಾಲವನ್ನೂ ಸೃಷ್ಟಿಮಾಡಿ, ಇವುಗಳನ್ನು ಉಪಯೋಗಿಸಿಕೊಂಡು ಮುಂದೆ ಪ್ರಪಂಚದ ಪ್ರಜೆಗಳನ್ನು ವೃದ್ಧಿಮಾಡತಕ್ಕವರನ್ನು ಸೃಷ್ಟಿಮಾಡಿದನು. ಪಂಚೀಕರಣ ವೆಂದರೆ—ಆಕಾಶಾದಿ ಪಂಚಭೂತಗಳನ್ನು ಒಂದೊಂದನ್ನೂ ಎರಡೆರಡು ಸಮಭಾಗವಾಗಿ ಮಾಡಿ, ಮೊದಲನೆಯ ಭಾಗವನ್ನು ಹಾಗೆಯೇ ಇಟ್ಟು, ಎರಡನೆಯ ಭಾಗವನ್ನು ನಾಲ್ಕುನಾಲ್ಕುಸಮಾಂಶವಾಗಿ ಭಾಗಿಸಿ, ಆ ಭಾಗಗಳಲ್ಲಿ ಒಂದೊಂದನ್ನೂ ಅದು ಯಾವ ಭೂತದ ಭಾಗವೋ ಅದನ್ನು ಬಿಟ್ಟು ಮಿಕ್ಕ ನಾಲ್ಕು ಭೂತಗಳಿಗೂ, ಒಂದೊಂದು ಭಾಗ ವನ್ನು ಸೇರಿಸುತ್ತಾ ಬಂದರೆ, ಪ್ರತಿಯೊಂದು ಭೂತದಲ್ಲಿಯೂ, ತನ್ನ ಅರ್ಧಭಾಗವೂ, ಮಿಕ್ಕ ಭೂತಗಳ ಎಂಟನೆಯ ಒಂದಂಶದ ನಾಲ್ಕು ಭಾಗಗಳೂ ಸೇರಿ ಒಂದೊಂದು ಭೂತವೂ, ಹೆಚ್ಚಾದ ತನ್ನಂಶದ ಹೆಸರಿನೊಡನೆ, ಪೂರ್ಣವಾಗಿ ಸ್ಥೂಲವಾದ ಪಂಚ ಭೂತಗಳೆನಿಸಿಕೊಳ್ಳುವುವು. ಹೀಗೆ ಪಂಚೀಕರಣದಿಂದ ಸ್ಥೂಲಪಂಚಭೂತಗಳಲ್ಲಿ ಪ್ರತಿಯೊಂದರಲ್ಲಿಯೂ, ಪಂಚಭೂತಗಳ ಅಂಶವೂ ಇರುವುದು. ॥೩೭-೩೯-೪೦-೪೧॥

ಮರೀಚಿಂ ಚ ಸ್ವನೇತ್ರಾಭ್ಯಾಂ ಹೃದಯಾದ್ಭೃಗುಮೇವ ಚ ।
ಶಿರಸೋಽಂಗಿರಸಂ ಚೈವ ತಥೋದಾನಾದ್ದ್ವಿಜೋತ್ತಮಾಃ ॥೪೨॥

ಪುಲಸ್ತ್ಯಂ ಪುಲಹಂ ವ್ಯಾನಾದಪಾನಾತ್ಕ್ರತುಮೀಶ್ವರಃ ।
ದಕ್ಷಂ ಪ್ರಾಣಾತ್ತಥೈವಾತ್ರಿಂ ಶ್ರೋತ್ರಾಭ್ಯಾಂ ಮುನಿಪುಂಗವಾಃ ॥೪೩॥

ಸಮಾನಾಚ್ಚ ವಸಿಷ್ಠಾಖ್ಯಂ ಸಂಕಲ್ಪಾದ್ಧರ್ಮಸಂಜ್ಞಿತಂ ।
ಏವಮೇತಾನಜಃ ಶ್ರೀಮಾನಸೃಜತ್ಸಾಧಕೋತ್ತಮಾನ್ ॥೪೪॥

ಪುನಸ್ತದಾಜ್ಞಯಾ ವಿಪ್ರಾ ಧರ್ಮಃ ಸಂಕಲ್ಪಸಂಜ್ಞಿತಃ ।
ಮಾನವಂ ರೂಪಮಾಪನ್ನಃ ಸಾಧಕೈಸ್ತು ಪ್ರವರ್ತಿತಃ ॥೪೫॥

ತತಶ್ಚತುರ್ಮುಖಃ ಸ್ವಸ್ಯ ಜಘನಾದಸುರಾನ್ ದ್ವಿಜಾಃ ।
ಸೃಷ್ಟ್ವಾ ಮೂರ್ತಿಂ ಪುನಸ್ತ್ಯಕ್ತ್ವಾ ಶರೀರಾಂತರಮಾಸ್ತವಾನ್॥೪೬॥
ಸಾ ತನುರ್ಬ್ರಹ್ಮಣಾ ತ್ಯಕ್ತಾ ರಾತ್ರಿರೂಪಾಽಭವನ್ನೃಣಾಂ ।

ಬ್ರಹ್ಮನು ತನ್ನ ಕಣ್ಣುಗಳಿಂದ ಮರೀಚಿಯನ್ನೂ, ಹೃದಯದಿಂದ ಭೃಗುವನ್ನೂ, ತಲೆಯಿಂದ ಅಂಗಿರಸನನ್ನೂ, ಉದಾನವಾಯುವಿನಿಂದ ಪುಲಸ್ತ್ಯನನ್ನೂ ವ್ಯಾನವಾಯುವಿನಿಂದ ಪುಲಹನನ್ನೂ, ಅಪಾನವಾಯುವಿನಿಂದ ಕ್ರತುವನ್ನೂ ಪ್ರಾಣವಾಯುವಿನಿಂದ ದಕ್ಷನನ್ನೂ, ಕಿವಿಗಳಿಂದ ಅತ್ರಿಯನ್ನೂ, ಸಮಾನವಾಯುವಿನಿಂದ ವಸಿಷ್ಠನನ್ನೂ, ಸಂಕಲ್ಪರೂಪವಾದ ಮನಸ್ಸಿನಿಂದ ಧರ್ಮನನ್ನೂ, ಸೃಷ್ಟಿಮಾಡಿದನು. ಇವರೇ ಮುಂದೆ ಸೃಷ್ಟಿಯಾಗಬೇಕಾಗಿರುವ ಪ್ರಪಂಚದ ಪ್ರಜೆಗಳ ಸೃಷ್ಟಿಕಾರ್ಯಕ್ಕೆ ಸಹಾಯಕರಾದರು. ॥೪೨-೪೩-೪೪॥

ಮತ್ತೆ ಆ ಬ್ರಹ್ಮನ ಅಪ್ಪಣೆಯಿಂದ ಸಂಕಲ್ಪಸ್ವರೂಪನಾದ ಧರ್ಮನು ಮನುವಿನ ರೂಪವನ್ನು ಹೊಂದಿದನು. ಮಿಕ್ಕ ಮರೀಚಿಯೇ ಮೊದಲಾದ ಒಂಬತ್ತು ಜನ ಬ್ರಹ್ಮಪುತ್ರರು ಮನುರೂಪನಾದ ಧರ್ಮನನ್ನು ಲೋಕದಲ್ಲಿ ಜನರೆಲ್ಲರೂ ಅನುಸರಿಸುವಂತೆ ಮಾಡಿದರು. ॥೪೫॥

ಆಮೇಲೆ ಚತುರ್ಮುಖನು ತನ್ನ ಮುಂಭಾಗದ ಕಿಬ್ಬೊಟ್ಟೆಯಿಂದ ಅಸುರರನ್ನು ಸೃಷ್ಟಿಸಿ, ಆ ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ಹೊಂದಿದನು. ಆ ಬ್ರಹ್ಮನು ಬಿಟ್ಟ ಶರೀರವು ಮನುಷ್ಯರಿಗೆ ರಾತ್ರಿರೂಪವಾಯಿತು. ॥೪೬॥

ಪುನರ್ಬ್ರಹ್ಮಾಪ್ತದೇಹಸ್ಯ ಮುಖಾತ್ಸತ್ವವಿಜೃಂಭಿತಾತ್ ॥೪೭॥

ಸೃಷ್ಟ್ವಾ ಸುರಾನಜಸ್ತಚ್ಚ ಶರೀರಂ ತ್ಯಕ್ತವಾನ್ಪುನಃ ।
ತತ್ಪುನರ್ವೇದ ವಿಚ್ಛ್ರೇಷ್ಠಾ ಅಭೂನ್ಮರ್ತ್ಯಾಣಾಂ ಶುಭಂ ದಿನಂ ॥೪೮॥

ಪುನಶ್ಚ ಸತ್ವಸಂಯುಕ್ತಂ ಶರೀರಂ ಭಗವಾನಜಃ ।
ಆಸ್ಥಾಯ ಬ್ರಹ್ಮವಿನ್ಮುಖ್ಯಾಃ ಪಿತೄನ್ ಸೃಷ್ಟ್ವಾ ವಿಹಾಯ ತತ್ ॥೪೯॥

ಶರೀರಾಂತರಮಾಪನ್ನಶ್ಚತುರ್ವಕ್ತ್ರಃ ಶಿವಾಜ್ಞಯಾ ।
ತ್ಯಕ್ತಾ ಮೂರ್ತಿರ್ದ್ವಿಜಾಃ ಸಾ ತು ಸಂಧ್ಯಾ ತೇನಾಽಭವದ್ದ್ವಿಜಾಃ ॥೫೦॥

ಮತ್ತೆ ಬ್ರಹ್ಮನು ಪಡೆದ ದೇಹದ ಮುಖದಿಂದ ಸತ್ವಗುಣವೇ ಹೆಚ್ಚಾಗಿದ್ದುದರಿಂದ ದೇವತೆಗಳನ್ನು ಸೃಷ್ಟಿಮಾಡಿದನು. ಮತ್ತೆ ಆ ಶರೀರವನ್ನು ಬಿಟ್ಟುಬಿಟ್ಟನು. ಆ ಬಿಟ್ಟ ಶರೀರವು ಮನುಷ್ಯರಿಗೆ ಹಗಲಾಯಿತು. ||೪೭-೪೮||

ಮತ್ತೆ ಮಹಾಮಹಿಮನಾದ ಬ್ರಹ್ಮನು ಸತ್ವಗುಣದಿಂದ ಕೂಡಿದ ಶರೀರವನ್ನು ಧರಿಸಿ ಪಿತೃದೇವತೆಗಳನ್ನು (ದೇವಪಿತೃಗಳು) ಎಂದರೆ ಋತುಗಳನ್ನು ಸೃಷ್ಟಿಮಾಡಿದನು. ಮತ್ತೆ ಆ ಶರೀರವನ್ನು ಬಿಟ್ಟನು. ಬಿಟ್ಟ ಆ ಶರೀರವು ಸಂಧ್ಯೆಯಾಯಿತು. ಮತ್ತೆ ಶಿವನ ಆಜ್ಞೆಯಿಂದ ಬ್ರಹ್ಮನು ಬೇರೆ ಶರೀರವನ್ನು ಹೊಂದಿದನು. ಹೀಗೆ ಬ್ರಹ್ಮನು ಬೇರೆ ಬೇರೆ ಶರೀರಗಳಿಂದ ಬೇರೆ ಬೇರೆ ಸೃಷ್ಟಿಯನ್ನು ಮಾಡಿದನೆಂಬುದು ವೇದದಲ್ಲಿ ಹೇಳಿರುವುದು. ಆ ವೇದವಚನಗಳನ್ನು ಇಲ್ಲಿ ಹೇಳಿದೆ. "ಇದಂ ವಾಽಗ್ರೇ ನೈವ ಕಿಂಚನಾಽಽಸೀತ್ ಸ ಜಘನಾದಸುರಾನಸೃಜತ ತೇಭ್ಯೋ ಮೃನ್ಮಯೇ ಪಾತ್ರೇಽನ್ನಮದುಹದ್ಯಾಽಸ್ಯ ಸಾ ತನೂ ರಾಸೀತ್ತಾಮಪಾಹತ ಸಾ ತಮಿಸ್ರಾ ಭವತ್ ಸ ಮುಖಾದ್ದೇವಾನಸೃಜತ ತೇಭ್ಯೋ ಹರಿತೇ ಪಾತ್ರೇ ಸೋಮಮದುಹತ್ ಯಾಽಸ್ಯ ಸಾ ತನೂರಾಸೀತ್ತಾಮಪಾಹತ ತದಹರಭವತ್ ಋತವಃ ಖಲು ವೈ ದೇವಾಃ ಪಿತರಃ ಸ ಉಪಪಕ್ಷಾಭ್ಯಾಮೇವರ್ತೂನ ಸೃಜತ ತೇಭ್ಯೋ ರಜತೇ ಪಾತ್ರೇ ಘೃತಮದುಹತ್ । ಯಾಽಸ್ಯ ತನೂರಾಸೀತ್ ತಾಮಪಾಹತ ಸೋಽಹೋರಾತ್ರಯೋಃ ಸಂಧಿರಭವತ್ ಸ ಪ್ರಜನನಾದೇವ ಪ್ರಜಾ ಅಸೃಜತ ತಾಭ್ಯೋ ದಾರುಮಯೇ ಪಾತ್ರೇ ಪಯೋಽದುಹದ್ಯಾಽಸ್ಯ ಸಾ ತನೂರಾಸೀತ್ತಾಮಪಾಹತ ಸಾ ಜ್ಯೋತ್ಸ್ನಾಽಭವತ್" ||೪೯-೫೦||

ಬ್ರಹ್ಮಣೋ ವಿಗ್ರಹಾದೇವ ರಜಸಾ ಪರಿವೇಷ್ಟಿತಾತ್ ।
ಜಜ್ಞಿರೇ ಮನುಜಾಃ ಸರ್ವೇ ತ್ಯಕ್ತ್ವಂ ತದ್ವಿಗ್ರಹಂ ಪುನಃ ॥೫೧॥

ಜ್ಯೋತ್ಸ್ನಾರೂಪೇಣ ನಿಷ್ಪನ್ನಂ ಪುನರ್ದೇಹಾಂತರಂ ಗತಃ ।
ಬ್ರಹ್ಮಾ ತಸ್ಯ ಶರೀರಾತ್ತು ರಜಸಾ ಸಹಿತಾದ್ದ್ವಿಜಾಃ ॥೫೨॥

ಕ್ಷುತ್ಪಿಪಾಸಾಽಭಿಭೂತಾಶ್ಚ ರಾಕ್ಷಸಾಃ ಪನ್ನಗಾಸ್ತಥಾ ।
ಭೂತಗಂಧರ್ವರೂಪಾಶ್ಚ ಸಮುತ್ಪನ್ನಾ ಬಲಾನ್ವಿತಾಃ ॥೫೩॥

ಪುನರ್ದೇಹಾಂತರಂ ಗತ್ವಾ ತತೋ ವಿಶ್ವಜಗತ್ಪತಿಃ ।
ವಯಾಂಸಿ ಗರ್ದಭಾನಶ್ವಾನ್ಮಾತಂಗಾನ್ರಾಸಭಾನ್ಮೃಗಾನ್ ॥೫೪॥

ಸಸರ್ಜಾನ್ಯಾಂಶ್ಚ ವಿಶ್ವಾತ್ಮಾ ತಥೈವೌದ್ಗಾತ್ರಮೇವ ಚ ।
ಋಚಂ ಚೈವ ತ್ರಿವೃತ್ಸ್ತೋಮಂ ತಥಾ ಚೈವ ರಥಂತರಂ ॥೫೫॥

ಮತ್ತೆ ರಜೋಗುಣದಿಂದ ಕೂಡಿದ ಬ್ರಹ್ಮನ ಶರೀರದಿಂದ ಎಲ್ಲ ಮನುಷ್ಯರೂ ಹುಟ್ಟಿದರು. ಬಳಿಕ ಆ ಬ್ರಹ್ಮನು ಆ ಶರೀರವನ್ನು ಬಿಟ್ಟನು. ಆ ಬಿಟ್ಟ ಶರೀರವು ಬೆಳದಿಂಗಳಾಯಿತು. ಪುನಃ ಬ್ರಹ್ಮನು ಬೇರೆ ಶರೀರವನ್ನು ಹೊಂದಿದನು. ॥೫೧॥

ಎಲೈ ಬ್ರಾಹ್ಮಣರೇ, ಬ್ರಹ್ಮನು ರಜೋಗುಣದಿಂದ ಶರೀರವನ್ನು ಪಡೆದು ಸೃಷ್ಟಿಸಿದ ರಾಕ್ಷಸರು, ಪನ್ನಗರು, ಭೂತಗಳು, ಗಂಧರ್ವರೂ ಇವರೆಲ್ಲರೂ ಶರೀರಬಲದಿಂದ ಕೂಡಿದವರಾಗಿ ಹಸಿವು ಬಾಯಾರಿಕೆಗಳಿಂದ ಪೀಡಿತರಾದರು. ॥೫೨-೫೩॥

ಆಮೇಲೆ ಸಮಸ್ತ ಜಗತ್ತಿಗೂ ಪತಿಯಾದ ಬ್ರಹ್ಮನು ಬೇರೆ ಶರೀರವನ್ನು ಪಡೆದು, ಪಕ್ಷಿಗಳನ್ನೂ, ಕತ್ತೆಗಳನ್ನೂ, ಕುದುರೆಗಳನ್ನೂ, ಆನೆಗಳನ್ನೂ, ಒಂಟೆಗಳನ್ನೂ, ಜಿಂಕೆಗಳನ್ನೂ, ಇತರ ಪ್ರಾಣಿಗಳನ್ನೂ, ಸೃಷ್ಟಿಸಿದನು. ಹಾಗೆಯೇ ಔದ್ಗಾತೃವಿನ ಕೆಲಸವನ್ನೂ, ಯಜ್ಞವನ್ನೂ, ತ್ರಿವೃತ್ತೆಂಬ ಯಜ್ಞಾಂಗಕರ್ಮವನ್ನೂ, ಸೋಮವನ್ನೂ, ರಥಂತರಸಾಮವನ್ನೂ ಸೃಷ್ಟಿಮಾಡಿದನು. “ಇದಂ ಸರ್ವಮಸೃಜತ ಯದಿದಂ ಕಿಂ ಚ ಋಚೋ ಯಜೂಂಷಿ ಸಾಮಾನಿ ಛಂದಾಸಿ ಯಜ್ಞಾನ್ಪ್ರಜಾಂ ಪಶೂನ್” ಇತ್ಯಾದಿಯಾಗಿ ವೇದದಲ್ಲಿ ಹೇಳಿರುವುದು. ॥೫೪-೫೫॥

ಅಗ್ನಿಷ್ಟೋಮಾದಿಕಂ ಸರ್ವಂ ಸಹಾಂಗೇನ ಪ್ರಜಾಪತಿಃ ।
ತಥೈವ ಸರ್ವನಾಮಾನಿ ನಿರ್ಮಮೇ ವೇದಶಬ್ದತಃ ॥೫೬॥

ಪಂಚೀಕೃತಾನಿ ಭೂತಾನಿ ಬ್ರಹ್ಮಣಾ ಮುನಯಃ ಪುರಾ ।
ಸರ್ವೇಷಾಂ ಕಾರಣತ್ವೇನ ಪ್ರೋಕ್ತಾನಿ ಬ್ರಹ್ಮವಾದಿಭಿಃ ॥೫೭॥

ಏವಂ ವಿಚಿತ್ರಂ ಜಗದಂತರಾತ್ಮಾ ।
ಪ್ರಜಾಪತಿಃ ಸ್ವಪ್ನಸಮಂ ಸ ಸೃಷ್ಟ್ವಾ ॥
ಪ್ರಸಾದತಸ್ತಸ್ಯ ಮಹೇಶ್ವರಸ್ಯ
ಪುನಸ್ತಮೋರೂಪ ಮವಾಪ ಸದ್ಯಃ ॥೫೮॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ ಬ್ರಹ್ಮಸೃಷ್ಟಿಕಥನಂ ನಾಮ ದಶಮೋಽಧ್ಯಾಯಃ ಸಮಾಪ್ತಃ

ಆ ಬ್ರಹ್ಮನು ಸಕಲ ವಿಧವಾದ ಅಗ್ನಿಷ್ಟೋಮವೇ ಮುಂತಾದ ಯಜ್ಞಗಳನ್ನೂ, ವೇದದ ಋಕ್ಕುಗಳ ದೆಸೆಯಿಂದಲೇ ಸಮಸ್ತ ಹೆಸರುಗಳನ್ನೂ ಸೃಷ್ಟಿಮಾಡಿದನು. ಪುರಾಣಾಂತರದಲ್ಲಿ “ಋಷೀಣಾಂ ನಾಮಧೇಯಾನಿ ಕರ್ಮಾಣಿ ವಿವಿಧಾನಿ ಚ । ವೇದಶಬ್ದೇಭ್ಯ ಏವಾದೌ ನಿರ್ಮಮೇ ಸ ಮಹೇಶ್ವರಃ ॥” ಎಂದು ಹೇಳಿರುವುದು. ॥೫೬॥

ಎಲೈ ಮುನಿಗಳೇ, ಬ್ರಹ್ಮಜ್ಞಾನಿಗಳು ಹಿಂದೆ ಬ್ರಹ್ಮನು ಪಂಚಮಹಾಭೂತಗಳನ್ನು ಪಂಚೀಕರಣಮಾಡಿದನಲ್ಲವೇ, ಅದೇ ಈ ಸಮಸ್ತ ಪ್ರಂಪಂಚವಿಸ್ತಾರಕ್ಕೂ ಕಾರಣವು. ಎಂದು ಹೇಳಿರುವರು. ॥೫೭॥

ಹೀಗೆ ಅಂತರಾತ್ಮನಾದ ಅಂದರೆ ನಿರತಿಶಯವಾದ ಜ್ಞಾನವೈರಾಗ್ಯಗಳಿಂದ ಕೂಡಿದ ಬ್ರಹ್ಮನು “ಜ್ಞಾನಮಪ್ರತಿಭಂ ಯಸ್ಯ ವೈರಾಗ್ಯಂ ಚ ಜಗತ್ಪತೇಃ ॥ ಐಶ್ವರ್ಯಂ ಚೈವ ಧರ್ಮಶ್ಚ ಸಹ ಸಿದ್ಧಂ ಚತುಷ್ಟಯಂ ॥” ಎಂಬಂತೆ ಸ್ವಭಾವಸಿದ್ಧವಾದ, ಜ್ಞಾನ, ವೈರಾಗ್ಯ, ಐಶ್ವರ್ಯ, ಧರ್ಮ ಎಂಬ ನಾಲ್ಕು ಗುಣಗಳಿಂದ ಕೂಡಿದ್ದರೂ, ಮುಂದೆ ಸೃಷ್ಟಿಸಬೇಕಾದ ಪ್ರಾಣಿಗಳ ಕರ್ಮಪರಿಪಾಕದಿಂದ ಸೃಷ್ಟಿಸಂಕಲ್ಪ ಉಳ್ಳ ಪರಮೇಶ್ವರನ ಆಜ್ಞೆಯಿಂದ, ಸ್ವಪ್ನಸಮಾನವಾದುದರಿಂದ ಮಾಯಾಸ್ವರೂಪವಾದ, ವಿಚಿತ್ರವಾದ ಪ್ರಪಂಚವನ್ನು ಸೃಷ್ಟಿಸಿ, ಪರಮೇಶ್ವರನ ಆಜ್ಞೆಯನ್ನು ನಡೆಸಿದೆನೆಂದು ತಿಳಿದುಕೊಂಡು, ಸ್ವಾಭಾವಿಕವಾದ ಸ್ವಸ್ವರೂಪವನ್ನು ಎಂದರೆ

ತತ್ವನಿಷ್ಠೆಯನ್ನು ಪಡೆದನು. ಆ ತತ್ವದೃಷ್ಟಿಯು ಸಾಮಾನ್ಯರಿಗೆ ತಿಳಿಯದಾದುದರಿಂದ ಅದನ್ನು ತಮೋರೂಪವನ್ನು ಹೊಂದಿದನೆಂಬುದಾಗಿ ಹೇಳಿರುವುದು. ಭಗವದ್ಗೀತೆಯಲ್ಲಿ—“ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ | ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ||” ಎಂದು ಹೇಳಿರುವುದು. ಆದುದರಿಂದ ಬ್ರಹ್ಮನು ಜ್ಞಾನನಿಷ್ಠನಾಗಿರುವುದು, ಇತರರಿಗೆ ತಿಳಿಯದಾದುದರಿಂದಲೂ, ಮತ್ತು ಅವರಿಗೆ ಪ್ರತಿನಿತ್ಯದಲ್ಲೂ ತಮೋಽಭಿಭವವು ಅನುಭವಕ್ಕೆ ಬರುತ್ತಿರುವುದರಿಂದಲೂ, ಅವರು ಬ್ರಹ್ಮನೂ ತನ್ನ ರಾತ್ರಿಯಲ್ಲಿ ನಿದ್ರೆಮಾಡುತ್ತಾ ತಮೋರೂಪವಾದ ಅಜ್ಞಾನದಲ್ಲಿ ಮುಳುಗಿರುವನೆಂದು ಹೇಳುವರು. ||೫೮||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ
ಬ್ರಹ್ಮನು ಸಾಕ್ಷಾತ್ತಾಗಿ ಮಾಡಿದ ಸೃಷ್ಟಿಯ ವಿವರಣೆ ಎಂಬ
ಹತ್ತನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

|| ಏಕಾದಶೋಽಧ್ಯಾಯಃ ||

ಹನ್ನೊಂದನೆಯ ಅಧ್ಯಾಯವು

|| ನೈಮಿಷೀಯಾ ಊಚುಃ ||

ಏವಂ ಸೃಷ್ಟ್ವಾ ಪುನರ್ಬ್ರಹ್ಮಾ ಸ್ಥಾವರಾಣಿ ಚರಾಣಿ ಚ ।
ಭಗವನ್ಭಗವಾನೀಶಃ ಕಿಂ ಚಕಾರಾಶು ತತ್ವದ ॥೧॥

|| ಸೂತ ಉವಾಚ ||

ಸಂಹಾರಹೇತುಭೂತೇನ ತಮಸಾ ಪರಿವೇಷ್ಟಿತಃ ।
ವಿಹಾಯ ತತ್ತಮೋರೂಪಂ ಸೃಷ್ಟಾನಾಮಭಿವೃದ್ಧಯೇ ॥೨॥
ಹಿರಣ್ಯಗರ್ಭಸಂಜ್ಞಸ್ಯ ಬ್ರಹ್ಮಣೋ ರೂಪಮಾಪ ಸಃ ।

ನೈಮಿಷಾರಣ್ಯವಾಸಿಗಳಾದ ಋಷಿಗಳು ಹೇಳಿದರು—ಎಲೈ ಮಹಾತ್ಮನಾದ ಸೂತನೇ, ಬ್ರಹ್ಮನು ಸ್ಥಾವರಜಂಗಮಪ್ರಾಣಿಗಳನ್ನು ಹೀಗೆ ಸೃಷ್ಟಿಮಾಡಿ ಮುಂದೆ ಏನನ್ನು ಮಾಡಿದನೆಂಬುದನ್ನು ನಮಗೆ ಹೇಳಬೇಕು. ||೧||

ಸೂತನು ಹೇಳಿದನು—ಪ್ರಪಂಚವನ್ನು ಸೃಷ್ಟಿಸಿದ ಬ್ರಹ್ಮನು ಲಯಕಾರಣವಾದ ತಮೋಗುಣದಿಂದ ಕೂಡಿ ತಾನು ಸೃಷ್ಟಿಸಿದ ಪ್ರಪಂಚದ ಅಭಿವೃದ್ಧಿಗಾಗಿ ಆ ತಮೋರೂಪವನ್ನು ಬಿಟ್ಟು ಹಿರಣ್ಯಗರ್ಭನೆಂಬ ಹೆಸರಿನ ಬ್ರಹ್ಮಸ್ವರೂಪವನ್ನು ಹೊಂದಿದನು. ಪ್ರಾಣಿಗಳು ಇಹಪರಲೋಕಗಳಲ್ಲಿ ಅನುಭವಿಸುವ ಸುಖದುಃಖರೂಪವಾದ ಫಲಗಳಿಗೆ ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ ಎಂಬ ಐದು ಕ್ಲೇಶಗಳೇ ಕಾರಣಗಳು. ಎಲ್ಲಿಯವರೆಗೆ ಕರ್ಮಕಾರಣವಾದ ಈ ಐದು ಕ್ಲೇಶಗಳು

ಹಿರಣ್ಯಗರ್ಭಂ ವಕ್ಷ್ಯಾಮಿ ತಥಾಽನ್ಯದಪಿ ಸುವ್ರತಾಃ ॥೩॥

ಪಂಚಭೂತೇಷು ಜಾತೇಷು ಶಬ್ದಸ್ಪರ್ಶಾದಿಷು ದ್ವಿಜಾಃ ।
ವಿಜಾತಾಸ್ತೇಷು ಸತ್ವೇನ ಗುಣೇನ ಜ್ಞಾನಶಕ್ತಯಃ ॥೪॥

ಅನುಸರಿಸಿಕೊಂಡಿರುವುವೋ ಅಲ್ಲಿಯವರೆಗೆ ಜಾತ್ಯಾಯುರ್ಭೋಗಗಳೆಂಬ ಮೂರು ವಿಧವಾದ ಫಲಗಳು ಇದ್ದೇ ಇರುವುವು. ಜಾತಿ ಎಂದರೆ ನಾನಾವಿಧವಾದ ಜನ್ಮ, ಆಯುಸ್ಸೆಂದರೆ ಆ ಜನ್ಮದಲ್ಲಿ ಕಳೆದ ಕಾಲ, ಭೋಗವೆಂದರೆ ಸುಖದುಃಖಾನುಭವಗಳು. ಹಿಂದಿನ ಸೃಷ್ಟಿಯಲ್ಲಿ ಉತ್ಪತ್ತಿಗೆ ಕಾರಣವಾದ ಕೆಲವು ಕರ್ಮಫಲಗಳು ಪೂರ್ಣವಾಗಿ ಫಲಕೊಟ್ಟದ್ದರೂ, ಮಿಕ್ಕ ಕರ್ಮಗಳಿಗೆ ಫಲಕೊಡುವುದಕ್ಕಾಗಿ ಆಯುಸ್ಸಿಗೆ ಕಾರಣವಾದ ತಕ್ಕ ಸೃಷ್ಟಿಪರ್ಯಂತವಾಗಿಯೂ, ಪರಶಿವನ ಅಪ್ಪಣೆಯನ್ನು ಪರಿಪಾಲಿಸುವುದಕ್ಕಾಗಿ, ಬ್ರಹ್ಮನು ಹಿರಣ್ಯಗರ್ಭನೆಂಬ ಮತ್ತೊಂದು ಬಗೆಯ ಬ್ರಹ್ಮನಾದನೆಂದು ಮುಖ್ಯಾಭಿಪ್ರಾಯವು. ಸೂತನು ಮಿಕ್ಕ ಪ್ರಕೃತಿಸೃಷ್ಟಿಯನ್ನು ವಿವರಿಸುವ ಅಪೇಕ್ಷೆಯಿಂದ ಇದನ್ನು ಹೇಳಿರುವನು. ॥೨॥

ಎಲೈ ತಪಸ್ವಿಗಳೇ, ಹಿರಣ್ಯಗರ್ಭನ ವಿಷಯವನ್ನು ಹೇಳುವೆನು. ಮಿಕ್ಕ ಸೂತ್ರಾತ್ಮಾ ಮತ್ತೂ ಅಂತರ್ಯಾಮಿಸ್ವರೂಪವನ್ನೂ ಈ ಮೂರಕ್ಕೂ ಉಪಯುಕ್ತವಾದ ಉಪಾಧಿಗಳನ್ನೂ, ಅವುಗಳ ಉತ್ಪತ್ತಿಯನ್ನೂ ಹೇಳುವೆನು. ಕೇಳಿರಿ. ॥೩॥

ಎಲೈ ಬ್ರಾಹ್ಮಣರೇ, ಅಬುದ್ಧಿಪೂರ್ವಕವಾದ, ತಮೋರೂಪ ಅವ್ಯಕ್ತವೆಂಬ ತತ್ವವು ಉತ್ಪತ್ತಿಯಾಯಿತೆಂದು ಹಿಂದೆ ಹೇಳಿದೆಯಷ್ಟೆ. ಆ ಅವ್ಯಕ್ತವೆಂಬ ಪ್ರಕೃತಿಯನ್ನು ಆಶ್ರಯಿಸಿದ ನಿರ್ವಿಕಾರನಾದ ಪರಶಿವನನ್ನು ಈಶ್ವರನೆಂದೂ, ಸಗುಣನೆಂದೂ ಹೇಳುವರು. ಆ ಸಗುಣಬ್ರಹ್ಮನಿಂದ ಮಹತ್ತತ್ವವು ಹುಟ್ಟುವುದು. ಈ ತತ್ವವು ಪ್ರಾಕೃತಸೃಷ್ಟಿಯಲ್ಲಿ ಮೊದಲನೆಯದು. ಇದು ಸತ್ವರಜಸ್ತಮೋಗುಣಸ್ವರೂಪವಾದುದು. ಈ ಮಹತ್ತತ್ವದಿಂದ ಹುಟ್ಟಿದ ಶಬ್ದಸ್ಪರ್ಶರೂಪರಸಗಂಧತನ್ಮಾತ್ರೆಗಳೆಂಬ ಹೆಸರಿನ ಸೂಕ್ಷ್ಮ ಪಂಚಭೂತಗಳೂ, ಗುಣತ್ರಯಗಳಿಂದ ಕೂಡಿದವುಗಳು. ಆದುದರಿಂದ ಈ ಪಂಚತನ್ಮಾತ್ರಗಳಲ್ಲಿ ಸತ್ವಗುಣಾತಿಶಯದಿಂದ ಐದು ಜ್ಞಾನಶಕ್ತಿಗಳು ಉತ್ಪತ್ತಿಯಾಗಿ ಶ್ರೋತ್ರ, ತ್ವಕ್, ಚಕ್ಷುಸ್ಸು, ಜಿಹ್ವಾ, ಘ್ರಾಣಗಳೆಂಬ ಐದು ಜ್ಞಾನೇಂದ್ರಿಯಗಳು ಉಂಟಾದುವು. ॥೪॥

ತಥಾ ಸಮಷ್ಟಿಭೂತಾನಾಂ ದ್ವಿಜಾಃ ಖಾನಾಂ ರಜೋಗುಣಾತ್ ।
ಶಬ್ದಸ್ಪರ್ಶಾದಿಭೂತೇಷು ವಿಜಾತಾಃ ಕೃತಿಶಕ್ತಯಃ ॥೫॥

ಭೂತೇಷು ಸಂಸ್ಥಿತಾ ಜ್ಞಾನಶಕ್ತಯಃ ಪಂಚಸಂಯುತಾಃ ।
ಸಮಷ್ಟಿಭೂತಂ ಸರ್ವೇಷಾಂ ಮಾನಸಂ ಕರಣಂ ಭವೇತ್ ॥೬॥

ಆ ಪಂಚಸೂಕ್ಷ್ಮಭೂತಗಳಲ್ಲಿ ರಜೋಗುಣದ ಅತಿಶಯಸಂಬಂಧದಿಂದ ಸಮಷ್ಟಿಭೂತಗಳ ಇಂದ್ರಿಯಗಳಾದ ವಾಕ್ಪಾಣಿಪಾದಪಾಯೂಪಸ್ಥಗಳೆಂಬ ಕರ್ಮೇಂದ್ರಿಯಗಳಿಗೆ ಕಾರಣವಾದ ಕ್ರಿಯಾಶಕ್ತಿಗಳು ಉತ್ಪತ್ತಿಯಾಗುವುವು. ॥೫॥

ಸಮಷ್ಟಿಸೂಕ್ಷ್ಮಭೂತಗಳಲ್ಲಿರುವ ಐದು ಜ್ಞಾನಶಕ್ತಿಗಳೂ ಕೂಡಿ ಸಕಲ ಭೂತಗಳಿಗೂ ಕಾರಣವಾದ ಮನಸ್ಸಾಗುವುದು. ಇಲ್ಲಿ ಸಮಷ್ಟಿ ಎಂಬುದು ಒಟ್ಟು ಪ್ರಪಂಚಸ್ವರೂಪವು. ವ್ಯಷ್ಟಿ ಎಂಬುದು ಬೇರೆ ಬೇರೆಯಾದ ಜೀವರುಗಳನ್ನು ಕುರಿತು ಹೇಳಿರುವುದು. ವ್ಯಷ್ಟಿಯಾದ ಪ್ರಾಣಿಗಳ ಸ್ಥೂಲಸೂಕ್ಷ್ಮಕಾರಣ ಶರೀರಗಳ ಉಪಾಧಿಗಳಿಂದ ಉಪಹಿತನಾದ ಜೀವನನ್ನು (ಆತ್ಮತತ್ವ) ವಿಶ್ವ ತೈಜಸ ಪ್ರಾಜ್ಞರೆಂದು ಹೇಳುವರು. ಸಮಷ್ಟಿ ಸ್ಥೂಲ ಸೂಕ್ಷ್ಮ ಕಾರಣ ಶರೀರೋಪಹಿತ ತತ್ವವನ್ನು ವೈಶ್ವಾನರ ಹಿರಣ್ಯಗರ್ಭ ಈಶ್ವರರೆಂದು ಹೇಳುವರು. ಉತ್ತರತಾಪನೀಯೋಪನಿಷತ್ತಿನಲ್ಲಿ—“ವಿಶ್ವೋ ವೈಶ್ವಾನರಃ ಪ್ರಥಮಃ ಪಾದಃ ತೈಜಸೋ ಹಿರಣ್ಯಗರ್ಭೋ ದ್ವಿತೀಯಃ ಪಾದಃ ಪ್ರಾಜ್ಞ ಈಶ್ವರಸ್ತೃತೀಯಃ ಪಾದಃ” ಎಂದು ಹೇಳಿದೆ. ಇಲ್ಲಿ ಹಿರಣ್ಯಗರ್ಭನೆಂಬುವನು ಸಮಷ್ಟಿಸೂಕ್ಷ್ಮಶರೀರಾಭಿಮಾನೀ ಎಂದು ಹೇಳಿದಂತಾಯಿತು. ಸೂಕ್ಷ್ಮಪಂಚಭೂತಗಳಲ್ಲಿರುವ ಜ್ಞಾನಶಕ್ತಿಯಿಂದ ಕೂಡಿದ ಮನಸ್ಸನ್ನು ಛಾಂದೋಗ್ಯೋಪನಿಷತ್ತಿನಲ್ಲಿ—“ಅನ್ನಮಯಂ ಹಿ ಸೌಮ್ಯ ಮನಃ” ಎಂದು ಹೇಳಿರುವುದು. ಅನ್ನದಿಂದ ಮನಸ್ಸು ಕ್ಷಯವನ್ನೂ, ಅಭಿವೃದ್ಧಿಯನ್ನೂ ಹೊಂದುವುದೆಂಬ ವಿಷಯದಲ್ಲಿ ಅದೇ ಉಪನಿಷತ್ತಿನಲ್ಲಿ—“ಪಂಚದಶಾಹಾನಿ ಮಾಶೀಃ” ಇತ್ಯಾದಿಯಾಗಿ ಹೇಳಿರುವುದು. ಇದೇ ಅಭಿಪ್ರಾಯದಿಂದಲೇ ಯಜ್ಞವೈಭವಖಂಡದಲ್ಲಿ ಉತ್ತರಭಾಗದ ಐದನೆಯ ಅಧ್ಯಾಯದಲ್ಲಿ—“ಅನ್ನೇನಾಪ್ಯಾಯಿತೇ ಭುಕ್ತೇ ನಾಧೀತಂ ತಸ್ಯ ಭಾಸತೇ” ಎಂದು ಅನ್ನಕ್ಕೆ ತೃಪ್ತಿಯೇ ಅಸಾಧಾರಣಗುಣವೆಂದು ಹೇಳಿರುವುದು. ಆದುದರಿಂದ ಸಮಷ್ಟಿಭೂತಗಳ ಮನ ಉಪಹಿತನಾದ ಪರಮಾತ್ಮನೇ ಹಿರಣ್ಯಗರ್ಭನೆಂದು ಹೇಳಿರುವುದು. ॥೬॥

ತದ್ಗತೋ ಭಗವಾನ್ಬ್ರಹ್ಮಾ ತ್ರಿಮೂರ್ತೀನಾಂ ದ್ವಿಜರ್ಷಭಾಃ ।
ಹಿರಣ್ಯಗರ್ಭ ಇತ್ಯುಕ್ತೋ ಮುನಿಭಿಃ ಸೂಕ್ಷ್ಮದರ್ಶಿಭಿಃ ॥೭॥

ತಥೈವ ಬ್ರಹ್ಮವಿಚ್ಛ್ರೇಷ್ಠಾಃ ಸಂಯುತಾಃ ಕೃತಿಶಕ್ತಯಃ ।
ಸಮಷ್ಟಿಭೂತಃ ಪ್ರಾಣಾನಾಂ ಭವೇತ್ಪ್ರಾಣಃ ಶಿವಾಜ್ಞಯಾ ॥೮॥

ತತ್ರಸ್ಥೋ ಭಗವಾನ್ವಿಷ್ಣುಃ ಸೂತ್ರಾತ್ಮೇತಿ ಪ್ರಕೀರ್ತಿತಃ ।
ಉಭಯತ್ರ ಸ್ಥಿತಃ ಸಾಕ್ಷಾತ್ತ್ರಿಮೂರ್ತೀನಾಂ ಮಹೇಶ್ವರಃ ॥೯॥

ಅಂತರ್ಯಾಮೀತಿ ವೇದೇಷು ಗೀಯತೇ ವೇದವಿತ್ತಮಾಃ ।
ಹಿರಣ್ಯಗರ್ಭರೂಪಂ ಯಃ ಪ್ರಾಪ್ತಃ ಶ್ರುತಿಷು ನಿಶ್ಚಿತಃ ॥೧೦॥

ಸಮಷ್ಟಿಭೂತಗಳ ಮನೋಪಹಿತನಾದ ಪರಮಾತ್ಮನೇ ಹಿರಣ್ಯಗರ್ಭನು. ಅವನನ್ನೇ ಮೂರ್ತಿತ್ರಯಗಳ ಮಧ್ಯದಲ್ಲಿ ಬ್ರಹ್ಮನೆಂದು ಹೇಳುವರು. ॥೭॥

ಸೂಕ್ಷ್ಮಪಂಚಭೂತಗಳಲ್ಲಿ ಕ್ರಿಯಾಶಕ್ತಿಯು ಕೂಡಿ ಶಿವಾಜ್ಞೆಯಿಂದ ಸಮಷ್ಟಿ ರೂಪವಾದ ಪ್ರಾಣಾಪಾನಾದಿಪಂಚಪ್ರಾಣಗಳುಂಟಾದುವು. ಅನ್ನಮಯದಂತೆ "ಆಪೋಮಯಃ ಪ್ರಾಣಃ" ಎಂದು ಛಾಂದೋಗ್ಯದಲ್ಲಿ ಹೇಳಿರುವುದು. ॥೮॥

ಪ್ರಾಣೋಪಹಿತನಾದ ಪರಮಾತ್ಮನನ್ನು ಸೂತ್ರಾತ್ಮನೆನ್ನುವರು. ಅವನೇ ತ್ರಿಮೂರ್ತಿಗಳಲ್ಲಿರುವ ವಿಷ್ಣುವು. ಕ್ರಿಯಾಶಕ್ತಿ ಜ್ಞಾನಶಕ್ತಿ ಎಂಬ ವಿಭಾಗವಿಲ್ಲದೆ ಮನಃಶಕ್ತಿ ಪ್ರಾಣಶಕ್ತಿ ಎಂಬ ವಿಭಾಗವಿಲ್ಲದೆ ಒಂದೇ ಉಪಾಧಿಯಲ್ಲಿ ಉಪಹಿತನಾದ ಪರಮಾತ್ಮನನ್ನು ಅಂತರ್ಯಾಮಿ ಎಂದೂ, ತ್ರಿಮೂರ್ತಿಗಳಲ್ಲಿ ಅವನೇ ಮಹೇಶ್ವರನೆಂದೂ ವೇದಗಳಲ್ಲಿ ಹೇಳಿರುವುದು. "ಏಷ ಸರ್ವೇಶ್ವರ ಏಷ ಸರ್ವಜ್ಞ ಏಷೋಽಂತರ್ಯಾಮ್ಯೇಷ ಯೋನಿಃ ಸರ್ವಸ್ಯ ಪ್ರಭವಾಪ್ಯಯೌ ಹಿ ಭೂತಾನಾಂ" ಎಂದೂ, ಬೃಹದಾರಣ್ಯಕೋಪನಿಷತ್ತಿನಲ್ಲಿ, ಉದ್ದಾಲಕ ಯಾಜ್ಞವಲ್ಕ್ಯಸಂವಾದದ ಏಳನೆಯ ಬ್ರಾಹ್ಮಣದಲ್ಲಿ ಉದ್ದಾಲಕನಿಗೆ ಯಾಜ್ಞವಲ್ಕ್ಯನು—ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅಂತರೋ ಯಂ ಪೃಥಿವೀ ನ ವೇದ ಯಸ್ಯ ಪೃಥಿವೀ ಶರೀರಂ ಯಃ ಪೃಥಿವೀಮಂತರೋ ಯಮಯತಿ ಏಷ ತ ಆತ್ಮಾ ಅಂತರ್ಯಾಮ್ಯಮೃತಃ" ಇತ್ಯಾದಿ ಅನೇಕ ವಾಕ್ಯಗಳಿಂದ ಅಂತರ್ಯಾಮಿಸ್ವರೂಪವನ್ನು ಹೇಳಿರುವುದು. ಹಾಗೆಯೇ "ವಾಯುರ್ವೈಗೌತಮತತ್ಸೂತ್ರಂ" ಇತ್ಯಾದಿ ವಾಕ್ಯಗಳಿಂದ ಸೂತ್ರಾತ್ಮನನ್ನೂ ಹೇಳಿರುವುದು. "ಹಿರಣ್ಯಗರ್ಭಃ ಸಮವರ್ತತಾಗ್ರೇ" ಎಂದು ಹಿರಣ್ಯಗರ್ಭನ

ಸ ಪುನರ್ಭಗವಾನ್ಬ್ರಹ್ಮಾ ಮಾಯಯೈವ ಸ್ವಕಂ ಪುನಃ ।
ದ್ವಿಧಾ ಕೃತ್ವಾ ಮುನಿಶ್ರೇಷ್ಠಾ ಅರ್ಧೇನ ಪುರುಷೋಽಭವತ್ ॥೧೧॥

ಅರ್ಧೇನ ನಾರೀ ತಸ್ಯಾಂ ತು ವಿರಾಜಮಸೃಜತ್ಪುನಃ ।
ಪುನಶ್ಚ ಭಗವಾನಸ್ಯಾಂ ಸ್ವರಾಡಾಖ್ಯಂ ತಥೈವ ಚ ॥೧೨॥

ಸಮ್ರಾಡಾತ್ಮಾಽಭಿಧಂ ವಿಪ್ರಾ ಅಸೃಜಲ್ಲೋಕನಾಯಕಃ ।
ತೇ ಪುನಸ್ತೇನ ವಿಪ್ರೇಂದ್ರಾ ಬ್ರಹ್ಮಾಂಡೇನಾವೃತಾಸ್ತ್ರಯಃ ॥೧೩॥

ಪ್ರಾಧಾನ್ಯೇನ ವಿರಾಡಾತ್ಮಾ ಬ್ರಹ್ಮಾಂಡಮಭಿಮನ್ಯತೇ ।
ಸ್ವರಾಟ್ ಸ್ವರೂಪಮುಭಯಂ ಸಮ್ರಾಡಿತ್ಯಬ್ರವೀಚ್ಛ್ರುತಿಃ ॥೧೪॥

ವಿಚಾರವನ್ನೂ, ವೇದದಲ್ಲಿ ಹೇಳಿರುವುದು. ತ್ರಿಮೂರ್ತಿಗಳ ನಡುವೆ ಬ್ರಹ್ಮಾಂಡಾಭಿಮಾನಿಯಾದ ಬ್ರಹ್ಮನನ್ನೇ ವಿರಾಟ್ ಎಂದು ಕರೆಯುವರು. ಇವೆಲ್ಲವನ್ನೂ ಇಟ್ಟುಕೊಂಡು ಸಮಷ್ಟಿ ಸೂಕ್ಷ್ಮಶರೀರೋಪಾಧಿಯಾದ ಪರಮಾತ್ಮನೇ ಹಿರಣ್ಯಗರ್ಭನೆಂದು ಹೇಳಿರುವುದು. ॥೯-೧೦॥

ಆ ಹಿರಣ್ಯಗರ್ಭಬ್ರಹ್ಮನು ಮಾಯಾಶಕ್ತಿಯಿಂದ ತನ್ನ ಶರೀರವನ್ನು ಎರಡು ಭಾಗಮಾಡಿ, ಅರ್ಧಭಾಗ ಪುರುಷನಾಗಿಯೂ, ಉಳಿದ ಅರ್ಧಭಾಗವು ಸ್ತ್ರೀರೂಪವಾಗಿಯೂ ಇರುವಂತೆ ಮಾಡಿಕೊಂಡನು. ಈ ಅರ್ಧನಾರೀಶ್ವರರೂಪವಾದ ಶರೀರದಿಂದ ಸ್ಥೂಲಪಂಚಭೂತಮಯವಾದ ಬ್ರಹ್ಮಾಂಡಾಭಿಮಾನಿಯಾದ ವಿರಾಟ್ಪುರುಷನನ್ನು ಸೃಷ್ಟಿಮಾಡಿದನು. ॥೧೧॥

ಮತ್ತೆ ಆ ಹಿರಣ್ಯಗರ್ಭನು ಬ್ರಹ್ಮಾಂಡದ ಸಮಷ್ಟಿಲಿಂಗಶರೀರಾಭಿಮಾನಿಯಾದ ಸ್ವರಾಡೆಂಬ ಪುರುಷನನ್ನೂ, ಸಮಷ್ಟಿಬ್ರಹ್ಮಾಂಡದ ಕಾರಣಶರೀರಾಭಿಮಾನಿಯಾದ ಸಮ್ರಾಡೆಂಬ ಪುರುಷನನ್ನೂ ಸೃಷ್ಟಿಸಿದನು. ವಿರಾಟ್, ಸ್ವರಾಟ್, ಸಮ್ರಾಟ್ ಎಂಬ ಮೂವರೂ ಹಿರಣ್ಯಗರ್ಭರೂಪ ಬ್ರಹ್ಮಾಂಡದಿಂದ ಆವೃತರಾಗಿದ್ದರು. ॥೧೨-೧೩॥

ಮುಖ್ಯವಾಗಿ ಸಮಷ್ಟಿಸ್ಥೂಲಬ್ರಹ್ಮಾಂಡಾಭಿಮಾನಿಯನ್ನು ವಿರಾಟ್ ಎಂದು ಹೇಳುವರು. ಶ್ರುತಿಯಲ್ಲಿ ಸ್ವರಾಟ್, ಸಮ್ರಾಟ್ ಎಂಬಿಬ್ಬರ ವಿಷಯವನ್ನು ಹೇಳಿರುವುದು. ಸೂಕ್ಷ್ಮಶರೀರಗಳು ಜನ್ಮಕಾರಣವಾದ ಕರ್ಮನಾಶಪರ್ಯಂತವಾಗಿರುವುವು. ಎಂದು "ತದಾ ಽಪೀತೇಃ ಸಂಸಾರವ್ಯಪದೇಶಾತ್" ೪.೨.೮. ಎಂಬ ವ್ಯಾಸಸೂತ್ರದಲ್ಲಿ

ವಿರಾಟ್ ಸ್ವಾಯಂಭುವಂ ವಿಪ್ರಾ ಅಸೃಜನ್ಮನುಮಾಸ್ತಿಕಾಃ ।
ಅಸೃಜದ್ಯೋಗಿನೀಂ ನಾರೀಂ ಶತರೂಪಾಂ ತಪಸ್ವಿನೀಂ ॥೧೫॥

ಸಾ ಪುನರ್ಮನುನಾ ತೇನ ಗೃಹೀತಾಽತೀವ ಶೋಭನಾ ।
ತಸ್ಯಾಂ ತೇನ ಸಮುತ್ಪನ್ನಃ ಪ್ರಿಯವ್ರತಸ್ತಥೈವ ಚ ॥೧೬॥

ಉತ್ತಾನಪಾದ ಸಂಜ್ಞಶ್ಚ ತತಃ ಕನ್ಯಾದ್ವಯಂ ಪುನಃ ।
ಉತ್ತಾನಪಾದಜಾಂ ಕನ್ಯಾಂ ದ್ವಿಜಾ ದಕ್ಷಪ್ರಜಾಪತೇಃ ॥೧೭॥

ವಿವರಿಸಿರುವುದು. "ಸಮ್ರಾಡಾಪೋ ವಿರಾಡಾಪಃ ಸ್ವರಾಡಾಪಃ" ಎಂದೂ, ವಿರಾಡಸಿ ಸಪತ್ನಹಾ ಸಮ್ರಾಡಸಿ ಭ್ರಾತೃವ್ಯಹಾ ಸ್ವರಾಡಸ್ಯಾಭಿಮಾತಿಹಾ" ಎಂದೂ, ವಿರಾಡ್ ಜ್ಯೋತಿರಧಾರಯತ್ ಸಮ್ರಾಡ್‌ಜ್ಯೋತಿರಧಾರಯತ್ ಸ್ವರಾಡ್‌ಜ್ಯೋತಿರಧಾರಯತ್" ಎಂದೂ ಶ್ರುತಿಯಲ್ಲಿ ಈ ಮೂವರ ವಿಷಯವೂ ವಿಸ್ತಾರವಾಗಿ ಬಂದಿರುವುದು. ॥೧೪॥

ಎಲೈ ಆಸ್ತಿಕರಾದ ಮುನಿಗಳೇ, ಆ ವಿರಾಟ್ಪುರುಷನು ವೈಕೃತಸೃಷ್ಟಿಯನ್ನು ಪ್ರಾರಂಭಿಸಿ ತಾನೇ ಸ್ತ್ರೀಪುರುಷರೂಪವಾದನು. ಆ ಪುರುಷರೂಪವೇ ಸ್ವಾಯಂಭುವ ಮನುವು. ಸ್ತ್ರೀರೂಪವೇ ತಪಶ್ಶಕ್ತಿಯುಳ್ಳ ಮತ್ತು ಯೋಗಿನಿಯಾದ ಶತರೂಪಾ ದೇವಿಯು ಈ ವಿಷಯದಲ್ಲಿ ಭಾಗವತದಲ್ಲಿ—

ಕಸ್ಯ ರೂಪಮಭೂದ್ದ್ವೇಧಾ ಯತ್ಕಾಯಮಭಿಚಕ್ಷತೇ ।
ತಾಭ್ಯಾಂ ರೂಪವಿಭಾಗಾಭ್ಯಾಂ ಮಿಥುನಂ ಸಮಪದ್ಯತ ॥
ಯಸ್ತು ತತ್ರ ಪುಮಾನ್ಸೋಽಭೂನ್ಮನುಃ ಸ್ವಾಯಂಭುವಃ ಸ್ವರಾಟ್ ॥
ಸ್ತ್ರೀ ಯಾಽಽಸೀಚ್ಛತರೂಪಾಖ್ಯಾ ಮಹಿಷ್ಯಸ್ಯ ಮಹಾತ್ಮನಃ ॥

ಎಂದೂ, ವೇದದಲ್ಲಿ "ಸ ದ್ವಿತೀಯಮೈಚ್ಛತ್ಸಹೈತಾವಾನಾಸ ಯಥಾ ಸ್ತ್ರೀಪುಮಾಂಸೌ ಸಂಪರಿಷ್ವಕ್ತೌ ಸ ಇಮಮೇವಾತ್ಮಾನಂ ದ್ವೇಧಾಽಪಾತಯತ್ತತಃ ಪತಿಶ್ಚ ಪತ್ನೀ ಚಾಭವತಾಂ" ಎಂದು ಪ್ರಾರಂಭಿಸಿ "ತಾಂ ಸಮಭವತ್ತತೋ ಮನುಷ್ಯಾ ಅಜಾಯಂತ" ಎಂದು ಹೇಳಿರುವುದು. ॥೧೫॥

ಆ ಸುಂದರಿಯಾದ ಶತರೂಪಾದೇವಿಯನ್ನು ಸ್ವಾಯಂಭುವಮನುವು ಪತ್ನಿಯನ್ನಾಗಿ ಮಾಡಿಕೊಂಡನು. ಆ ಮನುವಿಗೆ ಆ ಪತ್ನಿಯಲ್ಲಿ ಪ್ರಿಯವ್ರತ ಉತ್ತಾನಪಾದ ಎಂಬ ಇಬ್ಬರು ಹೆಣ್ಣುಮಕ್ಕಳಾದರು. ಪ್ರಸೂತಿಯನ್ನು ದಕ್ಷನೆಂಬ ಬ್ರಹ್ಮ

ಆಕೂತಿಂ ದತ್ತವಾನ್ ಶುದ್ಧಾಂ ಮಾನಸಸ್ಯ ಪ್ರಜಾಪತೇಃ ।
ಆಕೂತ್ಯಾಂ ಮಾನಸಸ್ಯಾಭೂದ್ಯಜ್ಞೋ ವಿಪ್ರಾಶ್ಚ ದಕ್ಷಿಣಾ ॥೧೮॥

ಯಜ್ಞಸ್ಯ ಜಜ್ಞಿರೇ ಪುತ್ರಾ ಮುನಯೋ ದ್ವಾದಶಾಸ್ತಿಕಾಃ ।
ದಕ್ಷಾಜ್ಜಾತಾಶ್ಚತಸ್ರಶ್ಚ ತಥಾ ಪುತ್ರಾಶ್ಚ ವಿಂಶತಿಃ ॥೧೯॥

ಧರ್ಮಸ್ಯ ದತ್ತಾ ದಕ್ಷೇಣ ಶ್ರದ್ಧಾದ್ಯಾಸ್ತು ತ್ರಯೋದಶ ।
ತಥೈವ ತೇನ ಸಂಪನ್ನಾಃ ಶ್ರದ್ಧಾದ್ಯಾಃ ಕನ್ಯಕಾ ದಶ ॥೨೦॥

ತಾಭ್ಯಃ ಖ್ಯಾತ್ಯಾದಯೋ ವಿಪ್ರಾ ವಶಿಷ್ಟಾಃ (ವಿಜಾತಾಃ) ಷಟ್ಚ ಪಂಚ ಚ ।
ಏವಂ ಕರ್ಮಾನುರೂಪೇಣ ಪ್ರಾಣಿನಾಮಂಬಿಕಾಪತೇಃ ।
ಆಜ್ಞಯಾ ಬಹವೋ ಜಾತಾ ಅಸಂಖ್ಯಾತಾ ದ್ವಿಜರ್ಷಭಾಃ ॥೨೧॥

ಸ್ವಭಾವಾದೇವ ಸಂಭೂತಂ ಸಮುಸ್ತಮಿತಿ ಕೇಚನ ।
ತನ್ನ ಸಿಧ್ಯತಿ ವಿಪ್ರೇಂದ್ರಾ ದೇಶಕಾಲಾದ್ಯಪೇಕ್ಷಯಾ ॥೨೨॥

ಮಾನಸಪುತ್ರನಿಗೂ, ಆಕೂತಿಯನ್ನು ರುಚಿ ಎಂಬ ಪ್ರಜಾಪತಿಗೂ ಕೊಟ್ಟು ವಿವಾಹಮಾಡಿದನು. ಆಕೂತಿಯಲ್ಲಿ ರುಚಿ ಎಂಬ ಬ್ರಹ್ಮಮಾನಸಪುತ್ರನಿಂದ ಯಜ್ಞನೆಂಬ ಪುತ್ರನೂ, ದಕ್ಷಿಣಾ ಎಂಬ ಪುತ್ರಿಯೂ ಜನಿಸಿದರು. ||೧೬-೧೭-೧೮||

ಯಜ್ಞನಿಗೆ ದಕ್ಷಿಣಾದೇವಿಯಲ್ಲಿ ಹನ್ನೆರಡು ಜನ ಮುನಿಗಳು ಮಕ್ಕಳಾಗಿ ಹುಟ್ಟಿದರು. ದಕ್ಷನಿಗೆ ಪ್ರಸೂತಿಯಲ್ಲಿ ಇಪ್ಪತ್ತುನಾಲ್ಕು ಕನ್ಯೆಯರು ಹುಟ್ಟಿದರು. ||೧೯||

ಶ್ರದ್ಧಾ ಮುಂತಾದ ಹದಿಮೂರು ಕನ್ಯೆಯರನ್ನು ದಕ್ಷನು ಬ್ರಹ್ಮಮಾನಸ ಪುತ್ರನಾದ ಧರ್ಮನಿಗೆ ಕೊಟ್ಟನು. ಶ್ರದ್ಧಾ, ಲಕ್ಷ್ಮೀ, ಧೃತಿ, ತುಷ್ಟಿ, ಪುಷ್ಟಿ, ಮೇಧಾ, ಕ್ರಿಯಾ, ಬುದ್ಧಿ, ಲಜ್ಜಾ, ವಪು, ಶಾಂತಿ, ಸಿದ್ಧಿ, ಕೀರ್ತಿ ಇವರೇ ಆ ಹದಿಮೂರು ಕನ್ಯೆಯರು. ಮಿಕ್ಕ ಖ್ಯಾತಿ ಮುಂತಾದ ಹನ್ನೊಂದು ಕನ್ಯೆಯರಲ್ಲಿ ಕ್ರಮವಾಗಿ ಹುಟ್ಟಿದ ಖ್ಯಾತಿ, ಸತಿ, ಸಂಭೂತಿ, ಸ್ಮೃತಿ ಪ್ರೀತಿ, ಕ್ಷಮಾ, ಸನ್ನತಿ, ಅನಸೂಯಾ, ಊರ್ಜಾ, ಸ್ವಾಹಾ, ಸ್ವಧಾ ಎಂಬವರನ್ನು ಕ್ರಮವಾಗಿ ಭೃಗು, ಭವ, ಮರೀಚಿ, ಅಂಗಿರಸ್ಸು ಪುಲಸ್ತ್ಯ, ಪುಲಹ, ಕ್ರತು, ಅತ್ರಿ, ವಸಿಷ್ಠ, ಅಗ್ನಿ, ಪಿತೃದೇವತೆಗಳು ಇವರಿಗೆ ಕೊಟ್ಟನು. ಇವರಿಂದ ಮುಂದೆ ಪ್ರಪಂಚವು ಅಭಿವೃದ್ಧಿಗೆ ಬಂದು ವಿಸ್ತಾರವಾಯಿತು. ||೨೦-೨೧||

ಕೆಲವರು ಅಂದರೆ ಬೌದ್ಧರು ಪ್ರಪಂಚವು ಸ್ವಾಭಾವಿಕವಾಗಿ ಉತ್ಪತ್ತಿಯಾಯಿತೆಂದು ಹೇಳುವರು. ಕಾಶ್ಮೀರದೇಶದಲ್ಲಿಯೇ ಕುಂಕುಮಕೇಸರಿಯು ಬೆಳೆ. ಹಗಲಿನ

ಕರ್ಮಣೈವ ಸಮುತ್ಪನ್ನಂ ಸಮಸ್ತಮಿತಿ ಕೇಚನ ।
ತಚ್ಛ್ರುತಿಸ್ಮೃತಿವಾದಸ್ಯ ವಿರುದ್ಧಂ ಮುನಿಪುಂಗವಾಃ ॥೨೩॥

ಪುರಾ ಹಿಮವತಃ ಪಾರ್ಶ್ವೇ ಮುನಿಃ ಸತ್ಯವತೀಸುತಃ ।
ಸುಮಂತುರ್ಜೈಮಿನಿಶ್ಚೈವ ವೈಶಂಪಾಯನ ಏವ ಚ ॥೨೪॥

ಪೈಲಃ ಕಪಿಲಸಂಜ್ಞಶ್ಚ ತಥಾ ವಿಪ್ರಾಃ ಪತಂಜಲಿಃ ।
ಅಕ್ಷಪಾದಃ ಕಣಾದಶ್ಚ ತಥೈವಾಂಗಿರಸೋ ಮುನಿಃ ॥೨೫॥

ಮುಕುಂದೋ ಮೋಚಕಶ್ಚೈವ ಮಹಾಕಾಲೋ ಮಹಾಮತಿಃ ।
ಕಾಲರೂಪಃ ಕಲಾಮಾಲೀ ಕಾಮರೂಪಃ ಕಪಿಧ್ವಜಃ ॥೨೬॥

ವೇದಜ್ಞೋ ವೈದಿಕೋ ವಿದ್ವಾನ್ವಿದ್ವೇಷೀ(ಷೋ) ವೇಣುವಾಹನಃ ।
ಬಾ(ಬಿ)ಲ್ವಲೋ ಬಕುಲೋ ವನ್ಹಿರ್ವಜ್ರದಂಡಃ ಪರಂತಪಃ ॥೨೭॥

ಲ್ಲಿಯೇ ಕಮಲವು ಅರಳುವುದು. ರಾತ್ರಿಯಲ್ಲಿಯೇ ಕನ್ನೈದಿಲೆಯು ಅರಳುವುದು. ಪುಣ್ಯವಂತರೇ ಸುಖವನ್ನನುಭವಿಸುವರು. ಪಾಪಿಗಳೇ ದುಃಖವನ್ನನುಭವಿಸುವರು. ಈಶ್ವರೇಚ್ಛೆಯಿಂದ ಸಕಲವೂ ಆಗುವುದು. ಎಂದು ದೇಶ ಕಾಲ ಅದೃಷ್ಟ ಈಶ್ವರ ಮುಂತಾದುವೂ ಕಾರಣವಾಗುವುದರಿಂದ ಸ್ವಭಾವವು ಒಂದೇ ಕಾರಣವೆಂದು ಹೇಳಲಾಗುವುದಿಲ್ಲ. ॥೨೨॥

ಕೆಲವರು ಅನೀಶ್ವರವಾದಿಗಳು ಕರ್ಮದಿಂದಲೇ ಸಮಸ್ತವೂ ಉಂಟಾಯಿತೆಂದು ಹೇಳುವರು. ಈ ಮಾತು ಶ್ರುತಿಸ್ಮೃಗಳಿಗೆ ವಿರೋಧವಾಗಿರುವುದು. ವ್ಯಾಸರು "ಫಲಮತ ಉಪಪತ್ತೇಃ" ೩.೨.೩೮., ಎಂಬ ಸೂತ್ರದಲ್ಲಿ ಈಶ್ವರನಿಂದಲೇ ಫಲಪ್ರಾಪ್ತಿಯಾಗುವುದೆಂದು ಹೇಳಿರುವರು. ಗೀತೆಯಲ್ಲಿ—"ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ" ಅ. ೧೦. ಶ್ಲೋ. ೮., ಎಂದು ಹೇಳಿರುವುದು. ॥೨೩॥

ಹಿಂದೆ ಹಿಮವತ್ಪರ್ವತದ ತಪ್ಪಲಿನಲ್ಲಿ ಸತ್ಯವತೀಪುತ್ರನಾದ ವ್ಯಾಸನೂ, ಸುಮಂತು, ಜೈಮಿನಿ, ವೈಶಂಪಾಯನ, ಕಪಿಲ, ಪತಂಜಲಿ, ಗೌತಮ, ಕಣಾದ, ಅಂಗಿರಸ್ಸು, ಮುಕುಂದ, ಮೋಚಕ, ಮಹಾಕಾಲ, ಮಹಾಮತಿ, ಕಾಲರೂಪ, ಕಲಾಮಾಲಿ, ಕಾಮರೂಪ, ಕಪಿಧ್ವಜ, ವೇದಜ್ಞ, ವೈದಿಕ, ವಿದ್ವೇಷೀ(ಷ), ವೇಣುವಾಹನ, ಬಾ(ಬಿ)ಲ್ವಲ, ಬಕುಲ, ವನ್ಹಿ, ವಜ್ರದಂಡ, ಪರಂತಪ, ಪಾಪನಾಶನ, ಪವಿತ್ರ

ಪಾಪನಾಶಃ ಪವಿತ್ರಶ್ಚ ತಥಾಽನ್ಯೇ ಚ ಮಹರ್ಷಯಃ ।
ಪರಸ್ಪರಂ ವಿಚಾರ್ಯಾಽಥ ಶ್ರದ್ಧಯಾ ಪರಮರ್ಷಯಃ ॥೨೮॥

ಸಂಶಯಾವಿಷ್ಟಮನಸಸ್ತಪಶ್ಚೇರುರ್ಮಹತ್ತರಂ ।
ಏತಸ್ಮಿನ್ನಂತರೇ ರುದ್ರಃ ಪ್ರಸನ್ನಃ ಕರುಣಾನಿಧಿಃ ॥೨೯॥

ಸ್ವಯಮಾವಿರಭೂತ್ತೇಷಾಂ ಪುರತಃ ಪರಮೇಶ್ವರಃ ।
ತಂ ದೃಷ್ಟ್ವಾ ಮುನಯಃ ಸರ್ವೇ ಪ್ರಸನ್ನೇಂದ್ರಿಯ ಬುದ್ಧಯಃ॥೩೦॥

ಪ್ರಣಮ್ಯ ಪರಯಾ ಭಕ್ತ್ಯಾ ಭಗವಂತಂ ತ್ರಿಲೋಚನಂ ।
ಕೃತಾಂಜಲಿಪುಟಾಃ ಸರ್ವೇ ಪಪ್ರಚ್ಛುಃ ಪರಮೇಶ್ವರಂ ॥೩೧॥

ದೇವದೇವೋ ಮಹಾದೇವಃ ಸರ್ವಜ್ಞಃ ಕರುಣಾನಿಧಿಃ ।
ಕಪರ್ದೀ ನೀಲಕಂಠಶ್ಚ ಕಾಲಕಾಲೋ ಮಹೇಶ್ವರಃ ॥೩೨॥

ಸೋಮಾರ್ಧಶೇಖರಃ ಸೋಮಃ ಸೋಮಸೂರ್ಯಾಗ್ನಿಲೋಚನಃ ।
ಉವಾಚ ಮಧುರಂ ವಾಕ್ಯಂ ಮುನೀನಾಂ ಸಂಶಯಾಪಹಂ ॥೩೩॥

ಮುಂತಾದ ಅನೇಕ ಋಷಿಗಳೆಲ್ಲರೂ ಸೇರಿ, ವಿಚಾರಮಾಡಿ ಸಂದೇಹದಿಂದ ಕೂಡಿದ ಮನಸ್ಸುಳ್ಳವರಾಗಿ ಭಕ್ತಿಯಿಂದ ಕಠಿನವಾದ ತಪಸ್ಸನ್ನು ಮಾಡಿದರು. ॥೨೪-೨೫-೨೬-೨೭-೨೮॥

ಈ ಸಮಯದಲ್ಲಿ ದಯಾನಿಧಿಯಾದ ರುದ್ರನು ಸಂತುಷ್ಟನಾಗಿ ಆ ಮುನಿಗಳೆದುರಿಗೆ ಪ್ರತ್ಯಕ್ಷನಾಗಿ ಕಾಣಿಸಿಕೊಂಡನು. ಮುನಿಗಳೆಲ್ಲರೂ ಶುದ್ಧವಾದ ಮನಸ್ಸಿನಿಂದ ಆ ದೇವನನ್ನು ನೋಡಿ ಮಹಾಮಹಿಮನಾದ ಮುಕ್ಕಣ್ಣನಿಗೆ ಅತ್ಯಂತ ಭಕ್ತಿಯಿಂದ ನಮಸ್ಕರಿಸಿ ಕೈಜೋಡಿಸಿಕೊಂಡು ಆ ದೇವನನ್ನು ಪ್ರಶ್ನೆಮಾಡಿದರು. ॥೨೯-೩೦-೩೧॥

ದೇವತೆಗಳಿಗೆಲ್ಲರಿಗೂ ದೇವನೂ, ಸರ್ವಜ್ಞನೂ, ದಯಾನಿಧಿಯೂ, ಜಟಾಧಾರಿಯೂ, ನೀಲಕಂಠನೂ, ಯಮನಿಗೆ ಯಮಸ್ವರೂಪನೂ, ಚಂದ್ರಶೇಖರನೂ, ಉಮಾದೇವೀಸಹಿತನೂ, ಸೂರ್ಯಚಂದ್ರ ಅಗ್ನಿಗಳೆಂಬ ಕಣ್ಣುಗಳುಳ್ಳವನಾಗಿರುವವನೂ, ಆದ ಮಹೇಶ್ವರನು ಮುನಿಗಳ ಸಂದೇಹವನ್ನು ಪರಿಹಾರ ಮಾಡುವುದಕ್ಕಾಗಿ ಪ್ರಿಯವಾದ ಮತ್ತು ಹಿತವಾದ ಮಾತನ್ನು ಹೇಳಿದನು. ॥೩೨-೩೩॥

|| ಈಶ್ವರ ಉವಾಚ ||

ನ ಸ್ವಭಾವಾಜ್ಜಗಜ್ಜನ್ಮಸ್ಥಿತಿಧ್ವಂಸಾ ಮುನೀಶ್ವರಾಃ ।
ನ ಮಯಾ ಕೇವಲೇನಾಪಿ ನ ಚ ಕೇವಲ ಕರ್ಮಣಾ ॥೩೪॥

ಪ್ರಾಣಿನಾಂ ಕರ್ಮಪಾಕೇನ ಮಯಾ ಚ ಮುನಿಸತ್ತಮಾಃ ।
ಜಗತಃ ಸಂಭವೋ ನಾಶಃ ಸ್ಥಿತಿಶ್ಚ ಭವತಿ ದ್ವಿಜಾಃ ॥೩೫॥

ಏವಂ ಕರ್ಮಾನುರೂಪೇಣ ಜಗಜ್ಜನ್ಮಾದಿ ಯನ್ಮಯಾ ।
ಏಷ ಸ್ವಭಾವೋ ವಿಪ್ರೇಂದ್ರಾ ಇತಿ ವೇದಾರ್ಥನಿರ್ಣಯಃ ॥೩೬॥

|| ಸೂತ ಉವಾಚ ||

ಏವಮುಕ್ತ್ವಾ ಮಹಾದೇವಃ ಸರ್ವಜ್ಞಃ ಕರುಣಾನಿಧಿಃ ।
ಅನುಗೃಹ್ಯ ಮುನಿಶ್ರೇಷ್ಠಾಂಸ್ತತ್ರೈವಾಂತರ್ಹಿತೋಽಭವತ್ ॥೩೭॥

ಮುನಯಶ್ಚ ಪುನರ್ವಿಪ್ರಾಃ ಸಮಾಭಾಷ್ಯ ಪರಸ್ಪರಂ ।
ಅತೀವ ಪ್ರೀತಿಮಾಪನ್ನಾ ಅಗಮನ್ವೇದವಿತ್ತಮಾಃ ॥೩೮॥

ಈಶ್ವರನು ಹೇಳಿದನು—ಎಲೈ ಮುನಿಶ್ರೇಷ್ಠರೇ, ಜಗತ್ತಿನ ಉತ್ಪತ್ತಿ, ಸ್ಥಿತಿ, ನಾಶಗಳು ಸ್ವಾಭಾವಿಕವಾಗಿ ಆಗುವುದಿಲ್ಲ. ಕೇವಲ ಈಶ್ವರನಿಂದಾಗಲೀ, ಕೇವಲ ಕರ್ಮದಿಂದಾಗಲೀ, ಆಗುವುದಿಲ್ಲ. ಪ್ರಾಣಿಗಳ ಕರ್ಮಪರಿಪಾಕದೊಡನೆ ನನ್ನ ಶಕ್ತಿಯೂ ಕೂಡಿ, ಪ್ರಪಂಚದ ಉತ್ಪತ್ತಿ, ಸ್ಥಿತಿ, ನಾಶಗಳು ಆಗುವುವು. ಹೀಗೆ ಕರ್ಮಾನುರೂಪವಾಗಿರುವ ನನ್ನ ಸಂಕಲ್ಪದಿಂದ ಜಗತ್ತಿನ ಉತ್ಪತ್ತಿ ಮುಂತಾದುವುಗಳು ನಡೆಯುವುವೆಂದು ವೇದದ ಅಭಿಪ್ರಾಯವು. ಇದನ್ನೇ ಸ್ವಭಾವವೆಂದು ಹೇಳುವರು. ||೩೪-೩೫-೩೬||

ಸೂತನು ಹೇಳಿದನು—ಎಲೈ ಮುನಿಶ್ರೇಷ್ಠರೇ, ಸರ್ವಜ್ಞನೂ ದಯಾನಿಧಿಯೂ ಆದ ಮಹಾದೇವನು ಹೀಗೆಂದು ಹೇಳಿ ಆ ಮುನಿಗಳಿಗೆ ಅನುಗ್ರಹವನ್ನು ಮಾಡಿ ಅಲ್ಲಿಯೇ ಅಂತರ್ಧಾನನಾದನು. ||೩೭||

ಆ ಮುನಿಗಳಾದರೋ ಸಂತೋಷದಿಂದ ಒಬ್ಬರಿಗೊಬ್ಬರು ಮಾತನಾಡುತ್ತ ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು. ||೩೮||

ಭವಂತೋಽಪಿ ಮುನಿಶ್ರೇಷ್ಠಾಃ ಪ್ರಾಣಿಕರ್ಮಾನುರೂಪತಃ ।
ಸೃಷ್ಟ್ವಾ ಸಂಹರತೀಶಾನ ಇತಿ ವಿತ್ತ ಜಗತ್ಸದಾ ॥೩೯॥

ಇತಿ ಶ್ರುತ್ವಾ ಮುನಿಶ್ರೇಷ್ಠಾ ನೈಮಿಷೀಯಾಸ್ತಪೋಧನಾಃ ।
ಪ್ರಸನ್ನಹೃದಯಾಃ ಶರ್ವಂ ಪೂಜಯಾಮಾಸುರಾದರಾತ್ ॥೪೦॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ ಹಿರಣ್ಯಗರ್ಭವಿಶೇಷಸೃಷ್ಟಿರ್ನಾಮ ಏಕಾದಶೋಽಧ್ಯಾಯಃ ಸಮಾಪ್ತಃ

ಎಲೈ ಮುನಿಶ್ರೇಷ್ಠರೇ, ನೀವೂ ಕೂಡ ಈಶ್ವರನು ಪ್ರಾಣಿಗಳ ಕರ್ಮಗಳಿಗೆ ಅನುಸಾರವಾಗಿ ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವನೆಂದು ಯಾವಾಗಲೂ ತಿಳಿಯಿರಿ. ||೩೯||

ನೈಮಿಷಾರಣ್ಯವಾಸಿಗಳಾದ ಮುನಿಗಳು ಇದನ್ನು ಕೇಳಿ ಪರಿಶುದ್ಧವಾದ ಮನಸ್ಸಿನಿಂದ ಕೂಡಿ ಶಿವನನ್ನು ಭಕ್ತಿಯಿಂದ ಪೂಜಿಸಿದರು. ||೪೦||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ ಹಿರಣ್ಯಗರ್ಭನು ಮಾಡಿದ ವಿಶೇಷ ಸೃಷ್ಟಿಕ್ರಮದ ವರ್ಣನೆ ಎಂಬ ಹನ್ನೊಂದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಂದಪುರಾಣಾಂತರ್ಗತಾ ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

|| ದ್ವಾದಶೋಽಧ್ಯಾಯಃ ||

ಹನ್ನೆರಡನೆಯ ಅಧ್ಯಾಯವು

|| ನೈಮಿಷೀಯಾ ಊಚುಃ ||

ಭಗವನ್ ಸರ್ವ ಶಾಸ್ತ್ರಾರ್ಥಪರಿಜ್ಞಾನವತಾಂ ವರ ।
ಜಾತಿನಿರ್ಣಯಮಸ್ಮಾಕಂ ವದ ವೇದೈಕದರ್ಶಿತಂ ॥೧॥

|| ಸೂತ ಉವಾಚ ||

ವಕ್ಷ್ಯೇ ಲೋಕೋಪಕಾರಾಯ ಜಾತಿನಿರ್ಣಯಮಾದರಾತ್ ।
ಅಗಸ್ತ್ಯೋಽಪಿ ಪುರಾಽಪೃಚ್ಛತ್ಪ್ರಣಮ್ಯ ವೃಷವಾಹನಂ ॥೨॥

ನೈಮಿಷಾರಣ್ಯವಾಸಿಗಳಾದ ಮುನಿಗಳು ಸೂತನನ್ನು ಕುರಿತು ಮಹಾತ್ಮನಾದ ಸೂತನೇ, ನೀನು ಸಮಸ್ತ ಶಾಸ್ತ್ರಗಳನ್ನೂ ತಿಳಿದವರಲ್ಲಿ ಶ್ರೇಷ್ಠನು. ಪ್ರಾಣಿಗಳ ಕರ್ಮಪರಿಪಾಕವೇ ಸೃಷ್ಟಿಗೆ ಕಾರಣವು. ಆ ಕರ್ಮಕ್ಕೆ ಜಾತಿವ್ಯವಸ್ಥೆಯೇ ಕಾರಣವು. ಆದುದರಿಂದ ವೇದದಲ್ಲಿ ಹೇಳುವ ಆ ಜಾತಿವ್ಯವಸ್ಥೆಯು ಹೇಗೆ ಉಂಟಾಯಿತೆಂಬುದನ್ನು ನಮಗೆ ನೀನು ಹೇಳಬೇಕು ಎಂದರು. ||೧||

ಸೂತನು ಹೇಳಿದನು—ಹಿಂದೆ ಅಗಸ್ತ್ಯಮುನಿಯು ಪರಮೇಶ್ವರನನ್ನು ಕೇಳಿ ಈ ಜಾತಿನಿರ್ಣಯವನ್ನು ತಿಳಿದುಕೊಂಡನು. ಅದನ್ನೇ ಲೋಕೋಪಕಾರಕ್ಕಾಗಿ ನಿಮಗೆ ಹೇಳುವೆನು. ||೨||

ಪುರಾ ಸರ್ವೇ ಮುನಿಶ್ರೇಷ್ಠಾಃ ಪ್ರಲಯೇ ವಿಲಯಂ ಗತೇ ।
ಅಂಧಕಾರಾವೃತೇ ಲೋಕೇ ವಿಷ್ಣೋರಂಶೋ ಮಹಾದ್ಯುತಿಃ ॥೩॥

ಸಹಸ್ರಶೀರ್ಷಾ ಪುರುಷೋ ವಿಷ್ಣುರ್ನಾರಾಯಣಾಭಿಧಃ ।
ಕ್ಷೀರಾಬ್ಧೌ ಚಿಂತಯನ್ರುದ್ರಂ ಸುಷ್ವಾಪ ಬ್ರಹ್ಮವಿತ್ತಮಾಃ ॥೪॥

ಕದಾಚಿತ್ಪಂಕಜಂ ವಿಪ್ರಾಸ್ತರುಣಾದಿತ್ಯಸನ್ನಿಭಂ ।
ತಸ್ಯ ಸುಪ್ತಸ್ಯ ದೇವಸ್ಯ ನಾಭ್ಯಾಂ ಜಾತಂ ಮಹತ್ತರಂ ॥೫॥

ಹಿರಣ್ಯಗರ್ಭೋ ಭಗವಾನ್ಬ್ರಹ್ಮಾ ವಿಶ್ವಜಗತ್ಪತಿಃ ।
ಆಸ್ಥಾಯ ಪರಮಾಂ ಮೂರ್ತಿಂ ತಸ್ಮಿನ್ಪದ್ಮೇ ಸಮುದ್ಬಭೌ ॥೬॥

ತಸ್ಯ ವೇದವಿದಾಂ ಶ್ರೇಷ್ಠಾ ಬ್ರಹ್ಮಣಃ ಪರಮೇಷ್ಠಿನಃ ।
ಮಹಾದೇವಾಜ್ಞಯಾ ಪೂರ್ವವಾಸನಾಸಹಿತಾನ್ಮುಖಾತ್ ॥೭॥
ಬ್ರಾಹ್ಮಣಾ ಬ್ರಾಹ್ಮಣಸ್ತ್ರೀಭಿಃ ಸಹ ಜಾತಾಸ್ತಪೋಧನಾಃ ।

ಋಷಿಶ್ರೇಷ್ಠರೇ, ಕೇಳಿರಿ. ಹಿಂದೆ ಪ್ರಳಯಕಾಲದಲ್ಲಿ ಸಮಸ್ತ ಪ್ರಪಂಚವೂ ನಾಶವಾಗಿರಲು ಎಲ್ಲವೂ ಕತ್ತಲೆಯಿಂದ ತುಂಬಿಕೊಂಡಿರುವಾಗ ವೇದದಲ್ಲಿ ಹೇಳುವಂತೆ ಸಾವಿರ ತಲೆಗಳುಳ್ಳ ನಾರಾಯಣನೆಂಬ ಹೆಸರುಳ್ಳ ಪುರುಷನಾದ ವಿಷ್ಣುವು ಕ್ಷೀರಸಮುದ್ರದಲ್ಲಿ ರುದ್ರನನ್ನು ಧ್ಯಾನಮಾಡುತ್ತ ಮಲಗಿದ್ದನು. ॥೩-೪॥

ಹಾಗೆ ಮಲಗಿದ್ದ ದೇವನ ಹೊಕ್ಕುಳಿನಲ್ಲಿ ಒಂದು ಕಾಲದಲ್ಲಿ ಒಂದು ದೊಡ್ಡ ಕಮಲವು, ಆಗತಾನೆ ಉದಯಿಸಿದ ಸೂರ್ಯನ ಕೆಂಪು ಬಣ್ಣದಂತೆ, ಪ್ರಕಾಶಿಸುತ್ತ ಹುಟ್ಟಿತು. ಆ ಕಮಲದಲ್ಲಿ ಸುಂದರವಾದ ಶರೀರವುಳ್ಳ, ಸಮಸ್ತ ಜಗತ್ತಿಗೂ ಒಡೆಯನಾದ ಹಿರಣ್ಯಗರ್ಭನೆಂಬ ಮಹಾತ್ಮನಾದ ಬ್ರಹ್ಮನು ಹುಟ್ಟಿದನು. ॥೫-೬॥

ವೇದವನ್ನು ತಿಳಿದವರಲ್ಲಿ ಶ್ರೇಷ್ಠರಾದ ಮಹರ್ಷಿಗಳೇ, ಮಹಾದೇವನಾದ ಶಿವನ ಅಪ್ಪಣೆಯಿಂದ ಆ ಬ್ರಹ್ಮನ ಮುಖದಿಂದ ಬ್ರಾಹ್ಮಣರು ತಮ್ಮ ಹಿಂದಿನ ಜನ್ಮದ ವಾಸನಾಸಹಿತವಾಗಿ ಬ್ರಾಹ್ಮಣಸ್ತ್ರೀಯರೊಡನೆ ಹುಟ್ಟಿದರು. ॥೭॥

ಆ ಬ್ರಹ್ಮನ ತೋಳುಗಳಿಂದ ಸ್ತ್ರೀಯರೊಡನೆ ಕೂಡಿದ ಕ್ಷತ್ರಿಯರೂ, ತೊಡೆಗಳಿಂದ ಸ್ತ್ರೀಯರೊಡನೆ ಕೂಡಿದ ವೈಶ್ಯರೂ, ಪಾದಗಳಿಂದ ಸ್ತ್ರೀಯರೊಡನೆ ಕೂಡಿದ ಶೂದ್ರರೂ, ಶಿವನ ಅಪ್ಪಣೆಯಿಂದ ಹುಟ್ಟಿದರು. ॥೮॥

ತಸ್ಯ ಹಸ್ತಾತ್ಸಹ ಸ್ತ್ರೀಭಿ ರ್ಜಜ್ಞಿರೇ ಪೃಥಿವೀಭುಜಃ ॥೮॥

ಊರುಭ್ಯಾಂ ಸಹಿತಾಃ ಸ್ತ್ರೀಭಿರ್ಜಾತಾ ವೈಶ್ಯಾಃ ಶಿವಾಜ್ಞಯಾ ।
ಪದ್ಭ್ಯಾಂ ಶೂದ್ರಾಃ ಸಹ ಸ್ತ್ರೀಭಿರ್ಜಜ್ಞಿರೇ ವೇದವಿತ್ತಮಾಃ ॥೯॥

ಸ್ವಸ್ತ್ರೀಷು ಸ್ವಸ್ಕ ವೈಧೇನ ಮಾರ್ಗೇಣೋತ್ಥಃ ಸ್ವಯಂ ಭವೇತ್ ।
ಅವರಾಸೂತ್ತಮಾಜ್ಜಾತಸ್ತ್ವನುಲೋಮಃ ಪ್ರಕೀರ್ತಿತಃ ॥೧೦॥

ಉತ್ತಮಾಸ್ವವರಾಜ್ಜಾತಃ ಪ್ರತಿಲೋಮ ಇತಿ ಸ್ಮೃತಃ ।
ವರ್ಣಸ್ತ್ರೀಷ್ವನುಲೋಮೇನ ಜಾತಃ ಸ್ಯಾದಾಂತರಾಲಿಕಃ ॥೧೧॥

ವರ್ಣಾಸು ಪ್ರತಿಲೋಮೇನ ಜಾತೋ ವ್ರಾತ್ಯ ಇತಿ ಸ್ಮೃತಃ ।
ಬ್ರಾಹ್ಮಣ್ಯಾಂ ಸಧವಾಯಾಂ ಯೋ ಬ್ರಾಹ್ಮಣೇನ ದ್ವಿಜೋತ್ತಮಾಃ ॥೧೨॥
ಜಾತಶ್ಚೌರ್ಯೇಣ ಕುಂಡೋಽಸೌ ವಿಧವಾಯಾಂ ತು ಗೋಲಕಃ ।

ಆಯಾಯ ಜಾತಿಯ ಸ್ತ್ರೀಯರಲ್ಲಿ ಆಯಾ ಜಾತಿಯ ಪುರುಷರಿಂದ ವಿವಾಹ ವಿಧಿಗನುಸಾರವಾಗಿ ಹುಟ್ಟಿದವರು ಆದೇ ಜಾತಿಯವರಾಗುವರು. ಕಡಿಮೆಜಾತಿಯ ಸ್ತ್ರೀಯರಲ್ಲಿ ಉತ್ತಮಜಾತಿಯ ಪುರುಷರಿಂದ ಹುಟ್ಟಿದವರನ್ನು ಅನುಲೋಮರೆಂದು ಹೇಳುವರು. ಎಂದರೆ ಬ್ರಾಹ್ಮಣನಿಂದ ಕ್ಷತ್ರಿಯವೈಶ್ಯಶೂದ್ರಸ್ತ್ರೀಯರಲ್ಲಿಯೂ, ಕ್ಷತ್ರಿಯನಿಂದ ವೈಶ್ಯಶೂದ್ರಸ್ತ್ರೀಯರಲ್ಲಿಯೂ, ವೈಶ್ಯನಿಂದ ಶೂದ್ರಸ್ತ್ರೀಯಲ್ಲಿಯೂ, ಹುಟ್ಟಿದವರು ಅನುಲೋಮಕ್ರಮದಿಂದ ಹುಟ್ಟಿದವರಾಗುವರು. ॥೧೦॥

ಉತ್ತಮವರ್ಣದ ಸ್ತ್ರೀಯರಲ್ಲಿ ನಿಕೃಷ್ಟವರ್ಣದ ಪುರುಷನಿಂದ ಹುಟ್ಟಿದವರನ್ನು ಎಂದರೆ ಬ್ರಾಹ್ಮಣಸ್ತ್ರೀಯರಲ್ಲಿ ಕ್ಷತ್ರಿಯ ವೈಶ್ಯ ಶೂದ್ರರಿಂದಲೂ, ಕ್ಷತ್ರಿಯ ಸ್ತ್ರೀಯರಲ್ಲಿ ವೈಶ್ಯ ಶೂದ್ರರಿಂದಲೂ, ವೈಶ್ಯಸ್ತ್ರೀಯಲ್ಲಿ ಶೂದ್ರನಿಂದಲೂ, ಹುಟ್ಟಿದವರನ್ನು ಪ್ರತಿಲೋಮಕ್ರಮದಲ್ಲಿ ಹುಟ್ಟಿದವರೆನ್ನುವರು. ಅನುಲೋಮದಿಂದ ಹುಟ್ಟಿದವರನ್ನು ಆಂತರಾಲಿಕರೆಂದೂ, ಪ್ರತಿಲೋಮಕ್ರಮದಿಂದ ಹುಟ್ಟಿದವರನ್ನು ವ್ರಾತ್ಯರೆಂದೂ ಕರೆಯುವರು. ॥೧೧॥

ಗಂಡನುಳ್ಳ ಬ್ರಾಹ್ಮಣಸ್ತ್ರೀಯಲ್ಲಿ ಕಳ್ಳತನದಿಂದ ಮತ್ತೊಬ್ಬ ಬ್ರಾಹ್ಮಣನಿಂದ ಹುಟ್ಟಿದವನಿಗೆ ಕುಂಡನೆಂದೂ, ವಿಧವೆಯಲ್ಲಿ ಹುಟ್ಟಿದವನಿಗೆ ಗೋಲಕನೆಂದೂ ಹೆಸರು ಬರುವುದು. ॥೧೨॥

ನೃಪಾಯಾಂ ಬ್ರಾಹ್ಮಣಾಜ್ಜಾತಃ ಸವರ್ಣ ಇತಿ ಕೀರ್ತಿತಃ ॥೧೩॥

ಚೌರ್ಯಾದಸ್ಯಾಮನೇನೋತ್ಥೋ ನಾಮ್ನಾ ನಕ್ಷತ್ರಜೀವನಃ ।
ವೈಶ್ಯಾಯಾಂ ಬ್ರಾಹ್ಮಣಾಜ್ಜಾತೋ ನಿಷಾದೋ ವೇದವಿತ್ತಮಾಃ ॥೧೪॥

ಅಸ್ಯಾಮನೇನ ಚೌರ್ಯೇಣ ಕುಂಭಕಾರೋಽಭಿಜಾಯತೇ ।
ಊರ್ಧ್ವನಾಪಿತ ಏವಾಸೌ ನಾಮ್ನಾ ವೇದವಿದಾಂ ವರಾಃ ॥೧೫॥

ಶೂದ್ರಾಯಾಂ ಬ್ರಾಹ್ಮಣೇನೋತ್ಥೋ ದ್ವಿಜಾಃ ಪಾರಶವಃ ಸ್ಮೃತಃ ।
ಚೌರ್ಯೇಣಾಸ್ಯಾ ನಿಷಾದೋಽಭೂನ್ನಾಮ್ನಾ ವೇದಾರ್ಥವಿತ್ತಮಾಃ ॥೧೬॥

ದೌಷ್ಯಂತ್ಯಾಂ ಬ್ರಾಹ್ಮಣಾಜ್ಜಾತ ಆಪೀತಾಖ್ಯೋ ಭವೇದ್ದ್ವಿಜಾಃ ।
ಆಯೋಗವ್ಯಾಂ ತು ವಿಪ್ರೇಣ ಪಿಂಗಲೋ ನಾಮ ಜಾಯತೇ ॥೧೭॥

ವಿಪ್ರಾಯಾಂ ಕ್ಷತ್ರಿಯಾಜ್ಜಾತಃ ಸೂತ ಇತ್ಯುಚ್ಯತೇ ಬುಧೈಃ ।
ಚೌರ್ಯೇಣಾಸ್ಯಾಮನೇನೋತ್ಥೋ ರಥಕಾರ ಇತಿ ಸ್ಮೃತಃ ॥೧೮॥

ಬ್ರಾಹ್ಮಣನು ಕ್ಷತ್ರಿಯ ಸ್ತ್ರೀಯರನ್ನು ಮದುವೆಮಾಡಿಕೊಂಡು, ಆ ಸ್ತ್ರೀಯಲ್ಲಿ ಹುಟ್ಟಿದವನು ಕ್ಷತ್ರಿಯನೇ ಆಗುವನು. ವಿವಾಹವಿಲ್ಲದೆ ಕಳ್ಳತನದಿಂದ ಹುಟ್ಟಿದವನು ನಕ್ಷತ್ರಜೀವಿ ಎನಿಸುವನು. ॥೧೩॥

ವೈಶ್ಯಸ್ತ್ರೀಯಲ್ಲಿ ಬ್ರಾಹ್ಮಣನಿಂದ ವಿವಾಹವಿಧಿಯಿಂದ ಉತ್ಪನ್ನನಾದವನು ನಿಷಾದನೆನಿಸುವನು. ಕಳ್ಳತನದಿಂದ ಹುಟ್ಟಿದವನು ಕುಂಬಾರನೆನಿಸುವನು. ಇವನಿಗೆ ಊರ್ಧ್ವನಾಪಿತನೆಂದು ಮತ್ತೊಂದು ಹೆಸರಿರುವುದು. ॥೧೪-೧೫॥

ಶೂದ್ರಸ್ತ್ರೀಯಲ್ಲಿ ಬ್ರಾಹ್ಮಣನಿಂದ ವಿವಾಹವಿಧಿಯಿಂದ ಹುಟ್ಟಿದವನು ಪಾರಶಿವನೆನಿಸುವನು. ಕಳ್ಳತನದಿಂದ ಹುಟ್ಟಿದವನು ನಿಷಾದನೆನಿಸುವನು. ॥೧೬॥

ಶೂದ್ರಸ್ತ್ರೀಯಲ್ಲಿ ಕ್ಷತ್ರಿಯನಿಂದ ಹುಟ್ಟಿದ ದೌಷ್ಯಂತಜಾತಿಯ ಸ್ತ್ರೀಯಲ್ಲಿ ಬ್ರಾಹ್ಮಣನಿಂದ ಹುಟ್ಟಿದವನು ಆಪೀತನೆನಿಸುವನು. ಶೂದ್ರನಿಂದ ವೈಶ್ಯ ಸ್ತ್ರೀಯಲ್ಲಿ ಹುಟ್ಟಿದ ಆಯೋಗವ್ಯಜಾತಿಯ ಸ್ತ್ರೀಯಲ್ಲಿ ಬ್ರಾಹ್ಮಣನಿಂದ ಹುಟ್ಟಿದವನು ಪಿಂಗಲನೆನಿಸುವನು. ॥೧೭॥

ಬ್ರಾಹ್ಮಣಸ್ತ್ರೀಯಲ್ಲಿ ಕ್ಷತ್ರಿಯನು ವಿವಾಹಮಾಡಿಕೊಂಡು ಆತನಿಂದ ಆಕೆಯಲ್ಲಿ ಹುಟ್ಟಿದವನು ಸೂತನೆನಿಸುವನು. ಕಳ್ಳತನದಿಂದ ಹುಟ್ಟಿದವನು ರಥಕಾರನೆನಿಸುವನು. ॥೧೮॥

ಕ್ಷತ್ರಿಯಸ್ತ್ರೀಷು ವೈಶ್ಯಾತ್ತು ಭೋಜಶ್ಚೌರ್ಯಾದ್ವಿಜಾಯತೇ ।
ವೈಶ್ಯಾಯಾಕ್ಷತ್ರಿಯಾ ಜ್ಜಾತೋ ಮಾಹಿಷ್ಯೋಽಂಬಷ್ಠಸಂಜ್ಞಿತಃ ॥೧೯॥

ಚೌರ್ಯೇಣಾಸ್ಯಾಮನೇನೋತ್ಥೋ ಭವೇದವಿರಸಂಜ್ಞಿತಃ ।
ಶೂದ್ರಾಯಾಂ ಕ್ಷತ್ರಿಯಾಜ್ಜಾತೋ ದೌಷ್ಯಂತ್ಯಾಖ್ಯೋಭವೇದ್ದ್ವಿಜಾಃ ॥೨೦॥

ಚೌರ್ಯೇಣಾಸ್ಯಾಮನೇನೋತ್ಥಃ ಶೂಲಿಕೋ ಭವತಿ ದ್ವಿಜಾಃ ।
ಬ್ರಾಹ್ಮಣ್ಯಾಂ ವೈಶ್ಯತೋ ಜಾತಃ ಕ್ಷತ್ತಾ ಭವತಿ ನಾಮತಃ ॥೨೧॥

ಅಸ್ಯಾಮನೇನ ಚೌರ್ಯೇಣ ಮ್ಲೇಚ್ಛೋ ವಿಪ್ರಾಃ ಪ್ರಜಾಯತೇ ।
ಜಾತೋ ವೈಶ್ಯಾನ್ನೃಪಾಯಾಂ ಯಃ ಶಾಲಿಕೋ ಮಾಗಧಶ್ಚ ಸಃ ॥೨೨॥

ಅಸ್ಯಾಮನೇನ ಚೌರ್ಯೇಣ ಪುಲಿಂದೋ ಜಾಯತೇ ಬುಧಾಃ ।
ಮಣಿಕಾರಸ್ತು ವೈಶ್ಯಾಯಾಂ ಚೌರ್ಯಾದ್ವೈಶ್ಯೇನ ಜಾಯತೇ ॥೨೩॥

ಕ್ಷತ್ರಿಯಸ್ತ್ರೀಯಲ್ಲಿ ವೈಶ್ಯನಿಂದ ಕಳ್ಳತನದಲ್ಲಿ ಹುಟ್ಟಿದವನು ಭೋಜನೆನಿಸುವನು. ವೈಶ್ಯಸ್ತ್ರೀಯನ್ನು ಕ್ಷತ್ರಿಯನು ವಿವಾಹವಾಗಿ ಅವಳಲ್ಲಿ ಹುಟ್ಟಿದವನು ಮಾಹಿಷ್ಯ ಅಥವಾ ಅಂಬಷ್ಠ ಎನಿಸುವನು. ಕಳ್ಳತನದಿಂದ ಹುಟ್ಟಿದವನು ಅವಿರನೆನಿಸುವನು. ॥೧೯-೨೦॥

ವಿವಾಹವಿಲ್ಲದೆ ಕ್ಷತ್ರಿಯನಿಂದ ಶೂದ್ರಸ್ತ್ರೀಯಲ್ಲಿ ಹುಟ್ಟಿದವನು ಶೂಲಿಕನೆನಿಸುವನು. ಬ್ರಾಹ್ಮಣಸ್ತ್ರೀಯಲ್ಲಿ ವೈಶ್ಯನಿಂದ ಹುಟ್ಟಿದವನು ಕ್ಷತ್ತನೆನಿಸುವನು. ॥೨೧॥

ಕಳ್ಳತನದಿಂದ ಬ್ರಾಹ್ಮಣಸ್ತ್ರೀಯಲ್ಲಿ ವೈಶ್ಯನಿಂದ ಹುಟ್ಟಿದವನು ಮ್ಲೇಚ್ಛನಾಗುವನು. ವೈಶ್ಯನಿಂದ ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿದವನು ಶಾಲಿಕ, ಮಾಗಧ ಎನಿಸುವನು. ಕಳ್ಳತನದಿಂದ ಹುಟ್ಟಿದವನು ಪುಳಿಂದನೆನಿಸುವನು. ವೈಶ್ಯಸ್ತ್ರೀಯಲ್ಲಿ ಕಳ್ಳತನದಲ್ಲಿ ವೈಶ್ಯನಿಂದ ಹುಟ್ಟಿದವನು ಮಣಿಕಾರನೆನಿಸುವನು. ॥೨೨-೨೩॥

ಶೂದ್ರಸ್ತ್ರೀಯಲ್ಲಿ ವೈಶ್ಯನಿಂದ ಹುಟ್ಟಿದವನಿಗೆ ಉಗ್ರನೆಂದು ಹೆಸರು. ಕಳ್ಳತನದಿಂದ ಹುಟ್ಟಿದವನಿಗೆ ಕಟಿಕಾರನೆಂದು ಹೆಸರು. ॥೨೪॥

ಶೂದ್ರಾಯಾಂ ವೈಶ್ಯತೋ ಜಾತ ಉಗ್ರ ಇತ್ಯುಚ್ಯತೇ ಬುಧೈಃ ।
ಅಸ್ಯಾಮನೇನ ಚೌರ್ಯೇಣ ಕಟಕಾರಃ ಪ್ರಕೀರ್ತಿತಃ ॥೨೪॥

ಶೂದ್ರಾದ್ವಿಪ್ರಾಂಗನಾಯಾಂ ತು ಚಂಡಾಲೋ ನಾಮ ಜಾಯತೇ ।
ಅಸ್ಯಾಮನೇನ ಚೌರ್ಯೇಣ ಬಾಹ್ಯದಾಸಸ್ತು ಜಾಯತೇ ॥೨೫॥

ಜಾತಃ ಶೂದ್ರೇಣ ರಾಜನ್ಯಾಂ ವೈದೇಹಾಖ್ಯಶ್ಚ ಪುಲ್ಕಸಃ ।
ಅಸ್ಯಾಮನೇನ ಚೌರ್ಯೇಣ ವೇಲವಾಖ್ಯೋ ವಿಜಾಯತೇ ॥೨೬॥

ಜಾತಃ ಶೂದ್ರೇಣ ವೈಶ್ಯಾಯಾಂ ಭವೇತ್ಪತ್ತನ ಶಾಲಿಕಃ ।
ಅನೇನಾಸ್ಯಾಂ ಭವೇಚ್ಚಕ್ರೀ ಚೌರ್ಯಾದ್ಬ್ರಹ್ಮವಿದಾಂ ವರಾಃ ॥೨೭॥

ಚೌರ್ಯಾಚ್ಛೂದ್ರೇಣ ಶೂದ್ರಾಯಾಂ ಜಾತೋ ಮಾಣವಿಕೋ ಭವೇತ್ ।
ಅಂಬಷ್ಠಾಯಾಂ ಸಮುತ್ಪನ್ನಃ ಸವರ್ಣೇನ ದ್ವಿಜೋತ್ತಮಾಃ ॥೨೮॥

ಆಗ್ನೇಯನರ್ತಕಾಖ್ಯಃ ಸ ಇತಿ ಪ್ರೋಕ್ತೋ ಮಹಾತ್ಮಭಿಃ ।
ಕರಣಾಯಾಂ ತು ವಿಪ್ರೇಂದ್ರಾ ಮಾಹಿಷ್ಯಾದ್ಯೋ ವಿಜಾಯತೇ ॥೨೯॥
ಸ ತಕ್ಷಾ ರಥಕಾರಶ್ಚ ಪ್ರೋಕ್ತಃ ಶಿಲ್ಪೀ ಚ ವರ್ಧಕೀ ।

ಶೂದ್ರನಿಂದ ಬ್ರಾಹ್ಮಣಸ್ತ್ರೀಯಲ್ಲಿ ಹುಟ್ಟಿದವನು ಚಂಡಾಲನಾಗುವನು. ಕಳ್ಳತನದಿಂದ ಹುಟ್ಟಿದವನು ಬಾಹ್ಯದಾಸನೆನಿಸುವನು. ॥೨೫॥

ಶೂದ್ರನಿಂದ ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿದವನು ವೈದೇಹ, ಪುಲ್ಕಸನೆಂಬ ಹೆಸರನ್ನು ಹೊಂದುವನು. ಕಳ್ಳತನದಿಂದ ಹುಟ್ಟಿದರೆ ವೇಲವನೆನಿಸುವನು. ಶೂದ್ರನಿಂದ ವೈಶ್ಯಸ್ತ್ರೀಯಲ್ಲಿ ಹುಟ್ಟಿದವನು ಪತ್ತನಶಾಲಿಕನೆನಿಸುವನು. ಕಳ್ಳತನದಿಂದ ಹುಟ್ಟಿದರೆ ಚಕ್ರಿ ಎನಿಸುವನು. ॥೨೬-೨೭॥

ಕಳ್ಳತನದಿಂದ ಶೂದ್ರಸ್ತ್ರೀಯಲ್ಲಿ ಶೂದ್ರನಿಂದ ಹುಟ್ಟಿದವನು ಮಾಣವಿಕನೆನಿಸುವನು. ಅಂಬಷ್ಠಸ್ತ್ರೀಯಲ್ಲಿ (ಕ್ಷತ್ರಿಯನಿಂದ ವೈಶ್ಯಸ್ತ್ರೀಯಲ್ಲಿ ಹುಟ್ಟಿದವಳು) ಸವರ್ಣನಿಂದ (ಬ್ರಾಹ್ಮಣನಿಂದ ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿದವನು) ಆಗ್ನೇಯ, ನರ್ತಕ ಎಂಬ ಹೆಸರನ್ನು ಹೊಂದುವನು. ॥೨೮॥

ಕರಣಸ್ತ್ರೀಯಲ್ಲಿ (ಶೂದ್ರಸ್ತ್ರೀಯಲ್ಲಿ ವೈಶ್ಯನಿಂದ ಹುಟ್ಟಿದವನು) ಮಾಹಿಷ್ಯನಿಂದ (ಕ್ಷತ್ರಿಯನಿಂದ ವೈಶ್ಯಸ್ತ್ರೀಯಲ್ಲಿ ಹುಟ್ಟಿದವನು) ಹುಟ್ಟಿದವನು ತಕ್ಷ, ರಥಕಾರ, ಶಿಲ್ಪಿ, ವರ್ಧಕಿ ಎಂದೂ ಹೆಸರನ್ನು ಹೊಂದುವನು. ॥೨೯॥

ಲೋಹಕಾರಸ್ತು ಕರ್ಮಾರ ಇತಿ ವೇದಾರ್ಥವೇದಿಭಿಃ ॥೩೦॥

ವಿಪ್ರಾಯಾಮುಗ್ರತೋ ಜಾತಸ್ತಕ್ಷವೃತ್ತಿಃ ಪ್ರಕೀರ್ತಿತಃ ।
ವೈಶ್ಯಾಯಾಂ ತೇನ ನಿಷ್ಪನ್ನಃ ಸಮುದ್ರೋ ನಾಮ ಜಾಯತೇ ॥೩೧॥

ಬ್ರಾಹ್ಮಣ್ಯಾಂ ಯೋ ನಿಷಾದೇನ ಜನಿತಃ ಸ ತು ನಾಪಿತಃ ।
ನೃಪಾಯಾಂ ಯೋ ನಿಷಾದೇನ ಜಾತೋಽಧೋ ನಾಪಿತಃ ಸ್ಮೃತಃ ॥೩೨॥

ವಿಪ್ರಾಯಾಂ ನಾಪಿತಾಜ್ಜಾತೋ ವೇಣುಕಃ ಪರಿಕೀರ್ತಿತಃ ।
ರಾಜ್ಞ್ಯಾಂ ಯೋ ಜನಿತಸ್ತೇನ ಕರ್ಮಕಾರಃ ಸ ಉಚ್ಯತೇ ॥೩೩॥

ದ್ವಿಜೋತ್ತಮಾಯಾಂ ದೌಷ್ಯಂತಾದ್ಭಾಗಲಬ್ಧಃ ಪ್ರಜಾಯತೇ ।
ವೈಶ್ಯಾಯಾಂ ತು ನಿಷಾದೇನ ಸುನಿಷಾದೋಽಭಿಜಾಯತೇ ॥೩೪॥

ಬ್ರಾಹ್ಮಣ್ಯಾಂ ಯೋ ಮುನಿಶ್ರೇಷ್ಠಾ ವೈದೇಹೇನ ಪ್ರಜಾಯತೇ ।
ಸ ನಾಮ್ನಾ ರಜಕೋ ಜ್ಞೇಯಃ ಪಂಡಿತೈಃ ಪಂಡಿತೋತ್ತಮಾಃ ॥೩೫॥

ವೇದವನ್ನು ತಿಳಿದವರು ಇವನನ್ನು ಲೋಹಕಾರನೆಂದೂ, ಕರ್ಮಾರನೆಂದೂ ಹೇಳುವರು. ॥೩೦॥

ಶೂದ್ರಸ್ತ್ರೀಯಲ್ಲಿ ವೈಶ್ಯನಿಂದ ಹುಟ್ಟಿದವನು ಉಗ್ರನೆನಿಸುವನು. ಇವನಿಂದ ಬ್ರಾಹ್ಮಣಸ್ತ್ರೀಯಲ್ಲಿ ಹುಟ್ಟಿದವನು ತಕ್ಷನೆನಿಸುವನು. ವೈಶ್ಯಸ್ತ್ರೀಯಲ್ಲಿ ಹುಟ್ಟಿದವನು ಸಮುದ್ರನೆನಿಸುವನು. ॥೩೧॥

ಬ್ರಾಹ್ಮಣಸ್ತ್ರೀಯಲ್ಲಿ ನಿಷಾದನಿಂದ ಹುಟ್ಟಿದವನು ನಾಪಿತನಾಗುವನು. ನಿಷಾದನಿಂದ ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿದವನು ಅಧೋನಾಪಿತನಾಗುವನು. ಬ್ರಾಹ್ಮಣಸ್ತ್ರೀಯಲ್ಲಿ ನಾಪಿತನಿಂದ ಹುಟ್ಟಿದವನು ವೇಣುಕನೆನಿಸುವನು. ಕ್ಷತ್ರಿಯ ಸ್ತ್ರೀಯಲ್ಲಿ ಹುಟ್ಟಿದವನು ಕರ್ಮಾರನಾಗುವನು. ॥೩೨-೩೩॥

ಬ್ರಾಹ್ಮಣಸ್ತ್ರೀಯಲ್ಲಿ ದೌಷ್ಯಂತನಿಂದ ಹುಟ್ಟಿದವನು ಭಾಗಲಬ್ಧನೂ, ವೈಶ್ಯ ಸ್ತ್ರೀಯಲ್ಲಿ ನಿಷಾದನಿಂದ ಹುಟ್ಟಿದವನು ಸುನಿಷಾದನೂ, ಬ್ರಾಹ್ಮಣಸ್ತ್ರೀಯಲ್ಲಿ ವೈದೇಹ ನಿಂದ ಹುಟ್ಟಿದವನು ರಜಕನೂ, ಎನಿಸುವನು. ॥೩೪-೩೫॥

ದ್ವಿಜೋತ್ತಮಾಯಾಂ ಚಂಡಾಲಾದ್ಯಃ ಪುಮಾನ್ ಜಾಯತೇ ಭುವಿ ।
ಶ್ವಪಚಃ ಸ ತು ವಿಜ್ಞೇಯಃ ಸರ್ವಶಾಸ್ತ್ರವಿಶಾರದೈಃ ॥೩೬॥

ಶ್ವಪಚಾದ್ವಿಪ್ರಕನ್ಯಾಯಾಂ ಗುಹಕೋ ಜಾಯತೇ ಸುತಃ ।
ವೈಶ್ಯಾಯಾಂ ಯಸ್ತು ಚಂಡಾಲಾಜ್ಜಾತೋ ದಂತಕವೇಲಕಃ ॥೩೭॥

ಜನಿತೋಽನೇನ ಶೂದ್ರಾಯಾಂ ವಿಪ್ರಾ ಆಶ್ರಮ(ಯ)ಕಃ ಸ್ಮೃತಃ ।
ಪ್ರತಿಲೋಮನಿಷಾದಾದ್ಯಃ ಶೂದ್ರಾಯಾಂ ಸ ತು ಭೈರವಃ ॥೩೮॥

ಶೂದ್ರಾಯಾಂ ಮಾಗಧಾಜ್ಜಾತಃ ಕುಕುಂದಃ ಪ್ರೋಚ್ಯತೇ ಬುಧೈಃ ।
ನೃಪಾಯಾಂ ಮಾಗಧಾಜ್ಜಾತಃ ಖನಕಃ ಪರಿಕೀರ್ತಿತಃ ॥೩೯॥

ಖನಕಾದ್ರಾಜಕನ್ಯಾಯಾಮುದ್ಬಂಧೋ ನಾಮ ಜಾಯತೇ ।
ಅಯೋಗವೇನ ಬ್ರಾಹ್ಮಣ್ಯಾಂ ಚರ್ಮಕಾರಃ ಪ್ರಜಾಯತೇ ॥೪೦॥

ವಿಪ್ರವ್ರಾತ್ಯಾತ್ತು ವಿಪ್ರಾಯಾಂ ಬಂದಿಕೋ ನಾಮ ಜಾಯತೇ ।
ಕ್ಷತ್ರವ್ರಾತ್ಯಾನ್ನೃಪಾಯಾಂ ತು ಖಲ್ಲೋ ಮತ್ತಶ್ಚ ಮಲ್ಲಕಃ ॥೪೧॥

ಬ್ರಾಹ್ಮಣಸ್ತ್ರೀಯಲ್ಲಿ ಚಂಡಾಲನಿಂದ ಶ್ವಪಚನೂ, ಶ್ವಪಚನಿಂದ ಬ್ರಾಹ್ಮಣ ಸ್ತ್ರೀಯಲ್ಲಿ ಗುಹಕನೂ ಹುಟ್ಟುವರು. ॥೩೬॥

ಚಂಡಾಲನಿಂದ ವೈಶ್ಯಸ್ತ್ರೀಯಲ್ಲಿ ಹುಟ್ಟಿದವನು ದಂತಕವೇಲಕನೆನಿಸುವನು. ಇವನಿಂದಲೇ ಶೂದ್ರಸ್ತ್ರೀಯಲ್ಲಿ ಹುಟ್ಟಿದವನು ಆಶ್ರಮ(ಯ)ಕನೆನಿಸುವನು. ಪ್ರತಿಲೋಮನಿಷಾದನಿಂದ ಶೂದ್ರಸ್ತ್ರೀಯಲ್ಲಿ ಹುಟ್ಟಿದವನು ಭೈರವನೆನಿಸುವನು. ॥೩೭-೩೮॥

ಶೂದ್ರಸ್ತ್ರೀಯಲ್ಲಿ ಮಾಗಧನಿಂದ ಕುಕುಂದನೂ, ಕ್ಷತ್ರಿಯ ಸ್ತ್ರೀಯಲ್ಲಿ ಮಾಗಧನಿಂದ ಖನಕನೂ, ಖನಕನಿಂದ ಕ್ಷತ್ರಿಯಸ್ತ್ರೀಯಲ್ಲಿ ಉದ್ಬಂಧನೂ, ಅಯೋಗವನಿಂದ ಬ್ರಾಹ್ಮಣಸ್ತ್ರೀಯಲ್ಲಿ ಚಮ್ಮಾರನೂ ಹುಟ್ಟುವರು. ॥೩೯-೪೦॥

ಪ್ರತಿಲೋಮಕ್ರಮದಲ್ಲಿ ಹುಟ್ಟಿದ ಬ್ರಾಹ್ಮಣವ್ರಾತ್ಯನಿಂದ ಬ್ರಾಹ್ಮಣಸ್ತ್ರೀಯಲ್ಲಿ ಹುಟ್ಟಿದವನು ಬಂದಿಕನೆನಿಸುವನು. ಕ್ಷತ್ರಿಯವ್ರಾತ್ಯನಿಂದ ಕ್ಷತ್ರಿಯಸ್ತ್ರೀಯಲ್ಲಿ ಹುಟ್ಟಿದವನು ಖಲ್ಲ ಮತ್ತು ಮಲ್ಲಕ ಎಂಬ ಹೆಸರುಗಳನ್ನು ಹೊಂದುವನು. ॥೪೧॥

ಮಲ್ಲಾತ್ತು ಪಿಚ್ಛಲಸ್ತೇನ ನಟಾಖ್ಯೋ ಜಾಯತೇ ಭುವಿ ।
ನಟಾತ್ಕರಣಸಂಜ್ಞಸ್ತು ಕರಣಾತ್ಕರ್ಮಸಂಜ್ಞಿತಃ ॥೪೨॥

ತೇನ ದ್ರಮಿಲ ಉತ್ಪನ್ನೋ ನೃಪಾಯಾಂ ವೇದವಿತ್ತಮಾಃ ।
ವೈಶ್ಯವ್ರಾತ್ಯಾತ್ತು ವೈಶ್ಯಾಯಾಂ ಸುಧನ್ವಾ ಜಾಯತೇ ದ್ವಿಜಾಃ ॥೪೩॥

ಅನೇನಾವಾರ್ಯ ಸಂಜ್ಞಸ್ತು ಭಾರುಷೋ ಭಾರುಷಾದಪಿ ।
ದ್ವಿಜನ್ಮಾ ಜಾಯತೇ ತಸ್ಮಾನ್ಮೈತ್ರೋ ಮೈತ್ರಾತ್ತು ಸಾತ್ವತಃ ॥೪೪॥

ಮೈತ್ರಾದ್ವೈದೇಹತೋ ಜಾತಃ ಸಮಾತಂಗಶ್ಚ ಕೀರ್ತಿತಃ ।
ಮಾತಂಗಾಜ್ಜಾಯತೇ ಸೂತಃ ಸೂತಾದ್ದಸ್ಯುಃ ಪ್ರಜಾಯತೇ ॥೪೫॥

ದಸ್ಯೋರ್ಜಾತೋ ಮುನಿಶ್ರೇಷ್ಠಾ ಮಾಲಾಕಾರಃ ಸಮಾಖ್ಯಯಾ ।
ಪ್ರತಿಲೋಮನಿಷಾದೇನ ಕೈವರ್ತಾಖ್ಯೋ ವಿಜಾಯತೇ ॥೪೬॥

ತಿ(ನೀ)ಲಕಾರಿಸ್ತ್ರಿಯಾಂ ಜಾತ ಆಯೋಗೇನ ದ್ವಿಜೋತ್ತಮಾಃ ।
ನೀಲಾದಿವರ್ಣ ವಿಕ್ರೇತಾ ನಾಮ್ನಾ ವೇದಾರ್ಥವಿತ್ತಮಾಃ ॥೪೭॥

ವೇದಜ್ಞರಲ್ಲಿ ಶ್ರೇಷ್ಠರೇ, ಕ್ಷತ್ರಿಯ ಸ್ತ್ರೀಯಲ್ಲಿ ಮಲ್ಲನಿಂದ ಪಿಚ್ಛಲನೂ, ಪಿಚ್ಛಲನಿಂದ ನಟನೂ, ನಟನಿಂದ ಕರಣನೂ, ಕರಣನಿಂದ ಕರ್ಮನೂ, ಕರ್ಮನಿಂದ ದ್ರಮಿಲನೂ ಹುಟ್ಟುವರು. ॥೪೨॥

ವೈಶ್ಯಸ್ತ್ರೀಯಲ್ಲಿ ವೈಶ್ಯವ್ರಾತ್ಯನಿಂದ ಸುಧನ್ವನೂ, ಸುಧನ್ವನಿಂದ ಆವಾರ್ಯನೂ, ಭಾರುಷನೂ, ಭಾರುಷನಿಂದ ದ್ವಿಜನ್ಮನೂ, ದ್ವಿಜನ್ಮನಿಂದ ಮೈತ್ರನೂ, ಮೈತ್ರನಿಂದ ಸಾತ್ವತನೂ ಹುಟ್ಟುವರು. ॥೪೩-೪೪॥

ವೈಶ್ಯಸ್ತ್ರೀಯಲ್ಲಿ ಮೈತ್ರನಿಂದ ವೈದೇಹನು ಹುಟ್ಟುವನು. ಅವನಿಗೆ ಮಾತಂಗನೆಂದು ಹೆಸರು. ಮಾತಂಗನಿಂದ ಸೂತನೂ, ಸೂತನಿಂದ ದಸ್ಯುವೂ ಹುಟ್ಟುವರು. ॥೪೫॥

ದಸ್ಯುವಿನಿಂದ ಮಾಲಾಕಾರನೂ, ಪ್ರತಿಲೋಮನಿಷಾದನಿಂದ ಕೈವರ್ತನೂ, ಹುಟ್ಟುವರು. ॥೪೬॥

ಆಯೋಗವನೆಂಬುವವನಿಂದ ಗಾಣಗಿತ್ತಿಯಲ್ಲಿ ಹುಟ್ಟಿದವನು ಬಣ್ಣಗಳನ್ನು

ಕಾರೌ ಚಾರುಸಮಾಖ್ಯಾಯಾಂ ನಿಷಾದೇನ ಮುನೀಶ್ವರಾಃ ।
ಚರ್ಮಜೀವೀ ಸಮುತ್ಪನ್ನಃ ಸರ್ವವಿಜ್ಞಾನಸಾಗರಾಃ ॥೪೮॥

ಯುಷ್ಮಾಕಂ ಸಂಗ್ರಹೇಣೈವ ಮಯೋಕ್ತೋ ಜಾತಿನಿರ್ಣಯಃ ।
ಯಥಾಽಗಸ್ತ್ಯಾಚ್ಛ್ರುತಃ ಪೂರ್ವಂ ಸದ್ಗುರೋರನುಶಾಸನಾತ್ ॥೪೯॥

ಸ್ವಜಾತ್ಯುಕ್ತಂ ಯಥಾಶಕ್ತಿ ಕುರುತೇ ಕರ್ಮ ಯಃ ಪುಮಾನ್ ।
ಮುಕ್ತಿಸ್ತಸ್ಯೈವ ಸಂಸಾರಾದಿತಿ ವೇದಾನುಶಾಸನಂ ॥೫೦॥

ಸರ್ವೇಷಾಂ ಜನ್ಮನಾ ಜಾತಿರ್ನಾನ್ಯಥಾ ಕರ್ಮಕೋಟಿಭಿಃ ।
ಪಶ್ವಾದೀನಾಂ ಯಥಾ ಜಾತಿರ್ಜನ್ಮನೈವ ನ ಚಾನ್ಯಥಾ ॥೫೧॥

ಸಾಽಪಿ ಸ್ಥೂಲಸ್ಯ ದೇಹಸ್ಯ ಭೌತಿಕಸ್ಯ ನ ಚಾತ್ಮನಃ ।
ತಥಾಽಪಿ ದೇಹೆ(ಹೊ)ಽಹಂಮಾನಾದಾತ್ಮಾ ವಿಪ್ರಾದಿಸಂಜ್ಞಿತಃ ॥೫೨॥

ಮಾರುವವನಾಗುವನು. ಚಾರು ಎಂಬ ಹೆಸರಿನ ಕಾರುಜಾತಿಯ ಸ್ತ್ರೀಯಲ್ಲಿ ನಿಷಾದನಿಂದ ಹುಟ್ಟಿದವನು ಚರ್ಮವನ್ನು ಮಾರಿ ಜೀವಿಸುವನು. ॥೪೭-೪೮॥

ಎಲೈ ಮುನಿಗಳೇ, ಹಿಂದೆ ಅಗಸ್ತ್ಯಮಹರ್ಷಿಯು ಗುರುವಿನ ಅನುಗ್ರಹದಿಂದ ಕೇಳಿದುದನ್ನೇ ನಿಮಗೆ ಸಂಕ್ಷೇಪವಾಗಿ ಹೇಳಿರುವೆನು. ॥೪೯॥

ಯಾವ ಮನುಜನು ತನ್ನ ಜಾತಿಗೆ ಗೊತ್ತುಮಾಡಿದ ಕರ್ಮವನ್ನು ತನ್ನ ಶಕ್ತಿಗನುಸಾರವಾಗಿ ಮಾಡಿಕೊಂಡು ಬರುವನೋ ಅವನಿಗೆ ಸಂಸಾರದುಃಖದಿಂದ ಬಿಡುಗಡೆಯಾಗುವುದೆಂದು ವೇದವು ಅಪ್ಪಣೆಮಾಡಿರುವುದು. ॥೫೦॥

ಪಶುಪಕ್ಷಿಮೃಗಾದಿಗಳಿಗೆ ಹುಟ್ಟಿನಿಂದಲೇ ಹೇಗೆ ಜಾತಿಯು ನಿರ್ಣಯವಾಗಿರುವುದೋ, ಹಾಗೆಯೇ ಸಕಲ ಮನುಜರಿಗೂ ಹುಟ್ಟಿನಿಂದಲೇ ಜಾತಿನಿರ್ಣಯವನ್ನು ಮಾಡಬೇಕು. ಅನೇಕ ಕರ್ಮಗಳಿಂದಲೂ ಅಲ್ಲವು. ॥೫೧॥

ಜಾತಿಯು ಪಂಚಭೂತಗಳಿಂದ ಹುಟ್ಟಿದ ಸ್ಥೂಲದೇಹಕ್ಕೇ ಹೊರತು ಸೂಕ್ಷ್ಮದೇಹಕ್ಕಾಗಲೀ, ಆತ್ಮನಿಗಾಗಲೀ ಇರುವುದಿಲ್ಲ. ಹಾಗಾದರೂ ಸ್ಥೂಲದೇಹವೇ ನಾನು ಎಂಬ ಅಧ್ಯಾಸದಿಂದ ಜಾತಿಯಿಲ್ಲದ ಆತ್ಮನಿಗೂ ಜಾತಿವ್ಯವಹಾರವು ಬಂದಿರುವುದು. ॥೫೨॥

ಸ್ವಸ್ವರೂಪಾಽಪರಿಜ್ಞಾನಾದ್ದೇಹೇಽಹಂಮಾನ ಆತ್ಮನಃ ।
ಅಪರಿಜ್ಞಾನಮಸ್ಯಸ್ಯ ಬ್ರಾಹ್ಮಣಾ ವೇದವಿತ್ತಮಾಃ ॥೫೩॥

ಆದಿಮನ್ನಭವತ್ಯಂತಸ್ತಸ್ಯ ಜ್ಞಾನೇನ ಸುವ್ರತಾಃ ।
ಜ್ಞಾನಂ ವೇದಾಂತವಿಜ್ಞಾನಮಿತಿ ಸದ್ಗುರುನಿರ್ಣಯಃ ॥೫೪॥

ಯಸ್ಯಾಪರೋಕ್ಷವಿಜ್ಞಾನಮಸ್ತಿ ವೇದಾಂತವಾಕ್ಯಜಂ ।
ತಸ್ಯ ನಾಸ್ತಿ ನಿಯೋಜ್ಯತ್ವಮಿತಿ ವೇದಾರ್ಥನಿರ್ಣಯಃ ॥೫೫॥

ಆತ್ಮನಿಗೆ ಸ್ಥೂಲದೇಹವೇ ನಾನೆಂಬ ಅಧ್ಯಾಸವು ಹೇಗೆ ಬಂದಿತೆಂದರೆ ಈ ಅಧ್ಯಾಸಕ್ಕೆ ಅಜ್ಞಾನವೇ ಕಾರಣವು. ಸ್ವಸ್ವರೂಪವನ್ನು ತಿಳಿಯದಿರುವುದೇ ಅಜ್ಞಾನವು. ಇದು ಅನಾದಿಯಾದುದು. ಆದರೂ ಜ್ಞಾನದಿಂದ ಇದು ನಾಶಹೊಂದುವುದು. ಅನಾದಿಯಾದ ಆತ್ಮನಂತೆ ಇದು ಅನಂತವಲ್ಲ. ಅನಂತತ್ವ ಆತ್ಮನಿಗೆ ಹೊರತು ಮತ್ತಾವ ವಸ್ತುವಿಗೂ ಇಲ್ಲ. ಘಟಪ್ರಾಗಭಾವವು ಅನಾದಿಯಾದರೂ ಘಟವು ಉತ್ಪತ್ತಿಯಾದೊಡನೆ ನಾಶಹೊಂದುವಂತೆ, ಅಜ್ಞಾನವು ಅನಾದಿಯಾದರೂ, ಜ್ಞಾನೋತ್ಪತ್ತಿಯಾದೊಡನೆ ನಾಶಹೊಂದುವುದು. ಆ ಜ್ಞಾನವು ಯಾವುದೆಂದರೆ ನಿಜವನ್ನು ಕಂಡವರೂ ಇದ್ದುದನ್ನು ಇದ್ದಂತೆ ಹೇಳುವವರೂ ಆದ ವ್ಯಾಸಾದಿ ಸದ್ಗುರುಗಳು ನಿರ್ಣಯಿಸಿರುವ ವೇದಾಂತಜ್ಞಾನವೇ ಜ್ಞಾನವೆನಿಸುವುದು.||೫೩-೫೪||

ಯಾವ ಮನುಷ್ಯನಿಗೆ ವೇದಾಂತವಾಕ್ಯಗಳಿಂದ ಅಪರೋಕ್ಷಜ್ಞಾನವುಂಟಾಗಿರುವುದೋ ಅವನಿಗೆ ಜಾತಿಸಂಬಂಧವಾದ ವಿಧಿನಿಷೇಧಗಳಿರುವುದಿಲ್ಲ. "ಸ ನ ಸಾಧುನಾ ಕರ್ಮಣಾ ಭೂಯಾನ್ನೋ ಏವಾಸಾಧುನಾ ಕನೀಯಾನ್" ಎಂಬ ಬೃಹದಾರಣ್ಯಕೋಪನಿಷತ್ತಿನಲ್ಲಿ ಜ್ಞಾನಿಯು ಮಾಡುವ ಸತ್ಕರ್ಮದಿಂದ ಗೌರವವೂ, ದುಷ್ಕರ್ಮದಿಂದ ಅಗೌರವವೂ ಅವನಿಗಿರುವುದಿಲ್ಲವೆಂದು ಹೇಳಿರುವುದು. "ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ ನ ಕರ್ಮಣಾ ವರ್ಧತೇ ನೋ ಕನೀಯಾನ್" ಎಂದು ಕಠೋಪನಿಷತ್ತಿನಲ್ಲಿ ಬ್ರಹ್ಮಜ್ಞಾನಿಗೆ ಪರಮಾತ್ಮ ಜ್ಞಾನವೇ ಶಾಶ್ವತವಾದ ಮಹಿಮೆಯು. ಅವನು ಕರ್ಮದಿಂದ ಹೆಚ್ಚುವುದೂ ಇಲ್ಲ. ತಗ್ಗುವುದೂ ಇಲ್ಲ. ಎಂದು ಹೇಳಿರುವುದು. ||೫೫||

ವರ್ಣಾನಾಮಾಶ್ರಮಾಃ ಪ್ರೋಕ್ತಾಃ ಸರ್ವಶಾಸ್ತ್ರಾರ್ಥವೇದಿಭಿಃ ।
ತೇಷಾಂ ವರ್ಣಾಶ್ರಮಸ್ಥಾನಾಂ ವೇದಕಿಂಕರತಾ ಸದಾ ॥೫೬॥

ಅಸ್ತಿ ಚೇದ್ಬ್ರಹ್ಮವಿಜ್ಞಾನಂ ಸ್ತ್ರಿಯಾ ವಾ ಪುರುಷಸ್ಯ ವಾ ।
ವರ್ಣಾಶ್ರಮಸಮಾಚಾರಸ್ತಯೋರ್ನಾಸ್ತ್ಯೇವ ಸರ್ವದಾ ॥೫೭॥

ಅವಿಜ್ಞಾಯಾತ್ಮವಿಜ್ಞಾನಂ(ಸದ್ಭಾವಂ) ಸ್ವವರ್ಣಾಶ್ರಮಮಾಸ್ತಿಕಾಃ ।
ಜಹಾತಿ ಯಃ ಸ ಮೂಢಾತ್ಮಾ ಪತತ್ಯೇವ ನ ಸಂಶಯಃ ॥೫೮॥

ತಸ್ಮಾತ್ಸರ್ವಪ್ರಯತ್ನೇನ ಶ್ರದ್ಧಯಾ ಸಹ ಸರ್ವದಾ ।
ಕರ್ತವ್ಯೋ ವರ್ಣಿಭಿರ್ಧರ್ಮಃ ಶ್ರೌತಃ ಸ್ಮಾರ್ತಶ್ಚ ಮುಕ್ತಯೇ॥೫೯॥

ಸಮಸ್ತ ಶಾಸ್ತ್ರಾರ್ಥಗಳನ್ನೂ ತಿಳಿದ ವಿದ್ವಾಂಸರು ಬ್ರಾಹ್ಮಣಾದಿವರ್ಣಗಳಿಗೆ ಬ್ರಹ್ಮಚರ್ಯಾದಿ ಆಶ್ರಮಗಳು ಇರುವುವೆಂದು ಹೇಳಿರುವರು. ತತ್ವಜ್ಞಾನವಿಲ್ಲದವರಿಗೆ ಈ ವರ್ಣಾಶ್ರಮಧರ್ಮಗಳು ವಿಧಾಯಕವಾಗಿರುವುದರಿಂದ ಅವರೇ ವೇದೋಕ್ತವಾದ ಕರ್ಮಗಳಿಗೆ ಅಧಿಕಾರಿಗಳು. ಅವರು ಆವಶ್ಯಕವಾಗಿ ವೇದೋಕ್ತವಾದ ಕರ್ಮಗಳನ್ನು ಮಾಡಲೇಬೇಕು. ||೫೬||

ದೇಹವೇ ನಾನೆಂಬ ಅಧ್ಯಾಸರೂಪವಾದ ಅಜ್ಞಾನವು ಹೆಂಗುಸಿಗಾಗಲೀ, ಗಂಡಸಿಗಾಗಲೀ, ಇಲ್ಲದಿದ್ದರೆ, ಅಹಂ ಬ್ರಹ್ಮಾಸ್ಮಿ ಎಂಬ ಜ್ಞಾನವಿದ್ದರೆ, ಅದೇ ಬ್ರಹ್ಮಜ್ಞಾನವೆನಿಸುವುದು. ಅಂಥವರಿಗೆ ಯಾವಾಗಲೂ ವರ್ಣಾಶ್ರಮಗಳಿಗೆ ಸಂಬಂಧಪಟ್ಟ ಆಚಾರಗಳು ನಿರ್ಬಂಧದಿಂದ ವಿಹಿತವಾಗಿ ಇರುವುದಿಲ್ಲ. ||೫೭||

ಯಾವನು ಆತ್ಮಜ್ಞಾನವನ್ನರಿಯದೆ ವರ್ಣಾಶ್ರಮಧರ್ಮಗಳನ್ನೂ ಬಿಡುವನೋ ಅವನು ಅವಿವೇಕಿಯಾಗಿ ಪಾಪಿಯಾಗುವನು. ||೫೮||

ಆದುದರಿಂದ ಮುಕ್ತಿಹೊಂದಬೇಕಾದರೆ ಸಮಸ್ತ ವರ್ಣದವರೂ, ಶ್ರುತಿಸ್ಮೃತಿಗಳಲ್ಲಿ ಹೇಳಿದ ಧರ್ಮವನ್ನು ಸರ್ವಪ್ರಯತ್ನದಿಂದಲೂ, ಯಾವಾಗಲೂ ಭಕ್ತಿಯಿಂದ ನಡೆಯಿಸಬೇಕಾಗಿರುವುದು. ||೫೯||

ಇತ್ಯಾಕರ್ಣ್ಯ ಮುನೀಶ್ವರಾಃ ಶ್ರುತಿಗತಂ ಸೂತೋಪದಿಷ್ಟಂ ಪದಂ।
ಸತ್ಯಾನಂದಸುಖಪ್ರಕಾಶಮುಪರಂ ಬ್ರಹ್ಮಾತ್ಮವಿಜ್ಞಾನದಂ ॥
ಶ್ರುತ್ವಾ ಜಾತಿವಿನಿರ್ಣಯಂ ಸಕಲಲೋಕಾಂಭೋಧಿಪಾರಂ ಸದಾ ।
ಸತ್ಯಾಸ್ತೇಯದಯಾರ್ಜವಾದಿಸಹಿತಾಸ್ತುಷ್ಟಾ ಬಭೂವುರ್ಭೃಶಂ ॥೬೦॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ
ಜಾತಿನಿರ್ಣಯೋ ನಾಮ ದ್ವಾದಶೋಽಧ್ಯಾಯಃ ಸಮಾಪ್ತಃ

ನೈಮಿಷಾರಣ್ಯವಾಸಿಗಳಾದ ಮುನಿಗಳು ಸೂತನು ಹೇಳಿದ ವೇದೋಕ್ತವಾದ, ಸತ್ಯಸುಖಾನಂತಪ್ರಕಾಶಸ್ವರೂಪವಾದ ಬ್ರಹ್ಮಜ್ಞಾನವನ್ನು ಉಂಟುಮಾಡುವ, ಜಾತಿನಿರ್ಣಯಸ್ವರೂಪವಾದ, ಮಾತುಗಳನ್ನು ಕೇಳಿ ಸತ್ಯ, ಅಸ್ತೇಯ, ದಯಾ, ಸರಳತೆ, ಮುಂತಾದ ಸದ್ಗುಣಗಳಿಂದ ಕೂಡಿದವರಾಗಿ ವಿಶೇಷವಾಗಿ ಸಂತೋಷಪಟ್ಟರು. ॥೬೦॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ
ಚಾತುರ್ವರ್ಣ್ಯದ ನಿರ್ಣಯುವನ್ನು ವಿವರಿಸಿರುವ
ಹನ್ನೆರಡನೆಯ ಅಧ್ಯಾಯುವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಶಿವಮಾಹಾತ್ಮ್ಯಖಂಡಂ

॥ ತ್ರಯೋದಶೋಽಧ್ಯಾಯಃ ॥

ಹದಿಮೂರನೆಯ ಅಧ್ಯಾಯವು

॥ ನೈಮಿಷೀಯಾ ಊಚುಃ ॥

ಭಗವಂಸ್ತೀರ್ಥಮಾಹಾತ್ಮ್ಯಂ ಸರ್ವಶಾಸ್ತ್ರಾರ್ಥವಿತ್ತಮ ।
ಬ್ರೂಹಿ ಕಾರುಣ್ಯತೋಽಸ್ಮಾಕಂ ಹಿತಾಯ ಪ್ರಾಣಿನಾಂ ಮುದಾ ॥೧॥

॥ ಸೂತ ಉವಾಚ ॥

ವದಾಮಿ ತೀರ್ಥಮಾಹಾತ್ಮ್ಯಂ ಸಂಗ್ರಹೇಣ ಮುನೀಶ್ವರಾಃ ।
ಶೃಣುಧ್ವಂ ಸರ್ವಶಾಸ್ತ್ರೋಕ್ತಂ ಶ್ರದ್ಧಯಾ ಪರಯಾ ಸಹ ॥೨॥

ನೈಮಿಷಾರಣ್ಯವಾಸಿಗಳಾದ ಮುನಿಗಳು ಹೇಳಿದರು—ಮಹಾಮಹಿಮನಾದ ಸೂತನೇ, ನೀನು ಸಕಲ ಶಾಸ್ತ್ರಾರ್ಥಗಳನ್ನೂ ಬಲ್ಲವನು. ಸಕಲ ಪ್ರಾಣಿಗಳಿಗೂ ಹಿತವಾಗುವುದಕ್ಕಾಗಿ ದಯೆಯಿಟ್ಟು ನಮಗೆ ತೀರ್ಥಗಳ ಮಹಿಮೆಯನ್ನು ಹೇಳಬೇಕು. ಪ್ರಮಾದದಿಂದ ಕರ್ಮಗಳನ್ನು ಬಿಟ್ಟವರಿಗೆ ತೀರ್ಥಸೇವೆಯೇ ಪಾಪನಿವಾರಣೆಗೆ ಸುಲಭವಾದ ಮಾರ್ಗವೆಂದು ತೋರುವುದು, ಎಂದರು. ॥೧॥

ಸೂತನು ಹೇಳಿದನು—ಎಲೈ ಮುನಿಶ್ರೇಷ್ಠರೇ, ಸಮಸ್ತ ಶಾಸ್ತ್ರಗಳಲ್ಲಿಯೂ ಹೇಳಿರುವ ತೀರ್ಥಗಳ ಮಹಿಮೆಯನ್ನು ಸಂಗ್ರಹವಾಗಿ ಹೇಳುವೆನು. ಅತ್ಯಂತಾಸಕ್ತಿಯಿಂದ ಕೂಡಿದವರಾಗಿ ಕೇಳಿರಿ. ॥೨॥

ಗಂಗಾದ್ವಾರಂ ಮಹಾತೀರ್ಥಂ ಸರ್ವದೇವನಿಷೇವಿತಂ ।
ತತ್ರ ಸ್ನಾತ್ವಾ ರವೌ ಮೇಷೇ ಸ್ಥಿತೇಽಶ್ವಿನ್ಯಾಂ ಮುನೀಶ್ವರಾಃ ॥೩॥

ಯಥಾಶಕ್ತಿ ಧನಂ ದತ್ವಾ ಶ್ರದ್ಧಯಾ ಶಿವಯೋಗಿನೇ ।
ಉಪೋಷ್ಯ ಸರ್ವಪಾಪೇಭ್ಯೋ ಮುಚ್ಯತೇ ಮಾನವೋ ದ್ವಿಜಾಃ ॥೪॥

ಸೋಮತೀರ್ಥಮಿತಿ ಖ್ಯಾತಂ ಸೋಮನಾಥಸ್ಯ ಸನ್ನಿಧೌ ।
ಸಮುದ್ರೇ ಪಶ್ಚಿಮೇ ವಿಪ್ರಾಃ ಸ್ಥಿತಂ ಯೋಜನಮಾಯತಂ ॥೫॥

ವಿಸ್ತೀರ್ಣಂ ಯೋಜನಂ ವಿಪ್ರಾ ವಿಶ್ವೈರ್ದೇವೈರ್ನಿಷೇವಿತಂ ।
ಪರ್ವಣ್ಯಾದ್ರಾರ್ದಿನೇಽಷ್ಟಮ್ಯಾಂ ವ್ಯತೀಪಾತೇ ತಥಾ ದ್ವಿಜಾಃ ॥೬॥

ಅರ್ಕವಾರೇ ಚತುರ್ದಶ್ಯಾಂ ಸ್ನಾತ್ವಾ ದತ್ವಾಽತ್ರ ಭೋಜನಂ ।
ಪ್ರಣಮ್ಯ ಸೋಮನಾಥಾಖ್ಯಂ ಸೋಮಂ ಸೋಮವಿಭೂಷಣಂ ॥೭॥

ಉಪೋಷ್ಯ ರಜನೀಮೇಕಾಂ ಭಸ್ಮದಿಗ್ಧತನೂರುಹಃ ।
ಸರ್ವಪಾಪವಿನಿರ್ಮುಕ್ತಃ ಶಂಕರಂ ಯಾತಿ ಮಾನವಃ ॥೮॥

ಗಂಗಾದ್ವಾರವೆಂಬುದು ಒಂದು ದೊಡ್ಡತೀರ್ಥವು ಸಮಸ್ತದೇವತೆಗಳೂ ಆ ತೀರ್ಥಸೇವೆಯನ್ನು ಮಾಡುವರು. ಆ ತೀರ್ಥದಲ್ಲಿ ಸೂರ್ಯನು ಮೇಷರಾಶಿಯಲ್ಲಿದ್ದಾಗ ಅಶ್ವಿನೀನಕ್ಷತ್ರದದಿನ ಸ್ನಾನಮಾಡಿ ತಮ್ಮ ಶಕ್ತಿಗನುಸಾರವಾಗಿ, ಶಿವಧ್ಯಾನನಿಷ್ಠನಾದ ಬ್ರಾಹ್ಮಣನಿಗೆ ಯಥಾಶಕ್ತಿ ಧನವನ್ನು ದಾನಮಾಡಿ ಆ ದಿನ ಉಪವಾಸವನ್ನು ಮಾಡಿದರೆ ಸಮಸ್ತಪಾಪಗಳನ್ನೂ ಕಳೆದುಕೊಳ್ಳುವನು. ॥೩-೪॥

ಪಶ್ಚಿಮಸಮುದ್ರತೀರದಲ್ಲಿ ಒಂದು ಯೋಜನ ಉದ್ದವೂ, ಒಂದು ಯೋಜನ ಅಗಲವೂ ಉಳ್ಳ ಪ್ರದೇಶದಲ್ಲಿ ಸೋಮನಾಥೇಶ್ವರನ ಸಮೀಪದಲ್ಲಿ ಸೋಮತೀರ್ಥವೆಂಬ ಪ್ರಸಿದ್ಧವಾದ ತೀರ್ಥವಿರುವುದು ಸಮಸ್ತದೇವತೆಗಳೂ ಆ ತೀರ್ಥದ ಸೇವೆಯನ್ನು ಮಾಡುವರು. ಅಮಾವಾಸ್ಯಾ, ಪೂರ್ಣಿಮಾ, ಆದ್ರಾರ್ನಕ್ಷತ್ರ, ಅಷ್ಟಮೀ, ವ್ಯತೀಪಾತ, ಭಾನುವಾರ, ಚತುರ್ದಶೀ, ಈ ದಿನಗಳಲ್ಲಿ ಆ ತೀರ್ಥದಲ್ಲಿ ಸ್ನಾನಮಾಡಿ ಬ್ರಾಹ್ಮಣರಿಗೆ ಅನ್ನದಾನವನ್ನು ಮಾಡಿ, ಉಮಾದೇವೀಸಹಿತನೂ, ಚಂದ್ರಶೇಖರನೂ, ಆದ ಸೋಮನಾಥಸ್ವಾಮಿಗೆ ನಮಸ್ಕಾರವನ್ನು ಮಾಡಿ, ಮೈಗೆಲ್ಲಕ್ಕೂ ಭಸ್ಮಧಾರಣೆ

ವಾರಾಣಸ್ಯಾಂ ಮಹಾತೀರ್ಥಂ ನಾಮ್ನಾ ತು ಮಣಿಕರ್ಣಿಕಾ ।
ತತ್ರ ಸ್ನಾತ್ವಾ ಮಹಾಭಕ್ತ್ಯಾ ಪ್ರಾತರೇವ ಸಮಾಹಿತಃ ॥೯॥

ದೃಷ್ಟ್ವಾ ವಿಶ್ವೇಶ್ವರಂ ದೇವಂ ಕರುಣಾಸಾಗರಂ ಹರಂ ।
ಯಥಾಶಕ್ತ್ಯಾಽನ್ನಪಾನಾದಿ ದತ್ವಾ ಮುಕ್ತೋ ಭವೇನ್ನರಃ ॥೧೦॥

ಪ್ರಯಾಗಾಖ್ಯಂ ಮಹಾತೀರ್ಥಂ ಭವರೋಗಸ್ಯ ಭೇಷಜಂ ।
ಭರಣ್ಯಾಂ ಕೃತ್ತಿಕಾಯಾಂ ತು ರೋಹಿಣ್ಯಾಂ ವಾ ವಿಶೇಷತಃ ॥೧೧॥

ತತ್ರ ಸ್ನಾತ್ವಾ ರವೌ ಮೇಷೇ ವರ್ತಮಾನೇ ಮುನೀಶ್ವರಾಃ ।
ಯಥಾಶಕ್ತಿ ಧನಂ ದತ್ವಾ ವಿಮುಕ್ತೋ ಮಾನವೋ ಭವೇತ್ ॥೧೨॥

ಆರ್ದ್ರಾಯಾಂ ಮೃಗಶೀರ್ಷೇ ವಾ ಗಂಗಾಸಾಗರಸಂಗಮೇ ।
ಸ್ನಾತ್ವಾ ಮಧ್ಯಂದಿನೇ ದತ್ವಾ ಯಥಾಶಕ್ತಿ ಧನಂ ಮುದಾ ॥೧೩॥

ಮಾಡಿಕೊಂಡು ಒಂದು ದಿನ ಉಪವಾಸವನ್ನು ಮಾಡಿದರೆ ಮನುಜನು ಸಕಲ ಪಾಪಗಳನ್ನೂ ಕಳೆದುಕೊಂಡು ಶಿವನ ಸನ್ನಿಧಿಗೆ ಹೋಗುವನು. ॥೫-೬-೭-೮॥

ಕಾಶಿಯಲ್ಲಿ ಮಣಿಕರ್ಣಿಕೆ ಎಂಬ ಒಂದು ದೊಡ್ಡ ತೀರ್ಥವಿರುವುದು. ಆ ತೀರ್ಥದಲ್ಲಿ ಅತ್ಯಂತ ಭಕ್ತಿಯಿಂದ ಪ್ರಾತಃಕಾಲದಲ್ಲಿ ಸ್ನಾನವನ್ನು ಮಾಡಿ, ಏಕಾಗ್ರ ಚಿತ್ತದಿಂದ ವಿಶ್ವೇಶ್ವರನ ದರ್ಶನವನ್ನು ಮಾಡಿ, ಮನುಜನು ತನ್ನ ಶಕ್ತ್ಯನುಸಾರವಾಗಿ ಅನ್ನಪಾನಾದಿಗಳನ್ನು ದಾನಮಾಡಿದರೆ, ಸಮಸ್ತಪಾಪಪರಿಹಾರಕನೂ, ದಯಾನಿಧಿಯೂ, ಆದ ವಿಶ್ವೇಶ್ವರನ ಅನುಗ್ರಹದಿಂದ ಆ ಮನುಜನು ಮುಕ್ತನಾಗುವನು. ॥೯-೧೦॥

ಪ್ರಯಾಗಕ್ಷೇತ್ರದಲ್ಲಿರುವ ದೊಡ್ಡ ತೀರ್ಥವು ಸಮಸ್ತ ಸಾಂಸಾರಿಕವಾದ ರೋಗಗಳಿಗೆ ಔಷಧಪ್ರಾಯವಾದುದು. ಸೂರ್ಯನು ಮೇಷರಾಶಿಯಲ್ಲಿದ್ದಾಗ ಭರಣಿ, ಕೃತ್ತಿಕೆ, ರೋಹಿಣಿ, ಈ ನಕ್ಷತ್ರಗಳಲ್ಲಿ, ಆ ತೀರ್ಥದಲ್ಲಿ ಸ್ನಾನಮಾಡಿ ತನ್ನ ಶಕ್ತ್ಯನುಸಾರ ಧನವನ್ನು ದಾನಮಾಡಿದ ಮನುಷ್ಯನು ಸಂಸಾರಬಂಧದಿಂದ ಬಿಡುಗಡೆಯನ್ನು ಹೊಂದುವನು. ॥೧೧-೧೨॥

ಗಂಗಾಸಾಗರಸಂಗಮವೆಂಬ ತೀರ್ಥದಲ್ಲಿ, ಮಧ್ಯಾಹ್ನಕಾಲದಲ್ಲಿ, ಆರ್ದ್ರಾ, ಮತ್ತೂ, ಮೃಗಶಿರಾ ನಕ್ಷತ್ರದ ದಿನ ಸ್ನಾನಮಾಡಿ ಶಕ್ತ್ಯನುಸಾರ ದಾನಮಾಡಿದ

ಸರ್ವಪಾಪವಿನಿರ್ಮುಕ್ತಃ ಶಿವಸಾಯುಜ್ಯಮಾಪ್ನುಯಾತ್ ।
ನರ್ಮದಾ ಚ ಮಹಾತೀರ್ಥಂ ನರಕದ್ವಾರನಾಶಕಂ ॥೧೪॥

ಬ್ರಹ್ಮವಿಷ್ಣ್ವಾದಿಭಿರ್ನಿತ್ಯಂ ಸೇವಿತಂ ಶಂಕರೇಣ ಚ ।
ತತ್ರ ಸ್ನಾತ್ವಾ ಯಥಾಶಕ್ತಿ ಧನಂ ದತ್ವಾಽಽದರೇಣ ಚ ॥೧೫॥

ಬ್ರಹ್ಮಲೋಕಮವಾಪ್ನೋತಿ ನರೋ ನಾತ್ರ ವಿಚಾರಣಾ ।
ಯಮುನಾ ಚ ಮಹಾತೀರ್ಥಂ ಯಮೇನಾಪಿ ನಿಷೇವಿತಂ ॥೧೬॥

ತತ್ರ ಸ್ನಾತ್ವಾ ನರೋ ಭಕ್ತ್ಯಾ ರವೌ ವೃಷಭಸಂಸ್ಥಿತೇ ।
ವಿಶಾಖೇ ಸೂರ್ಯವಾರೇ ವಾ ದತ್ವಾ ವಿಪ್ರಾಯ ಭೋಜನಂ ॥೧೭॥

ಸರ್ವಪಾಪವಿನಿರ್ಮುಕ್ತಃ ಶಿವೇನ ಸಹ ಮೋದತೇ ।
ಸರಸ್ವತೀತಿ ವಿಖ್ಯಾತಾ ನದೀ ಸರ್ವವರಪ್ರದಾ ॥೧೮॥

ಮನುಷ್ಯನು ಸಮಸ್ತಪಾಪಗಳನ್ನೂ ಕಳೆದುಕೊಂಡು ಶಿವಸಾಯುಜ್ಯವನ್ನು ಪಡೆಯುವನು. ||೧೩||

ನರ್ಮದಾನದಿಯ ತೀರ್ಥವು ನರಕಮಾರ್ಗವನ್ನು ನಾಶಮಾಡುವ ದೊಡ್ಡ ತೀರ್ಥವು. ಪ್ರತಿದಿನವೂ ತ್ರಿಮೂರ್ತಿಗಳೂ ಅದರಲ್ಲಿ ಸ್ನಾನಮಾಡುವರು. ಮನುಷ್ಯನು ಆ ತೀರ್ಥಸ್ನಾನವನ್ನು ಮಾಡಿ ಪ್ರೀತಿಯಿಂದ ತನ್ನ ಶಕ್ತ್ಯನುಸಾರವಾಗಿ ದಾನಮಾಡಿದರೆ ಅವನಿಗೆ ಮೇಲಾದ ಬ್ರಹ್ಮಲೋಕಪ್ರಾಪ್ತಿಯಾಗುವುದು. ಈ ವಿಚಾರದಲ್ಲಿ ಸಂದೇಹವಿರುವುದಿಲ್ಲವು. ||೧೪-೧೫||

ಯಮುನಾನದಿಯ ತೀರ್ಥವು ಬಹುದೊಡ್ಡದು. ಯಮದೇವನೂ ಇದನ್ನು ಸೇವಿಸುವನು. ಆ ತೀರ್ಥದಲ್ಲಿ ಸೂರ್ಯನು ವೃಷಭರಾಶಿಯಲ್ಲಿದ್ದಾಗ ಭಾನುವಾರ ವಿಶಾಖಾನಕ್ಷತ್ರ ಸೇರಿದ ದಿನ ಸ್ನಾನಮಾಡಿ ಶಕ್ತ್ಯನುಸಾರವಾಗಿ ಬ್ರಾಹ್ಮಣಭೋಜನ ಮಾಡಿಸಿದ ಮನುಷ್ಯನು ಸಕಲಪಾಪಗಳನ್ನೂ ಕಳೆದುಕೊಂಡು ಶಿವಲೋಕದಲ್ಲಿ ಶಿವನೊಡನೆ ಸಂತೋಷದಿಂದಿರುವನು. ||೧೬-೧೭||

ಸರಸ್ವತೀನದಿಯು ಸಕಲ ಇಷ್ಟಾರ್ಥಗಳನ್ನೂ ಕೊಡತಕ್ಕದು. ಆ ನದಿಯಲ್ಲಿ ಸರಸ್ವತೀದೇವಿಯು ಯಾವಾಗಲೂ ಪ್ರೀತಿಯಿಂದ ವಾಸಿಸುವಳು. ಆರ್ದ್ರಾನಕ್ಷತ್ರದ

ಯಸ್ಯಾಂ ವಾಗೀಶ್ವರೀ ದೇವೀ ವರ್ತತೇ ಸರ್ವದಾಽಽದರಾತ್ ।
ತಸ್ಯಾಮಾರ್ದ್ರಾದಿನೇ ಸ್ನಾತ್ವಾ ಯತ್ಕಿಂಚಿಚ್ಛಿವಯೋಗಿನೇ ॥೧೯॥

ದತ್ವಾ ಪುತ್ರಾದಿಭಿಃ ಸಾರ್ಧಂ ನರಃ ಸ್ವರ್ಗಮವಾಪ್ನುಯಾತ್ ।
ಗೋದಾವರೀತಿ ಯಾ ಲೋಕೇ ಸುಪ್ರಸಿದ್ಧಾ ಮಹಾನದೀ ॥೨೦॥

ಸಿಂಹರಾಶೌ ಸ್ಥಿತೇ ಸೂರ್ಯೇ ಸಿಂಹಯುಕ್ತೇ ಬೃಹಸ್ಪತೌ ।
ತಸ್ಯಾಂ ಸ್ನಾತ್ವಾ ಯಥಾಶಕ್ತಿ ಧನಂ ದತ್ವಾ ತು ಮಾನವಃ ॥೨೧॥

ಗಂಗಾಯಾಂ ದ್ವಾದಶಾಬ್ದಸ್ಯ ನಿತ್ಯಂ ಸ್ನಾನಫಲಂ ಲಭೇತ್ ।
ಕೃಷ್ಣವೇಣೀತಿ ಯಾ ಲೋಕೇ ಪ್ರೋಕ್ತಾ ವಿಪ್ರಾ ಮಹಾನದೀ ॥೨೨॥

ಸರ್ವಯೋಗೀಶ್ವರಾರಾಧ್ಯಾ ಸಹ್ಯಾ ದೇವೋದ್ಗತಾ ಶುಭಾ ।
ಇಂದ್ರನೀಲಗಿರಿರ್ಯಸ್ಯಾಂ ಸ್ನಾತ್ವಾಽಭೂಚ್ಛಂಕರಾಸನಂ ॥೨೩॥

ನಿತ್ಯಂ ಯಸ್ಯಾಂ ಮಹಾದೇವಃ ಸ್ನಾತ್ವಾ ವಿಷ್ಣ್ವಾದಿಭಿಃ ಸಹ ।
ತಸ್ಮಿನ್ ಗಿರಿವರೇ ಶ್ರೀಮಾನ್ ವರ್ತತೇ ಶಿವಯಾ ಸಹ ॥೨೪॥

ಸ್ನಾತ್ವಾ ತಸ್ಯಾಂ ನರಃ ಪರ್ವಣ್ಯುಪೋಷ್ಯ ಬ್ರಹ್ಮವಿತ್ತಮಾಃ ।
ಯಥಾಶಕ್ತಿ ಧನಂ ದತ್ವಾ ಮುಚ್ಯತೇ ಭವಬಂಧನಾತ್ ॥೨೫॥

ದಿನ ಸ್ನಾನಮಾಡಿ ಶಿವಧ್ಯಾನಮಾಡುವ ಯೋಗಿಗೆ ಶಕ್ತ್ಯನುಸಾರ ದಾನಮಾಡಿದ ಮನುಷ್ಯನು ಪುತ್ರಾದಿಗಳೊಡನೆ ಸ್ವರ್ಗವನ್ನು ಹೊಂದುವನು. ॥೧೮-೧೯॥

ಗೋದಾವರೀ ಎಂಬ ಪ್ರಸಿದ್ಧವಾದ ಮಹಾನದಿಯಲ್ಲಿ ಸೂರ್ಯನು ಸಿಂಹರಾಶಿಯಲ್ಲಿದ್ದಾಗಲೂ, ಗುರುವು ಸಿಂಹರಾಶಿಯಲ್ಲಿದ್ದಾಗಲೂ, ಸ್ನಾನಮಾಡಿ ಯಥಾಶಕ್ತಿ ದಾನಮಾಡಿದ ಮನುಷ್ಯನು ಗಂಗಾನದಿಯಲ್ಲಿ ಪ್ರತಿದಿನವೂ ಹನ್ನೆರಡುವರ್ಷಗಳ ವರೆಗೆ ಸ್ನಾನಮಾಡಿದ ಫಲವನ್ನು ಹೊಂದುವನು. ॥೨೦-೨೧॥

ಸಹ್ಯಪರ್ವತದಲ್ಲಿ ಹುಟ್ಟುವ ಕೃಷ್ಣವೇಣಿ ಎಂಬ ಮಹಾನದಿಯನ್ನು ಸಮಸ್ತ ಯೋಗೀಶ್ವರರೂ ಪೂಜಿಸುವರು. ಈ ನದಿಯ ನೀರಿನಲ್ಲಿ ಇಂದ್ರನೀಲಗಿರಿಯು ಸ್ನಾನಮಾಡಿದುದರಿಂದ ಅದು ಶಿವನಿಗೆ ಆಶ್ರಯಸ್ಥಾನವಾಗಿರುವುದು. ಮಹಾದೇವನು ವಿಷ್ಣ್ವಾದಿದೇವತೆಗಳೊಡನೆ ಕೃಷ್ಣವೇಣೀ ನದಿಯಲ್ಲಿ ಸ್ನಾನಮಾಡಿ ಆ ಇಂದ್ರನೀಲ ಗಿರಿಯಲ್ಲಿ ಪಾರ್ವತಿಯೊಡನೆ ಯಾವಾಗಲೂ ವಾಸಿಸುವನು. ಆ ನದಿಯಲ್ಲಿ

ಸುವರ್ಣಮುಖರೀ ನಾಮ ನದೀ ಸಂಸಾರನಾಶಿನೀ ।
ಸಮಸ್ತಪ್ರಾಣಿನಾಂ ಭುಕ್ತಿಮುಕ್ತಿಸಿದ್ಧ್ಯರ್ಥಮಾಸ್ತಿಕಾಃ ॥೨೬॥

ಕೇವಲಂ ಕೃಪಯಾ ಸಾಕ್ಷಾಚ್ಛಿವೇನ ಪರಮಾತ್ಮನಾ ।
ನಿರ್ಮಿತಾ ಮಘನಕ್ಷತ್ರೇ ಮಾಘಮಾಸಿ ದ್ವಿಜೋತ್ತಮಾಃ ॥೨೭॥

ಯಸ್ಯಾಸ್ತೀರೇ ಮಹಾದೇವಃ ಶಂಕರಃ ಶಶಿಭೂಷಣಃ ।
ಶ್ರೀಮದ್ದಕ್ಷಿಣಕೈಲಾಸೇ ಶಿವಯಾ ಪರಯಾ ಸಹ ॥೨೮॥

ವರ್ತತೇ ತಾಂ ಸಮಾಲೋಕ್ಯ ಸುವರ್ಣಮುಖರೀಂ ನದೀಂ ।
ಯಸ್ಯಾಂ ಸಂಭೂಯ ತೀರ್ಥಾನಿ ಸ್ವಪಾಪಧ್ವಸ್ತಿಸಿದ್ಧಯೇ ॥೨೯॥

ಸ್ನಾನಂ ಕೃತ್ವಾ ಮಹಾಭಕ್ತ್ಯಾ ಮಘರ್ಕ್ಷೇ ಮಾಘಮಾಸಿ ಚ ।
ಯಥಾಶಕ್ತಿ ಧನಂ ದತ್ವಾ ಶ್ರದ್ಧಯಾ ಶಿವಯೋಗಿನೇ ॥೩೦॥

ಪರ್ವಕಾಲಗಳಲ್ಲಿ ಸ್ನಾನಮಾಡಿ ಆ ದಿನ ಉಪವಾಸಮಾಡಿ ಶಕ್ತ್ಯನುಸಾರವಾಗಿ ದಾನ ಮಾಡಿದ ಮನುಷ್ಯನು ಸಂಸಾರದ ಕಟ್ಟಿನಿಂದ ಬಿಡುಗಡೆ ಹೊಂದುವನು. ||೨೨-೨೩-೨೪-೨೫||

ಎಲೈ ಬ್ರಾಹ್ಮಣೋತ್ತಮರೇ, ಸುವರ್ಣಮುಖರೀ ಎಂಬ ನದಿಯು ಸಂಸಾರ ದುಃಖವನ್ನು ನಾಶಮಾಡುವುದಕ್ಕಾಗಿರುವುದು. ಸಮಸ್ತ ಪ್ರಾಣಿಗಳಿಗೂ ಭುಕ್ತಿ ಮುಕ್ತಿರೂಪವಾದ ಫಲಪ್ರಾಪ್ತಿಯಾಗಬೇಕೆಂದು ಅತ್ಯಂತದಯೆಯಿಂದ ಸಾಕ್ಷಾತ್ ಪರಶಿವನು ಮಾಘಮಾಸದಲ್ಲಿ ಮಘಾನಕ್ಷತ್ರದದಿನ ಈ ತೀರ್ಥವನ್ನು ನಿರ್ಮಿಸಿದನು. ||೨೬-೨೭||

ಆ ನದಿಯ ತೀರದಲ್ಲಿ ಚಂದ್ರಶೇಖರನೂ, ಶಂಕರನೂ ಆದ ಮಹಾದೇವನು ದಕ್ಷಿಣಕೈಲಾಸವೆಂಬ ಕಾಲಹಸ್ತಿಪರ್ವತದಲ್ಲಿ ಪಾರ್ವತಿಯೊಡನೆ ವಾಸವಾಗಿರುವನು. ಇಂತಹ ಸುವರ್ಣಮುಖರೀ ನದಿಯನ್ನು ನೋಡಿ ಸಮಸ್ತ ತೀರ್ಥಗಳೂ ಒಟ್ಟಿಗೆ ಬಂದು ತಮ್ಮ ಪಾಪಗಳನ್ನು ಕಳೆದುಕೊಳ್ಳುವುದಕ್ಕಾಗಿ ಮಾಘಮಾಸದಲ್ಲಿ ಮಘಾ ನಕ್ಷತ್ರದ ದಿವಸ ಭಕ್ತಿಯಿಂದ ಸ್ನಾನಮಾಡಿ, ಶಿವಧ್ಯಾನೈಕನಿಷ್ಠನಾದ ಯೋಗಿಗೆ ತಮ್ಮ ಶಕ್ತ್ಯನುಸಾರವಾಗಿ ದಾನವನ್ನು ಮಾಡಿ, ಮನುಷ್ಯರಿಗೆ ಮಂಗಳವನ್ನುಂಟು ಮಾಡುವ ಕಾಲಹಸ್ತಿಪರ್ವತೇಶ್ವರನಾದ ದೇವೇಂದ್ರನ ಪೂಜೆಯನ್ನು ಸ್ವೀಕರಿಸುತ್ತಿ

ಶ್ರೀಕಾಲಹಸ್ತಿ ಶೈಲೇಶಂ ಶಿವಂ ಶಿವಕರಂ ನೃಣಾಂ ।
ಶ್ರೀಮದ್ದಕ್ಷಿಣಕೈಲಾಸವಾಸಿನಂ ವಾಸವಾರ್ಚಿತಂ ॥೩೧॥

ಪ್ರಣಮ್ಯ ದಂಡವದ್ಭಕ್ತ್ಯಾ ವಿಮುಕ್ತಾ ಹ್ಯಘಪಂಜರಾತ್ ।
ಸ್ನಾತ್ವಾ ತಸ್ಯಾಂ ನರೋ ಭಕ್ತ್ಯಾ ಮಘರ್ಕ್ಷೇ ಮಾಘಮಾಸಿ ಚ ॥೩೨॥

ಸರ್ವಪಾಪವಿನಿರ್ಮುಕ್ತಃ ಶಿವಸಾಯುಜ್ಯಮಾಪ್ನುಯಾತ್ ।
ಕಂಪಾನಾಮ ನದೀ ಪುಣ್ಯಾ ಕಮಲಾಸನನಿರ್ಮಿತಾ ॥೩೩॥

ಯಸ್ಯಾಂ ದ್ವಿಜೋತ್ತಮಾಃ ಸ್ನಾತ್ವಾ ಶಂಕರಂ ಶಶಿಶೇಖರಂ ।
ದೃಷ್ಟ್ವಾ ಭಕ್ತ್ಯಾ ನರಃ ಸದ್ಯೋ ಮುಚ್ಯತೇ ಭವಬಂಧನಾತ್ ॥೩೪॥

ಆದಿಲಿಂಗೇ ಮಹಾವಿಷ್ಣುರ್ಯಸ್ಯಾಂ ಸ್ನಾತ್ವಾ ಮಹೇಶ್ವರಂ ।
ಸಮಾರಾಧ್ಯ ಸ್ಥಿತಸ್ತತ್ರ ದೇವದೇವಸ್ಯ ಸನ್ನಿಧೌ ॥೩೫॥

ನಿರೀಕ್ಷ್ಯ ಶ್ರದ್ಧಯಾ ವಿಪ್ರಾ ನದೀಂ ತಾಮಚ್ಯುತೋ ಹರಿಃ ।
ತಸ್ಯಾಂ ಸ್ನಾತ್ವಾಽರ್ಕವಾರೇ ಚ ಬ್ರಾಹ್ಮಣಾಃ ಶ್ರದ್ಧಯಾ ಸಹ ॥೩೬॥

ಹಸ್ತೇ ವಾ ಭಗನಕ್ಷತ್ರೇ ತಥಾ ಪರ್ವಣ್ಯಪಿ ದ್ವಿಜಾಃ ।
ವಿಪ್ರಾಯಾನ್ನಾದಿಕಂ ದತ್ವಾ ನರಃ ಸ್ವರ್ಗೇ ಮಹೀಯತೇ ॥೩೭॥

ರುವ ದಕ್ಷಿಣಕೈಲಾಸವಾಸಿಯಾದ ಶಿವನಿಗೆ ಸಾಷ್ಟಾಂಗನಮಸ್ಕಾರಮಾಡಿ ಪಾಪಪಂಜರದಿಂದ ಬಿಡುಗಡೆಯನ್ನು ಹೊಂದಿದುವು. ||೨೮-೨೯-೩೦-೩೧||

ಮನುಷ್ಯನು ಭಕ್ತಿಯಿಂದ ಆ ಸುವರ್ಣಮುಖರೀನದಿಯಲ್ಲಿ ಮಾಘಮಾಸದ ಮಘಾನಕ್ಷತ್ರದ ದಿನ ಸ್ನಾನಮಾಡಿ, ಸಮಸ್ತ ಪಾಪಗಳನ್ನೂ ಕಳೆದುಕೊಂಡು ಶಿವಸಾಯುಜ್ಯವನ್ನು ಹೊಂದುವನು. ||೩೨||

ಕಂಪಾ ಎಂಬ ಪುಣ್ಯಕರವಾದ ನದಿಯನ್ನು ಬ್ರಹ್ಮನು ನಿರ್ಮಿಸಿದನು. ಮನುಷ್ಯನು ಆ ನದಿಯಲ್ಲಿ ಸ್ನಾನಮಾಡಿ, ಚಂದ್ರಶೇಖರನಾದ ಶಿವನ ದರ್ಶನವನ್ನು ಭಕ್ತಿಯಿಂದ ಮಾಡಿ, ಸಂಸಾರದುಃಖವನ್ನು ಬೇಗನೆ ಕಳೆದುಕೊಳ್ಳುವನು.||೩೩-೩೪||

ಆದಿಲಿಂಗಕ್ಷೇತ್ರವಾದ ಆ ಕಂಪಾನದಿಯಲ್ಲಿ ಮಹಾವಿಷ್ಣುವು ಸ್ನಾನಮಾಡಿ, ಮಹೇಶ್ವರನನ್ನು ಪೂಜಿಸಿ ಆ ದೇವನ ಸನ್ನಿಧಿಯಲ್ಲಿ ನೆಲೆಸಿರುವನು. ಆ ನದಿಯಲ್ಲಿ ಭಕ್ತಿಯಿಂದ ಭಾನುವಾರ, ಉತ್ತರಾನಕ್ಷತ್ರ, ಹಸ್ತನಕ್ಷತ್ರ, ಅಮಾವಾಸ್ಯ,

ಕುಟಿಲಾ ನಾಮ ಯಾ ಲೋಕೇ ಪ್ರಸಿದ್ಧಾ ಮಹತೀ ನದೀ ।
ಯಸ್ಯಾಸ್ತೀರೇ ಮುನಿಶ್ರೇಷ್ಠಾ ವೀರಾಖ್ಯಾ ವೇದವಿತ್ತಮಾಃ ॥೩೮॥

ಶ್ರಾವಣ್ಯಾಂ ಪೌರ್ಣಮಾಸ್ಯಾಂ ತು ಭದ್ರಕಾಲೀ ದೃಢವ್ರತಾ ।
ಅಧಿಕಾಸಂಜ್ಞಿತಾಂ ರಮ್ಯಾಂ ಪುರೀಮಾದಿತ್ಯ ನಿರ್ಮಿತಾಂ ॥೩೯॥

ಅಪ್ಸರೋಗಣಸಂಕೀರ್ಣಾಮಾಶ್ರಿತಾಮಸುರೈಃ ಸುರೈಃ ।
ಅಭ್ಯೇತ್ಯಾಶೇಷದೇವಾನಾಮಾದಿಭೂತಂ ಮಹೇಶ್ವರಂ ॥೪೦॥

ಪ್ರತಿಷ್ಠಾಪ್ಯ ಜಲೇನಾಸ್ಯಾಃ ಸ್ನಾಪ್ಯ ಶ್ರದ್ಧಾಪುರಃಸರಂ ।
ಪ್ರಾರ್ಥಯಾಮಾಸ ಧರ್ಮಜ್ಞಾ ದೇವದೇವಂ ಘೃಣಾನಿಧಿಂ ॥೪೧॥

ಯಃ ಪುಮಾನ್ ದೇವದೇವಾಸ್ಯಾಂ ಸ್ನಾತ್ವಾ ಶ್ರದ್ಧಾಪುರಸ್ಸರಂ ।
ಶ್ರಾವಣ್ಯಾಂ ಪೌರ್ಣಮಾಸ್ಯಾಂ ವಾ ದೃಷ್ಟ್ವಾ ಸ್ತುತ್ವಾಽಭಿವಂದ್ಯ ಚ॥೪೨॥

ದದಾತಿ ವಿದುಷೇ ವಸ್ತ್ರಂ ಧನಂ ಧಾನ್ಯಂ ಯಥಾಬಲಂ ।
ತಸ್ಯ ಭುಕ್ತಿಂ ಚ ಮುಕ್ತಿಂ ಚ ಪ್ರಯಚ್ಛಾಶೇಷನಾಯಕ ॥೪೩॥

ಪೂರ್ಣಿಮಾ, ಈ ದಿನಗಳಲ್ಲಿ ಸ್ನಾನಮಾಡಿ, ಬ್ರಾಹ್ಮಣನಿಗೆ ಅನ್ನದಾನಮಾಡಿದ ಮನುಷ್ಯನು ಸ್ವರ್ಗಸುಖವನ್ನನುಭವಿಸುವನು. ||೩೫-೩೬-೩೭||

ಈ ಭೂಲೋಕದಲ್ಲಿ ಕುಟಿಲಾ ಎಂಬ ದೊಡ್ಡನದಿಯು ಇರುವುದು. ವೀರಾ ಎಂಬ ಸ್ತ್ರೀಯು ತಾನು ಭದ್ರಕಾಲೀದೇವಿಯನ್ನು ಉಪಾಸನೆಮಾಡುತ್ತಿದ್ದರೂ ಆ ನದಿಯ ತೀರದಲ್ಲಿ ಸೂರ್ಯನು ನಿರ್ಮಿಸಿದ ಅಪ್ಸರರೂ, ದೇವಾಸುರರೂ, ವಾಸ ಮಾಡುತ್ತಿರುವ ಸುಂದರವಾದ ಆಧಿಕಾ ಎಂಬ ಹೆಸರಿನ ಪಟ್ಟಣಕ್ಕೆ ಬಂದು ಸಮಸ್ತ ದೇವತೆಗಳಿಗೂ, ಮೊದಲನೆಯವನಾದ, ಪರಮೇಶ್ವರನ ಲಿಂಗವನ್ನು ಶ್ರಾವಣಮಾಸದ ಪೂರ್ಣಿಮೆಯದಿನದಲ್ಲಿ ಪ್ರತಿಷ್ಠೆಮಾಡಿ ಭಕ್ತಿಯಿಂದ ಆ ನದಿಯ ನೀರಿನಿಂದ ಅಭಿಷೇಕ ವನ್ನು ಮಾಡಿ ಧರ್ಮಜ್ಞಳಾದ ಆಕೆಯು ದಯಾನಿಧಿಯೂ, ದೇವದೇವನೂ, ಆದ ಪರಮೇಶ್ವರನನ್ನು ಪ್ರಾರ್ಥಿಸಿದಳು. ||೩೮-೩೯-೪೦-೪೧||

ಓ ದೇವದೇವನೇ, ಸಮಸ್ತಲೋಕಕ್ಕೂ ಒಡೆಯನೇ, ಈ ಕುಟಿಲಾನದಿ ಯಲ್ಲಿ ಭಕ್ತಿಯಿಂದ ಸ್ನಾನಮಾಡಿ ಶ್ರಾವಣಮಾಸದ ಪೂರ್ಣಿಮೆಯ ದಿನ ನಿನ್ನನ್ನು ದರ್ಶನಮಾಡಿ ಹೊಗಳಿ ನಮಸ್ಕರಿಸುವ ವಿದ್ವಾಂಸನಾದ ಬ್ರಾಹ್ಮಣನಿಗೆ ಧನಧಾನ್ಯ

|| ಸೂತ ಉವಾಚ ||

ವೀರಯಾ ಪ್ರಾರ್ಥಿತೋ ದೇವೋ ವಿಪ್ರೇಂದ್ರಾ ಬ್ರಹ್ಮವಿತ್ತಮಾಃ ।
ತಥಾ ಭವತ್ವಿತಿ ಪ್ರಾಹ ಶಿವೋ ಗಂಭೀರಯಾ ಗಿರಾ ||೪೪||

ತಸ್ಯಾಂ ಸ್ನಾತ್ವಾಽರ್ಕವಾರೇ ಯಃ ಶ್ರದ್ಧಯಾ ಪರಯಾ ಸಹ ।
ದದಾತಿ ಧನಮನ್ಯದ್ವಾ ಸ ಮುಕ್ತೋ ನಾತ್ರ ಸಂಶಯಃ ||೪೫||

ಮಣಿಮುಕ್ತಾನದೀ ದಿವ್ಯಾ ಮಹಾದೇವೇನ ನಿರ್ಮಿತಾ ।
ಯಸ್ಯಾಂ ವಿಷ್ಣುಶ್ಚ ರುದ್ರಶ್ಚ ಬ್ರಹ್ಮಾ ವನ್ಹಿಶ್ಚ ಮಾರುತಃ ||೪೬||

ವಿಶ್ವೇದೇವಾಶ್ಚ ವಸವಃ ಸೂರ್ಯೋ ದೇವಃ ಪುರಂದರಃ ।
ಆದಿತ್ಯೇ ಚಾಪಸಂಯುಕ್ತೇ ಶ್ರದ್ಧಯಾಽಽದ್ರಾರ್ದಿನೇ ದ್ವಿಜಾಃ ||೪೭||

ಸ್ನಾನಂ ಕೃತ್ವಾ ಧನಂ ದತ್ವಾ ಶ್ರೀಮದ್ವೃದ್ಧಾಚಲೇಶ್ವರಂ ।
ಪ್ರಣಮ್ಯ ದಂಡವದ್ಭೂಮೌ ಲೋಕಾನಾಂ ಹಿತಕಾಮ್ಯಯಾ ||೪೮||
ಪ್ರಾರ್ಥಯಾಮಾಸುರೀಶಾನಂ ಶ್ರೀಮದ್ವೃದ್ಧಾಚಲೇಶ್ವರಂ ।

ವಸ್ತ್ರಗಳನ್ನು ತನ್ನ ಶಕ್ತ್ಯನುಸಾರವಾಗಿ ದಾನಮಾಡುವ ಮನುಷ್ಯನಿಗೆ ಭುಕ್ತಿಮುಕ್ತಿಗಳೆರಡನ್ನೂ ಅನುಗ್ರಹಿಸು. ಎಂದು ಬೇಡಿಕೊಂಡಳು. ||೪೨-೪೩||

ಸೂತನು ಹೇಳಿದನು--- ಎಲೈ ಬ್ರಾಹ್ಮಣಶ್ರೇಷ್ಠರೇ, ವೀರಾ ಎಂಬ ಸ್ತ್ರೀಯು ಪ್ರಾರ್ಥನೆಮಾಡುತ್ತಲು ಶಿವನು ಗಂಭೀರವಾದ ಧ್ವನಿಯಿಂದ, ಹಾಗೆಯೇ ಆಗಲಿ, ಎಂದು ಹೇಳಿದನು. ಆದುದರಿಂದ ಆ ಕುಟಿಲಾನದಿಯಲ್ಲಿ ಭಾನುವಾರದ ದಿನ ಯಾವ ಮನುಷ್ಯನು ಭಕ್ತಿಯಿಂದ ಸ್ನಾನಮಾಡಿ ಧನವನ್ನೋ ಮತ್ತಾವ ವಸ್ತುವನ್ನೋ ದಾನಮಾಡುವನೋ, ಅವನು ಮುಕ್ತನಾಗುವುದರಲ್ಲಿ ಸಂದೇಹವಿಲ್ಲ ||೪೪-೪೫||

ಮಹಾದೇವನೇ ನಿರ್ಮಿಸಿದ ಮಣಿಮುಕ್ತಾ ಎಂಬ ನದಿಯು ಇರುವುದು. ವಿಷ್ಣು, ಬ್ರಹ್ಮ, ರುದ್ರರೂ, ಅಗ್ನಿವಾಯು ಸೂರ್ಯದೇವೇಂದ್ರರೂ, ವಸುಗಳೂ, ವಿಶ್ವೇದೇವತೆಗಳೂ, ಲೋಕಹಿತಕ್ಕಾಗಿ, ಸೂರ್ಯನು ಧನೂರಾಶಿಯಲ್ಲಿದ್ದಾಗ, ಆದ್ರಾರ್ನಕ್ಷತ್ರದ ದಿನ ಭಕ್ತಿಯಿಂದ ಆ ನದಿಯಲ್ಲಿ ಸ್ನಾನವನ್ನು ಮಾಡಿ, ಆ ನದಿಯ ತೀರದಲ್ಲಿರುವ ವೃದ್ಧಾಚಲೇಶ್ವರನನ್ನು ಪೂಜಿಸಿ ಸಾಷ್ಟಾಂಗನಮಸ್ಕಾರವನ್ನು ಮಾಡಿ ಯಥಾಶಕ್ತಿದಾನವನ್ನು ಮಾಡಿ, ವೃದ್ಧಾಚಲೇಶ್ವರನನ್ನು ಪ್ರಾರ್ಥಿಸಿದರು. ಏನೆಂದರೆ, ||೪೬-೪೭-೪೮||

ದುರ್ವೃತ್ತೋ ವಾ ಸುವೃತ್ತೋ ವಾ ಮೂರ್ಖೋವಾ ಪಂಡಿತೋಽಪಿವಾ ॥
ಬ್ರಾಹ್ಮಣೋ ವಾಽಥ ಶೂದ್ರೋ ವಾ ಚಂಡಾಲೋ ವಾಽನ್ಯಏವ ವಾ ।
ಅಸ್ಯಾಮುಸ್ಮಿನ್ದಿನೇ ಸ್ನಾತ್ವಾ ಶ್ರದ್ಧಯಾ ಶಿವಯೋಗಿನೇ ॥೫೦॥

ಯಥಾಶಕ್ತಿ ಧನಂ ದತ್ವಾ ಧಾನ್ಯಂ ವಾ ವಸ್ತ್ರಮೇವ ವಾ ।
ಶ್ರೀಮದ್ವೃದ್ಧಾಚಲೇಶಾಯ ಬ್ರಾಹ್ಮಣಾ ವೇದವಿತ್ತಮಾಃ ॥೫೧॥

ಉಪೋಷ್ಯ ಪ್ರಾತರೇವೇಶಂ ಶ್ರೀಮದ್ವೃದ್ಧಾಚಲೇಶ್ವರಂ ।
ಯೋ ನಮಸ್ಕುರುತೇ ತಸ್ಯ ಪ್ರಯಚ್ಛ ಪರಮಾಂ ಗತಿಂ ॥೫೨॥

ಇತ್ಯೇವಂ ಪ್ರಾರ್ಥಿತಃ ಸರ್ವೈಃ ಶ್ರೀಮದ್ವೃದ್ಧಾಚಲೇಶ್ವರಃ ।
ತಥೈವಾಸ್ತ್ವಿತಿ ಸಂತುಷ್ಟಃ ಪ್ರಾಹ ಗಂಭೀರಯಾ ಗಿರಾ ॥೫೩॥

ತಸ್ಯಾಮಾರ್ದ್ರಾದಿನೇ ಸ್ನಾತ್ವಾ ಶ್ರದ್ಧಯಾ ಮಾನವೋ ದ್ವಿಜಾಃ ।
ತಸ್ಯ ಸಂಸಾರವಿಚ್ಛಿತ್ತಿಃ ಸಿದ್ಧಾ ನಾತ್ರ ವಿಚಾರಣಾ ॥೫೪॥

ದುಷ್ಟನಾಗಲಿ, ಸಜ್ಜನನಾಗಲಿ, ದಡ್ಡನಾಗಲಿ, ಪಂಡಿತನಾಗಲಿ, ಬ್ರಾಹ್ಮಣನಾಗಲಿ, ಶೂದ್ರನಾಗಲಿ, ಚಂಡಾಲನಾಗಲಿ, ಬೇರೆ ಯಾವನಾಗಲಿ, ಈ ಮಣಿಮುಕ್ತಾನದಿಯಲ್ಲಿ ಧನುರ್ಮಾಸದ ಆರ್ದ್ರಾನಕ್ಷತ್ರದ ದಿನ ಸ್ನಾನವನ್ನು ಮಾಡಿ ಶಕ್ತ್ಯನುಸಾರವಾಗಿ ಶಿವಯೋಗಿಗೆ ದಾನಮಾಡಿ ಶ್ರೀಮದ್ವೃದ್ಧಾಚಲೇಶ್ವರನಿಗಾಗಿ ಆದಿನ ಉಪವಾಸವನ್ನು ಮಾಡಿ, ಮಾರನೆಯ ದಿನ ಪ್ರಾತಃಕಾಲದಲ್ಲಿಯೇ ಶ್ರೀವೃದ್ಧಾಚಲೇಶ್ವರನಿಗೆ ಯಾರು ನಮಸ್ಕರಿಸುವರೋ, ಅವರಿಗೆ ಮೋಕ್ಷವನ್ನು ಕರುಣಿಸು. ಎಂದು ಬೇಡಿಕೊಂಡರು. ||೪೯-೫೦-೫೧-೫೨||

ಹೀಗೆಂದು ಎಲ್ಲಾ ದೇವತೆಗಳು ಪ್ರಾರ್ಥಿಸಲು ಶ್ರೀಮದ್ವೃದ್ಧಾಚಲೇಶ್ವರನು ಹಾಗೆಯೇ ಆಗಲೆಂದು ಗಂಭೀರವಾದ ಧ್ವನಿಯಿಂದ ಹೇಳಿದನು. ಆದುದರಿಂದ ಆ ನದಿಯಲ್ಲಿ ಆರ್ದ್ರಾನಕ್ಷತ್ರದ ದಿನ ಭಕ್ತಿಯಿಂದ ಸ್ನಾನಮಾಡುವ ಮನುಜನಿಗೆ ಜನನ ಮರಣರೂಪವಾದ ಸಂಸಾರಕಟ್ಟಿನ ಬಿಡುಗಡೆಯಾಗುವುದರಲ್ಲಿ ಸಂದೇಹವಿಲ್ಲವು. ||೫೩-೫೪||

ಶ್ರೀಮದ್ವ್ಯಾಘ್ರಪುರೇ ರಮ್ಯೇ ಮಹಾಲಕ್ಷ್ಮ್ಯಾ ನಿಷೇವಿತೇ ।
ಶಿವಗಂಗೇತಿ ವಿಖ್ಯಾತಂ ತಟಾಕಂ ತೀರ್ಥಮುತ್ತಮಂ ॥೫೫॥

ತಸ್ಯ ದಕ್ಷಿಣತೀರೇ(ಚ)ಶ್ರೀ ಶ್ರೀಕಂಠಃ ಶಶಿಶೇಖರಃ ।
ಪ್ರನೃತ್ಯತಿ ಪರಾನಂದಮನುಭೂಯಾನುಭೂಯ ಚ ॥೫೬॥

ಯಸ್ಮಿನ್ಬ್ರಹ್ಮಾದಯೋ ದೇವಾ ಮುನಯಶ್ಚ ದಿನೇ ದಿನೇ ।
ಸ್ನಾನಂ ಕೃತ್ವಾ ಪ್ರನೃತ್ಯಂತಂ ಭವಾನೀಸಹಿತಂ ಶಿವಂ ॥೫೭॥

ಪ್ರಣಮಂತಿ ಮಹಾಭಕ್ತ್ಯಾ ಭವರೋಗನಿವೃತ್ತಯೇ ।
ಯಸ್ಮಿನ್ಸಾಕ್ಷಾನ್ಮಹಾದೇವೋ ಭವಾನೀ ಸಹಿತೋ ಹರಃ ॥೫೮॥

ಬ್ರಹ್ಮವಿಷ್ಣ್ವಾದಿಭಿಃ ಸಾರ್ಧಂ ಮಘರ್ಕ್ಷೇ ಮಾಘಮಾಸಿ ಚ ।
ಸ್ನಾನಂ ಕರೋತಿ ರಕ್ಷಾರ್ಥಂ ಪ್ರಾಣಿನಾಮೀಶ್ವರೇಶ್ವರಃ ॥೫೯॥

ತಸ್ಮಿನ್ಭಕ್ತ್ಯಾ ನರಃ ಸ್ನಾತ್ವಾ ದದಾತಿ ಧನಮಾದರಾತ್ ।
ಸ ಸರ್ವಸಮತಾಮೇತ್ಯ ಬ್ರಹ್ಮಾಪ್ಯೇತಿ ದ್ವಿಜೋತ್ತಮಾಃ ॥೬೦॥

ಮಹಾಲಕ್ಷ್ಮಿಯು ಯಾವಾಗಲೂ ಸೇವಿಸುತ್ತಿರುವ ಸಂಪದ್ಯುಕ್ತವಾದ ವ್ಯಾಘ್ರಪುರದಲ್ಲಿ ಶಿವಗಂಗೆ ಎಂದು ಪ್ರಸಿದ್ಧಿಹೊಂದಿದ ಕೆರೆ ಇರುವುದು. ಅದು ಉತ್ತಮವಾದ ತೀರ್ಥವು. ಅದರ ದಕ್ಷಿಣ ತೀರದಲ್ಲಿ ಚಂದ್ರಶೇಖರನಾದ ಶಿವನು ವಿಶೇಷವಾಗಿ ಪರಮಾನಂದದಿಂದ ನೆಲೆಸಿರುವನು. ॥೫೫-೫೬॥

ಆ ಶಿವಗಂಗಾತೀರ್ಥದಲ್ಲಿ ಬ್ರಹ್ಮಾದಿದೇವತೆಗಳೂ, ಮುನಿಗಳೂ, ಪ್ರತಿದಿನವೂ ಸ್ನಾನಮಾಡಿ, ನರ್ತನಮಾಡುತ್ತಿರುವ ಭವಾನೀದೇವಿಯೊಡನೆ ಕೂಡಿದ ಶಿವನನ್ನು ಅತ್ಯಂತ ಭಕ್ತಿಯಿಂದ ನಮಸ್ಕರಿಸುವರು. ಇದರಿಂದ ಅವರ ಸಮಸ್ತ ರೋಗಗಳೂ ನಾಶವಾಗುವುವು. ಆ ತೀರ್ಥದಲ್ಲಿ ಮಘಾನಕ್ಷತ್ರಯುಕ್ತವಾದ ಮಾಘಮಾಸದಲ್ಲಿ ಮಹಾದೇವನು ಬ್ರಹ್ಮನೇ ಮೊದಲಾದ ದೇವತೆಗಳೊಡನೆ ಲೋಕದ ಸಮಸ್ತ ಪ್ರಾಣಿಗಳನ್ನು ಕಾಪಾಡುವುದಕ್ಕಾಗಿ ಸ್ನಾನಮಾಡುವನು. ॥೫೭-೫೯॥

ಆ ತೀರ್ಥದಲ್ಲಿ ಯಾವ ಮನುಷ್ಯನು ಭಕ್ತಿಯಿಂದ ಸ್ನಾನವನ್ನು ಮಾಡಿ, ದಾನವನ್ನು ಮಾಡುವನೋ ಅವನು, ಗೀತೆಯಲ್ಲಿ—"ಸುಹೃನ್ಮಿತ್ರಾರ್ಯುದಾಸೀನ ಮಧ್ಯಸ್ಥದ್ವೇಷ್ಯಬಂಧುಷು । ಸಾಧುಷ್ವಪಿಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ ॥"

ಗುಹ್ಯತೀರ್ಥಮಿತಿ ಖ್ಯಾತಂ ಸಮುದ್ರೇ ವೇದವಿತ್ತಮಾಃ ।
ಶ್ರೀಮದ್ವ್ಯಾಘ್ರಪುರಸ್ಯಾಸ್ಯ ಪ್ರಾಗುದೀಚ್ಯಾಂ ದಿಶಿ ಸ್ಥಿತಂ ॥೬೧॥

ಏಕಯೋ ಜನವಿಸ್ತೀರ್ಣಮೇಕಯೋ ಜನಮಾಯತಂ ।
ಸಮುದ್ರತೀರಮಾರಭ್ಯ ಬ್ರಹ್ಮಣಾ ವಿಷ್ಣುನಾ ತಥಾ ॥೬೨॥

ರುದ್ರೇಣಾ ಶೇಷದೇವಾದ್ಯೈರ್ಮುನಿಭಿಶ್ಚ ನಿಷೇವಿತಂ ।
ಪುರಾ ವೇದವಿದಾಂ ಮುಖ್ಯಾ ವರುಣೋ ಜಲನಾಯಕಃ ॥೬೩॥

ಪ್ರಮಾದಾದ್ಬ್ರಾಹ್ಮಣಂ ಹತ್ವಾ ತತ್ಪಾಪವಿನಿವೃತ್ತಯೇ ।
ವ್ಯಾಘ್ರಪಾದವಚಃ ಶ್ರುತ್ವಾ ತ್ವರಯಾ ಪರಯಾ ಸಹ ॥೬೪॥

ಗುಹ್ಯತೀರ್ಥಮಿದಂ ಗತ್ವಾ ಮಘರ್ಕ್ಷೇ ಮಾಘಮಾಸಿ ಚ ।
ತತ್ರ ಸ್ನಾತ್ವಾ ಮಹಾಭಕ್ತ್ಯಾ ವರುಣೋ ದಗ್ಧಕಲ್ಮಷಃ ॥೬೫॥

ಏತಸ್ಮಿನ್ನಂತರೇ ಶ್ರೀಮಾನ್ ನೀಲಕಂಠೋಽಂಬಿಕಾಪತಿಃ ।
ಪ್ರಸಾದಮಕರೋತ್ತಸ್ಯ ವರುಣಸ್ಯ ಕೃಪಾಬಲಾತ್ ॥೬೬॥

ಭ.ಗೀ. ೬.೯. ಎಂದು ಹೇಳುವಂತೆ ಸರ್ವಸಮಾನಭಾವವನ್ನು ಪಡೆದು ಪರಬ್ರಹ್ಮ ಸ್ವರೂಪನಾಗುವನು. ॥೬೦॥

ಸಂಪದ್ಯುಕ್ತವಾದ ವ್ಯಾಘ್ರಪುರಕ್ಕೆ ಈಶಾನ್ಯದಿಕ್ಕಿನಲ್ಲಿರುವ ಸಮುದ್ರ ತೀರದಲ್ಲಿ ಒಂದು ಯೋಜನ ಉದ್ದವೂ, ಅಷ್ಟೇ ಅಗಲವೂ ಉಳ್ಳ ಗುಹ್ಯತೀರ್ಥವೆಂಬ ಒಂದು ತೀರ್ಥವಿರುವುದು. ಬ್ರಹ್ಮನೇ ಮೊದಲಾದ ದೇವತೆಗಳೂ, ಮುನಿಗಳೂ ಆ ತೀರ್ಥವನ್ನು ಸೇವಿಸುವರು. ॥೬೧-೬೨॥

ವೇದವನ್ನು ತಿಳಿದ ಬ್ರಾಹ್ಮಣರೇ, ಕೇಳಿರಿ. ಹಿಂದೆ ನೀರಿಗೆ ಅಧಿಪತಿಯಾದ ವರುಣದೇವನು ಆಕಸ್ಮಾತ್ತಾಗಿ ಬ್ರಹ್ಮಹತ್ಯೆಯನ್ನು ಮಾಡಿ, ಆ ಪಾಪನಿವಾರಣೆಗಾಗಿ, ವ್ಯಾಘ್ರಪಾದನೆಂಬ ಮುನಿಯ ಮಾತಿನಿಂದ ಬೇಗನೆ ಗುಹ್ಯತೀರ್ಥಕ್ಕೆ ಹೋಗಿ, ಮಾಘಮಾಸದ ಮಘಾನಕ್ಷತ್ರದ ದಿನ ಭಕ್ತಿಯಿಂದ ಆ ತೀರ್ಥದಲ್ಲಿ ಸ್ನಾನವನ್ನು ಮಾಡಿ ತನ್ನ ಪಾಪವನ್ನು ಕಳೆದುಕೊಂಡನು. ॥೬೩-೬೪-೬೫॥

ವರುಣೋಽಪಿ ಮಹಾದೇವಂ ವಾಂಛಿತಾರ್ಥಪ್ರದಾಯಿನಂ ।
ಪ್ರಾರ್ಥಯಾಮಾಸ ಧರ್ಮಾತ್ಮಾ ಲೋಕಾನಾಂ ಹಿತಕಾಮ್ಯಯಾ ॥೬೭॥

॥ ವರುಣ ಉವಾಚ ॥

ಭಗವನ್ ದೇವ ಮತ್ಪೂಜಾಂ ಮಘರ್ಕ್ಷೇ ಮಾಘಮಾಸಿ ಚ ।
ಕೃತ್ವಾ ಯಃ ಶ್ರದ್ಧಯೈವಾಸ್ಮಿಂ ಸ್ತೀರ್ಥೇ ಸ್ನಾತ್ವಾ ದದಾತಿ ಚ ॥೬೮॥

ತಸ್ಯ ಮುಕ್ತಿಂ ಪ್ರಯಚ್ಛಾಶು ಬ್ರಾಹ್ಮಣಸ್ಯಾಂತ್ಯಜಸ್ಯ ವಾ ।

॥ ಸೂತ ಉವಾಚ ॥

ದೇವದೇವೋ ಮಹಾದೇವೋ ವಾಙ್ಮನೋಽಗೋಚರೋ ಹರಃ ॥೬೯॥

ತಥೈವಾಸ್ತ್ವಿತಿ ವಿಪ್ರೇಂದ್ರಾಃ ಪ್ರಾಹ ಗಂಭೀರಯಾ ಗಿರಾ ।
ಅತ್ರ ಪರ್ವಣಿ ಯಃ ಸ್ನಾತ್ವಾ ದದಾತಿ ಧನಮಾದರಾತ್ ॥೭೦॥

ಸಮಸ್ತಪಾಪನಿರ್ಮುಕ್ತಃ ಸ ಯಾತಿ ಪರಮಾಂ ಗತಿಂ ।
ಬಹವೋಽತ್ರ ಮುನಿಶ್ರೇಷ್ಠಾಃ ಸ್ನಾತ್ವಾ ಪರ್ವಣಿ ಪರ್ವಣಿ ॥೭೧॥

ಈ ಸಮಯದಲ್ಲಿ ಪಾರ್ವತೀಪತಿಯೂ, ನೀಲಕಂಠನೂ, ಆದ ಶಿವನು ಆ ವರುಣನಿಗೆ ದಯೆಯಿಂದ ಅನುಗ್ರಹಮಾಡಿದನು. ಇಷ್ಟಾರ್ಥವನ್ನು ಕೊಟ್ಟು ಮಹಾದೇವನನ್ನು ಲೋಕಹಿತಕ್ಕಾಗಿ ವರುಣನು ಪ್ರಾರ್ಥನೆಮಾಡಿದನು. ॥೬೬-೬೭॥

ವರುಣನು " ಮಹಾಮಹಿಮನಾದ ಶಿವನೇ ಮಾಘಮಾಸದ ಮಘಾನಕ್ಷತ್ರದ ದಿನ ಈ ಗುಹ್ಯತೀರ್ಥದಲ್ಲಿ ನನ್ನನ್ನು ಪೂಜಿಸಿ ಭಕ್ತಿಯಿಂದ ಸ್ನಾನಮಾಡಿ ಯಥಾಶಕ್ತಿ ದಾನಮಾಡಿದವನು, ಬ್ರಾಹ್ಮಣನಾಗಲೀ, ಚಂಡಾಲನಾಗಲೀ, ಅವನಿಗೆ ಬೇಗನೆ ಮೋಕ್ಷವನ್ನು ಕೊಡು." ಎಂದು ಪ್ರಾರ್ಥಿಸಿದನು. ॥೬೮॥

ವಾಕ್ಕಿಗೂ, ಮನಸ್ಸಿಗೂ, ಅಗೋಚರನೂ ಆದ ಸಮಸ್ತ ಪಾಪಪರಿಹಾರಕನಾದ, ದೇವತೆಗಳಿಗೆಲ್ಲರಿಗೂ ದೇವನಾದ ಮಹಾದೇವನು ಹಾಗೆಯೇ ಆಗಲೆಂದು ಗಂಭೀರವಾದ ಧ್ವನಿಯಿಂದ ಹೇಳಿದನು. ॥೬೯॥

ಈ ಗುಹ್ಯತೀರ್ಥದಲ್ಲಿ ಪರ್ವಕಾಲಗಳಲ್ಲಿ ಸ್ನಾನಮಾಡಿ, ಪ್ರೀತಿಯಿಂದ ಧನವನ್ನು ದಾನಮಾಡಿದವನು ಸಮಸ್ತಪಾಪಗಳನ್ನೂ, ಕಳೆದುಕೊಂಡು ಮೋಕ್ಷವನ್ನು ಹೊಂದುವನು. ಪ್ರತಿಯೊಂದು ಪೂರ್ಣಿಮಾ ಅಮಾವಾಸ್ಯಾ ದಿನಗಳನ್ನು ಈ ತೀರ್ಥ

ವಿಹಾಯ ಸರ್ವಪಾಪಾನಿ ವಿಮುಕ್ತಾ ಭವಬಂಧನಾತ್ ।
ಬ್ರಹ್ಮತೀರ್ಥಮಿತಿ ಖ್ಯಾತಂ ತಟಾಕಂ ಬ್ರಹ್ಮಣಾ ಕೃತಂ ॥೨೨॥

ಶ್ರೀಮದ್ಬ್ರಹ್ಮಪುರಾಖ್ಯಸ್ಯ ಮಧ್ಯಮೇ ಸುಪ್ರತಿಷ್ಠಿತಂ ।
ರೋಮಶೋ ಭಗವಾನಸ್ಮಿಂಸ್ತಟಾಕೇ ವೇದವಿತ್ತಮಾಃ ॥೨೩॥

ಸ್ನಾತ್ವಾ ನಿತ್ಯಂ ಮಹಾಭಕ್ತ್ಯಾ ತತಾಪ ಸುಮಹತ್ತಪಃ ।
ಯಸ್ಮಿನ್ ಬ್ರಹ್ಮಾ ದ್ವಿಜಾಃ ಸ್ನಾತ್ವಾ ಕಲ್ಪಾದೌ ಪರಮೇಶ್ವರಃ ॥೨೪॥

ಪೂಜಯಾಮಾಸ ಲೋಕಾನಾಂ ಸೃಷ್ಟಿಸ್ಥಿತ್ಯರ್ಥಮಾದರಾತ್ ।
ತತ್ರ ಸ್ನಾತ್ವಾಽರ್ಕವಾರೇ ಚ ಗ್ರಹಣೇ ಚೈವ ಪರ್ವಣಿ ॥೨೫॥

ಸೂರ್ಯಪುಷ್ಕರಿಣೀ ನಾಮ ತೀರ್ಥಮತ್ಯಂತಶೋಭನಂ ॥೨೬॥

ಶ್ರೀಮದ್ಬ್ರಹ್ಮಪುರಾಖ್ಯಸ್ಯ ಪಶ್ಚಿಮಸ್ಯಾಂ ದಿಶಿ ಸ್ಥಿತಂ ।
ಯತ್ರ ಸ್ನಾತ್ವಾಽರ್ಕವಾರೇ ಚ ಗ್ರಹಣೇ ಚಂದ್ರಸೂರ್ಯಯೋಃ ॥೨೭॥

ದಲ್ಲಿ ಸ್ನಾನಮಾಡಿ ಅನೇಕ ಋಷಿಶ್ರೇಷ್ಠರು ತಮ್ಮ ಪಾಪಗಳನ್ನು ಕಳೆದುಕೊಂಡು ಸಂಸಾರದ ಕಟ್ಟಿನಿಂದ ಬಿಡುಗಡೆಯನ್ನು ಹೊಂದಿದರು. ॥೨೦-೨೧॥

ವೇದವನ್ನು ತಿಳಿದ ಬ್ರಾಹ್ಮಣರೇ, ಕೇಳಿರಿ. ಬ್ರಹ್ಮತೀರ್ಥವೆಂಬ ಹೆಸರಿನ, ಬ್ರಹ್ಮನು ನಿರ್ಮಿಸಿದ ಒಂದು ಕೆರೆಯು ಬ್ರಹ್ಮಪುರವೆಂಬ ಪಟ್ಟಣದ ನಡುವೆ ಇರುವುದು. ಆ ಕೆರೆಯಲ್ಲಿ ರೋಮಶನೆಂಬ ಮಹಾಮಹಿಮನಾದ ಮುನಿಯು ಭಕ್ತಿಯಿಂದ ಪ್ರತಿದಿನವೂ ಸ್ನಾನಮಾಡಿ ದೊಡ್ಡ ತಪಸ್ಸನ್ನು ಮಾಡಿದನು. ॥೨೨-೨೩॥

ಆ ಬ್ರಹ್ಮತೀರ್ಥದಲ್ಲಿ ಬ್ರಹ್ಮನು ಕಲ್ಪದ ಪ್ರಾರಂಭದಲ್ಲಿ ಸೃಷ್ಟಿಕಾರ್ಯಸಿದ್ಧಿಗಾಗಿ ಸ್ನಾನವನ್ನು ಮಾಡಿ ಪರಮೇಶ್ವರನನ್ನು ಪೂಜಿಸಿದನು. ಯಾವ ಮನುಷ್ಯನು ಈ ತೀರ್ಥದಲ್ಲಿ ಭಾನುವಾರ ಗ್ರಹಣ, ಅಮಾವಾಸ್ಯಾ, ಪೂರ್ಣಿಮಾದಿನಗಳಲ್ಲಿ ಸ್ನಾನಮಾಡಿ ಭಕ್ತಿಯಿಂದ ದಾನವನ್ನು ಮಾಡುವನೋ ಅವನು ಶಿವನ ಸಮೀಪಕ್ಕೆ ಹೋಗುವನು. ॥೨೪-೨೫॥

ಸಂಪತ್ತಿನಿಂದ ಕೂಡಿದ ಬ್ರಹ್ಮಪುರದ ಪಶ್ಚಿಮ ದಿಕ್ಕಿನಲ್ಲಿ ಸೂರ್ಯಪುಷ್ಕರಿಣಿ ಎಂಬ ಅತ್ಯಂತ ಮಂಗಳಕರವಾದ ತೀರ್ಥವಿರುವುದು. ಆ ತೀರ್ಥದಲ್ಲಿ ಭಾನುವಾರ ಚಂದ್ರಸೂರ್ಯರ ಗ್ರಹಣದಿನಗಳು, ವಿಷುವತ್ಪುಣ್ಯಕಾಲ, ದಕ್ಷಿಣೋತ್ತರಾಯಣಗಳು,

ವಿಷುವಾಯನಕಾಲೇಷು ಪರ್ವಣ್ಯಾದ್ರಾರ್ದಿನೇ ತಥಾ ।
ಪೂಷಾ ದಕ್ಷಾಧ್ವರಧ್ವಸ್ತದಂತಾನ್ ಲಬ್ಧ್ವಾ ಪ್ರಿಯಂ ಗತಃ ॥೭೮॥

ಪುರಾ ರಾವಣಪುತ್ರಸ್ತು ವಿಜಿತ್ಯ ಸಕಲಂ ಜಗತ್ ।
ಇಂದ್ರಜಿದ್ರಥಮಾರುಹ್ಯ ಪ್ರಮತ್ತಃ ಪಂಡಿತೋತ್ತಮಾಃ ॥೭೯॥

ಗಚ್ಛನ್ನತ್ಯಂತವೇಗೇನ ವ್ಯೋಮ್ನಿ ಲಂಕಾಂ ಪ್ರತಿ ದ್ವಿಜಾಃ ।
ತೀರ್ಥಸ್ಯಾಸ್ಯ ರಥಸ್ತೀರೇ ದಕ್ಷಿಣೇ ಸುಸ್ಥಿತೋಽಭವತ್ ॥೮೦॥

ಸೋಽಪಿ ತತ್ಪ್ರೇಕ್ಷ್ಯ ವಿಪ್ರೇಂದ್ರಾ ವಿಚಾರ್ಯ ಸುಚಿರಂ ಸುಧೀಃ ।
ಪೂಜಯಾಮಾಸ ತತ್ರೈವ ಶ್ರದ್ಧಯಾ ಪರಮೇಶ್ವರಂ ॥೮೧॥

ದೇವದೇವೋ ಮಹಾದೇವೋ ರಾಕ್ಷಸಾನಾಂ ಮಹಾಧನಂ ।
ತತ್ರೈವಾಸ್ತೇ ಸ್ವಯಂ ಪ್ರೀತ್ಯಾ ಭವಾನೀಸಹಿತೋ ಹರಃ ॥೮೨॥

ಇಂದ್ರಜಿತ್ಪುನರಾದಾತುಂ ನ ಶಶಾಕ ತಮೀಶ್ವರಂ ।
ಸ ಪುನಃ ಸುಚಿರಂ ಕಾಲಂ ವಿಚಾರ್ಯ ಪರಮೇಶ್ವರಂ ॥೮೩॥

ಪರ್ವದಿನಗಳು, ಆದ್ರಾರ್ನಕ್ಷತ್ರ ಈ ದಿನಗಳಲ್ಲಿ ಸ್ನಾನಮಾಡಿದುದರಿಂದ ಪೂಷನೆಂಬ ದೇವನು ದಕ್ಷಯಜ್ಞದಲ್ಲಿ ಕಳೆದುಕೊಂಡ ಹಲ್ಲುಗಳನ್ನು ಪಡೆದು ಸಂತೋಷ ಹೊಂದಿದನು. ॥೭೬-೭೭-೭೮-೭೯॥

ಹಿಂದೆ ರಾವಣನ ಮಗನಾದ ಇಂದ್ರಜಿತುವು ಸಕಲ ಲೋಕಗಳನ್ನೂ ಜಯಿಸಿ ರಥದ ಮೇಲೆ ಕುಳಿತು ಲಂಕೆಗೆ ಹೋಗುತ್ತಿದ್ದಾಗ, ಆಕಾಶದಲ್ಲಿ ವೇಗವಾಗಿ ಹೋಗುತ್ತಿದ್ದ ರಥವು ಈ ಸೂರ್ಯಪುಷ್ಕರಿಣಿಯ ದಕ್ಷಿಣ ದಿಕ್ಕಿನ ತೀರದಲ್ಲಿ ನಿಂತುಬಿಟ್ಟಿತು ॥೭೯-೮೦॥

ಬುದ್ಧಿವಂತನಾದ ಇಂದ್ರಜಿತುವು ಇದನ್ನು ಕಂಡು ವಿಚಾರಮಾಡಿ ಅಲ್ಲಿಯೇ ಇಳಿದು ರಾಕ್ಷಸರಿಗೆ ಕುಲಧನದಂತಿರುವ ಲಿಂಗವನ್ನಿಟ್ಟು, ಭಕ್ತಿಯಿಂದ ಶಿವಪೂಜೆಯನ್ನು ಮಾಡಿದನು. ಪಾರ್ವತೀಸಹಿತನಾದ ಶಿವನು ಅಲ್ಲಿಯೇ ನೆಲೆಸಿದನು. ಇಂದ್ರಜಿತುವು ಮತ್ತೆ ಆ ಲಿಂಗವನ್ನು ತೆಗೆದುಕೊಳ್ಳಲು ಪ್ರಯತ್ನಮಾಡಿ, ಶಕ್ತನಾಗದೇ ಹೋದನು. ಆಗ ಅವನು ಬಹಳಕಾಲ ಯೋಚಿಸಿ, ಆ ಲಿಂಗಕ್ಕೆ ಮೂರು ಪ್ರದಕ್ಷಿಣೆ

ಪ್ರದಕ್ಷಿಣತ್ರಯಂ ಕೃತ್ವಾ ಸಮಾರುಹ್ಯ ರಥೋತ್ತಮಂ ।
ವಿವರ್ಣೋ ವಿವಶೋಽತೀವ ದ್ವಿಜಾ ಲಂಕಾಪುರೀಂ ಗತಃ ॥೮೪॥

ಅಸ್ಮಿನ್ಪರ್ವಣಿ ಯಃ ಸ್ನಾತ್ವಾ ಭೋಜಯೇದ್ಬ್ರಾಹ್ಮಣಂ ಮುದಾ ।
ಸರ್ವಪಾಪವಿನಿರ್ಮುಕ್ತಃ ಶಿವಲೋಕಂ ಸ ಗಚ್ಛತಿ ॥೮೫॥

ಯಃ ಸ್ನಾತಿ ವೇದವಿಚ್ಛ್ರೇಷ್ಠಾಃ ಕಾವೇರ್ಯಾದಧಿಸಂಗಮೇ ।
ಸರ್ವಾಣಿ ತಸ್ಯ ಪಾಪಾನಿ ವಿನಶ್ಯಂತಿ ನ ಸಂಶಯಃ ॥೮೬॥

ಶ್ವೇತಾರಣ್ಯೇ ತಥಾ ಕುಂಭಕೋಣೇ ಮಧ್ಯಾರ್ಜುನೇ ದ್ವಿಜಾಃ ।
ಆಮ್ರತೀರ್ಥೇ ಹೃದಿಸ್ಥಾನೇ ತಥಾ ಮಂಗಲವಂಶಕೇ ॥೮೭॥

ತ್ರಿಕೋಟಿಹಾ(ಕಾ)ಖ್ಯೇ ಕಾವೇರೀ ವರಿಷ್ಠಾ ಸರ್ವಕಾಮದಾ ।
ಏಷು ಸ್ಥಾನೇಷು ಕಾವೇರ್ಯಾಂ ಸ್ನಾತ್ವಾ ಪರ್ವಣಿ ಯಃ ಪುಮಾನ್ ।
ಅರ್ಕವಾರೇ ತಥಾ ವಿಪ್ರಾಃ ಪ್ರಣಮ್ಯ ಪರಮೇಶ್ವರಂ ॥೮೮॥

ಗಳನ್ನು ಮಾಡಿ ರಥವನ್ನೇರಿ ಮುಖದಲ್ಲಿ ಕಳೆಯಿಲ್ಲದವನಾಗಿ ದೈನ್ಯದಿಂದ ಲಂಕಾಪಟ್ಟಣಕ್ಕೆ ಹೊರಟುಹೋದನು. ||೮೧-೮೨-೮೩-೮೪||

ಈ ಸೂರ್ಯಪುಷ್ಕರಿಣಿಯಲ್ಲಿ ಸ್ನಾನಮಾಡಿ, ಪ್ರೀತಿಯಿಂದ ಬ್ರಾಹ್ಮಣನಿಗೆ ಯಾವನು ಭೋಜನವನ್ನು ಮಾಡಿಸುವನೋ, ಅವನು ಸಮಸ್ತ ಪಾಪಗಳನ್ನೂ ಕಳೆದುಕೊಂಡು ಶಿವಲೋಕಕ್ಕೆ ಹೋಗುವನು. ||೮೫||

ವೇದಜ್ಞರಲ್ಲಿ ಶ್ರೇಷ್ಠರಾದ ಮುನಿಗಳೇ, ಕಾವೇರೀನದಿಯು ಸಮುದ್ರಕ್ಕೆ ಸಂಗಮವಾಗುವ ಸ್ಥಳದಲ್ಲಿ ಯಾರು ಸ್ನಾನಮಾಡುವರೋ ಅವರ ಸಮಸ್ತ ಪಾಪಗಳೂ ನಾಶವಾಗುವುದರಲ್ಲಿ ಸಂದೇಹವಿರುವುದಿಲ್ಲವು. ಶ್ವೇತಾರಣ್ಯ, ಕುಂಭಕೋಣ, ಮಧ್ಯಾರ್ಜುನ, ಆಮ್ರತೀರ್ಥ, ಹೃದಯಸ್ಥಾನ, ಮಂಗಲವಂಶ, ತ್ರಿಕೋಟಿ ಎಂಬ ಏಳು ಪ್ರದೇಶಗಳು ಕಾವೇರಿಯ ಸಂಬಂಧದಿಂದ ದೊಡ್ಡವೆನಿಸಿಕೊಂಡು ಸಮಸ್ತ ಇಷ್ಟಾರ್ಥಗಳನ್ನೂ ಕೊಡತಕ್ಕುವಾಗಿರುವುವು. ||೮೬-೮೭||

ಯಾವ ಮನುಷ್ಯನು ಈ ಏಳು ಸ್ಥಳಗಳಲ್ಲಿ ಅಮಾವಾಸ್ಯಾ, ಪೂರ್ಣಿಮಾ, ಭಾನುವಾರಗಳಲ್ಲಿ ಸ್ನಾನಮಾಡಿ ಅಲ್ಲಿರುವ ಶಿವಲಿಂಗಗಳಿಗೆ ನಮಸ್ಕಾರವನ್ನು ಮಾಡಿ,

ದದಾತಿ ಧನಮನ್ಯದ್ವಾ ಮಹಾಪಾಪಾತ್ಪ್ರಮುಚ್ಯತೇ ।
ಪಾಪಿಷ್ಠೋ ವಾ ವರಿಷ್ಠೋವಾ ಯಃ ಪುಮಾನ್ಮರಣಂ ಗತಃ ॥೮೯॥

ಏಷು ಸ್ಥಾನೇಷು ವಿಪ್ರೇಂದ್ರಾಃ ಸ ಮುಕ್ತೋ ನಾತ್ರ ಸಂಶಯಃ ।
ಬಹವೋ ಮರಣಾನ್ಮುಕ್ತಾ ಏಷು ಸ್ಥಾನೇಷು ಸಪ್ತಸು ॥೯೦॥

ಕ್ಷೀರಕುಂಡಮಿತಿ ಖ್ಯಾತಂ ಭವರೋಗಸ್ಯ ಭೇಷಜಂ ।
ಸರ್ವತೀರ್ಥೋತ್ತಮಂ ಪುಣ್ಯಂ ಸರ್ವಪಾಪಪ್ರಣಾಶನಂ ॥೯೧॥

ಸರ್ವಕಾಮಪ್ರದಂ ದಿವ್ಯಂ ಶ್ರೀಮದ್ವಲ್ಮೀಕಮಧ್ಯಗಂ ।
ಉತ್ತರೇ ಫಾಲ್ಗುನೇ ಮಾಸಿ ಬ್ರಹ್ಮಣಾ ವಿಷ್ಣುನಾ ತಥಾ ॥೯೨॥

ಶಂಕರೇಣ ತಥಾ ದೇವೈರ್ಮುನಿಭಿಃ ಸರ್ವಜಂತುಭಿಃ ।
ಸೇವಿತಂ ಸೋಮಸೂರ್ಯಾಭ್ಯಾಂ ಸ್ವರ್ಗಾದ್ವಲ್ಮೀಕಮಾಗತಂ ॥೯೩॥

ಯಃ ಸ್ನಾತಿ ಫಾಲ್ಗುನೇ ಮಾಸಿ ಶ್ರದ್ಧಯೈವೋತ್ತರೇ ದಿನೇ ।
ತಸ್ಯ ಸರ್ವಾಣಿ ಪಾಪಾನಿ ವಿನಶ್ಯಂತಿ ದ್ವಿಜೋತ್ತಮಾಃ ॥೯೪॥

ಯಾವ ದಾನಗಳನ್ನು ಮಾಡಿದರೂ, ಮಹಾಪಾಪಗಳನ್ನು ಕಳೆದುಕೊಳ್ಳುವನು. ಪಾಪಿಯಾಗಲೀ, ಪುಣ್ಯವಂತನಾಗಲೀ, ಈ ಸ್ಥಳಗಳಲ್ಲಿ ಮರಣಹೊಂದಿದರೆ, ಅವನಿಗೆ ಮೋಕ್ಷವುಂಟಾಗುವುದು. ಈ ಏಳು ಸ್ಥಳಗಳಲ್ಲಿ ಅನೇಕರು ಮರಣಹೊಂದಿ ಮುಕ್ತರಾಗಿರುವರು. ॥೮೮-೮೯-೯೦॥

ಸಂಪದ್ಯುಕ್ತವಾದ ವಲ್ಮೀಕಕ್ಷೇತ್ರದ (ಹುತ್ತದಲ್ಲಿ ಲಿಂಗವಿರುವ ಕ್ಷೇತ್ರ) ಮಧ್ಯದಲ್ಲಿ ಸಕಲ ರೋಗಗಳಿಗೂ, ಔಷಧಪ್ರಾಯವಾದ ಕ್ಷೀರಕುಂಡವೆಂಬ ಸಕಲ ಪಾಪಪರಿಹಾರಮಾಡುವ, ಸಕಲ ಇಷ್ಟಾರ್ಥಗಳನ್ನೂ ಕೊಡುವ ದೇವಯೋಗ್ಯವಾದ ತೀರ್ಥವಿರುವುದು. ॥೯೧॥

ಫಾಲ್ಗುಣ ಮಾಸದಲ್ಲಿ, ಉತ್ತರಾನಕ್ಷತ್ರದ ದಿನ, ಬ್ರಹ್ಮ ವಿಷ್ಣು ಮಹೇಶ್ವರರೂ, ಸೂರ್ಯಚಂದ್ರರೂ, ಸಕಲ ದೇವತೆಗಳೂ, ಮುನಿಗಳೂ, ಸ್ವರ್ಗದಿಂದ ವಲ್ಮೀಕಕ್ಷೇತ್ರಕ್ಕೆ ಬಂದು ತೀರ್ಥಸೇವೆಯನ್ನು ಮಾಡುವರು. ॥೯೨-೯೩॥

ಫಾಲ್ಗುಣ ಮಾಸದಲ್ಲಿ ಉತ್ತರಾನಕ್ಷತ್ರದ ದಿನ ಯಾವನು ಈ ತೀರ್ಥದಲ್ಲಿ ಸ್ನಾನ ಮಾಡುವನೋ ಅವನ ಪಾಪಗಳೆಲ್ಲವೂ ನಾಶವಾಗುವುವು. ವ್ಯತೀಪಾತದ ದಿನ

ಯಃ ಸ್ನಾತ್ವಾಽತ್ರ ವ್ಯತೀಪಾತೇ ದದಾತಿ ಧನಮಾದರಾತ್ ।
ತಸ್ಯ ಮುಕ್ತಿರಯತ್ನೇನ ಸಿದ್ಧ್ಯತ್ಯೇವ ನ ಸಂಶಯಃ ॥೯೫॥

ದೇವತೀರ್ಥಮಿತಿ ಖ್ಯಾತಂ ಕ್ಷೀರಕುಂಡಸ್ಯ ಪಶ್ಚಿಮೇ ।
ದೇವರಾಜಃ ಪುರಾ ಯತ್ರ ಸ್ನಾತ್ವಾ ಪರ್ವಣಿ ಪರ್ವಣಿ ॥೯೬॥

ವತ್ಸರಾಂತೇ ಮಹಾದೇವಂ ವಲ್ಮೀಕಾವಾಸಮಾದರಾತ್ ।
ಪ್ರದಕ್ಷಿಣತ್ರಯಂ ಕೃತ್ವಾ ಪ್ರಣಮ್ಯ ಭುವಿ ದಂಡವತ್ ॥೯೭॥

ವಿಸೃಜ್ಯ ದೇವರಾಜತ್ವಂ ವಿಮುಕ್ತಃ ಕರ್ಮಬಂಧನಾತ್ ।
ಯತ್ರ ಸ್ನಾತ್ವೋತ್ತರೇ ಮರ್ತ್ಯಃ ಶ್ರದ್ಧಯಾ ಮಾಸಿ ಫಾಲ್ಗುನೇ ॥೯೮॥

ಪ್ರದಕ್ಷಿಣತ್ರಯಂ ಕೃತ್ವಾ ವಲ್ಮೀಕಾ ವಾಸಮೀಶ್ವರಂ ।
ದದಾತಿ ಧನಮಲ್ಪಂ ವಾ ಮುಚ್ಯತೇ ಭವಬಂಧನಾತ್ ॥೯೯॥

ಅರ್ಕವಾರೇ ಯಥಾಽಽರ್ದ್ರಾಯಾಂ ಕೃಷ್ಣಾಽಷ್ಟಮ್ಯಾಂ ವಿಶೇಷತಃ ।
ಯಃ ಸ್ನಾತಿ ದೇವತೀರ್ಥೇಽಸ್ಮಿನ್ಸ ಯಾತಿ ಪರಮಾಂ ಗತಿಂ ॥೧೦೦॥

ಸ್ನಾನಮಾಡಿ, ಪ್ರೀತಿಯಿಂದ ಧನವನ್ನು ದಾನಮಾಡಿದವನಿಗೆ ಇನ್ನಾವ ಪ್ರಯತ್ನವೂ ಇಲ್ಲದೇ ಮುಕ್ತಿಯುಂಟಾಗುವುದರಲ್ಲಿ ಸಂದೇಹವಿಲ್ಲ. ||೯೪-೯೫||

ಕ್ಷೀರಕುಂಡಕ್ಕೆ ಪಶ್ಚಿಮ ದಿಕ್ಕಿನಲ್ಲಿ ದೇವತೀರ್ಥವೆಂಬ ಕ್ಷೇತ್ರವಿರುವುದು. ದೇವರಾಜನಾದ ದೇವೇಂದ್ರನು ಪ್ರತಿಯೊಂದು ಅಮಾವಾಸ್ಯಾ ಪೂರ್ಣಿಮಾ ದಿನಗಳಲ್ಲಿ ಈ ತೀರ್ಥದಲ್ಲಿ ಸ್ನಾನಮಾಡಿ ವರ್ಷದ ಕೊನೆಯಲ್ಲಿ ಹುತ್ತದಲ್ಲಿರುವ ಶಿವಲಿಂಗಕ್ಕೆ ಮೂರು ಪ್ರದಕ್ಷಿಣೆ ಮಾಡಿ, ಭೂಮಿಯಲ್ಲಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ತನ್ನ ದೇವರಾಜನ ಅಧಿಕಾರವನ್ನು ಬಿಟ್ಟು ಕರ್ಮಬಂಧನೆಯ ಬಿಡುಗಡೆಯನ್ನು ಹೊಂದಿ ಮುಕ್ತನಾದನು. ||೯೬-೯೭||

ಫಾಲ್ಗುಣಮಾಸದಲ್ಲಿ ಉತ್ತರಾನಕ್ಷತ್ರದ ದಿನ ಯಾವ ಮನುಷ್ಯನು ಭಕ್ತಿಯಿಂದ ದೇವತೀರ್ಥದಲ್ಲಿ ಸ್ನಾನವನ್ನು ಮಾಡಿ, ಸ್ವಲ್ಪವಾದರೂ ದಾನಮಾಡಿ, ಹುತ್ತದಲ್ಲಿರುವ ಶಿವಲಿಂಗಕ್ಕೆ ಮೂರು ಪ್ರದಕ್ಷಿಣೆ ಮಾಡುವನೋ ಅವನು ಜನನ ಮರಣರೂಪವಾದ, ಸಂಸಾರಬಂಧನದಿಂದ ಬಿಡುಗಡೆಯನ್ನು ಹೊಂದುವನು. ಭಾನುವಾರ, ಆರ್ದ್ರಾನಕ್ಷತ್ರ, ಕೃಷ್ಣಪಕ್ಷದ ಅಷ್ಟಮೀ, ಈ ವಿಶೇಷ ದಿವಸಗಳಲ್ಲಿ ಈ ತೀರ್ಥದಲ್ಲಿ ಸ್ನಾನಮಾಡಿದವರಿಗೆ ಮೋಕ್ಷವುಂಟಾಗುವುದು. ||೯೮-೯೯-೧೦೦||

ಸೇತುಮಧ್ಯೇ ಮಹಾತೀರ್ಥಂ ಗಂಧಮಾದನಪರ್ವತಂ ।
ಯತ್ರ ಸ್ನಾತ್ವಾ ಮಹಾಭಕ್ತ್ಯಾ ರಾಘವಃ ಸಹ ಸೀತಯಾ ॥೧೦೧॥

ಲಕ್ಷ್ಮಣೇನ ತಥೈವಾನ್ಯೈಃ ಸುಗ್ರೀವಪ್ರಮುಖೈರ್ವರೈಃ ।
ಮುನಿಭಿರ್ದೇವಗಂಧರ್ವೈರ್ಯಕ್ಷವಿದ್ಯಾಧರಾದಿಭಿಃ ॥೧೦೨॥

ರಾಕ್ಷಸೇಶವಧೋತ್ಪನ್ನಾಂ ಬ್ರಹ್ಮಹತ್ಯಾಂ ವಿಹಾಯ ಸಃ ।
ಪ್ರತಿಷ್ಠಾಪ್ಯ ಮಹಾದೇವಂ ಶ್ರೀಮದ್ರಾಮೇಶ್ವರಾಭಿಧಂ ॥೧೦೩॥

ವಿದಿತ್ವಾ ತೀರ್ಥಮಾಹಾತ್ಮ್ಯಂ ದತ್ತವಾನ್ಧನಮುತ್ತಮಂ ।
ಯತ್ರ ಸ್ನಾತ್ವಾ ವ್ಯತೀಪಾತೇ ಗ್ರಹಣೇ ಚಂದ್ರಸೂರ್ಯಯೋಃ ॥೧೦೪॥

ಅರ್ಕವಾರೇ ಭೃಗೋರ್ವಾರೇ ಪರ್ವಣ್ಯಾದ್ರಾರ್ದಿನೇ ತಥಾ ।
ವಿಷುವಾಯನಕಾಲೇಷು ಷಡಶೀತಿ ಮುಖೇ ತಥಾ ॥೧೦೫॥

ಅರ್ಧೋದಯೇ ತಥಾ ವಿಪ್ರಾಃ ಸುಮುಹೂರ್ತೇಷು ಚಾಸ್ತಿಕಾಃ ।
ಯಥಾಶಕ್ತಿ ಧನಂ ದತ್ವಾ ದೃಷ್ಟ್ವಾ ರಾಮೇಶ್ವರಂ ಶಿವಂ ॥೧೦೬॥

ಸೇತುಮಧ್ಯದಲ್ಲಿರುವ ಗಂಧಮಾದನ ಪರ್ವತದಲ್ಲಿ ಒಂದು ತೀರ್ಥವಿರುವುದು. ಆ ತೀರ್ಥದಲ್ಲಿ ಶ್ರೀರಾಮನು ಸೀತಾದೇವಿಯೊಡನೆ ಅತ್ಯಂತ ಭಕ್ತಿಯಿಂದ ಸ್ನಾನಮಾಡಿ, ರಾವಣನನ್ನು ಕೊಂದುದರಿಂದ ಉಂಟಾಗಿದ್ದ ಬ್ರಹ್ಮಾತ್ಯಾಪಾಪವನ್ನು ಹೋಗಲಾಡಿಸಿಕೊಂಡನು. ಲಕ್ಷ್ಮಣನೂ, ಸುಗ್ರೀವನೇ ಮುಂತಾದವರೂ, ಮುನಿಗಳೂ, ದೇವತೆಗಳೂ, ಗಂಧರ್ವರೂ, ಯಕ್ಷರೂ, ವಿದ್ಯಾಧರರೂ, ಆ ತೀರ್ಥದಲ್ಲಿ ಸ್ನಾನಮಾಡಿದರು. ರಾಮನು ಅಲ್ಲಿ ರಾಮೇಶ್ವರವೆಂಬ ಲಿಂಗವನ್ನು ಪ್ರತಿಷ್ಠೆಮಾಡಿ, ಆ ತೀರ್ಥದ ಮಹಿಮೆಯನ್ನು ಕಂಡು ಅಲ್ಲಿ ವಿಶೇಷವಾದ ಧನವನ್ನು ದಾನಮಾಡಿದನು. ॥೧೦೧-೧೦೨-೧೦೩॥

ರಾಮಸೇತುತೀರ್ಥದಲ್ಲಿ ಭಾನುವಾರ, ಶುಕ್ರವಾರ, ಪರ್ವಕಾಲಗಳು, ಆದ್ರಾರ್ನಕ್ಷತ್ರ, ಎರಡು ಅಯನಗಳು, ವಿಷುವತ್ಪುಣ್ಯಕಾಲಗಳು ಷಡಶೀತಿಪುಣ್ಯಕಾಲಗಳು, ಅರ್ಧೋದಯಪುಣ್ಯಕಾಲ, ಒಳ್ಳೆಯ ಮುಹೂರ್ತಗಳು ಇವುಗಳಲ್ಲಿ ಸ್ನಾನಮಾಡಿ, ಶಕ್ತ್ಯನುಸಾರವಾಗಿ ದಾನಮಾಡಿ, ರಾಮೇಶ್ವರ ಲಿಂಗವನ್ನು ದರ್ಶನಮಾಡಿ, ವೇದೋಕ್ತವಾದ ಮತ್ತು ಲೌಕಿಕವಾದ ಸ್ತೋತ್ರಗಳಿಂದ ಹೊಗಳಿ ಭಕ್ತಿಯಿಂದ

ಲೌಕಿಕೈರ್ವೈದಿಕೈಃ ಸ್ತೋತ್ರೈಃ ಸ್ತುತ್ವಾ ವೇದಾರ್ಥಪಾರಗಾಃ ।
ಪ್ರದಕ್ಷಿಣತ್ರಯಂ ಭಕ್ತ್ಯಾ ಯಃ ಕರೋತಿ ದ್ವಿಜೋತ್ತಮಾಃ ॥೧೦೭॥

ಬ್ರಹ್ಮಹತ್ಯಾದಿಭಿಃ ಪಾಪೈರ್ಮಹದ್ಭಿಃ ಸ ವಿಮುಚ್ಯತೇ ।
ಕೃತಘ್ನಾಶ್ಚ ವಿಮುಚ್ಯಂತೇ ಯದ್ಯತ್ರ ಮರಣಂ ಗತಾಃ ॥೧೦೮॥

ಸ್ನಾತ್ವಾಽತ್ರೈವ ಮಹಾಭಕ್ತ್ಯಾ ಮಾಸಮಾತ್ರಂ ದಿನೇ ದಿನೇ ।
ದೃಷ್ಟ್ವಾ ರಾಮೇಶ್ವರಂ ದತ್ವಾ ಸುವರ್ಣಂ ನಿಷ್ಕಮಾದರಾತ್ ॥೧೦೯॥

ಉಪೋಷ್ಯ ರಜನೀಮೇಕಾಂ ಮಾಸಾಂತೇ ಪರ್ವಣಿ ದ್ವಿಜಾಃ ।
ಬ್ರಹ್ಮಹತ್ಯಾಸುರಾಪಾನಸ್ವರ್ಣಸ್ತೇಯಾದಿಪಾತಕೈಃ ॥೧೧೦॥

ಬುದ್ಧಿಪೂರ್ವಕೃತೈರ್ಮರ್ತ್ಯೋ ಮುಚ್ಯತೇ ನಾತ್ರ ಸಂಶಯಃ ।
ಕೃತಾರ್ಥಾಃ ಸ್ನಾನಮಾತ್ರೇಣ ಬಹವೋಽತ್ರಾಭವನ್ ದ್ವಿಜಾಃ॥೧೧೧॥

|| ಸೂತ ಉವಾಚ ||

ಏತಾನಿ ತೀರ್ಥಾನಿ ಪುರೋದಿತಾನಿ
ವೇದೇಷು ಶಾಸ್ತ್ರೇಷು ಶಿವಾಗಮೇಷು ।
ದೃಷ್ಟ್ವಾ ಭವಾನೀಪತಿರಂಬಿಕಾಯಾಃ
ಪ್ರೋವಾಚ ಕಾರುಣ್ಯಬಲೇನ ದೇವಃ ॥೧೧೨॥

ಯಾವನು ಮೂರು ಪ್ರದಕ್ಷಿಣೆ ಮಾಡುವನೋ ಅವನು ಬ್ರಹ್ಮಹತ್ಯಾದಿ ಮಹಾಪಾಪಗಳಿಂದ ಬಿಡುಗಡೆ ಹೊಂದುವನು. ||೧೦೪-೧೦೫-೧೦೭||

ಈ ರಾಮಸೇತುವಿನಲ್ಲಿ ಮರಣಹೊಂದಿದ ಕೃತಘ್ನರೂ ಕೂಡ ಮುಕ್ತಿಯನ್ನು ಹೊಂದುವರು. ಈ ಸ್ಥಳದಲ್ಲಿ ಅತ್ಯಂತ ಭಕ್ತಿಯಿಂದ ಪ್ರತಿದಿನವೂ ಒಂದು ತಿಂಗಳವರೆಗೆ ಸ್ನಾನಮಾಡಿ, ರಾಮೇಶ್ವರನ ದರ್ಶನವನ್ನು ಮಾಡಿ, ಪ್ರೀತಿಯಿಂದ ಸುವರ್ಣನಾಣ್ಯವನ್ನು ದಾನಮಾಡಿ ತಿಂಗಳ ಕೊನೆಯಾದ ಅಮಾವಾಸ್ಯೆಯ ದಿನ ಒಂದು ರಾತ್ರಿ ಉಪವಾಸಮಾಡಿದವರು, ಬುದ್ಧಿಪೂರ್ವಕವಾಗಿಯೂ ಮಾಡಿದ ಬ್ರಹ್ಮಹತ್ಯಾದಿ ಮಹಾಪಾಪಗಳಿಂದ ಬಿಡುಗಡೆಯನ್ನು ಹೊಂದುವರು. ಇಲ್ಲಿ ಸ್ನಾನಮಾಡಿದ ಮಾತ್ರದಿಂದಲೇ ಅನೇಕರು ಕೃತಾರ್ಥರಾದರು. ||೧೦೮-೧೦೯-೧೧೦-೧೧೧||

ಸೂತನು ಹೇಳಿದನು—ಈ ಹಿಂದೆ ಹೇಳಿದ ತೀರ್ಥಗಳನ್ನು ವೇದಗಳಲ್ಲಿಯೂ,

ದೇವೀ ಪುನಃ ಪ್ರಾಹ ಗುಹಸ್ಯ ಶಂಕರೀ
ಗುಹೋ ವಿರಿಂಚಾಯ ಚತುರ್ಮುಖಸ್ತತಃ ।
ಗುರೋರ್ಮಮಾಶೇಷ ಜಗತ್ಪ್ರಸಿದ್ಧಯೇ
ಗುರುರ್ಮಮಾಪಾರಕೃಪಾಮಹೋದಧಿಃ ॥೧೧೩॥

ಯುಷ್ಮಾಕಂ ಪರಮಕೃಪಾಬಲೇನ ವಿಪ್ರಾ
ಅಸ್ಮಾಭಿಃ ಕಥಿತಮಿದಂ ಜಗದ್ಧಿತಾಯ ।
ಶಿಷ್ಯಾಣಾಂ ಸತತಮಿದಂ ಮುದಾ ಭವದ್ಭಿ
ರ್ವಕ್ತವ್ಯಂ ಪರಮಶಿವಪ್ರಸಾದಸಿದ್ಧ್ಯೈ ॥೧೧೪॥

ಯ ಇದಂ ತೀರ್ಥಮಾಹಾತ್ಮ್ಯಂ ಪಠತೇ ಸುಮುಹೂರ್ತಕೇ ।
ಸರ್ವಪಾಪವಿನಿರ್ಮುಕ್ತಃ ಸ ಯಾತಿ ಪರಮಾಂ ಗತಿಂ ॥೧೧೫॥

ಯ ಇದಂ ಶೃಣುಯಾನ್ನಿತ್ಯಂ ಸುಮುಹೂರ್ತೇಷು ವಾ ಪುನಃ ।
ಸರ್ವಪಾಪವಿನಿರ್ಮುಕ್ತಃ ಶಿವಲೋಕೇ ಮಹೀಯತೇ ॥೧೧೬॥

ಶಾಸ್ತ್ರಗಳಲ್ಲಿಯೂ, ಶಿವಾಗಮಗಳಲ್ಲಿಯೂ, ಹೇಳಿರುವುದನ್ನು ನೋಡಿ ಪಾರ್ವತೀ ಪತಿಯಾದ ಶಿವನು ಅತ್ಯಂತ ಕರುಣೆಯಿಂದ ಪಾರ್ವತಿಗೆ ಹೇಳಿದನು. ॥೧೧೨॥

ದೇವಿಯು ಗುಹನಿಗೆ ಹೇಳಿದಳು. ಆ ಷಣ್ಮುಖನು ಬ್ರಹ್ಮನಿಗೂ, ಬ್ರಹ್ಮನು ನನ್ನ ಗುರುವಾದ ವ್ಯಾಸರಿಗೂ, ಮಹಾಕರುಣಾಶಾಲಿಗಳಾದ ವ್ಯಾಸರು ಲೋಕದಲ್ಲಿ ಇದನ್ನು ಪ್ರಕಟಿಸಲು ನನಗೂ ಹೇಳಿದರು. ॥೧೧೩॥

ಎಲೈ ಬ್ರಾಹ್ಮಣರೇ, ಅತ್ಯಂತ ಕರುಣೆಯಿಂದ ಕೂಡಿ, ಲೋಕಕ್ಕೆ ಹಿತವಾಗ ಲೆಂದು ನಾನು ಇದನ್ನು ನಿಮಗೆ ಹೇಳಿರುವೆನು. ಆ ಪರಶಿವನ ಅನುಗ್ರಹವುಂಟಾಗು ವುದಕ್ಕಾಗಿ ನೀವು ನಿಮ್ಮ ಶಿಷ್ಯರಿಗೆ ಸಂತೋಷದಿಂದ ಯಾವಾಗಲೂ ಇದನ್ನು ಹೇಳಿರಿ. ॥೧೧೪॥

ಯಾವನು ಈ ತೀರ್ಥಮಾಹಾತ್ಮ್ಯೆಯನ್ನು ಒಳ್ಳೆಯ ಮುಹೂರ್ತದಲ್ಲಿ ಪಾಠಮಾಡುತ್ತಾನೆಯೋ (ಓದುತ್ತಾನೆಯೋ) ಅವನು ಸಮಸ್ತ ಪಾಪಗಳ ಬಿಡುಗಡೆ ಯನ್ನು ಹೊಂದಿ ಪರಮಗತಿಯಾದ ಮೋಕ್ಷವನ್ನು ಪಡೆಯುವನು. ॥೧೧೫॥

ಯಾರು ಇದನ್ನು ಪ್ರತಿದಿನವೂ ಆಗಲೀ ಅಥವಾ ಒಳ್ಳೆಯ ಲಗ್ನದಲ್ಲಿ ಯಾಗಲಿ, ಕೇಳುವನೋ, ಅವನು ಸಕಲ ಪಾಪಗಳನ್ನೂ ಕಳೆದುಕೊಂಡು ಶಿವಲೋಕ ದಲ್ಲಿ ದೊಡ್ಡ ಪದವಿಯನ್ನು ಪಡೆಯುವನು. ॥೧೧೬॥

ತೀರ್ಥೇಷು ಶ್ರಾದ್ಧಕಾಲೇ ವಾ ಯ ಇದಂ ಶ್ರಾವಯೇನ್ಮುದಾ ।
ದಾರಿದ್ರ್ಯಂ ಸಕಲಂ ತ್ಯಕ್ತ್ವಾ ಸ ಮಹಾಧನವಾನ್ಭವೇತ್ ॥೧೧೭॥

ಯಃ ಶೃಣ್ವನ್ ದೇವತಾಪೂಜಾಂ ಕರೋತೀದಂ ಮುದಾ ನರಃ ।
ತಸ್ಯ ಬ್ರಹ್ಮಾ ಹರಿಶ್ಚಾಪಿ ಪ್ರಸೀದತಿ ಮಹೇಶ್ವರಃ ॥೧೧೮॥

ಭಗವಾನ್ದೇವಕೀಸೂನುಃ ಸರ್ವಭೂತಹಿತೇ ರತಃ ।
ಮಹಾದೇವಪ್ರಸಾದಾರ್ಥಮಿದಂ ಪಠತಿ ನಿತ್ಯಶಃ ॥೧೧೯॥

ತಸ್ಮಾದ್ಭವದ್ಭಿರ್ಮುನಯಃ ಶ್ರದ್ಧಯಾ ಪರಯಾ ಸಹ ।
ಪಠಿತವ್ಯಮಿದಂ ನಿತ್ಯಂ ಪ್ರಸಾದಾರ್ಥಂ ತ್ರಿಶೂಲಿನಃ ॥೧೨೦॥

ಏವಮುಕ್ತ್ವಾ ಮುನೀಂದ್ರೇಭ್ಯಃ ಸೂತಃ ಸರ್ವಾರ್ಥವಿತ್ತಮಃ ।
ಅತೀವ ಪ್ರೀತಿಮಾಪನ್ನಃ ಸೋಮಂ ಸೋಮಾರ್ಧಶೇಖರಂ ॥೧೨೧॥

ಇದನ್ನು ತೀರ್ಥಗಳಲ್ಲಿಯೂ, ಶ್ರಾದ್ಧಕಾಲಗಳಲ್ಲಿಯೂ, ಇತರರಿಗೆ ಪ್ರೀತಿಯಿಂದ ಹೇಳಿದರೆ, ಹಾಗೆ ಹೇಳಿದವನು ತನ್ನ ಸಮಸ್ತ ದಾರಿದ್ರ್ಯವನ್ನೂ ಕಳೆದುಕೊಂಡು ಮಹಾ ಧನಸಂಪನ್ನನಾಗುವನು. ||೧೧೭||

ಈ ತೀರ್ಥಮಾಹಾತ್ಮ್ಯೆಯನ್ನು ಕೇಳುತ್ತಾ ಸಂತೋಷದಿಂದ ದೇವರಪೂಜೆಯನ್ನು ಮಾಡುವ ಮನುಷ್ಯನಿಗೆ ಬ್ರಹ್ಮ ವಿಷ್ಣು ಮಹೇಶ್ವರರು ಅನುಗ್ರಹಮಾಡುವರು. ||೧೧೮||

ಮಹಾಮಹಿಮನಾದ ದೇವಕೀದೇವಿಯ ಮಗನಾದ ಶ್ರೀ ಕೃಷ್ಣನು ಸಮಸ್ತ ಪ್ರಾಣಿಗಳಿಗೂ ಹಿತವನ್ನುಂಟುಮಾಡುವುದಕ್ಕೂ, ಮಹಾದೇವನ ಅನುಗ್ರಹವುಂಟಾಗುವುದಕ್ಕೂ ಈ ಮಾಹಾತ್ಮ್ಯೆಯನ್ನು ಪ್ರತಿದಿನವೂ ಪಾರಾಯಣ ಮಾಡುವನು. ||೧೧೯||

ಆದುದರಿಂದ, ಎಲೈ ಮುನಿಗಳೇ, ನೀವೂ, ಅತ್ಯಂತ ಭಕ್ತಿಯಿಂದ, ತ್ರಿಶೂಲಧರನಾದ ಶಿವನ ಅನುಗ್ರಹಕ್ಕಾಗಿ ಈ ತೀರ್ಥಮಹಿಮೆಯನ್ನು ಪ್ರತಿದಿನವೂ ಪಾರಾಯಣ ಮಾಡಿರಿ. ||೧೨೦||

ಸಮಸ್ತ ಶಾಸ್ತ್ರಾರ್ಥಗಳನ್ನು ಬಲ್ಲವರಲ್ಲಿ ಶ್ರೇಷ್ಠನಾದ ಸೂತನು ನೈಮಿಷಾರಣ್ಯವಾಸಿಗಳಾದ ಮುನಿಗಳಿಗೆ, ಈ ರೀತಿಯಲ್ಲಿ ಹೇಳಿ ಅತ್ಯಂತ ಸಂತೋಷವನ್ನು ಹೊಂದಿ,

ಸರ್ವಜ್ಞಂ ಸರ್ವಕರ್ತಾರಂ ಸಂಸಾರಾಮಯಭೇಷಜಂ ।
ಸುರಾಸುರಮುನೀಂದ್ರೈಶ್ಚ ಪ್ರಣತಾಂಘ್ರಿಸರೋರುಹಂ ॥೧೨೨॥

ಧ್ಯಾತ್ವಾ ಹೃತ್ಪಂಕಜೇ ಭಕ್ತ್ಯಾ ಪ್ರಸನ್ನೇಂದ್ರಿಯಮಾನಸಃ ।
ಪ್ರಣಮ್ಯ ದಂಡವದ್ಭೂಮೌ ಮಹಾದೇವಂ ಜಗದ್ಗುರುಂ ॥೧೨೩॥

ವೇದವ್ಯಾಸಂ ಚ ಸಂಸಾರಸಮುದ್ರತರಣಪ್ಲವಂ ।
ವಿಹಾಯ ಮುನಿಶಾರ್ದೂಲಾನ್ ಕೈಲಾಸಮಚಲಂ ಗತಃ ॥೧೨೪॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಶಿವಮಾಹಾತ್ಮ್ಯಖಂಡೇ ತೀರ್ಥಮಾಹಾತ್ಮ್ಯಕಥನಂ ನಾಮ ತ್ರಯೋದಶೋಽಧ್ಯಾಯಃ

ಸರ್ವಜ್ಞನೂ, ಸಮಸ್ತವನ್ನೂ ಸೃಷ್ಟಿಮಾಡತಕ್ಕವನೂ, ಸಂಸಾರವೆಂಬ ರೋಗಕ್ಕೆ ಔಷಧಸ್ವರೂಪನೂ, ದೇವತೆಗಳು ರಾಕ್ಷಸರು ಮುನಿಶ್ರೇಷ್ಠರು ಇವರುಗಳಿಂದ ತನ್ನ ಪಾದಕಮಲಗಳಿಗೆ ನಮಸ್ಕಾರಮಾಡಿಸಿಕೊಳ್ಳತಕ್ಕವನೂ, ಚಂದ್ರಶೇಖರನೂ, ಉಮಾದೇವೀಸಹಿತನೂ, ಆದ ಶಿವನನ್ನು ಭಕ್ತಿಯಿಂದ ತನ್ನ ಹೃದಯಕಮಲದಲ್ಲಿ ಧ್ಯಾನಮಾಡುತ್ತ ತನ್ನ ಇಂದ್ರಿಯಗಳನ್ನೂ, ಮನಸ್ಸನ್ನೂ ಪರಿಶುದ್ಧವಾಗಿ ಮಾಡಿಕೊಂಡು ಲೋಕಕ್ಕೆಲ್ಲಕ್ಕೂ ದೊಡ್ಡವನಾದ ಮಹಾದೇವನಿಗೆ ಭೂಮಿಯಲ್ಲಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಸಂಸಾರ ಸಮುದ್ರವನ್ನು ದಾಟಿಸಲು, ನಾವೆಯಂತಿರುವ ವೇದವ್ಯಾಸರಿಗೂ, ನಮಸ್ಕರಿಸಿ, ಆ ಮುನಿಗಳನ್ನೆಲ್ಲರನ್ನೂ ಬಿಟ್ಟು ಕೈಲಾಸಪರ್ವತಕ್ಕೆ ಪ್ರಯಾಣಮಾಡಿದನು. ॥೧೨೧-೧೨೨-೧೨೩-೧೨೪॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಶಿವಮಾಹಾತ್ಮ್ಯಖಂಡದಲ್ಲಿ
ತೀರ್ಥಗಳ ಮಹಿಮೆಯನ್ನು ವರ್ಣಿಸುವ
ಹದಿಮೂರನೆಯ ಅಧ್ಯಾಯವು ಮುಗಿದುದು.

ಶಿವಮಾಹಾತ್ಮ್ಯಖಂಡವು ಸಂಪೂರ್ಣವಾಯಿತು.

॥ ಶ್ರೀಃ ॥

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಜ್ಞಾನಯೋಗಖಂಡಂ

|| ಪ್ರಥಮೋಽಧ್ಯಾಯಃ ||

ಮೊದಲನೆಯ ಅಧ್ಯಾಯವು

ಕೈಲಾಸಶಿಖರೇ ರಮ್ಯೇ ನಾನಾರತ್ನಸಮಾಕುಲೇ ।
ನಾನಾಪುಷ್ಪಸಮಾಕೀರ್ಣೇ ನಾನಾಮೂಲಫಲೋದಕೇ ||೧||

ನಾನಾವಲ್ಲೀಸಮಾಕೀರ್ಣೇ ನಾನಾಮೃಗಸಮಾಕುಲೇ ।
ನಾನಾವೃಕ್ಷಸಮಾಕೀರ್ಣೇ ನಾನಾಯೋಗಿಸಮಾವೃತೇ ||೨||

ನಾನಾಸಿದ್ಧಸಮಾಕೀರ್ಣೇ ನಾನಾಮುನಿಸಮಾವೃತೇ ।
ನಾನಾದೇವಸಮಾಕೀರ್ಣೇ ನಾನಾಚಾರಣಸೇವಿತೇ ||೩||

ನಾನಾಯಕ್ಷಸಮಾಕೀರ್ಣೇ ನಾನಾಗಂಧರ್ವಸೇವಿತೇ ।
ಸುಖಾಸೀನಂ ಸುಪ್ರಸನ್ನಂ ಸುನೇತ್ರಂ ಸುಸ್ಮಿತಂ ಶುಚಿಂ ||೪||

ಹಿಂದಿನ ಶಿವಮಾಹಾತ್ಮ್ಯಖಂಡದಲ್ಲಿ ಸೂತನು ಕೈಲಾಸಕ್ಕೆ ಪ್ರಯಾಣ ಮಾಡಿದನೆಂದು ಹೇಳಿತಷ್ಟೆ. ಆ ಕೈಲಾಸವು ಮನೋಹರವಾಗಿ ಬಗೆಬಗೆಯ ಹೂವುಗಳು, ರತ್ನಗಳು, ಕಂದಮೂಲಫಲಗಳು, ಅನೇಕ ಬಳ್ಳಿಗಳು, ಮರಗಳು, ಮೃಗಗಳು, ಇವುಗಳಿಂದಲೂ, ಅನೇಕ ಯೋಗಿಗಳು, ಸಿದ್ಧರು, ಮುನಿಗಳು, ದೇವತೆಗಳು, ಚಾರಣರು, ಯಕ್ಷರು, ಗಂಧರ್ವರು ಇವರುಗಳಿಂದಲೂ, ಕೂಡಿದುದಾಗಿ ಕಂಗೊಳಿಸುತ್ತಿದ್ದಿತು. ಅಲ್ಲಿ, ||೧-೨-೩||

ಸಂತೋಷದಿಂದ, ಸುಖವಾಗಿ ಕುಳಿತುಕೊಂಡಿರುವ, ಒಳ್ಳೆಯ ಕಣ್ಣುಗಳುಳ್ಳ, ನಗುಮುಖದಿಂದ ಕೂಡಿದ, ಪರಿಶುದ್ಧನೂ, ತನ್ನ ತೇಜಸ್ಸಿನಿಂದ ಪ್ರಪಂಚವನ್ನೆಲ್ಲ

ಸ್ವತೇಜಸಾ ಜಗತ್ಸರ್ವಂ ಭಾಸಯಂತಂ ಭಯಾಪಹಂ ।
ಸರ್ವಶಾಸ್ತ್ರಾರ್ಥತತ್ವಜ್ಞಂ ವೇದವೇದಾಂಗಪಾರಗಂ ॥೫॥

ಭಸ್ಮೋದ್ಧೂಲಿತಸರ್ವಾಂಗಂ ತ್ರಿಪುಂಡ್ರಾಂಕಿತಮಸ್ತಕಂ ।
ರುದ್ರಾಕ್ಷಮಾಲಾಭರಣಂ ಜಟಾಮಂಡಲಮಂಡಿತಂ ॥೬॥

ಜಿತೇಂದ್ರಿಯಂ ಜಿತಕ್ರೋಧಂ ಜೀವನ್ಮುಕ್ತಂ ಜಗದ್ಗುರುಂ ।
ವ್ಯಾಸಪ್ರಸಾದಸಂಪನ್ನಂ ವ್ಯಾಸವದ್ವಿಗತಸ್ಪೃಹಂ ॥೭॥

ವೇದಮಾರ್ಗೇ ಸದಾ ನಿಷ್ಠಂ ವೇದಮಾರ್ಗಪ್ರವರ್ತಕಂ ।
ಋಜುಕಾಯಶಿರೋಗ್ರೀವಂ ನಾಸಾಗ್ರನ್ಯಸ್ತಲೋಚನಂ ॥೮॥

ಸ್ವಯಂ ಸ್ವಮೇವ ಧ್ಯಾಯಂತಂ ಸೂತಂ ಬುದ್ಧಿಮತಾಂ ವರಂ ।
ವಿಷ್ಣುವೃದ್ಧೋ ವಿಶಾಲಾಕ್ಷೋ ವತ್ಸಃ ಕುಂಡಿನ ಅರುಣಿಃ ॥೯॥

ವನ್ನೂ ಪ್ರಕಾಶಪಡಿಸತಕ್ಕವನೂ ಆದ, ಪ್ರಾಣಿಗಳ ಭಯವನ್ನು ಪರಿಹಾರಮಾಡುವವನೂ, ಸಮಸ್ತಶಾಸ್ತ್ರಗಳ ನಿಜವನ್ನು ತಿಳಿದು ವೇದವೇದಾಂಗಗಳನ್ನು ಸಂಪೂರ್ಣವಾಗಿ ಬಲ್ಲ, ಅವಯವಗಳಿಗೆಲ್ಲಕ್ಕೂ ವಿಭೂತಿಯನ್ನು ಧರಿಸಿ, ಹಣೆಯಲ್ಲಿ ತ್ರಿಪುಂಡ್ರವನ್ನು ಇಟ್ಟಿರುವ, ರುದ್ರಾಕ್ಷಿಗಳ ಸರವನ್ನು ಹಾಕಿಕೊಂಡು, ತಲೆಯಲ್ಲಿ ಜಟೆಯನ್ನು ಕಟ್ಟಿ ಅಲಂಕರಿಸಿಕೊಂಡಿರುವ, ಇಂದ್ರಿಯಗಳನ್ನು ಜಯಿಸಿ ಕೋಪವಿಲ್ಲದೆ ಜೀವನ್ಮುಕ್ತನಾಗಿ ಜಗದ್ಗುರುವೆನಿಸಿಕೊಂಡಿರುವ, ವ್ಯಾಸರ ಅನುಗ್ರಹದಿಂದ ಕೂಡಿ, ಆ ವ್ಯಾಸರಂತೆ ವೈರಾಗ್ಯದಿಂದ ಕೂಡಿರುವ, ತಾನು ಯಾವಾಗಲೂ ವೇದದ ನಿಯಮದಂತೆ ನಡೆಯುತ್ತ, ಆ ನಿಯಮವನ್ನು ತಿಳಿಸಿ ಜನರೆಲ್ಲರೂ ಅನುಸರಿಸುವಂತೆ ಮಾಡುತ್ತಿರುವ, ತನ್ನ ಶರೀರವನ್ನೂ, ಕುತ್ತಿಗೆಯನ್ನೂ ತಲೆಯನ್ನೂ ಸರಳವಾಗಿಟ್ಟುಕೊಂಡು ಮೂಗಿನ ತುದಿಯಲ್ಲಿ ಕಣ್ಣಿನ ನೋಟವನ್ನಿರಿಸಿ, ತನ್ನನ್ನೇ ತಾನು ಧ್ಯಾನಮಾಡುತ್ತಲಿರುವ, ಬುದ್ಧಿವಂತರಲ್ಲಿ ಶ್ರೇಷ್ಠನಾದ, ಸೂತಮುನಿಯನ್ನು, ॥೪-೫-೬-೭-೮॥

ವಿಷ್ಣುವೃದ್ಧ, ವಿಶಾಲಾಕ್ಷ, ವತ್ಸ, ಕುಂಡಿನ, ಆರುಣಿ, ಜಾಬಾಲಿ, ಜಮದಗ್ನಿ, ಜರ್ಜರ, ಜಂಗಮ, ಜಯ, ಪಕ್ವ, ಪಾಶಧರ, ಪಾರಗ, ಪಂಡಿತೋತ್ತಮ, ಮಹಾಕಾಯ, ಮಹಾಗ್ರೀವ, ಮಹಾಬಾಹು, ಮಹೋದರ, ಉದ್ದಾಲಕ, ಮಹಾಸೇನ,

ಜಾಬಾಲೋ ಜಮದಗ್ನಿಶ್ಚ ಜರ್ಜರೋ ಜಂಗಮೋ ಜಯಃ ।
ಪಕ್ಷ್ಮಃ ಪಾಶಧರಃ ಪಾರಃ ಪಾರಗಃ ಪಂಡಿತೋತ್ತಮಃ ॥೧೦॥

ಮಹಾಕಾಯೋ ಮಹಾಗ್ರೀವೋ ಮಹಾಬಾಹುರ್ಮಹೋದರಃ ।
ಉದ್ದಾಲಕೋ ಮಹಾಸೇನ ಆರ್ತ ಆಮಲಕಪ್ರಿಯಃ ॥೧೧॥

ಏಕಪಾದೋ ದ್ವಿಪಾದಶ್ಚ ತ್ರಿಪಾದಃ ಪದ್ಮನಾಯಕಃ ।
ಉಗ್ರವೀರ್ಯೋ ಮಹಾವೀರ್ಯ ಉತ್ತಮೋಽನುತ್ತಮಃ ಪಟುಃ ॥೧೨॥

ಪಂಡಿತಃ ಕರುಣಃ ಕಾಲಃ ಕೈವಲ್ಯಶ್ಚ ಕಲಾಧರಃ ।
ಕಲ್ಪಾಂತಃ ಕಂಕಣಃ ಕಣ್ವಃ ಕಾಲಃ ಕಾಲಾಗ್ನಿರುದ್ರಕಃ ॥೧೩॥

ಶ್ವೇತಬಾಹುರ್ಮಹಾಪ್ರಾಜ್ಞಃ ಶ್ವೇತಾಶ್ವತರಸಂಜ್ಞಕಃ ।
ಏಷಾಂ ಶಿಷ್ಯಾಃ ಪ್ರಶಿಷ್ಯಾಶ್ಚ ಪಾಶವಿಚ್ಛೇದನೇ ರತಾಃ ॥೧೪॥

ವಿಚಾರ್ಯಮಾಣಾ ವೇದಾರ್ಥಂ ವಿಷಣ್ಣಾ ವಿವಶಾ ಭೃಶಂ ।
ಸಮಾಗಮ್ಯ ಸಮಾಧಿಸ್ಥಂ ದಂಡವತ್ಪ್ರಣಿಪತ್ಯ ಚ ॥೧೫॥
ಸ್ತೋತ್ರೈಃ ಸ್ತುತ್ವಾ ಮಹಾತ್ಮಾನಂ ಪಪ್ರಚ್ಛುಃ ಪಂಡಿತೋತ್ತಮಾಃ ।

ಆರ್ತ, ಆಮಲಕಪ್ರಿಯ, ಏಕಪಾದ, ದ್ವಿಪಾದ, ತ್ರಿಪಾದ, ಪದ್ಮನಾಯಕ, ಉಗ್ರವೀರ್ಯ, ಮಹಾವೀರ್ಯ, ಉತ್ತಮ, ಅನುತ್ತಮ, ಪಟು, ಪಂಡಿತ, ಕರುಣ, ಕಾಲ, ಕೈವಲ್ಯ, ಕಲಾಧರ, ಕಲ್ಪಾಂತ, ಕಂಕಣ, ಕಣ್ವ, ಕಾಲ, ಕಾಲಾಗ್ನಿರುದ್ರ, ಶ್ವೇತಬಾಹು, ಶ್ವೇತಾಶ್ವತರ ಎಂಬ ಹೆಸರಿನ ಋಷಿಗಳೂ, ಇವರ ಶಿಷ್ಯರೂ, ಆ ಶಿಷ್ಯರ ಶಿಷ್ಯರೂ, ತಮ್ಮ ಸಂಸಾರಬಂಧನ ರೂಪವಾದ ಹಗ್ಗವನ್ನು ಕತ್ತರಿಸುವುದರಲ್ಲಿ ಆಸಕ್ತರಾಗಿ, ॥೯-೧೦-೧೧-೧೨-೧೩-೧೪॥

ವೇದಾರ್ಥವನ್ನು ವಿಚಾರಮಾಡುತ್ತಾ, ಅದು ಸ್ಪಷ್ಟವಾಗಿ ತಿಳಿಯದುದರಿಂದ, ಮುಂದೆ ಮಾಡಬೇಕಾದುದನ್ನು ತಿಳಿಯದೆ ವಿಷಾದದಿಂದ ಧ್ಯಾನನಿಷ್ಠನಾದ ಸೂತ ಮುನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಅನೇಕ ಸ್ತೋತ್ರಗಳಿಂದ ಹೊಗಳಿ ತಾವು ಜ್ಞಾನಿಗಳಲ್ಲಿ ಶ್ರೇಷ್ಠರಾದರೂ, ಮಹಾಮಹಿಮನಾದ ಆ ಸೂತಮುನಿಯನ್ನು ಪ್ರಶ್ನೆಮಾಡಿದರು. ॥೧೫॥

|| ಮುನಯ ಊಚುಃ ||

ಭವತಾ ಕಥಿತಂ ಸರ್ವಂ ಸಂಕ್ಷೇಪಾದ್ವಿಸ್ತರೇಣ ಚ ||೧೬||

ಇದಾನೀಂ ಶ್ರೋತುಮಿಚ್ಛಾಮೋ ಜ್ಞಾನಯೋಗಂ ಸಹೇತುಕಂ ।
ಸಾಕ್ಷಾದ್ವಿಷ್ಣೋರ್ಜಗನ್ನಾಥಾತ್ ಕೃಷ್ಣದ್ವೈಪಾಯನಾದ್ಗುರೋಃ ||೧೭||

ಅವಾಪ್ತಜ್ಞಾನಯೋಗಸ್ತ್ವಂ ನ ವೇತ್ತಾ ತ್ವಾದೃತೇ ಭುವಿ ।
ತಸ್ಮಾತ್ಕಾರುಣ್ಯತೋಽಸ್ಮಾಕಂ ಸಂಕ್ಷೇಪಾದ್ವಕ್ತುಮರ್ಹಸಿ ||೧೮||

ಇತಿ ಪೃಷ್ಟೋ ಮುನಿಶ್ರೇಷ್ಠೈಃ ಸೂತಃ ಪೌರಾಣಿಕಃ ಪ್ರಭುಃ ।
ಸಾಕ್ಷಾತ್ಸರ್ವೇಶ್ವರಂ ಸಾಂಬಂ ಸಂಸಾರಾಮಯಭೇಷಜಂ ||೧೯||

ಸರ್ವಜ್ಞಂ ಸರ್ವಗಂ ಶರ್ವಂ ಸರ್ವಭೂತಹಿತೇ ರತಂ ।
ವ್ಯಾಘ್ರಚರ್ಮಾಂಬರಧರಂ ವ್ಯಾಖ್ಯಾನೈಕರತಂ ವಿಭುಂ ||೨೦||

ಚತುರ್ಭುಜಂ ಶರಚ್ಚಂದ್ರಚಂದ್ರಿಕಾಧವಲಾಕೃತಿಂ ।
ಗಂಗಾಧರಂ ವಿರೂಪಾಕ್ಷಂ ಚಂದ್ರಮೌಲಿಂ ಜಟಾಧರಂ ||೨೧||

ಋಷಿಗಳು ಹೇಳಿದರು— ಓ ಸೂತಮುನಿಯೇ, ಹಿಂದೆ ನೀನು ಜ್ಞಾನಯೋಗವನ್ನು ಸಂಗ್ರಹವಾಗಿ ಹೇಳಿರುವೆ. ಈಗ ನಾವು ಆ ಜ್ಞಾನಯೋಗದ ಸ್ವರೂಪವನ್ನು ಕಾರಣ ಸಹಿತವಾಗಿ, ವಿಸ್ತಾರವಾಗಿ ಕೇಳಬೇಕೆಂದಿರುವೆವು. ||೧೬||

ನೀನು ಲೋಕಕ್ಕೆ ಒಡೆಯನಾದ ಸಾಕ್ಷಾತ್ ವಿಷ್ಣುವಿನ ಅವತಾರವಾದ ಕೃಷ್ಣದ್ವೈಪಾಯನನೆಂಬ ಗುರುವಿನಿಂದ ಜ್ಞಾನಯೋಗವನ್ನು ಪಡೆದಿರುವೆ. ಭೂಮಿಯಲ್ಲಿ ನಿನ್ನಂತಹ ಜ್ಞಾನಿಯು ಮತ್ತೊಬ್ಬನಿಲ್ಲ. ಆದುದರಿಂದ ದಯೆಯಿಟ್ಟು ನಮಗೆ ಸಂಕ್ಷೇಪಿಸದೆ ವಿಸ್ತಾರವಾಗಿ ಹೇಳಬೇಕಾಗಿರುವುದು. ||೧೭-೧೮||

ಮುನಿಶ್ರೇಷ್ಠರು ಹೀಗೆ ಪ್ರಶ್ನಿಸಲು ಪುರಾಣವನ್ನು ಹೇಳುವವರಲ್ಲಿ ಶ್ರೇಷ್ಠನಾದ ಸೂತನು ಸಮಸ್ತ ಪ್ರಪಂಚಕ್ಕೂ ಒಡೆಯನೂ, ಉಮಾದೇವೀಸಹಿತನೂ, ಸಂಸಾರವೆಂಬ ರೋಗಕ್ಕೆ ಔಷಧಸ್ವರೂಪನೂ, ಸರ್ವಜ್ಞನೂ, ಸರ್ವಗತನೂ, ಸಮಸ್ತ ಪ್ರಾಣಿಗಳಿಗೂ ಹಿತವನ್ನುಂಟುಮಾಡುವವನೂ, ವ್ಯಾಘ್ರಚರ್ಮವನ್ನು ವಸ್ತ್ರವನ್ನಾಗಿ ಧರಿಸಿದವನೂ, ಜ್ಞಾನೋಪದೇಶವೊಂದರಲ್ಲೇ ಆಸಕ್ತನಾದವನೂ, ನಾಲ್ಕು ತೋಳುಗಳುಳ್ಳವನೂ, ಶರದೃತುವಿನ ಚಂದ್ರನಂತೆ ಬೆಳ್ಳಗಿರುವ ಮೈಬಣ್ಣವು

ನೀಲಗ್ರೀವಂ ಚಿರಂ ಸ್ಮೃತ್ವಾ ವ್ಯಾಸಮುಷ್ಯಮಿತೌಜಸಂ ।
ಪ್ರಹೃಷ್ಟಃ ಪರಯಾ ಭಕ್ತ್ಯಾ ಪರಿಪೂರ್ಣಮನೋರಥಃ ॥೨೨॥

ಲೌಕಿಕೈರ್ವೈದಿಕೈಃ ಸ್ತೋತ್ರೈಃ ಸ್ತುತ್ವಾ ಸಮ್ಯಕ್ಸಮಾಹಿತಃ ।
ವಕ್ತುಮಾರಭತೇ ಸರ್ವಂ ಪ್ರಣಿಪತ್ಯ ಮಹೇಶ್ವರಂ ॥೨೩॥

|| ಸೂತ ಉವಾಚ ||

ಶೃಣುಧ್ವಂ ಮುನಯಃ ಸರ್ವೇ ಭಾಗ್ಯವಂತಃ ಸಮಾಹಿತಾಃ ।
ಏತದೇವ ಪುರಾಽಪೃಚ್ಛದ್ಗಿರಾಂ ನಾಥೋ ಮಹೇಶ್ವರಂ ॥೨೪॥

ದೇವೋಽಪಿ ದೇವೀಮಾಲೋಕ್ಯ ಕರುಣಾಽಽವಿಷ್ಟಚೇತಸಾ ।
ಪ್ರಾಹ ಗಂಭೀರಯಾ ವಾಚಾ ಗುರವೇ ಮುನಿಪುಂಗವಾಃ ॥೨೫॥

ದೇವ್ಯಾ ಅಂಕೇ ಸಮಾಸೀನಃ ಸ್ಕಂದೋಽಪಿ ಶ್ರುತವಾಂಸ್ತದಾ ।
ಸ್ಕಂದಾದ್ವಸಿಷ್ಠಃ ಸಂಪ್ರಾಪ್ತಃ ಪೂರ್ವಜನ್ಮತಪೋಬಲಾತ್ ॥೨೬॥

ಳ್ಳವನೂ, ಗಂಗೆಯನ್ನೂ, ಚಂದ್ರನನ್ನೂ ತಲೆಯಲ್ಲಿರುವ ಜಟೆಯಲ್ಲಿ ಧರಿಸಿದವನೂ, ಮೂರು ಕಣ್ಣುಗಳುಳ್ಳವನೂ, ನೀಲವಾದ ಕತ್ತುಳ್ಳವನೂ ಆದ ಶಿವನನ್ನು ಬಹಳ ಕಾಲ ಧ್ಯಾನಮಾಡಿ, ವಿಶೇಷಭಕ್ತಿಯಿಂದ ಸಂತೋಷಪಡುತ್ತಾ ಲೌಕಿಕವಾದ ಮತ್ತು ವೇದೋಕ್ತವಾದ ಸ್ತೋತ್ರಗಳಿಂದ ಹೊಗಳಿ, ಏಕಾಗ್ರಚಿತ್ತದಿಂದ ಮಹೇಶ್ವರನಿಗೆ ನಮಸ್ಕರಿಸಿ, ಎಲ್ಲವನ್ನೂ ಹೇಳಲು ಪ್ರಾರಂಭಮಾಡಿದನು.॥೧೯-೨೦-೨೧-೨೨-೨೩॥

ಸೂತನು ಹೇಳಿದನು—ಎಲೈ ಮುನಿಗಳೇ, ನೀವೆಲ್ಲರೂ ಪುಣ್ಯವಂತರು, ಏಕಾಗ್ರಚಿತ್ತದಿಂದ ಕೇಳಿರಿ. ಇದನ್ನೇ ಹಿಂದೆ ದೇವಗುರುವಾದ ಬೃಹಸ್ಪತಿಯು ಮಹೇಶ್ವರನನ್ನು ಪ್ರಶ್ನೆಮಾಡಿದನು. ॥೨೪॥

ಮಹಾದೇವನು ಉಮಾದೇವಿಯನ್ನು ನೋಡಿ ದಯೆಯಿಂದ ಕೂಡಿದವನಾಗಿ ಗಂಭೀರಧ್ವನಿಯಿಂದ ಬೃಹಸ್ಪತಿಗೆ ಹೇಳಿದನು. ॥೨೫॥

ಆಗ ದೇವಿಯ ತೊಡೆಯ ಮೇಲೆ ಕುಳಿತಿದ್ದ ಕುಮಾರಸ್ವಾಮಿಯೂ ಅದನ್ನು ಕೇಳಿದನು. ಆ ಕುಮಾರಸ್ವಾಮಿಯಿಂದ ವಸಿಷ್ಠನು ತನ್ನ ಪೂರ್ವಜನ್ಮದ ತಪಸ್ಸಿನ ಫಲದ ಮಹಿಮೆಯಿಂದ ಕೇಳಿ ತಿಳಿದನು. ॥೨೬॥

ವಸಿಷ್ಠಾಲ್ಲಬ್ಧವಾನ್ ಶಕ್ತಿಃ ಶಕ್ತೇಃ ಪ್ರಾಪ್ತಃ ಪರಾಶರಃ ।
ಪರಾಶರಾನ್ಮುನಿಶ್ರೇಷ್ಠೋ ಭಗವಾನ್ವ್ಯಾಸಸಂಜ್ಞಿತಃ ॥೨೭॥

ತದಹಂ ಶ್ರುತವಾನ್ವ್ಯಾಸಾಜ್ಜನ್ಮಾಂತರತಪೋಬಲಾತ್ ।
ವಕ್ಷ್ಯೇ ವೇದವಿದಾಮದ್ಯ ಯುಷ್ಮಾಕಂ ತದ್ಯಥಾಶ್ರುತಂ ॥೨೮॥

ಇತಿ ಶ್ರೀಸ್ಕಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ ಜ್ಞಾನಯೋಗಸಂಪ್ರದಾಯಪರಂಪರಾಕಥನಂ ನಾಮ ಪ್ರಥಮೋಽಧ್ಯಾಯಃ

ವಸಿಷ್ಠನಿಂದ ಅವನ ಮಗ ಶಕ್ತಿಯು ಈ ಬ್ರಹ್ಮವಿದ್ಯೆಯನ್ನು ಪಡೆದನು. ಶಕ್ತಿಯಿಂದ ಪರಾಶರನೂ, ಪರಾಶರನಿಂದ ಮಹಾಮಹಿಮನಾದ ವ್ಯಾಸಮುನಿಯೂ ಇದನ್ನು ಪಡೆದರು. ||೨೭||

ನಾನು ಪೂರ್ವಜನ್ಮದಲ್ಲಿ ಮಾಡಿದ ತಪಸ್ಸಿನ ಮಹಿಮೆಯಿಂದ ವ್ಯಾಸರಿಂದ ಈ ಬ್ರಹ್ಮವಿದ್ಯೆಯನ್ನು ಕೇಳಿದೆನು. ಈಗ ವೇದಾಭ್ಯಾಸಮಾಡಿ ಅರ್ಥವನ್ನೂ ತಿಳಿದಿರುವ ನಿಮಗೆ ನಾನು ಕೇಳಿದ ವಿಷಯವೊಂದನ್ನೂ ಬಿಡದೆ ಹೇಳುವೆನು. ||೨೮||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ ಜ್ಞಾನಯೋಗದ ಸಂಪ್ರದಾಯಕ್ರಮದಲ್ಲಿ ಗುರುಪರಂಪರೆಯನ್ನೂ ವರ್ಣಿಸಿರುವ ಒಂದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಜ್ಞಾನಯೋಗಖಂಡಂ

|| ದ್ವಿತೀಯೋಽಧ್ಯಾಯಃ ||

ಎರಡನೆಯ ಅಧ್ಯಾಯವು

|| ಈಶ್ವರ ಉವಾಚ ||

ಅವಾಚ್ಯಮೇತದ್ವಿಜ್ಞಾನಮತಿಗುಹ್ಯಮನುತ್ತಮಂ ।
ಆಮ್ನಾಯಾಂತೈಕಸಂಸಿದ್ಧಮಶೇಷಕ್ಲೇಶನಾಶಕಂ ॥೧॥

ಈಶ್ವರನು ಹೇಳಿದನು—ಉಪಾಯಸಹಿತವಾದ ಜ್ಞಾನಯೋಗದಲ್ಲಿ ಯಾರಿಗೆ ಆಸಕ್ತಿಯಿರುವುದೋ ಅವರೇ ಅಧಿಕಾರಿಗಳಾಗುವರು. ಗೀತೆಯಲ್ಲಿ—ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತಂ ಕೃತಂಚಯತ್ । ಅಸದಿತ್ಯುಚ್ಯತೇ ಪಾರ್ಥ ನ ಚ ತತ್ಪ್ರೇತ್ಯನೋ ಇಹ ॥ ಎಂದು ಆಸಕ್ತಿಯ ಆವಶ್ಯಕತೆಯನ್ನು ಹೇಳಿರುವುದು. ಆದುದರಿಂದ ಜ್ಞಾನದ ವಿಷಯದಲ್ಲಿ ಆಸಕ್ತಿಯನ್ನು ಹುಟ್ಟಿಸುವುದಕ್ಕಾಗಿ, ಸ್ವರೂಪ ದಿಂದಲೂ ಫಲದಿಂದಲೂ ಜ್ಞಾನಕ್ಕೆ ಶ್ರೇಷ್ಠತೆಯನ್ನು ಹೇಳುತ್ತ, ಈಶ್ವರನು ಬೃಹಸ್ಪತಿಗೆ ಹೇಳಿದನು. ಈ ವಿಜ್ಞಾನವು ಸಮಸ್ತ ದುಃಖಗಳನ್ನೂ, ನಾಶಮಾಡು ವುದು. ಶಾಶ್ವತವಾದ ಆನಂದವನ್ನುಂಟುಮಾಡುವುದರಿಂದ ಶ್ರೇಷ್ಠವಾದುದು. ವೇದಾಂತವಾಕ್ಯಪರಿಶೀಲನೆಯಿಂದ ಸಿದ್ಧಿಸತಕ್ಕುದು, ಅತ್ಯಂತ ಗೋಪ್ಯವಾದುದು. ಆದುದರಿಂದ ಇದನ್ನು ಅಧಿಕಾರವಿಲ್ಲದವರಿಗೆ ಹೇಳಬಾರದು. ವಿದ್ಯಾರೂಪವಾದ ಬೀಜವನ್ನು ಊಷರ ಭೂಮಿಯಲ್ಲಿ ಬಿತ್ತಬಾರದೆಂದು ಅಭಿಪ್ರಾಯವು. ॥೧॥

ಅನಂತಾನಂದಮೋಕ್ಷಾಖ್ಯಬ್ರಹ್ಮಪ್ರಾಪ್ತ್ಯೇಕಸಾಧನಂ ।
ಆಶ್ರಮೈರಖಿಲೈರ್ಯುಕ್ತಮಷ್ಟಾಂಗೈರಪಿ ಸಂಯುತಂ ॥೨॥

ವಕ್ಷ್ಯೇ ಕಾರುಣ್ಯತಃ ಸಾಕ್ಷಾತ್ ಶೃಣು ವಾಚಸ್ಪತೇಽಧುನಾ ।
ಆಸೀದಿದಂ ತಮೋಮಾತ್ರಮಾತ್ಮಾಭಿನ್ನಂ ಜಗತ್ಪುರಾ ॥೩॥

ಜ್ಞಾನಕ್ಕೆ ಮೂರುವಿಧವಾದ ಅಧಿಕಾರಿಗಳಿರುವರು. ಶಾಶ್ವತವಾದ, ಆನಂದ ಸ್ವರೂಪವಾದ, ಮೋಕ್ಷವೆಂಬ ಪರಬ್ರಹ್ಮಸ್ವರೂಪವನ್ನು ಪಡೆಯುವುದಕ್ಕಾಗಿ ಉತ್ತಮ, ಮಧ್ಯಮ, ಅಧಮ ರೂಪರಾದ ಈ ಮೂವರು ಅಧಿಕಾರಿಗಳೂ, ತಮ್ಮ ಶಕ್ತಿಗೆ ತಕ್ಕ ಉಪಾಯಗಳನ್ನು ಅನುಸರಿಸಬೇಕು. ಶುದ್ಧವಾದ ಸತ್ವಗುಣವುಳ್ಳವರೂ, ಏಕಾಗ್ರ ಚಿತ್ತರಾದವರೂ, ಉತ್ತಮಾಧಿಕಾರಿಗಳು. ಅವರು ವೇದಾಂತಶ್ರವಣಮಾತ್ರದಿಂದ ಜ್ಞಾನಿಗಳಾಗುವರು. ಅದನ್ನೇ ಹಿಂದಿನ ಶ್ಲೋಕದಲ್ಲಿ "ಆಮ್ನಾಯಾಂತೈಕಸಂಸಿದ್ಧಂ" ಎಂದು ಹೇಳಿರುವುದು. ಮತ್ತೂ ಈ ಖಂಡದ ಏಳನೆಯ ಅಧ್ಯಾಯದ ಕೊನೆಯಲ್ಲಿ— "ಸರ್ವದಾ ಸರ್ವಮುತ್ಸೃಜ್ಯ ಶ್ರವಣಂ ಕುರು" ಎಂದು ಹೇಳಿರುವರು. ವಿವೇಕ ವೈರಾಗ್ಯಗಳಿಂದ ಕೂಡಿದ್ದರೂ, ಅಲ್ಪವಾದ ರಜೋಗುಣವಿರುವುದರಿಂದ, ಯಾರು ಚಂಚಲವಾದ ಮನಸ್ಸುಳ್ಳವರೋ, ಅವರೇ ಮಧ್ಯಮಾಧಿಕಾರಿಗಳು. ಇವರಿಗೆ ಬೇಗನೆ ಮನಸ್ಸು ಏಕಾಗ್ರತೆಗೆ ಬರುವುದಿಲ್ಲ. ಆದುದರಿಂದ ಇಂಥವರಿಗೆ ಅಷ್ಟಾಂಗಯೋಗವು ಜ್ಞಾನಕ್ಕೆ ಸಾಧನವಾಗುವುದು. ಅದನ್ನು ಈ ಖಂಡದ ಹತ್ತನೆಯ ಅಧ್ಯಾಯದಿಂದ ಖಂಡಪೂರ್ತಿಯಾಗುವವರೆಗೂ ಹೇಳಿರುವುದು. ಯಾರಿಗೆ ಪ್ರಬಲವಾದ ಪಾಪಫಲಗಳು ಜ್ಞಾನಕ್ಕೆ ತಡೆಯನ್ನುಂಟುಮಾಡುವುವೋ, ಜ್ಞಾನವನ್ನು ಪಡೆಯಬೇಕೆಂಬ ಉತ್ಸಾಹ ಮಾತ್ರವಿರುವುದೋ, ಈ ಉತ್ಸಾಹವಿದ್ದರೂ, ಸ್ಥಿರತೆಯಿಂದ, ವಿಚಾರಮಾಡುವುದಕ್ಕೆ ಶಕ್ತಿಯಿರುವುದಿಲ್ಲವೋ, ಅವರು ಅಧಮಾಧಿಕಾರಿಗಳು. ಇಂಥವರಿಗೆ ಬ್ರಹ್ಮಸ್ವರೂಪ ವನ್ನು ತಿಳಿಯಬೇಕೆಂಬ ಸ್ಥಿರಬುದ್ಧಿಯನ್ನುಂಟುಮಾಡುವುದಕ್ಕಾಗಿ, ವರ್ಣಾಶ್ರಮ ಧರ್ಮಗಳನ್ನು ಬಿಡದೆ, ನಡೆಯಿಸಿಕೊಂಡು ಬರಬೇಕೆಂದೂ, ದಾನಧರ್ಮಗಳನ್ನು ಮಾಡಬೇಕೆಂದೂ, ವೇದವು—"ವಿವಿದಿಷಂತಿ ಯಜ್ಞೇನ ದಾನೇನ ತಪಸಾಽನಾಶಕೇನ" ಎಂದು ವಿಧಿಸಿರುವುದು. ಈ ಉಪಾಯವು ಈ ಖಂಡದ ಮೊದಲಿನಿಂದ ಹತ್ತನೆಯ ಅಧ್ಯಾಯಪರ್ಯಂತವಾಗಿ ವಿವರಿಸಲಾಗುವುದು. ಒಟ್ಟಿನಲ್ಲಿ ಈ ಖಂಡವು ಜ್ಞಾನೋತ್ಪತ್ತಿಗೆ ಉಪಾಯವನ್ನು ಹೇಳತಕ್ಕುದಾಗಿರುವುದು ಎಂದು ತಾತ್ಪರ್ಯವು.॥೨॥

ಎಲೈ ಬೃಹಸ್ಪತಿಯೇ, ಕರುಣೆಯಿಂದ ನಾನೇ ನಿನಗೆ ಹೇಳುವೆನು, ಕೇಳು.

ತತಃ ಸತ್ವಗುಣಕ್ಷೋಭಾನ್ಮಹತ್ತತ್ವಮಜಾಯತ ।
ಏಕ ಏವ ಶಿವಃ ಸಾಕ್ಷಾತ್ತ್ರಿಸ್ರೋ ಮೂರ್ತೀರ್ದಧೌ ಪುನಃ ॥೪॥

ರಜೋಗುಣಂ ಸಮಾಸ್ಥಾಯ ಬ್ರಹ್ಮಾ ಸ್ಯಾತ್ಸೃಷ್ಟಿಕಾರಣಂ ।
ಸತ್ವಮಾಸ್ಥಾಯ ವಿಷ್ಣುಃ ಸ್ಯಾತ್ಪಾಲನಾರ್ಥಂ ಬೃಹಸ್ಪತೇ ॥೫॥

ತಮಸಾ ಕಾಲರುದ್ರಾಖ್ಯಃ ಸರ್ವಸಂಹಾರಕಾರಣಂ ।
ಅಸಂಖ್ಯಾ ಮೂರ್ತಯಸ್ತೇಷಾಂ ವಿಜಾಯಂತೇ ಪೃಥಕ್ ಪೃಥಕ್ ॥೬॥

ಉತ್ತಮಾಧಮರೂಪೇಣ ಗುಣವೈಷಮ್ಯಮಾತ್ರತಃ ।
ಶಬ್ದಾದೀನಿ ಚ ಭೂತಾನಿ ಶ್ರೋತ್ರಾದೀಂದ್ರಿಯಪಂಚಕಂ ॥೭॥

ವಾಗಾದಿಪಂಚಕಂ ತದ್ವತ್ಪ್ರಾಣಾಪಾನಾದಿಪಂಚಕಂ ।
ಮನೋ ಬುದ್ಧಿರಹಂಕಾರಶ್ಚಿತ್ತಂ ಚೇತಿ ಚತುಷ್ಟಯಂ ॥೮॥

ಅವ್ಯಕ್ತಾತ್ಕಾಲಪಾಕೇನ ಪ್ರಜಾಯಂತೇ ಪೃಥಕ್ ಪೃಥಕ್ ।
ಸರ್ವೇ ಕಾಲಪರಾಧೀನಾ ನ ಕಾಲಃ ಕಸ್ಯಚಿದ್ವಶೇ ॥೯॥

ಹಿಂದೆ ಈ ಪ್ರಪಂಚವು ಆತ್ಮನಿಗಿಂತ ಬೇರೆಯಾಗಿರದೆ ಕತ್ತಲೆಯಸ್ವರೂಪದಿಂದ ಎಂದರೆ ಯಾರಿಗೂ ಇದರ ವ್ಯಕ್ತಕಾರ್ಯಸ್ವರೂಪದಲ್ಲಿ ಕಾಣದೆ ಇದ್ದಿತು. ॥೩॥

ಆಮೇಲೆ ಸತ್ವಗುಣದ ಅಧಿಕಚಲನೆಯಿಂದ ಮಹತ್ತತ್ವವು ಹುಟ್ಟಿತು. ಒಬ್ಬನೇ ಆದ ಶಿವನು ರಜೋಗುಣವನ್ನಾಶ್ರಯಿಸಿ ಸೃಷ್ಟಿಕರ್ತನಾದ ಬ್ರಹ್ಮನಾಗಿಯೂ, ಸತ್ವಗುಣವನ್ನಾಶ್ರಯಿಸಿ ಪ್ರಪಂಚವನ್ನು ಪಾಲಿಸುವ ವಿಷ್ಣುವಾಗಿಯೂ, ತಮೋಗುಣವನ್ನಾಶ್ರಯಿಸಿ ಪ್ರಪಂಚವನ್ನು ಸಂಹರಿಸುವ ರುದ್ರನಾಗಿಯೂ ರೂಪಗೊಂಡನು. ॥೪-೫॥

ಅಲ್ಲದೆ ಆ ತ್ರಿಮೂರ್ತಿಗಳ ಲೆಕ್ಕವಿಲ್ಲದಷ್ಟು ರೂಪಗಳು ಗುಣಗಳ ವ್ಯತ್ಯಾಸದಿಂದ ಉತ್ತಮಮಧ್ಯಮಾಧಮರೂಪಗಳಾಗಿ ಬೇರೆ ಬೇರೆಯಾಗಿ ಉಂಟಾಗುವುವು. ॥೬॥

ಶಬ್ದಸ್ಪರ್ಶರೂಪರಸಗಂಧಗಳೆಂಬ ಪಂಚತನ್ಮಾತ್ರಗಳೂ, ಶ್ರೋತ್ರ ತ್ವಕ್ ಚಕ್ಷುಸ್ಸು ಜಿಹ್ವಾ ಘ್ರಾಣಗಳೆಂಬ ಪಂಚಜ್ಞಾನೇಂದ್ರಿಯಗಳೂ, ವಾಕ್ ಪಾಣಿಪಾದ ಪಾಯೂಪಸ್ಥಗಳೆಂಬ ಪಂಚಕರ್ಮೇಂದ್ರಿಯಗಳೂ, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತಗಳೆಂಬ ನಾಲ್ಕು ಅಂತಃಕರಣಗಳೂ, ಸೃಜ್ಯಮಾನವಾದ ಪ್ರಾಣಿಗಳ ಕರ್ಮಫಲಕ್ಕೆ ತಕ್ಕಂತೆ, ಅವ್ಯಕ್ತವೆಂಬ ಪ್ರಕೃತಿಯ ದೆಸೆಯಿಂದ ಕಾಲಪರಿಪಾಕದಿಂದ ಬೇರೆ ಬೇರೆ

ಕಾಲೋ ಮಾಯಾತ್ಮಸಂಬಂಧಾತ್ಸರ್ವಸಾಧಾರಣಾತ್ಮಕಃ ।
ಹಿರಣ್ಯಗರ್ಭೋ ಭಗವಾನ್ ಪ್ರಾದುರಾಸೀತ್ಪ್ರಜಾಪತಿಃ ॥೧೦॥

ಸ ವೈ ಶರೀರೀ ಪ್ರಥಮಃ ಸ ವೈ ಪುರುಷ ಉಚ್ಯತೇ ।
ತೇನ ಬ್ರಹ್ಮಾಂಡಮುತ್ಪನ್ನಂ ತನ್ಮಧ್ಯೇಽಯಂ ಬೃಹಸ್ಪತೇ ॥೧೧॥

ಭುವನಾನಿ ಚ ದೇವಾಶ್ಚ ಶತಶೋಽಥ ಸಹಸ್ರಶಃ ।
ಸ್ಥಾವರಂ ಜಂಗಮಂ ಚೈವ ತಥಾ ವರ್ಣಾಶ್ರಮಾದಿ ಚ ॥೧೨॥

ಸಾಂಬಂ ಸರ್ವೇಶ್ವರಂ ಧ್ಯಾತ್ವಾ ಪ್ರಸಾದಾತ್ತಸ್ಯ ನಿರ್ಮಮೇ ।
ಪ್ರಸಾದೇನ ವಿನಾ ದೇವಾಃ ಪ್ರಸಾದೇನ ವಿನಾ ನರಾಃ ॥೧೩॥

ಪ್ರಸಾದೇನ ವಿನಾ ಲೋಕಾ ನ ಸಿಧ್ಯಂತಿ ಮಹಾಮುನೇ ।
ಪ್ರಸಾದ್ದೇವದೇವಸ್ಯ ಬ್ರಹ್ಮಾ ಬ್ರಹ್ಮತ್ವಮಾಗತಃ ॥೧೪॥

ಯಾಗಿ ಹುಟ್ಟುವುವು. ಸಮಸ್ತವೂ ಕಾಲಕ್ಕೆ ಅಧೀನವಾಗಿರುವುದು. ಕಾಲವು ಯಾರ ವಶದಲ್ಲಿಯೂ ಇರುವುದಿಲ್ಲವು. ॥೮-೯॥

ಕಾಲವು ಮಾಯಾ ಮತ್ತು ಆತ್ಮನಸಂಬಂಧರೂಪವಾಗಿ ಸರ್ವಸಾಧಾರಣವಾದ ಕಾರಣವಾಗಿರುವುದು. ಸೂಕ್ಷ್ಮಪಂಚಭೂತಗಳು, ಇಂದ್ರಿಯಗಳು ಮುಂತಾದ ಉಪಾಧಿಗಳಿಂದ ಕೂಡಿದ ಹಿರಣ್ಯಗರ್ಭನು ಪಂಚೀಕೃತ ಪಂಚಮಹಾಭೂತಗಳ ಶರೀರವುಳ್ಳವನಾಗಿ ಸೃಷ್ಟಿಕರ್ತನಾಗಿ ವ್ಯಕ್ತನಾದನು. ॥೧೦॥

ಅವನೇ ಶರೀರವನ್ನು ಪಡೆದವರಲ್ಲಿ ಮೊದಲನೆಯವನು. ಅವನಿಗೆ ಪುರುಷನೆಂದು ಹೆಸರು. ಪುರುಷನೆಂದರೆ ತಪಸ್ಸಿನಿಂದ ಸಮಸ್ತ ಪಾಪಗಳನ್ನೂ ಮೊದಲೇ ಕಳೆದುಕೊಂಡಿರತಕ್ಕವನೆಂದರ್ಥವು. ಅವನಿಂದಲೇ ಈ ಬ್ರಹ್ಮಾಂಡವು ಉತ್ಪತ್ತಿಯಾಯಿತು. ಆ ಬ್ರಹ್ಮಾಂಡದ ಒಳಗೆ ಈ ಹಿರಣ್ಯಗರ್ಭನಿದ್ದನು. ॥೧೦-೧೧॥

ಆ ಹಿರಣ್ಯಗರ್ಭನು ದೇವೀಸಹಿತನಾದ ಪರಮೇಶ್ವರನನ್ನು ಧ್ಯಾನಿಸಿ ಅವನ ಅನುಗ್ರಹದಿಂದ, ಲೋಕಗಳನ್ನೂ, ದೇವತೆಗಳನ್ನೂ, ಚರಾಚರ ಪ್ರಾಣಿಗಳನ್ನೂ, ವರ್ಣಾಶ್ರಮಾದಿಗಳನ್ನೂ, ಅನೇಕವಾಗಿ ನಿರ್ಮಿಸಿದನು. ॥೧೨॥

ಪರಮೇಶ್ವರನ ಅನುಗ್ರಹವಿಲ್ಲದೆ, ದೇವತೆಗಳನ್ನೂ, ಮನುಷ್ಯರನ್ನೂ, ಲೋಕಗಳನ್ನೂ, ಸೃಷ್ಟಿಸಲು ಯಾರಿಗೂ ಸಾಧ್ಯವಿಲ್ಲ. ಆ ಪರಮೇಶ್ವರನ ಅನುಗ್ರಹದಿಂದಲೇ

ವಿಷ್ಣುರ್ವಿಷ್ಣುಪದಂ ಪ್ರಾಪ್ತೋ ರುದ್ರೋ ರುದ್ರತ್ವಮಾಗತಃ ।
ವರ್ಣಾಶ್ರಮಾಚಾರವತಾ ಪುರುಷೇಣ ಮಹೇಶ್ವರಃ ॥೧೫॥

ಆರಾಧ್ಯತೇ ಪ್ರಸಾದಾರ್ಥಂ ನ ದುರ್ವೃತ್ತೈಃ ಕದಾಚನ ।
ಯಸ್ಮಿನ್ಪ್ರಸನ್ನೇ ಸರ್ವೇಷಾಂ ಪುಷ್ಟಿರ್ಜಾಯೇತ ಪುಷ್ಕಲಾ ॥೧೬॥

ಅಹೋ ತೇನ ವಿನಾ ಲೋಕಃ ಚೇಷ್ಟತೇಽನ್ಯತ್ರ ಮಾಯಯಾ ।
ಬ್ರಹ್ಮಚರ್ಯಾಶ್ರಮಸ್ಥಾನಾಂ ಯತೀನಾಂ ಚ ವಿಶೇಷತಃ ॥೧೭॥

ವಾನಪ್ರಸ್ಥಾಶ್ರಮಸ್ಥಾನಾಂ ಗೃಹಸ್ಥಾನಾಂ ವಶೋ ಹರಃ ।
ವರ್ಣಾಶ್ರಮಸಮಾಚಾರಾತ್ಪ್ರಸನ್ನೇ ಪರಮೇಶ್ವರೇ ॥೧೮॥

ಸಾಕ್ಷಾತ್ತದ್ವಿಷಯಂ ಜ್ಞಾನಂ ಅಚಿರಾದೇವ ಜಾಯತೇ ।
ಜ್ಞಾನಾದಜ್ಞಾನವಿಧ್ವಸ್ತಿರ್ನ ಕರ್ಮಭ್ಯಃ ಕದಾಚನ ॥೧೯॥

ಬ್ರಹ್ಮವಿಷ್ಣುರುದ್ರರು ತಮ್ಮ ತಮ್ಮ ಪದವಿಯನ್ನು ಪಡೆದರು. ||೧೩-೧೪||

ವರ್ಣಾಶ್ರಮಾಚಾರವುಳ್ಳ ಮನುಷ್ಯನು ಅನುಗ್ರಹವನ್ನು ಪಡೆಯುವುದಕ್ಕಾಗಿ, ಮಹೇಶ್ವರನನ್ನು ಪೂಜಿಸುವನು. ದುರಾಚಾರಿಗಳೆಂದಿಗೂ ಅವನನ್ನು ಪೂಜಿಸುವುದಿಲ್ಲ. ಆ ದೇವನ ಅನುಗ್ರಹವೊಂದಿದ್ದರೆ ಸಕಲರಿಗೂ ಸರ್ವಸಿದ್ಧಿಯೂ ಉಂಟಾಗುವುದು. ||೧೫-೧೬||

ಆ ಪರಮೇಶ್ವರ ಸಂಬಂಧವಿಲ್ಲದಿದ್ದರೂ, ಅವನ ಸನ್ನಿಧಾನಮಾತ್ರದಿಂದ ಅವನದೇ ಆದ ಮಾಯಾಶಕ್ತಿಯಿಂದ ಪ್ರಪಂಚವು ಅನೇಕ ಕಾರ್ಯಗಳನ್ನು ಮಾಡುವುದು. ಇದೊಂದು ಆಶ್ಚರ್ಯವೇ ಸರಿ.

ಶಿವನು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ ಈ ಆಶ್ರಮಗಳ ಧರ್ಮವನ್ನು ಸರಿಯಾಗಿ ನಡೆಯಿಸುವವರ ಅಧೀನನಾಗಿರುವನು. ವರ್ಣಾಶ್ರಮಾಚಾರಗಳನ್ನು ಸರಿಯಾಗಿ ನಡೆಯಿಸುವುದರಿಂದ ಪರಮೇಶ್ವರನು ಪ್ರಸನ್ನನಾದಮೇಲೆ ಸ್ವಲ್ಪಕಾಲದಲ್ಲಿಯೇ ಅವನ ಸಾಕ್ಷಾತ್ಕಾರಸ್ವರೂಪವಾದ ಜ್ಞಾನವುಂಟಾಗುವುದು. ||೧೭-೧೮||

ಜ್ಞಾನದಿಂದಲೇ ಅಜ್ಞಾನವು ನಾಶವಾಗುವುದು. ಕರ್ಮದಿಂದ ಅದು ಎಂದಿಗೂ ನಾಶವಾಗದು. ಅಜ್ಞಾನವಿದ್ದರೆ ಜನನಮರಣರೂಪಸಂಸಾರವಿರುವುದು. ಅಜ್ಞಾನದಲ್ಲಿ

ಅಜ್ಞಾನೇ ಸತಿ ಸಂಸಾರೋ ಜ್ಞಾನೇ ಸ ಕಥಮುಚ್ಯತೇ ।
ತಸ್ಮಾತ್ ಜ್ಞಾನೇನ ಮುಕ್ತಿಃ ಸ್ಯಾದಜ್ಞಾನಸ್ಯ ಕ್ಷಯಾನ್ಮುನೇ ॥೨೦॥

ಸರ್ವಂ ಸಂಕ್ಷೇಪತಃ ಪ್ರೋಕ್ತಂ ಮಯಾ ವೇದವಿದಾಂ ವರ ।
ತಸ್ಮಾತ್ತ್ವಂ ಚ ಮಹಾಭಾಗ ವರ್ಣಾಶ್ರಮರತೋ ಭವ ॥೨೧॥

॥ ಸೂತ ಉವಾಚ ॥

ಇತಿ ಶ್ರುತ್ವಾ ಮುನಿಶ್ರೇಷ್ಠಾಃ ಪ್ರಣಮ್ಯ ಪರಮೇಶ್ವರಂ ।
ಸ್ತೋತುಮಾರಭತೇ ವಿಪ್ರಾಃ ಪ್ರಸಾದಾರ್ಥಂ ತ್ರಿಶೂಲಿನಃ ॥೨೨॥

॥ ಬೃಹಸ್ಪತಿರುವಾಚ ॥

ನಮೋ ಹರಾಯ ದೇವಾಯ ತ್ರಿಣೇತ್ರಾಯ ತ್ರಿಶೂಲಿನೇ ।
ತಾಪಸಾಯ ಮಹೇಶಾಯ ತತ್ವಜ್ಞಾನಪ್ರದಾಯಿನೇ ॥೨೩॥

ನಮೋ ಮೌಂಜಾಯ ಶುಭ್ರಾಯ ನಮಃ ಕಾರುಣ್ಯಮೂರ್ತಯೇ ।
ನಮೋ ದೇವಾದಿದೇವಾಯ ನಮೋ ವೇದಾಂತವೇದಿನೇ ॥೨೪॥

ಸಂಸಾರವಿರುವುದೆಂದು ಹೇಗೆ ಹೇಳಲಾಗುವುದು, ಆದುದರಿಂದ ಎಲೈ ಬೃಹಸ್ಪತಿಯೇ, ಜ್ಞಾನದಿಂದ ಅಜ್ಞಾನವು ನಾಶವಾದರೆ ಮೋಕ್ಷವುಂಟಾಗುವುದು. ॥೧೯-೨೦॥

ವೇದವನ್ನು ತಿಳಿದವರಲ್ಲಿ ಶ್ರೇಷ್ಠನಾದ ಬೃಹಸ್ಪತಿಯೇ, ನಾನು ಎಲ್ಲವನ್ನೂ ಸಂಗ್ರಹವಾಗಿ ಹೇಳಿರುವೆನು. ಆದುದರಿಂದ ಮಹಾಪುಣ್ಯವಂತನಾದ ನೀನು ವರ್ಣಾಶ್ರಮಾಚಾರಧರ್ಮಗಳನ್ನು ನಡೆಯಿಸು. ॥೨೧॥

ಸೂತನು ಹೇಳಿದನು—ಎಲೈ ಮುನಿಗಳೇ, ಬೃಹಸ್ಪತಿಯು ಪರಮೇಶ್ವರನು ಹೇಳಿದ ಮಾತನ್ನು ಕೇಳಿ, ಅವನಿಗೆ ನಮಸ್ಕರಿಸಿ ಅವನ ಅನುಗ್ರಹಸಂಪಾದನೆಗಾಗಿ ಸ್ತೋತ್ರಮಾಡಲು ಪ್ರಾರಂಭಿಸಿದನು. ॥೨೨॥

ಬೃಹಸ್ಪತಿಯು ಹೇಳಿದನು—ಮೂರು ಕಣ್ಣುಳ್ಳವನೂ, ತ್ರಿಶೂಲಧಾರಿಯೂ, ಪಾಪಪರಿಹಾರಕನೂ, ತಪಸ್ವಿಗಳ ರೂಪದಿಂದಿರುವವನೂ, ಆದ ತತ್ವಜ್ಞಾನವನ್ನು ಅನುಗ್ರಹಿಸುವ ದೇವನಾದ ಮಹೇಶ್ವರನಿಗೆ ನಮಸ್ಕರಿಸುವೆನು. ॥೨೩॥

ಮುಂಜಾ ಎಂದರೆ ಅನ್ನವು ಅಥವಾ ಹಿಮವತ್ಪರ್ವತದ ಶಿಖರವು ಈ ಶಬ್ದದಿಂದ ಭೋಗಪ್ರದನೂ, ಕೈಲಾಸವಾಸನೂ ಆದ, ಪರಿಶುದ್ಧನೂ, ಕರುಣಾಶಾಲಿಯೂ, ದೇವತೆ

ನಮಃ ಪರಾಯ ರುದ್ರಾಯ ಸುಪಾರಾಯ ನಮೋ ನಮಃ ।
ವಿಶ್ವಮೂರ್ತೇ ಮಹೇಶಾಯ ವಿಶ್ವಾಧಾರಾಯ ತೇ ನಮಃ ॥೨೫॥

ನಮೋ ಭಕ್ತಭವಚ್ಛೇದಕಾರಣಾಯಾಮಲಾತ್ಮನೇ ।
ಕಾಲಾಯ ಕಾಲಕಾಲಾಯ ಕಾಲಾತೀತಾಯ ತೇ ನಮಃ ॥೨೬॥

ಜಿತೇಂದ್ರಿಯಾಯ ನಿತ್ಯಾಯ ಜಿತಕ್ರೋಧಾಯ ತೇ ನಮಃ ।
ನಮಃ ಪಾಷಂಡಭಂಗಾಯ ನಮಃ ಪಾಪಹರಾಯ ತೇ ॥೨೭॥

ನಮಃ ಪರ್ವತರಾಜೇಂದ್ರಕನ್ಯಕಾಪತಯೇ ನಮಃ ।
ಯೋಗಾನಂದಾಯ ಯೋಗಾಯ ಯೋಗಿನಾಂ ಪತಯೇ ನಮಃ ॥೨೮॥

ಪ್ರಾಣಾಯಾಮಪರಾಣಾಂ ತು ಪ್ರಾಣರಕ್ಷಾಯ ತೇ ನಮಃ ।
ಮೂಲಾಧಾರೇ ಪ್ರವಿಷ್ಟಾಯ ಮೂಲದೀಪಾಯ ತೇ ನಮಃ ॥೨೯॥

ಗಳಿಗೆಲ್ಲರಿಗೂ ಮೊದಲನೆಯ ದೇವನೂ ಆದ ವೇದಾಂತವಾಕ್ಯಗಳಿಂದ ತಿಳಿಯಲು ಸಾಧ್ಯನಾದ ಶ್ರೇಷ್ಠನೂ, ದುಷ್ಟರಿಗೆ ಭಯಂಕರನೂ, ಸಂಸಾರದುಃಖವನ್ನು ಕಡೆಗಾಣಿಸುವವನೂ, ಪ್ರಪಂಚಸ್ವರೂಪನೂ, ಪ್ರಪಂಚಕ್ಕೆ ಆಶ್ರಯನೂ ಆದ ಮಹೇಶ್ವರನಿಗೆ ನಮಸ್ಕಾರವು. ||೨೪-೨೫||

ಭಕ್ತರ ಪುನರ್ಜನ್ಮವನ್ನು ನಾಶಮಾಡಲು, ಕಾರಣನಾದ, ಶುದ್ಧಸ್ವರೂಪನಾದ, ಕಾಲಸ್ವರೂಪನೂ, ಯಮನನ್ನು ನಾಶಮಾಡತಕ್ಕವನೂ, ತ್ರಿಕಾಲವನ್ನು ಅತಿಕ್ರಮಿಸಿದವನೂ, ಆದ ನಿನಗೆ ನಮಸ್ಕಾರವು. ಇಂದ್ರಿಯಗಳನ್ನೂ, ಕೋಪವನ್ನೂ ಜಯಿಸಿದವನೂ, ಶಾಶ್ವತನೂ, ಪಾಷಂಡರನ್ನು ಅಪಮಾನಗೊಳಿಸುವವನೂ, ಪಾಪಪರಿಹಾರಕನೂ, ಆದ ನಿನಗೆ ನಮಸ್ಕಾರವು. ||೨೬-೨೭||

ಪರ್ವತರಾಜನ ಪುತ್ರಿಯಾದ ಪಾರ್ವತಿಯ ಪತಿಯಾದ, ಸಮಾಧಿಯಲ್ಲಿ ತೋರುವ ಆನಂದಸ್ವರೂಪನಾದ, ಸಮಾಧಿಸ್ವರೂಪನಾದ, ಯೋಗಿಗಳ ಒಡೆಯನಾದ ನಿನಗೆ ನಮಸ್ಕಾರವು. ||೨೮||

ಪ್ರಾಣಾಯಾಮಮಾಡುವವರು ಉಚ್ಛ್ವಾಸನಿಶ್ವಾಸಗಳನ್ನು ತಡೆಯುವುದರಿಂದ ಕಾಲವನ್ನು ವಂಚಿಸಿ ಆಯುಸ್ಸನ್ನು ಹೆಚ್ಚಿಸಿಕೊಳ್ಳುವರು. ಅವರ ಪ್ರಾಣರಕ್ಷಣೆಯು ನಿನ್ನ ಅನುಗ್ರಹದಿಂದಲೇ ಆಗುವುದು. ಅಂತಹ ನಿನಗೆ ನಮಸ್ಕಾರವು. ಪರಾಶಕ್ತಿಯು ಮೂಲಾಧಾರದಿಂದ ಬ್ರಹ್ಮರಂಧ್ರಪರ್ಯಂತವಾಗಿ ಸಂಚರಿಸುವುದು. ಆ ಬ್ರಹ್ಮರಂಧ್ರದಲ್ಲಿ

ನಾಭಿಕಂದೇ ಪ್ರವಿಷ್ಟಾಯ ನಮೋ ಹೃದ್ದೇಶವರ್ತಿನೇ ।
ಸಚ್ಚಿದಾನಂದಪೂರ್ಣಾಯ ನಮಃ ಸಾಕ್ಷಾತ್ಪರಾತ್ಮನೇ ॥೩೦॥

ನಮಃ ಶಿವಾಯಾದ್ಭುತವಿಗ್ರಹಾಯ ತೇ
ನಮಃ ಶಿವಾಯಾದ್ಭುತವಿಕ್ರಮಾಯ ತೇ ।
ನಮಃ ಶಿವಾಯಾಖಿಲನಾಯಕಾಯ ತೇ
ನಮಃ ಶಿವಾಯಾಽಮೃತಹೇತವೇ ನಮಃ ॥೩೧॥

॥ ಸೂತ ಉವಾಚ ॥

ಯ ಇದಂ ಪಠತೇ ನಿತ್ಯಂ ಸ್ತೋತ್ರಂ ಭಕ್ತ್ಯಾ ಸುಸಂಯತಃ ।
ತಸ್ಯ ಮುಕ್ತಿಃ ಕರಸ್ಥಾ ಸ್ಯಾಚ್ಛಂಕರಪ್ರಿಯಕಾರಣಾತ್ ॥೩೨॥

ಚಂದ್ರಮಂಡಲಸ್ಪರ್ಶದಿಂದ ಉಂಟಾದ ಅಮೃತಧಾರೆಯಿಂದ ನೆನೆದು, ಮತ್ತೆ ಮೂಲಾಧಾರಸ್ಥಾನಕ್ಕೆ ಬರುವುದು. ಆ ಶಕ್ತಿಯುಳ್ಳ ಶಿವನು ಶಕ್ತಿಗಿಂತ ಬೇರೆಯಾದವನಲ್ಲ. ಆದುದರಿಂದ ಆ ಶಿವನೂ ಮೂಲಾಧಾರದಲ್ಲಿರುವನು. ಪ್ರಕಾಶಮಾನರಾದ ಸೂರ್ಯಚಂದ್ರಾಗ್ನಿಗಳಿಗೆ ಪ್ರಕಾಶಕೊಡತಕ್ಕವನಾದುದರಿಂದ, “ ತಮೇವ ಭಾಂತಮನುಭಾತಿ ಸರ್ವಂ ” ಎಂಬಂತೆ, ಮೂಲದೀಪಸ್ವರೂಪನಾದ ನಿನಗೆ ನಮಸ್ಕಾರವು. ॥೨೯॥

ಹೊಕ್ಕುಳು, ಎದೆ ಮುಂತಾದ ಆರು ಸ್ಥಾನಗಳಲ್ಲಿ ಅಭಿವ್ಯಕ್ತನಾಗುವ, ನಿತ್ಯನೂ, ಜ್ಞಾನಸ್ವರೂಪನೂ, ಆನಂದಸ್ವರೂಪನೂ, ಪೂರ್ಣನೂ ಆದ ಪರಮಾತ್ಮನಿಗೆ ನಮಸ್ಕಾರವು. ॥೩೦॥

ಆಶ್ಚರ್ಯಕರವಾದ ರೂಪವೂ, ಪರಾಕ್ರಮವೂ ಉಳ್ಳ, ಸಮಸ್ತ ಚರಾಚರ ಪ್ರಪಂಚವನ್ನೂ ಸನ್ಮಾರ್ಗದಲ್ಲಿ ನಡೆಯಿಸುತ್ತಿರುವ, ಮೋಕ್ಷಕ್ಕೆ ಕಾರಣನಾದ “ ನಮಃ ಶಿವಾಯ ” ಎಂಬ ಪಂಚಾಕ್ಷರೀಮಂತ್ರದಿಂದ ಧ್ಯಾನಮಾಡುವವರ ಸಕಲ ಇಷ್ಟಾರ್ಥಗಳನ್ನೂ ಕೊಡುವ, ನಿನಗೆ ನಮಸ್ಕಾರವು. ॥೩೧॥

ಸೂತನು ಹೇಳಿದನು—ಯಾವನು ಈ ಸ್ತೋತ್ರವನ್ನು ಪ್ರತಿದಿನವೂ ಭಕ್ತಿಯಿಂದ ಹೇಳುವನೋ, ಇಂದ್ರಿಯನಿಗ್ರಹದಿಂದ ಕೂಡಿದ ಅಂತಹ ಭಕ್ತನು ಶಿವನಿಗೆ ಇಷ್ಟವಾದ ಈ ಸ್ತೋತ್ರದ ಮಹಿಮೆಯಿಂದ ಸುಲಭವಾಗಿ ಮುಕ್ತಿಯನ್ನು ಪಡೆಯುವನು. ॥೩೨॥

ವಿದ್ಯಾರ್ಥೀ ಲಭತೇ ವಿದ್ಯಾಂ ವಿವಾಹಾರ್ಥೀ ಗೃಹೀ ಭವೇತ್ ।
ವೈರಾಗ್ಯಕಾಮೋ ಲಭತೇ ವೈರಾಗ್ಯಂ ಭವತಾರಕಂ ॥೩೩॥

ತಸ್ಮಾದ್ದಿನೇ ದಿನೇ ಯೂಯಮಿದಂ ಸ್ತೋತ್ರಂ ಸಮಾಹಿತಾಃ ।
ಪಠಂತು ಭವನಾಶಾರ್ಥಮಿದಂ ಹಿ ಭವನಾಶನಂ ॥೩೪॥

ಇತಿ ಶ್ರೀಸ್ಕಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ
ಆತ್ಮನಾಸೃಷ್ಟಿನಿರೂಪಣಂ ನಾಮ ದ್ವಿತೀಯೋಽಧ್ಯಾಯಃ

ಈ ಸ್ತೋತ್ರದ ಮಹಿಮೆಯಿಂದ ವಿದ್ಯಾಪೇಕ್ಷೆಯುಳ್ಳವನಿಗೆ ವಿದ್ಯೆಯು ಬರುವುದು. ವಿವಾಹಾಪೇಕ್ಷೆಯುಳ್ಳವನು ಗೃಹಸ್ಥನಾಗುವನು. ವೈರಾಗ್ಯಾಪೇಕ್ಷೆಯುಳ್ಳವನು ಪುನರ್ಜನ್ಮದುಃಖವಿಲ್ಲದಂತಾಗುವ ವೈರಾಗ್ಯವನ್ನು ಹೊಂದುವನು. ॥೩೩॥

ಆದುದರಿಂದ ನೀವು ಏಕಾಗ್ರಚಿತ್ತರಾಗಿ ಪ್ರತಿದಿನವೂ ಭವನಾಶನವೆಂಬ ಈ ಸ್ತೋತ್ರವನ್ನು ದುಃಖನಾಶಕ್ಕಾಗಿ ಹೇಳಿರಿ. ॥೩೪॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ಆತ್ಮನ ಸಾಕ್ಷಾತ್ಸೃಷ್ಟಿವಿವರಣವೆಂಬ ಎರಡನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಜ್ಞಾನಯೋಗಖಂಡಂ

|| ತೃತೀಯೋಽಧ್ಯಾಯಃ ||

ಮೂರನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಬ್ರಹ್ಮಚರ್ಯಾಶ್ರಮಂ ಮುನೇ ।
ಆಮ್ನಾಯೈಕಸುಸಂಸಿದ್ಧಮಾದರಾಚ್ಛೃಣು ಸುವ್ರತ ||೧||

ಉಪನೀತೋ ದ್ವಿಜೋ ವೇದಾನಧೀಯೀತ ಸಮಾಹಿತಃ ।
ದಂಡಂ ಯಜ್ಞೋಪವೀತಂ ಚ ಮೇಖಲಾಂ ಚ ತಥೈವ ಚ ||೨||

ಕೃಷ್ಣಾಜಿನಂ ಚ ಕಾಷಾಯಂ ಶುಕ್ಲಂ ವಾ ವಸ್ತ್ರಮುತ್ತಮಂ ।
ಧಾರಯೇನ್ಮಂತ್ರತೋ ವಿದ್ವಾನ್ ಸ್ವಸೂತ್ರೋಕ್ತೇನ ವರ್ತ್ಮನಾ ||೩||

ಈಶ್ವರನು ಹೇಳಿದನು—ಎಲೈ ಬೃಹಸ್ಪತಿಯೇ, ಒಳ್ಳೆಯ ತಪಸ್ವಿಯಾದ ನಿನಗೆ, ವೇದನಿಯಮದಿಂದ ಬ್ರಾಹ್ಮಣನಿಗೆ ಉಪನಯನ ವ್ರತಸಿದ್ಧವಾಗುವ ಬ್ರಹ್ಮಚರ್ಯಾಶ್ರಮವನ್ನು ವಿವರಿಸಿ ಹೇಳುವೆನು. ಎಲ್ಲ ಆಶ್ರಮಗಳಿಗೂ ಇದು ಮೊದಲನೆಯದಾದುದರಿಂದ ಇದನ್ನು ಮೊದಲು ಹೇಳಿದೆ. ||೧||

ಉಪನಯನಕರ್ಮದಿಂದ ಸಂಸ್ಕೃತನಾದ ಬ್ರಾಹ್ಮಣನು ಏಕಾಗ್ರಚಿತ್ತದಿಂದ ವೇದಾಧ್ಯಯನ ಮಾಡಬೇಕೆಂದು ವೇದವಿಧಿಯಿರುವುದರಿಂದ ಬ್ರಾಹ್ಮಣನು ತನ್ನ ಎಂಟನೆಯ ವಯಸ್ಸಿನಲ್ಲಿಯೇ ತಾನು ಅನುಸರಿಸುವ ಸೂತ್ರದಲ್ಲಿ ಹೇಳಿರುವಂತೆ, ಬಿಳಿಯ ವಸ್ತ್ರವನ್ನೋ, ಅಥವಾ ಕಾಷಾಯವಸ್ತ್ರವನ್ನೋ ಉಟ್ಟು, ಯಜ್ಞೋಪವೀತ,

ಭಿಕ್ಷಾಹಾರೋ ಯಥಾಕಾಮಂ ಗುರುಶುಶ್ರೂಷಣೇ ರತಃ ।
ಧಾರಯೇದ್ಬೈಲ್ವಪಾಲಾಶೌ ದಂಡೌ ಕೇಶಾಂತಿಕೌ ದ್ವಿಜಃ ॥೪॥

ಅಶ್ವತ್ಥಂ ವಾ ಋಜುಂ ಸೌಮ್ಯಮವ್ರಣಂ ತ್ವಗ್ವಿಭೂಷಿತಂ ।
ಸಾಯಂ ಪ್ರಾತರುಪಾಸೀತ ಸಂಧ್ಯಾಂ ವಿಪ್ರಃ ಸಮಾಹಿತಃ ॥೫॥

ಕಾಮಂ ಕ್ರೋಧಂ ತಥಾ ಲೋಭಂ ಮೋಹಂ ಚೈವ ವಿವರ್ಜಯೇತ್ ।
ಅಗ್ನಿಕಾರ್ಯಂ ದ್ವಿಜಃ ಕುರ್ಯಾತ್ಸಾಯಂ ಪ್ರಾತಃ ಸ್ವಸೂತ್ರತಃ ॥೬॥

ದೇವಾನೃಷೀನ್ಪಿತೄನ್ಸ್ನಾತ್ವಾ ತರ್ಪಯೇದ್ಬ್ರಾಹ್ಮಣೋತ್ತಮಃ ।
ಸಮಿದ್ಧಾಗ್ನಿಸಮುತ್ಥೇನ ವಿರಜಾನಲಜೇನ ಚ ॥೭॥

ಅಗ್ನಿಹೋತ್ರಸಮುತ್ಥೇನ ಭಸ್ಮನಾ ಸ ಜಲೇನ ಚ ।
ಅಗ್ನಿರಿತ್ಯಾದಿಭಿರ್ಮಂತ್ರೈಃ ಷಡ್ಭಿರ್ವಾ ಸಪ್ತಭಿಃ ಕ್ರಮಾತ್ ॥೮॥
ವಿಮೃಜ್ಯಾಂಗಾನಿ ಸರ್ವಾಣಿ ಸಮುದ್ಧೂಲ್ಯ ತತಃ ಪರಂ ।

ಕೃಷ್ಣಾಜಿನ, ದಂಡ, ಮುಂಜತೃಣದಿಂದ ಮಾಡಿದ ಮೇಖಲೆ ಇವುಗಳನ್ನು ಆಯಾ ಮಂತ್ರಗಳನ್ನು ಜಪಿಸುತ್ತಾ ಧರಿಸಬೇಕು. ॥೨-೩॥

ಬ್ರಹ್ಮಚಾರಿಯು ಭಿಕ್ಷೆಯಿಂದ ಆಹಾರಮಾಡಿಕೊಂಡು, ಗುರುಸೇವೆಯನ್ನು ಮಾಡುತ್ತಿರಬೇಕು. ತನ್ನ ಶರೀರದ ಎತ್ತರಕ್ಕೆ ಸಮಾನವಾಗಿರುವ ಬಿಲ್ವ, ಮುತ್ತಗ, ಅಥವಾ ಅರಳಿ ಈ ಮರಗಳ ಸರಳವಾದ ಮತ್ತು ತೊಗಟೆಯಿಂದ ಕೂಡಿದ, ನಡುವೆ ಆಯುಧಗಳ ಏಟು ಬೀಳದ, ದಂಡವನ್ನು ಧರಿಸಬೇಕು. ॥೪॥

ಬ್ರಾಹ್ಮಣಶ್ರೇಷ್ಠನಾದ ಬ್ರಹ್ಮಚಾರಿಯು ಸ್ನಾನಮಾಡಿ, ದೇವಋಷಿಪಿತೃ ತರ್ಪಣಗಳನ್ನು ಮಾಡಬೇಕು. ಏಕಾಗ್ರಚಿತ್ತದಿಂದ ಸಂಧ್ಯಾಕಾಲದಲ್ಲಿಯೂ, ಪ್ರಾತಃಕಾಲದಲ್ಲಿಯೂ ಸಂಧ್ಯೋಪಾಸನೆಯನ್ನು ಮಾಡಬೇಕು. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಅರಿಷಡ್ವರ್ಗಗಳನ್ನು ಜಯಿಸಿ ತ್ಯಾಗಮಾಡಬೇಕು. ॥೫-೬॥

ಗೋಮಯವನ್ನು ಶೈವಾಗಮೋಕ್ತವಾದ ಶಿವಾಗ್ನಿಯಿಂದ ಸುಟ್ಟು ಮಾಡಿದ, ವಿರಜಾಹೋಮವನ್ನು ಮಾಡಿದ, ಅಗ್ನಿಯಲ್ಲಿ ಹುಟ್ಟಿದ, ಅಥವಾ ಅಗ್ನಿಹೋತ್ರದಲ್ಲಿ ಹುಟ್ಟಿದ ಭಸ್ಮವನ್ನೋ ತೆಗೆದುಕೊಂಡು ನೀರಿನಲ್ಲಿ ಕಲಸಿ, "ಅಗ್ನಿರಿತಿಭಸ್ಮ" ಇತ್ಯಾದಿ

ತ್ರಿರ್ಯಕ್ ತ್ರಿಪುಂಡ್ರಮುರಸಾ ಲಲಾಟೇನ ಕರಾದಿತಃ ॥೯॥

ಗ್ರೀವಾಯಾಂ ಚ ಶುಚಿರ್ಭೂತ್ವಾ ಶಿವಂ ಧ್ಯಾತ್ವಾ ಶಿವಾಂ ತಥಾ ।
ಮೇಧಾವೀತ್ಯಾದಿಭಿರ್ಮಂತ್ರೈರ್ಧಾರಯೇದ್ಬ್ರಾಹ್ಮಣಃ ಸದಾ ॥೧೦॥

ತ್ರಿಯಾಯುಷಂ ಜಮದಗ್ನೇರಿತಿ ಮಂತ್ರೇಣ ವಾ ದ್ವಿಜಃ ।
ಮಹಾದೇವಾರ್ಚನಂ ಕುರ್ಯಾತ್ ಪುಷ್ಪಾದ್ಯಾ ಪತ್ರತೋಽನ್ಯತಃ ॥೧೧॥

ಮಾತರಂ ಪಿತರಂ ವೃದ್ಧಂ ತಥಾ ಜ್ಯೇಷ್ಠಂ ಸ್ವಕಂ ಗುರುಂ ।
ಅಧ್ಯಾತ್ಮಜ್ಞಾನಿನಂ ನಿತ್ಯಂ ಶ್ರದ್ಧಯೈವಾಭಿವಾದಯೇತ್ ॥೧೨॥

ಅಸಾವಹಂ ಭೋ ನಾಮಾಸ್ಮಿ ಸಮ್ಯಕ್ಪ್ರಣತಿಪೂರ್ವಕಂ ।
ಆಯುಷ್ಮಾನ್ಭವ ಸೌಮ್ಯೇತಿ ವಾಚ್ಯೋ ವಿಪ್ರೋಽಭಿವಾದನೇ ॥೧೩॥
ಆಕಾರಶ್ಚಾಸ್ಯ ನಾಮ್ನೋಽಂತೇ ವಾಚ್ಯಃ ಪೂರ್ವಾಕ್ಷರಃ ಪ್ಲುತಃ ।

ವೇದೋಕ್ತವಾದ ಮಂತ್ರಗಳಿಂದ ಅಭಿಮಂತ್ರಿಸಿ, ಅಂಗಗಳಿಗೆಲ್ಲಕ್ಕೂ ಬಳಿದುಕೊಂಡು, ಎದೆ, ಹಣೆ, ಭುಜಗಳು, ಕತ್ತು ಈ ಪ್ರದೇಶಗಳಲ್ಲಿ ಅಂಬಾಸಹಿತನಾದ ಶಿವನನ್ನು ಧ್ಯಾನಿಸುತ್ತ ತ್ರಿಪುಂಡ್ರವನ್ನು ಅಡ್ಡಲಾಗಿ ಧರಿಸಬೇಕು. ॥೭-೮-೯॥

"ಮೇಧಾವೀ ಭೂಯಾಸಂ ತೇಜಸ್ವೀಭೂಯಾಸಂ" ಎಂಬ ಮಂತ್ರಗಳಿಂದಲಾಗಲೀ, "ತ್ರಿಯಾಯುಷಂ ಜಮದಗ್ನೇಃ, ಕಶ್ಯಪಸ್ಯ ತ್ರಿಯಾಯುಷಂ." ಇತ್ಯಾದಿ ಮಂತ್ರಗಳಿಂದಲಾಗಲಿ ಬ್ರಾಹ್ಮಣರು ಭಸ್ಮವನ್ನು ಧರಿಸಬೇಕು. ॥೧೦॥

ಬ್ರಹ್ಮಚಾರಿಯು ಪ್ರತಿದಿನವೂ, ಹೂವುಗಳಿಂದಲಾಗಲೀ, ಪತ್ರಗಳು ಗಂಧ ಅಕ್ಷತೆಗಳಿಂದಲಾಗಲೀ, ಶಿವಪೂಜೆಯನ್ನು ಮಾಡಬೇಕು. ತಾಯಿತಂದೆಗಳನ್ನೂ, ವೃದ್ಧರನ್ನೂ, ತನ್ನ ಅಣ್ಣನನ್ನೂ, ಗುರುವನ್ನೂ, ಆತ್ಮಜ್ಞಾನಿಯನ್ನೂ, ಭಕ್ತಿಯಿಂದ ನಮಸ್ಕರಿಸುವಾಗ ತನ್ನ ಗೋತ್ರಪ್ರವರಗಳನ್ನು ಹೇಳಿಕೊಂಡು ನಮಸ್ಕಾರಮಾಡಬೇಕು. ॥೧೧-೧೨॥

ಬ್ರಾಹ್ಮಣನಾದವನು ನಮಸ್ಕಾರಮಾಡಿದ ಬ್ರಹ್ಮಚಾರಿಗೆ ಪ್ರತಿಯಾಗಿ, "ಆಯುಷ್ಮಾನ್ ಭವ ಸೌಮ್ಯ" ಎಂದು ಹೇಳಿ, ಅವನ ಹೆಸರಿನ ಹೆಸರಿನ ಕೊನೆಯ ಅಕ್ಷರದ ಆಕಾರವನ್ನು ಪ್ಲುತೋಚ್ಚಾರಣೆಮಾಡಬೇಕು. "ಆಯುಷ್ಮಾನ್ ಭವ ಸೌಮ್ಯ ದೇವದತ್ತ ೩" ಎಂದು ಹೇಳಬೇಕು. ॥೧೩॥

ವ್ಯತ್ಯಸ್ತಪಾಣಿನಾ ಕಾರ್ಯಮುಪಸಂಗ್ರಹಣಂ ಗುರೋಃ ॥೧೪॥

ಸವ್ಯೇನ ಸವ್ಯಃ ಸ್ಪ್ರಷ್ಟವ್ಯೋ ದಕ್ಷಿಣೇನ ತು ದಕ್ಷಿಣಃ ।
ಲೌಕಿಕಂ ವೈದಿಕಂ ಚಾಪಿ ತಥಾಽಧ್ಯಾತ್ಮಿಕಮೇವ ಚ ॥೧೫॥

ಆದದೀತ ಯತೋ ಜ್ಞಾನಂ ತತ್ಪೂರ್ವಮಭಿವಾದಯೇತ್ ।
ಮಾತಾಪಿತ್ರೋಶ್ಚ ವಂಶ್ಯಾಂಶ್ಚ ಗುರುವಂಶ್ಯಾನ್ಗುಣಾಧಿಕಾನ್ ॥೧೬॥

ಅನುವರ್ತೇತ ಮನಸಾ ವಾಚಾ ಕಾಯೇನ ಸಾದರಂ ।
ಗುರುಂ ದೃಷ್ಟ್ವಾ ಸಮುತ್ತಿಷ್ಠೇನ್ನಮಸ್ಕೃತ್ವಾ ಕೃತಾಂಜಲಿಃ ॥೧೭॥

ತೇನೈವಾಭಿಹಿತಃ ಪಶ್ಚಾತ್ಸಮಾಸೀತಾನ್ಯಭಾಗತಃ ।
ಸತ್ಯಮೇವ ವದೇನ್ನಿತ್ಯಮಧೀತಂ ಚ ನ ವಿಸ್ಮರೇತ್ ॥೧೮॥

ನಿತ್ಯಂ ನೈಮಿತ್ತಿಕಂ ಕರ್ಮ ಮೋಕ್ಷಕಾಮನಯಾಥವಾ ।
ವಿಧ್ಯುಕ್ತಮಿತಿ ಬುದ್ಧ್ಯಾವಾ ಶಾಂತೋ ಭೂತ್ವಾ ಸಮಾಚರೇತ್ ॥೧೯॥

ಗುರುವಿಗೆ ನಮಸ್ಕಾರಮಾಡುವಾಗ ಕೈಗಳನ್ನು ವ್ಯತ್ಯಾಸಮಾಡಿಕೊಂಡು ಎಂದರೆ ಬಲಗೈಯ್ಯಿಂದ ಗುರುವಿನ ಬಲಗಾಲನ್ನೂ, ಎಡಗೈಯಿಂದ ಎಡಗಾಲನ್ನೂ ಮುಟ್ಟಿ ನಮಸ್ಕಾರಮಾಡಬೇಕು. ॥೧೪॥

ಲೋಕವ್ಯವಹಾರದ ವಿಷಯವನ್ನಾಗಲಿ, ವೇದಾರ್ಥವಿಷಯವನ್ನಾಗಲಿ, ಅಧ್ಯಾತ್ಮವಿಷಯವನ್ನಾಗಲಿ, ಗುರುಗಳಿಂದ ತಿಳಿದುಕೊಳ್ಳುವಾಗ, ತಂದೆತಾಯಿಗಳ ವಂಶದ ಅಥವಾ ಗುರುಗಳ ವಂಶದ ವಿದ್ವಾಂಸರುಗಳನ್ನು ಮೊದಲು ನಮಸ್ಕರಿಸಿ ಆಮೇಲೆ ಅವರಿಂದ ವಿಷಯವನ್ನು ತಿಳಿದುಕೊಳ್ಳಬೇಕು. ॥೧೫-೧೬॥

ಮನೋವಾಕ್ಕಾಯಕರ್ಮಗಳಿಂದ ಗುರುವನ್ನು ಅನುಸರಿಸಿ ನಡೆಯುತ್ತ ಗುರುವನ್ನು ಕಂಡೊಡನೆ ಎದ್ದು ನಮಸ್ಕರಿಸಿ ಕೈಮುಗಿದುಕೊಂಡು ಅವರ ಅಪ್ಪಣೆಯನ್ನು ಅನುಸರಿಸಿ ಸ್ವಲ್ಪದೂರದಲ್ಲಿ ಕುಳಿತುಕೊಳ್ಳಬೇಕು. ॥೧೭॥

ಯಾವಾಗಲೂ ನಿಜವನ್ನು ಹೇಳುತ್ತಿರಬೇಕು. ಓದಿದುದನ್ನು ಮರೆಯಬಾರದು. ನಿತ್ಯಕರ್ಮವಾದ ಸಂಧ್ಯಾದಿಗಳನ್ನೂ, ನೈಮಿತ್ತಿಕವಾದ ಶ್ರಾದ್ಧಾದಿಗಳನ್ನೂ ಮೋಕ್ಷಾಪೇಕ್ಷೆಯಿಂದಲೋ, ವೇದವು ವಿಧಿಸಿರುವುದು ಎಂಬ ಗೌರವ ಬುದ್ಧಿಯಿಂದಲೋ, ಶಾಂತನಾಗಿ ಆಚರಿಸಬೇಕು. ॥೧೮-೧೯॥

ಭಿಕ್ಷಾಮಾಹೃತ್ಯ ವಿಪ್ರೇಭ್ಯೋಽಲಾಭೇ ವರ್ಣಾಂತರೇಷ್ವಪಿ ।
ನಿವೇದ್ಯ ಗುರವೇಽಶ್ನೀಯಾದ್ಬ್ರಹ್ಮಚಾರೀ ದಿನೇ ದಿನೇ ॥೨೦॥

ಭವತ್ಪೂರ್ವಂ ಚರೇದ್ಭೈಕ್ಷ್ಯಂ ಉಪನೀತೋ ದ್ವಿಜಸ್ತಥಾ ।
ಭವನ್ಮಧ್ಯಂ ತು ರಾಜನ್ಯೋ ವೈಶ್ಯಸ್ತು ಭವದುತ್ತರಂ ॥೨೧॥

ಅಭಿಶಸ್ತೇಷು ಸರ್ವೇಷು ಭಿಕ್ಷಾಂ ನಿತ್ಯಂ ವಿವರ್ಜಯೇತ್ ।
ಪ್ರಾಙ್ಮುಖೋಽನ್ನಾನಿ ಭುಂಜೀತ ಸೂರ್ಯಾಭಿಮುಖ ಏವವಾ ॥೨೨॥

ಪ್ರಕ್ಷಾಲ್ಯ ಚರಣೌ ಹಸ್ತೌ ಚ ದ್ವಿರಾಚಮ್ಯಾಽನ್ನಭುಗ್ಭವೇತ್ ।
ಪ್ರಾಣಾಯೇತ್ಯಾದಿಭಿರ್ಮಂತ್ರೈರ್ಹುತ್ವಾ ಪ್ರಾಣಾಹುತೀರ್ದ್ವಿಜಃ॥೨೩॥

ವೇದಾಭ್ಯಾಸೈಕನಿಷ್ಠಃ ಸ್ಯಾನ್ನಾನ್ಯಮಂತ್ರರತೋ ಭವೇತ್ ।
ಏವಮಭ್ಯಸ್ಯತಸ್ತಸ್ಯ ವೈರಾಗ್ಯಂ ಜಾಯತೇ ಯದಿ ॥೨೪॥

ಬ್ರಾಹ್ಮಣರಿಂದ ಭಿಕ್ಷಾನ್ನವು ದೊರೆಯದಿದ್ದರೆ ಬೇರೆ ವರ್ಣದವರಿಂದ ಭಿಕ್ಷೆಯನ್ನು ತಂದು ಗುರುವಿಗೆ ಕೊಟ್ಟು, ಅವರು ಕೊಟ್ಟದ್ದನ್ನು ಪ್ರತಿದಿನವೂ ಊಟಮಾಡಬೇಕು. ॥೨೦॥

ಉಪನಯನವನ್ನು ಮಾಡಿಕೊಂಡ ಬ್ರಾಹ್ಮಣನು "ಭವತಿ ಭಿಕ್ಷಾಂದೇಹಿ" ಎಂದೂ, ಕ್ಷತ್ರಿಯನು "ಭಿಕ್ಷಾಂ ಭವತಿ ದೇಹಿ ಎಂದೂ, ವೈಶ್ಯನು "ಭಿಕ್ಷಾಂ ದೇಹಿ ಭವತಿ" ಎಂದೂ ಹೇಳಬೇಕು. ॥೨೧॥

ಪ್ರತಿದಿನವೂ, ನಿಷಿದ್ಧರಾದ ಎಲ್ಲರಲ್ಲಿಯೂ ಭಿಕ್ಷೆಯನ್ನು ಯಾಚಿಸಬಾರದು. ಊಟಮಾಡಬೇಕಾದರೆ ಪೂರ್ವಾಭಿಮುಖವಾಗಲಿ ಸೂರ್ಯನಿಗೆ ಇದಿರಾಗಿಯಾಗಲಿ ಕುಳಿತು ಭೋಜನಮಾಡಬೇಕು. ॥೨೨॥

ಬ್ರಾಹ್ಮಣನಾದವನು ಕೈಕಾಲುಗಳನ್ನು ತೊಳೆದುಕೊಂಡು ಎರಡಾವೃತ್ತಿ ಆಚಮನಮಾಡಿ, ಊಟಮಾಡಲು ಕುಳಿತುಕೊಳ್ಳಬೇಕು, "ಪ್ರಾಣಾಯ ಸ್ವಾಹಾ" ಇತ್ಯಾದಿ ಐದು ಮಂತ್ರಗಳಿಂದ ಪ್ರಾಣಾಹುತಿಗಳನ್ನು ಹೋಮಮಾಡಬೇಕು. ಎಂದರೆ ಅಗ್ನಿಯಲ್ಲಿ ಹೋಮಮಾಡಿದಂತೆ ಭಾವಿಸಿ ಬಾಯಿಯಲ್ಲಿ ಹಾಕಿಕೊಳ್ಳಬೇಕು. ॥೨೩॥

ಬ್ರಹ್ಮಚರ್ಯವ್ರತದಲ್ಲಿರುವ ಬ್ರಾಹ್ಮಣನು ವೇದಾಭ್ಯಾಸವನ್ನು ಮಾತ್ರ ಮಾಡಬೇಕು. ಅನ್ಯವಾದ ಮಂತ್ರೋಪಾಸನೆಯನ್ನು ಮಾಡಬಾರದು. ಹೀಗೆ

ಪ್ರವ್ರಜೇತ್ಪರಮೋ ಹಂಸೇ ಮೋಕ್ಷಕಾಮನಯಾ ದ್ವಿಜಃ ।
ನೈಷ್ಠಿಕೋ ವಾ ಗೃಹೀ ವಾಽಪಿ ಭವೇತ್ಕಾಮೀ ಯಥಾರುಚಿ ॥೨೫॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಜ್ಞಾನಯೋಗಖಂಡೇ ಬ್ರಹ್ಮಚರ್ಯಾಶ್ರಮವಿಧಿಕಥನಂ ನಾಮ ತೃತೀಯೋಽಧ್ಯಾಯಃ

ಅಭ್ಯಾಸಮಾಡುತ್ತಿರುವ ಬ್ರಹ್ಮಚಾರಿಗೆ ವೈರಾಗ್ಯವು ಉತ್ಪತ್ತಿಯಾದರೆ ಪರಮಹಂಸ ಸನ್ಯಾಸಾಶ್ರಮವನ್ನು ಪಡೆಯಬಹುದು. ಅಥವಾ ನೈಷ್ಠಿಕಬ್ರಹ್ಮಚಾರಿಯಾಗಿಯೇ ಇರಬಹುದು. ಕಾಮಿಯಾದರೆ ಗೃಹಸ್ಥಾಶ್ರಮವನ್ನು ಪಡೆಯಬಹುದು. ಇವುಗಳು ವೈರಾಗ್ಯದ ದಾರ್ಢ್ಯಕ್ಕನುಸಾರವಾಗಿ ಅವರವರ ಇಷ್ಟಾನುಸಾರವಾಗಿ ಪಡೆಯುವ ಆಶ್ರಮಗಳಾಗಿರುತ್ತವೆ. ॥೨೪-೨೫॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ಬ್ರಹ್ಮಚರ್ಯಾಶ್ರಮವಿಷಯವನ್ನು ವರ್ಣಿಸುವ
ಮೂರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

ಜ್ಞಾನಯೋಗಖಂಡಂ

|| ಚತುರ್ಥೋಽಧ್ಯಾಯಃ ||

ನಾಲ್ಕನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಗಾರ್ಹಸ್ಥ್ಯಂ ಸಂಗ್ರಹೇಣ ತೇ ।
ಅಧೀತ್ಯ ವೇದಾನ್ವಿಧಾನ್ಪೂರ್ವೋಕ್ತೇನೈವ ವರ್ತ್ಮನಾ ॥೧॥

ಆಚಾರ್ಯಾನುಜ್ಞಯಾ ಯುಕ್ತಃ ಸ್ನಾತ್ವಾ ಗಾರ್ಹಸ್ಥ್ಯಮಾವಿಶೇತ್ ।
ಅನುಕೂಲೇ ಕುಲೇ ಗೋತ್ರಪ್ರವರಾದಿವಿವರ್ಜಿತೇ ॥೨॥

ಸೂತ್ರೋಕ್ತೇನೈವ ಮಾರ್ಗೇಣ ವರಯೇತ್ಸುಕುಲಜಾಂ ಸ್ತ್ರಿಯಂ ।
ಸರ್ವಲಕ್ಷಣಸಂಪನ್ನಾಂ ಸಾಧ್ವೀಮನ್ಯಾಂ ವಿವರ್ಜಯೇತ್ ॥೩॥
ಋಕ್ಷಸಂಜ್ಞಾಂ ನದೀಸಂಜ್ಞಾಂ ವೃಕ್ಷಸಂಜ್ಞಾಂ ಚ ವರ್ಜಯೇತ್ ।

ಈಶ್ವರನು ಹೇಳಿದನು—ಇನ್ನು ಮುಂದೆ ಗೃಹಸ್ಥಾಶ್ರಮಧರ್ಮವನ್ನು ಸಂಗ್ರಹವಾಗಿ ಹೇಳುವೆನು. ಹಿಂದೆ ಹೇಳಿದ ಬ್ರಹ್ಮಚರ್ಯಾಶ್ರಮನಿಯಮದಿಂದ, ವೇದಗಳನ್ನೆಲ್ಲವನ್ನೂ ಅಭ್ಯಾಸಮಾಡಿ, ಬ್ರಹ್ಮಚಾರಿಯಾದವನು ಗುರುಗಳ ಅಪ್ಪಣೆಯನ್ನು ಪಡೆದು ಸ್ನಾತಕವ್ರತವನ್ನು ಮಾಡಿ ಗೃಹಸ್ಥಾಶ್ರಮವನ್ನು ಪ್ರವೇಶಿಸಬೇಕು. ||೧||

ಉತ್ತಮವಾದ ವಂಶದಲ್ಲಿ ಹುಟ್ಟಿದ ತನ್ನ ಗೋತ್ರಪ್ರವರಗಳಿಲ್ಲದ, ಸಮಸ್ತ ಸ್ತ್ರೀಲಕ್ಷಣಗಳಿಂದ ಕೂಡಿದ ಕನ್ಯೆಯನ್ನು ತನ್ನ ಸೂತ್ರದಲ್ಲಿ ಹೇಳಿರುವ ವಿಧಿಗನುಸಾರವಾಗಿ ವಿವಾಹಮಾಡಿಕೊಳ್ಳಬೇಕು. ನಕ್ಷತ್ರ, ನದಿ, ಮರ ಇವುಗಳ ಹೆಸರಿನ

ತಯಾ ಧರ್ಮಂ ಚರೇನ್ನಿತ್ಯಂ ಸಹಿತಃ ಸಂಯುತೇಂದ್ರಿಯಃ ॥೪॥

ಋತುಕಾಲೇಽಂಗನಾಸೇವಾಂ ಕುರ್ಯಾತ್ಪ್ರಾಜ್ಞಃ ಸಮಂತ್ರಕಂ ।
ದೇವಾಗ್ನ್ಯತಿಥಿಭೈಕ್ಷಾರ್ಥಂ ಪಚೇನ್ನೈವಾತ್ಮಕಾರಣಾತ್ ॥೫॥

ಆತ್ಮಾರ್ಥಂ ಯಃ ಪಚೇನ್ಮೋಹಾನ್ನರಕಾರ್ಥಂ ಸ ಜೀವತಿ ।
ಧರ್ಮಾರ್ಥಂ ಜೀವನಂ ಯೇಷಾಂ ಸಂತಾನಾರ್ಥಂ ಚ ಮೈಥುನಂ ॥೬॥

ತೇ ಮುಚ್ಯಂತೇ ಹಿ ಸಂಸಾರಾನ್ನಾನ್ಯೇ ನಾರಕಿಣಃ ಸದಾ ।
ಯಾಜನಾಧ್ಯಾಪನಾಭ್ಯಾಂ ಚ ವಿಶುದ್ಧೇಭ್ಯಃ ಪ್ರತಿಗ್ರಹಾತ್ ॥೭॥
ಯಾತ್ರಾರ್ಥಮರ್ಜಯೇದರ್ಥಂ ಯಾಗಾರ್ಥಂ ವಾ ದ್ವಿಜೋತ್ತಮಃ ।

ಕನ್ಯೆಯನ್ನೂ, ಸದಾಚಾರವೂ, ಪಾತಿವ್ರತ್ಯಧರ್ಮವೂ ಇಲ್ಲದ ಕನ್ಯೆಯನ್ನೂ ವಿವಾಹ ಮಾಡಿಕೊಳ್ಳಬಾರದು. ||೨-೩||

ವಿದ್ವಾಂಸನು ಆ ಪತ್ನಿಯೊಡನೆ ಪ್ರತಿದಿನವೂ ಗೃಹಸ್ಥಾಶ್ರಮಧರ್ಮವನ್ನು ನಡೆಯಿಸುತ್ತಾ ಜಿತೇಂದ್ರಿಯನಾಗಿ ಋತುಕಾಲದಲ್ಲಿ ಮಾತ್ರ ಮಂತ್ರೋಚ್ಚಾರಣೆ ಮಾಡಿ ಸ್ತ್ರೀಯನ್ನು ಅನುಭವಿಸುತ್ತಿರಬೇಕು. (ಅಮೋಹಮಸ್ಮಿ ಸಾತ್ವಂ ಇತ್ಯಾದಿ ಮಂತ್ರಗಳು).||೪||

ದೇವತೆಗಳ ನಿವೇದನಕ್ಕೂ, ಅಗ್ನಿಯಲ್ಲಿ ಹೋಮಮಾಡುವುದಕ್ಕೂ ಅತಿಥಿ ಸತ್ಕಾರಕ್ಕೂ, ಬ್ರಹ್ಮಚಾರಿಗಳಿಗೂ, ಯತಿಗಳಿಗೂ, ಭಿಕ್ಷವನ್ನಿಡುವುದಕ್ಕೂ, ಅಡಿಗೆಯನ್ನು ಮಾಡಬೇಕು. ಅಜ್ಞಾನದಿಂದ ಇವುಗಳನ್ನು ಬಿಟ್ಟು ತಮ್ಮ ಊಟಕ್ಕಾಗಿ ಯಾರು ಅಡಿಗೆಯನ್ನು ಮಾಡುವರೋ ಅವರು ಪಾಪವನ್ನು ಪಡೆದು ನರಕಕ್ಕೆ ಹೋಗುವರು. ಯಾರ ಜೀವನವು ಮೇಲೆ ಹೇಳಿದ ಧರ್ಮಾರ್ಥವಾಗಿರುವುದೋ ಸ್ತ್ರೀಸಂಗವು ಪುತ್ರಪ್ರಾಪ್ತಿಗೆ ಮಾತ್ರವಾಗಿರುವುದೋ ಅಂಥವರು ಸಂಸಾರದುಃಖದಿಂದ ಬಿಡುಗಡೆಯನ್ನು ಹೊಂದುವರು. ಮಿಕ್ಕವರು ಯಾವಾಗಲೂ ನರಕದಲ್ಲಿರುವರು. ||೫-೬||

ಬ್ರಾಹ್ಮಣಶ್ರೇಷ್ಠನಾದ ಗೃಹಸ್ಥನು ಪರಿಶುದ್ಧರಾದ ಇತರರಿಗೆ ಯಾಗಮಾಡಿಸುವುದರಿಂದಲೂ, ವೇದವನ್ನು ಹೇಳಿಕೊಡುವುದರಿಂದಲೂ, ಶರೀರ ಯಾತ್ರೆಗಾಗಿಯೂ, ಯಜ್ಞಮಾಡುವುದಕ್ಕಾಗಿಯೂ ಧನವನ್ನು ಸಂಪಾದಿಸಬೇಕು. ||೭||

ನಿರ್ಜನೇ ನಿರ್ಭಯೇ ದೇಶೇ ವಿಣ್ಮೂತ್ರಾದಿ ವಿಸರ್ಜಯೇತ್ ॥೮॥

ಪ್ರಕ್ಷಾಲಯೇದ್ಗುದಂ ಶಿಶ್ನಂ ಪಾದದ್ವಂದ್ವಂ ಕರದ್ವಯಂ ।
ಮೃಜ್ಜಲಾಭ್ಯಾಂ ಯಥಾಶಕ್ತಿ ಗಂಧಲೇಪನಿವೃತ್ತಯೇ ॥೯॥

ಯಾವನ್ಮಾತ್ರಂ ಮನಃಶುದ್ಧಿಸ್ತಾವಚ್ಛೌಚಂ ವಿಧೀಯತೇ ।
ಪಶ್ಚಾದಾಚಮನಂ ಕುರ್ಯಾದ್ದಂತಕಾಷ್ಠಂ ಚ ಭಕ್ಷಯೇತ್ ॥೧೦॥

ದ್ವಿರಾಚಮ್ಯ ಪುನಃ ಸ್ನಾತ್ವಾ ಕೃತ್ಯಶೇಷಂ ಸಮಾಚರೇತ್ ।
ಪ್ರಾಣಾಯಾಮತ್ರಯಂ ಕುರ್ಯಾತ್ಸಾವಿತ್ರೀಂ ಚ ಜಪೇದ್ಬುಧಃ ॥೧೧॥

ಉಪಸ್ಥಾನಂ ತತಃ ಕುರ್ಯಾನ್ಮಧ್ಯಾಹ್ನೇಽಪ್ಯೇವಮಾಚರೇತ್ ।
ಬ್ರಹ್ಮಯಜ್ಞಂ ದ್ವಿಜಃ ಕುರ್ಯಾದ್ವೇದಪಾರಾಯಣೇ ರತಃ ॥೧೨॥

ಅನ್ಯಾನಿ ಯಾನಿ ಕರ್ಮಾಣಿ ನಿತ್ಯಂ ತಾನಿ ಸಮಾಚರೇತ್ ।
ಅಗ್ನಿಕಾರ್ಯಂ ದ್ವಿಜಃ ಕುರ್ಯಾದ್ಬಲಿಕರ್ಮಾದಿಕಂ ತಥಾ ॥೧೩॥

ಗೃಹಸ್ಥನು ಜನರಿಲ್ಲದ, ಕೃಮಿಕೀಟಾದಿಗಳ ಭಯವಿಲ್ಲದ ಪ್ರದೇಶದಲ್ಲಿ ಮಲಮೂತ್ರಾದಿಗಳನ್ನು ವಿಸರ್ಜಿಸಬೇಕು. ಬಳಿಕ ವಿಸರ್ಜನಾಂಗಗಳನ್ನೂ, ಕೈಕಾಲುಗಳನ್ನೂ, ಮಣ್ಣು ಮತ್ತು ನೀರಿನಿಂದ ದುರ್ಗಂಧವನ್ನು ನಾಶಮಾಡುವುದಕ್ಕಾಗಿ, ತೊಳೆದುಕೊಳ್ಳಬೇಕು. ಅಥವಾ ಮನಸ್ಸು ಶುದ್ಧವಾಗುವಪರ್ಯಂತ ತೊಳೆದುಕೊಳ್ಳಬೇಕು. ||೮-೯||

ಆಮೇಲೆ ಆಚಮನವನ್ನು ಮಾಡಿ, ಹಲ್ಲುಜ್ಜಿಕೊಂಡು, ಎರಡಾವೃತ್ತಿ ಆಚಮನವನ್ನು ಮಾಡಿ, ಬಳಿಕ ಸ್ನಾನಮಾಡಿ, ಸಂಧ್ಯಾಕರ್ಮವನ್ನು ಮಾಡಬೇಕು. ಮೂರಾವೃತ್ತಿ ಪ್ರಾಣಾಯಾಮವನ್ನು ಮಾಡಿ, ಗಾಯತ್ರಿಯನ್ನು ಜಪಿಸಬೇಕು. ||೧೦-೧೧||

ಬಳಿಕ ಸಂಧ್ಯೋಪಸ್ಥಾನವನ್ನು ಮಾಡಿ, ಮಧ್ಯಾಹ್ನದಲ್ಲಿಯೂ, ಹೀಗೆಯೇ ಮಾಧ್ಯಾಹ್ನಿಕಸಂಧ್ಯೆಯನ್ನಾಚರಿಸಿ, ವೇದಪಾರಾಯಣಮಾಡುತ್ತ, ಬ್ರಹ್ಮಯಜ್ಞವನ್ನೂ, ಮಿಕ್ಕ ನಿತ್ಯಕರ್ಮಗಳಾದ, ಔಪಾಸನ ವೈಶ್ವದೇವಬಲಿಹರಣಾದಿಗಳನ್ನೂ ಮಾಡಬೇಕು. ||೧೨-೧೩||

ನಿತ್ಯಶ್ರಾದ್ಧಂ ತಥಾದಾನಮಶಕ್ತಾನಾಂ ಚ ರಕ್ಷಣಂ ।
ದಯಾಂ ಸರ್ವೇಷು ಭೂತೇಷು ಕುರ್ಯಾದ್ಗಾರ್ಹಸ್ಥ್ಯಮಾಶ್ರಿತಃ ॥೧೪॥

ಯತಿಸಂರಕ್ಷಣಂ ಕುರ್ಯಾದನ್ನಪಾನಾದಿಭಿಃ ಸಹ ।
ಯತಿಶ್ಚ ಬ್ರಹ್ಮಚಾರೀ ಚ ಪಕ್ವಾನ್ನಸ್ವಾಮಿನಾವುಭೌ ॥೧೫॥

ತಯೋರನ್ನಮದತ್ವಾ ತು ಭುಕ್ತ್ವಾ ಚಾಂದ್ರಾಯಣಂ ಚರೇತ್ ।
ಯತಿಹಸ್ತೇ ಜಲಂ ದದ್ಯಾದ್ಭೈಕ್ಷಂ ದದ್ಯಾತ್ಪುನರ್ಜಲಂ ॥೧೬॥

ತದ್ಭೈಕ್ಷಂ ಮೇರುಣಾ ತುಲ್ಯಂ ತಜ್ಜಲಂ ಸಾಗರೋಪಮಂ ।
ಏಕವಾರಂ ಗೃಹೀ ನಿತ್ಯಮಶ್ನೀಯಾದುತ್ತಮಂ ಹಿ ತತ್ ॥೧೭॥

ದ್ವಿವಾರಂ ವಾಽಕ್ಷಮೋಽಶ್ನೀಯಾದ್ದ್ವಾತ್ರಿಂಶದ್ಗ್ರಾಸಮನ್ವಹಂ ।
ಕುಕ್ಕುಟಾಂಡಪ್ರಮಾಣೇನ ನ ಹೃಷ್ಟೋ ನ ವಿಷಾದವಾನ್ ॥೧೮॥

ಗೃಹಸ್ಥಾಶ್ರಮಿಯು, ಪಿತೃಗಳ ತೃಪ್ತಿಗಾಗಿ, ನಿತ್ಯಶ್ರಾದ್ಧವನ್ನೂ, ದಾನವನ್ನೂ ಮಾಡಬೇಕು. ಅಶಕ್ತರಕ್ಷಣೆ, ಭೂತದಯೆ ಇವೆರಡೂ ಅವನಿಗೆ ಮುಖ್ಯಧರ್ಮಗಳು. ಯತಿಗಳಿಗೆ ಅನ್ನಪಾನಗಳನ್ನು ಕೊಟ್ಟು ಕಾಪಾಡಬೇಕು. ಗೃಹಸ್ಥನು ಮಾಡಿದ, ಅಡಿಗೆಗೆ ಯತಿಗಳೂ, ಬ್ರಹ್ಮಚಾರಿಗಳಿಗೂ, ಅಧಿಕಾರಿಗಳು. ಅವರಿಗೆ ಅನ್ನವನ್ನು ಕೊಡದೆ, ಭೋಜನಮಾಡಿದ ಗೃಹಸ್ಥನು ಪಾಪಿಯಾಗುವುದರಿಂದ, ಆ ಪಾಪವನ್ನು ಚಾಂದ್ರಾಯಣವ್ರತವನ್ನು ಮಾಡಿ ಕಳೆದುಕೊಳ್ಳಬೇಕು. ॥೧೪-೧೫॥

ಯತಿಯ ಕೈಗೆ ಮೊದಲು ನೀರನ್ನು ಕೊಟ್ಟು ಆಮೇಲೆ ಭಿಕ್ಷೆಯನ್ನು ಕೊಡಬೇಕು. ಮತ್ತೆ ನೀರನ್ನು ಕೊಡಬೇಕು. ಹೀಗೆ ಮಾಡಿದರೆ, ಆ ಭಿಕ್ಷಾನ್ನವು ಮೇರು ಪರ್ವತಕ್ಕೆ ಸಮಾನವಾದುದಾಗಿಯೂ, ಆ ನೀರು ಸಾಗರಕ್ಕೆ ಸಮಾನವಾದುದಾಗಿಯೂ ಎಂದರೆ ಅಪರಿಮಿತವಾದ ಫಲವುಳ್ಳದ್ದಾಗುವುದು. ॥೧೬॥

ಪ್ರತಿದಿನವೂ, ಗೃಹಸ್ಥಾಶ್ರಮಿಯು, ಒಂದು ಹೊತ್ತು ಊಟಮಾಡುವುದು ಅತ್ಯುತ್ತಮವು. ಅಥವಾ ಅಶಕ್ತನಾದವನು ಕೋಳಿಯ ಮೊಟ್ಟೆಯ ಆಕಾರವಾದ ಮೂವತ್ತೆರಡು ತುತ್ತುಗಳನ್ನು ದಿನಕ್ಕೆರಡಾವೃತ್ತಿ ಭೋಜನಮಾಡಬಹುದು. ಊಟ ಮಾಡುವಾಗ ಅತ್ಯಂತ ಸಂತೋಷವಾಗಲಿ, ದುಃಖವಾಗಲಿ ಇರಕೂಡದು. ॥೧೮॥

ಹೋಮೇ ಜಪೇ ಚ ಭುಕ್ತೌ ಚ ಗುರುವೃದ್ಧಾದ್ಯುಪಾಸನೇ ।
ತಥೈವಾಚಮನೇ ಯಜ್ಞೋಪವೀತೀ ಸ್ಯಾನ್ನ ಚಾನ್ಯಥಾ ॥೧೯॥

ವೈಣವೀಂ ಧಾರಯೇದ್ಯಷ್ಟಿಂ ಸೋದಕಂ ಚ ಕಮಂಡಲುಂ ।
ಉದ್ಧೂಲನಂ ಸಕೃತ್ಕುರ್ಯಾತ್ಸರ್ವದೈವೋಕ್ತವರ್ತ್ಮನಾ ॥೨೦॥

ತ್ರ್ಯಂಬಕೇಣ ಮಂತ್ರೇಣ ಸತಾರೇಣ ಶಿವೇನ ಚ ।
ತ್ರಿಪುಂಡ್ರಂ ಧಾರಯೇನ್ನಿತ್ಯಂ ಗೃಹಸ್ಥಾಶ್ರಮಮಾಶ್ರಿತಃ ॥೨೧॥

ತೇನಾಧೀತಂ ಶ್ರುತಂ ತೇನ ತೇನ ಸರ್ವಮನುಷ್ಠಿತಂ ।
ಯೇನ ವಿಪ್ರೇಣ ಶಿರಸಿ ತ್ರಿಪುಂಡ್ರಂ ಭಸ್ಮನಾ ಧೃತಂ ॥೨೨॥

ತ್ರಿಪುಂಡ್ರಂ ಧಾರಯೇದ್ಭಕ್ತ್ಯಾ ಮನಸಾಽಪಿ ನ ಲಂಘಯೇತ್ ।
ಶ್ರುತ್ಯಾ ವಿಧೀಯತೇ ಯಸ್ಮಾತ್ತತ್ತ್ಯಾಗೀ ಪತಿತೋ ಭವೇತ್ ॥೨೩॥

ರುದ್ರಾಕ್ಷಂ ಧಾರಯೇನ್ನಿತ್ಯಂ ರುದ್ರಾಕ್ಷಾಣಾಮಿತಿ ಶ್ರುತಿಃ ।
ಲಿಂಗೇ ಸಮರ್ಚಯೇನ್ನಿತ್ಯಂ ದೇವದೇವಂ ಮಹೇಶ್ವರಂ ॥೨೪॥

ಹೋಮಮಾಡುವಾಗಲೂ, ಜಪ, ಭೋಜನ, ಗುರುವೃದ್ಧಾದಿಗಳಿಗೆ ನಮಸ್ಕಾರ, ಆಚಮನ ಇವುಗಳನ್ನು ಮಾಡುವಾಗಲೂ, ಯಜ್ಞೋಪವೀತವನ್ನು ಬಲಗಡೆ ಹಾಕಿಕೊಂಡಿರಬೇಕು. ||೧೯||

ಕೈಯ್ಯಲ್ಲಿ ಬಿದಿರಿನ ದಂಡವನ್ನೂ, ನೀರಸಹಿತವಾದ ಕಮಂಡಲುವನ್ನೂ ಧರಿಸಬೇಕು. ಹಿಂದೆ ಹೇಳಿದಂತೆ ಭಸ್ಮದಿಂದ ಅವಯವಗಳಿಗೆ ಲೇಪಮಾಡಿಕೊಳ್ಳಬೇಕು. ||೨೦||

ತ್ರ್ಯಂಬಕಮಂತ್ರದಿಂದಲೂ, ಓಂಕಾರಸಹಿತವಾದ ಶಿವಪಂಚಾಕ್ಷರಮಂತ್ರದಿಂದಲೂ, ಭಸ್ಮದ ತ್ರಿಪುಂಡ್ರವನ್ನು ಪ್ರತಿದಿನವೂ ಧರಿಸಬೇಕು. ಹಣೆಯಲ್ಲಿ ಅಡ್ಡಲಾಗಿ ತ್ರಿಪುಂಡ್ರವನ್ನು ಧರಿಸಿದ ಬ್ರಾಹ್ಮಣನು ಓದಿದ ವೇದಶಾಸ್ತ್ರಗಳೂ, ಅನುಷ್ಠಾನಮಾಡಿದ ಕರ್ಮಗಳೂ, ಫಲದಾಯಕಗಳಾಗುವುವು. ||೨೧-೨೨||

ಭಸ್ಮತ್ರಿಪುಂಡ್ರಧಾರಣೆಯು ವೇದದಲ್ಲಿ ಹೇಳಿರುವುದರಿಂದ ಅದನ್ನು ಭಕ್ತಿಯಿಂದ ಧರಿಸಬೇಕು. ಮನಃಪೂರ್ವಕವಾಗಿ ಅದನ್ನು ಬಿಟ್ಟರೆ ಪಾಪಿಯಾಗುವನು. ||೨೩||

ಅಗ್ನೀನಾಧಾಯ ವಿಧಿವತ್ಕುರ್ಯಾದ್ಯಜ್ಞಾನನಂತರಂ ।
ಯಜ್ಞೈಃ ಸರ್ವಾಣಿ ಪಾಪಾನಿ ವಿನಶ್ಯಂತಿ ನ ಸಂಶಯಃ ॥೨೫॥

ಪ್ರಕ್ಷೀಣಾಶೇಷಪಾಪಸ್ಯ ಶುದ್ಧಾಂತಃಕರಣಸ್ಯ ತು ।
ದೇವದೇವಪರಿಜ್ಞಾನೇ ವಾಂಛಾ ಜಾಯೇತ ಸುವ್ರತ ॥೨೬॥

ಸ್ವರ್ಗಕಾಮೋ ಯದಿ ಸ್ವರ್ಗಂ ಯಾತಿ ಯಜ್ಞಾದ್ದ್ವಿಜೋತ್ತಮಃ ।
ಪುತ್ರಮುತ್ಪಾದಯೇತ್ಸ್ವಸ್ಯಾಂ ಪಿತ್ರ್ಯಾಣಾಮೃಣಶಾಂತಯೇ ॥೨೭॥

ಸತ್ಯಂ ಬ್ರೂಯತ್ಪ್ರಿಯಂ ಬ್ರೂಯಾತ್ಸರ್ವಭೂತೇಷು ಸರ್ವದಾ ।
ಏವಂ ಸಮಾಚರೇದ್ವಿಪ್ರೋ ವಿರಕ್ತಶ್ಚೇದ್ಗೃಹಾಶ್ರಮಾತ್ ॥೨೮॥

ಸನ್ಯಸೇತ್ಸರ್ವಕರ್ಮಾಣಿ ವೇದಾಂತಾಭ್ಯಾಸಯತ್ನವಾನ್ ।
ವೇದಾಂತಶ್ರವಣಾಭಾವೇ ಪತಿತೋಽಯಂ ಭವೇದ್ಧ್ರುವಂ ॥೨೯॥

ವೇದದಲ್ಲಿ ಹೇಳಿರುವುದರಿಂದ ಪ್ರತಿದಿನವೂ ರುದ್ರಾಕ್ಷಿಧಾರಣೆಯನ್ನು ಮಾಡಿಕೊಳ್ಳಬೇಕು. ದೇವದೇವನಾದ ಮಹೇಶ್ವರನನ್ನು ಲಿಂಗದಲ್ಲಿ ಪೂಜಿಸಬೇಕು. ॥೨೪॥

ಆಮೇಲೆ ವಿಧಿಯನ್ನನುಸರಿಸಿ, ಅಗ್ನಿಯನ್ನು ಪ್ರತಿಷ್ಠಿಸಿ ಯಜ್ಞಗಳನ್ನು ಮಾಡಬೇಕು. ಯಜ್ಞಗಳಿಂದ ಸಮಸ್ತ ಪಾಪಗಳೂ ನಾಶವಾಗುವುವು. ಎಲ್ಲಾ ಪಾಪಗಳೂ ನಾಶವಾಗಿ ಮನಸ್ಸು ಶುದ್ಧಿಯಾದವನಿಗೆ ದೇವದೇವನಾದ ಶಿವನನ್ನು ತಿಳಿಯಲು ಅಪೇಕ್ಷೆಯುಂಟಾಗುವುದು. ॥೨೫-೨೬॥

ಬ್ರಾಹ್ಮಣಶ್ರೇಷ್ಠನು ಸ್ವರ್ಗದ ಆಸೆಯಿಂದ ಯಜ್ಞವನ್ನು ಮಾಡಿದರೆ ಸ್ವರ್ಗವನ್ನು ಪಡೆಯುವನು. ಪಿತೃಋಣವನ್ನು ತೀರಿಸುವುದಕ್ಕಾಗಿ ತನ್ನ ಪತ್ನಿಯಲ್ಲಿ ಪುತ್ರನನ್ನು ಪಡೆಯಬೇಕು. ॥೨೭॥

ಯಾವಾಗಲೂ ಸಮಸ್ತಪ್ರಾಣಿಗಳಲ್ಲಿಯೂ ಸತ್ಯವೂ, ಹಿತವೂ ಆದ ಮಾತನ್ನಾಡುತ್ತಿರಬೇಕು. ಈ ರೀತಿಯಲ್ಲಿ ಬ್ರಾಹ್ಮಣನು ಆಚರಿಸುತ್ತ ವೈರಾಗ್ಯವುಳ್ಳವನಾದರೆ ಗೃಹಸ್ಥಾಶ್ರಮದಿಂದಲೇ ಸರ್ವಕರ್ಮಸನ್ಯಾಸವನ್ನು ಮಾಡಿ, ಸನ್ಯಾಸಾಶ್ರಮವನ್ನು ಪರಿಗ್ರಹಿಸಿ ವೇದಾಂತಶ್ರವಣವನ್ನು ಮಾಡಿ, ಆ ಶಾಸ್ತ್ರಾಭ್ಯಾಸದಲ್ಲಿ ಪ್ರಯತ್ನವುಳ್ಳವನಾಗಬೇಕು. ಇಂಥವನು ವೇದಾಂತಶ್ರವಣಮಾಡದಿದ್ದರೆ ಪಾಪಿಯಾಗುವುದು ಖಂಡಿತವಾದುದು. ॥೨೮-೨೯॥

ವಿರಕ್ತೋಽಪಿ ಮುಮುಕ್ಷುಶ್ಚೇದ್ಧಂಸೇ ವಾ ಸನ್ಯಸೇದ್ಗೃಹೀ ।
ಬಹೂದಕೇ ವಾ ಶಕ್ತಶ್ಚೇನ್ನ್ಯಸೇದ್ವಿಪ್ರಃ ಕುಟೀಚಕೇ ॥೩೦॥

ಅವಿರಕ್ತೋ ಗೃಹೀ ಚಾಂತೇ ವಾನಪ್ರಸ್ಥಂ ಸಮಾಚರೇತ್ ।
ಅಥವಾ ಯಾವದಾಯುಷ್ಯಂ ಗಾರ್ಹಸ್ಥ್ಯಂ ಸಮ್ಯಗಾಚರೇತ್ ॥೩೧॥

ಗೃಹಸ್ಥಾದಾಶ್ರಮಾಃ ಸರ್ವೇ ಸಮುತ್ಪನ್ನಾಃ ಸುರಕ್ಷಿತಾಃ ।
ತಸ್ಮಾದ್ಗೃಹಸ್ಥ ಏವ ಸ್ಯಾದವಿರಕ್ತೋ ದ್ವಿಜಃ ಸದಾ ॥೩೨॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಜ್ಞಾನಯೋಗಖಂಡೇ ಗೃಹಸ್ಥಾಶ್ರಮವಿಧಿನಿರೂಪಣಂ ನಾಮ ಚತುರ್ಥೋಽಧ್ಯಾಯಃ

ಗೃಹಸ್ಥನು ವೈರಾಗ್ಯವುಳ್ಳವನಾದರೂ, ಮೋಕ್ಷಾಪೇಕ್ಷೆಯಿದ್ದರೆ ಪರಮಹಂಸ ಸನ್ಯಾಸಿಯಾಗಬಹುದು. ಮೋಕ್ಷಾಪೇಕ್ಷೆಯಿಲ್ಲದಿದ್ದರೂ ಶಕ್ತನಾದರೆ ಹಂಸನಾಗಲಿ, ಬಹೂದಕನಾಗಲಿ ಆಗಬಹದು. ಅಷ್ಟಕ್ಕೆ ಶಕ್ತಿಯಿಲ್ಲದವನಾದರೆ ಕುಟೀಚಕವೆಂಬ ಸನ್ಯಾಸಾಶ್ರಮವನ್ನಾದರೂ ಪಡೆಯಬಹುದು. ॥೩೦॥

ಗೃಹಸ್ಥಾಶ್ರಮಿಯಾದ ಬ್ರಾಹ್ಮಣನು ವೈರಾಗ್ಯವುಳ್ಳವನಲ್ಲದೆಹೋದರೆ ತನ್ನ ಕೊನೆಯ ವಯಸ್ಸಿನಲ್ಲಿ ವಾನಪ್ರಸ್ಥಾಶ್ರಮವನ್ನು ಆಶ್ರಯಿಸಬಹುದು. ಇಲ್ಲದಿದ್ದರೆ ತನ್ನ ಆಯುಸ್ಸು ಪೂರ್ಣವಾಗುವವರೆಗೂ ಗೃಹಸ್ಥಾಶ್ರಮವನ್ನು ಚನ್ನಾಗಿ ನಡೆಯಿಸಿ ಕೊಂಡು ಬರಬೇಕು. ॥೩೧॥

ಗೃಹಸ್ಥನಿಂದ ಮಿಕ್ಕ ಆಶ್ರಮಗಳೆಲ್ಲವೂ, ಜೀವನಲಾಭವನ್ನು ಪಡೆಯುವುದರಿಂದ ಈ ಆಶ್ರಮವೇ ಅತ್ಯಂತ ಪ್ರಶಸ್ತವಾದುದು. ಈ ಕಾರಣದಿಂದ ವಿರಕ್ತನಲ್ಲದ ಬ್ರಾಹ್ಮಣನು ಕೊನೆಯವರೆಗೂ ಗೃಹಸ್ಥಾಶ್ರಮದಲ್ಲಿಯೇ ಇರಬಹುದು. ॥೩೨॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ಗೃಹಸ್ಥಾಶ್ರಮದ ಧರ್ಮಗಳನ್ನು ವಿವರಿಸಿರುವ
ನಾಲ್ಕನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಂದಪುರಾಣಾಂತರ್ಗತಾ

ಸೂತಸಂಹಿತಾ

ಜ್ಞಾನಯೋಗಖಂಡಂ

|| ಪಂಚಮೋಽಧ್ಯಾಯಃ ||

ಐದನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ವಾನಪ್ರಸ್ಥಾಶ್ರಮಂ ಮುನೇ ।
ಪುತ್ರೇ ಭಾರ್ಯಾಂ ವಿನಿಕ್ಷಿಪ್ಯ ಗೃಹೀತ್ವಾ ವಾ ಸಮಾಹಿತಃ ॥೧॥

ಶುಕ್ಲಪಕ್ಷೇ ಶುಭೇ ವಾರೇ ಶುಭನಕ್ಷತ್ರಸಂಯುತೇ ।
ಸುಮುಹೂರ್ತೇ ವನಂ ಗಚ್ಛೇದ್ಗೃಹಸ್ಥಶ್ಚೋತ್ತರಾಯಣೇ ॥೨॥

ಯಮಾದಿಸಹಿತಃ ಶುದ್ಧಃ ತಪಃ ಕುರ್ಯಾತ್ಸಮಾಹಿತಃ ।
ಶಾಕಮೂಲಫಲಾಶೀಸ್ಯಾತ್ತೇನೇಶಂ ಪೂಜಯೇದ್ಬುಧಃ ॥೩॥

ಈಶ್ವರನು ಹೇಳಿದನು—ಎಲೈ ಬೃಹಸ್ಪತಿಯೇ, ಗೃಹಸ್ಥಾಶ್ರಮಕ್ಕಿಂತಲೂ, ಉತ್ತಮವಾದ ವಾನಪ್ರಸ್ಥಾಶ್ರಮವನ್ನು ಹೇಳುವೆನು. ವಾನಪ್ರಸ್ಥಾಶ್ರಮವನ್ನಾಚರಿಸಲಪೇಕ್ಷೆಯುಳ್ಳ ಗೃಹಸ್ಥನು, ತನ್ನ ಪತ್ನಿಯ ರಕ್ಷಣೆಯ ಭಾರವನ್ನು ಮಗನಿಗೆ ವಹಿಸಿ, ಅಥವಾ, ಪತ್ನಿಯನ್ನೂ, ಜತೆಯಲ್ಲಿ ಕರೆದುಕೊಂಡು, ಉತ್ತರಾಯಣದ ಶುಕ್ಲಪಕ್ಷದಲ್ಲಿ ಶುಭವಾದ, ತಿಥಿ ವಾರ ನಕ್ಷತ್ರ ಮುಹೂರ್ತಗಳಲ್ಲಿ ಏಕಾಗ್ರಚಿತ್ತವುಳ್ಳವನಾಗಿ, ತಪೋಯೋಗ್ಯವಾದ ವನಕ್ಕೆ ಪ್ರಯಾಣಮಾಡಬೇಕು. ||೧-೨||

ಆ ವನದಲ್ಲಿ, ಯಮನಿಯಮಾದಿ ಯೋಗಾಂಗಗಳಿಂದ ಶುದ್ಧನೂ, ಏಕಾಗ್ರಚಿತ್ತವುಳ್ಳವನೂ, ಆಗಿ, ಗೆಡ್ಡೆಗೆಣಸುಗಳು, ಹಣ್ಣುಗಳು ಇವುಗಳನ್ನು ಆಹಾರ ಮಾಡಿ

ಗ್ರಾಮಾದಾಹೃತ್ಯ ವಾಽಶ್ನೀಯಾದ್ಗ್ರಾಸಾನ್ ಷೋಡಶ ಬುದ್ಧಿಮಾನ್ ।
ಜಟಾಶ್ಚ ಬಿಭೃಯಾನ್ನಿತ್ಯಂ ನಖಲೋಮಾನಿ ನೋತ್ಸೃಜೇತ್ ॥೪॥

ವೇದಾಭ್ಯಾಸಂ ಸದಾ ಕುರ್ಯಾದ್ವಾಗ್ಯತಃ ಸುಸಮಾಹಿತಃ ।
ಅಗ್ನಿಹೋತ್ರಂ ಚ ಜುಹುಯಾತ್ಪಂಚಯಜ್ಞಾನ್ಸಮಾಚರೇತ್ ॥೫॥

ಚೀರವಾಸಾ ಭವೇತ್ಕುರ್ಯಾತ್ಸ್ನಾನಂ ತ್ರಿಷವಣಂ ಬುಧಃ ।
ಸರ್ವಭೂತಾನುಕಂಪೀ ಸ್ಯಾತ್ಪ್ರತಿಗ್ರಹವಿವರ್ಜಿತಃ ॥೬॥

ವರ್ಜಯೇನ್ಮಧುಮಾಂಸಾನಿ ಭೌಮಾನಿ ವನಜಾನಿ ಚ ।
ಏಕವಾರಂ ಸಮಶ್ನೀಯಾದ್ರಾತ್ರೌ ಧ್ಯಾನಪರೋ ಭವೇತ್ ॥೭॥

ಕೊಂಡು, ತಪಸ್ಸನ್ನು ಮಾಡುತ್ತ ಆ ಸ್ವಧರ್ಮದಿಂದಲೇ ಈಶ್ವರನನ್ನು ಪೂಜಿಸಬೇಕು. ॥೩॥

ಬುದ್ಧಿವಂತನಾದ ವಾನಪ್ರಸ್ಥಾಶ್ರಮಿಯು ಗ್ರಾಮದಲ್ಲಿ ಭಿಕ್ಷಾನ್ನವನ್ನು ತಂದಾದರೂ, ಪ್ರತಿದಿನವೂ, ಹದಿನಾರು ತುತ್ತುಗಳನ್ನು ಊಟಮಾಡಬಹುದು. ಯಾವಾಗಲೂ, ಜಟಾಧಾರಿಯಾಗಿ, ಕೂದಲು ಮತ್ತು, ಉಗುರು ಇವುಗಳನ್ನು ವಿಸರ್ಜನೆ ಮಾಡಬಾರದು. ॥೪॥

ಮೌನವ್ರತವನ್ನು ಧರಿಸಿ, ಏಕಾಗ್ರಚಿತ್ತದಿಂದ, ವೇದಪಾರಾಯಣವನ್ನು ಯಾವಾಗಲೂ, ಮಾಡುತ್ತಿರಬೇಕು. ಅಗ್ನಿಹೋತ್ರವನ್ನಿಟ್ಟುಕೊಂಡು, ಪ್ರತಿದಿನವೂ, ಅಗ್ನಿಯಲ್ಲಿ ಹೋಮವನ್ನು ಮಾಡಬೇಕು. ಅಗ್ನಿಯಲ್ಲಿ ಸಮಿತ್ತನ್ನು ಹೋಮ ಮಾಡುವುದೇ ದೇವಯಜ್ಞವು. ನೀರಿನಿಂದ ಪಿತೃಗಳಿಗೆ ತರ್ಪಣವನ್ನು ಕೊಡುವುದು ಪಿತೃಯಜ್ಞವು. ಭೂತಗಳಿಗೆ ಬಲಿಯ ಅನ್ನವನ್ನು ಕೊಡುವುದು ಭೂತಯಜ್ಞವು. ಬ್ರಾಹ್ಮಣರಿಗೆ ಅನ್ನವನ್ನು ಕೊಡುವುದು ಮನುಷ್ಯಯಜ್ಞವು. ವೇದಪಾರಾಯಣವನ್ನು ಮಾಡುವುದು ಬ್ರಹ್ಮಯಜ್ಞವು. ಐದು ಯಜ್ಞಗಳನ್ನೂ, ವಾನಪ್ರಸ್ಥಾಶ್ರಮಿಯು ಆವಶ್ಯಕವಾಗಿ ಮಾಡಬೇಕು. ॥೫॥

ತ್ರಿಕಾಲಗಳಲ್ಲಿ ಸ್ನಾನವನ್ನು ಮಾಡಿ ನಾರುಮಡಿಯನ್ನುಟ್ಟುಕೊಂಡು, ಸಕಲ ಭೂತಗಳಲ್ಲಿಯೂ, ದಯೆಯುಳ್ಳವನಾಗಿ, ಇತರರಿಂದ ದಾನವನ್ನು ತೆಗೆದುಕೊಳ್ಳದೆ ಇರಬೇಕು. ॥೬॥

ಭೂಮಿಯಲ್ಲಿ ವಾಸಿಸುವ ಮೊಲ ಮುಂತಾದ ಪಂಚನಖಪ್ರಾಣಿಗಳ ಮಾಂಸವನ್ನೂ, ನೀರಿನಲ್ಲಿ ವಾಸಿಸುವ ಆಮೆ ಮುಂತಾದುವುಗಳ ಮಾಂಸವನ್ನೂ, ಜೇನು

ಜಿತೇಂದ್ರಿಯೋ ಜಿತಕ್ರೋಧೋ ಭವೇದಧ್ಯಾತ್ಮಚಿಂತಕಃ ।
ಭೂಮೌ ಶಯೀತ ಸತತಂ ಸಾವಿತ್ರೀಂ ಚ ಜಪೇದ್ಬುಧಃ ॥೮॥

ಕ್ರೋಧಪೈಶುನ್ಯನಿದ್ರಾದಿ ದೂರತಃ ಪರಿವರ್ಜಯೇತ್ ।
ಕೃಚ್ಛ್ರಂ ಚಾಂದ್ರಾಯಣಂ ಕುರ್ಯಾನ್ಮಾಸಿ ಮಾಸಿ ವನೇಸ್ಥಿತಃ॥೯॥

ತುಪ್ಪವನ್ನೂ (ಮದ್ಯವೆಂದು ಬೇಕಾದರೂ ಇಟ್ಟುಕೊಳ್ಳಬಹುದು) ವನಾಶ್ರಮಿಯು ತಿನ್ನಕೂಡದು. ದಿನಕ್ಕೆ ಒಂದು ಹೊತ್ತು ಊಟಮಾಡಬೇಕು. ರಾತ್ರಿಯಕಾಲದಲ್ಲಿ ಧ್ಯಾನಾಸಕ್ತನಾಗಿರಬೇಕು. ಜಿತೇಂದ್ರಿಯನಾಗಿ ಕೋಪವನ್ನು ಜಯಿಸಿ, ಆತ್ಮಸ್ವರೂಪ ವನ್ನು ಧ್ಯಾನಿಸುತ್ತ ಗಾಯತ್ರೀಜಪವನ್ನು ಮಾಡಬೇಕು. ಭೂಮಿಯಮೇಲೆಯೇ ಮಲಗಬೇಕು. (ಉಡ, ಆಮೆ, ಮುಳ್ಳುಹಂದಿ, ಮೊಲ, ಮುಂಗಸಿ ಇವೇ ಪಂಚನಖ ಪ್ರಾಣಿಗಳು. ಗೃಹಸ್ಥರು ಇವುಗಳ ಮಾಂಸವನ್ನು ತಿನ್ನಬಹುದೆಂದು ಧರ್ಮಶಾಸ್ತ್ರದಲ್ಲಿ ಹೇಳಿರುವುದು. ಆದರೂ ಕಲಿಯುಗದಲ್ಲಿ ಇದನ್ನೂ ನಿಷೇಧಿಸಿದೆ.) ||೭-೮||

ಕೋಪವನ್ನೂ, ಚಾಡಿಯ ಮಾತನ್ನು ಕೇಳುವುದನ್ನೂ, ನಿದ್ರೆಯನ್ನೂ, ದೂರದಲ್ಲಿ ಬಿಡಬೇಕು. ಪ್ರತಿತಿಂಗಳಲ್ಲಿಯೂ ಕೃಚ್ಛ್ರಚಾಂದ್ರಾಯಣಗಳೆಂಬ ವ್ರತ ಗಳನ್ನು ಮಾಡುತ್ತಿರಬೇಕು. ಒಂದಾವೃತ್ತಿ ಬಾಯಿಹಿಡಿಸುವಷ್ಟು ಅನ್ನವನ್ನು ಒಂದು ತುತ್ತೆಂದು ಹೇಳುವರು. ಮೂರುದಿನ ಪ್ರಾತಃಕಾಲದಲ್ಲಿ ಮಾತ್ರ ಇಪ್ಪತ್ತಾರು ತುತ್ತು ಗಳನ್ನೂ, ಮತ್ತೆ ಮೂರುದಿನ ಸಾಯಂಕಾಲದಲ್ಲಿ ಮಾತ್ರ ಇಪ್ಪತ್ತೆರಡು ತುತ್ತು ಗಳನ್ನೂ, ಮತ್ತೆ ಮೂರುದಿನ ಅಯಾಚಿತಾನ್ನವನ್ನು ತಂದುಕೊಟ್ಟಕಾಲದಲ್ಲಿಮಾತ್ರ ಇಪ್ಪತ್ತುನಾಲ್ಕು ತುತ್ತುಗಳನ್ನೂ ಊಟಮಾಡಿಕೊಂಡಿದ್ದು ಕಡೆಯ ಮೂರು ದಿನಗಳು ಊಟವಿಲ್ಲದಿರುವುದು ಪ್ರಾಜಾಪತ್ಯಕೃಚ್ಛ್ರವೆನಿಸುವುದು. ಚಾಂದ್ರಾಯಣವೆಂಬುದು ಪಿಪೀಲಿಕಾಮಧ್ಯ, ಯವಮಧ್ಯ, ಋಷಿಚಾಂದ್ರಾಯಣ, ಶಿಶುಚಾಂದ್ರಾಯಣ, ಯತಿ ಚಾಂದ್ರಾಯಣ ಎಂದು ಐದು ವಿಧವು. ಒಂದು ತಿಂಗಳಿನ ಕೃಷ್ಣಪಕ್ಷದ ಪ್ರಾರಂಭ ದಲ್ಲಿ ಹದಿನಾಲ್ಕು ತುತ್ತುಗಳನ್ನು ಊಟಮಾಡಿ ಆ ಪಕ್ಷದಲ್ಲಿ ಪ್ರತಿದಿನವೂ ಒಂದೊಂದು ತುತ್ತಿನಂತೆ ಕಡಿಮೆಮಾಡುತ್ತಾ ಬಂದು ಹಾಗೆಯೇ ಶುಕ್ಲಪಕ್ಷದ ಮೊದಲನೆಯ ದಿನ ಒಂದು ಗ್ರಾಸವನ್ನು ಊಟಮಾಡಿ ಪ್ರತಿದಿನವೂ ಒಂದೊಂದು ಗ್ರಾಸದಂತೆ ಹೆಚ್ಚಿಸಿ ಕೊಂಡು ಆ ಪಕ್ಷವನ್ನು ಪೂರೈಸುವುದು. ಇದು ಪಿಪೀಲಿಕಾಮಧ್ಯವೆಂಬ ಚಾಂದ್ರಾ ಯಣವು. ತಿಂಗಳಿನ ಪ್ರಾರಂಭದಲ್ಲಿ ಮೊದಲುಮಾಡಿ ಶುಕ್ಲಪಕ್ಷದಲ್ಲಿ ಒಂದೊಂದು ಗ್ರಾಸವನ್ನು ಹೆಚ್ಚಿಸಿಕೊಂಡು ಕೃಷ್ಣಪಕ್ಷದಲ್ಲಿ ಒಂದೊಂದು ಗ್ರಾಸವನ್ನು ಕಡಿಮೆ

ಗ್ರೀಷ್ಮೇ ಪಂಚತಪಾಶ್ಚ ಸ್ಯಾದ್ವರ್ಷಾಸ್ವಭ್ರಾವಕಾಶನಃ ।
ಆರ್ದ್ರವಾಸಾಸ್ತು ಹೇಮಂತೇ ಕ್ರಮಶೋವರ್ಧಯಂಸ್ತಪಃ ॥೧೦॥

ಉಪಸ್ಪೃಶ್ಯ ತ್ರಿಷವಣಂ ಪಿತೃದೇವಾಂಶ್ಚ ತರ್ಪಯೇತ್ ।
ಏಕಪಾದೇನ ತಿಷ್ಠೇತ ವಾಯುಭಕ್ಷೋಽಬ್ದಮಧ್ಯಮೋ ॥೧೧॥

ಪಯಃ ಪಿಬೇಚ್ಛುಕ್ಲಪಕ್ಷೇ ಕೃಷ್ಣಪಕ್ಷೇ ಚ ಗೋಮಯಂ ।
ಜೀರ್ಣಪರ್ಣಾಶನೋ ವಾ ಸ್ಯಾತ್ಕೃಚ್ಛ್ರೈರ್ವಾ ವರ್ತಯೇತ್ಸದಾ॥ ॥೧೨॥

ಮಾಡುತ್ತ ಬರುವುದು. ಯವಮಧ್ಯಚಾಂದ್ರಾಯಣವು. ಪ್ರತಿದಿನವೂ ಜಿತೇಂದ್ರಿಯನಾಗಿ, ನಿಯಮವಾಗಿ ಮೂರು ಮೂರು ಗ್ರಾಸಗಳನ್ನು ಹವಿಸ್ಸನ್ನು ಭೋಜನಮಾಡಿ ಒಂದು ತಿಂಗಳು ವ್ರತವನ್ನಾಚರಿಸುವುದು ಋಷಿಚಾಂದ್ರಾಯಣವು. ಪ್ರಾತಃಕಾಲದಲ್ಲೋ ಸಾಯಂಕಾಲದಲ್ಲೋ ಪ್ರತಿದಿನವೂ ನಾಲ್ಕು ಗ್ರಾಸಗಳನ್ನು ಮಾತ್ರ ಒಂದು ತಿಂಗಳು ಭೋಜನಮಾಡಿಕೊಂಡಿರುವುದು ಶಿಶುಚಾಂದ್ರಾಯಣವೆನಿಸುವುದು. ಪ್ರತಿದಿನವೂ ಮಧ್ಯಾಹ್ನಕಾಲದಲ್ಲಿ ಮಾತ್ರ ಎಂಟು ಗ್ರಾಸಗಳನ್ನು ಮಾತ್ರ ಭೋಜನಮಾಡಿಕೊಂಡು ಒಂದು ತಿಂಗಳವರೆಗೆ ವ್ರತವನ್ನಾಚರಿಸುವುದು ಯತಿಚಾಂದ್ರಾಯಣವು. ಈ ಯತಿಚಾಂದ್ರಾಯಣವು ಸಮಸ್ತಪಾಪಗಳನ್ನೂ ನಾಶಮಾಡುವುದು. ॥೯॥

ವನಾಶ್ರಮಿಯು ಗ್ರೀಷ್ಮಋತುವಿನಲ್ಲಿ ತನ್ನ ನಾಲ್ಕು ದಿಕ್ಕುಗಳಲ್ಲಿಯೂ ಅಗ್ನಿಯನ್ನು ಇಟ್ಟುಕೊಂಡು, ಆಕಾಶದಲ್ಲಿ ಸೂರ್ಯನನ್ನು ನೋಡುತ್ತಲೂ, ಮಳೆಗಾಲದಲ್ಲಿ ಅಂಗಳದಲ್ಲಿ ಮೇಘವನ್ನು ನೋಡುತ್ತಲೂ, ಹಿಮಗಾಲದಲ್ಲಿ ಒದ್ದೆಬಟ್ಟೆಯನ್ನುಟ್ಟುಕೊಂಡೂ, ಕ್ರಮವಾಗಿ ತಪಸ್ಸನ್ನು ಹೆಚ್ಚಿಸುತ್ತಿರಬೇಕು. ॥೧೦॥

ಮೂರು ಕಾಲಗಳಲ್ಲಿಯೂ ಸ್ನಾನಮಾಡಿ ಪಿತೃದೇವತೆಗಳಿಗೆ ತರ್ಪಣವನ್ನು ಕೊಡಬೇಕು. ಒಂದು ವರ್ಷ ಪರ್ಯಂತ, ವಾಯುವನ್ನು ಆಹಾರಮಾಡಿಕೊಂಡು ಒಂದೇ ಕಾಲಿನಿಂದ ನಿಂತು ತಪಸ್ಸನ್ನು ಮಾಡಬೇಕು. ಅಥವಾ ಶುಕ್ಲಪಕ್ಷದಲ್ಲಿ ಹಾಲು ಅಥವಾ ನೀರನ್ನೂ, ಕೃಷ್ಣಪಕ್ಷದಲ್ಲಿ ಗೋಮಯವನ್ನೂ ಅಥವಾ ಒಣಗಿದ ಎಲೆಗಳನ್ನೂ ಆಹಾರಮಾಡಿಕೊಂಡಿರಬೇಕು. ಅಥವಾ ಹಿಂದೆ ಹೇಳಿದಂತೆ ಕೃಚ್ಛ್ರವೆಂಬ ವ್ರತವನ್ನು ಮಾಡಿಕೊಂಡು ತಪಸ್ಸುಮಾಡಬೇಕು. ॥೧೧-೧೨॥

ಯೋಗಾಭ್ಯಾಸಪರೋ ಭೂತ್ವಾ ಧ್ಯಾಯೇತ್ಪಶುಪತಿಂ ಶಿವಂ ।
ಕೃಷ್ಣಾಜಿನೀ ಸೋತ್ತರೀಯಃ ಶುಕ್ಲಯಜ್ಞೋಪವೀತವಾನ್ ॥೧೩॥

ಅಥವಾಽಗ್ನೀನ್ಸಮಾರೋಪ್ಯ ಸ್ವಾತ್ಮನಿ ಧ್ಯಾನತತ್ಪರಃ ।
ಅನಗ್ನಿರನಿಕೇತಃ ಸ್ಯಾನ್ಮುನಿರ್ಮೋಕ್ಷಪರೋ ಭವೇತ್ ॥೧೪॥

ಸದೋಪನಿಷದಭ್ಯಾಸಪರೋ ವಾ ಸ್ಯಾತ್ಸಮಾಹಿತಃ ।
ತ್ರಿಪುಂಡ್ರೋದ್ಧೂಲನಂ ಕುರ್ಯಾದ್ಗೃಹಸ್ಥಸ್ಯೋಕ್ತಮಂತ್ರತಃ॥೧೫॥

ಯದಾ ವೈರಾಗ್ಯಮುತ್ಪನ್ನಂ ತದೈವ ಪ್ರವ್ರಜೇದ್ವನೀ ।
ಬಹೂದಕೇ ವಾ ಹಂಸೇ ವಾ ಮುಮುಕ್ಷುಃ ಪರಹಂಸಕೇ ॥೧೬॥

ಕೃಷ್ಣಾಜಿನವನ್ನೂ, ವಸ್ತ್ರವನ್ನೂ, ಯಜ್ಞೋಪವೀತವನ್ನೂ ಧರಿಸಿ ಯೋಗಾಭ್ಯಾಸವನ್ನು ಮಾಡುತ್ತ, ಸಮಸ್ತ ಜೀವರುಗಳಿಗೂ ಒಡೆಯನಾದ ಶಿವನನ್ನು ಧ್ಯಾನಮಾಡಬೇಕು. ||೧೪||

ಅಥವಾ ಅಗ್ನಿಯನ್ನು ಆತ್ಮಸಮಾರೋಪಣೆಮಾಡಿಕೊಂಡು, ಔಪಾಸನಾದಿ ಕರ್ಮಗಳನ್ನೂ, ಮನೆಯನ್ನೂ ಬಿಟ್ಟು ಮೋಕ್ಷಾಸಕ್ತನಾಗಿ, ಅಧ್ಯಾತ್ಮನಿಷ್ಠನಾಗಿ, ಸನ್ಯಾಸಾಶ್ರಮವನ್ನು ಪಡೆಯಬಹುದು. ||೧೪||

ಗೃಹಸ್ಥಧರ್ಮದಲ್ಲಿ ಹೇಳಿದಂತೆ, ತ್ರಿಯಂಬಕಮಂತ್ರದಿಂದಲೂ ಓಂಕಾರ ಸಹಿತವಾದ ಪಂಚಾಕ್ಷರೀಮಂತ್ರದಿಂದಲೂ, ಭಸ್ಮತ್ರಿಪುಂಡ್ರವನ್ನು ಧರಿಸಿ, ಯಾವಾಗಲೂ ಏಕಾಗ್ರಚಿತ್ತದಿಂದ ಉಪನಿಷತ್ತುಗಳ ಅಭ್ಯಾಸವನ್ನು ಮಾಡುತ್ತಿರಬೇಕು. ||೧೫||

ವಾನಪ್ರಸ್ಥಾಶ್ರಮದಲ್ಲಿರುವ ಮನುಜನಿಗೆ ಯಾವಾಗ ವೈರಾಗ್ಯ ಉಂಟಾಗುವುದೋ, ಆಗಲೇ ಅವನು ಸನ್ಯಾಸಾಶ್ರಮವನ್ನು ಪಡೆಯಬಹುದು. ಆ ಸನ್ಯಾಸಾಶ್ರಮವು ಅನುಷ್ಠಾನಮಾಡುವವನ ಸಾಮರ್ಥ್ಯಾನುಸಾರವಾಗಿ ಬಹೂದಕ, ಹಂಸ, ಪರಮಹಂಸಸನ್ಯಾಸಗಳಲ್ಲಿ ಯಾವುದಾದರೂ ಆಗಿರಬಹುದು. ಇವುಗಳ ಲಕ್ಷಣಗಳನ್ನು ಮುಂದಿನ ಅಧ್ಯಾಯದಲ್ಲಿ ಹೇಳಲಾಗುವುದು. ||೧೬||

ಸರ್ವಂ ಸಂಗ್ರಹರೂಪೇಣ ಸಮ್ಯಗುಕ್ತಂ ಬೃಹಸ್ಪತೇ ।
ತಸ್ಮಾತ್ಸರ್ವಪ್ರಯತ್ನೇನ ಶ್ರದ್ಧಯಾ ವಿದ್ಧಿ ಸುವ್ರತ ॥೧೭॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಜ್ಞಾನಯೋಗಖಂಡೇ ವಾನಪ್ರಸ್ಥಾಶ್ರಮವಿಧಿನಿರೂಪಣಂ ನಾಮ ಪಂಚಮೋಽಧ್ಯಾಯಃ

ಎಲೈ ಬೃಹಸ್ಪತಿಯೇ, ವಾನಪ್ರಸ್ಥಾಶ್ರಮಧರ್ಮವನ್ನೆಲ್ಲವನ್ನೂ ಸಂಗ್ರಹಿಸಿ ಚನ್ನಾಗಿ ಹೇಳಿರುವೆನು. ತಪಸ್ವಿಯಾದ ನೀನು ಆಸಕ್ತಿಯಿಂದ ಇದನ್ನು ತಿಳಿದು ಸರ್ವ ಪ್ರಯತ್ನದಿಂದಲೂ ಆಚರಿಸಿ ಲೋಕದವರೆಲ್ಲರೂ ಆಚರಿಸುವಂತೆ ಮಾಡು. ॥೧೭॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ವಾನಪ್ರಸ್ಥಾಶ್ರಮದ ಧರ್ಮವನ್ನು ವಿವರಿಸಿರುವ
ಐದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಜ್ಞಾನಯೋಗಖಂಡಂ

|| ಷಷ್ಠೋಽಧ್ಯಾಯಃ ||

ಆರನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಸನ್ಯಾಸಂ ಮುನಿಸತ್ತಮ ।
ಚತುರ್ವಿಧಾಸ್ತು ವಿಜ್ಞೇಯಾ ಭಿಕ್ಷವೋ ವೃತ್ತಿಭೇದತಃ ॥೧॥

ಕುಟೀಚಕೋ ಮುನಿಶ್ರೇಷ್ಠಸ್ತಥೈವ ಚ ಬಹೂದಕಃ ।
ಹಂಸಃ ಪರಮಹಂಸಶ್ಚ ತೇಷಾಂ ವೃತ್ತಿಂ ವದಾಮಿ ತೇ ॥೨॥

ಕುಟೀಚಕಶ್ಚ ಸನ್ಯಸ್ಯ ಸ್ವೇ ಸ್ವೇ ವೇಶ್ಮನಿ ನಿತ್ಯಶಃ ।
ಭಿಕ್ಷಾಮಾದಾಯ ಭುಂಜೀತ ಸ್ವಬಂಧೂನಾಂ ಗೃಹೇಽಥವಾ ॥೩॥

ಈಶ್ವರನು ಹೇಳಿದನು—ಎಲೈ ಮುನಿಶ್ರೇಷ್ಠನಾದ ಬೃಹಸ್ಪತಿಯೇ, ಇಲ್ಲಿಂದ ಮುಂದೆ ಸನ್ಯಾಸಾಶ್ರಮಧರ್ಮವನ್ನು ಹೇಳುವೆನು. ಸನ್ಯಾಸಾಶ್ರಮದಲ್ಲಿ ಆಚಾರ ಭೇದದಿಂದ ಕುಟೀಚಕ, ಬಹೂದಕ, ಹಂಸ, ಪರಮಹಂಸವೆಂಬ ನಾಲ್ಕು ಭೇದವಿರುವುದು. ಆ ಆಶ್ರಮಿಗಳು ಮಾಡಬೇಕಾದ ಧರ್ಮಗಳನ್ನು ನಿನಗೆ ಹೇಳುವೆನು.||೧-೨||

ಕುಟೀಚಕ ಸನ್ಯಾಸಿಯು ಶಿಖಾಯಜ್ಞೋಪವೀತಗಳನ್ನು ಧರಿಸಿ, ತ್ರಿದಂಡವನ್ನೂ ಕಮಂಡಲುವೆಂಬ ನೀರಿನ ಪಾತ್ರೆಯನ್ನೂ ಹಿಡಿದು, ಪವಿತ್ರಪಾಣಿಯಾಗಿ ಕಾಷಾಯವಸ್ತ್ರವನ್ನುಟ್ಟು, ಮೈಗೆಲ್ಲಕ್ಕೂ ಭಸ್ಮೋದ್ಧೂಳನವನ್ನು ಮಾಡಿಕೊಂಡು,

ಶಿಖೀ ಯಜ್ಞೋಪವೀತೀ ಸ್ಯಾತ್ತ್ರಿದಂಡೀ ಸಕಮಂಡಲುಃ ।
ಸಪವಿತ್ರಶ್ಚ ಕಾಷಾಯೋ ಗಾಯತ್ರೀಂ ಚ ಜಪೇತ್ಸದಾ ॥೪॥

ಸರ್ವಾಂಗೋದ್ಧೂಲನಂ ಕುರ್ಯಾತ್ತ್ರಿಪುಂಡ್ರಂ ಚ ತ್ರಿಸಂಧಿಷು ।
ಶಿವಲಿಂಗಾರ್ಚನಂ ಕುರ್ಯಾಚ್ಛ್ರದ್ಧಯೈವ ದಿನೇ ದಿನೇ ॥೫॥

ಬಹೂದಕಶ್ಚ ಸನ್ನ್ಯಸ್ಯ ಬಂಧುಪುತ್ರಾದಿವರ್ಜಿತಃ ।
ಸಪ್ತಾಗಾರಂ ಚರೇದ್ಭೈಕ್ಷ್ಯಮೇಕಾನ್ನಂ ಪರಿವರ್ಜಯೇತ್ ॥೬॥

ಗೋವಾಲರಜ್ಜುಸಂಬದ್ಧಂ ತ್ರಿದಂಡಂ ಶಿಕ್ಯಮುದ್ಧೃತಂ ।
ಪಾತ್ರಂ ಜಲಪವಿತ್ರಂ ಚ ಕೌಪೀನಂ ಚ ಕಮಂಡಲುಂ ॥೭॥

ಆಚ್ಛಾದನಂ ತಥಾ ಕಂಥಾಂ ಪಾದುಕಾಂ ಛತ್ರಮುದ್ಧೃತಂ ।
ಪವಿತ್ರಮಜಿನಂ ಸೂಚೀಂ ಪಕ್ಷಿಣೀಮಕ್ಷಸೂತ್ರಕಂ ॥೮॥

ಯೋಗಪಟ್ಟಂ ಬಹಿರ್ವಸ್ತ್ರಂ ಮೃತ್ಖನಿತ್ರೀಂ ಕೃಪಾಣಿಕಾಂ ।
ಸರ್ವಾಂಗೋದ್ಧೂಲನಂ ತದ್ವತ್ತ್ರಿಪುಂಡ್ರಂ ಚೈವ ಧಾರಯೇತ್ ॥೯॥

ತ್ರಿಪುಂಡ್ರವನ್ನು ಧರಿಸಿ, ಪ್ರತಿದಿನವೂ ಗಾಯತ್ರೀಜಪವನ್ನೂ, ಭಕ್ತಿಯಿಂದ ಶಿವಲಿಂಗಾರ್ಚನೆಯನ್ನೂ ಮಾಡುತ್ತಿರಬೇಕು. ತಮ್ಮ ತಮ್ಮ ಮನೆಯಲ್ಲಿಯೋ, ಬಂಧುಗಳ ಮನೆಯಲ್ಲಿಯೋ, ಭಿಕ್ಷಾನ್ನವನ್ನು ತಂದು ಭೋಜನಮಾಡಬೇಕು. ಅಥವಾ ಅವರ ಮನೆಯಲ್ಲಿಯೇ ಭೋಜನವನ್ನು ಮಾಡಬಹುದು. ||೩-೪-೫||

ಬಹೂದಕಸನ್ಯಾಸಿಯು ನೆಂಟರನ್ನೂ ಮಕ್ಕಳನ್ನೂ ಬಿಡಬೇಕು. ಏಳು ಮನೆಗಳಿಗೆ ಮಾತ್ರ ಹೋಗಿ ಭಿಕ್ಷಾನ್ನವನ್ನು ತಂದು ಭೋಜನ ಮಾಡಬೇಕು. ಒಂದೇ ಮನೆಯ ಭೋಜನವನ್ನು ಬಿಡಬೇಕು. ಗೋವಿನ ಬಾಲದ ಕೂದಲಿನಿಂದ ಹುರಿಯನ್ನು ಹೊಸೆದು, ಆ ಹುರಿಯನ್ನು ಕಟ್ಟಿದ ತ್ರಿದಂಡವನ್ನೂ, ನೆಲುವನ್ನೂ, ಪಾತ್ರೆಯನ್ನೂ, ನೀರನ್ನು ಶೋಧಿಸುವ ಬಟ್ಟೆ, ಕೌಪೀನ, ಕಮಂಡಲು, ಹೊದಿಯುವ ವಸ್ತ್ರಗಳು, ತನ್ನ ವಸ್ತ್ರಾದಿಗಳನ್ನಿಟ್ಟಿರುವ ಚೀಲ, ಪಾದುಕೆ, ಛತ್ರಿ, ಕೃಷ್ಣಾಜಿನ, ಸೂಜಿ, ಜಪಮಾಲೆ, ಯೋಗಪಟ್ಟು, ಬಹಿರ್ವಾಸ, ಮಣ್ಣನ್ನಗೆಯುವ ಗುದ್ದಲಿ, ಹರಿತವಾದ ಕತ್ತಿಯಂತಿರುವ ಆಯುಧದಿಂದ ಕೂಡಿದ ದಂಡ ಇವುಗಳನ್ನು ಧರಿಸಬೇಕು. ಶಿಖಾಯಜ್ಞೋಪವೀತಗಳನ್ನು ಧರಿಸಿ, ಭಸ್ಮೋದ್ಧೂಲನ, ತ್ರಿಪುಂಡ್ರ

ಶಿಖೀ ಯಜ್ಞೋಪವೀತೀ ಚ ದೇವತಾರಾಧನೇ ರತಃ ।
ಸ್ವಾಧ್ಯಾಯೀ ಸರ್ವದಾ ವಾಚಮುತ್ಸೃಜೇತ್ಸ್ನಾನತತ್ಪರಃ ॥೧೦॥

ಸಂಧ್ಯಾಕಾಲೇಷು ಗಾಯತ್ರೀಂ ಜಪನ್ಕುರ್ಯಾತ್ ಸಮಾಚರೇತ್ ।
ಹಂಸಃ ಕಮಂಡಲುಂ ಶಿಕ್ಯಂ ಭಿಕ್ಷಾಪಾತ್ರಂ ತಥೈವ ಚ ॥೧೧॥

ಕಂಥಾಂ ಕೌಪೀನಮಾಚ್ಛಾದ್ಯಮಂಗವಸ್ತ್ರಂ ಬಹಿಃ ಪಟಂ ।
ಏಕಂ ತು ವೈಣವಂ ದಂಡಂ ಧಾರಯೇನ್ನಿತ್ಯಮಾದರಾತ್ ॥೧೨॥

ತ್ರಿಪುಂಡ್ರೋದ್ಧೂಲನಂ ಕುರ್ಯಾಚ್ಛಿವಲಿಂಗಂ ಸಮರ್ಚಯೇತ್ ।
ಅಷ್ಟಗ್ರಾಸಂ ಸಕೃನ್ನಿತ್ಯಮಶ್ನೀಯಾತ್ಸಶಿಖಂ ಭವೇತ್ ॥೧೩॥

ಸಂಧ್ಯಾಕಾಲೇಷು ಸಾವಿತ್ರೀಜಪಮಧ್ಯಾತ್ಮಚಿಂತನಂ ।
ತೀರ್ಥಸೇವಾಂ ತಥಾ ಕೃಚ್ಛ್ರಂ ತಥಾ ಚಾಂದ್ರಾಯಣಾದಿಕಂ ॥೧೪॥

ಕುರ್ವನ್ಗ್ರಾಮೈಕರಾತ್ರೇಣ ನ್ಯಾಯೇನೈವ ಸಮಾಚರೇತ್ ।
ಪರಹಂಸಸ್ತ್ರಿದಂಡಂ ಚ ರಜ್ಜುಂ ಗೋವಾಲನಿರ್ಮಿತಂ ॥೧೫॥

ಗಳನ್ನೂ ಧರಿಸಿ, ತ್ರಿಸಂಧ್ಯೆಗಳಲ್ಲಿ ಸಂಧ್ಯಾವಂದನೆಯನ್ನು ಮಾಡಿ, ಗಾಯತ್ರೀಜಪವನ್ನೂ, ದೇವತಾರಾಧನೆಯನ್ನೂ, ಮಾಡಬೇಕು. ಮೌನವ್ರತವನ್ನು ಮಾಡಿ, ಯಾವಾಗಲೂ ವೇದಾಧ್ಯಯನವನ್ನು ಮಾಡುತ್ತಿರಬೇಕು. ॥೬-೭-೮-೯॥

ಹಂಸನೆಂಬ ಸನ್ಯಾಸಿಯು ಕಮಂಡಲು, ನೆಲುವು, ಭಿಕ್ಷಾಪಾತ್ರೆ, ತನ್ನ ಪದಾರ್ಥಗಳನ್ನಿಟ್ಟುಕೊಳ್ಳುವ ಚೀಲ, ಕೌಪೀನ, ಕಾಷಾಯವಸ್ತ್ರಗಳು, ಸಣ್ಣವಸ್ತ್ರಗಳು, ಬಹಿರ್ವಾಸ, ಬಿದಿರಿನ ಒಂದು ದಂಡ, ಇವುಗಳನ್ನು ಯಾವಾಗಲೂ ಧರಿಸಿರಬೇಕು. ಭಸ್ಮೋದ್ಧೂಲನ, ತ್ರಿಪುಂಡ್ರಗಳನ್ನು ಧರಿಸಿ, ಶಿವಲಿಂಗಾರ್ಚನೆಯನ್ನು ಮಾಡಬೇಕು. ಪ್ರತಿದಿನವೂ ಎಂಟು ಗ್ರಾಸ ಆಹಾರವನ್ನು ತೆಗೆದುಕೊಳ್ಳಬೇಕು. ಸಂಧ್ಯಾಕಾಲಗಳಲ್ಲಿ ಗಾಯತ್ರೀಜಪವನ್ನೂ, ಅಧ್ಯಾತ್ಮಚಿಂತನೆಯನ್ನೂ ಮಾಡುತ್ತ, ತೀರ್ಥಯಾತ್ರಾಸಕ್ತನಾಗಿ, ಕೃಚ್ಛ್ರಚಾಂದ್ರಾಯಣವ್ರತಗಳನ್ನು ಮಾಡುತ್ತ, ಗ್ರಾಮೈಕರಾತ್ರಿಯಂತೆ ಸಂಚರಿಸುತ್ತಿರಬೇಕು. ॥೧೧-೧೨-೧೩-೧೪॥

ಪರಮಹಂಸ ಸನ್ಯಾಸಿಯು ತ್ರಿದಂಡವನ್ನೂ, ಹಸುವಿನ ಬಾಲದ ಕೂದಲಿನಿಂದ ಮಾಡಿದ ಹಗ್ಗವನ್ನೂ, ನೆಲುವನ್ನೂ, ನೀರನ್ನು ಶೋಧಿಸುವ ಬಟ್ಟೆಯನ್ನೂ,

ಶಿಕ್ಯಂ ಜಲಪವಿತ್ರಂ ಚ ಪವಿತ್ರಂ ಚ ಕಮಂಡಲುಂ ।
ಪಕ್ಷಿಣೀ(ಣಾ)ಮಜಿನಂ ಸೂಚೀಂ ಮೃತ್ಖನಿತ್ರೀಂ ಕೃಪಾಣಿಕಾಂ ॥೧೬॥

ಶಿಖಾಂ ಯಜ್ಞೋಪವೀತಂ ಚ ನಿತ್ಯಕರ್ಮ ಪರಿತ್ಯಜೇತ್ ।
ಕೌಪೀನಾಚ್ಛಾದನಂ ವಸ್ತ್ರಂ ಕಂಥಾಂ ಶೀತನಿವಾರಿಕಾಂ ॥೧೭॥

ಯೋಗಪಟ್ಟಂ ಬಹಿರ್ವಸ್ತ್ರಂ ಪಾದುಕಾಂ ಛತ್ರಮದ್ಭುತಂ ।
ಅಕ್ಷಮಾಲಾಂ ಚ ಗೃಹ್ಣೀಯಾದ್ವೈಣವಂ ದಂಡಮದ್ಭುತಂ ॥೧೮॥

ಅಗ್ನಿರಿತ್ಯಾದಿಭಿರ್ಮಂತ್ರೈಃ ಕುರ್ಯಾದುದ್ಧೂಲನಂ ಮುದಾ ।
ಓಮೋಮಿತಿ ಚ ತ್ರಿಃ ಪ್ರೋಕ್ಷ್ಯ ಪರಹಂಸಸ್ತ್ರಿಪುಂಡ್ರಕಂ ॥೧೯॥

ಮೃತ್ಪಾತ್ರಂ ಕಾಂಸ್ಯಪಾತ್ರಂ ವಾ ದಾರುಪಾತ್ರಂ ಚ ವೈಣವಂ ।
ಪಾಣಿಪಾತ್ರಂ ಚ ಗೃಹ್ಣೀಯಾದಾಚಮ್ಯೈವ ತ(ಯ)ಥೋದಕಂ॥೨೦॥

ಬಹೂದಕಾನಾಂ ಹಂಸಾನಾಂ ಪಾಣಿಪಾತ್ರಂ ತಥೋದರಂ ।
ಕಾಂಸ್ಯಪಾತ್ರಂ ನ ವಿಧ್ಯುಕ್ತಂ ಮೃತ್ಪಾತ್ರಮಿತಿ ಹಿ ಶ್ರುತಿಃ ॥೨೧॥

ಪವಿತ್ರವನ್ನೂ, ಕಮಂಡಲುವನ್ನೂ, ಕೃಷ್ಣಾಜಿನ, ಸೂಜಿ, ಮಣ್ಣನ್ನಗೆಯುವ ಗುದ್ದಲಿ, ಸಣ್ಣ ಕತ್ತಿ, ಶಿಖಾಯಜ್ಞೋಪವೀತಗಳು, ನಿತ್ಯಕರ್ಮ, ಇವುಗಳನ್ನೆಲ್ಲವನ್ನೂ ಬಿಡಬೇಕು. ಕೌಪೀನ, ಹೊದೆಯುವ ವಸ್ತ್ರಗಳು, ಶೀತನಿವಾರಣೆಗಾಗಿ ಹಳೆಯ ಬಟ್ಟೆಗಳನ್ನು ಸೇರಿಸಿದ ಕಂತೆ, ಯೋಗಪಟ್ಟ, ಬಹಿರ್ವಾಸ, ಪಾದುಕೆ, ಛತ್ರಿ, ಜಪಸರ, ಬಿದಿರಿನ ಕೋಲು ಇವುಗಳನ್ನು ಧರಿಸಬೇಕು. ॥೧೫-೧೬-೧೭-೧೮॥

"ಅಗ್ನಿರಿತಿ ಭಸ್ಮ" ಇತ್ಯಾದಿ ಮಂತ್ರಗಳಿಂದ, ಸಂತೋಷದಿಂದ ಭಸ್ಮೋದ್ಧೂಲನವನ್ನು ಮಾಡಿಕೊಂಡು, ಓಂಕಾರವನ್ನು ಮೂರಾವೃತ್ತಿ ಉಚ್ಚರಿಸಿ, ಭಸ್ಮವನ್ನು ಪ್ರೋಕ್ಷಿಸಿ, ಅಜಪಾಸಹಿತವಾದ ಪ್ರಣವಮಂತ್ರವನ್ನು ಮೂರಾವೃತ್ತಿ ಉಚ್ಚರಿಸಿ, ತ್ರಿಪುಂಡ್ರಧಾರಣೆಯನ್ನು ಮಾಡಿಕೊಳ್ಳಬೇಕು. ॥೧೯॥

ಮಣ್ಣು, ಕಂಚು, ಮರ, ಬಿದಿರು ಇವುಗಳಿಂದ ಮಾಡಿದ ಪಾತ್ರೆಗಳನ್ನು ಪರಮಹಂಸನೇ ಮೊದಲಾದ ಸನ್ಯಾಸಿಗಳು ಉಪಯೋಗಿಸಬೇಕು. ಅಥವಾ ಕೈಯನ್ನೇ ಪಾತ್ರೆಯನ್ನಾಗಿ ಉಪಯೋಗಿಸಬಹುದು. ಬಹೂದಕರಿಗೂ, ಹಂಸರಿಗೂ,

ಮಾಧೂಕರಂತಥೈವಾನ್ನಂ ಪರಹಂಸಃ ಸಮಾಚರೇತ್ ।
ನಾತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾಂತಮನಶ್ನತಃ ॥೨೨॥

ತಸ್ಮಾದ್ಯೋಗಾನುಗುಣ್ಯೇನ ಭುಂಜೀತ ಪರಹಂಸಕಃ ।
ಅಭಿಶಸ್ತಂ ಸಮುತ್ಸೃಜ್ಯ ಸಾರ್ವವರ್ಣಿಕಮಾಚರೇತ್ ॥೨೩॥

ಉತ್ತರೋತ್ತರಲಾಭೇ ತು ಪೂರ್ವಂ ಪೂರ್ವಂ ಪರಿತ್ಯಜೇತ್ ।
ಗುರುಶುಶ್ರೂಷಯಾ ನಿತ್ಯಮಾತ್ಮಜ್ಞಾನಂ ಸಮಭ್ಯಸೇತ್ ॥೨೪॥

ಸ್ನಾನಂ ಶೌಚಮಭಿಧ್ಯಾನಂ ಸತ್ಯಾನೃತವಿವರ್ಜನಂ ।
ಕಾಮಕ್ರೋಧಪರಿತ್ಯಾಗಂ ಹರ್ಷರೋಷವಿವರ್ಜನಂ ॥೨೫॥

ಕಂಚಿನ ಪಾತ್ರೆಯೂ, ಮಣ್ಣಿನ ಪಾತ್ರೆಯೂ ಕೂಡದೆಂದು ಆರುಣಿಶ್ರುತಿಯಲ್ಲಿ ಹೇಳಿರುವುದು. ॥೨೦-೨೧॥

ಪರಮಹಂಸಸನ್ಯಾಸಿಯು ಜೋಳಿಗೆಯನ್ನು ತೆಗೆದುಕೊಂಡು ಭಿಕ್ಷಾನ್ನವನ್ನು ತಂದಾದರೂ, ಭಿಕ್ಷಕ್ಕೆ ಕರೆದವರ ಮನೆಯಲ್ಲಿಯಾದರೂ, ಊಟಮಾಡಬಹುದು. ಹೆಚ್ಚಾಗಿ ಊಟಮಾಡುವವನಿಗೂ, ಊಟವೇ ಇಲ್ಲದವನಿಗೂ, ಯೋಗಾಭ್ಯಾಸ ಮಾಡುವುದಕ್ಕಾಗುವುದಿಲ್ಲವಾದುದರಿಂದ, ಯೋಗಾಭ್ಯಾಸಕ್ಕೆ ತಕ್ಕಷ್ಟು ಭೋಜನ ವನ್ನು ಮಾಡಬೇಕು. ॥೨೨॥

ನಿಂದ್ಯವಾದುದನ್ನು ಬಿಟ್ಟು, ಸಕಲವರ್ಣಗಳಲ್ಲಿಯೂ, ಭಿಕ್ಷವನ್ನು ಮಾಡ ಬಹುದು. ಆದರೆ ಉತ್ತಮವರ್ಣದವರಿಂದ, ಭಿಕ್ಷವು ಸಿಕ್ಕುತ್ತಿರುವಾಗ, ಕಡಿಮೆ ವರ್ಣದವರನ್ನು ಬಿಟ್ಟುಬಿಡಬೇಕು. ಯಾವಾಗಲೂ, ಗುರುಸೇವೆಯನ್ನು ಮಾಡುತ್ತ, ಆತ್ಮಜ್ಞಾನಾಭ್ಯಾಸವನ್ನು ಮಾಡುತ್ತಿರಬೇಕು. ॥೨೩-೨೪॥

ತಮೇವೈಕಂ ಜಾನಥ ಆತ್ಮಾನಂ ಅನ್ಯಾವಾಚೋ ವಿಮುಂಚಥ । ಮುಂ. ಉ. ೨.೨.೫. ಎಂದು ವೇದವು ಹೇಳುವುದರಿಂದ, ಚಿತ್ತೈಕಾಗ್ರ್ಯಕ್ಕೆ ವಿರೋಧವಾದುದ ರಿಂದ, ಸನ್ಯಾಸಿಯು ಸತ್ಯವನ್ನೂ, ಅನೃತವನ್ನೂ, ಮಾತನಾಡಬಾರದು. ಕಾಮ, ಕ್ರೋಧ, ಸಂತೋಷ, ದುಃಖ ಇವುಗಳನ್ನು ಬಿಡಬೇಕು. ಸ್ನಾನವನ್ನೂ, ಶೌಚವನ್ನೂ, ಧ್ಯಾನವನ್ನೂ, ಮಾಡುತ್ತಿರಬೇಕು. ॥೨೫॥

ಲೋಭಮೋಹಪರಿತ್ಯಾಗಂ ದಂಭದರ್ಪಾದಿವರ್ಜನಂ ।
ಚಾತುರ್ಮಾಸ್ಯಂ ಚ ಸರ್ವೇಷಾಂ ವದಂತಿ ಬ್ರಹ್ಮವಾದಿನಃ ॥೨೬॥

ಕುಟೀಚಕಾಶ್ಚ ಹಂಸಾಶ್ಚ ತಥೈವ ಚ ಬಹೂದಕಾಃ ।
ಸಾವಿತ್ರೀ ಮಾತ್ರಸಂಪನ್ನಾ ಭವೇಯುರ್ಮೋಕ್ಷಕಾರಣಾತ್ ॥೨೭॥

ಪ್ರಣವಾದ್ಯಾಸ್ತ್ರಯೋ ವೇದಾಃ ಪ್ರಣವೇ ಪರ್ಯವಸ್ಥಿತಾಃ ।
ತಸ್ಮಾತ್ಪ್ರಣವಮೇವೈಕಂ ಪರಹಂಸಃ ಸದಾ ಜಪೇತ್ ॥೨೮॥

ಸಂಧ್ಯಾಕಾಲೇಷು ಶುದ್ಧಾತ್ಮಾ ಪ್ರಣವೇನ ಸಮಾಹಿತಃ ।
ಷಟ್ಪ್ರಾಣಾಯಾಮಕಂ ಕುರ್ಯಾಜ್ಜಪೇದಷ್ಟೋತ್ತರಂ ಶತಂ ॥೨೯॥

ವಿವಿಕ್ತದೇಶಮಾಶ್ರಿತ್ಯ ಸುಖಾಸೀನಃ ಸಮಾಹಿತಃ ।
ಯಥಾಶಕ್ತಿ ಸಮಾಧಿಸ್ಥೋ ಭವೇತ್ಸನ್ಯಾಸಿನಾಂ ವರಃ ॥೩೦॥

ಲೋಭ, ಮೋಹ, ದಂಭ, ದರ್ಪ ಇವುಗಳನ್ನು ಬಿಟ್ಟು, ನಾಲ್ಕುವಿಧವಾದ ಯತ್ಯಾಶ್ರಮಿಗಳೂ, ಮಳೆಗಾಲದ ನಾಲ್ಕು ತಿಂಗಳಲ್ಲಿ ಒಂದೇ ಕಡೆ ವಾಸಮಾಡಬೇಕೆಂದು ಬ್ರಹ್ಮಜ್ಞಾನಿಗಳು ಹೇಳುವರು. ||೨೬||

ಪರಮಹಂಸನನ್ನು ಬಿಟ್ಟು, ಮಿಕ್ಕ ಮೂರು ಬಗೆಯ ಸನ್ಯಾಸಿಗಳು ಮೋಕ್ಷಪ್ರಾಪ್ತಿಗಾಗಿ, ಗಾಯತ್ರೀಜಪವನ್ನು ಮಾಡುತ್ತ, ತತ್ವಾನುಸಂಧಾನವನ್ನು ಮಾಡಬೇಕು. ||೨೭||

ಆದ್ಯಂತಗಳಲ್ಲಿ ಬರುವುದರಿಂದ, ಋಗ್ವೇದಾದಿಮೂರು ವೇದಗಳ ಸಾರವೇ, ಪ್ರಣವ ಮಂತ್ರವಾದುದರಿಂದ, ಪರಮಹಂಸಸನ್ಯಾಸಿಯು ಯಾವಾಗಲೂ, ಪ್ರಣವ ಜಪವನ್ನು ಮಾಡುತ್ತಿರಬೇಕು. ||೨೮||

ಸಂಧ್ಯಾಕಾಲಗಳಲ್ಲಿ ಪರಿಶುದ್ಧನಾಗಿ, ಏಕಾಗ್ರಚಿತ್ತದಿಂದ, ಪ್ರಣವಮಂತ್ರವನ್ನು ಉಚ್ಚರಿಸುತ್ತ, ಆರು ಪ್ರಾಣಾಯಾಮಗಳನ್ನು ಮಾಡಿ ನೂರೆಂಟು ಜಪವನ್ನು ಮಾಡಬೇಕು. ||೨೯||

ಸನ್ಯಾಸಿಶ್ರೇಷ್ಠನು ಜನರಾರೂ ಇಲ್ಲದ ಪ್ರದೇಶವನ್ನಾಶ್ರಯಿಸಿ ಸುಖವಾಗಿ ಕುಳಿತು, ಸಮಾಧಿನಿಷ್ಠನಾಗಿ, ತನ್ನ ಶಕ್ತಿಯನ್ನನುಸರಿಸಿ ಏಕಾಗ್ರಚಿತ್ತನಾಗಿ ಧ್ಯಾನ ಮಾಡಬೇಕು. ||೩೦||

ಕ್ರಮಾದ್ವಾಽಕ್ರಮತೋ ವಿದ್ವಾನುತ್ತಮಾಂ ವೃತ್ತಿಮಾಶ್ರಯೇತ್ ।
ಉತ್ತಮಾಂ ವೃತ್ತಿಮಾಪನ್ನೋ ನ ನೀಚಾಂ ವೃತ್ತಿಮಾಶ್ರಯೇತ್ ॥೩೧॥

ಉತ್ತಮಾಂ ವೃತ್ತಿಮಾಶ್ರಿತ್ಯ ನೀಚಾಂ ವೃತ್ತಿಂ ಸಮಾಶ್ರಿತಃ ।
ಆರೂಢಪತಿತೋ ಜ್ಞೇಯಃ ಸರ್ವಧರ್ಮಬಹಿಷ್ಕೃತಃ ॥೩೨॥

ಪ್ರವ್ರಜಂತಂ ದ್ವಿಜಂ ದೃಷ್ಟ್ವಾ ಸ್ಥಾನಾಚ್ಚಲತಿ ಭಾಸ್ಕರಃ ।
ಏಷ ಮೇ ಮಂಡಲಂ ಭಿತ್ವಾ ಬ್ರಹ್ಮಲೋಕಂ ಗಮಿಷ್ಯತಿ ॥೩೩॥

ರೂಪಂ ತು ದ್ವಿವಿಧಂ ಪ್ರೋಕ್ತಂ ಚರಂ ಚಾಽಚರಮೇವ ಚ ।
ಚರಂ ಸನ್ಯಾಸಿನಾಂ ರೂಪಮಚರಂ ಮೃನ್ಮಯಾದಿಕಂ ॥೩೪॥

ಯಸ್ಯಾಶ್ರಮೇ ಯತಿರ್ನಿತ್ಯಂ ವರ್ತತೇ ಮುನಿಸತ್ತಮ ।
ನ ತಸ್ಯ ದುರ್ಲಭಂ ಕಿಂಚಿತ್ತ್ರಿಷು ಲೋಕೇಷು ವಿದ್ಯತೇ ॥೩೫॥

ಕ್ರಮವಾಗಿ ಬ್ರಹ್ಮಚರ್ಯ, ಗೃಹಸ್ಥ ವಾನಪ್ರಸ್ಥರೂಪವಾದ, ಆಶ್ರಮಗಳಿಂದ ಲಾಗಲಿ "ಬ್ರಹ್ಮಚರ್ಯಾದೇವ ಪ್ರವ್ರಜೇದ್ಗೃಹಾದ್ವಾ ವನಾದ್ವಾ" ಎಂದು ಹೇಳಿರುವಂತೆ ಕ್ರಮವಿಲ್ಲದೆಯಾಗಲಿ, ಸನ್ಯಾಸಾಶ್ರಮವನ್ನು ಪಡೆಯಬಹುದು. ಆದರೆ ಸನ್ಯಾಸಾಶ್ರಮವನ್ನು ಪಡೆದವನು ಕೆಳಗಿನ ಅಂತಸ್ತಿನವಾದ ಇತರ ಆಶ್ರಮಗಳಿಗೆ ಹೋಗಬಾರದು. ॥೩೧॥

ಉತ್ತಮವಾದ ಸನ್ಯಾಸಾಶ್ರಮವನ್ನು ಪಡೆದಮೇಲೆ ಕಡಿಮೆಯಾದ ಗೃಹಸ್ಥಾದ್ಯಾಶ್ರಮಗಳಿಗೆ ಬಂದರೆ ಅವನನ್ನು ಆರೂಢಪತಿತನೆನ್ನುವರು. ಅವನು ಯಾವ ಕರ್ಮಕ್ಕೂ ಅಧಿಕಾರಿಯಾಗಲಾರನು. ॥೩೨॥

ಸನ್ಯಾಸಿಯಾಗುತ್ತಿರುವ ಬ್ರಾಹ್ಮಣನನ್ನು ಕಂಡು ಸೂರ್ಯನು, "ಈ ಸನ್ಯಾಸಿಯು ನನ್ನ ಮಂಡಲವನ್ನು ಭೇದಿಸಿಕೊಂಡು ಬ್ರಹ್ಮಲೋಕಕ್ಕೆ ಹೋಗುವನು." ಎಂದು ತಿಳಿದು ತನ್ನ ಸ್ಥಳದಿಂದ ಚಲಿಸುವನು. ॥೩೩॥

ಪ್ರಪಂಚದಲ್ಲಿ ಚರ, ಅಚರ ಎಂದು ಎರಡು ರೂಪಗಳು ಮಾತ್ರ ಇರುವುವು. ಅವುಗಳಲ್ಲಿ ಸನ್ಯಾಸಿಯೇ ಚರರೂಪವು. ಮಿಕ್ಕವುಗಳೆಲ್ಲ ಮಣ್ಣಿನಲ್ಲಿ ಮಾಡಿದ ಬೊಂಬೆಗಳಂತೆ ಅಚರರೂಪಗಳು. ॥೩೪॥

ಋಷಿಶ್ರೇಷ್ಠನಾದ ಬೃಹಸ್ಪತಿಯೇ, ಯಾರ ಆಶ್ರಮದಲ್ಲಿ ಯತಿಯು ಯಾವಾ

ದುರ್ವೃತ್ತೋ ವಾ ಸುವೃತ್ತೋ ವಾ ಮೂರ್ಖೋ ವಾ ಪಂಡಿತೋಽಪಿ ವಾ।
ವೇಷಮಾತ್ರೇಣ ಸನ್ಯಾಸೀ ಪೂಜ್ಯಃ ಸರ್ವೇಶ್ವರೋ ಯಥಾ ॥೩೬॥

ಬ್ರಹ್ಮಚರ್ಯಾಶ್ರಮಸ್ಥಾನಾಂ ಬ್ರಹ್ಮಾ ದೇವಃ ಪ್ರಕೀರ್ತಿತಃ ।
ಗೃಹಸ್ಥಾನಾಂ ಚ ಸರ್ವೇ ಸ್ಯುರ್ಯತೀನಾಂ ತು ಮಹೇಶ್ವರಃ ॥೩೭॥

ವಾನಪ್ರಸ್ಥಾಶ್ರಮಸ್ಥಾನಾಮಾದಿತ್ಯೋ ದೇವತಾ ಮತಾ ।
ತಸ್ಮಾತ್ಸರ್ವೇಷು ಕಾಲೇಷು ಪೂಜ್ಯಃ ಸನ್ಯಾಸಿನಾಂ ಹರಃ ॥೩೮॥

ಮೃತೇ ನ ದಹನಂ ಕಾರ್ಯಂ ಪರಹಂಸಸ್ಯ ಸರ್ವದಾ ।
ಕರ್ತವ್ಯಂ ಖನನಂ ತಸ್ಯ ನಾಶೌಚಂ ನೋದಕಕ್ರಿಯಾ ॥೩೯॥

ಅಶ್ವತ್ಥಸ್ಥಾಪನಂ ಕಾರ್ಯಂ ತದ್ದೇಶೇಽಧ್ವರ್ಯುಣಾ ಮುನೇ ।
ಅಶ್ವತ್ಥೇ ಸ್ಥಾಪಿತೇ ತೇನ ಸ್ಥಾಪಿತೋ ಹಿ ಮಹೇಶ್ವರಃ ॥೪೦॥

ಗಲೂ ಇರುವನೋ ಅವನಿಗೆ ಮೂರು ಲೋಕದಲ್ಲಿಯೂ ದೊರೆಯದ ಪದಾರ್ಥ ವಾವುದೂ ಇರುವುದಿಲ್ಲ. ॥೩೫॥

ನಡತೆಯು ಒಳ್ಳೆಯದಾಗಲಿ, ಕೆಟ್ಟದಾಗಲಿ, ಮೂಢನಾಗಲಿ, ಪಂಡಿತನಾಗಲಿ, ವೇಷಮಾತ್ರದಿಂದ ಸನ್ಯಾಸಿಯು ಸರ್ವೇಶ್ವರನಂತೆ ಪೂಜ್ಯನಾಗುವನು. ॥೩೬॥

ಬ್ರಹ್ಮಚಾರಿಗಳಿಗೆ ಬ್ರಹ್ಮನೂ, ಗೃಹಸ್ಥರಿಗೆ ಸಕಲದೇವತೆಗಳೂ, ವಾನಪ್ರಸ್ಥರಿಗೆ ಸೂರ್ಯನೂ, ಸನ್ಯಾಸಿಗಳಿಗೆ ಮಹೇಶ್ವರನೂ, ಈ ದೇವತೆಗಳು ಪೂಜ್ಯರು. ಆದುದರಿಂದ ಎಲ್ಲ ಕಾಲಗಳಲ್ಲಿಯೂ ಸನ್ಯಾಸಿಗಳಿಗೆ ಶಿವನೇ ಪೂಜ್ಯನಾದ ದೇವನು.॥೩೭-೩೮॥

ಪರಮಹಂಸಸನ್ಯಾಸಿಯು ಶರೀರತ್ಯಾಗವನ್ನು ಮಾಡಿದರೆ ಆ ಶರೀರವನ್ನು ಸುಡಬಾರದು. ಭೂಮಿಯಲ್ಲಿ ಹೂಳಬೇಕು. ಮತ್ತು ಆ ಸನ್ಯಾಸಿಯ ಮರಣದಿಂದ ಯಾರಿಗೂ ಆಶೌಚವಿಲ್ಲ. ಮತ್ತು ತರ್ಪಣಾದಿ ಪಿತೃಕರ್ಮಗಳನ್ನೂ ಮಾಡಬೇಕಾಗಿ ಇರುವುದಿಲ್ಲ. ॥೩೯॥

ಸನ್ಯಾಸಿಯ ಶರೀರವನ್ನು ಸಮಾಧಿಮಾಡಿದ ಸ್ಥಳದಲ್ಲಿ ಗೃಹಸ್ಥನು ಅರಳಿ ಮರವನ್ನು ಬೆಳೆಸಿ ಅಶ್ವತ್ಥಸ್ಥಾಪನಕರ್ಮವನ್ನು ಮಾಡಬೇಕು. ಹೀಗೆ ಮಾಡಿದರೆ ಶಿವಲಿಂಗವನ್ನು ಪ್ರತಿಷ್ಠೆಮಾಡಿದಷ್ಟೇ ಪುಣ್ಯಬರುವುದು. ಅಥವಾ ಶಿವಲಿಂಗವನ್ನಾದರೂ ಪ್ರತಿಷ್ಠೆಮಾಡಬಹುದು. ಆ ಅಶ್ವತ್ಥವೃಕ್ಷವನ್ನು ನೋಡುವುದರಿಂದಲೂ, ಮುಟ್ಟುವುದರಿಂದಲೂ ಮನುಷ್ಯರ ಸಮಸ್ತ ಪಾಪಗಳೂ ನಾಶವಾಗುವುವು. ॥೪೦॥

ದರ್ಶನಾತ್ಸ್ಪರ್ಶನಾತ್ತಸ್ಯ ಸರ್ವಂ ನಶ್ಯತಿ ಪಾತಕಂ ।
ಅನ್ಯೇಷಾಮಪಿ ಭಿಕ್ಷೂಣಾಂ ಖನನಂ ಪೂರ್ವಮಾಚರೇತ್ ॥೪೧॥

ಪಶ್ಚಾದ್ಗೃಹೀ ಯಥಾಶಾಸ್ತ್ರಂ ಕುರ್ಯಾದ್ದಹನಮುತ್ತಮಂ ।
ಅಶ್ವಮೇಧಫಲಂ ತಸ್ಯ ಸ್ನಾನಮಾತ್ರಾದ್ವಿಶುದ್ಧತಾ ॥೪೨॥

ಸರ್ವಮುಕ್ತಂ ಸಮಾಸೇನ ತವ ಶಿಷ್ಯಸ್ಯ ಧೀಮತಃ ।
ತಸ್ಮಾದೇತದ್ವಿಜಾನೀಹಿ ವೇದಾಂತಾರ್ಥಪ್ರಕಾಶನಂ ॥೪೩॥

ಇತಿ ಶ್ರೀಸ್ಕಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ
ಸನ್ಯಾಸವಿಧಿನಿರೂಪಣಂ ನಾಮ ಷಷ್ಠೋಽಧ್ಯಾಯಃ

ಪರಮಹಂಸನನ್ನು ಬಿಟ್ಟು ಮಿಕ್ಕ ಸನ್ಯಾಸಿಗಳು ದೇಹತ್ಯಾಗವನ್ನು ಮಾಡಿದರೆ ಆ ದೇಹವನ್ನು ಮೊದಲು ಭೂಮಿಯಲ್ಲಿ ಹೂತು ತರುವಾಯ ದಹನಾದಿಕ್ರಿಯೆಗಳನ್ನು ಶಾಸ್ತ್ರಾನುಸಾರವಾಗಿ ಮಾಡಬೇಕು. ಹೀಗೆ ಮಾಡಿದರೆ ಅಶ್ವಮೇಧಯಾಗವನ್ನು ಮಾಡಿದವರಿಗೆ ಎಷ್ಟು ಫಲವು ಬರುತ್ತದೆಯೋ, ಅಷ್ಟೇ ಫಲವು ಇದಕ್ಕೂ ಬರುವುದು. ಜ್ಞಾತಿಗಳಿಗೆ ಈ ಸನ್ಯಾಸಿಯ ಮರಣದಿಂದ ಉಂಟಾಗುವ ಆಶೌಚವು ಸ್ನಾನಮಾತ್ರದಿಂದ ನಿವೃತ್ತಿಯಾಗಿ ಶುದ್ಧಿಯಾಗುವುದು. ॥೪೧॥

ಬುದ್ಧಿವಂತನಾದ ನಿನಗೆ ಸಮಸ್ತವನ್ನೂ ಸಂಗ್ರಹವಾಗಿ ಹೇಳಿರುವೆನು. ಇಂತಹ ಧರ್ಮಾಚರಣೆಯು ಕ್ರಮವಾಗಿ ವೇದಾಂತದ ಅರ್ಥವನ್ನು ಪ್ರಕಾಶಪಡಿಸುವುದರಿಂದ ಶಿಷ್ಯನಾದ ನೀನು ಚನ್ನಾಗಿ ಇದನ್ನೂ ತಿಳಿಯಬೇಕಾಗಿರುವುದು. ॥೪೩॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ಸನ್ಯಾಸಿಗಳ ಧರ್ಮವನ್ನು ವಿವರಿಸುವ ಆರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಜ್ಞಾನಯೋಗಖಂಡಂ

|| ಸಪ್ತಮೋಽಧ್ಯಾಯಃ ||

ಏಳನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಪ್ರಾಯಶ್ಚಿತ್ತಂ ಸಮಾಹಿತಃ ।
ದೋಷಾಣಾಮುಪನುತ್ತ್ಯರ್ಥಂ ಸರ್ವಭೂತಾನುಕಂಪಯಾ ॥೧॥

ಬ್ರಹ್ಮಹಾ ಮದ್ಯಪಃ ಸ್ತೇನಸ್ತಥೈವ ಗುರುತಲ್ಪಗಃ ।
ಏತೇ ವೇದವಿದಾಂ ಶ್ರೇಷ್ಠಾ ಮಹಾಪಾತಕಿನಃ ಸ್ಮೃತಾಃ ॥೨॥

ಈಶ್ವರನು ಹೇಳಿದನು—ಇದುವರೆಗೆ ನಿತ್ಯವಾದ ಧರ್ಮಗಳನ್ನು ಹೇಳಿ ನೈಮಿತ್ತಿಕಧರ್ಮಗಳನ್ನು ಹೇಳುವುದಕ್ಕಾಗಿ, ಬೇರೆ ಅಧ್ಯಾಯವನ್ನು ಪ್ರಾರಂಭಿಸಿ, ಈಶ್ವರನು ಬೃಹಸ್ಪತಿಯನ್ನು ಕುರಿತು, ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ದಯೆಯಿಂದ ಕೂಡಿ, ವಿಧಿ ನಿಷೇಧರೂಪವಾದ, ನಿತ್ಯಧರ್ಮಗಳನ್ನು ಪ್ರಮಾದದಿಂದ ಅತಿಕ್ರಮಿಸುವುದರಿಂದುಂಟಾಗುವ ಪಾಪಗಳ ನಿವೃತ್ತಿಗಾಗಿ, ಸಂಗ್ರಹವಾಗಿ ಪ್ರಾಯಶ್ಚಿತ್ತಗಳ ಸ್ವರೂಪವನ್ನು ವಿವರಿಸುವೆನು, ಎಂದನು. ||೧||

ಬ್ರಹ್ಮಹತ್ಯ, ಸುರಾಪಾನ, ಕಳ್ಳತನ, ಗುರುಪತ್ನೀಗಮನ, ಇವುಗಳನ್ನು ಮಾಡಿದವರು ಮಹಾಪಾಪಿಗಳು. ಇವರೊಡನೆ ಒಂದು ವರ್ಷವಿದ್ದವರೂ, ಮಹಾಪಾಪಿಗಳಾಗುವರು. ಮಹಾಪಾಪಿಗಳಿಗೆ ಯಜ್ಞವನ್ನು ಮಾಡಿಸಿ, ವೇದವನ್ನು ಹೇಳಿಕೊಟ್ಟು, ಅವರ ನಂಟತನವನ್ನು ಮಾಡಿದವರೂ, ಆಗಲೇ ಆ ಪಾಪಕ್ಕೆ ಭಾಗಿಗಳಾಗುವ

ಏಭಿಃ ಸಹ ವಸೇದ್ಯಸ್ತು ಸಂವತ್ಸರಮುಸಾವಪಿ ।
ಬ್ರಹ್ಮಹಾ ನಿರ್ಜನೇಽರಣ್ಯೇ ಕುಟೀಂ ಕೃತ್ವಾ ವಸೇನ್ನರಃ ॥೩॥

ದ್ವಾದಶಾಬ್ದಾನಿ ಸಂತಪ್ತಃ ಸರ್ವದಾ ವಿಜಿತೇಂದ್ರಿಯಃ ।
ಭಿಕ್ಷಾಮಾಹೃತ್ಯ ಭುಂಜೀತ ಸ್ವದೋಷಂ ಖ್ಯಾಪಯನ್ನೃಣಾಂ ॥೪॥

ಶಾಕಮೂಲಫಲಾಶೀ ವಾ ಕೃತ್ವಾ ಶವಶಿರೋ ಧ್ವಜಂ ।
ಸಂಪೂರ್ಣೇ ದ್ವಾದಶೇ ವರ್ಷೇ ಬ್ರಹ್ಮಹತ್ಯಾಂ ವ್ಯಪೋಹತಿ ॥೫॥

ಅಕಾಮಕೃತದೋಷಸ್ಯ ಪ್ರಾಯಶ್ಚಿತ್ತಮಿದಂ ಮುನೇ ।
ಕಾಮತಶ್ಚೇನ್ಮುನಿಶ್ರೇಷ್ಠ ಪ್ರಾಣಾಂತಿಕಮುದೀರಿತಂ ॥೬॥

ಅಥವಾ ಮುನಿಶಾರ್ದೂಲ ಪಾಪಶುದ್ಧ್ಯರ್ಥಮಾತ್ಮನಃ ।
ಗ್ರಾಮಾದನಲಮಾಹೃತ್ಯ ಪ್ರವಿಶೇತ್ಪರಿತಾಪ(ಪಿ)ತಃ ॥೭॥

ಪಶ್ಚಾದನಶನೋ ಭೂತ್ವಾ ಧರ್ಮಯುದ್ಧೇಽಥವಾಽನಲೇ ।
ಅಪ್ಸು ವಾ ಮುನಿಶಾರ್ದೂಲ ಮಹಾಪ್ರಸ್ಥಾನಕೇಽಪಿ ವಾ ॥೮॥

ರೆಂದು ಯಾಜ್ಞವಲ್ಕ್ಯರು ಹೇಳಿರುವರು. ಅವರ ಮನೆಯಲ್ಲಿ ಊಟಮಾಡಿ, ನೀರನ್ನು ಕುಡಿದರೆ, ಅಷ್ಟುಮಾತ್ರದಿಂದ ಆ ದೋಷವು ಬರುವುದಿಲ್ಲ. ॥೨॥

ಬ್ರಹ್ಮಹತ್ಯವನ್ನು ಮಾಡಿದವನು ಜನರಿಲ್ಲದ ಕಾಡಿನಲ್ಲಿ, ಗುಡಿಸಿಲನಲ್ಲಿ ವಾಸ ಮಾಡುತ್ತ, ಹನ್ನೆರಡು ವರ್ಷಗಳವರೆಗೆ, ಜಿತೇಂದ್ರಿಯನಾಗಿ, ತಪಸ್ಸುಮಾಡಿಕೊಂಡಿರ ಬೇಕು. ತನ್ನ ತಪ್ಪನ್ನು ಜನರಿಗೆ ಹೇಳುತ್ತ, ಭಿಕ್ಷಾನ್ನವನ್ನು ತಂದು ಊಟಮಾಡ ಬೇಕು. ಅಥವಾ ಕಂದಮೂಲಫಲಗಳನ್ನು ಆಹಾರಮಾಡಿಕೊಂಡು ತನ್ನ ಪಶ್ಚಾತ್ತಾಪದ ತಪಸ್ಸಿನ ಗುರುತಿಗಾಗಿ, ಹೆಣದ ತಲೆ ಬುರುಡೆಯನ್ನು ಧ್ವಜವನ್ನಾಗಿ ಧರಿಸಿರಬೇಕು. ಹೀಗೆ ಹನ್ನೆರಡುವರ್ಷಗಳು ಕಳೆದ ಮೇಲೆ, ಬ್ರಹ್ಮಹತ್ಯೆಯ ಪಾಪವನ್ನು ನಾಶಮಾಡಿ ಕೊಳ್ಳುವನು. ॥೩-೪-೫॥

ತಪಸ್ವಿಯಾದ ಬೃಹಸ್ಪತಿಯೇ, ಹಿಂದೆ ಹೇಳಿದ ಪ್ರಾಯಶ್ಚಿತ್ತಕ್ರಮವು ಮನ ಸ್ಸಿನಲ್ಲಿ ಉದ್ದೇಶವಿಲ್ಲದೆ ಮಾಡಿದ ಬ್ರಹ್ಮಹತ್ಯೆಗಾಯಿತು. ಮನಃಪೂರ್ವಕವಾದ ಮಾಡಿ ದುದಕ್ಕೆ ಪ್ರಾಣಾಂತವಾದ ಪ್ರಾಯಶ್ಚಿತ್ತವನ್ನೇ ಮಾಡಿಕೊಳ್ಳಬೇಕು. ಅವು ಯಾವು ವೆಂದರೆ—ಅಗ್ನಿಪ್ರವೇಶಮಾಡುವುದು, ಆಹಾರವನ್ನು ಬಿಟ್ಟುಬಿಡುವುದು, ಧರ್ಮ

ಬ್ರಾಹ್ಮಣಾರ್ಥೇ ಗವಾರ್ಥೇ ವಾ ಸಮ್ಯಕ್ಪ್ರಾಣಾನ್ಪರಿತ್ಯಜೇತ್ ।
ಸುರಾಪಾನಾದಿದೋಷೋಽಪಿ ನಶ್ಯತ್ಯೇತೇನ ಸುವ್ರತ ॥೯॥

ಅಗ್ನಿವರ್ಣಾಂ ಸುರಾಂ ತಪ್ತಾಂ ಪ್ರಾಣವಿಚ್ಛೇದನಕ್ಷಮಾಂ ।
ಪೀತ್ವಾ ನಷ್ಟಶರೀರಸ್ತು ಸುರಾಪಾನಾತ್ಪ್ರಮುಚ್ಯತೇ ॥೧೦॥

ಗೋಮೂತ್ರಂ ವಾ ಘೃತಂ ತೋಯಂ ಗೋಶಕೃದ್ರಸಮೇವವಾ ।
ಅತಿತಪ್ತಂ ಪಿಬೇತ್ತೇನ ಮೃತೋ ಮುಚ್ಯೇತ ದೋಷತಃ ॥೧೧॥

ಸುವರ್ಣಸ್ತೇಯಕೃತ್ಸಾಕ್ಷಾದ್ರಾಜಾನಮಭಿಗಮ್ಯ ತು ।
ಸ್ವಕರ್ಮ ಖ್ಯಾಪಯನ್ಬ್ರೂಯಾನ್ಮಾಂ ಭವಾನನುಶಾಸ್ತ್ವಿತಿ ॥೧೨॥

ಆಯಸಂ ಮುಸಲಂ ತೀಕ್ಷ್ಣಂ ಗೃಹೀತ್ವಾ ಸ್ವಯಮೇವ ತು ।
ಹನ್ಯಾತ್ಸಕೃತ್ಪ್ರಯೋಗೇಣ ರಾಜಾ ತಂ ಪುರುಷಾಧಮಂ ॥೧೩॥

ಮುಚ್ಯತೇ ಸ್ತೇಯದೋಷೇಣ ನಾಸ್ತಿ ರಾಜ್ಞೋಽಪಿ ಪಾತಕಂ ।

ಯುದ್ಧದಲ್ಲಿ ಪ್ರಾಣಬಿಡುವುದು. ನೀರಿನಲ್ಲಿ ಮುಳುಗಿಕೊಳ್ಳುವುದು. ಪ್ರಾಣಾಂತವಾಗುವವರೆಗೂ ಹಿಮವತ್ಪರ್ವತದಲ್ಲಿ ಹೋಗುತ್ತಿರುವುದು. ಬ್ರಾಹ್ಮಣನ ಅಥವಾ ಗೋವಿನ ರಕ್ಷಣೆ ಮುಂತಾದ ಪ್ರಯೋಜನವನ್ನುಂಟುಮಾಡಿಕೊಡುವುದರಲ್ಲಿ ಪ್ರಾಣವನ್ನು ಬಿಡುವುದು. ಇವುಗಳೇ ಪ್ರಾಣಾಂತವಾದ ಪ್ರಾಯಶ್ಚಿತ್ತಗಳು. ||೬-೭-೮||

ಹೆಂಡವನ್ನು ಕುಡಿದ ದೋಷವೂ, ಹಿಂದೆ ಹೇಳಿದ ಪ್ರಾಯಶ್ಚಿತ್ತಗಳಿಂದ ಹೋಗುವುದು. ಅದಲ್ಲದೆ ಕೆಂಪಗೆ ಕಾದು ಕುದಿಯುತ್ತಿರುವ ಹೆಂಡ, ಗೋಮೂತ್ರ, ತುಪ್ಪ, ನೀರು, ಸಗಣಿಯರಸ ಇವುಗಳನ್ನು ಕುಡಿದಾದರೂ ಪ್ರಾಣತ್ಯಾಗಮಾಡಿ ಪಾಪವನ್ನು ಕಳೆದುಕೊಳ್ಳಬಹುದು. ||೯-೧೦-೧೧||

ಚಿನ್ನವನ್ನು ಕದ್ದವನು ತಾನೇ ರಾಜನ ಸಮೀಪಕ್ಕೆ ಹೋಗಿ ತಾನು ಮಾಡಿದ ಪಾಪಕೆಲಸವನ್ನು ಹೇಳಿ, ದಂಡನೆಮಾಡಬೇಕೆಂದು ಕೇಳಬೇಕು. ರಾಜನು ಅವನನ್ನು ಹರಿತವಾದ ಮುಸಲಾಯುಧದಿಂದ ಒಂದೇ ಏಟಿಗೆ ಕೊಲ್ಲಬೇಕು. ಹೀಗಾದರೆ ಆ ದೋಷವು ನಿವಾರಣೆಯಾಗುದು. ರಾಜನಿಗೂ ಪಾಪಬರುವುದಿಲ್ಲ. ||೧೨-೧೩||

ಅವಗೂಹೇತ್ಸ್ತ್ರಿಯಂ ತಪ್ತಾಮಯಸಾ ನಿರ್ಮಿತಾಂ ನರಃ ॥೧೪॥

ಸ್ವಯಂ ವಾ ಶಿಶ್ನವೃಷಣಾವುತ್ಕೃತ್ಯಾಧಾಯ ಚಾಂಜಲೌ ।
ದಕ್ಷಿಣಾಂ ದಿಶಮಾಗಚ್ಛೇದ್ಯಾವತ್ಪ್ರಾಣವಿಮೋಚನಂ ॥೧೫॥

ಅನೇನ ವಿಧಿನಾ ಯುಕ್ತೋ ಮುಚ್ಯತೇ ಗುರುತಲ್ಪಗಃ ।
ತಪ್ತಕೃಚ್ಛ್ರಂ ಚರೇತ್ತಪ್ತಃ ಸಂವತ್ಸರಮತಂದ್ರಿತಃ ॥೧೬॥

ಮಹಾಪಾತಕಿನಾಂ ನೃಣಾಂ ಸಂಸರ್ಗಾತ್ಸ ವಿಮುಚ್ಯತೇ ।
ಮಾತರಂ ಮಾತೃಸದೃಶೀಂ ಭಾಗಿನೇಯೀಂ ತಥೈವ ಚ ।
ಮಾತೃಷ್ವಸಾರಮಾರುಹ್ಯ ಕುರ್ಯಾತ್ಕೃಚ್ಛ್ರಾತಿಕೃಚ್ಛ್ರಕೌ ॥೧೭॥

ಗುರುಪತ್ನಿಯ ಸಂಗವನ್ನು ಮಾಡಿದವನು ಕಬ್ಬಿಣದಿಂದ ಮಾಡಿದ ಕಾಯಿಸಿದ ಸ್ತ್ರೀವಿಗ್ರಹವನ್ನು ತಬ್ಬಿಕೊಳ್ಳಬೇಕು. ಅಥವಾ ತನ್ನ ಶಿಶ್ನವೃಷಣಗಳನ್ನು ಕಿತ್ತು ಕೈಯ್ಯಲ್ಲಿ ಹಿಡಿದುಕೊಂಡು, ತನ್ನ ಪ್ರಾಣಹೋಗುವವರೆಗೂ ದಕ್ಷಿಣದಿಕ್ಕಿಗೆ ಹೋಗುತ್ತಿರಬೇಕು. ಹೀಗೆ ಮಾಡಿದರೆ ಗುರುಪತ್ನೀಗಮನದ ಪಾಪವು ನಾಶವಾಗುವುದು. ||೧೪-೧೫||

ಮಹಾಪಾಪಮಾಡಿದವರ ಸಂಬಂಧದಿಂದ ಕೂಡಿದವನು ಒಂದು ವರ್ಷದವರೆಗೆ ತಪಸ್ಸನ್ನು ಮಾಡುತ್ತ ತಪ್ತಕೃಚ್ಛ್ರವೆಂಬ ವ್ರತವನ್ನು ಮಾಡಬೇಕು. ಇದರಿಂದ ಆ ಪಾಪವು ಬಿಡುಗಡೆಯಾಗುವುದು. ತಪ್ತಕೃಚ್ಛ್ರವೆಂದರೆ—ಕಾಯಿಸಿದ ನೀರನ್ನು ಮೂರುದಿನ, ಹಾಲನ್ನು ಮೂರುದಿನ, ತುಪ್ಪವನ್ನು ಮೂರುದಿನ, ಕುಡಿದುಕೊಂಡಿದ್ದು, ಮೂರುದಿನ ವಾಯುವನ್ನು ಆಹಾರಮಾಡಿಕೊಂಡಿರಬೇಕು. ನೀರು ಆರು ಪಲ, ಹಾಲು ಮೂರು ಪಲ, ತುಪ್ಪ ಒಂದು ಪಲ, ಈ ಅಳತೆಯಲ್ಲಿರಬೇಕು. ಇವುಗಳನ್ನೇ ತಣ್ಣಗಿರುವುದನ್ನು ಉಪಯೋಗಿಸಿದರೆ ಶೀತಕೃಚ್ಛ್ರವೆನಿಸುವುದು. ||೧೬||

ತಾಯಿ, ತಾಯಿಗೆ ಸಮಾನರಾದವರು, ಸಯೋದರಿಯರು, ತಾಯಿಯ ಅಕ್ಕತಂಗಿಯರು ಇವರುಗಳ ಸಂಗವನ್ನು ಮಾಡಿದ ಮನುಷ್ಯನು ಕೃಚ್ಛ್ರಾತಿಕೃಚ್ಛ್ರಗಳನ್ನು ಮಾಡಿ ಪಾಪವನ್ನು ಕಳೆದುಕೊಳ್ಳಬೇಕು. ಎರಡಾವೃತ್ತಿ ಕೃಚ್ಛ್ರಾತಿಕೃಚ್ಛ್ರಗಳನ್ನು ಮಾಡಬೇಕೆಂದು ಅಭಿಪ್ರಾಯವು. ಇಪ್ಪತ್ತೊಂದು ದಿನಗಳ ವರೆಗೆ ನೀರನ್ನೊಂದನ್ನೇ ಆಹಾರವಾಗಿ ಮಾಡಿಕೊಂಡಿರುವುದು ಕೃಚ್ಛ್ರಾತಿಕೃಚ್ಛ್ರವೆಂದು ಯಾಜ್ಞವಲ್ಕ್ಯರು ಹೇಳಿರುವರು. ||೧೭||

ಚಾಂದ್ರಾಯಣಂ ಚ ಕುರ್ವೀತ ತತ್ಪಾಪವಿನಿವೃತ್ತಯೇ ॥೧೮॥

ಸ್ವಸಾರಂ ಮುನಿಶಾರ್ದೂಲ ಗತ್ವಾ ದುಹಿತರಂ ತು ವಾ ।
ಕೃಚ್ಛ್ರಂ ಸಾಂತಪನಂ ಕುರ್ಯಾದ್ದೋಷಶುದ್ಧ್ಯರ್ಥಮಾತ್ಮನಃ ॥೧೯॥

ಭ್ರಾತೃಭಾರ್ಯಾಽಭಿಗಮನೇ ಚಾಂದ್ರಾಯಣಚತುಷ್ಟಯಂ ।
ಚರೇತ್ಪಾಪವಿಶುದ್ಧ್ಯರ್ಥಂ ಸಂತಪ್ತೋ ಬ್ರಾಹ್ಮಣೋತ್ತಮಃ ॥೨೦॥

ಪೈತೃಷ್ವಸೇಯೀಗಮನೇ ಮಾತುಲಾದುತ್ಥಿತಾಂ ಸ್ತ್ರಿಯಂ ।
ಚಾಂದ್ರಾಯಣಂ ಚರೇದೇಕಂ ಕಾಮತೋಽಕಾಮತೋಽಪಿ ವಾ ॥೨೧॥

ಅವಶಿಷ್ಟಾಸು ಸರ್ವಾಸು ದ್ವಿಜಸ್ತ್ರೀಷು ಮಹಾಮುನೇ ।
ಗತ್ವಾ ಕೃಚ್ಛ್ರಂ ಚರೇತ್ತಪ್ತಮೇಕಂ ತದ್ದೋಷಶಾಂತಯೇ ॥೨೨॥

ಕ್ಷತ್ರಿಯಾಣಾಂ ಚ ವೈಶ್ಯಾನಾಂ ಸ್ತ್ರೀಷು ಗತ್ವಾದ್ವಿಜಶ್ಚರೇತ್ ।
ಕೃಚ್ಛ್ರಮನ್ಯಾಸು ಬಹುಶೋ ಗತ್ವಾ ಕೃಚ್ಛ್ರಂ ಚರೇತ್ ದ್ವಿಜಃ ॥೨೩॥

ಆ ಪಾಪದ ನಿವೃತ್ತಿಗಾಗಿ ಚಾಂದ್ರಾಯಣವ್ರತವನ್ನೂ ಮಾಡಬೇಕು. ॥೧೮॥

ಸಹೋದರಿಯು ಮತ್ತು ಮಗಳ ಸಂಗವನ್ನು ಮಾಡಿದವನು ತನ್ನ ಪಾಪವನ್ನು ಕಳೆದುಕೊಳ್ಳುವುದಕ್ಕೆ ಸಾಂತಪನವೆಂಬ ಕೃಚ್ಛ್ರವನ್ನು ಮಾಡಬೇಕು. ಗೋಮೂತ್ರ ಗೋಮಯ, ಹಾಲು ಮೊಸರು, ತುಪ್ಪ, ದರ್ಭೆಯ ಸಂಬಂಧವಾದ ನೀರು, ಇವುಗಳನ್ನು ಕ್ರಮವಾಗಿ ಒಂದೊಂದು ದಿನ ಆಹಾರಮಾಡಿಕೊಂಡಿದ್ದು, ಕೊನೆಯ ದಿನ ಉಪವಾಸಮಾಡುವುದು ಸಾಂತಪನ ಕೃಚ್ಛ್ರವೆನಿಸುವುದು. ॥೧೮-೧೯॥

ಸಹೋದರನ ಹೆಂಡಿತಿಯ ಸಂಗವನ್ನು ಮಾಡಿದರೆ, ನಾಲ್ಕು ಚಾಂದ್ರಾಯಣವನ್ನೂ, ಸೋದರತ್ತೆಯ ಮಗಳ ಸಂಗವನ್ನು ಮಾಡಿದರೆ ಒಂದು ಚಾಂದ್ರಾಯಣವನ್ನೂ, ಮಿಕ್ಕ ಸಾಮಾನ್ಯರಾದ ಬ್ರಾಹ್ಮಣಸ್ತ್ರೀ ಸಂಗವನ್ನು ಮಾಡಿದರೆ ಒಂದು ತಪ್ತಕೃಚ್ಛ್ರವನ್ನೂ, ಪಾಪನಿವಾರಣೆಗಾಗಿ ಮಾಡಿಕೊಳ್ಳಬೇಕು. ॥೨೦-೨೧-೨೨॥

ಬ್ರಾಹ್ಮಣನೂ, ಕ್ಷತ್ರಿಯ ವೈಶ್ಯ ಮುಂತಾದ ಬೇರೆ ವರ್ಣದ ಸ್ತ್ರೀಯರ ಸಂಗವನ್ನು ಮಾಡಿದರೆ ಪಾಪನಿವಾರಣೆಗಾಗಿ ಕೃಚ್ಛ್ರವನ್ನು ಮಾಡಬೇಕು. ॥೨೩॥

ಬ್ರಹ್ಮಚಾರೀ ಸ್ತ್ರಿಯಂ ಗತ್ವಾ ಕಾಮತೋ ಮುನಿಸತ್ತಮ ।
ಸಂವತ್ಸರಂ ಚರೇದ್ಭೈಕ್ಷ್ಯಂ ವಸಿತ್ವಾ ಗರ್ದಭಾಜಿನಂ ॥೨೪॥

ಸ್ವಪಾಪಕೀರ್ತನಂ ಕುರ್ವನ್ ಸ್ನಾತ್ವಾ ತ್ರಿಷವಣಂ ಪುನಃ ।
ತಸ್ಮಾತ್ಪಾಪಾತ್ಪ್ರಮುಚ್ಯೇತ ಷಣ್ಮಾಸಾತ್ಕಾಮವರ್ಜಿತಃ ॥೨೫॥

ಅಗ್ನಿಕಾರ್ಯಪರಿತ್ಯಾಗೇ ರೇತೋತ್ಸರ್ಗೇ ಸಮಾಹಿತಃ ।
ಸ್ನಾತ್ವಾ ಪ್ರಣವಸಂಯುಕ್ತಾಂ ವ್ಯಾಹೃತಿಂ ಚ ತಥೈವ ಚ ॥೨೬॥

ಸಾವಿತ್ರೀಂ ಸಶಿರಾಂ ಮೌನೀ ಜಪೇದಯುತ ಮಾದರಾತ್ ।
ಯತೀನಾಮಿಂದ್ರಿಯೋತ್ಸರ್ಗೇ ಸ್ನಾತ್ವಾ ಶುದ್ಧಃ ಸಮಾಹಿತಃ ॥೨೭॥

ಪ್ರಣವಂ ಪರಮಾತ್ಮಾನಂ ಜಪೇದಯುತಮಾದರಾತ್ ।
ದ್ವಿಜಸ್ತ್ರೀಗಮನೇ ಭಿಕ್ಷುರವಕೀರ್ಣವ್ರತಂ ಚರೇತ್ ॥೨೮॥
ಅನ್ಯಾಸು ಬುದ್ಧಿಪೂರ್ವಂ ಚೇತ್ತಪ್ತಕೃಚ್ಛ್ರಂ ಸಮಾಚರೇತ್ ।

ಬ್ರಹ್ಮಚಾರಿಯು ಕಾಮಾಸಕ್ತಿಯಿಂದ ಸ್ತ್ರೀಸಂಗವನ್ನು ಮಾಡಿದರೆ ತಾನು ಮಾಡಿದ ಪಾಪಕಾರ್ಯವನ್ನು ಹೇಳುತ್ತ, ತ್ರಿಕಾಲಸ್ನಾನಮಾಡಿ, ಕತ್ತೆಯ ಚರ್ಮವನ್ನು ಹೊದ್ದುಕೊಂಡು ಒಂದು ವರ್ಷದ ವರೆಗೆ ಭಿಕ್ಷಾನ್ನಕ್ಕೆ ಹೋಗಬೇಕು. ಕಾಮಾಸಕ್ತನಾಗದೆ ಮಾಡಿದ್ದರೆ ಆರು ತಿಂಗಳು ಭಿಕ್ಷಾನ್ನಮಾಡಿದರೆ ಸಾಕು. ಆ ಪಾಪದಿಂದ ಬಿಡುಗಡೆಯಾಗುವುದು. ॥೨೪-೨೫॥

ಬ್ರಹ್ಮಚಾರಿಯು ಅಗ್ನಿಕಾರ್ಯವನ್ನು ಬಿಟ್ಟರೂ, ರೇತಸ್ಸನ್ನು ವಿಸರ್ಜಿಸಿದರೂ, ಸ್ನಾನಮಾಡಿ ಪ್ರಣವವ್ಯಾಹೃತಿಗಳಿಂದ ಕೂಡಿ ಗಾಯತ್ರೀ ಮಂತ್ರವನ್ನು, ಶಿರೋಮಂತ್ರದೊಡನೆ ಹತ್ತುಸಾವಿರ ಜಪವನ್ನು ಮಾಡಿದರೆ ಆ ದೋಷದ ನಿವಾರಣೆಯಾಗುವುದು. ॥೨೬॥

ಯತಿಗೆ ಇಂದ್ರಿಯವಿಸರ್ಜನೆಯಾದರೆ, ಸ್ನಾನಮಾಡಿ, ಏಕಾಗ್ರತೆಯಿಂದ ಪರಮಾತ್ಮಸ್ವರೂಪವಾದ ಪ್ರಣವಮಂತ್ರವನ್ನು, ಪ್ರೀತಿಯಿಂದ ಹತ್ತುಸಾವಿರ ಜಪವನ್ನು ಮಾಡಬೇಕು. ॥೨೭॥

ಬ್ರಾಹ್ಮಣಸನ್ಯಾಸಿಯು, ಬ್ರಾಹ್ಮಣಸ್ತ್ರೀಗಮನಮಾಡಿದರೆ, ಅವಕೀರ್ಣವ್ರತವನ್ನು ಮಾಡಬೇಕು. ಇತರಸ್ತ್ರೀಗಮನವನ್ನು ಮನಃಪೂರ್ವಕವಾಗಿ, ಮಾಡಿದರೆ, ತಪ್ತಕೃಚ್ಛ್ರವನ್ನು ಮಾಡಬೇಕು. ಬ್ರಹ್ಮಚಾರಿಯು ಸ್ತ್ರೀಗಮನಮಾಡಿದರೆ, ಅವ

ಹತ್ವಾ ವೈಶ್ಯಂ ಚ ರಾಜಾನಂ ಬ್ರಹ್ಮಹತ್ಯಾವ್ರತಂ ಚರೇತ್ ॥೨೯॥

ಕ್ರಮಾನ್ಮಾಸತ್ರಯಂ ಪೂರ್ವಂ ಷಾಣ್ಮಾಸಿಕಮನಂತರಂ ।
ಬ್ರಾಹ್ಮಣಸ್ತು ವಿಮುಚ್ಯೇತ ಶೂದ್ರಂ ಹತ್ವಾಽರ್ಧಮಾಸತಃ ॥೩೦॥

ವಿಹಿತಾಽಕರಣೇ ತದ್ವತ್ಪ್ರತಿಷಿದ್ಧಾತಿಸೇವನೇ ।
ವೇದವಿಪ್ಲಾವನೇ ಚೈವ ಗುರುದ್ರೋಹೇಽನ್ಯಕರ್ಮಣಿ ॥೩೧॥

ತಪ್ತಕೃಚ್ಛ್ರಂ ಚರೇತ್ತೇನ ಮುಚ್ಯತೇ ಸರ್ವದೋಷತಃ ।
ಅಥವಾ ಸರ್ವಪಾಪಾನಾಂ ವಿಶುದ್ಧ್ಯರ್ಥಂ ಸಮಾಹಿತಃ ॥೩೨॥

ಕುರ್ವನ್ ಶುಶ್ರೂಷಣಂ ನಿತ್ಯಂ ವೇದಾಂತಜ್ಞಾನಭಾಷಿಣಾಂ ।
ಶ್ರದ್ಧಾವಿನಯಸಂಯುಕ್ತಃ ಶಾಂತಿದಾಂತ್ಯಾದಿಸಂಯುತಃ ॥೩೩॥
ಯಾವಜ್ಜ್ಞಾನೋದಯಂ ತಾವದ್ವೇದಾಂತಾರ್ಥಂ ನಿರೂಪಯೇತ್ ।

ಕೀರ್ಣಿ ಎಂದು ಹೇಳುವರು. ಅವಕೀರ್ಣಿವ್ರತವನ್ನು ಹಿಂದೆ ೨೫ ನೆಯ ಶ್ಲೋಕದ ವಿವರಣೆಯಲ್ಲಿ ಹೇಳಿದೆ. ॥೨೮॥

ಬ್ರಾಹ್ಮಣನು, ಕ್ಷತ್ರಿಯ, ವೈಶ್ಯ, ಶೂದ್ರರನ್ನು ಕೊಂದರೆ, ಬ್ರಹ್ಮಹತ್ಯಾ ಶಾಂತಿಗೆ, ಯಾವ ವ್ರತವನ್ನು ಹೇಳಿದೆಯೋ, ಅದನ್ನೇ ಕ್ರಮವಾಗಿ ಆರು ತಿಂಗಳು, ಮೂರು ತಿಂಗಳು, ಹದಿನೈದು ದಿನಗಳು, ಆಚರಿಸಿದರೆ ಪಾಪನಿವಾರಣೆಯಾಗುವುದು. ॥೨೯-೩೦॥

ವೇದವಿಹಿತವಾದ ಕರ್ಮವನ್ನು ಬಿಡುವುದು, ನಿಷಿದ್ಧಕರ್ಮವನ್ನು ಅತಿಯಾಗಿ ಮಾಡುವುದು, ವೇದವಿರುದ್ಧವಾಗಿ, ನಡೆಯುವುದು, ಗುರುಗಳಿಗೆ ಕೇಡುಕನ್ನು ಮಾಡುವುದು, ಈ ದೋಷಗಳಿಗೆಲ್ಲಕ್ಕೂ, ತಪ್ತಕೃಚ್ಛ್ರವೇ ಪಾಪನಿವಾರಕವಾದ ಪ್ರಾಯಶ್ಚಿತ್ತವು ಇದರಿಂದ ಸಮಸ್ತ ದೋಷಗಳೂ ನಾಶವಾಗುವುವು. ॥೩೧॥

ಅಥವಾ ಸಕಲಪಾಪಗಳ ನಾಶಕ್ಕಾಗಿ, ಏಕಾಗ್ರಚಿತ್ತದಿಂದಲೂ, ಆಸಕ್ತಿಯಿಂದಲೂ, ನಮ್ರತೆಯಿಂದಲೂ, ಇಂದ್ರಿಯನಿಗ್ರಹದಿಂದ ಕೂಡಿ, ವೇದಾಂತಶ್ರವಣವನ್ನು ನಿತ್ಯವೂ, ಮಾಡುತ್ತಿರಬೇಕು. ಅಲ್ಲದೆ ಜ್ಞಾನವು ಉತ್ಪತ್ತಿಯಾಗುವವರೆಗೂ, ವೇದಾಂತಾರ್ಥವನ್ನು ಕೇಳಿ ತಿಳಿದು ವಿವರಿಸುತ್ತಿರಬೇಕು ॥೩೨-೩೩॥

ನಾಸ್ತಿ ಜ್ಞಾನಾತ್ಪರಂ ಕಿಂಚಿತ್ಪಾಪಕಾಂತಾರದಾಹಕಂ ॥೩೪॥

ಮಾಸಮಾತ್ರಾ(ತ್ರಯಾ)ದ್ವಿನಶ್ಯಂತಿ ಕ್ಷುದ್ರಪಾಪಾನಿ ಸುವ್ರತ ।
ಷಣ್ಮಾಸಶ್ರವಣಾತ್ಸರ್ವಂ ನಶ್ಯತ್ಯೇವೋಪಪಾತಕಂ ॥೩೫॥

ಮಹಾಪಾತಕಸಂಘಾಶ್ಚ ನಿತ್ಯಂ ವೇದಾಂತಸೇವನಾತ್ ।
ನಶ್ಯಂತಿ ವತ್ಸರಾತ್ಸರ್ವೇ ಸತ್ಯಮುಕ್ತಂ ಬೃಹಸ್ಪತೇ ॥೩೬॥

ಯಃ ಶ್ರದ್ಧಯಾ ಯುತೋ ನಿತ್ಯಂ ವೇದಾಂತಜ್ಞಾನಮಭ್ಯಸೇತ್ ।
ತಸ್ಯ ಸಂಸಾರವಿಚ್ಛಿತ್ತಿಃ ಶ್ರವಣಾದಿತಿ ಹಿ ಶ್ರುತಿಃ ॥೩೭॥

ಏವಮಭ್ಯಸ(ಸ್ಯ)ತಸ್ತಸ್ಯ ಯದಿ ವಿಘ್ನೋಽಭಿಜಾಯತೇ ।
ಸರ್ವಲೋಕಾನ್ಕ್ರಮಾದ್ಭುಕ್ತ್ವಾ ಭೂಮೌ ವಿಪ್ರೋಽಭಿಜಾಯತೇ॥೩೮॥

ಪಾಪವೆಂಬ ಕಾಡನ್ನು ಸುಡುವಂತಹ ವಸ್ತುವು, ಜ್ಞಾನಕ್ಕಿಂತ ಬೇರೆಯಾದುದು ಮತ್ತೊಂದಿಲ್ಲ. ವೇದಾಂತಶ್ರವಣವನ್ನು, ಒಂದು ತಿಂಗಳು ಮಾಡಿದರೆ, ಕ್ಷುದ್ರಪಾಪಗಳು ನಾಶವಾಗುವುವು. ಆರು ತಿಂಗಳು ಮಾಡಿದರೆ, ಉಪಪಾಪಗಳು ನಾಶವಾಗುವುವು. ಒಂದು ವರ್ಷದವರೆಗೆ ಮಾಡಿದರೆ, ಮಹಾಪಾಪಗಳೆಲ್ಲವೂ, ನಾಶವಾಗುವುವು. ಎಲೈ ಬೃಹಸ್ಪತಿಯೇ, ನನ್ನ ಮಾತು ಸತ್ಯವಾದುದೆಂದು ತಿಳಿ. ಇದೇ ವಿಷಯದಲ್ಲಿ ಭಗವದ್ಗೀತೆಯಲ್ಲಿ—" ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ಕುರುತೇಽರ್ಜುನ । ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ ॥ ೪.೩೭. ಎಂದು ಹೇಳಿರುವುದು. ॥೩೪-೩೫-೩೬॥

ಯಾವನು ಪ್ರತಿದಿನವೂ ಆಸಕ್ತಿಯಿಂದ ಶಬ್ದಗಳ ಶಕ್ತಿಯಿಂದ ತಾತ್ಪರ್ಯವನ್ನು ನಿಶ್ಚಯಿಸಿ, ನ್ಯಾಯಾನುಸಂಧಾನ ಮಾಡುತ್ತ, ವೇದಾಂತಾಭ್ಯಾಸಮಾಡುವನೋ ಅವನಿಗೆ ಸಂಸಾರದುಃಖದ ಬಿಡುಗಡೆಯಾಗುವುದೆಂದು ವೇದವು ಹೇಳುವುದು. ಆ ವೇದವಾಕ್ಯವಾವುದೆಂದರೆ — ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ ಸನ್ಯಾಸಯೋಗಾದ್ಯತಯಃ ಶುದ್ಧಸತ್ವಾಃ । ತೇ ಬ್ರಹ್ಮಲೋಕೇ ತು ಪರಾಂತಕಾಲೇ ಪರಾಮೃತಾತ್ಪರಿಮುಚ್ಯಂತಿ ಸರ್ವೇ ॥ ಮುಂ.ಉ.೩.೨.೬. ಎಂಬುದು. ॥೩೭॥

ಹೀಗೆ ಅಭ್ಯಾಸಮಾಡತಕ್ಕ ಮನುಷ್ಯನಿಗೆ ವಿಘ್ನವೇನಾದರೂ ಉಂಟಾದರೆ, ಅವನು ಸಮಸ್ತ ಸ್ವರ್ಗಸುಖಗಳನ್ನು ಅನುಭವಿಸಿ, ಭೂಮಿಯಲ್ಲಿ ಬ್ರಾಹ್ಮಣನಾಗಿ ಹುಟ್ಟುವನು. ಈ ವಿಷಯದಲ್ಲಿ ಗೀತೆಯಲ್ಲಿ—ಪ್ರಾಪ್ಯ ಪುಣ್ಯಕೃತಾನ್ ಲೋಕಾನು

ಸರ್ವಲಕ್ಷಣಸಂಪನ್ನಃ ಶಾಂತಃ ಸತ್ಯಪರಾಯಣಃ ।
ಪುನಶ್ಚ ಪೂರ್ವಭಾವೇನ ವಿದ್ವಾಂಸಂ ಪರ್ಯುಪಾಸತೇ ॥೩೯॥

ತತ್ಸಂಪರ್ಕಾತ್ಸ್ವಮಾತ್ಮಾನಮಪರೋಕ್ಷೀ ಕೃತೋ ಮುನಿಃ ।
ಸ್ವಪ್ನಾದಿವ ವಿಮುಚ್ಯೇತ ಸ್ವಸಂಸಾರಮಹೋದಧೇಃ ॥೪೦॥

ತಸ್ಮಾತ್ಸರ್ವಪ್ರಯತ್ನೇನ ಸ್ವಮುಕ್ತ್ಯರ್ಥಂ ಬೃಹಸ್ಪತೇ ।
ಸರ್ವದಾ ಸರ್ವಮುತ್ಸೃಜ್ಯ ವೇದಾಂತಶ್ರವಣಂ ಕುರು ॥೪೧॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ ಪ್ರಾಯಶ್ಚಿತ್ತವಿಧಿನಿರೂಪಣಂ ನಾಮ ಸಪ್ತಮೋಽಧ್ಯಾಯಃ

ಷಿತ್ವಾ ಶಾಶ್ವತೀಃ ಸಮಾಃ । ಶುಚೀನಾಂ ಶ್ರೀಮತಾಂಗೇಹೇ ಯೋಗಭ್ರಷ್ಟೋಽಭಿಜಾಯತೇ ॥ ೬.೪೧. ಎಂದು ಹೇಳಿರುವುದು. ॥೩೮॥

ಹಾಗೆ ಹುಟ್ಟಿದ ಮನುಷ್ಯನು ಸಮಸ್ತ ಶುಭಲಕ್ಷಣಗಳಿಂದ ಕೂಡಿ, ಶಾಂತಚಿತ್ತನಾಗಿ ಸತ್ಯಸ್ವರೂಪವಾದ ಜ್ಞಾನದಲ್ಲಿ ಆಸಕ್ತನಾಗಿ, ಹಿಂದಿನ ಸಂಸ್ಕಾರಕ್ಕನುಸಾರವಾಗಿ ಜ್ಞಾನಿಯಾದ ವಿದ್ವಾಂಸನ ಸೇವೆಯನ್ನು ಮಾಡುವನು. " ಪೂರ್ವಾಭ್ಯಾಸೇನ ತೇನೈವ ಹ್ರಿಯತೇ ಹ್ಯವಶೋಽಪಿಸಃ॥೬.೪೪. ಎಂದು ಗೀತೆಯಲ್ಲಿ ಹೇಳಿದೆ.॥೩೯॥

ಅಂಥವನು ವಿದ್ವಾಂಸರ ಸಹವಾಸದಿಂದ ಸ್ವಸ್ವರೂಪವಾದ ಆತ್ಮಸಾಕ್ಷಾತ್ಕಾರ ಮಾಡಿಕೊಂಡು, ಸ್ವಪ್ನಸದೃಶವಾದ ಸಂಸಾರಸಮುದ್ರದಿಂದ ಬಿಡುಗಡೆಯನ್ನು ಹೊಂದುವನು. ಆದುದರಿಂದ ಎಲೈ ಬೃಹಸ್ಪತಿಯೇ, ಸರ್ವಪ್ರಯತ್ನದಿಂದಲೂ, ಮುಕ್ತಿಗೋಸ್ಕರಸಾಗಿ ಇತರ ಎಲ್ಲ ಕೆಲಸಗಳನ್ನು ಬಿಟ್ಟು ಯಾವಾಗಲೂ ವೇದಾಂತ ಶ್ರವಣವನ್ನು ಮಾಡುತ್ತಿರು. ॥೪೦-೪೧॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ ಏಳನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಂದಪುರಾಣಾಂತರ್ಗತಾ ಸೂತಸಂಹಿತಾ

ಜ್ಞಾನಯೋಗಖಂಡಂ

॥ ಅಷ್ಟಮೋಽಧ್ಯಾಯಃ ॥

ಎಂಟನೆಯ ಅಧ್ಯಾಯವು

॥ ಈಶ್ವರ ಉವಾಚ ॥

ಅಥಾಽತಃ ಸಂಪ್ರವಕ್ಷ್ಯಾಮಿ ದಾನಧರ್ಮಫಲಂ ಮುನೇ ।
ಸರ್ವೇಷಾಮಪಿ ದಾನಾನಾಂ ವಿದ್ಯಾದಾನಂ ಪರಂ ಸ್ಮೃತಂ ॥೧॥

ವಿದ್ಯಯಾ ಪ್ರಾಣಿನಾಂ ಮುಕ್ತಿಸ್ತಸ್ಮಾತ್ತದ್ದಾನಮುತ್ತಮಂ ।
ಭೂಮಿದಾನಂ ಚ ಗೋದಾನಮರ್ಥದಾನಂ ತಥೈವ ಚ ॥೨॥

ಈಶ್ವರನು ಹೇಳಿದನು—ಪ್ರಾಯಶ್ಚಿತ್ತಗಳು ಜ್ಞಾನಕ್ಕೆ ಪ್ರತಿಬಂಧಕಗಳಾದ ಪಾಪಗಳನ್ನು ನಾಶಮಾಡುವುವು. ಪಾಪಗಳನ್ನು ಕಳೆದುಕೊಂಡ ಪುರುಷನಿಗೆ ಯಾವ ಯಾವ ದಾನಧರ್ಮಗಳಿಂದ ಯಾವ ಯಾವ ಫಲಗಳುಂಟಾಗುವುವೆಂಬುದನ್ನು ಹೇಳುವುದಕ್ಕಾಗಿ ಈ ಅಧ್ಯಾಯವನ್ನು ಪ್ರಾರಂಭಿಸಿ ಈಶ್ವರನು ಬೃಹಸ್ಪತಿಯನ್ನು ಕುರಿತು ಎಲೈ ತಪಸ್ವಿಯಾದ ಬೃಹಸ್ಪತಿಯೇ, ವಿದ್ಯಾರೂಪವಾದ ಜ್ಞಾನದಿಂದ ಸಮಸ್ತಪ್ರಾಣಿಗಳಿಗೂ ಮುಕ್ತಿಯುಂಟಾಗುವುದರಿಂದ ಎಲ್ಲ ದಾನಗಳಿಗಿಂತಲೂ ವಿದ್ಯಾದಾನವು ಶ್ರೇಷ್ಠವಾದುದು. ಎಂದನು. ಮತ್ತು ॥೧॥

ಭೂಮಿ, ಗೋವು, ಧನ, ಕನ್ಯಾ, ಅನ್ನ ಇವುಗಳು ಮುಖ್ಯವಾದ ದಾನಗಳು. ಧನಧಾನ್ಯಗಳಿಂದ ತುಂಬಿದ ಭೂಮಿಯನ್ನು ಬ್ರಾಹ್ಮಣನಿಗೆ ದಾನಮಾಡಿದರೆ ಇಹ

ಕನ್ಯಾದಾನಂ ಚ ಮುಖ್ಯಂ ಸ್ಯಾದನ್ನದಾನಂ ತಥೈವ ಚ ।
ಧನಧಾನ್ಯಸಮೃದ್ಧಾಂ ಯೋ ಭೂಮಿಂ ದದ್ಯಾದ್ದ್ವಿಜಾಯ ಸಃ ॥೩॥

ಇಹ ಲೋಕೇ ಸುಖೀ ಭೂತ್ವಾ ಪ್ರೇತ್ಯ ಚಾನಂತ್ಯಮಶ್ನುತೇ ।
ಅರತ್ನಿಮಾತ್ರಾಂ ವಾ ಭೂಮಿಂ ದದ್ಯಾದ್ಬ್ರಹ್ಮವಿದೇ ನರಃ ॥೪॥

ಸರ್ವಪಾಪವಿನಿರ್ಮುಕ್ತಃ ಸಂಸಾರಮತಿವರ್ತತೇ ।
ವಿನೀತಾಯೋಪಸನ್ನಾಯ ವಿಪ್ರಾಯ ಶ್ರದ್ಧಯಾ ಯುತಃ ॥೫॥

ಯೋ ದದ್ಯಾದ್ವೈದಿಕೀಂ ವಿದ್ಯಾಂ ನ ಸ ಭೂಯೋಽಭಿಜಾಯತೇ ।
ಯತಯೇ ಶ್ರದ್ಧಯಾ ನಿತ್ಯಮನ್ನಂ ದದ್ಯಾದ್ಯಥಾಬಲಂ ॥೬॥

ಬ್ರಹ್ಮಲೋಕಮವಾಪ್ನೋತಿ ನ ಪುನರ್ಜಾಯತೇ ಭುವಿ ।
ಮಠಂ ವಾ ಯತಯೇ ದದ್ಯಾನ್ನ ಸ ಭೂಯೋಽಭಿಜಾಯತೇ ॥೭॥

ಲೋಕದಲ್ಲಿ ಸುಖಗಳನ್ನನುಭವಿಸಿ, ಪರಲೋಕದಲ್ಲಿ ಬ್ರಹ್ಮಪದವಿಯನ್ನು ಪಡೆಯುವನು. ಬ್ರಹ್ಮಜ್ಞಾನಿಯಾದ ಬ್ರಾಹ್ಮಣನಿಗೆ ಒಂದು ಮೊಳ ಅಳತೆಯ ಭೂಮಿಯನ್ನು ಮಾತ್ರ ದಾನಮಾಡಿದರೂ ಸಮಸ್ತಪಾಪಗಳನ್ನು ಕಳೆದುಕೊಂಡು ಸಂಸಾರದುಃಖವನ್ನು ಕಳೆದುಕೊಳ್ಳುವನು. ॥೨-೩-೪॥

ಭಕ್ತಿಯಿಂದಲೂ, ನಮ್ರತೆಯಿಂದಲೂ ಸಮೀಪಕ್ಕೆ ಬಂದ ಬ್ರಾಹ್ಮಣನಾದ ಶಿಷ್ಯನಿಗೆ ಅತ್ಯಂತಾಸಕ್ತಿಯಿಂದ ಯಾವ ಬ್ರಾಹ್ಮಣನು ವೇದವಿದ್ಯೆಯನ್ನು ಹೇಳಿಕೊಡುವನೋ ಅವನಿಗೆ ಪುನರ್ಜನ್ಮವು ಬರುವುದಿಲ್ಲವು. ॥೫॥

ಯಾವ ಮನುಷ್ಯನು ಪ್ರತಿದಿನವೂ ತನ್ನ ಶಕ್ತಿಗನುಸಾರವಾಗಿ ಸನ್ಯಾಸಿಗಳಿಗೆ ಅನ್ನವನ್ನು ಕೊಡುವನೋ, ಅಥವಾ ಮಠವನ್ನು ಕೊಡುವನೋ, ಅವನಿಗೆ ಪುನರ್ಜನ್ಮವು ಬರುವುದಿಲ್ಲ. ಬ್ರಹ್ಮಲೋಕದಲ್ಲಿ ಸುಖವನ್ನನುಭವಿಸುತ್ತಿರುವನು. ॥೬-೭॥

ಮತ್ತೊಬ್ಬರ ಮೇಲೆ ಅಸೂಯೆಯಿಲ್ಲದ ಬ್ರಾಹ್ಮಣನಿಗೆ ಅಮಾವಾಸ್ಯೆಯ ದಿನ ಶಿವನನ್ನುದ್ದೇಶಿಸಿ, ಅನ್ನದಾನವನ್ನು ಮಾಡಿದರೆ ಆ ಮನುಷ್ಯನು ಶಾಶ್ವತವಾದ ಮೋಕ್ಷವನ್ನು ಪಡೆದು ಮಹಾದೇವನಿಗೆ ಸಮನಾಗುವನು. ॥೮॥

ಅಮಾವಾಸ್ಯಾಂ ಮುನಿಶ್ರೇಷ್ಠ ಬ್ರಾಹ್ಮಣಾಯಾನಸೂಯವೇ ।
ಅನ್ನಂ ದದ್ಯಾನ್ಮಹಾದೇವಂ ಸಮುದ್ದಿಶ್ಯ ಸಮಾಹಿತಃ ॥೮॥

ಸೋಽಕ್ಷಯಂ ಫಲಮಾಪ್ನೋತಿ ಮಹಾದೇವಸಮೋ ಭವೇತ್ ।
ಯಸ್ತು ಕೃಷ್ಣಚತುರ್ದಶ್ಯಾಂ ಶ್ರದ್ಧಾಭಕ್ತಿಸಮನ್ವಿತಃ ॥೯॥

ಆರಾಧಯೇದ್ದ್ವಿಜಮುಖೇ ಮಹಾದೇವಂ ಸ ಮುಚ್ಯತೇ ।
ತ್ರಯೋದಶ್ಯಾಂ ತಥಾ ಸ್ನಾತ್ವಾ ಬ್ರಾಹ್ಮಣಂ ಭೋಜಯೇನ್ಮುದಾ ॥೧೦॥

ಬ್ರಹ್ಮಲೋಕಮವಾಪ್ನೋತಿ ಬ್ರಹ್ಮಣಾ ಸಹ ಮುಚ್ಯತೇ ।
ದ್ವಾದಶ್ಯಾಂ ತು ದ್ವಿಜಃ ಸ್ನಾತ್ವಾ ವಿಷ್ಣುಮುದ್ದಿಶ್ಯ ಭಕ್ತಿತಃ ॥೧೧॥

ಬ್ರಾಹ್ಮಣಾಯ ವಿನೀತಾಯ ದದ್ಯಾದನ್ನಂ ಸಮಾಹಿತಃ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಂ ಸ ಗಚ್ಛತಿ ॥೧೨॥

ಏಕಾದಶ್ಯಾಮುಪೋಷ್ಯೈವ ದ್ವಾದಶ್ಯಾಂ ಪಕ್ಷಯೋರಪಿ ।
ವಾಸುದೇವಂ ಸಮುದ್ದಿಶ್ಯ ಬ್ರಾಹ್ಮಣಾನ್ಭೋಜಯೇನ್ನರಃ ॥೧೩॥

ಯಾವ ಮನುಷ್ಯನು ಕೃಷ್ಣಚತುರ್ದಶಿಯ ದಿನ ಆಸಕ್ತಿಯಿಂದಲೂ, ಭಕ್ತಿಯಿಂದಲೂ ಕೂಡಿ, ಬ್ರಾಹ್ಮಣನಲ್ಲಿ ಶಿವನನ್ನು ಆವಾಹನೆಮಾಡಿ ಪೂಜೆಮಾಡುವನೋ ಅವನು ಮುಕ್ತಿಯನ್ನು ಹೊಂದುವನು. ||೯||

ತ್ರಯೋದಶಿಯ ದಿನ ಸ್ನಾನಮಾಡಿ ಪ್ರೀತಿಯಿಂದ ಬ್ರಾಹ್ಮಣನಿಗೆ ಭೋಜನವನ್ನು ಮಾಡಿಸಿದರೆ ಬ್ರಹ್ಮಲೋಕವನ್ನು ಪಡೆದು ಬ್ರಹ್ಮನೊಡನೆ ಮೋಕ್ಷವನ್ನು ಪಡೆಯುವನು. ||೧೦||

ಬ್ರಾಹ್ಮಣನಾದವನು ದ್ವಾದಶಿಯದಿನ ಸ್ನಾನಮಾಡಿ ವಿಷ್ಣುವನ್ನುದ್ದೇಶಿಸಿ ಭಕ್ತಿಯಿಂದ ಸಾತ್ವಿಕನಾದ ಬ್ರಾಹ್ಮಣನಿಗೆ ಅನ್ನದಾನಮಾಡಿದರೆ, ಅವನು ತನ್ನ ಸಕಲ ಪಾಪಗಳನ್ನೂ ಕಳೆದುಕೊಂಡು ವಿಷ್ಣುಲೋಕಕ್ಕೆ ಹೋಗುವನು. ||೧೧-೧೨||

ಎರಡು ಪಕ್ಷಗಳಲ್ಲಿಯೂ, ಏಕಾದಶಿಯ ದಿನ ಉಪವಾಸವನ್ನು ಮಾಡಿ ದ್ವಾದಶಿಯ ದಿನ ಕೃಷ್ಣನನ್ನುದ್ದೇಶಿಸಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿದವನು ತನ್ನ ಏಳು ಜನ್ಮಗಳ ಪಾಪಗಳನ್ನು ಆ ಕ್ಷಣದಲ್ಲಿಯೇ ಕಳೆದುಕೊಳ್ಳುವನು. ||೧೩||

ಸಪ್ತಜನ್ಮಕೃತಂ ಪಾಪಂ ತತ್ಕ್ಷಣಾದೇವ ನಶ್ಯತಿ ।
ದಶಮ್ಯಾಮಿಂದ್ರಮುದ್ದಿಶ್ಯ ಯೋ ದದ್ಯಾದ್ಬ್ರಾಹ್ಮಣೇ ಶುಚೌ ॥೧೪॥

ಅನ್ನಂ ವಾ ತಂಡುಲಂ ವಾಽಪಿ ಸ ದೇವೇಂದ್ರಮವಾಪ್ನುಯಾತ್ ।
ನವಮ್ಯಾಂ ಧರ್ಮರಾಜಾನ ಮುದ್ದಿಶ್ಯಬ್ರಾಹ್ಮಣೇ ಶುಚೌ ॥೧೫॥

ಅನ್ನಂ ದದ್ಯಾದ್ಯಥಾಶಕ್ತಿ ಧರ್ಮರಾಜಃ ಪ್ರಸೀದತಿ ।
ಅಷ್ಟಮ್ಯಾಂ ಶಂಕರಂ ಪೂಜ್ಯ ಬ್ರಾಹ್ಮಣಂ ಭೋಜಯೇನ್ನರಃ ॥೧೬॥

ಸರ್ವಪಾಪವಿನಿರ್ಮುಕ್ತಃ ಶಿವಸಾಯುಜ್ಯಮಾಪ್ನುಯಾತ್ ।
ಸಪ್ತಮ್ಯಾಂ ಚಂದ್ರಮುದ್ದಿಶ್ಯ ಬ್ರಾಹ್ಮಣಾನ್ಭೋಜಯೇದ್ದ್ವಿಜಃ ॥೧೭॥

ಚಂದ್ರಲೋಕಮವಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ।
ಷಷ್ಠ್ಯಾಮಾದಿತ್ಯಮುದ್ದಿಶ್ಯ ಬ್ರಾಹ್ಮಣಾನೇವ ಭೋಜಯೇತ್ ॥೧೮॥

ಸೂರ್ಯಲೋಕಮವಾಪ್ನೋತಿ ಸುಖಮಕ್ಷಯಮಶ್ನುತೇ ।
ಪಂಚಮ್ಯಾಂ ಪಾರ್ವತೀಂ ವಿಪ್ರಾನುದ್ದಿಶ್ಯಾನ್ನೇನ ಭೋಜಯೇತ್ ॥೧೯॥
ಸರ್ವಪಾಪವಿನಿರ್ಮುಕ್ತಃ ಸಮಗ್ರಜ್ಞಾನಮವಾಪ್ನುಯಾತ್ ।

ದಶಮಿಯ ದಿನ ದೇವೇಂದ್ರನನ್ನುದ್ದೇಶಿಸಿ ಪರಿಶುದ್ಧನಾದ ಬ್ರಾಹ್ಮಣನಿಗೆ ಅನ್ನವನ್ನಾಗಲಿ, ಅಕ್ಕಿಯನ್ನಾಗಲಿ ದಾನಮಾಡಿದವನು ದೇವೇಂದ್ರನ ಸಮೀಪಕ್ಕೆ ಹೋಗುವನು. ||೧೪||

ನವಮಿಯ ದಿನ ಧರ್ಮರಾಜನನ್ನುದ್ದೇಶಿಸಿ, ಪರಿಶುದ್ಧನಾದ ಬ್ರಾಹ್ಮಣನಿಗೆ ಶಕ್ತ್ಯನುಸಾರ ಅನ್ನದಾನಮಾಡಿದವನಿಗೆ ಧರ್ಮರಾಜನು ಪ್ರಸನ್ನನಾಗುವನು. ||೧೫||

ಅಷ್ಟಮಿಯ ದಿನ ಶಿವನನ್ನು ಪೂಜಿಸಿ ಬ್ರಾಹ್ಮಣಭೋಜನವನ್ನು ಮಾಡಿಸಿದ ಮನುಷ್ಯನು ಸಕಲ ಪಾಪಗಳನ್ನು ಕಳೆದುಕೊಂಡು ಶಿವನಲ್ಲಿ ಸಾಯುಜ್ಯಮುಕ್ತಿಯನ್ನು ಪಡೆಯುವನು. ||೧೬||

ಸಪ್ತಮಿಯ ದಿನ ಚಂದ್ರನನ್ನೂ, ಷಷ್ಠಿಯ ದಿನ ಸೂರ್ಯನನ್ನೂ ಉದ್ದೇಶಿಸಿ, ಬ್ರಾಹ್ಮಣಭೋಜನವನ್ನು ಮಾಡಿಸಿದವರು ಚಂದ್ರಸೂರ್ಯಲೋಕಗಳನ್ನು ಹೊಂದಿ ವಿಶೇಷವಾದ ಸುಖವನ್ನು ಅನುಭವಿಸುವರು. ||೧೭-೧೮||

ಪಂಚಮಿಯ ದಿನ ಪಾರ್ವತಿಯನ್ನುದ್ದೇಶಿಸಿ, ಬ್ರಾಹ್ಮಣಭೋಜನವನ್ನು

ಚತುರ್ಥ್ಯಾಂ ಬ್ರಾಹ್ಮಣಾನ್ ಶುದ್ಧಾನ್ ಲಕ್ಷ್ಮೀಮುದ್ದಿಶ್ಯ ಭೋಜಯೇತ್॥

ದಾರಿದ್ರ್ಯಂ ಸಕಲಂ ತ್ಯಕ್ತ್ವಾ ಮಹಾಲಕ್ಷ್ಮೀಮವಾಪ್ನುಯಾತ್ ।
ತೃತೀಯಾಯಾಂ ದ್ವಿಜಃ ಸ್ನಾತ್ವಾ ಬ್ರಾಹ್ಮಣಾನ್ಭೋಜಯೇತ್ಸಕೃತ್ ॥೨೧॥

ತಸ್ಯ ಬ್ರಹ್ಮಾ ಹರಿಶ್ಚಾಪಿ ಮಹಾದೇವೋ ವಶೋ ಭವೇತ್ ।
ದ್ವಿತೀಯಾಯಾಂ ವಿಶುದ್ಧಾಯಾಂ ಬ್ರಾಹ್ಮಣಾನ್ಭೋಜಯೇನ್ನರಃ ॥೨೨॥

ತಸ್ಯವಾಚಿ ಸದಾ ವೇದಾ ನೃತ್ಯಂತಿಸ್ಮ ಮಹಾಮುನೇ ।
ಸರ್ವಪಾಪವಿನಿರ್ಮುಕ್ತಃ ಸಮ್ಯಗ್ಜ್ಞಾನಮವಾಪ್ನುಯಾತ್ ॥೨೩॥

ಪ್ರಥಮಾಯಾಂ ಪವಿತ್ರಾಯಾಂ ಪರಬ್ರಹ್ಮಾರ್ಪಣಂ ದ್ವಿಜಃ ।
ಯೋ ಬ್ರಾಹ್ಮಣಮುಖೇ ಕುರ್ಯಾಚ್ಛ್ರದ್ಧಾಭಕ್ತಿಸಮನ್ವಿತಃ ॥೨೪॥
ಸ ಸರ್ವಸಮತಾಮೇತ್ಯ ಬ್ರಹ್ಮಾಪ್ಯೇತಿ ಸನಾತನಂ ।

ಮಾಡಿಸಿದವನು ಸಮಸ್ತ ಪಾಪಗಳನ್ನೂ ಕಳೆದುಕೊಂಡು ಉತ್ತಮವಾದ ಜ್ಞಾನವನ್ನು ಪಡೆಯುವನು. ॥೧೯॥

ಚತುರ್ಥಿಯ ದಿನ ಲಕ್ಷ್ಮಿಯನ್ನುದ್ದೇಶಿಸಿ, ಪರಿಶುದ್ಧನಾದ ಬ್ರಾಹ್ಮಣನಿಗೆ ಭೋಜನವನ್ನು ಮಾಡಿಸಿದವನು ತನ್ನ ಬಡತನವನ್ನು ಕಳೆದುಕೊಂಡು ಸಂಪತ್ತನ್ನು ಪಡೆಯುವನು. ॥೨೦॥

ತದಿಗೆಯ ದಿನ ಬ್ರಾಹ್ಮಣನು ಸ್ನಾನಮಾಡಿ, ಒಂದಾವೃತ್ತಿ ಬ್ರಾಹ್ಮಣಭೋಜನವನ್ನು ಮಾಡಿಸಿದರೆ, ಅವನಿಗೆ ಬ್ರಹ್ಮ ವಿಷ್ಣು ಮಹೇಶ್ವರರೂ ವಶರಾಗುವರು. ॥೨೧॥

ಪರಿಶುದ್ಧವಾದ ಬಿದಿಗೆಯ ದಿನ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿದ ಮನುಷ್ಯನ ಮಾತಿನಲ್ಲಿ ಯಾವಾಗಲೂ ವೇದಗಳು ಅರ್ಥಸಹಿತವಾಗಿ ನರ್ತನಮಾಡುತ್ತಿರುವುವು. ಇದರಿಂದ ಅವನು ಸಮಸ್ತ ಪಾಪಗಳನ್ನೂ ಕಳೆದುಕೊಂಡು, ಉತ್ತಮವಾದ ಜ್ಞಾನವನ್ನು ಪಡೆಯುವನು. ॥೨೨-೨೩॥

ಪರಿಶುದ್ಧವಾದ ಪಾಡ್ಯಮಿಯ ದಿನ ಯಾವ ಬ್ರಾಹ್ಮಣನು ಶ್ರದ್ಧಾಭಕ್ತಿಗಳಿಂದ ಕೂಡಿ, ಬ್ರಹ್ಮನ ಪ್ರೀತ್ಯರ್ಥವಾಗಿ ಬ್ರಾಹ್ಮಣನಿಗೆ ಅನ್ನದಾನಮಾಡುವನೋ ಅವನು ಸರ್ವಸಮಾನಭಾವವನ್ನು ಪಡೆದು ಪರಬ್ರಹ್ಮನಲ್ಲಿ ಐಕ್ಯವಾಗುವನು. ಸರ್ವಸಮಾನಭಾವದ ವಿಷಯದಲ್ಲಿ ಭಗವದ್ಗೀತೆಯಲ್ಲಿ—ಸುಹೃನ್ಮಿತ್ರಾರ್ಯುದಾಸೀನ ಮಧ್ಯಸ್ಥ

ಬ್ರಾಹ್ಮಣಾಯ ಮುದಾ ದದ್ಯಾಚ್ಛುಕ್ಲಾಂ ಗಾಮುತ್ತಮಾಂ ನರಃ॥೨೫॥

ಸರ್ವಪಾಪವಿನಿರ್ಮುಕ್ತಃ ಸಾಕ್ಷಾದ್ಬ್ರಹ್ಮ ಸ ಗಚ್ಛತಿ ।
ಯೋ ದದ್ಯಾತ್ಕನ್ಯಕಾಂ ಶುದ್ಧಾಂ ಬ್ರಾಹ್ಮಣಾಯ ವಿಭೂಷಿತಾಂ ।
ಸರ್ವಪಾಪವಿನಿರ್ಮುಕ್ತಃ ಶಿವಲೋಕಂ ಸ ಗಚ್ಛತಿ ॥೨೬॥

ಯೇನ ಕೇನ ಪ್ರಕಾರೇಣ ಯಂ ಯಂ ದೇವಂ ಸಮರ್ಚಯೇತ್ ।
ತಂ ತಂ ದೇವಂ ಸಮಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥೨೭॥

ಯಂ ಯಂ ಕಾಮಯತೇ ಲೋಕಂ ತಂ ತಮುದ್ದಿಶ್ಯ ಭಕ್ತಿಮಾನ್ ।
ಆತ್ಮಜ್ಞಂ ಹ್ಯರ್ಚಯೇನ್ನಿತ್ಯಮಾತ್ಮಜ್ಞಮಿತಿ ಹಿ ಶ್ರುತಿಃ ॥೨೮॥

ದ್ವೇಷ್ಯಬಂಧುಷು। ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ॥ ೬.೯. ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ಬ್ರಹ್ಮಣಿ ತೇ ಸ್ಥಿತಾಃ॥ ಭ. ಗೀತಾ. ೫.೧೯. ಎಂದು ಹೇಳಿರುವುದು. ॥೨೪॥

ಬ್ರಾಹ್ಮಣನಿಗೆ ಪ್ರೀತಿಯಿಂದ ಉತ್ತಮವಾದ ಬಿಳಿಯ ಹಸುವನ್ನು ದಾನ ಮಾಡಿದವನು ಎಲ್ಲ ಪಾಪಗಳ ಬಿಡುಗಡೆಯನ್ನು ಹೊಂದಿ ಸಾಕ್ಷಾತ್ ಪರಬ್ರಹ್ಮ ಸ್ವರೂಪನಾಗುವನು. ॥೨೫॥

ಪರಿಶುದ್ಧಳೂ, ಆಭರಣಗಳಿಂದ ಅಲಂಕೃತಳೂ ಆದ ಕನ್ಯೆಯನ್ನು ಬ್ರಾಹ್ಮಣನಿಗೆ ದಾನಮಾಡಿದವನು ತನ್ನ ಪಾಪಗಳನ್ನೆಲ್ಲವನ್ನೂ ಕಳೆದುಕೊಂಡು, ಶಿವಲೋಕಕ್ಕೆ ಹೋಗುವನು. ॥೨೬॥

ಯಾವುದಾದರೊಂದು ರೀತಿಯಿಂದ ಯಾವ ಯಾವ ದೇವತೆಯನ್ನು ಪೂಜೆ ಮಾಡಿದರೂ, ಆ ದೇವತೆಗಳನ್ನು ಪಡೆಯುವ ವಿಷಯದಲ್ಲಿ ಸಂದೇಹವಿಲ್ಲವು. ॥೨೭॥

ಭಕ್ತಿಯುಕ್ತನಾದ ಮನುಷ್ಯನು ಯಾವ ಯಾವ ಲೋಕವನ್ನು ಪಡೆಯಬೇಕೆಂಬ ಉದ್ದೇಶದಿಂದ ಪ್ರತಿದಿನವೂ ಆತ್ಮಜ್ಞಾನಸಂಪನ್ನನನ್ನು ಪೂಜಿಸುವನೋ ಅದರಿಂದ ಅದೇ ಫಲವನ್ನು ಪಡೆಯುವನೆಂದು ವೇದವು ಹೇಳುವುದು. ॥೨೮॥

ಕೃಮಿಕೀಟಪತಂಗೇಭ್ಯಃ ಶ್ರೇಷ್ಠಾಃ ಪಶ್ವಾದಯಸ್ತಥಾ ।
ಪಶ್ವಾದಿಭ್ಯೋ ನರಾಃ ಶ್ರೇಷ್ಠಾಃ ನರೇಭ್ಯೋ ಬ್ರಾಹ್ಮಣಾಸ್ತಥಾ ॥೨೯॥

ಬ್ರಾಹ್ಮಣೇಭ್ಯೋಽಥ ವಿದ್ವಾಂಸೋ ವಿದ್ವತ್ಸು ಕೃತಬುದ್ಧಯಃ ।
ಕೃತಬುದ್ಧಿಷು ಕರ್ತಾರಸ್ತೇಭ್ಯಃ ಸನ್ಯಾಸಿನೋ ವರಾಃ ॥೩೦॥

ತೇಷಾಂ ಕುಟೀಚಕಾಃ ಶ್ರೇಷ್ಠಾ ಬಹೂದಕಸಮಾಶ್ರಿತಾಃ ।
ಬಹೂದಕಾದ್ವರೋ ಹಂಸೋ ಹಂಸಾತ್ಪರಮಹಂಸಕಃ ॥೩೧॥

ಪರಹಂಸಾದಪಿ ಶ್ರೇಯಾನಾತ್ಮವಿನ್ನಾಸ್ತ್ಯತೋಽಧಿಕಃ ।
ತಸ್ಮಾದಾತ್ಮವಿದಃ ಪೂಜ್ಯಾಃ ಸರ್ವದಾ ಸರ್ವಜಂತುಭಿಃ ॥೩೨॥

ಬ್ರಹ್ಮವರ್ಚಸಕಾಮಸ್ತು ಬ್ರಹ್ಮಾಣಂ ಪೂಜಯೇನ್ನರಃ ।
ಆರೋಗ್ಯಕಾಮ ಆದಿತ್ಯಂ ಬಲಕಾಮಃ ಸಮೀರಣಂ ॥೩೩॥

ಕೀರ್ತಿಕಾಮೋಽನಲಂ ತದ್ವನ್ಮೇಧಾಕಾಮಃ ಸರಸ್ವತೀಂ ।
ಜ್ಞಾನಕಾಮೋ ಮಹಾದೇವಂ ಸಿದ್ಧಿಕಾಮೋ ವಿನಾಯಕಂ ॥೩೪॥

ಕೃಮಿಗಳು, ಕೀಟಗಳು, ಪಶುಗಳು, ಪಕ್ಷಿಗಳು, ಮನುಷ್ಯರು, ಬ್ರಾಹ್ಮಣರು, ವಿದ್ವಾಂಸರು, ನಿಶ್ಚಯಬುದ್ಧಿಯುಳ್ಳವರು, ಶಾಸ್ತ್ರನಿಯಮದಂತೆ ನಡೆಯುವವರು, ಸನ್ಯಾಸಿಗಳು, ಕುಟೀಚಕರು, ಬಹೂದಕರು, ಹಂಸರು, ಪರಮಹಂಸರು ಇವರುಗಳಲ್ಲಿ ಕ್ರಮವಾಗಿ ಒಬ್ಬರಿಗಿಂತ ಮತ್ತೊಬ್ಬರು ಶ್ರೇಷ್ಠರೆನಿಸುವರು. ಕೊನೆಯ ಪರಮಹಂಸ ಸನ್ಯಾಸಿಗಿಂತಲೂ ಆತ್ಮಜ್ಞಾನಿಯು ಶ್ರೇಷ್ಠನು. ಅವನಿಗಿಂತ ಅಧಿಕನಾದವನಿಲ್ಲ. ಆತ್ಮಜ್ಞಾನಿಯು ಯಾವಾಗಲೂ ಎಲ್ಲರಿಗೂ ಪೂಜ್ಯನಾಗುವನು. ॥ ೨೯-೩೦-೩೧-೩೨॥

ಬ್ರಹ್ಮಚರ್ಯನಿಯಮಾಪೇಕ್ಷೆಯುಳ್ಳವನು ಬ್ರಹ್ಮನನ್ನೂ, ಆರೋಗ್ಯಾಪೇಕ್ಷೆಯುಳ್ಳವನು ಸೂರ್ಯನನ್ನೂ, ಬಲದ ಆಸೆಯುಳ್ಳವನು ವಾಯುವನ್ನೂ, ಯಶಸ್ಸಿನಲ್ಲಿ ಅಪೇಕ್ಷೆಯುಳ್ಳವನು ಅಗ್ನಿಯನ್ನೂ, ಜ್ಞಾಪಕಶಕ್ತಿಯನ್ನಪೇಕ್ಷಿಸುವವನು ಸರಸ್ವತಿಯನ್ನೂ, ಜ್ಞಾನಾಪೇಕ್ಷೆಯುಳ್ಳವನು ಮಹಾದೇವನನ್ನೂ, ಕಾರ್ಯಸಿದ್ಧಿಯನ್ನು ಅಪೇಕ್ಷಿಸುವವನು ವಿನಾಯಕನನ್ನೂ, ಸುಖಾನುಭವದಲ್ಲಿ ಅಪೇಕ್ಷೆಯುಳ್ಳವನು ಚಂದ್ರನನ್ನೂ, ಮೋಕ್ಷಾಪೇಕ್ಷೆಯುಳ್ಳವನು ಶಂಕರನನ್ನೂ, ವೈರಾಗ್ಯಾಪೇಕ್ಷೆ

ಭೋಗಕಾಮಸ್ತು ಶಶಿನಂ ಮೋಕ್ಷಕಾಮಸ್ತು ಶಂಕರಂ ।
ವೈರಾಗ್ಯಕಾಮೋ ವಿದ್ವಾಂಸಂ ಪುಷ್ಟಿಕಾಮಃ ಶಚೀಪತಿಂ ॥೩೫॥

ವ್ರತಾನ್ಯಾಚರತಃ ಶ್ರದ್ಧಾಭಕ್ತಿಭ್ಯಾಂ ಸಂಯುತಃ ಶುಚಿಃ ।
ಕ್ಷೀಯಂತೇ ಪಾಪಕರ್ಮಾಣಿ ಕ್ಷೀಯಂತೇಽಸ್ಯೇತಿ ಹಿ ಶ್ರುತಿಃ ॥೩೬॥

ಜ್ಯೋತಿಷ್ಟೋಮಾದಿಕಂ ಕರ್ಮ ಯಃ ಕುರ್ಯಾದ್ವಿಧಿಪೂರ್ವಕಂ ।
ಸ ದೇವತ್ವಮವಾಪ್ನೋತಿ ನಾತ್ರಕಾರ್ಯಾ ವಿಚಾರಣಾ ॥೩೭॥

ಯಃ ಶ್ರದ್ಧಯಾ ಯುತೋ ನಿತ್ಯಂ ಶತರುದ್ರಿಯಮಭ್ಯಸೇತ್ ।
ಅಗ್ನಿದಾಹಾತ್ಸುರಾಪಾನಾದಕೃತ್ಯಾಚರಣಾತ್ತಥಾ ॥೩೮॥

ಮುಚ್ಯತೇ ಬ್ರಹ್ಮಹತ್ಯಾಯಾ ಇತಿ ಕೈವಲ್ಯಶಾಖಿನಃ ।
ಶತಶಾಖಾಗತಂ ಸಾಕ್ಷಾಚ್ಛತರುದ್ರಿಯಮುತ್ತಮಂ ॥೩೯॥

ಯುಳ್ಳವನು ವಿದ್ವಾಂಸನನ್ನೂ ಶರೀರಪುಷ್ಟಿಯ ಅಪೇಕ್ಷೆಯುಳ್ಳವನು ಇಂದ್ರನನ್ನೂ ಪೂಜಿಸಬೇಕು. ॥೩೩-೩೪-೩೫॥

ಪರಿಶುದ್ಧನಾಗಿ ಇಂದ್ರಿಯನಿಗ್ರಹದಿಂದ ಕೂಡಿ ಶ್ರದ್ಧಾಭಕ್ತಿಗಳಿಂದ ವ್ರತಗಳನ್ನು ಮಾಡತಕ್ಕವನ ಪಾಪಕರ್ಮಗಳು ನಾಶವಾಗುವುವೆಂದು ವೇದಗಳಲ್ಲಿ ಹೇಳಿರುವುದು. ॥೩೬॥

ಯಾವ ಬ್ರಾಹ್ಮಣನು ವೇದವಿಧಿಗನುಸಾರವಾಗಿ ಜ್ಯೋತಿಷ್ಟೋಮವೇ ಮೊದಲಾದ ಯಜ್ಞಗಳನ್ನು ಮಾಡುವನೋ ಅವನು ದೇವನಾಗುವುದರಲ್ಲಿ ಸಂದೇಹವಿಲ್ಲವು. ॥೩೭॥

ಯಾವ ಬ್ರಾಹ್ಮಣನು ಭಕ್ತಿಯಿಂದ ಪ್ರತಿದಿನವೂ ಶತರುದ್ರಿಯ ಮಂತ್ರವನ್ನು ಪಾರಾಯಣಮಾಡುವನೋ ಅವನು ಅಗ್ನಿಯಂತೆ ಪರಿಶುದ್ಧನಾಗುವನು. ಸುರಾಪಾನ, ಬ್ರಹ್ಮಹತ್ಯೆ ಅಕಾರ್ಯಾಚರಣೆ ಇವುಗಳ ಪಾಪಗಳನ್ನೂ, ಕಳೆದುಕೊಳ್ಳುವನು. "ಯಃ ಶತರುದ್ರೀಯ ಮಧೀತೆ ಸೋಽಗ್ನಿಪೂತೋ ಭವತಿ, ಸುರಾಪಾನಾತ್ಪೂತೋ ಭವತಿ, ಬ್ರಹ್ಮಹತ್ಯಾಯಾಃ ಪೂತೋ ಭವತಿ ಕೃತ್ಯಾಕೃತ್ಯಾತ್ಪೂತೋ ಭವತಿ" ಎಂದು ಕೈವಲ್ಯೋಪನಿಷತ್ತಿನಲ್ಲಿ ಹೇಳಿರುವುದು. ॥೩೮॥

ಯಜುರ್ವೇದದ ಶತಶಾಖೆಗಳಲ್ಲಿಯೂ ಇರತಕ್ಕ ಮಂತ್ರವಾದುದರಿಂದಲೂ, ರುದ್ರದೇವತಾಕಮಂತ್ರವಾದುದರಿಂದಲೂ, ಇದಕ್ಕೆ ಶತರುದ್ರೀಯವೆಂದೂ, ಅತ್ಯುತ್ತ

ತಸ್ಮಾತ್ತಜ್ಜಪಮಾತ್ರೇಣ ಸರ್ವಪಾಪಾತ್ಪ್ರಮುಚ್ಯತೇ ।
ಚಮಕಂ ಚ ಜಪೇದ್ವಿದ್ವಾನ್ಸರ್ವಪಾಪಪ್ರಶಾಂತಯೇ ॥೪೦॥

ಸಹಸ್ರಶೀರ್ಷಾಸೂಕ್ತಂ ಚ ಶಿವಸಂಕಲ್ಪಮೇವ ಚ ।
ಜಪೇತ್ಪಂಚಾಕ್ಷರಂ ಚೈವ ಸತಾರಂ ತಾರಣಕ್ಷಮಂ ॥೪೧॥

ತ್ರಿಃಸಪ್ತಕುಲಮುದ್ಧೃತ್ಯ ಶಿವಲೋಕೇ ಮಹೀಯತೇ ।
ತತ್ರ ನಾನಾವಿಧಾನ್ಭೋಗಾನ್ಭುಕ್ತ್ವಾ ಕರ್ಮಪರಿಕ್ಷಯಾತ್ ॥೪೨॥

ಭೂಲೋಕೇ ಜಾಯತೇ ಪುಣ್ಯಂ ಪಾಪಂ ವಾ ಕುರುತೇ ಪುನಃ ।
ಯಾವಜ್ಜ್ಞಾನೋದಯಂ ತಾವಜ್ಜಾಯತೇ ಮ್ರಿಯತೇಽಪಿ ಚ॥೪೩॥

ಅಸುಖೇ ಸುಖಮಾರೋಪ್ಯ ವಿಷಯೇಽಜ್ಞಾನತೋ ನರಃ ।
ಕರೋತಿ ಸಕಲಂ ಕರ್ಮ ತತ್ಫಲಂ ಚಾವಶೋಽಶ್ನುತೇ ॥೪೪॥

ಮವೆಂದೂ ಪ್ರಸಿದ್ಧಿಯಿರುವುದು. ಆದುದರಿಂದ ಈ ಮಂತ್ರವನ್ನು ಜಪಿಸುವುದರಿಂದ ಸಮಸ್ತ ಪಾಪಗಳೂ ಬಿಟ್ಟುಹೋಗುವುವು. ಮತ್ತು ಇವುಗಳ ಜತೆಯಲ್ಲಿ ವಿದ್ವಾಂಸನಾದವನು ಪಾಪನಾಶಕ್ಕಾಗಿ ಚಮಕವನ್ನೂ ಜಪಿಸಬೇಕು. ಇಲ್ಲಿ ಶತವೆಂಬ ಶಬ್ದವು ಸಾವಿರ, ಲೆಕ್ಕವಿಲ್ಲದಷ್ಟು, ಎಂಬ ಅರ್ಥವನ್ನು ಕೊಡುವುದು. "ಸಹಸ್ರಾಣಿ ಸಹಸ್ರಶೋ ಯೇ ರುದ್ರಾ ಅಧಿಭೂಮ್ಯಾಂ." ಎಂದು ವೇದದಲ್ಲಿ ರುದ್ರಾಧ್ಯಾಯದಲ್ಲಿ ಹೇಳಿರುವುದು. ॥೩೯-೪೦॥

ಪುರುಷಸೂಕ್ತ, ಶಿವಸಂಕಲ್ಪ, ಶಿವಪಂಚಾಕ್ಷರ ಈ ಮಂತ್ರಗಳು ಸಂಸಾರ ದುಃಖರೂಪವಾದ ಸಮುದ್ರವನ್ನು ದಾಟಿಸತಕ್ಕವುಗಳಾಗಿರುವುದರಿಂದ, ಪ್ರತಿದಿನವೂ, ಪ್ರಣವಸಹಿತವಾದ ಈ ಮಂತ್ರಗಳನ್ನು ಪಾರಾಯಣಮಾಡಿದರೆ, ಆ ಪಾರಾಯಣ ಮಾಡಿದ ಮನುಷ್ಯನು ತನ್ನ ಕುಲದ ಇಪ್ಪತ್ತೊಂದು ಜನ ಪಿತೃಗಳನ್ನು ನರಕದಿಂದ ಉದ್ಧಾರಮಾಡಿ ತಾನೂ ಶಿವಲೋಕದಲ್ಲಿ ಸುಖವನ್ನನುಭವಿಸುವನು. ॥೪೧॥

ಆ ಶಿವಲೋಕದಲ್ಲಿ ಅನೇಕ ಬಗೆಯಾದ ಸುಖಗಳನ್ನನುಭವಿಸಿ, ಆ ಕರ್ಮ ಫಲವು ಮುಗಿಯುತ್ತಲು, ಮತ್ತೆ ಭೂಲೋಕದಲ್ಲಿ ಹುಟ್ಟಿ, ಪುಣ್ಯಪಾಪಕರ್ಮಗಳನ್ನು ಮಾಡುವನು. ಹೀಗೆಯೇ ಜ್ಞಾನೋತ್ಪತ್ತಿಯಾಗುವವರೆಗೂ ಪುನರ್ಜನ್ಮವನ್ನು ಅನುಭವಿಸುತ್ತಿರುವನು. ॥೪೨-೪೩॥

ಅಹೋ ಮಾಯಾವೃತೋ ಲೋಕಃ ಸ್ವಾತ್ಮಾನಂದಮಹೋದಧಿಂ ।
ವಿಹಾಯ ವಿವಶಃ ಕ್ಷುದ್ರೇ ರಮತೇ ಕಿಂ ವದಾಮಿ ತಂ ॥೪೫॥

ತಸ್ಮಾನ್ಮಾಯಾಮಯಂ ಭೋಗಮಸಾರಮಖಿಲಂ ನರಃ ।
ವಿಹಾಯ ವಿಮಲಂ ನಿತ್ಯಮಾತ್ಮಾನಂದಂ ಸಮಾಶ್ರಯೇತ್ ॥೪೬॥

ಸರ್ವಂ ಸಂಗ್ರಹರೂಪೇಣ ಸಸ್ನೇಹಂ ಸಮ್ಯಗೀರಿತಂ ।
ತಸ್ಮಾತ್ತ್ವಂ ಸಕಲಂ ತ್ಯಕ್ತ್ವಾ ಸ್ವಾತ್ಮಾನಂದೇ ಕುರು ಶ್ರಮಂ ॥೪೭॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಜ್ಞಾನಯೋಗಖಂಡೇ ದಾನಧರ್ಮಫಲಕಥನಂ ನಾಮ ಅಷ್ಟಮೋಽಧ್ಯಾಯಃ

ಮನುಷ್ಯನು ಅಜ್ಞಾನದಿಂದ, ಸುಖವಲ್ಲದ ವಿಷಯಗಳಲ್ಲಿ ಸುಖಭ್ರಾಂತಿಯನ್ನು ಕಲ್ಪಿಸಿಕೊಂಡು, ಸಮಸ್ತ ಕರ್ಮವನ್ನೂ ಮಾಡುವನು. ಕರ್ಮಗಳನ್ನು ಮಾಡಿದ ಮೇಲೆ ಅದರ ಫಲಗಳನ್ನೂ ತನ್ನ ಸ್ವಾತಂತ್ರ್ಯವಿಲ್ಲದೇ ಅನುಭವಿಸುವನು. ॥೪೪॥

ಅಯ್ಯೋ! ಜನರು ಮಾಯೆಯಿಂದ ಮೋಹಿತರಾಗಿ ಆತ್ಮಾನಂದವೆಂಬ ದೊಡ್ಡ ಸಮುದ್ರವನ್ನು ಬಿಟ್ಟು ಪರಾಧೀನರಾಗಿ ನೀಚವಾದ ವಿಷಯಗಳಲ್ಲಿ ಸಂತೋಷ ಪಡುತ್ತಿರುವರಲ್ಲ! ಅದನ್ನು ಏನೆಂದು ಹೇಳಲಿ? ಆದುದರಿಂದ ಮನುಷ್ಯನು ಮಾಯಾಸ್ವರೂಪವೂ, ಸಾರವಿಲ್ಲದುದೂ ಆದ ಸಕಲ ವಿಷಯಸುಖಗಳನ್ನೂ ಬಿಟ್ಟು ಪರಿಶುದ್ಧವೂ, ಶಾಂತವೂ ಆದ ಆತ್ಮಾನಂದವನ್ನು ಹೊಂದಬೇಕು. ॥೪೫-೪೬॥

ಎಲೈ ಬೃಹಸ್ಪತಿಯೇ, ನಿನ್ನಲ್ಲಿ ಸ್ನೇಹದಿಂದ ಕೂಡಿ ಎಲ್ಲವನ್ನೂ ಸಂಗ್ರಹಿಸಿ ಚನ್ನಾಗಿ ವಿವರಿಸಿರುವೆನು. ಆದುದರಿಂದ ನೀನು ಸಕಲ ವಿಷಯಸುಖಗಳನ್ನು ಬಿಟ್ಟು ಆತ್ಮಾನಂದವನ್ನು ಸಂಪಾದಿಸುವ ವಿಷಯದಲ್ಲಿ ಪ್ರಯತ್ನವನ್ನು ಮಾಡು. ॥೪೭॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ ದಾನಧರ್ಮಫಲವೆಂಬ ಎಂಟನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಜ್ಞಾನಯೋಗಖಂಡಂ

|| ನವಮೋಽಧ್ಯಾಯಃ ||

ಒಂಬತ್ತನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಪಾಪಕರ್ಮಫಲಂ ಮುನೇ ।
ಖರೋಷ್ಟ್ರಸೂಕರಾಜಾವಿಗಜಾಶ್ವಮೃಗಪಕ್ಷಿಣಾಂ ॥೧॥

ಚಂಡಾಲಪುಲ್ಕಸತ್ವಂ ಚ ಪ್ರಾಪ್ನೋತಿ ಬ್ರಹ್ಮಹಾ ಕ್ರಮಾತ್ ।
ದಸ್ಯೂನಾಂ ವಿಡ್ಭುಜಾಂ ಯೋನಿಂ ಪಕ್ಷಿಣಾಂ ಚ ತಥೈವ ಚ ॥೨॥
ಕ್ರಿಮಿಕೀಟಪತಂಗಾನಾಂ ಸುರಾಪಃ ಪ್ರಾಪ್ನುಯಾದ್ದ್ವಿಜಃ ।

ಈಶ್ವರನು ಹೇಳಿದನು—ಸ್ವರ್ಗಮೋಕ್ಷಗಳಿಗೆ ಕಾರಣವಾದ ವಿಹಿತಕರ್ಮಗಳಿಗೆ ಧರ್ಮಸ್ವರೂಪಜ್ಞಾನವೇ ಕಾರಣವೆಂದು ಹೇಳಿ ಆ ಸ್ವರ್ಗಮೋಕ್ಷಗಳ ನಾಶಕ್ಕೆ ಮತ್ತು ನರಕಕ್ಕೆ ನಿಷಿದ್ಧಕರ್ಮಗಳೇ ಕಾರಣವೆಂದು ತಿಳಿಸಿ ಅವುಗಳನ್ನು ಬಿಡಬೇಕೆಂದು ಬೋಧಿಸಲು ಪಾಪಕರ್ಮಗಳನ್ನು ಹೇಳುವುದಕ್ಕಾಗಿ ಈ ಅಧ್ಯಾಯವು ಪ್ರಾರಂಭವಾಗಿರುವುದು. ಈಶ್ವರನು ಬೃಹಸ್ಪತಿಯನ್ನು ಕುರಿತು, ಎಲೈ ಬೃಹಸ್ಪತಿಯೇ, ಬ್ರಹ್ಮಹತ್ಯವನ್ನು ಮಾಡಿದವನು ಅನೇಕ ನರಕದುಃಖಗಳನ್ನನುಭವಿಸಿ ಕತ್ತೆ, ಒಂಟೆ, ಹಂದಿ, ಆಡು, ಕುರಿ, ಆನೆ, ಕುದುರೆ, ಮೃಗಗಳು, ಹಕ್ಕಿಗಳು, ಚಾಂಡಾಲ, ಪುಲ್ಕಸ ಈ ಜನ್ಮಗಳನ್ನು ಕ್ರಮವಾಗಿ ಪಡೆಯುವನು. ||೧||

ಹೆಂಡವನ್ನು ಕುಡಿದ ಬ್ರಾಹ್ಮಣನು, ಕಳ್ಳರು, ಮಲಭಕ್ಷಕರು, ಪಕ್ಷಿಗಳು, ಕ್ರಿಮಿಗಳು, ಕೀಟಗಳು, ಚಿಟ್ಟೆಹುಳಗಳು ಇವುಗಳ ಜನ್ಮವನ್ನು ಪಡೆಯುವನು. ||೨||

ರಾಕ್ಷಸಾನಾಂ ಪಿಶಾಚಾನಾಂ ಚೋರೋ ಯಾತಿ ಸಹಸ್ರಶಃ ॥೩॥

ಕ್ರವ್ಯಾದದಂಷ್ಟ್ರಿಣಾಂ ಯೋನಿಂ ತೃಣಾದೀನಾಂ ತಥೈವ ಚ ।
ಕ್ರೂರಕರ್ಮರತಾನಾಂ ಚ ಪ್ರಾಪ್ನೋತಿ ಗುರುತಲ್ಪಗಃ ॥೪॥

ಬ್ರಾಹ್ಮಣಸ್ಯ ಧನಂ ಕ್ಷೇತ್ರಮುಪಹೃತ್ಯ ನರಾಧಮಃ ।
ಬ್ರಹ್ಮರಾಕ್ಷಸತಾಂ ಯಾತಿ ಶತಶೋಽಥ ಸಹಸ್ರಶಃ ॥೫॥

ಧಾನ್ಯಚೋರೋ ಭವೇದಾಖುರ್ಜಲಂ ಹೃತ್ವಾ ಪ್ಲವೋ ಭವೇತ್ ।
ಕಾಂಸ್ಯಂ ಹೃತ್ವಾ ಭವೇದ್ಧಂಸಃ ಶ್ವಾ ರಸಂ ನಕುಲೋ ಘೃತಂ ॥೬॥

ಪಯಃ ಕಾಕೋ ಭವೇನ್ಮಾಂಸಂ ಹೃತ್ವಾ ಗೃಧ್ರೋ ಭವೇತ್ತಥಾ ।
ಚಕ್ರವಾಕಸ್ತು ಲವಣಂ ಬಕಸ್ತೈಲಾಪಹಾರಕಃ ॥೭॥

ಕೌಶೇಯಂ ತಿತ್ತಿರಿಃ ಕ್ಷೌಮಂ ಹೃತ್ವಾ ದರ್ದುರಸಂಜ್ಞಕಃ ।
ಪತ್ರಶಾಕಾಪಹಾರೇಣ ಬರ್ಹಿಣಃ ಸ್ಯುರ್ನರಾಧಮಾಃ ॥೮॥

ಕಳ್ಳನು ಸಾವಿರಾರು ರಾಕ್ಷಸರ ಮತ್ತು ಪಿಶಾಚಿಗಳ ಜನ್ಮವನ್ನು ಪಡೆಯುವನು. ಗುರುಪತ್ನೀಗಮನ ಮಾಡಿದವನು, ಮಾಂಸವನ್ನು ತಿನ್ನುವ ಹಲ್ಲುಗಳುಳ್ಳ ಕ್ರೂರಮೃಗಗಳು, ಹುಲ್ಲನ್ನು ತಿನ್ನುವ ಕ್ರೂರಮೃಗಗಳು, ಕ್ರೂರಕಾರ್ಯಗಳನ್ನು ಮಾಡುವ ಮನುಜರು ಇವರುಗಳ ಜನ್ಮವನ್ನು ಪಡೆಯುವನು. ||೩-೪||

ಬ್ರಾಹ್ಮಣನ ಧನವನ್ನೂ, ಭೂಮಿಯನ್ನೂ ಅಪಹರಿಸಿದ ನೀಚಮನುಜನು ಸಾವಿರಾರು ಬ್ರಹ್ಮರಾಕ್ಷಸಜನ್ಮಗಳನ್ನು ಪಡೆಯುವನು. ||೫||

ಈ ಮುಂದೆ ಹೇಳುವ ಪದಾರ್ಥಗಳನ್ನು ಒಂದೊಂದನ್ನು ಕದ್ದರೇ, ಅದರ ಫಲವಾಗಿ, ಅದರ ಮುಂದೆ ಹೇಳುವ ಫಲಗಳು ಬರುವುವು. ಅವಾವುವೆಂದರೆ— ಧಾನ್ಯಗಳಿಗೆ ಇಲಿ, ನೀರಿಗೆ ಕಪ್ಪೆ, ಕಂಚಿನ ಪಾತ್ರೆಗೆ ಹಂಸಪಕ್ಷಿ, ಷಡ್ರಸಗಳಿಗೆ ನಾಯಿ, ತುಪ್ಪಕ್ಕೆ ಮುಂಗಸಿ, ಹಾಲಿಗೆ ಕಾಗೆ, ಮಾಂಸಕ್ಕೆ ಹದ್ದು, ಉಪ್ಪಿಗೆ ಚಕ್ರವಾಕ ಪಕ್ಷಿ, ಎಣ್ಣೆಗೆ ಬಕಪಕ್ಷಿ, ದರ್ಭೆಯಲ್ಲಿ ಮಾಡಿದ ಪದಾರ್ಥಗಳಿಗೆ ತಿತ್ತಿರಿಪಕ್ಷಿ, ರೇಷ್ಮೆಯ ವಸ್ತ್ರಗಳಿಗೆ ದೊಡ್ಡ ಕಪ್ಪೆ, ಎಲೆ ಕಾಯಿಪಲ್ಯಗಳಿಗೆ ನವಿಲು, ಅನ್ನಕ್ಕೆ ನಾಯಿ, ಹೂವಿಗೆ ಕಪಿ, ವಾಹನಗಳಿಗೆ ಒಂಟೆ, ಗೋವುಗಳಿಗೆ ಆನೆ, ಈ ರೀತಿಯಲ್ಲಿ ಒಂದೊಂದು ವಸ್ತುವನ್ನು ಕದ್ದರೆ ನರಕದುಃಖವನ್ನನುಭವಿಸಿದ ಮೇಲೆ ಆ ವಸ್ತುಗಳಿಗೆ ಹೇಳಿರುವಂತೆ ಜನ್ಮಗಳನ್ನು ಅನುಭವಿಸಬೇಕಾಗುವುದು. ||೬-೭-೮-೯||

ಶ್ವಾಽನ್ನಂ ಹೃತ್ವಾ ಭವೇತ್ಪುಷ್ಟಂ ಮರ್ಕಟಃ ಸ್ಯಾತ್ತಥೈವ ಚ ।
ಯಾನಾಪಹರಣಾದುಷ್ಟ್ರಃ ಪಶುಂ ಹೃತ್ವಾ ಭವೇದ್ಗಜಃ ॥೯॥

ಶವಭಕ್ಷಣತೋ(ಕೋ)ರಾಜಾ ವೈಶ್ಯಃ ಪೂಯಾಶನೋ ಭವೇತ್ ।
ಶ್ಯೇನಾಶನೋ ಭವೇಚ್ಛೂದ್ರೋ ಜಲೂಕೋ ರಕ್ತಪೋ ಭವೇತ್ ॥೧೦॥

ನೈತಾವತಾಽಲಂ ವಿಪ್ರೇಂದ್ರ ಪಾಪಕರ್ಮಫಲೋದಯಂ ।
ನರಕೇ ವರ್ತನಂ ಚಾಸ್ತಿ ಮಹಾಘೋರೇಽತಿದಾರುಣೇ ॥೧೧॥

ಹಸ್ತದ್ವಂದ್ವಂ ದೃಢಂ ಬದ್ಧ್ವಾ ತತಃ ಶೃಂಖಲಯಾ ತಥಾ ।
ಕ್ಷಿಪ್ಯತೇ ದೀಪ್ತವಹ್ನೌ ಚ ಬ್ರಹ್ಮಹಾಽಽಚಂದ್ರತಾರಕಂ ॥೧೨॥

ಅನ್ಯಾಯವನ್ನು ಮಾಡುವ ಕ್ರೂರಿಯಾದ ರಾಜನನ್ನು ಶವಭಕ್ಷಣಕನೆನ್ನುವರು. ಇಂತಹ ರಾಜನು ನರಕದುಃಖವನ್ನು ಅನುಭವಿಸಿದ ಮೇಲೆ, ಶರೀರದಲ್ಲಿಯೇ ಹುಟ್ಟಿದ ಕೀವನ್ನು ತಿನ್ನುವ ಕ್ರಿಮಿಯಾಗಿ ಹುಟ್ಟುವನು. ಅನ್ಯಾಯವನ್ನು ಮಾಡುವ ದುಷ್ಟ ವೈಶ್ಯನೂ ಹೀಗೆಯೇ ಹುಟ್ಟುವನು. ಗಿಡುಗವೆಂಬ ಹಕ್ಕಿಯನ್ನು ತಿನ್ನುವ ಮತ್ತು ರಕ್ತಪಾನಮಾಡುವ ಶೂದ್ರನು ಜಿಗಣೆಯ ಹುಳುವಾಗಿ ಹುಟ್ಟುವನು. ಶವಭಕ್ಷಣಕರಾಜನಿಂದ ಪ್ರತಿಗ್ರಹಣವನ್ನು ಮಾಡಕೂಡದೆಂಬ ವಿಷಯದಲ್ಲಿ ಅಂತಹ ರಾಜನು ಎಷ್ಟು ದುಷ್ಟನೆಂಬ ಅಳತೆಯನ್ನು ಧರ್ಮಶಾಸ್ತ್ರವು ಹೇಳುವುದು—ದಶಸೂನಿಸಮಶ್ಚಕ್ರೀ ದಶಚಕ್ರಿಸಮೋ ಧ್ವಜೀ ॥ ದಶಧ್ವಜಿಸಮಾ ವೇಶ್ಯಾ ದಶವೇಶ್ಯಾಸಮೋ ನೃಪಃ ॥ ಎಂದರೆ, ಪ್ರಾಣಿಹಿಂಸೆಯನ್ನು ಮಾಡುವ ಮನುಷ್ಯನನ್ನು ಸೂನಿ ಎಂದು ಹೇಳುವರು. ಹತ್ತು ಜನ ಸೂನಿಗಳಿಗೆ ಒಬ್ಬ ಚಕ್ರಿಯೂ, ಹತ್ತು ಜನ ಚಕ್ರಿಗಳಿಗೆ ಒಬ್ಬ ಧ್ವಜಿಯೂ, ಹತ್ತು ಜನ ಧ್ವಜಿಗಳಿಗೆ ಒಬ್ಬ ವೇಶ್ಯೆಯೂ, ಹತ್ತು ವೇಶ್ಯಯರಿಗೆ ಒಬ್ಬ ದುಷ್ಟರಾಜನೂ ಸಮಾನರಾಗುವರು. ನ್ಯಾಯಮೂರ್ತಿಯಾದ ರಾಜನು ಶ್ರೇಷ್ಠನೂ, ಹಾಗೆಯೇ ವೈಶ್ಯನು ತುಲಾಧಾರನಂತೆಯೂ, ಶೂದ್ರನು ಸಾಧುಶಬ್ದವಾಚ್ಯನೂ ಆಗುವರು. ॥೧೦॥

ಎಲೈ ಬ್ರಾಹ್ಮಣಶ್ರೇಷ್ಠನೇ, ಪಾಪಕರ್ಮಗಳಿಗೆ ಇಷ್ಟೇ ಫಲವಲ್ಲ, ಮಹಾಕ್ರೂರವೂ, ಭಯಂಕರವೂ ಆದ ನರಕವಾಸವೂ ಇರುವುದು. ॥೧೧॥

ನರಕದಲ್ಲಿ ಯಮದೂತರು, ಬ್ರಹ್ಮಹತ್ಯೆಮಾಡಿದವನ ಕೈಗಳಿಗೆ ಬೇಡಿಯನ್ನು ಹಾಕಿ, ಅವನನ್ನು ಉರಿಯುತ್ತಿರುವ ಬೆಂಕಿಯೊಳಗೆ ಹಾಕುವರು. ಪ್ರಾಣಿಹಿಂಸೆ

ಅತಿತಪ್ತಾಯಸೈರ್ದಂಡೈಃ ಪೀಡ್ಯತೇ ಯಮಕಿಂಕರೈಃ ।
ಪ್ರಾಣಿಹಿಂಸಾಪರೋ ಗಾಢಂ ಕಲ್ಪಕೋಟಿಶತಂ ಮುನೇ ॥೧೩॥

ತಪ್ತತೈಲಕಟಾಹೇಷು ಬದ್ಧ್ವಾ ಹಸ್ತೌ ಪದದ್ವಯಂ ।
ಕ್ಷಿಪ್ಯತೇ ಯಮದೂತೇನ ತೈಲಚೌರೋ ಮಹಾಮುನೇ ॥೧೪॥

ತಪ್ತತಾಮ್ರಕಟಾಹೇಷು ಕ್ಷಿಪ್ಯ ಮಿಥ್ಯಾಭಿಶಂಸಿನಂ ।
ಜಿಹ್ವಾಮುತ್ಪಾಟಯಂತ್ಯಾಶು ಬಹುಶೋ ಯಮಕಿಂಕರಾಃ ॥೧೫॥

ತಪ್ತತಾಮ್ರಜಲಂ ತೀಕ್ಷ್ಣೈಃ ಪಿಬೇತ್ಯುಕ್ತ್ವಾಽಯಸಾಯುಧೈಃ ।
ಛಿದ್ಯತೇ ಯಮದೂತೈಸ್ತು ಸುರಾಪಾನರತೋ ನರಃ ॥೧೬॥

ಛಿತ್ವಾ ಛಿತ್ವಾ ಪುನರ್ದಗ್ಧ್ವಾ ಪಿಂಡೀಕೃತ್ಯ ಪುನಸ್ತಥಾ ।
ಕ್ಷಿಪ್ಯತೇ ಪೂಯಪೂರ್ಣೇಽಸ್ಮಿನ್ಕಟಾಹೇ ಗುರುತಲ್ಪಗಃ ॥೧೭॥

ಮಾತರಂ ಪಿತರಂ ಜ್ಯೇಷ್ಠಂ ಗುರುಮಧ್ಯಾತ್ಮವೇದಿನಂ ।
ಮಹಾದೇವಂ ತಥಾ ವೇದಂ ವಿಷ್ಣುಂ ಬ್ರಹ್ಮಾಣಮೇವ ಚ ॥೧೮॥

ಮಾಡಿದವನನ್ನು ಕಾಯಿಸಿದ ಕಬ್ಬಿಣದ ಕೋಲಿನಿಂದ ನೂರು ಕಲ್ಪಗಳ ವರೆಗೆ ತಿವಿಯುತ್ತಾ ಹಿಂಸಿಸುತ್ತಿರುವರು. ॥೧೨-೧೩॥

ಎಣ್ಣೆ ಕದ್ದವನನ್ನು ಕೈಕಾಲುಗಳನ್ನು ಕಟ್ಟಿ ಕಾಯುತ್ತಿರುವ ಎಣ್ಣೆಯ ಕೊಪ್ಪರಿಗೆಯಲ್ಲಿ ಹಾಕುವರು. ॥೧೪॥

ಇಲ್ಲದ ದೋಷವನ್ನಾರೋಪಿಸುವವನ ನಾಲಿಗೆಯನ್ನು ಕಿತ್ತು, ಕಾಯುತ್ತಿರುವ ತಾಮ್ರದ ಪಾತ್ರೆಯೊಳಕ್ಕೆ ಅವನನ್ನು ಅನೇಕ ಬಾರಿ ಹಾಕುವರು. ಹೆಂಡವನ್ನು ಕುಡಿದವನನ್ನು ಕಾಯ್ದು ಕರಗಿ ನೀರಾದ ತಾಮ್ರದ ರಸವನ್ನು ಕುಡಿ ಎಂದು ಕಬ್ಬಿಣದ ಆಯುಧದಿಂದ ಬಡಿಯುವರು. ॥೧೫-೧೬॥

ಗುರುಪತ್ನೀಗಮನಮಾಡಿದವನನ್ನು ಕತ್ತರಿಸಿ, ಸುಟ್ಟು ಉಂಡೆಯನ್ನು ಮಾಡಿ, ಕೀವಿನಿಂದ ತುಂಬಿದ ಕೊಪ್ಪರಿಗೆಯೊಳಗೆ ಹಾಕುವರು. ॥೧೭॥

ತಾಯಿ, ತಂದೆ, ಅಣ್ಣ, ಆತ್ಮಜ್ಞಾನಿಯಾದ ಗುರು, ಪರಮೇಶ್ವರ, ದೇವತೆಗಳು, ವಿಷ್ಣು, ಬ್ರಹ್ಮ, ಸೂರ್ಯ, ಚಂದ್ರ, ಅಗ್ನಿ, ವಾಯು, ಇವರುಗಳನ್ನು

ಆದಿತ್ಯಂ ಚಂದ್ರಮಗ್ನಿಂ ಚ ವಾಯುಂ ನಿಂದಂತಿ ಯೇ ನರಾಃ ।
ಕಲ್ಪಕೋಟಿಶತಂ ದಿವ್ಯಂ ಪಚ್ಯಂತೇ ನರಕಾಲಯೇ ॥೧೯॥

ಯತಿಹಸ್ತೇ ಜಲಂ ಚಾನ್ನಂ ನ ದತ್ತಂ ಯೈರ್ನರಾಧಮೈಃ ।
ಇಕ್ಷುವತ್ಸಂಪ್ರಪೀಡ್ಯಂತೇ ಮುದ್ಗರೈರ್ಮುನಿಸತ್ತಮಾಃ ॥೨೦॥

ಪಾದೇ ಚಾಸ್ಯೇ ತಥಾ ಪಾರ್ಶ್ವೇ ನಾಭೌ ಶಿಶ್ನೇ ಗುದೇಽಕ್ಷಿಣಿ ।
ನಿಖನ್ಯಂತೇ ಮಹಾತಪ್ತೈಃ ಶಂಕುಭಿಶ್ಚಾರ್ಥಹಾರಿಣಃ ॥೨೧॥

ಅಯಸಾ ನಿರ್ಮಿತಾಂ ಕಾಂತಾಂ ಸುತಪ್ತಾಂ ಝರ್ಝರೀಕೃತಾಂ ।
ಗಾಢಮಾಲಿಂಗ್ಯತೇ ಮರ್ತ್ಯಃ ಪರದಾರಪರಿಗ್ರಹಾತ್ ॥೨೨॥

ದುಶ್ಚಾರಿಣ್ಯಃ ಸ್ತ್ರಿಯಶ್ಚಾಪಿ ಸುತಪ್ತಂ ಪುರುಷಂ ತಥಾ ।
ಶ್ರೌತಸ್ಮಾರ್ತವಿಹೀನಾ ಯೇ ನಿಷಿದ್ಧಾಚರಣೇ ರತಾಃ ॥೨೩॥
ಪಚ್ಯಂತೇ ನರಕೇ ತೀವ್ರೇ ಕಲ್ಪಕೋಟಿಶತಂ ಸದಾ ।

ನಿಂದಿಸುವವರನ್ನು ದೇವಮಾನದ ಕೋಟಿಕಲ್ಪಗಳ ವರೆಗೆ ನರಕದಲ್ಲಿಟ್ಟು ಬಾಧೆಪಡಿಸುವರು. ||೧೮-೧೯||

ಯಾವ ನೀಚಮನುಜನು ಸನ್ಯಾಸಿಗಳಿಗೆ ನೀರನ್ನೂ, ಅನ್ನವನ್ನೂ ಕೊಡುವುದಿಲ್ಲವೋ, ಅವನನ್ನು ಮುದ್ಗರವೆಂಬ ಆಯುಧದಿಂದ ಕುಟ್ಟಿ ಕಬ್ಬಿನಂತೆ ಹಿಂಡುವರು. ||೨೦||

ಹಣವನ್ನು ಕದ್ದವರ ಕಾಲು, ಬಾಯಿ, ಪಕ್ಕೆಗಳು, ಹೊಕ್ಕುಳು, ಶಿಶ್ನ, ಗುದ, ಕಣ್ಣುಗಳು, ಈ ಅಂಗಗಳಲ್ಲಿ ಕಾಯಿಸಿದ ಮೊಳೆಗಳನ್ನು ಬಡಿಯುವರು. ಪರಸ್ತ್ರೀಗಮನಮಾಡಿದವರನ್ನು ಕಾಯ್ದು ಉರಿಯನ್ನು ಉಗುಳುತ್ತಿರುವ ಕಬ್ಬಿಣದ ಹೆಣ್ಣು ಬೊಂಬೆಯನ್ನು ಗಟ್ಟಿಯಾಗಿ ತಬ್ಬಿಕೊಳ್ಳುವಂತೆ ಮಾಡುವರು. ||೨೧-೨೨||

ಇಂತಹ ಹೆಂಗುಸರಿಗೂ ಹೀಗೆಯೇ ಶಿಕ್ಷೆಯನ್ನು ಮಾಡುವರು. ವೇದೋಕ್ತವೂ, ಧರ್ಮಶಾಸ್ತ್ರೋಕ್ತವೂ ಆದ ಕರ್ಮಗಳನ್ನು ಬಿಟ್ಟು ನಿಂದ್ಯವಾದ ಕರ್ಮಗಳನ್ನು ಮಾಡುವವರನ್ನು ಕ್ರೂರವಾದ ನರಕದಲ್ಲಿ ನೂರುಕೋಟಿಕಲ್ಪಗಳವರೆಗೆ ಯಾವಾಗಲೂ ದುಃಖವನ್ನು ಅನುಭವಿಸುವಂತೆ ಮಾಡುವರು. ||೨೩||

ಯೇ ಶಿವಾಯತನಾರಾಮವಾಪೀಕೂಪಮಠಾದಿಕಂ ॥೨೪॥

ಉಪದ್ರವಂತಿ ಪಾಪಿಷ್ಠಾ ನೃಪಾಸ್ತತ್ರ ರಮಂತಿ ಚ ।
ವ್ಯಾಯಾಮೋದ್ವರ್ತನಾಭ್ಯಂಗಸ್ನಾನಪಾನಾನ್ನಭೋಜನಂ ॥೨೫॥

ಕ್ರೀಡನಂ ಮೈಥುನಂ ದ್ಯೂತಮಾಚರಂತಿ ಮದೋದ್ಧತಾಃ ।
ತೇ ಚ ತದ್ವಿವಿಧೈರ್ಘೋರೈರಿಕ್ಷುಯಂತ್ರಾದಿಪೀಡನೈಃ ॥೨೬॥

ನಿರಯಾಗ್ನಿಷು ಪಚ್ಯಂತೇ ಯಾವಚ್ಚಂದ್ರದಿವಾಕರೌ ।
ವೇದಮಾರ್ಗರತಾಚಾರ್ಯನಿಂದಾಂ ಶೃಣ್ವಂತಿ ಯೇ ನರಾಃ ॥೨೭॥

ದ್ರುತತಾಮ್ರಾದಿಭಿಸ್ತೇಷಾಂ ಕರ್ಣ ಆಪೂರ್ಯತೇಽನಘ ।
ಘೋರಾಖ್ಯೇ ನರಕೇ ಕೇಚಿತ್ ಪಚ್ಯಂತೇ ಪಾಪಕರ್ಮತಃ ॥೨೮॥

ಸುಘೋರಾಖ್ಯೇ ತಥಾ ಕೇಚಿದತಿಘೋರೇ ಚ ಕೇಚನ ।
ಮಹಾಘೋರಾಭಿಧೇ ಕೇಚಿತ್ ಘೋರರೂಪೇ ಚ ಕೇಚನ ॥೨೯॥

ಕರಾಲಾಖ್ಯೇ ತಥಾ ಕೇಚಿತ್ತಥಾ ಕೇಚಿದ್ಭಯಾನಕೇ ।
ಕಾಲರಾತ್ರೌ ಮಹಾಪಾಪಾಸ್ತಥಾ ಕೇಚಿದ್ಭಯೋತ್ಕಟೇ ॥೩೦॥

ಯಾರು ಶಿವಾಲಯ, ಹೂತೋಟ, ಬಾವಿಗಳು, ಮಠ ಇವುಗಳಲ್ಲಿ ತೊಂದರೆ ಮಾಡುವರೋ ರಾಜರು ಆ ಪ್ರದೇಶಗಳಲ್ಲಿ ವಿನೋದಕ್ಕಾಗಿ ವ್ಯಾಯಾಮ, ಅಭ್ಯಂಗ ಸ್ನಾನ, ಭೋಜನ, ಆಟ, ಮೈಥುನ, ಜೂಜು, ಇವುಗಳನ್ನು ಅತ್ಯಂತ ಮದದಿಂದ ಮಾಡುವರೋ ಅಂಥವರನ್ನು ಬಗೆಬಗೆಯ ಕ್ರೂರವಾದ, ನರಕಗಳಲ್ಲಿ ಕಬ್ಬಿನಗಾಣಕ್ಕೆ ಸಿಕ್ಕಿಸಿ, ಹಿಂಡಿ ಸೂರ್ಯಚಂದ್ರರಿರುವವರೆಗೂ ನರಕವೆಂಬ ಬೆಂಕಿಯಲ್ಲಿ ಯಮ ದೂತರು ಬೇಯಿಸುವರು. ॥೨೪-೨೫-೨೬॥

ವೇದಮಾರ್ಗಾಸಕ್ತರಾದ ಗುರುಗಳ ನಿಂದೆಯನ್ನು ಯಾರು ಪ್ರೀತಿಯಿಂದ ಕೇಳುವರೋ ಅವರ ಕಿವಿಗಳಿಗೆ ಕರಗಿದ ತಾಮ್ರ ಮುಂತಾದ ಲೋಹಗಳ ರಸವನ್ನು ತುಂಬುವರು. ॥೨೭॥

ಪಾಪಕರ್ಮ ಮಾಡಿದವರು ಅವರವರಿಗೆ ತಕ್ಕ, ಘೋರ, ಸುಘೋರ, ಅತಿಘೋರ, ಮಹಾಘೋರ, ಘೋರರೂಪ, ಕರಾಲ, ಭಯಾನಕ, ಕಾಲರಾತ್ರ, ಭಯೋತ್ಕಟ, ಚಂಡ, ಮಹಾಚಂಡ, ಚಂಡಕೋಲಾಹಲ, ಪ್ರಚಂಡ, ಪದ್ಮ,

ಕೇಚಿಚ್ಚಂಡಾಭಿಧೇ ಕೇಚಿನ್ಮಹಾಚಂಡಾಭಿಧೇ ಸದಾ ।
ಚಂಡಕೋಲಾಹಲೇ ಕೇಚಿತ್ಪ್ರಚಂಡಾಯಾಂ ಚ ಕೇಚನ ॥೩೧॥

ತಥಾ ಪದ್ಮಾಭಿಧಾಯಾಂ ಚ ಪದ್ಮಾವತ್ಯಾಂ ಚ ಕೇಚನ ।
ತಥಾ ಕೇಚನ ಭೀಮಾಯಾಂ ಕೇಚಿದ್ಭೀಷಣಸಂಜ್ಞಿತೇ ॥೩೨॥

ಕರಾಲೇ ತು ತಥಾ ಕೇಚಿದ್ವಿಕರಾಲೇ ಚ ಕೇಚನ ।
ವಜ್ರೇ ತ್ರಿಕೋಣಸಂಜ್ಞೇ ಚ ಪದ್ಮಕೋಣೇ ಚ ಕೇಚನ ॥೩೩॥

ಸುದೀರ್ಘೇ ವರ್ತುಲಾಖ್ಯೇ ಚ ಸಪ್ತಭೌಮೇ ಚ ಕೇಚನ ।
ಅಷ್ಟಭೌಮೇ ಚ ದೀಪ್ತೇ ಚ ರೌರವೇ ಚೈವ ಕೇಚನ ॥೩೪॥

ಕೇಚಿದನ್ಯೇಷು ಪಾಪಿಷ್ಠಾಃ ಪಚ್ಯಂತೇ ವಿವಶಾ ಭೃಶಂ ।
ಅಹೋ ಕಷ್ಟಂ ಮಹಾಪ್ರಾಜ್ಞ ಪಾಪಕರ್ಮಫಲೋದಯಂ ॥೩೫॥

ಏವಂ ಪಾಪಫಲಂ ಜ್ಞಾತ್ವಾ ಮುನೇ ಜ್ಞಾನರತೋ ಭವ ।
ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ಮುನೇ ॥೩೬॥

ಅಹೋ ಜ್ಞಾನಂ ಪರಿತ್ಯಜ್ಯ ಮಾಯಯಾ ಪರಿಮೋಹಿತಾಃ ।
ನರಕೇಷು ಹಿ ಪಚ್ಯಂತೇ ಸ್ವಪ್ನಕಲ್ಪೇಷು ದುಃಖಿತಾಃ ॥೩೭॥

ಪದ್ಮಾವತಿ, ಭೀಮ, ಭೀಷಣ, ಕರಾಲ, ವಿಕರಾಲ, ವಜ್ರ, ತ್ರಿಕೋಣ, ಪದ್ಮಕೋಣ, ಸುದೀರ್ಘ, ವರ್ತುಲ, ಸಪ್ತಭೌಮ, ಅಷ್ಟಭೌಮ, ದೀಪ್ತ, ರೌರವ ಮುಂತಾದ ನರಕಗಳಲ್ಲಿ ಕರ್ಮಫಲಾನುಭವಕ್ಕೆ ಬದ್ಧರಾಗಿ ಬಹಳವಾಗಿ ಕಷ್ಟವನ್ನು ಅನುಭವಿಸುವರು. ಮಹಾಜ್ಞಾನಿಯಾದ ಬೃಹಸ್ಪತಿಯೇ, ಪಾಪಕರ್ಮಗಳಫಲವಾದ ನರಕವು ಬಹಳ ಕಷ್ಟಕರವಾದುದು. ॥೨೮-೨೯-೩೦-೩೧-೩೨-೩೩-೩೪-೩೫॥

ಎಲೈ ತಪಸ್ವಿಯಾದ ಬೃಹಸ್ಪತಿಯೇ, ಪಾಪಕರ್ಮಗಳ ಫಲವು ಈ ರೀತಿಯಲ್ಲಿರುವುದೆಂದು ತಿಳಿದು ಆತ್ಮಜ್ಞಾನದಲ್ಲಿ ಆಸಕ್ತಿಯುಳ್ಳವನಾಗು. ಆತ್ಮಜ್ಞಾನವೆಂಬ ಅಗ್ನಿಯು, ಸಮಸ್ತ ಕರ್ಮಗಳನ್ನೂ ಸುಟ್ಟು ಬೂದಿಮಾಡಿಬಿಡುವುದು. ಇಂತಹ ಜ್ಞಾನವನ್ನು ಬಿಟ್ಟು, ಮಾಯೆಯಿಂದ ಮೋಹಿತರಾಗಿ ಸ್ವಪ್ನಕ್ಕೆ ಸಮಾನವಾದ

ಏವಂ ಪಾಪಫಲಂ ಭುಕ್ತ್ವಾ ಮಹಾದೇವಪ್ರಸಾದತಃ ।
ಪಶ್ಚಾದ್ಭುವೌ ವಿಜಾಯಂತೇ ಮಾನುಷ್ಯೇ ಕರ್ಮಸಾಮ್ಯತಃ ॥೩೮॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಜ್ಞಾನಯೋಗಖಂಡೇ ಪಾಪಕರ್ಮಫಲನಿರೂಪಣಂ ನಾಮ ನವಮೋಽಧ್ಯಾಯಃ

ನರಕದಲ್ಲಿ ದುಃಖವನ್ನು ಅನುಭವಿಸುತ್ತಿರುವರಲ್ಲ. ಇದು ಅತ್ಯಂತ ಆಶ್ಚರ್ಯಕರವು ! ಆದುದರಿಂದ ಇದನ್ನು ತಿಳಿದು ಪಾಪಗಳನ್ನು ಮಾಡದೆ ಇರಬೇಕೆಂದು ಭಾವವು. ||೩೬-೩೭||

ಈ ರೀತಿಯಲ್ಲಿ ಜೀವರುಗಳು ನರಕದಲ್ಲಿ ಪಾಪಕರ್ಮಗಳ ಫಲವನ್ನನುಭವಿಸಿ, ಮಹಾದೇವನ ಅನುಗ್ರಹದಿಂದ ತಮ್ಮ ಪರಿಪಾಕಾವಸ್ಥೆಗೆ ಬಂದ ಪುಣ್ಯಪಾಪಕರ್ಮಗಳ ಸಾಮ್ಯದಿಂದ “ಉಭಾಭ್ಯಾಮೇವ ಮನುಷ್ಯಲೋಕಂ” ಎಂಬ ವೇದವಚನದಂತೆ ಕಡೆಗೆ ಮನುಷ್ಯಲೋಕದಲ್ಲಿ ತಿರುಗಿ ಹುಟ್ಟುವರು. ||೩೮||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ ಪಾಪಕರ್ಮಗಳ ಫಲನಿರೂಪಣವೆಂಬ ಒಂಬತ್ತನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

ಜ್ಞಾನಯೋಗಖಂಡಂ

|| ದಶಮೋಽಧ್ಯಾಯಃ ||

ಹತ್ತನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ದೇಹೋತ್ಪತ್ತಿಂ ಮಹಾಮುನೇ ।
ಶೃಣು ವೈರಾಗ್ಯಸಿದ್ಧ್ಯರ್ಥಮಾತ್ಮಶುದ್ಧ್ಯರ್ಥಮೇವ ಚ ॥೧॥

ಪುಣ್ಯೈರ್ದೇವತ್ವಮಾಪ್ನೋತಿ ಪಾಪೈಃ ಸ್ಥಾವರತಾಮಿಯಾತ್ ।
ಸಮಾಭ್ಯಾಂ ಪುಣ್ಯಪಾಪಾಭ್ಯಾಂ ಮಾನುಷ್ಯಂ ಪ್ರಾಪ್ನುಯಾನ್ನರಃ ॥೨॥

ಈಶ್ವರನು ಹೇಳಿದನು—ಹಿಂದಿನ ಅಧ್ಯಾಯಗಳಲ್ಲಿ ಉತ್ತಮಾಧಿಕಾರಿಗಳಿಗೆ, ವೇದಾಂತವಾಕ್ಯಶ್ರವಣವೂ ಅಧಮಾಧಿಕಾರಿಗಳಿಗೆ ಕರ್ಮಗಳೂ, ಜ್ಞಾನಸಾಧನವಾಗುವುವೆಂದು ಹೇಳಿ, ಪಾಪಗಳೂ, ಪ್ರತಿಬಂಧಕಗಳೂ ನಾಶವಾದರೂ, ರಜೋಗುಣದಿಂದ ಚಂಚಲವಾದ ಮನಸ್ಸುಳ್ಳ ಜೀವರಿಗೆ ಮನಸ್ಸಿನ ಏಕಾಗ್ರತೆಯಿಲ್ಲದಿರುವುದರಿಂದ, ಆ ಏಕಾಗ್ರತೆಯುಂಟಾಗುವುದಕ್ಕಾಗಿ, ನಾಡಿಗಳ ಶುದ್ಧಿಯಿಂದ ಪ್ರಾರಂಭಿಸಿ, ಅಷ್ಟಾಂಗಯೋಗಗಳನ್ನು ಹೇಳಬೇಕೆಂಬ ಅಪೇಕ್ಷೆಯಿಂದ ಮೊದಲು ಈಶ್ವರನು ಬೃಹಸ್ಪತಿಗೆ ದೇಹೋತ್ಪತ್ತಿ ಕ್ರಮವನ್ನು ವಿವರಿಸುವನು. ಎಲೈ ಮಹಾಮುನಿಯಾದ ಬೃಹಸ್ಪತಿಯೇ, ವೈರಾಗ್ಯವುಂಟಾಗುವುದಕ್ಕಾಗಿಯೂ, ಆತ್ಮಶುದ್ಧಿಗಾಗಿಯೂ, ದೇಹೋತ್ಪತ್ತಿಕ್ರಮವನ್ನು ಹೇಳುವೆನು ಕೇಳು. ||೧||

ಜೀವರು ಪುಣ್ಯದ ಫಲದಿಂದ ದೇವತೆಗಳ ಶರೀರವನ್ನೂ, ಪಾಪಫಲದಿಂದ ಚಲಿಸದೆ ಒಂದೆಡೆಯಲ್ಲಿಯೇ ಇರುವ, ಕಲ್ಲು ಮರ ಮುಂತಾದ ಶರೀರವನ್ನೂ, ಪುಣ್ಯ

ತತ್ರಪ್ರಹುತ್ಯಾ ರವಿರ್ನಿತ್ಯಂ ವರ್ಧತೇ ಮುನಿಸತ್ತಮ ।
ಸೂರ್ಯಾದ್ವೃಷ್ಟಿರ್ನಿಚಾಯೇತ ವೃಷ್ಟೇರೋಷಧಯಃ ಕ್ರಮಾತ್ ॥೩॥

ಓಷಧೀಭ್ಯೋಽನ್ನಮನ್ನಂ ಚ ನಿತ್ಯಂ ಭುಙ್ಕ್ತೇ ಚ ಮಾನವಃ ।
ಪಂಚಭೂತಾತ್ಮಕಂ ಭುಕ್ತಂ ಕಿಟ್ಟಸಾರಾತ್ಮನಾ ದ್ವಿಧಾ ॥೪॥

ಪುನರ್ದ್ವಿಧಾ ಭವೇತ್ಸಾರಃ ಸ್ಥೂಲಸೂಕ್ಷ್ಮವಿಭೇದತಃ ।
ಕಿಟ್ಟಮೂತ್ರಪುರೀಷಾಸ್ಥಿ ಮೇದಸ್ನಾಯ್ವಾತ್ಮನಾ ಭವೇತ್ ॥೫॥

ಪುರೀಷಮೂತ್ರೇ ವಿಸೃಜೇದನಿಲಃ ಕ್ರಮಶೋ ಮುನೇ ।
ಸಾರಯೋಃ ಸ್ಥೂಲಭಾಗಸ್ಯ ಪಂಚಭೂತಾಂಶಕೈಃ ಕ್ರಮಾತ್ ॥೬॥

ವರ್ಧಂತೇ ಧಾತವಃ ಸರ್ವೇ ತೇಷಾಂ ಮಧ್ಯೇ ಮಹಾಮುನೇ ।
ಆಕಾಶಾದ್ಧಾತವಃ ಸರ್ವೇ ವರ್ಧಂತೇ ವಾಯುನಾ ಬಲಂ ॥೭॥

ಪಾಪಗಳ ಸಮಾನಭಾವದಿಂದ ಮನುಷ್ಯ ಶರೀರವನ್ನೂ ಹೊಂದುವರು. ಈ ವಿಷಯದಲ್ಲಿ—ಪುಣ್ಯೇನ ಪುಣ್ಯಂ ಲೋಕಂ ನಯತಿ ಪಾಪೇನ ಪಾಪಮುಭಾಭ್ಯಾಮೇವ ಮನುಷ್ಯಲೋಕಂ ॥ ಎಂದು ವೇದವಚನವಿರುವುದು. ॥೨॥

ಅಗ್ನಿಯಲ್ಲಿ ಹೋಮಮಾಡಿದ ಆಹುತಿಗಳಿಂದ ಸೂರ್ಯನು ಪ್ರತಿದಿನವೂ ವೃದ್ಧಿಯಾಗುವನು. ಅಂತಹ ಸೂರ್ಯನ ಕಿರಣಗಳಿಂದ ಮಳೆಯಾಗುವುದು. ಮಳೆಯಿಂದ ಸಣ್ಣ ಗಿಡಗಳು ಬೆಳೆಯುವುವು. ಆ ಗಿಡಗಳಿಂದ ಅನ್ನವು ದೊರೆಯುವುದು. ಆ ಅನ್ನವನ್ನು ಮನುಷ್ಯನು ಪ್ರತಿದಿನವೂ ಊಟಮಾಡುವನು. ॥೩॥

ಊಟಮಾಡಿದ ಪಂಚಭೂತಸ್ವರೂಪವಾದ ಅನ್ನವು ಕಿಟ್ಟ, ಸಾರ ಎಂದು ಎರಡು ವಿಭಾಗವಾಗುವುದು. ಆಮೇಲೆ ಸಾರವು ಸ್ಥೂಲ ಸೂಕ್ಷ್ಮ ಎಂದು ಎರಡು ಭಾಗವಾಗುವುದು. ಕಿಟ್ಟವು ಮೂತ್ರ, ಪುರೀಷ, ಮೇದಸ್ಸು, ಸ್ನಾಯು, ಅಸ್ಥಿರೂಪವಾದ ಶರೀರಭಾಗಗಳಾಗುವುದು. ॥೪-೫॥

ಶರೀರದೊಳಗಿರುವ ಗಾಳಿಯು ಕ್ರಮವಾಗಿ ಮೂತ್ರಪುರೀಷಗಳನ್ನು ಹೊರಗೆ ತಳ್ಳುವುದು. ಸಾರಗಳ ಪಂಚಭೂತಸಂಬಂಧಗಳಾದ ಸ್ಥೂಲಭಾಗಗಳಿಂದ ಕ್ರಮವಾಗಿ ಶರೀರದೊಳಗಿನ ಧಾತುಗಳ ಅಭಿವೃದ್ಧಿಯಾಗುವುದು. ॥೬॥

ಅವಕಾಶವನ್ನು ಕೊಡುವ ಶಕ್ತಿಯುಳ್ಳ ಆಕಾಶತತ್ವದಿಂದ ಸಮಸ್ತಧಾತುಗಳೂ, ಅಭಿವೃದ್ಧಿಯಾಗುವುವು. ವಾಯುವಿನಿಂದ ಬಲವೂ, ಅಗ್ನಿಯಿಂದ ಮಜ್ಜೆಯೂ,

ಅಗ್ನಿನಾ ವರ್ಧತೇ ಮಜ್ಜಾ ಲೋಹಿತಂ ವರ್ಧತೇ ಜಲಾತ್ ।
ಭುವಾ ಮಾಂಸಸ್ಯ ವೃದ್ಧಿಃ ಸ್ಯಾದಿತ್ಥಂ ಧಾತುವಿವರ್ಧನಂ ॥೮॥

ಅವಶಿಷ್ಟೋ ರಸಾಂಶಶ್ಚ ದ್ವಿಧಾ ಸತ್ವಗುಣೇನ ಚ ।
ರಾಜಸೇನ ಗುಣೇನಾಪಿ ಭವೇತ್ಸತ್ವಂ ತಪೋಧನ ॥೯॥

ತಯೋಃ ಸತ್ವಪ್ರಧಾನಸ್ಯ ಭೂಮಿಭಾಗಾನ್ಮಹಾಮುನೇ ।
ಘ್ರಾಣೇಂದ್ರಿಯಸ್ಯಾಪಾನಸ್ಯ ವರ್ಧಕಶ್ಚ ಸದಾ ಭವೇತ್ ॥೧೦॥

ಉಪಸ್ಥಸ್ಯಾಪಿ ವಿಪ್ರೇಂದ್ರಾ ಜಿಹ್ವಾಯಾಶ್ಚ ಜಲಾಂಶಕಃ ।
ಅಗ್ನಿರ್ವಾಕ್ಚಕ್ಷುಷೋಶ್ಚರ್ಮಹಸ್ತಯೋರನಿಲಸ್ತಥಾ ॥೧೧॥

ನೀರಿನಿಂದ ರಕ್ತವೂ, ಭೂಮಿಯಿಂದ ಮಾಂಸವೂ, ಅಭಿವೃದ್ಧಿಯಾಗುವುವು. ಈ ರೀತಿಯಾಗಿ ಧಾತುಗಳು ಅಭಿವೃದ್ಧಿಯಾಗುವುವು. ಈ ವಿಷಯದಲ್ಲಿ ಛಾಂದೋಗ್ಯೋಪನಿಷತ್ತಿನಲ್ಲಿ—ಮನುಷ್ಯನು ಊಟಮಾಡಿದ ಅನ್ನವು ಮೂರು ಭಾಗವಾಗುವುದು. ಅದರ ಸ್ಥೂಲಭಾಗವು ಮಲವಾಗುವುದು. ಮಧ್ಯಮಭಾಗವು ಮಾಂಸವಾಗುವುದು. ಸೂಕ್ಷ್ಮಭಾಗವು ಮನಸ್ಸಾಗುವುದು. ಕುಡಿದ ನೀರು ಮೂರು ಭಾಗವಾಗಿ, ಸ್ಥೂಲಭಾಗವು ಮೂತ್ರವಾಗಿಯೂ, ಮಧ್ಯಭಾಗವು ರಕ್ತವಾಗಿಯೂ, ಸೂಕ್ಷ್ಮಭಾಗವು ಪ್ರಾಣವಾಗಿಯೂ, ಇರುವುದೆಂದೂ, ತೇಜೋರೂಪವಾದ ತುಪ್ಪವೇ ಮೊದಲಾದ ಜಿಡ್ಡುಪದಾರ್ಥಗಳೂ, ಮೂರು ಮೂರು ಭಾಗವಾಗಿ ಸ್ಥೂಲಭಾಗವು ಮೂಳೆಯಾಗಿಯೂ, ಮಧ್ಯಮಭಾಗವು ಮಜ್ಜೆಯಾಗಿಯೂ, ಸೂಕ್ಷ್ಮಭಾಗವು ವಾಕ್ಕಾಗಿಯೂ ಇರುವುದೆಂದು ಹೇಳಿರುವುದು. ಒಟ್ಟಿನಲ್ಲಿ ಊಟಮಾಡಿದ ಅನ್ನಾದಿಗಳು ಮನಸ್ಸೇ ಮುಂತಾದುವುಗಳನ್ನು ಅಭಿವೃದ್ಧಿಗೊಳಿಸುವುವು. ಅವುಗಳನ್ನು ಹುಟ್ಟಿಸುವುದಿಲ್ಲ, ಅವುಗಳ ಉತ್ಪತ್ತಿಗೆ ಪಂಚಭೂತಗಳೇ ಕಾರಣಗಳಾಗಿರುತ್ತವೆ. ||೭-೮||

ಉಳಿದ ಸೂಕ್ಷ್ಮವಾದ ರಸಭಾಗವು ಸತ್ವಗುಣದಿಂದಲೂ, ರಜೋಗುಣದಿಂದಲೂ ಕೂಡಿದುದಾಗಿ ಎರಡು ಭಾಗವಾಗುವುದು. ||೯||

ಅವುಗಳಲ್ಲಿ ಸತ್ವಗುಣಪ್ರಧಾನವಾದ ಸೂಕ್ಷ್ಮವಾದ ಭೂಮಿಭಾಗದಿಂದ ಘ್ರಾಣೇಂದ್ರಿಯವೂ, ಪ್ರಾಣಾಪಾನಾದಿವೃತ್ತಿಗಳೂ, ಅಭಿವೃದ್ಧಿಯನ್ನು ಹೊಂದುವುವು. ||೧೦||

ಜಲಾಂಶದಿಂದ ಜಿಹ್ವೇಂದ್ರಿಯ ಉಪಸ್ಥೇಂದ್ರಿಯಗಳೂ, ಅಗ್ನಿಯ ಅಂಶದಿಂದ ಚಕ್ಷುರಿಂದ್ರಿಯ, ವಾಗಿಂದ್ರಿಯಗಳೂ, ಆಕಾಶಾಂಶದಿಂದ ಶ್ರೋತ್ರಪಾದೇಂದ್ರಿಯ

ಆಕಾಶೋ ವರ್ಧಕಃ ಪಾದಶ್ರೋತ್ರಯೋರ್ಮುನಿಸತ್ತಮ ।
ಸರ್ವಾಂಶೋ ವರ್ಧಕಶ್ಚಾಂತಃಕರಣಪ್ರಾಣ ಸಂಜ್ಞಯೋಃ ॥೧೨॥

ವಿಶೇಷೇಣ ಮಹೀಭಾಗೋ ವರ್ಧಕೋ ಮನಸೋ ಭವೇತ್ ।
ತೋಯಂ ಪ್ರಾಣಸ್ಯ ವಹ್ನ್ಯಂಶೋ ವದನಸ್ಯ ವಿಶೇಷತಃ ॥೧೩॥

ವಾಯ್ವಂಶಃ ಪಾಣಿಮೂಲಸ್ಯ ಪಾದಮೂಲಸ್ಯ ಚಾಂಬರಂ ।
ತಥಾ ರಜೋಗುಣಗ್ರಸ್ತೋ ರಸಾಂಶಃ ಕಾಲಕರ್ಮಣಃ ॥೧೪॥

ಭವೇದ್ರಕ್ತಂ ಮಹಾಪ್ರಾಜ್ಞ ರಕ್ತಂ ಮಾಂಸಂ ಭವೇತ್ಪುನಃ ।
ಮಾಂಸಾನ್ಮೇದಸ್ತತಃ ಸ್ನಾಯುಸ್ತಸ್ಮಾದಸ್ಥಿ ಸಮುದ್ಗತಂ ॥೧೫॥

ಗಳೂ, ವಾಯುವಿನ ಅಂಶದಿಂದ ಚರ್ಮಹಸ್ತೇಂದ್ರಿಯಗಳೂ ಅಭಿವೃದ್ಧಿಯನ್ನು ಹೊಂದುವುವು. ಪಂಚಭೂತಗಳ ಸರ್ವಾಂಶವೂ ಸೇರಿ ಅಂತಃಕರಣವನ್ನೂ, ಪ್ರಾಣವನ್ನೂ ಅಭಿವೃದ್ಧಿಗೊಳಿಸುವುವು. ಹಿಂದಿನ ಖಂಡದಲ್ಲಿ, "ಅನ್ನಮಯಂ ಹಿ ಸೋಮ್ಯ ಮನಃ ಆಪೋಮಯಃ ಪ್ರಾಣಃ" ಎಂಬ ಶ್ರುತಿಯ ಆಧಾರದಿಂದ ಮನಸ್ಸಿಗೂ, ಪ್ರಾಣಕ್ಕೂ, ಅಭಿವೃದ್ಧಿಗೆ ನೀರುಗಳೇ ಕಾರಣವೆಂದು ಹೇಳಿದೆ. ಅಲ್ಲದೆ ಅಲ್ಲಿ ಸೂಕ್ಷ್ಮ ಪಂಚಭೂತಗಳ ಸತ್ವಗುಣಶಕ್ತಿಯಿಂದ ಪಂಚಜ್ಞಾನೇಂದ್ರಿಯಗಳೂ, ಮನಸ್ಸೂ ಹುಟ್ಟುವುದೆಂದೂ, ರಜೋಗುಣದ ಶಕ್ತಿಯಿಂದ ಪಂಚಕರ್ಮೇಂದ್ರಿಯಗಳೂ, ಪ್ರಾಣವೂ ಹುಟ್ಟುವುವೆಂದೂ ಹೇಳಿದೆ. ಇಲ್ಲಿ ಸ್ಥೂಲಪಂಚಭೂತಗಳ ಸಾರತರ ಭಾಗದ ಸತ್ವಗುಣದಿಂದ ಜ್ಞಾನಕರ್ಮೇಂದ್ರಿಯಗಳ ಅಭಿವೃದ್ಧಿಯನ್ನು ಹೇಳಿದೆ. ॥೧೧-೧೨॥

ವಿಶೇಷವಾಗಿ ಆಹಾರದ ಸಾರದ ಸತ್ವಾಂಶವಾದ ಭಾಗವು, ಮನಸ್ಸಿಗೂ, ನೀರಿನ ಭಾಗವು ಪ್ರಾಣಕ್ಕೂ, ಅಗ್ನಿಯ ಭಾಗವು ಮಾತಿಗೂ, ವಾಯುವಿನ ಭಾಗವು ಕೈಗೂ, ಆಕಾಶ ಭಾಗವು ಕಾಲಿಗೂ ಅಭಿವೃದ್ಧಿಯನ್ನುಂಟುಮಾಡುವುವು. ॥೧೩॥

ಆಹಾರದ ಸಾರತರವಾದ, ರಜೋಂಶದಿಂದ ಕಾಲಕರ್ಮಗಳ ಸಂಯೋಗದಿಂದ ರಕ್ತವೂ, ರಕ್ತದಿಂದ ಮಾಂಸವೂ, ಮಾಂಸದಿಂದ ಮೇದಸ್ಸೂ, ಮೇದಸ್ಸಿನಿಂದ ಸ್ನಾಯುವೂ, ಸ್ನಾಯುಗಳಿಂದ ಮೂಳೆಯೂ ಹುಟ್ಟುವುವು. ಆಮೇಲೆ ಮಜ್ಜೆಯೂ ಶುಕ್ರವೂ ಉಂಟಾಗುವುವು. ॥೧೪-೧೫॥

ತತೋ ಮಜ್ಜೋದ್ಭವಸ್ತಸ್ಮಾದ್ಬಲಂ ಪಶ್ಚಾತ್ಸಮುದ್ಗತಂ ।
ಬಲಾಚ್ಛೋಣಿತಸಂಯುಕ್ತಾತ್ಪ್ರಜಾ ಕಾಲವಿಪಾಕತಃ ॥೧೬॥

ಋತುಕಾಲೇ ಯದಾ ಶುಕ್ರಂ ನಿರ್ದೋಷಂ ಯೋನಿಸಂಗತಂ ।
ಕದಾಚಿನ್ಮಾರುತೇನೈವ ಸ್ತ್ರೀರಕ್ತೇನೈಕತಾಮಿಯಾತ್ ॥೧೭॥

ಶುಕ್ರಶೋಣಿತಸಂಯುಕ್ತಂ ಕಲಲಂ ಬುದ್ಬುದಂ ತಥಾ ।
ಪಿಂಡಂ ಭವೇದ್ದೃಢಂ ತದ್ವಚ್ಛಿರಃ ಪಶ್ಚಾತ್ಪದದ್ವಯಂ ॥೧೮॥

ತಥಾಂಗುಲ್ಯಃ ಕಟೀಕುಕ್ಷಿಸ್ತದ್ವತ್ಪೃಷ್ಠಾಸ್ಥಿಸಂಧಯಃ ।
ಚಕ್ಷುಷೀ ನಾಸಿಕಾ ಶ್ರೋತ್ರೇ ಪಶ್ಚಾಜ್ಜೀವಪ್ರಕಾಶಿತಂ ॥೧೯॥

ಅಂಗಪ್ರತ್ಯಂಗಸಂಪೂರ್ಣಂ ಭವೇತ್ತು ಕ್ರಮಶೋ ಮುನೇ ।
ಏಕಾಹಾತ್ಸಪ್ತರಾತ್ರೇಣ ತಥಾ ಪಂಚದಶೇನ ಚ ॥೨೦॥
ಏಕದ್ವಿತ್ರಿಕ್ರಮೇಣೈವ ಮಾಸಾನಾಂ ತದ್ವಿವರ್ಧತೇ ।

ಕಾಲಪರಿಪಾಕದಿಂದ, ಶುಕ್ರವು ಸ್ತ್ರೀಯ ಶೋಣಿತದೊಡನೆ ಕೂಡಿದರೆ ಪುತ್ರೋತ್ಪತ್ತಿಯಾಗುವುದು. ಸ್ತ್ರೀಯ ಋತುಕಾಲದಲ್ಲಿ ಶರೀರದ ಧಾತುವೈಷಮ್ಯ ವಿಲ್ಲದುದರಿಂದ, ಶುದ್ಧವಾದ ಶುಕ್ರವು ಸ್ತ್ರೀಯೋನಿಯಲ್ಲಿ ಬಿದ್ದು ಅಕಸ್ಮಾತ್ತಾಗಿ ಯಾವಾಗಲೋ ವಾಯುವಿನಿಂದ ಸ್ತ್ರೀರಕ್ತದೊಡನೆ ಕೂಡಿ, ಗರ್ಭಾಶಯಕ್ಕೆ ಹೋಗುವುದು. ||೧೬-೧೭||

ಶುಕ್ರಶೋಣಿತಗಳು ಗರ್ಭಾಶಯದಲ್ಲಿ ಸೇರಿದರೆ, ಮೊದಲು ಕಲಲವೂ, ಆಮೇಲೆ ಬುದ್ಬುದವೆಂಬ ನೊರೆಯರೂಪವೂ, ಬಳಿಕ ಕ್ರಮವಾಗಿ ಗಟ್ಟಿಯಾದ ಪಿಂಡವೂ, ಆಗುವುದು. ಆ ಪಿಂಡದಲ್ಲಿ ಕ್ರಮವಾಗಿ ತಲೆ, ಎರಡು ಕೈ ಕಾಲುಗಳು, ಬೆರಳುಗಳು, ಸೊಂಟ, ಹೊಕ್ಕುಳು, ಪೃಷ್ಠಭಾಗವು ಮೂಳೆಯ ಸಂಬಂಧಗಳು ಕಣ್ಣುಗಳು ಮೂಗು ಕಿವಿ ಈ ಅಂಗಗಳುಂಟಾದ ಮೇಲೆ ಜೀವನ ಪ್ರಕಾಶವು ಆ ಶರೀರದಲ್ಲಿ ಆಗುವುದು. ||೧೮-೧೯||

ಎಲೈ ಬೃಹಸ್ಪತಿಯೇ, ಗರ್ಭದಲ್ಲಿರುವ ಪಿಂಡವು ಕ್ರಮವಾಗಿ ಸರ್ವಾಂಗಗಳಿಂದಲೂ ಕೂಡಿ ಬೆಳೆಯುವುದು. ಕಾಲಪರಿಮಾಣವು ಒಂದು ರಾತ್ರಿ ಮೊದಲುಗೊಂಡು, ಏಳುದಿನ ಹದಿನೈದು ದಿನ, ಒಂದೆರಡುಮೂರು ತಿಂಗಳುಗಳು ಈ ಕ್ರಮದಲ್ಲಿ ಗರ್ಭವು ಕ್ರಮವಾಗಿ ಬೆಳೆಯುತ್ತ ಬರುವುದು. ಈ ವಿಷಯದಲ್ಲಿ ಗರ್ಭೋಪ

ಇತ್ಥಂ ಪರಿಣತೋ ಗರ್ಭಃ ಪೂರ್ವಕರ್ಮವಶಾನ್ಮುನೇ ॥೨೧॥

ಮಹದ್ದುಃಖಮವಾಪ್ನೋತಿ ರೌರವೇ ನರಕೇ ಯಥಾ ।
ತಾಂ ಪೀಡಾಂ ಚ ವಿಜಾನಾತಿ ತದಾ ಜಾತಿಸ್ಮರೋ ಭವೇತ್ ॥೨೨॥

ನಾನಾಯೋನಿಸಹಸ್ರಾಣಿ ಪುರಾ ಪ್ರಾಪ್ತಾನಿ ವೈ ಮಯಾ ।
ಆಹಾರಾ ವಿವಿಧಾ ಭುಕ್ತಾಃ ಪೀತಾಶ್ಚ ವಿವಿಧಾಃ ಸ್ತನಾಃ ॥೨೩॥

ಅಹೋ ದುಃಖೋದಧೌ ಮಗ್ನೋ ನ ಪಶ್ಯಾಮಿ ಪ್ರತಿಕ್ರಿಯಾಂ ।
ಯದಿ ಯೋನ್ಯಾಃ ಪ್ರಮುಂಚಾಮಿ ತಂ ಪ್ರಪದ್ಯೇ ಮಹೇಶ್ವರಂ ॥೨೪॥

ನಿಷತ್ತಿನಲ್ಲಿ—ಒಂದು ರಾತ್ರಿ ಗರ್ಭಕೋಶದಲ್ಲಿದ್ದು ಶುಕ್ರಶೋಣಿತಗಳು ಕಲಲರೂಪ (ಬತ್ತ ಮೊಸರು ಕಲಸಿದಂತೆ) ವಾಗುವುದು. ಏಳುದಿನದಲ್ಲಿ ಬುದ್ಬುದ(ನೊರೆಯರೂಪ) ವಾಗುವುದು. ಹದಿನೈದು ದಿನಗಳಲ್ಲಿ ಪಿಂಡವಾಗುವುದು. ಒಂದು ತಿಂಗಳಲ್ಲಿ ಆ ಪಿಂಡವು ಗಟ್ಟಿಯಾಗುವುದು. ಎರಡು ತಿಂಗಳಲ್ಲಿ ತಲೆಯು ಕಾಣಿಸಿಕೊಳ್ಳುವುದು. ಮೂರುತಿಂಗಳಿಗೆ ಕೈಕಾಲುಗಳು ಕಾಣಿಸಿಕೊಳ್ಳುವುವು. ನಾಲ್ಕನೆಯ ತಿಂಗಳಲ್ಲಿ ಬೆರಳುಗಳು, ಹೊಟ್ಟೆ, ಸೊಂಟಗಳೂ, ಐದನೆಯ ತಿಂಗಳಲ್ಲಿ ಪೃಷ್ಠದ ಮೂಳೆಗಳೂ, ಆರನೆಯ ತಿಂಗಳಲ್ಲಿ ಮೂಗು ಕಣ್ಣು ಕಿವಿಗಳೂ, ಏಳನೆಯ ತಿಂಗಳಲ್ಲಿ ಆ ಪಿಂಡದಲ್ಲಿ ಜೀವವು ಕೂಡಿಕೊಳ್ಳುವುದು. ಎಂಟನೆಯ ತಿಂಗಳಲ್ಲಿ ಸಂಪೂರ್ಣ ಶರೀರವುಂಟಾಗುವುದು. ಎಂದು ಹೇಳಿರುವುದು. ॥೨೦॥

ಹೀಗೆ ಪೂರ್ಣವಾದ ಗರ್ಭವು ರೌರವವೆಂಬ ನರಕದಲ್ಲಿ ಹೇಗೋ ಹಾಗೆ ಗರ್ಭದಲ್ಲಿ ವಿಶೇಷವಾದ ದುಃಖವನ್ನು ಹೊಂದುವುದು. ಆಗ ಬಾಧೆಯನ್ನೂ ತಿಳಿಯುವುದು. ಆಗ ಪೂರ್ವಜನ್ಮಗಳ ಸ್ಮರಣೆಗಳೂ ಆ ಜೀವನಿಗೆ ಬರುವುದು. ಈ ವಿಷಯವನ್ನೂ, ಗರ್ಭೋಪನಿಷತ್ತಿನಲ್ಲಿ ಹೇಳಿರುವುದು. ॥೨೧-೨೨॥

ಆ ಪೂರ್ವಜನ್ಮಗಳ ಸ್ಮರಣೆಯಿಂದ ಜೀವನು ಆ ಗರ್ಭದಲ್ಲಿಯೇ ಇದ್ದುಕೊಂಡು, ನಾನು ಹಿಂದೆ ಅನೇಕಸಾವಿರ ಜನ್ಮಗಳನ್ನು ಪಡೆದೆನು. ಅನೇಕ ವಿಧವಾದ ಆಹಾರಗಳನ್ನು ತಿಂದು ಅನೇಕ ಬಗೆಯಾದ ಸ್ತನಪಾನಗಳನ್ನು ಮಾಡಿದೆನು. ಅಯ್ಯೋ, ದುಃಖಸಮುದ್ರದಲ್ಲಿ ಮುಳುಗಿದ ನಾನು ಇದಕ್ಕೆ ಪ್ರತಿಕ್ರಿಯೆಯನ್ನು ಕಾಣೆನು! ಈ ಗರ್ಭದಿಂದ ನಾನು ಹೊರಗೆ ಹೋದಮೇಲೆ, ಮಹೇಶ್ವರನನ್ನು

ಅಧ್ಯೇಷ್ಯಾಮಿ ಸದಾ ವೇದಾನ್ ಸಾಂಗಾನ್ ಶುಶ್ರೂಷಯಾ ಗುರೋಃ ।
ನಿತ್ಯಂ ನೈಮಿತ್ತಿಕಂ ಕರ್ಮ ಶ್ರದ್ಧಯೈವ ಕರೋಮ್ಯಹಂ ॥೨೫॥

ಕೃತದಾರಃ ಪುನರ್ಯಜ್ಞಾನ್ಕರೋಮ್ಯಾತ್ಮವಿಶುದ್ಧಯೇ ।
ಯಜ್ಞೈರ್ದಗ್ಧಮಲೋ ಭೂತ್ವಾ ಜ್ಞಾತ್ವಾ ಸಂಸಾರಹೇಯತಾಂ ॥೨೬॥

ವೈರಾಗ್ಯಾತಿಶಯೇನೈವ ಮೋಕ್ಷಕಾಮನಯಾ ಪುನಃ ।
ನಿರಸ್ಯ ಸರ್ವಕರ್ಮಾಣಿ ಶಾಂತೋ ಭೂತ್ವಾ ಜಿತೇಂದ್ರಿಯಃ ॥೨೭॥

ವಿರಜಾನಲಜಂ ಭಸ್ಮ ಗೃಹೀತ್ವಾ ಚಾಗ್ನಿಹೋತ್ರಜಂ ।
ಅಗ್ನಿರಿತ್ಯಾದಿಭಿರ್ಮಂತ್ರೈಃ ಷಡ್ಭಿರಾಥರ್ವಣೈಃ ಕ್ರಮಾತ್ ॥೨೮॥

ವಿಮೃಜ್ಯಾಂಗಾನಿ ಮೂರ್ಧಾದಿ ಚರಣಾಂತಾನಿ ಸಾದರಂ ।
ಸಮುದ್ಧೂಳ್ಯ ಸದಾಚಾರ್ಯಂ ಪ್ರಣಿಪತ್ಯಾತ್ಮವಿದ್ಯಯಾ ॥೨೯॥

ಸಂಸಾರಸಾಗರಂ ಘೋರಂ ಲಂಘಯಾಮ್ಯಹಮಾತ್ಮನಃ ।

ಮರೆಹೋಗುವೆನು. ಯಾವಾಗಲೂ, ವೇದವನ್ನು ಓದುವೆನು. ಗುರುಗಳನ್ನು ಸೇವಿಸಿ, ವೇದಾಂತಗಳನ್ನೂ ತಿಳಿಯುವೆನು. ನಿತ್ಯನೈಮಿತ್ತಿಕ ಕರ್ಮಗಳನ್ನು ಅತ್ಯಂತ ಆದರದಿಂದ ಮಾಡುವೆನು. ॥೨೩-೨೪-೨೫॥

ಗೃಹಸ್ಥಾಶ್ರಮವನ್ನು ಪಡೆದು ಆತ್ಮಶುದ್ಧಿಗಾಗಿ, ಯಜ್ಞಗಳನ್ನು ಮಾಡುವೆನು. ಯಜ್ಞಗಳಿಂದ ಪಾಪಗಳನ್ನು ನಾಶಮಾಡಿಕೊಂಡು, ಜನನ ಮರಣ ರೂಪವಾದ ಸಂಸಾರವು ನಿಂದ್ಯವಾದುದೆಂದು ತಿಳಿದು, ವೈರಾಗ್ಯದಿಂದಲೂ, ಮೋಕ್ಷಾಪೇಕ್ಷೆಯಿಂದಲೂ, ಸರ್ವಕರ್ಮಸನ್ಯಾಸವನ್ನು ಮಾಡಿ, ಶಾಂತನೂ ಜಿತೇಂದ್ರಿಯನೂ ಆಗಿ "ಅಗ್ನಿರಿತಿ ಭಸ್ಮ" ಎಂಬ ಅಥರ್ವಣವೇದದ ಆರು ಮಂತ್ರಗಳಿಂದ, ವಿರಜಾಹೋಮದಲ್ಲಿ ಹುಟ್ಟಿದ, ಅಥವಾ ಅಗ್ನಿಹೋತ್ರದ ಭಸ್ಮವನ್ನು ತೆಗೆದುಕೊಂಡು ತಲೆಯಿಂದ ಕಾಲಿನವರೆಗೂ, ಸಮಸ್ತ ಅಂಗಗಳಿಗೂ ಬಳಿದುಕೊಂಡು, ಗುರುಗಳಿಗೆ ನಮಸ್ಕಾರ ಮಾಡಿ, ಆತ್ಮವಿದ್ಯಾಭ್ಯಾಸದಿಂದ ಈ ಭಯಂಕರವಾದ ಸಂಸಾರಸಾಗರವನ್ನು ದಾಟುವೆನು. ॥೨೬-೨೭-೨೮-೨೯॥

ಇತ್ಥಂ ಗರ್ಭಗತಃ ಸ್ಮೃತ್ವಾ ಯೋನಿಯಂತ್ರಪ್ರಪೀಡನಾತ್ ॥೩೦॥
ಜಾಯತೇ ವಾಯುನಾ ಯಾತಿ ವಿಸ್ಮೃತಿಂ ವೈಷ್ಣವೇನ ಚ ।
ಅಜ್ಞಾನೇ ಸತಿ ರಾಗಾದ್ಯಾ ಧರ್ಮಾಧರ್ಮೌ ಚ ತದ್ವಶಾತ್ ॥೩೧॥

ಧರ್ಮಾಧರ್ಮವಶಾತ್ಪುಂಸಾಂ ಶರೀರಮುಪಜಾಯತೇ ।
ಜ್ಞಾನೇನೈವ ನಿವೃತ್ತಿಃ ಸ್ಯಾದಜ್ಞಾನಸ್ಯ ನ ಕರ್ಮಣಾ ॥೩೨॥

ಯದ್ಯಾತ್ಮಾ ಮಲಿನಃ ಕರ್ತಾ ಭೋಕ್ತಾ ಚ ಸ್ಯಾತ್ಸ್ವಭಾವತಃ ।
ನಾಸ್ತಿ ತಸ್ಯ ವಿನಿರ್ಮೋಕ್ಷಃ ಸಂಸಾರಾಜ್ಜನ್ಮಕೋಟಿಭಿಃ ॥೩೩॥

ಆತ್ಮಾಽಯಂ ಕೇವಲಃ ಸ್ವಚ್ಛಃ ಶಾಂತಃ ಸೂಕ್ಷ್ಮಃ ಸನಾತನಃ ।
ಅಸ್ತಿ ಸರ್ವಾಂತರಃ ಸಾಕ್ಷೀ ಚಿನ್ಮಾತ್ರಸುಖವಿಗ್ರಹಃ ॥೩೪॥

ಹೀಗೆ ಗರ್ಭದಲ್ಲಿದ್ದ ಜೀವನು ಆಲೋಚಿಸುತ್ತ ಯೋನಿಯಂತ್ರದ ಒತ್ತಡದಿಂದ ಭೂಮಿಗೆ ಬೀಳುವನು. ಆ ಕ್ಷಣವೇ ವೈಷ್ಣವವೆಂಬ ವಾಯುವಿನ ಸ್ಪರ್ಶದಿಂದ ಆ ಜನ್ಮಾಂತರಗಳ ಜ್ಞಾನಗಳನ್ನೆಲ್ಲವನ್ನೂ ಮರೆತುಬಿಡುವನು! ॥೩೦॥

ಅಜ್ಞಾನವುಂಟಾದರೆ ರಾಗಾದಿದೋಷಗಳು ಮನಸ್ಸಿನಲ್ಲಿ ಉಂಟಾಗಿ, ಅದರಿಂದ ಧರ್ಮಾಧರ್ಮಗಳು ಅಭಿವೃದ್ಧಿಯಾಗಿ, ಹೀಗೆ ಆ ಧರ್ಮಾಧರ್ಮಗಳಿಂದ ಕ್ರಮವಾಗಿ ಶರೀರವುಂಟಾಗುವುದು. ಆ ಅಜ್ಞಾನವು ಜ್ಞಾನದಿಂದಲೇ ನಿವೃತ್ತಿಯಾಗಬೇಕು. ಕರ್ಮದಿಂದ ನಿವೃತ್ತಿಯಾಗಲಾರದು. ॥೩೧-೩೨॥

ಆತ್ಮನಿಗೆ ಮಲಿನ ಸತ್ವಪ್ರಧಾನವಾದ ಮಾಯೋಪಾಧಿಯಿಂದ ಮಾಲಿನ್ಯವುಂಟಾಗಿರುವುದು. ಈ ಮಾಲಿನ್ಯದಿಂದಲೇ ಕರ್ಮಫಲಭೋಗವುಂಟಾಗಿರುವುದು. ಈ ಮಾಲಿನ್ಯವು ಸ್ವಾಭಾವಿಕವಾದುದೇ ಆದರೆ ಕೋಟಿಜನ್ಮಗಳಾದರೂ, ಆತ್ಮನಿಗೆ ಸಂಸಾರದುಃಖದ ಬಿಡುಗಡೆಯಾಗದಿರಬೇಕಾಗುವುದು. ॥೩೩॥

ಆದರೆ ಆತ್ಮನಾದರೋ ಎಲ್ಲೆಡೆಯಲ್ಲಿಯೂ ಇರುವನು. ಅವನು ಪರಿಶುದ್ಧನು. ಅತ್ಯಂತಸೂಕ್ಷ್ಮನು. ಶಾಂತನು, ಅನಾದಿಯಾದವನು, ಸುಖಸ್ವರೂಪನು, ಸಮಸ್ತ ಜೀವರೊಳಗೂ ಸಾಕ್ಷಿಸ್ವರೂಪನಾಗಿರತಕ್ಕವನು. ಇವಿಷ್ಟು ಲಕ್ಷಣಗಳಿಂದ ಶೋಧಿತವಾದ ತ್ವಂ ಪದಾರ್ಥವನ್ನು ಹೇಳಿದಂತಾಯಿತು. ॥೩೪॥

ಅಯಂ ಸ ಭಗವಾನೀಶಃ ಸ್ವಯಂಜ್ಯೋತಿಃ ಸನಾತನಃ ।
ಅಸ್ಮಾದ್ಧಿ ಜಾಯತೇ ವಿಶ್ವಮತ್ರೈವ ಪ್ರವಿಲೀಯತೇ ॥೩೫॥

ಅಯಂ ಬ್ರಹ್ಮಾ ಶಿವೋ ವಿಷ್ಣುರಯಮಿಂದ್ರಃ ಪ್ರಜಾಪತಿಃ ।
ಅಯಂ ವಾಯುರಯಂ ಚಾಗ್ನಿರಯಂ ಸರ್ವಾಶ್ಚ ದೇವತಾಃ ॥೩೬॥

ಯ ಏವಂ ಭೂತಮಾತ್ಮಾನಮನ್ಯಥಾ ಪ್ರತಿಪದ್ಯತೇ ।
ಕಿಂ ತೇನ ನ ಕೃತಂ ಪಾಪಂ ಚೌರೇಣಾತ್ಮಾಪಹಾರಿಣಾ ॥೩೭॥

ಬ್ರಾಹ್ಮಣ್ಯಂ ಪ್ರಾಪ್ಯ ಲೋಕೇಽಸ್ಮಿನ್ನಮೂಕೋಽಬಧಿರೋ ಭವೇತ್ ।
ನಾಪಕ್ರಾಮತಿ ಸಂಸಾರಾತ್ಸ ಖಲು ಬ್ರಹ್ಮಹಾ ಭವೇತ್ ॥೩೮॥

ಆತ್ಮಾನಂ ಚೇದ್ವಿಜಾನೀಯಾದಯಮಸ್ಮೀತಿ ಪೂರುಷಃ ।
ಕಿಮಿಚ್ಛನ್ಕಸ್ಯ ಕಾಮಾಯ ಶರೀರಮನುಸಂಜ್ವರೇತ್ ॥೩೯॥

ಮಹಾಮಹಿಮನಾದ ಈಶ್ವರನು ಅನಾದಿಯಾದ ಸ್ವಪ್ರಕಾಶಸ್ವರೂಪನು. ಇವನಿಂದಲೇ ಪ್ರಪಂಚವು ಹುಟ್ಟುವುದು. ಇವನಲ್ಲಿಯೇ ಲಯವನ್ನು ಹೊಂದುವುದು. ಈ ಲಕ್ಷಣಗಳಿಂದ ತತ್ಪದಾರ್ಥವನ್ನು ಹೇಳಿದಂತಾಯಿತು. ॥೩೫॥

ಈ ಪರಮಾತ್ಮನೇ, ಬ್ರಹ್ಮ, ಶಿವ, ವಿಷ್ಣು, ಇಂದ್ರ, ಪ್ರಜಾಪತಿ, ವಾಯು, ಅಗ್ನಿ ಮುಂತಾದ ಸಮಸ್ತ ದೇವತಾಸ್ವರೂಪನು. ಹೀಗಿರುವ ಪರಮಾತ್ಮನನ್ನು ಬೇರೆಯಾಗಿ ಯಾವನು ತಿಳಿಯುವನೋ, ಅವನು ಆತ್ಮಾಪಹಾರ ರೂಪವಾದ ಕಳ್ಳತನವನ್ನು ಮಾಡಿದವನಾಗುತ್ತಾನೆ. ಇದಕ್ಕಿಂತ ನೀಚವಾದ ಪಾಪವಿಲ್ಲವು. ಹೀಗೆ ತ್ವಂ, ತತ್, ಪದಾರ್ಥಗಳಿಗೆ ಅಭೇದವನ್ನೂ ಹೇಳಿದುದಾಯಿತು. ॥೩೬-೩೭॥

ಈ ಭೂಲೋಕದಲ್ಲಿ ಬ್ರಾಹ್ಮಣನಾಗಿಹುಟ್ಟಿ, ಮೂಕನಲ್ಲದೆಯೂ, ಕಿವುಡನಲ್ಲದೆಯೂ, ಶಕ್ತನಾಗಿದ್ದರೂ, ಆಲಸ್ಯಾದಿಗಳಿಂದ ಸಚ್ಚಿದಾನಂದಸ್ವರೂಪನಾದ, ಆತ್ಮನನ್ನು ತಿಳಿಯದೆ ಮತ್ತೆ ಮತ್ತೆ ಸಂಸಾರದಲ್ಲಿ ಆಸಕ್ತನಾಗಿ ಅದನ್ನು ಬಿಡದಿದ್ದರೆ ಅವನು ಬ್ರಹ್ಮಹತ್ಯೆಯ ಪಾಪವನ್ನು ಮಾಡಿದವನಾಗುತ್ತಾನೆ. ॥೩೮॥

ಮನುಷ್ಯನು ನಾನೇ ಪರಮಾತ್ಮನಾಗಿರುವೆನು. ಎಂದು ತಿಳಿದುಕೊಂಡಮೇಲೆ ಯಾವ ಅಪೇಕ್ಷೆಯಿಂದ ಯಾರನ್ನು ಸಂತೋಷಪಡಿಸುವುದಕ್ಕಾಗಿ ಅಥವಾ ಯಾವ ಕೋರಿಕೆಯ ನೆರವೇರುವಿಕೆಗಾಗಿ ಶರೀರದಲ್ಲಿ ದುಃಖವನ್ನು ಅನುಭವಿಸುವನು? ॥೩೯॥

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥೪೦॥

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ।
ಜ್ಞಾತ್ವಾಽಽತ್ಮಾನಂ ಪರಾನಂದಂ ನ ಬಿಭೇತಿ ಕುತಶ್ಚನ ॥೪೧॥

ತಸ್ಮಾತ್ಸರ್ವಪ್ರಯತ್ನೇನ ಶ್ರದ್ಧಯಾ ಗುರುಭಕ್ತಿತಃ ।
ಉತ್ಸೃಜ್ಯ ಪ್ರಾಕೃತಂ ಭಾವಂ ಶಿವೋಽಹಮಿತಿ ಭಾವಯೇತ್ ॥೪೨॥

ಏತದ್ಧಿ ಜನ್ಮಸಾಫಲ್ಯಂ ಬ್ರಾಹ್ಮಣಾನಾಂ ವಿಶೇಷತಃ ।
ಪ್ರಾಪ್ಯೈತತ್ಕೃತಕೃತ್ಯೋ ಹಿ ದ್ವಿಜೋ ಭವತಿ ನಾನ್ಯಥಾ ॥೪೩॥

ಒಳ್ಳೆಯ ತಪಸ್ವಿಯಾದ ಬೃಹಸ್ಪತಿಯೇ, ಆತ್ಮಸಾಕ್ಷಾತ್ಕಾರವಾದ ಮನುಷ್ಯನ, ಬುದ್ಧಿಯಲ್ಲಿರುವ ಅವಿದ್ಯಾವಾಸನಾಸಂಬಂಧವಾದ ಕಾಮವು ನಾಶವಾಗುವುದು. ಸಮಸ್ತ ಸಂದೇಹಗಳೂ ನಾಶವಾಗುವುವು. ಮತ್ತು ಫಲಗಳನ್ನು ಕೊಡುವುದಕ್ಕೆ ಪ್ರಾರಂಭವಾಗದ ಹಿಂದಿನ ಸಮಸ್ತ ಜನ್ಮಗಳ ಕರ್ಮಗಳೂ ನಾಶವಾಗುವುವು. ||೪೦||

ಮಾತುಗಳು ಆತ್ಮಸ್ವರೂಪವನ್ನು ತೋರಿಸಲಾರದೆ ಹಿಂತಿರುಗುವುವು. ಮನಸ್ಸೂ, ಆ ಸ್ವರೂಪವನ್ನು ತಿಳಿಯಲಾರದು. ಇಂತಹ ಪರಮಾನಂದಸ್ವರೂಪವಾದ ಆತ್ಮನನ್ನು ತಿಳಿದವನು ಯಾವುದರಿಂದಲೂ ಭಯಪಡುವುದಿಲ್ಲ. ಎಂದರೆ ವಿಹಿತಕರ್ಮಗಳನ್ನು ಮಾಡದಿದ್ದರೂ, ಅವಿಹಿತಕರ್ಮಗಳನ್ನು ಮಾಡಿದರೂ ಭಯಪಡುವುದಿಲ್ಲವೆಂದು ಅಭಿಪ್ರಾಯವು. " ಏತಂ ಹ ವಾವ ನ ತಪತಿ, ಕಿಮಹಂ ಸಾಧು ನಾಕರವಂ ಕಿಮಹಂ ಪಾಪಮಕರವಂ " ಎಂದು ತೈ.ಉ. ವೇದವು ಹೇಳುವುದು.||೪೧||

ಆದುದರಿಂದ ಸರ್ವಪ್ರಯತ್ನದಿಂದಲೂ, ಅತ್ಯಾಸಕ್ತಿಯಿಂದಲೂ, ಗುರುಭಕ್ತಿಯಿಂದಲೂ ಕೂಡಿ, ಸಾಮಾನ್ಯನಾದ ತಿಳಿವಳಿಕೆಯಿಲ್ಲದ ಮನುಷ್ಯನ ಸ್ವಭಾವವನ್ನು ಬಿಟ್ಟು, ನಾನೇ ಶಿವನೆಂಬ ಭಾವನೆಯನ್ನು ಮಾಡುತ್ತಿರಬೇಕು. ಹೀಗೆ ಮಾಡಿದರೆ ಹುಟ್ಟಿದುದು ಸಾರ್ಥಕವಾಗುವುದು. ಬ್ರಾಹ್ಮಣನಿಗೆ ಈ ಭಾವನೆಯು ಅತ್ಯಂತ ಮುಖ್ಯವಾದುದು. ಇಂತಹ ಭಾವನೆಯನ್ನು ಹೊಂದಿದ ಬ್ರಾಹ್ಮಣನು ಕೃತಾರ್ಥನಾಗುವನು. ಮತ್ತೊಂದರಿಂದ ಕೃತಾರ್ಥತೆಯು ಬರುವುದಿಲ್ಲವು. ||೪೨-೪೩||

ಸರ್ವವೇದಾಂತಸರ್ವಸ್ವಂ ಮಯಾ ಪ್ರೋಕ್ತಂ ಬೃಹಸ್ಪತೇ ।
ಶ್ರದ್ಧಯೈವ ವಿಜಾನೀಹಿ ಶ್ರದ್ಧಾ ಸರ್ವತ್ರ ಕಾರಣಂ ॥೪೪॥

॥ ಸೂತ ಉವಾಚ ॥

ಇತಿ ಶ್ರುತ್ವಾ ಮುನಿಶ್ರೇಷ್ಠಾ ಗಿರಾಂ ನಾಥಃ ಸಮಾಹಿತಃ ।
ಸ್ತೋತುಮಾರಭತೇ ಭಕ್ತ್ಯಾ ದೇವದೇವಂ ತ್ರಿಯಂಬಕಂ ॥೪೫॥

॥ ಬೃಹಸ್ಪತಿರುವಾಚ ॥

ನಮಃ ಶಿವಾಯ ಸೋಮಾಯ ಸಪುತ್ರಾಯ ತ್ರಿಶೂಲಿನೇ ।
ಪ್ರಧಾನಪುರುಷೇಶಾಯ ಸೃಷ್ಟಿಸ್ಥಿತ್ಯಂತಹೇತವೇ ॥೪೬॥

ಸರ್ವಜ್ಞಾಯ ವರೇಣ್ಯಾಯ ಶಂಕರಾಯಾರ್ತಿಹಾರಿಣೇ ।
ನಮೋ ವೇದಾಂತವೇದ್ಯಾಯ ಚಿನ್ಮಾತ್ರಾಯ ಮಹಾತ್ಮನೇ ॥೪೭॥

ಎಲೈ ಬೃಹಸ್ಪತಿಯೇ, ಸಮಸ್ತ ವೇದಾಂತಾರ್ಥಸಾರವನ್ನು ನಾನು ಹೇಳಿರುವೆನು. ಅತ್ಯಾಸಕ್ತಿಯಿಂದ ಇದನ್ನು ತಿಳಿ. ಶ್ರುತಿಯ ಮತ್ತು ಗುರುವಿನ ಉಪದೇಶದಲ್ಲಿ ನಂಬಿಕೆಯುಳ್ಳ ಆಸಕ್ತಿಯೇ ಸಮಸ್ತಕ್ಕೂ ಕಾರಣವಾದುದು. ಶ್ರದ್ಧೆಯು ಸಮಾಧಿದ್ವಾರಾ ಪುರುಷಾರ್ಥಸಾಧನವೆಂದು ಯೋಗಸೂತ್ರದಲ್ಲಿ ಹೇಳಿರುವುದು. ॥೪೪॥

ಸೂತನು ಹೇಳಿದನು—ಎಲೈ ಮುನಿಗಳೇ, ಶಿವನು ಹೇಳಿದುದನ್ನು ಕೇಳಿ, ಬೃಹಸ್ಪತಿಯು ಏಕಾಗ್ರಚಿತ್ತತೆಯಿಂದ ಕೂಡಿ ಭಕ್ತಿಯಿಂದ ತ್ರ್ಯಂಬಕನಾದ ಶಿವನನ್ನು ಸ್ತೋತ್ರಮಾಡಲು ಪ್ರಾರಂಭಿಸಿದನು. ॥೪೫॥

ಬೃಹಸ್ಪತಿಯು ಹೇಳಿದನು—ಮಂಗಳಸ್ವರೂಪನೂ, ಉಮಾದೇವೀಸಹಿತನಾದವನೂ, ಸ್ಕಂದಗಣೇಶರಿಂದ ಕೂಡಿದವನೂ, ತ್ರಿಶೂಲಧಾರಿಯೂ, ಪ್ರಕೃತಿಪುರುಷರಿಗೆ ಒಡೆಯನೂ, ಜಗತ್ತಿನ ಸೃಷ್ಟಿಸ್ಥಿತಿಸಂಹಾರಕಾರಣನೂ ಆದ ದೇವನಿಗೆ ನಮಸ್ಕಾರವು. ॥೪೬॥

ಎಲ್ಲವನ್ನೂ ತಿಳಿದವನೂ, ಶ್ರೇಷ್ಠನೂ, ಸುಖವನ್ನುಂಟುಮಾಡುವವನೂ, ದುಃಖನಾಶಕನೂ, ವೇದಾಂತವಾಕ್ಯಗಳಿಂದ ತಿಳಿಯಲ್ಪಡತಕ್ಕವನೂ, ಜ್ಞಾನಸ್ವರೂಪನೂ, ಮಹಾಮಹಿಮನೂ ಆದ ಶಿವನಿಗೆ ನಮಸ್ಕಾರವು. ॥೪೭॥

ದೇವದೇವಾಯ ದೇವಾಯ ನಮೋ ವಿಶ್ವೇಶ್ವರಾಯ ಚ ।
ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಲಂ ॥೪೮॥

ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಂ ನಮಾಮ್ಯಹಂ ।
ವಿಶ್ವಂ ವಿಶ್ವಾಧಿಕಂ ರುದ್ರಂ ವಿಶ್ವಮೂರ್ತಿಂ ವೃಷಧ್ವಜಂ ॥೪೯॥

ನಮಾಮಿ ಸತ್ಯವಿಜ್ಞಾನಂ ಹೃದಯಾಕಾಶಮಧ್ಯಗಂ ।
ಚಂದ್ರಃ ಸೂರ್ಯಸ್ತಥೇಂದ್ರಶ್ಚ ವಹ್ನಿಶ್ಚ ಯಮಸಂಜ್ಞಕಃ ॥೫೦॥

ನಿರ್ಋತಿರ್ವರುಣೋ ವಾಯುರ್ಧನದೋ ರುದ್ರಸಂಜ್ಞಿತಃ ।
ಸ್ಥೂಲಾ ಮೂರ್ತಿರ್ಮಹೇಶಸ್ಯ ತಯಾ ವ್ಯಾಪ್ತಮಿದಂ ಜಗತ್॥೫೧॥

ಯಸ್ಯ ಪ್ರಸಾದಲೇಶೇನ ದೇವಾ ದೇವತ್ವಮಾಗತಾಃ ।
ತಂ ನಮಾಮಿ ಮಹೇಶಾನಂ ಸರ್ವಜ್ಞಮಪರಾಜಿತಂ ॥೫೨॥

ದೇವತೆಗಳಿಗೆಲ್ಲರಿಗೂ ದೇವನೂ, ಸಮಸ್ತ ಪ್ರಪಂಚಗಳಿಗೂ, ಒಡೆಯನೂ, ಋತಸತ್ಯರೂಪವಾದ ಪರಬ್ರಹ್ಮಸ್ವರೂಪನೂ, ಕೃಷ್ಣಪಿಂಗಲನೂ, ಊರ್ಧ್ವರೇತಸ್ಸುಳ್ಳವನೂ, ಅಸಮವಾದ ಕಣ್ಣುಗಳುಳ್ಳವನೂ, ಪ್ರಪಂಚರೂಪನೂ ಆದ ಶಿನಗೆ ನಾನು ನಮಸ್ಕಾರಮಾಡುವೆನು. ||೪೮||

ಪ್ರಪಂಚಸ್ವರೂಪನಾಗಿ, ಪ್ರಪಂಚಕ್ಕಿಂತಲೂ ಹೆಚ್ಚಿನವನೂ, ದುಃಖಗಳ ನಿವಾರಕನೂ, ಪ್ರಪಂಚಾಕಾರನೂ, ವೃಷಧ್ವಜನೂ, ಸತ್ಯಸ್ವರೂಪನೂ, ವಿಜ್ಞಾನ ಸ್ವರೂಪನೂ, ಆಗಿ ಹೃದಯಾಕಾಶಮಧ್ಯದಲ್ಲಿ ತೋರುತ್ತಿರುವ ಶಿವನಿಗೆ ನಮಸ್ಕಾರ ಮಾಡುವೆನು. ||೪೯||

ಚಂದ್ರ, ಸೂರ್ಯ, ದೇವೇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ, ಈಶಾನ ಇವರೆಲ್ಲರೂ, ಮಹೇಶ್ವರನ ಸ್ಥೂಲವಾದ ಆಕಾರಗಳು. ಈ ಪ್ರಪಂಚವೆಲ್ಲವೂ, ಆ ದೇವನ ಸ್ಥೂಲಮೂರ್ತಿಗಳಿಂದಲೇ ತುಂಬಿರುವುದು. ||೫೦-೫೧||

ಯಾವ ದೇವನ ಅಲ್ಪವಾದ ಅನುಗ್ರಹದಿಂದ, ದೇವತೆಗಳೆಲ್ಲರೂ, ತಮ್ಮ ದೇವತ್ವವನ್ನು ಹೊಂದಿದರೋ ಅಂತಹ ಸರ್ವಜ್ಞನೂ, ಇತರರಿಂದ ಜಯಿಸಲಾಗ ದವನೂ, ಆದ ಮಹೇಶ್ವರನಿಗೆ ನಮಸ್ಕಾರಮಾಡುವೆನು. ||೫೨||

ನಮೋ ದಿಗ್ವಾಸಸೇ ತುಭ್ಯಮಂಬಿಕಾಪತಯೇ ನಮಃ ।
ಉಮಾಯಾಃ ಪತಯೇ ತುಭ್ಯಮೀಶಾನಾಯ ನಮೋ ನಮಃ ॥೫೩॥

ನಮೋ ನಮೋ ನಮಸ್ತುಭ್ಯಂ ಪುನರ್ಭೂಯೋ ನಮೋ ನಮಃ ।
ಓಂಕಾರಾಂತಾಯ ಸೂಕ್ಷ್ಮಾಯ ಮಾಯಾತೀತಾಯ ತೇ ನಮಃ ॥೫೪॥

ನಮೋ ನಮಃ ಕಾರಣಕಾರಣಾಯ ತೇ ।
ನಮೋ ನಮೋ ಮಂಗಲಮಂಗಲಾತ್ಮನೇ ॥
ನಮೋ ನಮೋ ವೇದವಿದಾಂ ಮನೀಷಿಣಾಂ ।
ಉಪಾಸನೀಯಾಯ ನಮೋ ನಮೋ ನಮಃ ॥೫೫॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ
ಪಿಂಡೋತ್ಪತ್ತಿಕಥನಂ ನಾಮ ದಶಮೋಽಧ್ಯಾಯಃ

ದಿಗಂಬರನೂ, ಅಂಬಿಕಾಪತಿಯೂ, ಉಮಾದೇವಿಯ ಪತಿಯೂ, ಈಶಾನನೂ, ಆದ ನಿನಗೆ ನಮಸ್ಕಾರವು. ॥೫೩॥

ವೇದಗಳ ಅಂತವಾದ ಓಂಕಾರದ ಕೊನೆಯ ಬಿಂದುನಾದಸ್ವರೂಪನೂ, ಅತ್ಯಂತ ಸೂಕ್ಷ್ಮಸ್ವರೂಪನೂ, ಮಾಯೆಯನ್ನು ಮೀರಿದವನೂ ಆದ ನಿನಗೆ ಮತ್ತೆ ಮತ್ತೆ ನಮಸ್ಕಾರಮಾಡುವೆನು. ॥೫೪॥

ಕಾರಣವಾದ ಸಕಲ ವಸ್ತುಗಳಿಗೂ ಕಾರಣನಾದ ಮಂಗಲಕರನಾದ ಸಮಸ್ತಕ್ಕೂ ಮಂಗಲಸ್ವರೂಪನಾದ, ವೇದವನ್ನು ತಿಳಿದ ಬುದ್ಧಿವಂತರು ಧ್ಯಾನ ಮಾಡತಕ್ಕ ಶಿವನಿಗೆ ಅನೇಕ ನಮಸ್ಕಾರಗಳು. ॥೫೫॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ನರಗರ್ಭದಲ್ಲಿ ಪಿಂಡದ ಉತ್ಪತ್ತಿಕ್ರಮವನ್ನು ವರ್ಣಿಸಿರುವ
ಹತ್ತನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಜ್ಞಾನಯೋಗಖಂಡಂ

|| ಏಕಾದಶೋಽಧ್ಯಾಯಃ ||

ಹನ್ನೊಂದನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ನಾಡೀಚಕ್ರಮನುತ್ತಮಂ ।
ಶ್ರದ್ಧಯಾ ಗುರುಭಕ್ತ್ಯಾಚ ವಿದ್ಧಿವಾಚಸ್ಪತೇಽಧುನಾ ||೧||

ಶರೀರಂ ತಾವದೇವಸ್ಯಾತ್ ಷಣ್ಣವತ್ಯಂಗುಲಾತ್ಮಕಂ ।
ಮನುಷ್ಯಾಣಾಂ ಮುನಿಶ್ರೇಷ್ಠ ಸ್ವಾಂಗುಲೀಭಿರಿತಿಶ್ರುತಿಃ ||೨||

ದೇಹಮಧ್ಯೇ ಶಿಖಿಸ್ಥಾನಂ ತಪ್ತಜಾಂಬೂನದ ಪ್ರಭಂ ।
ತ್ರಿಕೋಣಂ ಮನುಜಾನಾಂತು ಸತ್ಯಮುಕ್ತಂ ಬೃಹಸ್ಪತೇ ||೩||

ಈಶ್ವರನು ಹಿಂದಿನ ಅಧ್ಯಾಯದಲ್ಲಿ ಶರೀರದ ಉತ್ಪತ್ತಿಯನ್ನೂ ಅದರ ಸ್ಥಿತಿಯನ್ನೂ ವರ್ಣಿಸಿ ನಾಡಿಗಳ ಶುದ್ಧಿಗೋಸ್ಕರವಾಗಿ ನಾಡೀಚಕ್ರಗಳ ಸ್ಥಿತಿಯನ್ನು ಈ ಅಧ್ಯಾಯದಲ್ಲಿ ಹೇಳುತ್ತಾ, ಎಲೈ ಬೃಹಸ್ಪತಿಯೇ, ನಾನು ಹೇಳುವ ನಾಡೀಚಕ್ರಗಳ ಸ್ಥಿತಿಯನ್ನು ಆಸಕ್ತಿಯಿಂದಲೂ ಗುರುಭಕ್ತಿಯಿಂದಲೂ ಕೇಳಿ ತಿಳಿದುಕೊ. ||೧||

ಮನುಷ್ಯರ ಶರೀರವು ಅವರವರ ಕೈಬೆರಳುಗಳ ಅಳತೆಯಲ್ಲಿ ತೊಂಭತ್ತಾರು ಅಂಗುಲಗಳ ಎತ್ತರ ಉಳ್ಳದ್ದಾಗಿರುವುದು. ಎಂದು ವೇದವು ಹೇಳುವುದು. ||೨||

ಬೃಹಸ್ಪತಿಯೇ, ಮನುಷ್ಯರ ದೇಹದ ನಡುವೆ ಅಗ್ನಿಸ್ಥಾನವಿರುವುದು. ಅದು ಪುಟವಿಟ್ಟ ಚಿನ್ನದಂತೆ ಕಾಂತಿಯುಕ್ತವಾಗಿರುವುದು. ಗುದದಿಂದ ಎರಡಂಗುಲ

ಗುದಾತ್ತು ದ್ವ್ಯಂಗುಲಾದೂರ್ಧ್ವಂ ಮೇಢ್ರಾತ್ತುದ್ವ್ಯಂಗುಲಾದಧಃ ।
ದೇಹಮಧ್ಯಂ ವಿಜಾನೀಹಿ ಮನುಷ್ಯಾಣಾಂ ಬೃಹಸ್ಪತೇ ॥೪॥

ಕಂದಸ್ಥಾನಂ ಮುನಿಶ್ರೇಷ್ಠ ಮೂಲಾಧಾರಾನ್ನವಾಂಗುಲಿಂ ।
ಚತುರಂಗುಲಮಾಯಾಮವಿಸ್ತಾರಂ ಮುನಿಸತ್ತಮ ॥೫॥

ಕುಕ್ಕುಟಾಂಡವದಾಕಾರಂ ಭೂಷಿತಂ ಚ ತ್ವಗಾದಿಭಿಃ ।
ತನ್ಮಧ್ಯಂ ನಾಭಿರಿತ್ಯುಕ್ತಃ ಮುನೇ ವೇದಾಂತವೇದಿಭಿಃ ॥೬॥

ಕಂದಮಧ್ಯೇ ಸ್ಥಿತಾ ನಾಡೀ ಸುಷುಮ್ನೇತಿ ಪ್ರಕೀರ್ತಿತಾ।
ತಿಷ್ಠಂತಿ ಪರಿತಸ್ತಸ್ಯ ನಾಡಯೋ ಮುನಿಸತ್ತಮ ॥೭॥

ದ್ವಿಸಪ್ತತಿ ಸಹಸ್ರಾಣಿ ತಾಸಾಂ ಮುಖ್ಯಾಶ್ಚತುರ್ದಶ ।
ಸುಷುಮ್ನಾ ಪಿಂಗಳಾ ತದ್ವದಿಡಾ ಚೈವ ಸರಸ್ವತೀ ॥೮॥

ಪೂಷಾ ಚ ವಾರುಣೀ ಚೈವ ಹಸ್ತಿಜಿಹ್ವಾ ಯಶಸ್ವಿನೀ ।
ಅಲಂಬುಷಾ ಕುಹೂಶ್ಚೈವ ವಿಶ್ವೋದಾರಾ ಪಯಸ್ವಿನೀ ॥೯॥

ಶಂಕಿನೀಚೈವ ಗಾಂಧಾರೀ ಇತಿ ಮುಖ್ಯಾಶ್ಚತುರ್ದಶ ।
ತಾಸಾಂ ಮುಖ್ಯತಮಾಸ್ತಿಸ್ರ ಸ್ತಿಸೃಷ್ವೇಕಾ ವರಾಮುನೇ ॥೧೦॥

ಮೇಲಕ್ಕೂ ಮೇಢ್ರದಿಂದ ಎರಡಂಗುಲ ಕೆಳಕ್ಕೂ ಇರುವ ಪ್ರದೇಶವನ್ನು ದೇಹ ಮಧ್ಯವೆಂದು ತಿಳಿಯಬೇಕು. ಅದನ್ನೇ ಮೂಲಾಧಾರವೆಂದು ಹೇಳುವರು. ||೩-೪||

ಮೂಲಾಧಾರದಿಂದ ಒಂಭತ್ತಂಗುಲ ಮೇಲ್ಭಾಗದಲ್ಲಿ ನಾಲ್ಕಂಗುಲ ಎತ್ತರವೂ, ಅಷ್ಟೇ ವಿಸ್ತಾರವುಳ್ಳ ಕೋಳಿಯ ಮೊಟ್ಟೆಯ ಆಕಾರವಾದ ಚರ್ಮ ಮತ್ತು ಮೂಳೆಗಳಿಂದ ಅಲಂಕಾರವಾಗಿರುವ ಕಂದಸ್ಥಾನವಿರುವುದು. ಅದರ ಮಧ್ಯಪ್ರದೇಶವನ್ನು ವೇದಾಂತಿಗಳು ನಾಭಿಯೆಂದು ಹೇಳುವರು. ||೫-೬||

ಕಂದಮಧ್ಯದಲ್ಲಿರುವ ನಾಡಿಗೆ ಸುಷುಮ್ನಾ ಎಂದು ಹೆಸರು. ಆ ಸುಷುಮ್ನಾ ನಾಡಿಯ ಸುತ್ತಲೂ ಎಪ್ಪತ್ತೆರಡು ಸಾವಿರ ನಾಡಿಗಳಿರುವುವು. ಅವುಗಳಲ್ಲಿ ಸುಷುಮ್ನಾ ಪಿಂಗಳಾ, ಇಡಾ, ಸರಸ್ವತೀ, ಪೂಷಾ, ವಾರುಣೀ, ಹಸ್ತಿಜಿಹ್ವಾ, ಯಶಸ್ವಿನೀ, ಅಲಂಬುಷಾ, ಕುಹೂ, ವಿಶ್ವೋದಾರಾ, ಪಯಸ್ವಿನೀ, ಶಂಖಿನೀ, ಗಾಂಧಾರೀ ಎಂಬ ಹದಿನಾಲ್ಕುನಾಡಿಗಳು ಮುಖ್ಯವಾದುವುಗಳು ಅವುಗಳಲ್ಲೂ ಮುಖ್ಯತಮವಾದುವುಗಳು

ಬ್ರಹ್ಮನಾಡೀತಿ ಸಾ ಪ್ರೋಕ್ತಾ ಮುನೇ ವೇದಾಂತವೇದಿಭಿಃ ।
ಪೃಷ್ಠಮಧ್ಯೇ ಸ್ಥಿತೇನಾಸ್ಥ್ನಾ ವೀಣಾದಂಡೇನ ಸುವ್ರತ ॥೧೧॥

ಸಹಮಸ್ತಕಪರ್ಯಂತಂ ಸುಷುಮ್ನಾ ಸುಪ್ರತಿಷ್ಠಿತಾ ।
ನಾಭಿಕಂದಾದಧಃ ಸ್ಥಾನಂ ಕುಂಡಲ್ಯಾದ್ವ್ಯಂಗುಲಂ ಮುನೇ ॥೧೨॥

ಮೂರು. ಆ ಮೂರರಲ್ಲಿ ಒಂದು ಅತ್ಯಂತ ಶ್ರೇಷ್ಠವಾದುದು. ಅದೇ ಸುಷುಮ್ನಾ ನಾಡಿಯು. ॥೭-೮-೯-೧೦॥

ಸುಷುಮ್ನಾನಾಡಿಯು ಬ್ರಹ್ಮಲೋಕಪ್ರಾಪ್ತಿಗೆ ಮಾರ್ಗವಾದುದರಿಂದ ಅದನ್ನು ಬ್ರಹ್ಮನಾಡಿಯೆಂದು ವೇದಾಂತವನ್ನು ಬಲ್ಲವರು ಹೇಳುವರು. ಈ ನಾಡಿಯು ಪೃಷ್ಠಮಧ್ಯಪ್ರದೇಶದಲ್ಲಿ ವೀಣಾದಂಡದಂತಿರುವ ಮೂಳೆಯ ಮಾರ್ಗವಾಗಿ ತಲೆಯ ವರೆಗೂ ಹೋಗಿರುವುದು. ಅಥರ್ವಣೋಪನಿಷತ್ತಿನಲ್ಲಿ "ಶತಂಚೈಕಾಚ ಹೃದಯಸ್ಯ ನಾಡ್ಯಃ" ಕಠ. ಉ. ೬. ೧೬. ಇತ್ಯಾದಿಯಾಗಿ ಹೃದಯದಲ್ಲಿ ನೂರೊಂದು ನಾಡಿಗಳಿರುವುವು. ಅದರಲ್ಲಿ ಒಂದು ನಾಡಿಯು ನೆತ್ತಿಯವರೆಗೆ ಹೋಗಿರುವುದು. ಆ ನಾಡಿಯ ಮಾರ್ಗದಲ್ಲಿ ಹೋದ ಜೀವನು ಅಮೃತತ್ವ (ಮೋಕ್ಷ) ವನ್ನು ಪಡೆವನು. ಮಿಕ್ಕ ನಾಡಿಗಳಿಂದ ಹೋದ ಜೀವನಿಗೆ ಪ್ರಾಣೋತ್ಕ್ರಮಣವಾಯಿತೆನ್ನುವರು. ಇಲ್ಲಿ ಅಮೃತತ್ವ (ಮೋಕ್ಷ) ವೆಂಬುದು ಬ್ರಹ್ಮಲೋಕಪ್ರಾಪ್ತಿಯೆಂದು ಹೇಳುವರು. "ಆಭೂತಸಂಪ್ಲವಂ ಸ್ಥಾನ ಮಮೃತತ್ವಂ ಹಿ ಭಾಷ್ಯತೇ" ಎಂಬುದೇ ಪ್ರಮಾಣವು. ॥೧೧॥

ಬೃಹಸ್ಪತಿಯೇ, ನಾಭಿಕಂದದಿಂದ ಕೆಳಗೆ ಎರಡಂಗುಲ ದೂರದಲ್ಲಿ ಕುಂಡಲಿನೀ ಸ್ಥಾನವಿರುವುದು. ಆ ಕುಂಡಲಿಯು ಎಂಟುವಿಧವಾದ ಪ್ರಕೃತಿಸ್ವರೂಪವಾದುದು. ಮೂಲಾಧಾರದಲ್ಲಿ ಹುಟ್ಟಿದ ವಾಯುವು ಇಡಾ, ಪಿಂಗಳಾ ಎಂಬ ನಾಡಿಗಳಿಂದ ಹೊರಗೆ ಬಂದು ಮೂಗಿನ ತುದಿಗೆ ಹನ್ನೆರಡಂಗುಲ ದೂರದಲ್ಲಿ ಕಾಣದೇ ಹೋಗುವುದು. ಎಂದು "ದೇಹೇಪಿ ಮೂಲಾಧಾರೇಸ್ಮಿನ್ಸಮುದ್ಯತಿ ಸಮೀರಣಃ । ನಾಡೀಭ್ಯಾಮಸ್ತಮಭ್ಯೇತಿ ಘ್ರಾಣತೋ ದ್ವಿಷಡಂಗುಲೇ" ಎಂಬ ಪ್ರಮಾಣವಚನದಿಂದ ಹೇಳಿರುವುದು. ಇಲ್ಲಿ ಮೂಲಾಧಾರದಲ್ಲಿ ಹುಟ್ಟಿದ ವಾಯುವು ತನಗೆ ಇದಿರಾಗಿರುವ ಮಧ್ಯದಲ್ಲಿರುವ ಸುಷುಮ್ನಾ ನಾಡಿಯ ಮಾರ್ಗವನ್ನು ಬಿಟ್ಟು ಅದರ ಪಕ್ಕಗಳಲ್ಲಿರುವ ಇಡಾ ಪಿಂಗಳಾನಾಡಿಗಳಲ್ಲಿ ಸಂಚರಿಸಲು ಕಾರಣವೇನೆಂದರೆ ಸುಷುಮ್ನಾ ನಾಡಿಯ ರಂಧ್ರವನ್ನು ಕುಂಡಲಿನೀಶಕ್ತಿಯು ತನ್ನ ಹೆಡೆಯ ತುದಿಯಿಂದ ಮುಚ್ಚಿಕೊಂ

ಅಷ್ಟಪ್ರಕೃತಿರೂಪಾ ಸಾ ಕುಂಡಲೀ ಮುನಿಸತ್ತಮ ।
ಯಥಾವದ್ವಾಯುಚೇಷ್ಟಾಂ ಚ ಜಲಾನ್ನಾದೀನಿ ನಿತ್ಯಶಃ ॥೧೩॥

ಪರಿತಃ ಕಂದ ಪಾರ್ಶ್ವೇಷು ನಿರುಧ್ಯೈವ ಸದಾ ಸ್ಥಿತಾ ।
ಸ್ವಮುಖೇನ ಸದಾವೇಷ್ಟ್ಯ ಬ್ರಹ್ಮರಂಧ್ರಮುಖಂ ಮುನೇ ॥೧೪॥

ಡಿರುವುದು. ಆ ಕುಂಡಲಿಯು, "ಮೂಲಪ್ರಕೃತಿ ರವಿಕೃತಿರ್ಮಹದಾದ್ಯಾಃ ಪ್ರಕೃತಿ ವಿಕೃತಯಃ ಸಪ್ತ" ಎಂದು ಮೂಲಪ್ರಕೃತಿರೂಪವಾದುದು. ಮಹತ್ತತ್ವವೇ ಮೊದಲಾದ ಏಳು ಪ್ರಕೃತಿವಿಕಾರಗಳಿಂದ ಕೂಡಿ ಎಂಟು ಸುರಳಿಯನ್ನು ಸುತ್ತಿ ಕೊಂಡು ಇರುವುದು. ॥೧೨॥

ಕುಂಡಲೀ ಪರಿತಸ್ತಸ್ಮಾದಷ್ಟಧಾ ಕುಂಡಲೀಕೃತಾ ।
ಅಷ್ಟಪ್ರಕೃತಿರೂಪಾ ಸಾ ಸುಪ್ತಸರ್ಪಸಮಾಕೃತಿಃ ॥

ಎಂಬ ಪ್ರಮಾಣವಚನದಿಂದ ನಿದ್ರೆಮಾಡುತ್ತಿರುವ ಸರ್ಪದಂತಿರುವುದೆಂದು ಹೇಳಿದೆ.

ಈ ಕುಂಡಲಿನೀಶಕ್ತಿಯು ಮೂಲಾಧಾರದಲ್ಲಿ ಹುಟ್ಟಿದ ವಾಯುವು ತನಗೆ ಇದಿರಾಗಿರುವ ಸುಷುಮ್ನಾನಾಡಿಯ ರಂಧ್ರದೊಳಗೆ ಹೋಗದಂತೆಯೂ, ಕರುಳಿನ ಲ್ಲಿರುವ ಆಹಾರವನ್ನೂ, ನೀರನ್ನೂ ಮೂಲಾಧಾರದಲ್ಲಿರುವ ಅಗ್ನಿಗೆ ದೂರಮಾಡಿ ತಾನು ನಡುವೇ ಇದ್ದುಕೊಂಡು ಆ ಆ ಆಹಾರಗಳು ಬೇಗ ಜೀರ್ಣವಾಗದಂತೆಯೂ, ಮಾಡಿರುವುದು. ನಾಭಿಕಂದದ ಸುತ್ತಲೂ ತಾನು ಯಾವಾಗಲೂ ಇರುವುದು. ತನ್ನ ಬಾಯಿಂದ ಸುಷುಮ್ನಾನಾಡಿಯ ರಂಧ್ರವನ್ನು ಮುಚ್ಚಿ ತನ್ನ ಕುತ್ತಿಗೆಗೆ ಎಂಟು ಸುರಳಿಯನ್ನು ಸುತ್ತಿ ಮಿಕ್ಕ ಶರೀರವನ್ನು ಬೆನ್ನು ಮೂಳೆಯ ಮಾರ್ಗವಾಗಿ ಮೇಲಕ್ಕೆ ತೆಗೆದುಕೊಂಡು ಹೋಗಿ ಬಾಲದಿಂದ ಬ್ರಹ್ಮರಂಧ್ರದ ಬಾಯನ್ನೂ ತನ್ನ ಬಾಯನ್ನೂ ಮುಚ್ಚಿಕೊಂಡಿರುವುದು. ಎಂಬುದನ್ನು—

ಕಂದನಾಭೇರಧೋರಂಧ್ರೇ ನಿಧಾಯ ಸ್ವಫಣಾಂ ದೃಢಂ ।
ಸನ್ನಿರುಧ್ಯಮರುನ್ಮಾರ್ಗಂ ಪುಚ್ಛೇನ ಸ್ವಮುಖಂ ತಥಾ ॥

ಬ್ರಹ್ಮರಂಧ್ರಂಚ ಸಂವೇಷ್ಟ್ಯ ಪೃಷ್ಠಾಸ್ಥ್ನಾ ಸಹಸುಸ್ಥಿತಾ । ಎಂಬ ಪ್ರಮಾಣ ವಚನದಿಂದ ವಿವರಿಸಿರುವುದು. ॥೧೩-೧೪॥

ಸುಷುಮ್ನಾಯಾ ಇಡಾ ಸವ್ಯೇ ದಕ್ಷಿಣೇ ಪಿಂಗಳಾ ಸ್ಮೃತಾ ।
ಸರಸ್ವತೀ ಕುಹೂಶ್ಚೈವ ಸುಷುಮ್ನಾ ಪಾರ್ಶ್ವಯೋಃ ಸ್ಥಿತೇ ॥೧೫॥

ಗಾಂಧಾರೀ ಹಸ್ತಿಜಿಹ್ವಾ ಚ ಇಡಾಯಾಃ ಪೂರ್ವಪಾರ್ಶ್ವಯೋಃ ।
ಪೂಷಾಯಶಸ್ವಿನೀಚೈವ ಪಿಂಗಳಾಪೃಷ್ಠಪೂರ್ವಯೋಃ ॥೧೬॥

ಕುಹ್ವಾಶ್ಚ ಹಸ್ತಿಜಿಹ್ವಾಯಾ ಮಧ್ಯೇ ವಿಶ್ವೋದರೀ ಸ್ಥಿತಾ ।
ಯಶಸ್ವಿನ್ಯಾಃ ಕುಹೋರ್ಮಧ್ಯೇ ವಾರುಣೀ ಸುಪ್ರತಿಷ್ಠಿತಾ ॥೧೭॥

ಪೂಷಾಯಾಶ್ಚ ಸರಸ್ವತ್ಯಾ ಮಧ್ಯೇ ಪ್ರೋಕ್ತಾ ಪಯಸ್ವಿನೀ ।
ಗಾಂಧಾರಾಯಾಃ ಸರಸ್ವತ್ಯಾ ಮಧ್ಯೇ ಪ್ರೋಕ್ತಾ ಚ ಶಂಖಿನೀ ॥೧೮॥

ಅಲಂಬುಷಾ ಸ್ಥಿತಾಪಾಯುಪರ್ಯನ್ತಂ ಕಂದಮಧ್ಯತಃ ।
ಪೂರ್ವಭಾಗೇ ಸುಷುಮ್ನಾಯಾ ಮೇಢ್ರಾಂತಂ ಸಂಸ್ಥಿತಾ ಕುಹೂಃ ॥೧೯॥

ಹೀಗೆ ಮುಚ್ಚಿಕೊಂಡಿರುವ ಸುಷುಮ್ನಾನಾಡಿಯ ದ್ವಾರವನ್ನು ತೆರೆಯಬೇಕಾಗಿರುವುದರಿಂದ ಅದರ ಸ್ಥಿತಿಯನ್ನು ವಿವರಿಸಿ, ಈಗ ತೆರೆದಿರುವ ಮಿಕ್ಕ ನಾಡಿಗಳ ದ್ವಾರವನ್ನು ಮುಚ್ಚಬೇಕಾಗಿರುವುದರಿಂದ ಅವುಗಳ ಸ್ಥಿತಿಯನ್ನು ವಿವರಿಸಲಾಗುವುದು. ಸುಷುಮ್ನಾನಾಡಿಯ ಎಡಗಡೆಯಲ್ಲಿ ಇಡಾನಾಡಿಯೂ, ಬಲಗಡೆಯಲ್ಲಿ ಪಿಂಗಳಾನಾಡಿಯೂ, ಮುಂಭಾಗದಲ್ಲಿ ಸರಸ್ವತೀನಾಡಿಯೂ, ಹಿಂಭಾಗದಲ್ಲಿ ಕುಹೂ ನಾಡಿಯೂ ಇರುವುದು. ||೧೫||

ಇಡಾನಾಡಿಯ ಮುಂಭಾಗದಲ್ಲಿ ಗಾಂಧಾರೀ, ಹಿಂಭಾಗದಲ್ಲಿ ಹಸ್ತಿಜಿಹ್ವಾ ನಾಡಿಗಳೂ, ಪಿಂಗಳಾನಾಡಿಯ ಪೂರ್ವಭಾಗದಲ್ಲಿ ಯಶಸ್ವಿನೀ, ಹಿಂಭಾಗದಲ್ಲಿ ಪೂಷಾ, ನಾಡಿಗಳೂ ಇರುವುವು. ||೧೬||

ಕುಹೂ, ಹಸ್ತಿಜಿಹ್ವಾನಾಡಿಗಳ ನಡುವೆ ವಿಶ್ವೋದರೀನಾಡಿಯೂ, ಯಶಸ್ವಿನೀ ಕುಹೂ ನಾಡಿಗಳ ನಡುವೆ ವಾರುಣೀನಾಡಿಯೂ, ಪೂಷಾಸರಸ್ವತಿಗಳ ನಡುವೆ ಪಯಸ್ವಿನೀನಾಡಿಯೂ, ಗಾಂಧಾರೀ ಸರಸ್ವತಿಗಳ ನಡುವೆ ಶಂಖಿನೀ ನಾಡಿಯೂ ಇರುವುವು. ||೧೭-೧೮||

ಅಲಂಬುಷಾನಾಡಿಯು ಕಂದಮಧ್ಯದಿಂದ ಗುದದವರೆಗೆ ಹೋಗಿರುವುದು. ಕುಹೂನಾಡಿಯು ಸುಷುಮ್ನಾನಾಡಿಯ ಹಿಂಭಾಗದಲ್ಲಿ ಹುಟ್ಟಿದರೂ, ಆ ಸುಷು

ಅಥಶ್ಚೋರ್ಧ್ವಗಂ ಸ್ಥಿತಾ ನಾಡೀ ವಾರುಣೀ ಸರ್ವಗಾಮಿನೀ ।
ಪಿಂಗಳಾಸಂಜ್ಞಿತಾನಾಡೀ ಯಾಮ್ಯನಾಸಾಂತ ಮಿಷ್ಯತೇ ॥೨೦॥

ಇಡಾ ಚೋತ್ತರನಾಸಾಂತಂ ಸ್ಥಿತಾ ವಾಚಸ್ಪತೇ ತಥಾ ।
ಯಶಸ್ವಿನೀ ಚ ಯಾಮ್ಯಸ್ಯ ಪಾದಾಂಗುಷ್ಠಾಂತಮಿಷ್ಯತೇ ॥೨೧॥

ಪೂಷಾ ಯಾಮ್ಯಾಕ್ಷಿಪರ್ಯಂತಂ ಪಿಂಗಳಾಯಾಸ್ತು ಪೃಷ್ಠತಃ ।
ಪಯಸ್ವಿನೀ ತಥಾ ಯಾಮ್ಯ ಕರ್ಣಾಂತಂ ಪ್ರೋಚ್ಯತೇ ಬುಧೈಃ॥೨೨॥

ಸರಸ್ವತೀ ತಥಾ ಚೋರ್ಧ್ವಗಮಾ ಜಿಹ್ವಾಯಾಃ ಸ್ಥಿತಾ ಮುನೇ ।
ಹಸ್ತಿಜಿಹ್ವಾ ತಥಾ ಸವ್ಯ ಪಾದಾಂಗುಷ್ಠಾನ್ತ ಮಿಷ್ಯತೇ ॥೨೩॥

ಶಂಖಿನೀ ನಾಮ ಯಾ ನಾಡೀ ಸವ್ಯಕರ್ಣಾಂತಮುಚ್ಯತೇ ।
ಗಾಂಧಾರೀ ಸವ್ಯನೇತ್ರಾಂತಾ ಪ್ರೋಕ್ತಾ ವೇದಾಂತ ವೇದಿಭಿಃ ॥೨೪॥

ವಿಶ್ವೋದರಾಭಿಧಾ ನಾಡೀ ತುಂಡಮಧ್ಯೇ ವ್ಯವಸ್ಥಿತಾ ।
ಪ್ರಾಣಾಪಾನಸ್ತಥಾ ವ್ಯಾನಃ ಸಮಾನೋದಾನ ಏವಚ ॥೨೫॥

ವ್ನಿಯ ಮುಂಭಾಗಕ್ಕೆ ಬಂದು ಮೇಢ್ರದವರೆಗೆ ಹೋಗುವುದು. ವಾರುಣೀನಾಡಿಯು ಶರೀರದ ಮೇಲುಗಡೆಗೂ ಕೆಳಗಡೆಗೂ ಇರುವ ಎಲ್ಲ ಅವಯವಗಳಲ್ಲಿಯೂ ಹರಡಿಕೊಂಡಿರುವುದು. ಪಿಂಗಳಾನಾಡಿಯು ಬಲಗಡೆಯ ಮೂಗಿನ ಕೊನೆಯವರೆಗೂ ಹೋಗಿರುವುದು. ||೧೯-೨೦||

ಯಶಸ್ವಿನೀನಾಡಿಯು ಬಲಗಾಲಿನ ಹೆಬ್ಬೆರಳಿನ ತುದಿಯವರೆಗೂ, ಪಿಂಗಳಾನಾಡಿಯ ಹಿಂಭಾಗದಿಂದ ಹೊರಟ ಪೂಷಾನಾಡಿಯು ಬಲಗಣ್ಣಿನವರೆವಿಗೂ, ಪಯಸ್ವಿನೀನಾಡಿಯು ಬಲಗಿವಿಯ ವರೆಗೂ, ಸರಸ್ವತೀನಾಡಿಯು ನಾಲಿಗೆಯವರೆಗೂ, ಹಸ್ತಿಜಿಹ್ವಾನಾಡಿಯು ಎಡಗಾಲಿನ ಹೆಬ್ಬೆರಳವರೆಗೂ, ಶಂಖಿನೀನಾಡಿಯು ಎಡಕಿವಿಯವರೆಗೂ, ಗಾಂಧಾರೀನಾಡಿಯು ಎಡಗಣ್ಣಿನವರೆಗೂ, ವಿಶ್ವೋದರಾನಾಡಿಯು ಮುಖದ ಮಧ್ಯದಲ್ಲಿಯೂ ಇರುವುದು. ||೨೧-೨೨-೨೩-೨೪||

ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ,

ನಾಗಃ ಕೂರ್ಮಶ್ಚ ಕೃಕರೋ ದೇವದತ್ತೋ ಧನಂಜಯಃ ।
ಏತೇ ನಾಡೀಷು ಸರ್ವಾಸು ಚರಂತಿ ದಶವಾಯವಃ ॥೨೬॥

ತೇಷು ಪ್ರಾಣಾದಯಃ ಪಂಚ ಮುಖ್ಯಾಃ ಪಂಚ ಚ ಸುವ್ರತ ।
ಪ್ರಾಣಸಂಜ್ಞಸ್ತಥಾಽಪಾನಃ ಪೂಜ್ಯಃ ಪ್ರಾಣಸ್ತಯೋರ್ಮನೇ ॥೨೭॥

ಆಸ್ಯನಾಸಿಕಯೋರ್ಮಧ್ಯೇ ನಾಭಿಮಧ್ಯೇ ತಥಾ ಹೃದಿ ।
ಪ್ರಾಣಸಂಜ್ಞೋಽನಿಲೋ ನಿತ್ಯಂ ವರ್ತತೇ ಮುನಿಸತ್ತಮ ॥೨೮॥

ಅಪಾನೋ ವರ್ತತೇ ನಿತ್ಯಂ ಗುದಮೇಢ್ರೋರುಸಂಧಿಷು ।
ಉದರೇ ವೃಷಣೇ ಕಟ್ಯಾಂ ನಾಭೌ ಜಂಘೇ ಚ ಸುವ್ರತ ॥೨೯॥

ವ್ಯಾನಃ ಶ್ರೋತ್ರಾಕ್ಷಿಮಧ್ಯೇಚ ಕೃಕಟ್ಯಾಂಗುಲ್ಫಯೋರಪಿ ।
ಘ್ರಾಣಸ್ಥಾನೇ ಗಲೇ ಚೈವ ವರ್ತತೇ ಮುನಿಪುಂಗವ ॥೩೦॥

ದೇವದತ್ತ, ಧನಂಜಯ ಎಂಬ ಹತ್ತು ವಾಯುಗಳು ಎಲ್ಲ ನಾಡಿಗಳಲ್ಲಿಯೂ ಸಂಚರಿಸುತ್ತಿರುವುವು. ||೨೫-೨೬||

ಹತ್ತು ವಾಯುಗಳಲ್ಲಿ ಪ್ರಾಣಾದಿಯಾದ ಐದು ವಾಯುಗಳು ಮುಖ್ಯವಾದುವು. ಈ ಐದು ವಾಯುಗಳಿಗೂ ಒಟ್ಟಿಗೆ ಪ್ರಾಣವೆಂದು ಹೆಸರಿರುವುದು. ಈ ಐದರಲ್ಲಿ ಪ್ರಾಣವಾಯುವು ಅತ್ಯಂತ ಶ್ರೇಷ್ಠವಾದುದು. ಹತ್ತು ವಾಯುಗಳಲ್ಲಿ ಮೊದಲಿನಿಂದ ಒಂಬತ್ತು ವಾಯುಗಳೂ ದೇಹವು ಜೀವಿಸಿರುವುದಕ್ಕೆ ಕಾರಣವಾದವುಗಳು. ಹತ್ತನೆಯದಾದ ಧನಂಜಯವಾಯುವು ಲೌಕಿಕ ವಾಯುವೆನಿಸುವುದು. " ಧನಂಜಯಾಖ್ಯೋ ದೇಹೇಸ್ಮಿನ್ಕುರ್ಯಾದ್ಬಹುವಿಧಾನ್ರವಾನ್ । ಸತು ಲೌಕಿಕವಾಯುತ್ವಾನ್ಮೃತಂಚ ನವಿಮುಂಚತಿ ॥ ಎಂಬ ಪ್ರಮಾಣದಿಂದ ಧನಂಜಯವಾಯುವು ಮೃತಶರೀರವನ್ನೂ ಬಿಟ್ಟು ಹೋಗುವುದಿಲ್ಲವೆಂದು ಹೇಳಿದೆ. ||೨೭||

ಮುನಿಶ್ರೇಷ್ಠನಾದ ಬೃಹಸ್ಪತಿಯೇ, ಬಾಯಿ, ಮೂಗು, ಹೊಕ್ಕುಳು, ಹೃದಯ ಪ್ರದೇಶಗಳಲ್ಲಿ ಪ್ರಾಣವಾಯುವು ಯಾವಾಗಲೂ ಇರುವುದು. ಅಪಾನವಾಯುವು ಗುದ, ಮೇಢ್ರ, ತೊಡೆಗಳ ಸಂಧಿಪ್ರದೇಶ, ಹೊಟ್ಟೆ, ವೃಷಣ, ಸೊಂಟ, ಹೊಕ್ಕುಳು, ಮೊಳಕಾಲು, ಈ ಸ್ಥಳಗಳಲ್ಲಿರುವುದು. ವ್ಯಾನವಾಯುವು ಕಿವಿ, ಕಣ್ಣು, ಹೆಬ್ಬೆರಳು, ಮೂಗು, ಕುತ್ತಿಗೆ, ಈ ಸ್ಥಳಗಳಲ್ಲಿರುವುದು. ಉದಾನವಾಯುವು ಕಾಲು, ಕೈಗಳು

ಉದಾನಃ ಸರ್ವಸಂಧಿಸ್ಥೋ ವಿಜ್ಞೇಯಃ ಪಾದಹಸ್ತಯೋಃ ।
ಸಮಾನಃ ಸರ್ವದೇಹೇಷು ವ್ಯಾಪ್ಯ ತಿಷ್ಠತ್ಯಸಂಶಯಃ ॥೩೧॥

ನಾಗಾದಿವಾಯವಃ ಪಂಚ ತ್ವಗಸ್ಥ್ಯಾದಿಷು ಸಂಸ್ಥಿತಾಃ ।
ಉದ್ಗಾರಾದಿ ಗುಣಃ ಪ್ರೋಕ್ತೋ ನಾಗಾಖ್ಯಸ್ಯ ಬೃಹಸ್ಪತೇ ॥೩೨॥

ನಿಮೀಲನಾದಿ ಕೂರ್ಮಸ್ಯ ಕ್ಷುತಂತು ಕೃಕರಸ್ಯಚ ।
ದೇವದತ್ತಸ್ಯ ಕರ್ಮ ಸ್ಯಾತ್ತನ್ದ್ರೀಕರ್ಮ ಮಹಾಮುನೇ ॥೩೩॥

ಧನಂಜಯಸ್ಯ ಶೋಕಾದಿ ಕರ್ಮಪ್ರೋಕ್ತಂ ಬೃಹಸ್ಪತೇ ।
ನಿಃಶ್ವಾಸೋಚ್ಛ್ವಾಸ ಕಾಸಾದಿಪ್ರಾಣಕರ್ಮ ಬೃಹಸ್ಪತೇ ॥೩೪॥

ಅಪಾನಾಖ್ಯಸ್ಯವಾಯೋಸ್ತು ವಿಣ್ಮೂತ್ರಾದಿ ವಿಸರ್ಜನಂ ।
ಸಮಾನಃ ಸರ್ವಸಾಮೀಪ್ಯಂ ಕರೋತಿ ಮುನಿಸತ್ತಮ ॥೩೫॥

ಮುಂತಾದ ಸಮಸ್ತ ಸಂಧಿಪ್ರದೇಶಗಳಲ್ಲಿಯೂ ಇರುವುದು ಸಮಾನವಾಯುವು ದೇಹವನ್ನೆಲ್ಲವನ್ನೂ ವ್ಯಾಪಿಸಿಕೊಂಡಿರುವುದು. ||೨೮-೨೯-೩೦-೩೧||

ನಾಗಾದಿ ಪಂಚವಾಯುಗಳು ಚರ್ಮ, ಮೂಳೆ ಮುಂತಾದ ಶರೀರದ ಹೊರಗಿನ ಕೋಶಗಳಲ್ಲಿರುವುವು. ಆದುದರಿಂದ ಇವುಗಳಿಗೆ ಬಾಹ್ಯವಾಯುಗಳೆಂದು ಹೆಸರು ಬಂದಿರುವುದು. ನಾಗವಾಯುವು ವಮನವನ್ನು ಮಾಡಿಸುವುದು. ಕೂರ್ಮ ವಾಯುವು ಕಣ್ಣುರೆಪ್ಪೆಗಳನ್ನು ಮುಚ್ಚಿ ತೆರೆಯುವಂತೆ ಮಾಡುವುದು. ಕೃಕರವಾಯುವು ಸೀನನ್ನುಂಟುಮಾಡುವುದು. ದೇವದತ್ತವಾಯುವು ಆಕಳಿಕೆಯನ್ನುಂಟು ಮಾಡುವುದು. ಧನಂಜಯವಾಯುವು ಅಳುವುದು ನಗುವುದು ಮುಂತಾದ ಕೆಲಸಗಳನ್ನುಂಟುಮಾಡುವುದು. ||೩೨-೩೩||

ಪ್ರಾಣಾದಿಪಂಚವಾಯುಗಳು ಶರೀರದ ಒಳಗಿನ ಕೋಶಗಳಲ್ಲಿರುವುವು. ಪ್ರಾಣವಾಯುವು ಉಸಿರನ್ನು ಬಿಡುವುದು ತೆಗೆದುಕೊಳ್ಳುವುದು ಕೆಮ್ಮುವುದು ಮುಂತಾದ ಕೆಲಸಗಳನ್ನು ಮಾಡುವುದು. ಅಪಾನವಾಯುವು ಮಲಮೂತ್ರಾದಿಗಳ ವಿಸರ್ಜನೆಯನ್ನು ಮಾಡಿಸುವುದು. ಸಮಾನವಾಯುವು ಆಹಾರ ಮಾಡಿದ ವಸ್ತುಗಳನ್ನು ಎಲ್ಲ ಅಂಗಗಳಿಗೂ ಸಮಾನವಾಗಿ ಹಂಚುವುದು. ಉದಾನವಾಯುವು ಊರ್ಧ್ವಗಮನ (ಮೇಲಕ್ಕೇರುವ) ಶಕ್ತಿಯುಳ್ಳದ್ದು. ವ್ಯಾನವಾಯುವು ಮಾತನಾಡುವ

ಉದಾನ ಊರ್ಧ್ವಗಮನಂ ಕರೋತ್ಯೇವ ನ ಸಂಶಯಃ ।
ವ್ಯಾನೋ ವಿವಾದ ಕೃತ್ಪ್ರೋಕ್ತೋ ಮುನೇ ವೇದಾಂತವೇದಿಭಿಃ ॥೩೬॥

ಸುಷುಮ್ನಾಯಾಃ ಶಿವೋದೇವ ಇಡಾಯಾ ದೇವತಾ ಹರಿಃ ।
ಪಿಂಗಳಾಯಾ ವಿರಿಂಚಿಃ ಸ್ಯಾತ್ಸರಸ್ವತ್ಯಾ ವಿರಾಣ್ಮುನೇ ॥೩೭॥

ಪೂಷಾ ದಿಗ್ದೇವತಾ ಪ್ರೋಕ್ತಾ ವಾರುಣೀ ವಾಯುದೇವತಾ ।
ಹಸ್ತಿಜಿಹ್ವಾಭಿಧಾಯಾಸ್ತು ವರುಣೋ ದೇವತಾ ಭವೇತ್ ॥೩೮॥

ಯಶಸ್ವಿನ್ಯಾ ಮುನಿಶ್ರೇಷ್ಠ ಭಗವಾನ್ಭಾಸ್ಕರೋ ಮುನೇ ।
ಅಲಂಬುಷಾಭಿಮಾನ್ಯಾತ್ಮಾ ವರುಣಃ ಪರಿಕೀರ್ತಿತಃ ॥೩೯॥

ಕುಹೋಃ ಕುರ್ದೇವತಾ ಪ್ರೋಕ್ತಾ ಗಾಂಧಾರೀ ಚಂದ್ರದೇವತಾ ।
ಶಂಖಿನ್ಯಾಶ್ಚಂದ್ರಮಾಸ್ತದ್ವತ್ಪಯಸ್ವಿನ್ಯಾಃ ಪ್ರಜಾಪತಿಃ ॥೪೦॥

ವಿಶ್ವೋದರಾಭಿಧಾಯಾಸ್ತು ಭಗವಾನ್ಪಾವಕಃ ಪತಿಃ ।
ಇಡಾಯಾಂ ಚಂದ್ರಮಾ ನಿತ್ಯಂ ಚರತ್ಯೇವ ಮಹಾಮುನೇ ॥೪೧॥

ಕೆಲಸವನ್ನು ಮಾಡಿಸುವುದು. ಛಾಂದ್ಯೋಗ್ಯೋಪನಿಷತ್ತಿನಲ್ಲಿ ವ್ಯಾನವಾಯುವಿನ ವಿಷಯದಲ್ಲಿ "ಯಃ ಪ್ರಾಣಾಪಾನಯೋಃ ಸಂಧಿಃ ಸವ್ಯಾನಃ, ಸಾವಾಕ್ತಸ್ಮಾದಪ್ರಾಣನ್ನ ನಪಾನನ್ವಾಚ ಮಭಿವ್ಯಾಹರತಿ "೧.೩.೩. ಎಂದು ಹೇಳಿರುವುದು. ||೩೪-೩೫-೩೬||

ಸುಷುಮ್ನಾನಾಡಿಗೆ ಶಿವನೂ, ಇಡಾನಾಡಿಗೆ ಹರಿಯೂ, ಪಿಂಗಳಾನಾಡಿಗೆ ಬ್ರಹ್ಮನೂ, ಸರಸ್ವತೀನಾಡಿಗೆ ವಿರಾಟ್ಪುರುಷನೂ, ಪೂಷಾನಾಡಿಗೆ ದಿಗ್ದೇವತೆಗಳೂ, ವಾರುಣೀನಾಡಿಗೆ ವಾಯುದೇವನೂ, ಹಸ್ತಿಜಿಹ್ವಾನಾಡಿಗೆ ವರುಣನೂ, ಯಶಸ್ವಿನೀ ನಾಡಿಗೆ ಸೂರ್ಯನೂ, ಅಲಂಬುಷಾನಾಡಿಗೆ ಆತ್ಮನಾದ ವರುಣನೂ, ಕುಹೂನಾಡಿಗೆ ಭೂಮಿಯೂ, ಗಾಂಧಾರೀನಾಡಿಗೆ ಚಂದ್ರನೂ, ಶಂಖಿನೀನಾಡಿಗೂ ಚಂದ್ರನೂ, ಪಯಸ್ವಿನೀನಾಡಿಗೆ ಪ್ರಜಾಪತಿಯೂ, ವಿಶ್ವೋದರಾನಾಡಿಗೆ ಅಗ್ನಿಯೂ, ಅಭಿಮಾನಿ ದೇವತೆಗಳಾಗಿರುವರು. ||೩೭-೩೮-೩೯-೪೦||

ಮಹಾತಪಸ್ವಿಯಾದ ಬೃಹಸ್ಪತಿಯೇ, ಇಡಾನಾಡಿಯಲ್ಲಿ ಚಂದ್ರನೂ, ಪಿಂಗಲಾ ನಾಡಿಯಲ್ಲಿ ಸೂರ್ಯನೂ ಸಂಚರಿಸುತ್ತಿರುವರು. ಇಡಾನಾಡಿಯಿಂದ ವಾಯುವು ಹೊರಗೆ ಹೊರಡುವ ಕಾಲವನ್ನು ರಾತ್ರಿ ಎಂದೂ, ಆ ನಾಡಿಯೊಳಕ್ಕೆ ವಾಯುವು

ಪಿಂಗಳಾಯಾಂ ರವಿಸ್ತದ್ವನ್ಮುನೇ ವೇದವಿದಾಂ ವರ ।
ಪಿಂಗಳಾಯಾ ಇಡಾಯಾಂ ತು ವಾಯೋಃ ಸಂಕ್ರಮಣಂ ತುಯತ್ ॥೪೨॥

ತದುತ್ತರಾಯಣಂ ಪ್ರೋಕ್ತಂ ಮುನೇ ವೇದಾರ್ಥವೇದಿಭಿಃ ।
ಇಡಾಯಾಃ ಪಿಂಗಲಾಯಾಂತು ಪ್ರಾಣಸಂಕ್ರಮಣಂ ಮುನೇ ॥೪೩॥

ದಕ್ಷಿಣಾಯನ ಮಿತ್ಯುಕ್ತಂ ಪಿಂಗಲಾಯಾ ಮಿತಿ ಶ್ರುತಿಃ ।
ಇಡಾಪಿಂಗಳಯೋಃ ಸಂಧಿಂ ಯದಾ ಪ್ರಾಣಃ ಸಮಾಗತಃ ॥೪೪॥
ಅಮಾವಾಸ್ಯಾ ತದಾ ಪ್ರೋಕ್ತಾ ದೇಹೇ ದೇಹಭೃತಾಂ ವರ ।

ಪ್ರವೇಶಮಾಡುವ ಕಾಲವನ್ನು ಹಗಲೆಂದೂ ಹೇಳುವರು. ಪಿಂಗಲಾನಾಡಿಯಿಂದ ವಾಯುವು ಹೊರಗಡೆಗೆ ಹೋಗುವ ಕಾಲವು ಹಗಲಾಗಿಯೂ, ಆ ನಾಡಿಯೊಳಕ್ಕೆ ವಾಯುವು ಪ್ರವೇಶಿಸುವ ಕಾಲವು ರಾತ್ರಿಯಾಗಿಯೂ ಇರುವುದೆಂದು "ಅಹೋರಾತ್ರಮಿನೇಂದುಭ್ಯಾ ಮೂರ್ಧ್ವಾರ್ಥೋ ವೃತ್ತಿರಿಷ್ಯತೇ" ಎಂದು ಪ್ರಪಂಚಸಾರವೆಂಬ ಗ್ರಂಥದಲ್ಲಿ ಹೇಳಿರುವುದು. ಪಿಂಗಳಾನಾಡಿಯಿಂದ ಇಡಾನಾಡಿಗೆ ಸೂರ್ಯಸ್ವರೂಪನಾದ ಪ್ರಾಣವಾಯುವು ಹೋಗುತ್ತಿರುವ ಕಾಲವು ಉತ್ತರಾಯಣವಾಗಿಯೂ, ಇಡಾನಾಡಿಯಿಂದ ಪಿಂಗಲಾನಾಡಿಗೆ ಪ್ರಾಣವಾಯು ಸಂಕ್ರಮಣವಾಗುವಕಾಲವು ದಕ್ಷಿಣಾಯನವಾಗಿಯೂ ಇರುವುದು. ಮಕರಾಯನ ಸಮಯದಲ್ಲಿ ದಕ್ಷಿಣದಿಕ್ಕಿನಲ್ಲಿದ್ದ ಸೂರ್ಯನು ಕಟಕಾಯನಪರ್ಯಂತವಾಗಿ ಪ್ರತಿದಿನವೂ ಉತ್ತರಕ್ಕೆ ಹೋಗುತ್ತಿರುವನು. ಅದೇ ಉತ್ತರಾಯಣವು. ಹೀಗೆ ಪಿಂಗಲಾನಾಡಿಯಲ್ಲಿದ್ದ ಸೂರ್ಯರೂಪನಾದ ಪ್ರಾಣವಾಯುವು ಸಂಪೂರ್ಣವಾಗಿ ಇಡಾನಾಡಿಯನ್ನು ಪ್ರವೇಶಿಸುವವರೆಗೂ ಉತ್ತರಾಯಣವಾಗುವುದು. ಹೀಗೆಯೇ ಉತ್ತರದಲ್ಲಿರುವ ಇಡಾನಾಡಿಯಿಂದ ದಕ್ಷಿಣದಲ್ಲಿರುವ ಪಿಂಗಳಾನಾಡಿಗೆ ಸೂರ್ಯಸ್ವರೂಪನಾದ ಪ್ರಾಣವಾಯುವು ಹೋಗುವ ಕಾಲವು ದಕ್ಷಿಣಾಯನವಾಗುವುದು. ಎಂದು ವೇದದಲ್ಲಿ ಹೇಳಿರುವುದು. ॥೪೧-೪೨-೪೩॥

ಅಮಾವಾಸ್ಯೆಯದಿನ ಚಂದ್ರಸೂರ್ಯರು ಜತೆಯಲ್ಲಿಯೇ ಉದಯಾಸ್ತಗಳನ್ನು ಪಡೆವರು. ಇಡಾನಾಡಿಯಲ್ಲಿರುವ ಪ್ರಾಣವಾಯುವೇ ಚಂದ್ರನು, ಪಿಂಗಲಾನಾಡಿಯಲ್ಲಿರುವ ಪ್ರಾಣವಾಯುವೇ ಸೂರ್ಯನು. ಸಂಧಿಸಮಯಗಳಲ್ಲಿ ಎರಡು ನಾಡಿಗಳಲ್ಲಿಯೂ ಪ್ರಾಣವಾಯುವು ಸಮವಾಗಿದ್ದು ಒಟ್ಟಿಗೆ ಹುಟ್ಟಿ ಒಟ್ಟಿಗೆ ಕಾಣದೇ ಹೋದರೆ ಆ ಕಾಲವನ್ನು ಈ ದೇಹದಲ್ಲಿ ಅಮಾವಾಸ್ಯೆ. ಎಂದು ಕರೆಯುವರು. ॥೪೪॥

ಮೂಲಾಧಾರಂ ಯದಾ ಪ್ರಾಣಃ ಪ್ರವಿಷ್ಟಃ ಪಂಡಿತೋತ್ತಮ ॥೪೫॥

ತದಾಽದ್ಯಂ ವಿಷುವಂ ಪ್ರೋಕ್ತಂ ತಾಪಸೈಸ್ತಾಪಸೋತ್ತಮ ।
ಪ್ರಾಣಸಂಜ್ಞೋಮುನಿಶ್ರೇಷ್ಠ ಮೂರ್ಧಾನಂ ಪ್ರವಿಶೇದ್ಯದಾ ॥೪೬॥

ತದಾಽನ್ತ್ಯಂ ವಿಷುವಂ ಪ್ರೋಕ್ತಂ ಧಾರ್ಮಿಕೈಸ್ತತ್ವಚಿಂತಕೈಃ ।
ನಿಃಶ್ವಾಸೋಚ್ಛ್ವಾಸನಂ ಸರ್ವಂ ಮಾಸಾನಾಂ ಸಂಕ್ರಮೋ ಭವೇತ್ ॥೪೭॥

ಇಡಾಯಾಃ ಕುಂಡಲೀಸ್ಥಾನಂ ಯದಾ ಪ್ರಾಣಃ ಸಮಾಗತಃ ।
ಸೋಮಗ್ರಹಣಮಿತ್ಯುಕ್ತಂ ತದಾ ತತ್ವವಿದಾಂ ವರ ॥೪೮॥

ತಥಾ ಪಿಂಗಲಯಾ ಪ್ರಾಣಃ ಕುಂಡಲೀ ಸ್ಥಾನಮಾಗತಃ ।
ಯದಾತದಾ ಭವೇತ್ಸೂರ್ಯಗ್ರಹಣಂ ಮುನಿಸತ್ತಮ ॥೪೯॥

ಪ್ರಾಣವಾಯುವೇ ಸೂರ್ಯನೆಂದು ಪ್ರಶ್ನೋಪನಿಷತ್ತಿನಲ್ಲಿ "ಆದಿತ್ಯೋಹವೈ ಪ್ರಾಣೋ ರಯಿರೇವಚಂದ್ರಮಾಃ" ಎಂದು ಹೇಳಿರುವುದು. ಆ ಪ್ರಾಣವಾಯುವು ಮೂಲಾಧಾರಕ್ಕೆ ಪ್ರವೇಶಮಾಡಿದಮೇಲೆ ಉದಯಿಸಿದ ನೆತ್ತಿಗೆ ಪ್ರವೇಶಿಸಿದಮೇಲೆ ಮೂಗಿನ ತುದಿಯಿಂದ ಹನ್ನೆರಡಂಗುಲ ದೂರದಲ್ಲಿ ಅಸ್ತಮಾನವನ್ನು ಹೊಂದುವುದು. ಮೂಲಾಧಾರಕ್ಕೆ ಪ್ರವೇಶಮಾಡಿದ ಕಾಲವೇ ಎರಡನೆಯ ವಿಷುವವಾದ ತುಲಾಯನವು. ಹೀಗೆ ಪ್ರಾಣವಾಯುವಿನ ಉದಯಕಾಲವೂ ಅಸ್ತಮಾನಕಾಲವೂ ಎರಡು ವಿಷುವಗಳಾಗುವುವು. ದಕ್ಷಿಣದಿಂದ ಉತ್ತರಕ್ಕೆ ಹೋಗುವಕಾಲದಲ್ಲಿ ನಡುವೆ ಇರುವ ಸಂಧಿಸ್ಥಾನವು ಮೊದಲನೆಯ ವಿಷುವವಾದ ಮೇಷಾಯನವು. ಇದು ಉತ್ತರಾಯಣದ ಮಧ್ಯದಲ್ಲಿರುವುದು. ದಕ್ಷಿಣಾಯನದ ನಡುವೆ ಇರುವ ಸಂಧಿಸ್ಥಾನವೇ ಎರಡನೆಯ ವಿಷುವವಾದ ತುಲಾಯನವು. ನಿಶ್ವಾಸೋಚ್ಛ್ವಾಸಗಳು ಇಡಾನಾಡಿಯಿಂದ ಸುಷುಮ್ನಾನಾಡಿಗೂ ಆಮೇಲೆ ಪಿಂಗಲಾನಾಡಿಗೂ ತರುವಾಯ ಸುಷುಮ್ನಾನಾಡಿಗೂ ಮತ್ತೆ ಇಡಾನಾಡಿಗೂ ಪ್ರವೇಶಮಾಡುವ ಕಾಲವನ್ನು ಸಂಕ್ರಮಣಕಾಲವೆಂದು ಹೇಳುವರು. ॥೪೫-೪೬-೪೭॥

ಇಡಾನಾಡಿಯಿಂದ ಕುಂಡಲೀ ಸ್ಥಾನಕ್ಕೆ ಬಂದ ಚಂದ್ರಸ್ವರೂಪವಾದ ಪ್ರಾಣವಾಯುವು ಮಲಗಿದ ಸರ್ಪದಂತಿರುವ ಆ ಕುಂಡಲೀಸ್ಥಾನದಲ್ಲಿ ಕಾಣದೇಹೋಗುವುದರಿಂದ ಆ ಕಾಲವನ್ನು ಚಂದ್ರಗ್ರಹಣಕಾಲವೆಂದು ಹೇಳುವರು. ॥೪೮॥

ಪಿಂಗಲಾನಾಡಿಯಿಂದ ಕುಂಡಲಿನೀಸ್ಥಾನಕ್ಕೆ ಬಂದ ಸೂರ್ಯಸ್ವರೂಪವಾದ

ಶ್ರೀಪರ್ವತಃ ಶಿರಸ್ಸ್ಥಾನೇ ಕೇದಾರಂ ತುಲಲಾಟಕೇ ।
ವಾರಾಣಸೀ ಮಹಾಪ್ರಾಜ್ಞ ಭ್ರುವೋರ್ಘ್ರಾಣಸ್ಯ ಮಧ್ಯಮೇ ॥೫೦॥

ಭ್ರುವೋರ್ಘ್ರಾಣಸ್ಯ ಯಃ ಸಂಧಿರಿತಿ ಜಾಬಾಲಿಕೀಶ್ರುತಿಃ ।
ಕುರುಕ್ಷೇತ್ರಂ ಕುಚಸ್ಥಾನೇ ಪ್ರಯಾಗೋ ಹೃತ್ಸರೋರುಹೇ ॥೫೧॥

ಚಿದಂಬರಂ ಚ ಹೃನ್ಮಧ್ಯ ಆಧಾರಃ ಕಮಲಾಲಯಃ ।
ಆತ್ಮಸ್ಥಂ ತೀರ್ಥಮುತ್ಸೃಜ್ಯ ಬಹಿಸ್ತೀರ್ಥಾನಿಯೋವ್ರಜೇತ್ ।
ಕರಸ್ಥಂ ಸ ಮಹಾರತ್ನಂ ತ್ಯಕ್ತ್ವಾಕಾಚಂ ವಿಮಾರ್ಗತಿ ॥೫೨॥

ಭಾವತೀರ್ಥಂ ಪರಂ ತೀರ್ಥಂ ಪ್ರಮಾಣಂ ಸರ್ವಕರ್ಮಸು ।
ಅನ್ಯಥಾಽಽಲಿಂಗ್ಯತೇ ಕಾಂತಾ ಭಾವೇನ ದುಹಿತಾಽನ್ಯಥಾ ॥೫೩॥

ಪ್ರಾಣವಾಯುವು ಕುಂಡಲೀಸ್ಥಾನದಲ್ಲಿ ಕಾಣದೇಹೋಗುವುದರಿಂದ ಆ ಕಾಲವು ಸೂರ್ಯಗ್ರಹಣಕಾಲವಾಗುವುದು. ||೪೯||

ಯೋಗಿಗೆ ಅವನ ಶರೀರದಲ್ಲಿರುವ ಸ್ಥಾನಗಳೇ ತೀರ್ಥಕ್ಷೇತ್ರಗಳಾಗಿರುವುವು. ಬ್ರಹ್ಮರಂಧ್ರವೇ ಶ್ರೀಪರ್ವತವು. ಹಣೆಯೇ ಕೇದಾರವು. ಹುಬ್ಬು ಮೂಗುಗಳ ನಡುವೆ ಇರುವ ಭಾಗವೇ ಕಾಶೀಕ್ಷೇತ್ರವು ಎದೆಯು ಪ್ರದೇಶವೇ ಕುರುಕ್ಷೇತ್ರವು. ಹೃದಯಕಮಲವೇ ಪ್ರಯಾಗವು. ಹೃದಯ ಮಧ್ಯವೇ ಚಿದಂಬರಕ್ಷೇತ್ರವು. ಮೂಲಾಧಾರವೇ ಕಮಲಾಲಯಕ್ಷೇತ್ರವು. ಈ ವಿಷಯವು ಜಾಬಾಲೋಪನಿಷತ್ತಿನಲ್ಲಿ ವಿಸ್ತಾರವಾಗಿ ಹೇಳಿರುವುದು. ||೫೦-೫೧||

ತನ್ನಲ್ಲಿರುವ ತೀರ್ಥವನ್ನು ಬಿಟ್ಟು ಯಾವನು ಹೊರಗಿನ ತೀರ್ಥಗಳಿಗೆ ಹೋಗುವನೋ ಅವನು ಕೈಯಲ್ಲಿದ್ದ ದೊಡ್ಡರತ್ನವನ್ನು ಬಿಟ್ಟು ಗಾಜನ್ನು ಹುಡುಕುತ್ತಿರುವ ಮನುಜನಂತಾಗುವನು ! ||೫೨||

ಜನನಮರಣರೂಪವಾದ ಸಂಸಾರದುಃಖವೆಂಬ ಸಮುದ್ರವನ್ನು ದಾಟಿಸುವುದಕ್ಕೆ ಕಾರಣವಾದ ತೀರ್ಥಗಳು ಬಾಹ್ಯ ಆಂತರ ಎಂದು ಎರಡು ವಿಧವಾಗಿವೆ. ಬಾಹ್ಯತೀರ್ಥಕ್ಕಿಂತಲೂ ಆಂತರವಾದ ಭಾವತೀರ್ಥಗಳು ಉತ್ತಮವಾದವುಗಳು. ಸಮಸ್ತ ಕರ್ಮಗಳಲ್ಲಿಯೂ ಭಾವನಾರೂಪವಾದ ತೀರ್ಥಗಳೇ ಬೇಗನೆ ಫಲಕೊಡ ತಕ್ಕವುಗಳು. ಶಾಸ್ತ್ರಪ್ರತಿಪಾದಿತವಾದ ವಿಷಯಗಳಲ್ಲಿರುವ ಆಸ್ತಿಕ್ಯಬುದ್ಧಿಯನ್ನು ಭಾವವೆಂದು ಹೇಳುವರು. ಕರ್ಮವು ಒಂದೇ ಆದರೂ ಭಾವಭೇದದಿಂದ ಫಲವೂ

ತೀರ್ಥಾನಿ ತೋಯಪೂರ್ಣಾನಿ ದೇವಾನ್ಕಾಷ್ಠಾದಿನಿರ್ಮಿತಾನ್ ।
ಯೋಗಿನೋ ನ ಪ್ರಪದ್ಯಂತೇ ಸ್ವಾತ್ಮಪ್ರತ್ಯಯಕಾರಿಣಃ ॥೫೪॥

ಬಹಿಸ್ತೀರ್ಥಾತ್ಪರಂ ತೀರ್ಥಮಂತಸ್ತೀರ್ಥಂ ಮಹಾಮುನೇ ।
ಆತ್ಮತೀರ್ಥಂ ಪರಂತೀರ್ಥಮಂತಸ್ತೀರ್ಥಂ ನಿರರ್ಥಕಂ ॥೫೫॥

ಚಿತ್ತಮಂತರ್ಗತಂ ದುಷ್ಟಂ ತೀರ್ಥಸ್ನಾನೈರ್ನಶುಧ್ಯತಿ ।
ಶತಶೋಽಪಿ ಜಲೈರ್ಧೌತಂ ಸುರಾಭಾಂಡಮಿವಾಶುಚಿ ॥೫೬॥

ವಿಷುವಾಯನ ಕಾಲೇಷು ಗ್ರಹಣೇ ಚಾಂತರೇ ಸದಾ ।
ವಾರಾಣಸ್ಯಾದಿಕೇ ಸ್ಥಾನೇ ಸ್ನಾತ್ವಾ ಶುದ್ಧೋ ಭವೇನ್ನರಃ ॥೫೭॥

ಬೇರೆ ಬೇರೆಯಾಗುವುದೆಂಬುದನ್ನು ತಿಳಿಸುವುದಕ್ಕಾಗಿ ದೃಷ್ಟಾಂತವನ್ನು ಹೇಳುತ್ತಾ ಪುರುಷನು ಆಲಿಂಗನಕಾರ್ಯವನ್ನು ಮಾಡುತ್ತಾ ಪತ್ನಿಯನ್ನೊಂದುಭಾವದಿಂದಲೂ, ಮಗಳನ್ನೊಂದುಭಾವದಿಂದಲೂ ಆಲಿಂಗಿಸುವನೆಂದು ಹೇಳಿರುವುದು. ॥೫೩॥

ಶಾಸ್ತ್ರದಲ್ಲಿ ಹೇಳಿರುವ ತೀರ್ಥಾದಿಗಳಲ್ಲಿ ನಂಬಿಕೆಯುಳ್ಳ ಯೋಗಿಗಳು ನೀರಿನಿಂದ ತುಂಬಿದ ತೀರ್ಥಗಳನ್ನೂ ಮರ, ಕಲ್ಲು ಮುಂತಾದುವುಗಳಿಂದ ಮಾಡಿದ ದೇವತೆಗಳನ್ನೂ ಆಶ್ರಯಿಸುವುದಿಲ್ಲ. ॥೫೪॥

ಮಹಾಮುನಿಯಾದ ಬೃಹಸ್ಪತಿಯೇ, ಹೊರಗಿನ ತೀರ್ಥಗಳಿಗಿಂತಲೂ, ಒಳಗಿನ ಭಾವತೀರ್ಥವು ಉತ್ತಮವಾದುದು. ಆತ್ಮಸ್ವರೂಪಜ್ಞಾನವು ಅತ್ಯುತ್ತಮವಾದುದು. ಇದೇ ಆತ್ಮತೀರ್ಥವೆನಿಸುವುದು. ಆತ್ಮತೀರ್ಥಾನುಭವ ಉಳ್ಳವನಿಗೆ ಭಾವತೀರ್ಥವೂ ಫಲಕಾರಿಯಾದುದಲ್ಲವು. ಹೇಗೆಂದರೆ, ಮನಸ್ಸಿನ ಆಲೋಚನೆಗಳು ದುಷ್ಟವಾಗಿದ್ದರೆ ತೀರ್ಥಸ್ನಾನಾದಿಗಳಿಂದ ಚಿತ್ತಶುದ್ಧಿಯಾಗುವುದಿಲ್ಲ. ಇದಕ್ಕೆ ದೃಷ್ಟಾಂತವೇನೆಂದರೆ ಹೆಂಡದಗಡಿಗೆಯನ್ನು ಒಂದುನೂರು ಬಾರಿ ನೀರಿನಿಂದ ತೊಳೆದರೂ ಅದು ಅಶುಚಿಯಾದುದಾಗಿಯೇ ಇರುವುದು. ॥೫೬॥

ಹಿಂದೆ ಹೇಳಿದ ಶರೀರದೊಳಗೆ ಪ್ರಾಣವಾಯುವು ಸಂಚರಿಸುವ ಸ್ಥಾನಗಳಾದ ವಿಷುವತ್ಪುಣ್ಯಕಾಲ ಅಯನಗಳು ಗ್ರಹಣಗಳು ಈ ಕಾಲಗಳಲ್ಲಿ ವಾರಾಣಸೀ ಮುಂತಾದ ಶರೀರದೊಳಗಿನ ಕ್ಷೇತ್ರಗಳಲ್ಲಿ ಮನಸ್ಸನ್ನು ಚಲಿಸದೇ ಸ್ಥಿರವಾಗಿ ನಿಲ್ಲಿಸುವುದೇ ತೀರ್ಥಸ್ನಾನವೆನಿಸುವುದು. ಇಂತಹ ತೀರ್ಥಸ್ನಾನವನ್ನು ಮಾಡಿದ ಮನುಷ್ಯನು ಪರಿಶುದ್ಧನಾಗುವನು. ॥೫೭॥

ಜ್ಞಾನಯೋಗಪರಾಣಾಂ ತು ಪಾದಪ್ರಕ್ಷಾಲಿತಂ ಜಲಂ ।
ಪಾಪಶುದ್ಧ್ಯರ್ಥಮಜ್ಞಾನಾಂತತ್ತೀರ್ಥಂ ಮುನಿಸತ್ತಮ ॥೫೮॥

ತೀರ್ಥೇ ದಾನೇ ತಪೋಯಜ್ಞೇ ಕಾಷ್ಠೇಪಾಷಾಣಕೇ ಸದಾ ।
ಶಿವಂ ಪಶ್ಯತಿ ಮೂಢಾತ್ಮಾ ಶಿವೋ ದೇಹೇ ಪ್ರತಿಷ್ಠಿತಃ ॥೫೯॥

ಸರ್ವತ್ರಾವಸ್ಥಿತಂ ಶಾಂತಂ ನ ಪ್ರಪಶ್ಯಂತಿ ಶಂಕರಂ ।
ಜ್ಞಾನಚಕ್ಷುರ್ವಿಹೀನತ್ವಾದಹೋ ಮಾಯಾಬಲಂ ಮುನೇ ॥೬೦॥

ಆತ್ಮಸ್ಥಂ ಯಃ ಶಿವಂ ತ್ಯಕ್ತ್ವಾ ಬಹಿಸ್ಥಂ ಯಜತೇ ಶಿವಂ ।
ಹಸ್ತಸ್ಥಂ ಪಿಂಡಮುತ್ಸೃಜ್ಯ ಲಿಹೇತ್ಕೂರ್ಪರಮಾತ್ಮನಃ ॥೬೧॥

ಶಿವಮಾತ್ಮನಿ ಪಶ್ಯಂತಿ ಪ್ರತಿಮಾಸು ನ ಯೋಗಿನಃ ।
ಅಜ್ಞಾನಾಂ ಭಾವನಾರ್ಥಾಯ ಪ್ರತಿಮಾಃ ಪರಿಕಲ್ಪಿತಾಃ ॥೬೨॥

ಜ್ಞಾನಯೋಗಾಸಕ್ತರಾದ ಪುರುಷರ ಪಾದವನ್ನು ತೊಳೆದ ನೀರು ಅಜ್ಞಾನಿಗಳ ಪಾಪವನ್ನು ನಾಶಮಾಡುವ ಉತ್ತಮವಾದ ತೀರ್ಥವಾಗಿರುವುದು. ॥೫೮॥

ಬಾಹ್ಯವಾದ ತೀರ್ಥಗಳಲ್ಲಿಯೂ ತಪಸ್ಸು, ಯಜ್ಞ, ಮರ, ಕಲ್ಲು ಇವುಗಳಲ್ಲಿಯೂ, ಶಿವನಿರುವನೆಂದು ಮೂಢರು ನಂಬಿರುವರು. ಆದರೆ ಶಿವನು ಅವರ ದೇಹದಲ್ಲಿಯೇ ಇರುವನು. ॥೫೯॥

ಮೂಢರು ತಮಗೆ ಜ್ಞಾನವೆಂಬ ಕಣ್ಣು ಇಲ್ಲದಿರುವುದರಿಂದ ಎಲ್ಲೆಡೆಯಲ್ಲಿಯೂ ಇರುವ ಶಾಂತನಾದ ಶಿವನನ್ನು ನೋಡಲಾರರು. ಮಾಯೆ ಎಂಬ ಅಜ್ಞಾನವು ಅವರ ಕಣ್ಣನ್ನು ಮುಚ್ಚಿರುವುದು! ಆ ಮಾಯೆಯ ಬಲವನ್ನು ಎಷ್ಟೆಂದು ಹೇಳೋಣ? ॥೬೦॥

ಯಾವ ಮನುಷ್ಯನು ತನ್ನ ಮನಸ್ಸಿನಲ್ಲಿಯೇ ಇರುವ ಶಿವನನ್ನು ಬಿಟ್ಟು ಹೊರಗಡೆಯ ಮೂರ್ತಿಮುಂತಾದುವುಗಳನ್ನು ಶಿವನೆಂದು ಪೂಜೆಮಾಡುವನೋ ಅವನು ತನ್ನ ಕಯ್ಯಲ್ಲಿಯೇ ಇರುವ ಅನ್ನವನ್ನು ಬಿಟ್ಟು ಮೊಳಕೈಯ್ಯನ್ನು ನಕ್ಕುತ್ತಿರುವ ಮೂಢನನ್ನು ಹೋಲುವನು. ॥೬೧॥

ಯೋಗಿಗಳು ತಮ್ಮ ಮನಸ್ಸಿನಲ್ಲಿಯೇ ಆತ್ಮನನ್ನು ನೋಡುವರು. ಪ್ರತಿಮಾದಿಗಳ ಪೂಜೆಯಲ್ಲಿ ಅವರ ದೃಷ್ಟಿಯು ಇರುವುದಿಲ್ಲ. ಪ್ರತಿಮೆಗಳು ಅಜ್ಞಾನಿಗಳಿಗೆ ಭಕ್ತಿಯನ್ನು ಹುಟ್ಟಿಸುವುದಕ್ಕಾಗಿ ಕಲ್ಪಿತವಾಗಿರುವುವು. ॥೬೨॥

ಅಪೂರ್ವಾನಪರಂಬ್ರಹ್ಮಸ್ವಾತ್ಮಾನಂ ಸತ್ಯಮದ್ವಯಂ ।
ಪ್ರಜ್ಞಾನ ಘನಮಾನಂದಂ ಯಃ ಪಶ್ಯತಿ ಸ ಪಶ್ಯತಿ ॥೬೩॥

ಸರ್ವಭೂತಸ್ಥಮಾತ್ಮಾನಂ ವಿಶುದ್ಧಜ್ಞಾನದೇಹಿನಂ ।
ಸ್ವಾತ್ಮನ್ಯಪಶ್ಯನ್ಬಾಹ್ಯೇಷು ಪಶ್ಯನ್ನಪಿ ನ ಪಶ್ಯತಿ ॥೬೪॥

ದೇವತಾಂ ಮಹತೀಮನ್ಯಾ ಮುಪಾಸ್ತೇ ಸ್ವಾತ್ಮನೋ ನರಃ ।
ನ ಸ ವೇದ ಪರಂ ತತ್ವಮಥ ಯೋಽನ್ಯಾಮಿತಿ ಶ್ರುತಿಃ ॥೬೫॥

ನಾಡೀಪುಂಜಂ ಸದಾಸಾರಂ ನರಭಾವಂ ಮಹಾಮುನೇ ।
ಸಮುತ್ಸೃಜ್ಯಾಽತ್ಮನಾಽತ್ಮಾನ ಮಹಮಿತ್ಯವಧಾರಯ ॥೬೬॥

ಕಾರಣಕಾರ್ಯಗಳಿಂದ ನಿರ್ವಿಕಾರವಾದ ಅಖಂಡ ಸಚ್ಚಿದಾನಂದೈಕರಸರೂಪ ಪರಬ್ರಹ್ಮನನ್ನು ಆತ್ಮಸ್ವರೂಪವಾಗಿ ಯಾವನು ತಿಳಿವನೋ ಅವನೇ ಜ್ಞಾನಿಯು. ಆ ಜ್ಞಾನವೇ ಫಲದಾಯಕವಾದುದು. ॥೬೩॥

ಸಮಸ್ತ ಪ್ರಾಣಿಗಳಲ್ಲಿಯೂ ಇರುವ ಶುದ್ಧಜ್ಞಾನಸ್ವರೂಪನಾದ ಆತ್ಮನನ್ನು ತನ್ನಲ್ಲಿಯೂ ನೋಡದೆ ಹೊರಗೆ ದೇವಮೂರ್ತಿಗಳಲ್ಲಿ ಆತ್ಮದರ್ಶನವನ್ನು ಮಾಡ ಲೆಳಸುವವನು ಅಜ್ಞಾನಿಯೇ ಆಗುವನು. ಆದುದರಿಂದ ಅಂತರ್ಯೋಗವಿಲ್ಲದೆ ಬರಿಯ ಬಹಿರ್ಯೋಗವು ಫಲದಾಯಕವಾಗುವುದಿಲ್ಲವೆಂದು ಅಭಿಪ್ರಾಯವು. ॥೬೪॥

ಮಹಾದೇವನಾದ ಪರಶಿವನು ತನ್ನ ಆತ್ಮಕ್ಕಿಂತಲೂ ಬೇರೆಯಾದವನೆಂದು ತಿಳಿದು ಯಾವನು ಪೂಜಾದಿಗಳನ್ನು ಮಾಡುವನೋ, ಅವನು ಪರತತ್ವಸ್ವರೂಪ ವನ್ನು ತಿಳಿದವನಲ್ಲ. ಈ ವಿಷಯದಲ್ಲಿ ಬೃಹದಾರಣ್ಯಕೋಪನಿಷತ್ತಿನಲ್ಲಿ "ಅಥಯೋಽ ನ್ಯಾಂದೇವತಾಮುಪಾಸ್ತೇ" ಇತ್ಯಾದಿಯಾಗಿ ಚೆನ್ನಾಗಿ ವಿವರಿಸಿರುವುದು. ॥೬೫॥

ಮಹಾಮುನಿಯಾದ ಬೃಹಸ್ಪತಿಯೇ, ನಾನು ಮನುಷ್ಯನೆಂಬ ಅಭಿಮಾನ ದಿಂದ ಕೂಡಿದ ನಾಡಿಗಳ ಸಮೂಹರೂಪವಾದ ಸ್ಥೂಲಸೂಕ್ಷ್ಮಕಾರಣವೆಂಬ ಮೂಡು ಶರೀರಗಳನ್ನೂ ಆತ್ಮನ ಉಪಾಧಿಗಳೆಂದು ಬಿಟ್ಟು, ಬುದ್ಧಿಯಲ್ಲಿ ವಿಚಾರ ಮಾಡಿ, ಸ್ವಸ್ವರೂಪವೇ ಆತ್ಮಸ್ವರೂಪವೆಂದು ತಾದಾತ್ಮ್ಯಾನುಸಂಧಾನವನ್ನು ಮಾಡು. ॥೬೬॥

ಅಶರೀರಂ ಶರೀರೇಷು ಮಹಾಂತಂ ವಿಭುಮೀಶ್ವರಂ ।
ಆನಂದಮಕ್ಷರಂ ಸಾಕ್ಷಾನ್ಮತ್ವಾ ಧೀರೋ ನ ಶೋಚತಿ ॥೬೭॥

ವಿಭೇದಜನಕೇಽಜ್ಞಾನೇ ನಷ್ಟೇ ಜ್ಞಾನಬಲಾನ್ಮುನೇ ।
ಆತ್ಮನೋ ಬ್ರಹ್ಮಣೋ ಭೇದ ಮಸಂತಂ ಕಃ ಕರಿಷ್ಯತಿ ॥೬೮॥

ಸರ್ವಂ ಸಮಾಸತಃ ಪ್ರೋಕ್ತಂ ಸಾದರಂ-ಮುನಿಸತ್ತಮ ।
ತಸ್ಮಾನ್ಮಾಯಾಮಯಂ ದೇಹಂ ಮುಕ್ತ್ವಾ ಪಶ್ಯ ಸ್ವಮಾತ್ಮಕಂ॥೬೯॥

॥ ಸೂತ ಉವಾಚ ॥

ಇತಿ ಶ್ರುತ್ವಾ ಗಿರಾಂ ನಾಥೋ ಭಕ್ತ್ಯಾ ಪರವಶಃ ಪುನಃ ।
ಸ್ತೋತುಮಾರಭತೇ ದೇವಮಂಬಿಕಾಪತಿಮದ್ಭುತಂ ॥೭೦॥

॥ ಬೃಹಸ್ಪತಿರುವಾಚ ॥

ಜಯ ದೇವ ಪರಾನಂದ ಜಯ ಚಿತ್ಸತ್ಯವಿಗ್ರಹ ।
ಜಯ ಸಂಸಾರರೋಗಘ್ನ ಜಯ ಪಾಪಹರಪ್ರಭೋ ॥೭೧॥

ಮಹಾಮಹಿಮನಾದ ಸರ್ವವ್ಯಾಪಿಯಾದ ಈಶ್ವರನಿಗೆ ವಾಸ್ತವವಾಗಿ ಶರೀರವಿಲ್ಲ. ಆದರೆ ಎಲ್ಲ ಶರೀರಗಳಲ್ಲಿಯೂ ಅವನಿರುವನು. ಅವನು ಆನಂದಸ್ವರೂಪನು, ನಾಶರಹಿತನು. ಎಂದು ತಿಳಿದ ಜ್ಞಾನಿಗೆ ಯಾವ ದುಃಖವೂ ಇರುವುದಿಲ್ಲ. ||೬೭||

ಜೀವ ಬ್ರಹ್ಮರಿಗೆ ಭೇದವನ್ನು ಹುಟ್ಟಿಸುವ ಅಜ್ಞಾನವು ಜ್ಞಾನಬಲದಿಂದ ನಾಶವಾದ ಮೇಲೆ ಆ ಜೀವಬ್ರಹ್ಮರಿಗೆ ಇಲ್ಲದಿರುವ ಭೇದವನ್ನು ಯಾವನು ತಾನೇ ಉಂಟುಮಾಡಬಲ್ಲನು ? ||೬೮||

ಋಷಿಶ್ರೇಷ್ಠನೇ, ಎಲ್ಲವನ್ನೂ ಸಂಗ್ರಹಿಸಿ ಪ್ರೀತಿಯಿಂದ ಹೇಳಿರುವೆನು. ಆದುದರಿಂದ ಶರೀರವು ಅಜ್ಞಾನಮಯವಾದುದೆಂದು ಅದನ್ನು ಬಿಟ್ಟು, ಸ್ವಸ್ವರೂಪವಾದ ಆತ್ಮಜ್ಞಾನವನ್ನು ಪಡೆ. ||೬೯||

ಸೂತನು ಹೇಳಿದನು—ಹೀಗೆ ಹೇಳಿದ ಶಿವನ ಮಾತನ್ನು ಕೇಳಿದ ಬೃಹಸ್ಪತಿಯು ಭಕ್ತ್ಯತಿಶಯದಿಂದ ಕೂಡಿದವನಾಗಿ ಮಹಾಮಹಿಮನೂ, ಅಂಬಿಕಾಪತಿಯೂ ಆದ ಶಿವನನ್ನು ಸ್ತೋತ್ರಮಾಡಲು ಪ್ರಾರಂಭಿಸಿದನು. ||೭೦||

ಬೃಹಸ್ಪತಿಯು ಹೇಳಿದನು ಸಚ್ಚಿದಾನಂದ ಸ್ವರೂಪನೇ, ಸಂಸಾರವೆಂಬ ರೋಗವನ್ನು ನಾಶಮಾಡುವವನೇ, ಪಾಪನಾಶಕನೇ, ಪರಿಪೂರ್ಣಸ್ವರೂಪನೇ, ರಾಕ್ಷಸ

ಜಯ ಪೂರ್ಣ ಮಹಾದೇವ ಜಯ ದೇವಾರಿಮರ್ದನ ।
ಜಯ ಕಲ್ಯಾಣದೇವೇಶ ಜಯ ತ್ರಿಪುರಮರ್ದನ ॥೭೨॥

ಜಯಾಹಂಕಾರ ಶತ್ರುಘ್ನ ಜಯ ಮಾಯಾವಿಷಾಪಹ ।
ಜಯ ವೇದಾಂತ ಸಂವೇದ್ಯ ಜಯ ವಾಚಾಮಗೋಚರ ॥೭೩॥

ಜಯ ರಾಗಹರಶ್ರೇಷ್ಠ ಜಯ ದ್ವೇಷಹರಾಗ್ರಜ ।
ಜಯ ಸಾಂಬಸದಾಚಾರ ಜಯ ಸರ್ವಸಮಾದ್ಭುತ ॥೭೪॥

ಜಯ ಬ್ರಹ್ಮಾದಿಭಿಃ ಪೂಜ್ಯ ಜಯ ವಿಷ್ಣೋಃ ಪರಾವೃತ ।
ಜಯ ವಿದ್ಯಾ ಮಹೇಶಾನ ಜಯ ವಿದ್ಯಾಪ್ರದಾನಿಶಂ ॥೭೫॥

ಜಯ ಸರ್ವಾಂಗಸಂಪೂರ್ಣ ನಾಗಾಭರಣಭೂಷಿತ ।
ಜಯ ಬ್ರಹ್ಮವಿದಾಂ ಪ್ರಾಪ್ಯ ಜಯ ಭೋಗಾಪವರ್ಗದ ॥೭೬॥

ಜಯ ಕಾಮಹರಪ್ರಾಜ್ಞ ಜಯ ಕಾರುಣ್ಯವಿಗ್ರಹ ।
ಜಯ ಭಸ್ಮ ಮಹಾದೇವ ಜಯ ಭಸ್ಮಾವಗುಂಠಿತ ॥೭೭॥

ಜಯ ಭಸ್ಮರತಾನಾಂತು ಪಾಶಭಂಗಪರಾಯಣ ।
ಜಯ ಹೃತ್ಪಂಕಜೇ ನಿತ್ಯಂ ಯತಿಭಿಃ ಪೂಜ್ಯವಿಗ್ರಹ ॥೭೮॥

ರನ್ನು ನಾಶಮಾಡತಕ್ಕವನೇ, ಮಂಗಲಸ್ವರೂಪನೇ, ತ್ರಿಪುರವನ್ನು ನಾಶಮಾಡಿದವನೇ, ಅಹಂಕಾರವೆಂಬ ಶತ್ರುವನ್ನೂ ಮಾಯೆ ಎಂಬ ವಿಷವನ್ನೂ ನಾಶಮಾಡತಕ್ಕವನೇ, ಮಾತಿಗೆ ಸಿಕ್ಕದೇ ವೇದಾಂತವಾಕ್ಯಗಳಿಂದ ತಿಳಿಯಲ್ಪಡತಕ್ಕವನೇ, ರಾಗದ್ವೇಷಗಳನ್ನು ನಾಶಮಾಡತಕ್ಕವನೇ, ದೇವೀಸಹಿತನಾಗಿ ಉತ್ತಮವಾದ ಆಚಾರದಿಂದಿರತಕ್ಕವನೇ, ಸರ್ವಸಮನಾದವನೇ, ನಿನಗೆ ಜಯವಾಗಲಿ. ||೭೧-೭೨-೭೩-೭೪||

ಬ್ರಹ್ಮಾದಿದೇವತೆಗಳಿಗೆ ಪೂಜ್ಯನೂ, ಸರ್ವವ್ಯಾಪಿಯೂ, ಮೋಕ್ಷಸ್ವರೂಪನೂ, ಜ್ಞಾನಕ್ಕೆ ಒಡೆಯನೂ, ಜ್ಞಾನವನ್ನು ಕೊಡತಕ್ಕವನೂ, ಸಮಸ್ತ ಅವಯವಗಳಿಂದಲೂ ಪೂರ್ಣನಾದ, ನಾಗಾಭರಣವನ್ನು ಧರಿಸಿದವನೂ, ಬ್ರಹ್ಮಜ್ಞಾನಿಗಳಿಗೆ ವಾಸಸ್ಥಾನನೂ, ಭೋಗಮೋಕ್ಷಗಳನ್ನು ಕೊಡತಕ್ಕವನೂ, ಮನ್ಮಥನನ್ನು ಸುಟ್ಟವನೂ, ಜ್ಞಾನಿಯೂ, ದಯಾಸ್ವರೂಪನೂ, ವಿಭೂತಿಭೂಷಣನೂ, ಭಸ್ಮವನ್ನು ಧರಿಸಿದವರ ಸಂಸಾರಬಂಧವನ್ನು ನಾಶಮಾಡುವವನೂ, ಯತಿಗಳ ಹೃದಯಕಮಲ

|| ಸೂತ ಉವಾಚ ||

ಇತಿ ಸ್ತುತ್ವಾ ಮಹಾದೇವಂ ಪ್ರಣಿಪತ್ಯ ಬೃಹಸ್ಪತಿಃ ।
ಕೃತಾರ್ಥಃ ಕ್ಲೇಶನಿರ್ಮುಕ್ತೋ ಭಕ್ತ್ಯಾ ಪರವಶೋಽಭವತ್ ॥೭೯॥

ಯ ಇದಂ ಪಠತೇ ನಿತ್ಯಂ ಸಂಧ್ಯಯೋರುಭಯೋರಪಿ ।
ಭಕ್ತಿಪಾರಂಗತೋ ಭೂತ್ವಾ ಪರಂ ಬ್ರಹ್ಮಾಧಿಗಚ್ಛತಿ ॥೮೦॥

ಗಂಗಾಪ್ರವಾಹವತ್ತಸ್ಯ ವಾಗ್ವಿಭೂತಿರ್ವಿಜೃಂಭತೇ ।
ಬೃಹಸ್ಪತಿಸಮೋ ಬುದ್ಧ್ಯಾ ಗುರುಭಕ್ತ್ಯಾ ಮಯಾ ಸಮಃ ॥೮೧॥

ಪುತ್ರಾರ್ಥೀ ಲಭತೇ ಪುತ್ರಂ ಕನ್ಯಾರ್ಥೀ ಕನ್ಯಕಾಮಿಯಾತ್ ।
ಬ್ರಹ್ಮವರ್ಚಸಕಾಮಸ್ತು ತದಾಪ್ನೋತಿ ನ ಸಂಶಯಃ ॥೮೨॥

ತಸ್ಮಾದ್ಭವದ್ಭಿರ್ಮುನಯಃ ಸಂಧ್ಯಯೋರುಭಯೋರಪಿ ।
ಜಪ್ಯಂ ಸ್ತೋತ್ರಮಿದಂ ಪುಣ್ಯಂ ದೇವದೇವಸ್ಯಭಕ್ತಿತಃ ॥೮೩॥

ಇತಿ ಶ್ರೀಸ್ಕಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ
ನಾಡೀಚಕ್ರನಿರೂಪಣಂ ನಾಮ ಏಕಾದಶೋಽಧ್ಯಾಯಃ

ದಲ್ಲಿ ಯಾವಾಗಲೂ ನೆಲಸಿ ಅವರ ಪೂಜೆಯನ್ನು ಸ್ವೀಕರಿಸುವವನೂ, ಆದ ನಿನಗೆ ಮಂಗಳವಾಗಲಿ. ||೭೫-೭೬-೭೭-೭೮||

ಸೂತನು ಹೇಳಿದನು—ಬೃಹಸ್ಪತಿಯು ಈ ರೀತಿಯಲ್ಲಿ ಮಹಾದೇವನನ್ನು ಸ್ತೋತ್ರಮಾಡಿ ನಮಸ್ಕಾರವನ್ನು ಮಾಡಿ ಕೃತಾರ್ಥನಾಗಿ ದುಃಖಗಳನ್ನು ಕಳೆದು ಕೊಂಡು ಭಕ್ತಿಯಿಂದ ಪರವಶನಾಗಿದ್ದನು. ||೭೯||

ಯಾವನು ಅತ್ಯಂತ ಭಕ್ತಿಯಿಂದ ಎರಡು ಸಂಧ್ಯಾಕಾಲಗಳಲ್ಲಿಯೂ ಈ ಸ್ತೋತ್ರವನ್ನು ಹೇಳುವನೋ ಅವನಿಗೆ ಬ್ರಹ್ಮಜ್ಞಾನವುಂಟಾಗುವುದು. ಗಂಗಾಪ್ರವಾಹ ದಂತೆ ಮಾತಿನ ರಚನೆಯಲ್ಲಿ ಶಕ್ತಿಯುಂಟಾಗುವುದು, ಅವನು ಬುದ್ಧಿಯಲ್ಲಿ ಬೃಹ ಸ್ಪತಿಗೆ ಸಮಾನನೂ, ಗುರುಭಕ್ತಿಯಲ್ಲಿ ನನ್ನ ಸಮಾನನೂ, ಆಗುವನು. ಪುತ್ರನನ್ನೂ ಕನ್ಯೆಯನ್ನೂ ಬ್ರಹ್ಮವರ್ಚಸ್ಸನ್ನೂ ಅಪೇಕ್ಷಿಸುವವರು ಅವುಗಳನ್ನು ಪಡೆವರು. ಆದುದ

ಮುನಿಗಳೇ, ನೀವು ಸಂಧ್ಯಾಕಾಲಗಳಲ್ಲಿ ಪುಣ್ಯಕರವಾದ ಈ ಸ್ತೋತ್ರಗಳನ್ನು ಭಕ್ತಿಯಿಂದ ಭಜಿಸಿರಿ. ||೮೦-೮೧-೮೨-೮೩||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ ನಾಡೀಚಕ್ರನಿರೂಪಣವೆಂಬ ಹನ್ನೊಂದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಜ್ಞಾನಯೋಗಖಂಡಂ

|| ದ್ವಾದಶೋಽಧ್ಯಾಯಃ ||

ಹನ್ನೆರಡನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ನಾಡೀಶುದ್ಧಿಂ ಸಮಾಸತಃ ।
ವಿಧ್ಯುಕ್ತಕರ್ಮಸಂಯುಕ್ತಃ ಕಾಮಸಂಕಲ್ಪವರ್ಜಿತಃ ॥೧॥

ಯಮಾದ್ಯಷ್ಟಾಂಗಸಂಯುಕ್ತಃ ಶಾಂತಃ ಸತ್ಯಪರಾಯಣಃ ।
ಗುರುಶುಶ್ರೂಷಣರತಃ ಪಿತೃಮಾತೃಪರಾಯಣಃ ॥೨॥

ಈಶ್ವರನು ಹಿಂದೆ ಹೇಳಿದ ಚಿತ್ತೈಕಾಗ್ರತೆಯು ನಾಡೀಚಕ್ರಗಳ ಜ್ಞಾನಾಧೀನವಾಗಿರುವುದರಿಂದಲೂ, ಪಾಪಗಳನ್ನು ನಾಶಮಾಡಿಕೊಳ್ಳುವ ಸಂದರ್ಭದಲ್ಲುಂಟಾಗುವ ನಾಡಿಯ ಸ್ಖಾಲಿತ್ಯವನ್ನು ತಪ್ಪಿಸುವುದಕ್ಕಾಗಿಯೂ, ಸಂಗ್ರಹವಾಗಿ ನಾಡೀಶುದ್ಧಿಯ ಕ್ರಮವನ್ನು ಹೇಳುವುದಕ್ಕೆ ಪ್ರಾರಂಭಿಸಿರುವನು. ವೇದಗಳಲ್ಲಿ ವಿಧಿಸಿರುವ ಕರ್ಮಗಳನ್ನು ಮಾಡಿಕೊಂಡು, ಮನಸ್ಸಿನಲ್ಲಿ ಕಾಮವನ್ನೂ ಸಂಕಲ್ಪವನ್ನೂ ಬಿಟ್ಟು, ಯಮಾದಿ ಅಷ್ಟಾಂಗಯೋಗಗಳನ್ನು ಅಭ್ಯಾಸಮಾಡುತ್ತಾ ಶಾಂತನಾಗಿ, ಸತ್ಯಸ್ವರೂಪನಾದ ಪರಮಾತ್ಮನಲ್ಲಿ ಆಸಕ್ತನಾಗಿ, ಯಾವಾಗಲೂ ನಿಜವನ್ನು ಹೇಳುತ್ತಾ, ಗುರುಗಳ ಮತ್ತು ತಂದೆತಾಯಿಗಳ ಸೇವೆಯನ್ನು ಮಾಡುತ್ತಾ, ॥೧-೨॥

ಸ್ವಾಶ್ರಮೇ ಸಂಸ್ಥಿತಃ ಸಮ್ಯಗ್ಜ್ಞಾನಿಭಿಶ್ಚ ಸುಶಿಕ್ಷಿತಃ ।
ಪರ್ವತಾಗ್ರೇ ನದೀತೀರೇ ಬಿಲ್ವಮೂಲೇ ವನೇಽಥವಾ ॥೩॥

ಮನೋರಮೇ ಶುಚೌ ದೇಶೇ ವೇದಘೋಷಸಮನ್ವಿತೇ ।
ಫಲಮೂಲೈಃ ಸುಸಂಪೂರ್ಣೇವಾರಿಭಿಶ್ಚ ಸುಸಂಯುತೇ ॥೪॥

ಸುಶೋಭನಂ ಮಠಂಕೃತ್ವಾ ಸರ್ವರಕ್ಷಾಸಮನ್ವಿತಂ ।
ತ್ರಿಕಾಲಸ್ನಾನ ಸಂಯುಕ್ತಃ ಶ್ರದ್ಧಧಾನಃ ಸಮಾಹಿತಃ ॥೫॥

ವಿರಜಾನಲಜಂ ಭಸ್ಮ ಗೃಹೀತ್ವಾ ವಾಽಗ್ನಿಹೋತ್ರಜಂ ।
ಅಗ್ನಿರಿತ್ಯಾದಿಭಿರ್ಮಂತ್ರೈಃ ಜಾಬಾಲೈಃ ಸಪ್ತಭಿರ್ಮುನೇ ॥೬॥

ಷಡ್ಭಿರ್ವಾಽಥರ್ವಣೈರ್ಮಂತ್ರೈಃ ಸಮುದ್ಧೂಳ್ಯ ತತಃಪರಂ ।
ತಿರ್ಯಕ್ತ್ರಿಪುಂಡ್ರಮುರಸಾ ಶಿರಸಾ ಬಾಹುಮೂಲತಃ ॥೭॥

ಧಾರಯೇತ್ಪರಯಾ ಭಕ್ತ್ಯಾ ದೇವದೇವಂ ಪ್ರಣಮ್ಯ ಚ ।
ಸರಸ್ವತೀಂ ಸುಸಂಪೂಜ್ಯ ಸ್ಕಂದಂ ವಿಘ್ನೇಶ್ವರಂ ಗುರುಂ ॥೮॥

ತಾನು ಅನುಸರಿಸುತ್ತಿರುವ ಬ್ರಹ್ಮಚರ್ಯಾದ್ಯಾಶ್ರಮಧರ್ಮಾಚರಣೆಯಲ್ಲಿರುತ್ತಾ, ಒಳ್ಳೆಯ ಜ್ಞಾನಿಗಳಿಂದ ವಿಷಯಗಳನ್ನು ತಿಳಿದುಕೊಳ್ಳುತ್ತಾ, ಪರ್ವತಶಿಖರ, ನದೀ ತೀರ, ಬಿಲ್ವಪತ್ರೆಯ ಗಿಡದ ಬುಡ ಅಥವಾ ವನ ಇವುಗಳಲ್ಲಿ ಪರಿಶುದ್ಧವಾದ ಸ್ಥಳವನ್ನಾರಿಸಿಕೊಂಡು ವೇದಧ್ವನಿಯಿಂದಲೂ ಕಂದಮೂಲ ಫಲಗಳಿಂದಲೂ ಒಳ್ಳೆಯ ನೀರಿನಿಂದಲೂ ಕೂಡಿದ ಆ ಪ್ರದೇಶದಲ್ಲಿ, ॥೩-೪॥

ಎಲ್ಲ ವಿಧವಾದ ರಕ್ಷಣೆಗಳಿಂದ ಕೂಡಿದ ಮಂಗಳಕರವಾದ ಮಠವನ್ನು ಮಾಡಿಕೊಂಡು, ಭಕ್ತಿಯಿಂದ ತ್ರಿಕಾಲಸ್ನಾನವನ್ನು ಮಾಡಿ ವಿರಜಾ ಹೋಮದಲ್ಲಿ ಹುಟ್ಟಿದ ಭಸ್ಮವನ್ನು ತೆಗೆದುಕೊಂಡು ಜಾಬಾಲೋಪನಿಷತ್ತಿನಲ್ಲಿ ಹೇಳಿರುವಂತೆ "ಅಗ್ನಿರಿತಿಭಸ್ಮ" ಇತ್ಯಾದಿಯಾದ ಏಳು ಮಂತ್ರಗಳಿಂದಲಾಗಲೀ, ಅಥರ್ವಣೋಪ ನಿಷತ್ತಿನಲ್ಲಿ ಹೇಳಿರುವಂತೆ ಆರು ಮಂತ್ರಗಳಿಂದಲಾಗಲೀ, ಮೈಗೆಲ್ಲಕ್ಕೂ ಭಸ್ಮವನ್ನು ಬಳಿದುಕೊಂಡು, ಎದೆ, ಭುಜ, ಹಣೆಗಳಲ್ಲಿ ಅಡ್ಡಲಾಗಿ ತ್ರಿಪುಂಡ್ರಗಳನ್ನು ಧರಿಸಿ, ದೇವ ದೇವನಾದ ಶಿವನಿಗೆ ಅತ್ಯಂತಭಕ್ತಿಯಿಂದ ನಮಸ್ಕಾರವನ್ನು ಮಾಡಬೇಕು. ॥೫-೬-೭॥

ಆಮೇಲೆ ಸರಸ್ವತೀ, ಸ್ಕಂದ, ವಿನಾಯಕ, ಗುರು, ಚಂದ್ರ, ಸೂರ್ಯ, ವಾಯು,

ಚಂದ್ರಮಾದಿತ್ಯಮನಿಲಂ ತಥೈವಾಗ್ನಿಂ ಮಹಾಮುನೇ ।
ಆರುಹ್ಯಚಾಸನಂ ಪಶ್ಚಾತ್ಪ್ರಾಙ್ಮುಖೋದಙ್ಮುಖೋಽಪಿವಾ ॥೯॥

ಸಮಗ್ರೀವ ಶಿರಃಕಾಯಃ ಸಂವೃತಾಸ್ಯಃ ಸುನಿಶ್ಚಲಃ ।
ನಾಸಾಗ್ರೇ ಶಶಭೃದ್ಬಿಂಬಂ ಬಿಂದುಮಚ್ಚತುರೀಯಕಂ ॥೧೦॥

ಸ್ರವಂತಮಮೃತಂ ಪಶ್ಯೇನ್ನೇತ್ರಾಭ್ಯಾಂ ಸುಸಮಾಹಿತಃ ।
ಇಡಯಾ ಪ್ರಾಣಮಾಕೃಷ್ಯ ಪೂರಯಿತ್ವೋದರಸ್ಥಿತಂ ॥೧೧॥

ತತೋಽಗ್ನಿಂ ದೇಹಮಧ್ಯಸ್ಥಂ ಧ್ಯಾಯನ್ ಜ್ವಾಲಾವಲೀಮಯಂ ।
ಬಿಂದುನಾದ ಸಮಾಯುಕ್ತ ಮಗ್ನಿಬೀಜಂ ವಿಚಿಂತಯೇತ್ ॥೧೨॥

ಪಶ್ಚಾದ್ವಿರೇಚಯೇತ್ಪ್ರಾಣಂ ಮಂದಂ ಪಿಂಗಲಯಾ ಬುಧಃ ।
ಪುನಃ ಪಿಂಗಲಯಾಽಽಪೂರ್ಯ ವಹ್ನಿಬೀಜಮನುಸ್ಮರನ್ ॥೧೩॥
ಪುನರ್ವಿರೇಚಯೇದ್ಧೀಮಾನಿಡಯೈವ ಶನೈಃ ಶನೈಃ ।

ಅಗ್ನಿ ಈ ದೇವತೆಗಳನ್ನು ಪೂಜಿಸಿ ಆಸನದ ಮೇಲೆ ಉತ್ತರಕ್ಕಾಗಲೀ ಪೂರ್ವಕ್ಕಾಗಲೀ ಅಭಿಮುಖವಾಗಿ ಕುಳಿತು, ಕುತ್ತಿಗೆ ತಲೆ, ಶರೀರ ಇವುಗಳನ್ನು ಸಮವಾಗಿಯೂ ಸರಳವಾಗಿಯೂ, ಇಟ್ಟುಕೊಂಡು, ಬಾಯನ್ನು ಮುಚ್ಚಿ, ಅಲ್ಲಾಡದೇ ಮೂಗಿನ ತುದಿಯಲ್ಲಿ ತನ್ನ ಕಣ್ಣುಗಳಿಂದ ಬಿಂದುಸಹಿತವಾದ ಏಕಾರ (ಏಂ) ದಿಂದ ಕೂಡಿದ, ಅಮೃತವನ್ನು ಸುರಿಸುತ್ತಿರುವ, ಚಂದ್ರಮಂಡಲವನ್ನು ನೋಡುತ್ತಾ, ಏಕಾಗ್ರಚಿತ್ತನಾಗಿ ಧ್ಯಾನಮಾಡುತ್ತಾ, ॥೮-೯-೧೦॥

ದೇಹದೊಳಗಿರುವ ಪ್ರಾಣವಾಯುವನ್ನು ಇಡಾನಾಡಿಯಿಂದ ಎಳೆದುಕೊಂಡು ಅದರೊಳಗೆ ತುಂಬಿ, ಬಳಿಕ ಶರೀರಮಧ್ಯದಲ್ಲಿರುವ ವಿಶೇಷವಾದ ಉರಿಯಿಂದ ಕೂಡಿದ ಅಗ್ನಿಯನ್ನು ಧ್ಯಾನಮಾಡುತ್ತಾ, ಬಿಂದುನಾದಗಳಿಂದ ಕೂಡಿದ ಅಗ್ನಿಬೀಜಾಕ್ಷರವನ್ನು (ರಂ) ಧ್ಯಾನಮಾಡಬೇಕು. ॥೧೧-೧೨॥

ತರುವಾಯ ಪ್ರಾಣವಾಯುವನ್ನು ಪಿಂಗಲಾನಾಡಿಯಿಂದ ಹೊರಗೆ ಬಿಡಬೇಕು. ಆಮೇಲೆ ಮತ್ತೆ ಅಗ್ನಿಬೀಜವನ್ನು ಧ್ಯಾನಮಾಡುತ್ತಾ ಪಿಂಗಲಾನಾಡಿಯಿಂದ ಪ್ರಾಣವಾಯುವನ್ನು ಎಳೆದುಕೊಂಡು ಇಡಾನಾಡಿಯಿಂದ ಮೆಲ್ಲಮೆಲ್ಲನೆ ಆ ವಾಯುವನ್ನು ಹೊರಗೆ ಬಿಡಬೇಕು. ॥೧೩॥

ತ್ರಿಚತುರ್ವತ್ಸರಂ ವಾಽಥ ತ್ರಿಚತುರ್ಮಾಸಮೇವ ವಾ ॥೧೪॥

ಷಟ್ಕೃತ್ವ ಆಚರೇನ್ನಿತ್ಯಂ ರಹಸ್ಯೇವಂ ತ್ರಿಸಂಧಿಷು ।
ನಾಡೀಶುದ್ಧಿಮವಾಪ್ನೋತಿ ಪೃಥಕ್ಚಿಹ್ನೋಪಲಕ್ಷಿತಾಂ ॥೧೫॥

ಶರೀರಲಘುತಾ ದೀಪ್ತಿರ್ವಹ್ನೇರ್ಜಠರವರ್ತಿನಃ ।
ನಾದಾಭಿವ್ಯಕ್ತಿರಿತ್ಯೇತತ್ ಚಿಹ್ನಂ ತತ್ಸಿದ್ಧಿಸೂಚಕಂ ॥೧೬॥

ಯಾವದೇತಾನಿ ಸಂಪಶ್ಯೇತ್ತಾವದೇವಂ ಸಮಾಚರೇತ್ ।
ಅಥವೈತತ್ಪರಿತ್ಯಜ್ಯ ಸ್ವಾತ್ಮಶುದ್ಧಿಂ ಸಮಾಚರೇತ್ ॥೧೭॥

ಆತ್ಮಾ ಶುದ್ಧಃ ಸದಾ ನಿತ್ಯಃ ಸುಖರೂಪಃ ಸ್ವಯಂ ಪ್ರಭುಃ ।
ಅಜ್ಞಾನಾನ್ಮಲಿನೋ ಭಾತಿ ಜ್ಞಾನಾಚ್ಛುದ್ಧೋ ವಿಭಾತ್ಯಯಂ ॥೧೮॥

ಈ ರೀತಿಯಲ್ಲಿ ಪ್ರತಿದಿನವೂ ಮೂರು ಸಂಧಿಸ್ಥಾನಗಳಲ್ಲಿ ಆರಾವೃತ್ತಿ ಪ್ರಾಣಾಯಾಮವನ್ನು ಮಾಡುತ್ತಿದ್ದರೆ ಮೂರು ನಾಲ್ಕು ತಿಂಗಳಲ್ಲಾಗಲೀ ಮೂರು ನಾಲ್ಕು ವರ್ಷಗಳಲ್ಲಾಗಲೀ ಜೀವನ ಪಾಪನಿವಾರಣಾನುಸಾರವಾಗಿ ನಾಡೀಶುದ್ಧಿಯನ್ನು ಪಡೆವರು. ಆ ನಾಡೀಶುದ್ಧಿಯಾದುದಕ್ಕೆ ಕೆಲವು ಗುರುತುಗಳಿರುವುವು. ||೧೪-೧೫||

ಅವಾವುವೆಂದರೆ—ಶರೀರದ ಲಘುತ್ವ, ಜಠರಾಗ್ನಿಯ ಅಭಿವೃದ್ಧಿ, ದೇಹದೊಳಗೆ ಉತ್ಪತ್ತಿಯಾಗುವ ಸೂಕ್ಷ್ಮವಾದ ನಾದಜ್ಞಾನ ಇವುಗಳೇ ನಾಡೀಶುದ್ಧಿಯ ಸೂಚನೆಗಳು. ||೧೬||

ಎಲ್ಲಿಯವರೆಗೆ ಈ ಚಿಹ್ನೆಗಳು ತೋರುವುವೋ ಅಲ್ಲಿಯವರೆಗೆ ಈ ಪ್ರಾಣಾಯಾಮವನ್ನು ನಾಡೀಶುದ್ಧಿಗಾಗಿ ಅಭ್ಯಾಸಮಾಡಬೇಕು. ಈ ನಾಡೀಶುದ್ಧಿಯು ದೇಹದಲ್ಲಿರುವ ಪಿತ್ತಶ್ಲೇಷ್ಮಾದಿಗಳನ್ನು ಶೋಷಿಸಿ ದೇಹಶುದ್ಧಿಗಾಗಿ ಮಾಡಬೇಕಾದ ಕೆಲಸವಾದುದರಿಂದ ವಿವೇಕಜ್ಞಾನಕ್ಕೆ ಅರ್ಹತೆಯುಳ್ಳವನು ಇದನ್ನು ಬಿಟ್ಟು ಸ್ಥೂಲಶರೀರವೂ ಲಿಂಗಶರೀರವೂ ಅವಿದ್ಯಾಕಲ್ಪಿತಗಳೆಂದು ತಿಳಿದು, ವಿವೇಕದಿಂದ ಈ ಅವಿದ್ಯೆಯನ್ನು ಕಳೆದು ಸಚ್ಚಿದಾನಂದೈಕರಸಸ್ವರೂಪವಾದ ಆತ್ಮತತ್ವವನ್ನು ಆಶ್ರಯಿಸಬೇಕು. ಹಿಂದಿನದಕ್ಕಿಂತಲೂ ಇದೇ ಅತ್ಯಂತಪ್ರಶಸ್ತವಾದ ಮಾರ್ಗವು. ||೧೭||

ಆತ್ಮನು ಯಾವಾಗಲೂ ಪರಿಶುದ್ಧಸ್ವರೂಪನು. ಸತ್ಸ್ವರೂಪನಾಗಿ ಯಾವಾಗಲೂ ಇರತಕ್ಕವನು. ಸ್ವಪ್ರಕಾಶನಾಗಿ ಸುಖರೂಪನಾಗಿರುವನು. ಅಜ್ಞಾನದಿಂದ

ಅಜ್ಞಾನ ಮಲಪಂಕಂ ಯಃ ಕ್ಷಾಲಯೇಜ್ಜ್ಞಾನತೋಯತಃ ।
ಸ ಏವ ಸರ್ವದಾ ಶುದ್ಧೋ ನಾಜ್ಞಃ ಕರ್ಮ ಕರೋತಿ ಸಃ ॥೧೯॥

ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ ।
ಕರ್ಮ ಕರ್ತವ್ಯ ಮಿತ್ಯೇವಂ ಬೋಧಯೇತ್ತಾನ್ಸಮಾಹಿತಃ ॥೨೦॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಜ್ಞಾನಯೋಗಖಂಡೇ
ನಾಡೀಶುದ್ಧಿನಿರೂಪಣಂ ನಾಮ ದ್ವಾದಶೋಽಧ್ಯಾಯಃ

ಮಲಿನನಂತೆ ಕಾಣುವನು. ಜ್ಞಾನದಿಂದ ಪರಿಶುದ್ಧನಾಗಿಯೇ ಪ್ರಕಾಶಿಸುತ್ತಿರುವನು. ॥೧೮॥

ಅಜ್ಞಾನವೆಂಬ ಕೊಳಕಾದ ಕೊಚ್ಚೆಯನ್ನು ಜ್ಞಾನವೆಂಬ ನೀರಿನಿಂದ ಯಾವನು ತೊಳೆವನೋ, ಅವನೇ ಯಾವಾಗಲೂ ಪರಿಶುದ್ಧನೆನಿಸುವನು. ರಾಗ ದ್ವೇಷಗಳಿಂದ ಕರ್ಮಾಸಕ್ತನಾದುದರಿಂದ ಅಜ್ಞಾನಿಯಾದವನು ಶುದ್ಧನಲ್ಲ. ॥೧೯॥

ಜ್ಞಾನವೇ ಪ್ರಶಸ್ತವಾದಮೇಲೆ ಶಾಸ್ತ್ರಗಳಲ್ಲಿ ಕರ್ಮಗಳನ್ನು ಮಾಡಬೇಕೆಂದು ಉಪದೇಶಿಸಲು ಕಾರಣವೇನೆಂದರೆ, ಅಜ್ಞಾನಿಗಳು ಕರ್ಮಾಸಕ್ತರಾಗಿರುವರು. ಅವರಿಗೆ ಜ್ಞಾನಾಧಿಕಾರವಿರುವುದಿಲ್ಲ. ಆದುದರಿಂದ ಅವರಿಗೆ ಬುದ್ಧಿಭೇದವನ್ನುಂಟುಮಾಡಬಾರದೆಂದು ಕರ್ಮವನ್ನು ಮಾಡಲೇಬೇಕೆಂದು ಶಾಸ್ತ್ರಗಳು ವಿಧಿಸುವುವು. ಆದುದರಿಂದ ಆ ಕರ್ಮಗಳೂ, ಕ್ರಮವಾಗಿ ನಿಷ್ಕಾಮಗಳಾದರೆ ಅಜ್ಞಾನಿಗಳಿಗೂ ಮನಸ್ಸಿನ ಶುದ್ಧಿಯನ್ನುಂಟುಮಾಡಿ ಪಾಪಗಳನ್ನು ಪರಿಹಾರಮಾಡುವ ಮೂಲಕವಾಗಿ ಜ್ಞಾನೋತ್ಪತ್ತಿಗೆ ಪರಂಪರೆಯಿಂದ ಸಹಾಯಕಗಳಾಗಿರುವುವು. ॥೨೦॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ನಾಡೀಶುದ್ಧಿನಿರೂಪಣವೆಂಬ ಹನ್ನೆರಡನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಜ್ಞಾನಯೋಗಖಂಡಂ

|| ತ್ರಯೋದಶೋಽಧ್ಯಾಯಃ ||

ಹದಿಮೂರನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ತವಾಷ್ಟಾಂಗಾನಿ ಸುವ್ರತ ।
ಯಮಶ್ಚ ನಿಯಮಶ್ಚೈವ ತಥೈವಾಸನಮೇವ ಚ ||೧||

ಪ್ರಾಣಾಯಾಮಸ್ತಥಾ ವಿಪ್ರ ಪ್ರತ್ಯಾಹಾರಸ್ತಥಾ ಪರಃ ।
ಧಾರಣಾ ಚ ತಥಾ ಧ್ಯಾನಂ ಸಮಾಧಿಶ್ಚಾಷ್ಟಮೋ ಮುನೇ ||೨||

ಅಹಿಂಸಾಸತ್ಯಮಸ್ತೇಯಂ ಬ್ರಹ್ಮಚರ್ಯಾ ದಯಾಽಽರ್ಜವಂ ।
ಕ್ಷಮಾ ಧೃತಿರ್ಮಿತಾಹಾರಃ ಶೌಚಂ ಚೇತಿ ಯಮಾ ದಶ ||೩||

ಅಷ್ಟಾಂಗಯೋಗಗಳು ಸಿದ್ಧಿಸಬೇಕಾದರೆ ಮೊದಲು ನಾಡೀಶುದ್ಧಿಯಾಗಬೇಕು. ಆದುದರಿಂದ ಈಶ್ವರನು ಹಿಂದಿನ ಅಧ್ಯಾಯದಲ್ಲಿ ನಾಡೀಶುದ್ಧಿಯನ್ನು ಹೇಳಿದ ಬಳಿಕ, ಈಗ ಅಷ್ಟಾಂಗಯೋಗಗಳನ್ನು ಹೇಳುವುದಕ್ಕೆ ಪ್ರಾರಂಭಿಸಿರುತ್ತಾನೆ ಎಲೈ ಬೃಹಸ್ಪತಿಯೇ, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ ಎಂಬ ಈ ಎಂಟೂ ಕ್ರಮವಾಗಿ ಯೋಗಾಂಗಗಳೆನಿಸುವುವು. ||೧-೨||

ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯಾ, ಆರ್ಜವ, ಕ್ಷಮಾ, ಧೃತಿ, ಮಿತಾಹಾರ, ಶೌಚ ಈ ಹತ್ತೂ ಯಮವೆನಿಸುವುದು. ||೩||

ವೇದೋಕ್ತೇನ ಪ್ರಕಾರೇಣ ವಿನಾ ಸತ್ಯಂ ತಪೋಧನ ।
ಕಾಯೇನ ಮನಸಾ ವಾಚಾ ಹಿಂಸಾ ಹಿಂಸಾ ನ ಚಾನ್ಯಥಾ ॥೪॥

ಮಹಾತಪಸ್ವಿಯಾದ ಬೃಹಸ್ಪತಿಯೇ, ವೇದದಲ್ಲಿ ವಿಧಿಸಿರುವುದನ್ನು ಬಿಟ್ಟು ಮಿಕ್ಕ ವಿಷಯಗಳಲ್ಲಿ ಶರೀರದಿಂದಲೂ, ಮನಸ್ಸಿನಿಂದಲೂ, ಮಾತಿನಿಂದಲೂ, ಪ್ರಾಣಿಗಳಿಗೆ ಹಿಂಸೆಯನ್ನುಂಟುಮಾಡುವುದನ್ನೇ ಹಿಂಸೆಯೆಂದು ಹೇಳುವರು. "ನಹಿಂಸ್ಯಾತ್ಸರ್ವಾಭೂತಾನಿ" ಎಂಬ ನಿಷೇಧವಾಕ್ಯವು ಕಾಮಾದಿಗಳಿಂದ ಕೂಡಿದ ಹಿಂಸೆಗೆ ಸಂಬಂಧಪಟ್ಟುದು. "ಅಗ್ನಿಷೋಮಿಾಯಂ ಪಶುಮಾಲಭೇತ" ಎಂಬ ವಿಧಿಯಿಂದ ಕೂಡಿದ ಹಿಂಸೆಯು ನಿಷೇಧವಾದುದಲ್ಲ. ಈ ಹಿಂಸೆಯು ಸೋಮಯಾಗಾಂಗವಾದುದರಿಂದ ವೇದವಿಧಿಯಿಂದ ಕರ್ತವ್ಯವಾಗಿರುವುದು. "ಶ್ಯೇನೇನಾಭಿ ಚರನ್ಯಜೇತ" ಎಂಬ ವೇದವಿಧಿಯಲ್ಲಿಯೂ ಶ್ಯೇನಯಾಗಾಂಗವಾದ ಪಶುಹಿಂಸೆಯು ವಿಧಿಯಾದರೂ ಈ ಅಭಿಚಾರಯಾಗದಿಂದ ಮಾಡುವ ಶತ್ರುವಿನ ನಾಶರೂಪವಾದ ಹಿಂಸೆಯು ದ್ವೇಷದಿಂದ ಹುಟ್ಟಿದುದಾಗಿರುವುದು. ಆದುದರಿಂದ ಇದು ವಿಧಿಯಲ್ಲಿ ಸೇರಲಿಲ್ಲ. ಅಭಿಚಾರಕರ್ಮವನ್ನು ವೇದದಲ್ಲಿಯೇ ನಿಷೇಧಿಸಿರುವುದು. ಇವುಗಳನ್ನು ವಿಚಾರಮಾಡಿ ಅಹಿಂಸೆಯ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಹಿಂಸೆಯು ಶರೀರ, ಮನಸ್ಸು, ಮಾತು ಈ ಮೂರಕ್ಕೂ ಸಂಬಂಧಪಟ್ಟುದೆಂದು ಹೇಳಿತಷ್ಟೇ? ಇವುಗಳೊಂದೊಂದರಲ್ಲಿಯೂ ತಾನು ಮಾಡಿದುದು, ಮತ್ತೊಬ್ಬರಿಂದ ಮಾಡಿಸಿದುದು, ಮಾಡುತ್ತಿರುವ ಹಿಂಸೆಯನ್ನು ನೋಡಿ ಒಪ್ಪಿದುದು. ಎಂದು ಮೂರು ಬಗೆಯಾಗಿ ಒಂಬತ್ತು ಬಗೆಯಾಗಿರುವುದು. ಈ ಒಂಬತ್ತರಲ್ಲಿಯೂ ಪ್ರತಿಯೊಂದೂ ಲೋಭ, ಕ್ರೋಧ, ಅಜ್ಞಾನಮೂಲಕವಾದುದಾಗಿ ಇಪ್ಪತ್ತೇಳುಬಗೆಯಾಗುತ್ತದೆ. ಇವುಗಳಲ್ಲಿ ಪ್ರತಿಯೊಂದೂ ಮೃದುಮಾತ್ರ, ಮಧ್ಯಮಾತ್ರ, ಅಧಿಕಮಾತ್ರ, ಎಂಬ ಭೇದದಿಂದ ಹಿಂಸೆಯ ಭೇದಗಳು ಎಂಬತ್ತೊಂದುಬಗೆಯಾಗಿವೆ. ವಿಚಾರಮಾಡಿ ಇಂತಹ ಹಿಂಸೆಗಳನ್ನು ಬಿಡಬೇಕು. ಈ ಹಿಂಸೆಗಳು ದುಃಖಕ್ಕೆ ಕಾರಣಗಳೆಂದೂ, ತತ್ವಜ್ಞಾನಕ್ಕೆ ತಡೆಯನ್ನುಂಟುಮಾಡತಕ್ಕವುಗಳೆಂದೂ ನಿಶ್ಚಯಿಸುವುದೇ ಹಿಂಸೆಯನ್ನು ಬಿಡುವ ಉಪಾಯವು. ಈ ವಿಷಯದಲ್ಲಿ ಯೋಗಶಾಸ್ತ್ರದಲ್ಲಿ "ವಿತರ್ಕಬಾಧನೇ ಪ್ರತಿಪಕ್ಷಭಾವನಂ" ಎಂಬ ಸೂತ್ರದಲ್ಲಿ "ವಿತರ್ಕಾ ಹಿಂಸಾದಯಃ ಕೃತಕಾರಿತಾನುಮೋದಿತಾ ಲೋಭಕ್ರೋಧಮೋಹಪೂರ್ವಕಾ ಮೃದುಮಧ್ಯಾಧಿಮಾತ್ರಾ ದುಃಖಾ ಜ್ಞಾನಾನನ್ತ ಫಲಾ ಇತಿ ಪ್ರತಿಪಕ್ಷಭಾವನಂ" ಎಂಬ ವಿವರಣೆಯಿಂದ ತಿಳಿವುದು. ॥೪॥

ಆತ್ಮಾ ಸರ್ವಗತೋಽಚ್ಛೇದ್ಯ ಅದಾಹ್ಯ ಇತಿ ಯಾ ಮತಿಃ ।
ಸಾ ಚಾಹಿಂಸಾ ಪರಾ ಪ್ರೋಕ್ತಾ ಮುನೇ ವೇದಾಂತವೇದಿಭಿಃ ॥೫॥

ಯತ್ತ್ವದುಷ್ಟೇಂದ್ರಿಯೈರ್ದೃಷ್ಟಂ ಶ್ರುತಂ ವೇದವಿದಾಂ ವರ ।
ತಸ್ಯೈವೋಕ್ತಿರ್ಭವೇದ್ವಿಪ್ರ ಸತ್ಯತಾ ನಾನ್ಯಥಾ ಭವೇತ್ ॥೬॥

ಸರ್ವಂ ಸತ್ಯಂ ಪರಂಬ್ರಹ್ಮ ನ ಚಾನ್ಯದಿತಿ ಯಾ ಮತಿಃ ।
ತತ್ಸತ್ಯಂ ಪರಮಂ ಪ್ರೋಕ್ತಂ ವೇದಾಂತಜ್ಞಾನಭಾವಿತೈಃ ॥೭॥

ಅನ್ಯದೀಯೇ ತೃಣೇ ರತ್ನೇ ಕಾಂಚನೇ ಮೌಕ್ತಿಕೇಽಪಿ ವಾ ।
ಮನಸಾಽಪಿ ನಿವೃತ್ತಿರ್ಯಾ ತದಸ್ತೇಯಂ ವಿದುರ್ಬುಧಾಃ ॥೮॥

ಹಿಂದೆ ಕಾಯಕಾದಿಗಳ ಹಿಂಸೆಯನ್ನು ಬಿಡಬೇಕೆಂದು ಹೇಳಿ, ಈಗ ಆತ್ಮಹಿಂಸೆಯನ್ನೂ ಬಿಡಬೇಕೆಂದು ಹೇಳುತ್ತಾ, ಆತ್ಮನು ಸರ್ವಗತನು. ಅವನನ್ನು ಕತ್ತರಿಸಲಾಗುವುದಿಲ್ಲ. ಸುಡಲಾಗುವುದಿಲ್ಲ. ಎಂದು ತಿಳಿಯುವುದೇ ಅಹಿಂಸೆಯು. ಎಂದು ವೇದಾಂತಿಗಳು ಹೇಳುವರು. ಇದೇ ಅತ್ಯಂತ ಶ್ರೇಷ್ಠವಾದ ಅಹಿಂಸಾ ಸ್ವರೂಪವು. ಇಂತಹ ಆತ್ಮಸ್ವರೂಪವನ್ನು ತಿಳಿಯದಿರುವುದೇ ಆತ್ಮಹಿಂಸೆಯು. ಈ ವಿಷಯದಲ್ಲಿ "ಯೋಽನ್ಯಥಾಸಂತಮಾತ್ಮಾನಮನ್ಯಥಾ ಪ್ರತಿಪದ್ಯತೇ । ಪ್ರಾಯಶ್ಚಿತ್ತಂ ನ ಪಶ್ಯಾಮಿ ಯೇನ ಶುಧ್ಯೇತ್ಸ ಆತ್ಮಹಾ" ಎಂದು ಆತ್ಮಘಾತಕ್ಕೆ ಪ್ರಾಯಶ್ಚಿತ್ತವಿಲ್ಲವೆಂದು ಹೇಳಿದೆ. ಆದುದರಿಂದ ಜ್ಞಾನದಿಂದ ಅಜ್ಞಾನವನ್ನು ಓಡಿಸುವುದೇ ಶ್ರೇಷ್ಠವಾದ ಅಹಿಂಸೆಯಾಗುವುದು. ॥೫॥

ಶುದ್ಧವಾದ ಇಂದ್ರಿಯಗಳುಳ್ಳವರು ನೋಡಿದ ಮತ್ತು ಕೇಳಿದ ವಿಷಯಗಳನ್ನೇ ಮಾತಿನಿಂದ ಹೇಳಿದರೆ ಅದನ್ನೇ ಸತ್ಯವೆಂದು ಹೇಳುವರು. ಇದು ಅಪರ ಸತ್ಯವೆನಿಸುವುದು. ಅಹಿಂಸೆಯಂತೆಯೇ ಸತ್ಯವೂ ಪರ ಅಪರ ಎಂದು ಎರಡು ಬಗೆಯಾಗಿರುವುದು. ॥೬॥

ಸಮಸ್ತ ವಸ್ತುಗಳೂ ಬ್ರಹ್ಮಸ್ವರೂಪದಿಂದಲೇ ಸತ್ಯವಾದುವುಗಳು. ಬೇರೇ ರೂಪದಿಂದ ಅಸತ್ಯವಾದುವುಗಳು. ಎಂದು ತಿಳಿದು ಅದನ್ನೇ ಹೇಳಿದರೆ ಅದು ಪರಮ ಸತ್ಯವಾಕ್ಯವೆನಿಸುವುದು. ವೇದಾಂತವನ್ನು ತಿಳಿದು ಶುದ್ಧವಾದ ಜ್ಞಾನವನ್ನು ಪಡೆದವರು ಇಂತಹ ಮಾತನ್ನಾಡುವರು. ॥೭॥

ಅಸ್ತೇಯವು ಎರಡು ಬಗೆಯಾಗಿರುವುದು. ಅದರಲ್ಲಿ ಮೊದಲನೆಯದು

ಆತ್ಮನೋಽನಾತ್ಮಭಾವೇನ ಹ್ಯಪಹಾರ ವಿವರ್ಜನಂ ।
ಯತ್ತದಸ್ತೇಯ ಮಿತ್ಯುಕ್ತಮಾತ್ಮವಿದ್ಭಿರ್ಮಹಾತ್ಮಭಿಃ ॥೯॥

ಕಾಯೇನ ಮನಸಾ ವಾಚಾ ನಾರೀಣಾಂ ಪರಿವರ್ಜನಂ ।
ಋತುಸೇವಾಂ ವಿನಾ ಸ್ವಸ್ಯಾಂ ಬ್ರಹ್ಮಚರ್ಯಂ ತದುಚ್ಯತೇ ॥೧೦॥

ಬ್ರಹ್ಮಭಾವೇ ಮನಶ್ಚರ್ಯಂ ಬ್ರಹ್ಮಚರ್ಯಂ ಪರಂ ತಥಾ ।
ಆತ್ಮವತ್ಸರ್ವಭೂತೇಷು ಕಾಯೇನ ಮನಸಾ ಗಿರಾ ॥೧೧॥

ಅನುಕಂಪಾ ದಯಾ ಸೈವ ಪ್ರೋಕ್ತಾ ವೇದಾಂತವೇದಿಭಿಃ ।
ಪುತ್ರೇ ಮಿತ್ರೇ ಕಲತ್ರೇ ಚ ರಿಪೌ ಸ್ವಾತ್ಮನಿ ಸಂತತಂ ॥೧೨॥

ಮತ್ತೊಬ್ಬರ ಹುಲ್ಲುಕಡ್ಡಿ, ರತ್ನ, ಚಿನ್ನ, ಮುತ್ತು ಮುಂತಾದ ವಸ್ತುಗಳ ವಿಷಯದಲ್ಲಿ ಮನಸ್ಸಿನಿಂದಲೂ ಅಪೇಕ್ಷೆ ಪಡದಿರುವುದೇ ಅಸ್ತೇಯವೆನಿಸುವುದು. ॥೮॥

ಆತ್ಮನನ್ನು ಅನಾತ್ಮವಾದ ದೇಹೇಂದ್ರಿಯಾದಿಗಳ ರೂಪವಾದವನಲ್ಲವೆಂದು ತಿಳಿದು ಅಪಹಾರಮಾಡದಿರುವುದೇ ಎರಡನೆಯ ಅಸ್ತೇಯವೆನಿಸುವುದು. ಆತ್ಮಾಪಹಾರ ವಿಷಯದಲ್ಲಿ " ಯೋಽನ್ಯಥಾಸಂತಮಾತ್ಮಾನಮನ್ಯಥಾ ಪ್ರತಿಪದ್ಯತೇ । ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ॥ ಎಂದು ಹೇಳಿದೆ. ಆತ್ಮನು ದೇಹೇಂದ್ರಿಯಾದಿಗಳಿಗಿಂತ ಬೇರೆಯಾದವನು. ಎಂದು ಅನುಸಂಧಾನ ಮಾಡುತ್ತಿರುವುದು ಶ್ರೇಷ್ಠವಾದ ಅಸ್ತೇಯವೆನಿಸುವುದು. ॥೯॥

ಪ್ರೀತಿಯಿಂದ ಕೂಡಿ ಪರಸ್ತ್ರೀಯರ ಸ್ಪರ್ಶನಸಂಭಾಷಣಾದಿಗಳನ್ನು ಮಾಡಿದರೆ ಬ್ರಹ್ಮಚರ್ಯವಾಗುವುದಿಲ್ಲ. ಶರೀರದಿಂದಲೂ, ಮಾತಿನಿಂದಲೂ, ಮನಸ್ಸಿನಿಂದಲೂ ಪರಸ್ತ್ರೀಯರ ಸಂಬಂಧವನ್ನು ಬಿಡಬೇಕು. ಇದೇ ಬ್ರಹ್ಮಚರ್ಯವೆನಿಸುವುದು. ಆದರೆ ಋತುಕಾಲದಲ್ಲಿ ಸ್ವಪತ್ನೀಗಮನವು ಬ್ರಹ್ಮಚರ್ಯವೆನಿಸುವುದು. ಇದು ವೇದವಿಹಿತ ವಾದುದು. " ಪ್ರಾಣಂ ವಾ ಏತೇ ಪ್ರಸ್ಕಂದಂತಿ ಯೇ ದಿವಾ ರತ್ಯಾಸಂಯುಜ್ಯಂತೇ । ಬ್ರಹ್ಮಚರ್ಯಮೇವ ತದ್ಯದ್ರಾತ್ರೌ ರತ್ಯಾಸಂಯುಜ್ಯಂತೇ ॥ " ಎಂದು ಪ್ರಶ್ನೋಪನಿಷತ್ತಿನಲ್ಲಿ ಹೇಳಿರುವುದು. ಇದು ಅಪರ ಬ್ರಹ್ಮಚರ್ಯವಿಷಯವು. ॥೧೦॥

ಮನಸ್ಸು ಬ್ರಹ್ಮಸ್ವರೂಪಾನುಸಂಧಾನದಲ್ಲಿಯೇ ಇರುತ್ತಿದ್ದರೆ ಅದು ಪರಬ್ರಹ್ಮಚರ್ಯವೆನಿಸುವುದು. ಶರೀರ, ಮಾತು, ಮನಸ್ಸು, ಈ ಮೂರರಿಂದಲೂ ತನ್ನಂತೆಯೇ ಸಮಸ್ತ ಪ್ರಾಣಿಗಳು ಎಂದು ತಿಳಿದು ಮಕ್ಕಳು, ಸ್ನೇಹಿತರು, ಸ್ತ್ರೀಯರು, ಶತ್ರುಗಳು,

ಐಕರೂಪ್ಯಂ ಮುನೇ ಯತ್ತದಾರ್ಜವಂ ಪ್ರೋಚ್ಯತೇ ಮಯಾ ।
ಕಾಯೇನ ಮನಸಾ ವಾಚಾ ಶತ್ರುಭಿಃ ಪರಿಪೀಡಿತೇ ॥೧೩॥

ಚಿತ್ತಕ್ಷೋಭನಿವೃತ್ತಿರ್ಯಾ ಕ್ಷಮಾ ಸಾ ಮುನಿಪುಂಗವ ।
ವೇದಾದೇವ ವಿನಿರ್ಮೋಕ್ಷಃ ಸಂಸಾರಸ್ಯ ನ ಚಾನ್ಯಥಾ ॥೧೪॥

ಇತಿ ವಿಜ್ಞಾನನಿಷ್ಪತ್ತಿರ್ಧೃತಿಃ ಪ್ರೋಕ್ತಾ ಹಿ ವೈದಿಕೈಃ ।
ಅಹಮಾತ್ಮಾ ನ ಮರ್ತ್ಯೋಽಸ್ಮೀತ್ಯೇವಮಪ್ರಚ್ಯುತಾ ಮತಿಃ ॥೧೫॥

ಯಾ ಸಾ ಪ್ರೋಕ್ತಾ ಧೃತಿಃ ಶ್ರೇಷ್ಠಾ ಮುನೇ ವೇದೈಕವೇದಿಭಿಃ ।
ಅಲ್ಪಮಿಷ್ಟಾಶನಾಭ್ಯಾಂತು ನಾಸ್ತಿಯೋಗಃ ಕಥಂಚನ ॥೧೬॥
ತಸ್ಮಾದ್ಯೋಗಾನುಗುಣ್ಯೇನ ಭೋಜನಂ ಮಿತಭೋಜನಂ ।

ತನ್ನ ಶರೀರ, ಈ ಸಮಸ್ತ ವಿಷಯಗಳಲ್ಲಿಯೂ, ಸಮಾನವಾದ ಪ್ರೀತಿಯನ್ನು ತೋರಿಸುವುದೇ ದಯೆ ಎನಿಸುವುದು. ಆಗಮಶಾಸ್ತ್ರದಲ್ಲಿ "ರೋಗಾರ್ತಸ್ಯರಿಪೋರ್ವಾಪಿ ಮಿತ್ರಸ್ಯಾನ್ಯಸ್ಯವಾಪುನಃ । ತದ್ರಕ್ಷಾಭಿಮುಖೀ ಬುದ್ಧಿರ್ದಯೈಷಾಭಾಷಿತಾ ಬುಧೈಃ ॥" ಎಂದು ಹೇಳಿರುವುದು. ॥೧೧-೧೨॥

ಶರೀರ ಮಾತು ಮನಸ್ಸು ಎಂಬ ಮೂರು ಕರಣಗಳಿಂದ ಶತ್ರುಗಳು ಹಿಂಸೆ ಪಡಿಸಿದರೂ ಮನಸ್ಸಿಗೆ ಕೋಪ ಮುಂತಾದ ಚಾಂಚಲ್ಯಭಾವವು ಬರದಿರುವ ಸ್ಥಿತಿಯನ್ನೇ ಕ್ಷಮೆಯೆಂದು ಹೇಳುವರು. ॥೧೩॥

ವೇದಕ್ಕೆ ವಿರೋಧವಾದ ವಚನಗಳಿದ್ದರೂ ವೇದವಿರುದ್ಧವಾದ ಧರ್ಮಗಳನ್ನು ಬಿಟ್ಟು ವೇದೋಕ್ತವಾದ ಧರ್ಮದಲ್ಲಿ ದೃಢವಾದ ನಂಬಿಕೆಯನ್ನಿಟ್ಟಿರುವುದು ಅಪರಮ ಧೃತಿ ಎನಿಸುವುದು. ಇದು ವೇದೋಕ್ತಧರ್ಮಾನುಷ್ಠಾನದಿಂದಲೇ ಸಂಸಾರ ದುಃಖವು ನಾಶವಾಗುವುದೆಂಬ ದೃಢವಾದ ನಂಬಿಕೆಯಿಂದ ಕೂಡಿರುವುದು. ನಾನು ಆತ್ಮನು. ಹುಟ್ಟು ಸಾವುಗಳುಳ್ಳ ಮನುಷ್ಯನಲ್ಲ. ಎಂಬ ಸ್ಥಿರವಾದ ಬುದ್ಧಿಯು ಪರಮಧೃತಿಯೆನಿಸುವುದು. ಇದೇ ಅತ್ಯಂತ ಶ್ರೇಷ್ಠವಾದುದು. ಎಂದು ವೇದಾಂತಿಗಳು ಹೇಳುವರು. ॥೧೪-೧೫॥

ಅಲ್ಪಾಹಾರ ಮಾಡಿದರೆ ಶರೀರದ ಧಾತುಗಳು ಕ್ಷೀಣವಾಗುವುವು. ಅಧಿಕಾಹಾರ ಮಾಡಿದರೆ ಅಜೀರ್ಣವೂ, ನಿದ್ರಾಲಸ್ಯಾದಿ ದೋಷಗಳೂ ಉಂಟಾಗುವುವು. ಆದುದರಿಂದ ಇಂಥವರಿಗೆ ಯೋಗಾಭ್ಯಾಸವು ಸಾಧ್ಯವಾಗಲಾರದು. ಮಿತಭೋಜನ ಮಾಡುವುದು ಯೊಗಾಭ್ಯಾಸಕ್ಕೆ ಅನುಕೂಲವಾದುದು. ॥೧೬॥

ಸ್ವದೇಹಮಲನಿರ್ಮೋಕ್ಷೋ ಮೃಜ್ಜಲಾಭ್ಯಾಂ ಮಹಾಮುನೇ ॥೧೭॥

ಯತ್ತಚ್ಛೌಚಂ ಭವೇದ್ಬಾಹ್ಯಂ ಮಾನಸಂ ಮನನಂ ವಿದುಃ ।
ಅಹಂ ಶುದ್ಧ ಇತಿಜ್ಞಾನಂ ಶೌಚಂ ಪ್ರಾಹುರ್ಮನೀಷಿಣಃ ॥೧೮॥

ಅತ್ಯಂತಮಲಿನೋ ದೇಹೋ ದೇಹೀ ಚಾತ್ಯಂತನಿರ್ಮಲಃ ।
ಉಭಯೋರಂತರಂ ಜ್ಞಾತ್ವಾ ಕಸ್ಯ ಶೌಚಂ ವಿಧೀಯತೇ ॥೧೯॥

ಜ್ಞಾನಶೌಚಂ ಪರಿತ್ಯಜ್ಯ ಬಾಹ್ಯೇ ಯೋ ರಮತೇ ನರಃ ।
ಸಮೂಢಃ ಕಾಂಚನಂ ತ್ಯಕ್ತ್ವಾ ಲೋಷ್ಠಂ ಗೃಹ್ಣಾತಿ ಸುವ್ರತ ॥೨೦॥

ಜ್ಞಾನಾಂಭಸ್ಯೇವ ಶುದ್ಧಸ್ಯ ಕೃತಕೃತ್ಯಸ್ಯಯೋಗಿನಃ ।
ಕರ್ತವ್ಯಂ ನಾಸ್ತಿ ಲೋಕೇಽಸ್ಮಿನ್ನಸ್ತಿ ಚೇನ್ನ ಸ ತತ್ವವಿತ್ ॥೨೧॥

ಮಣ್ಣು, ನೀರು ಇವುಗಳಿಂದ ತನ್ನ ಶರೀರದ ಕೊಳೆಯನ್ನು ನಾಶಮಾಡಿ ಕೊಳ್ಳುವುದು ಬಾಹ್ಯವಾದ ಶುಚಿತ್ವವು. ನಾನು ಪರಿಶುದ್ಧನು ಎಂದು ಮನಸ್ಸಿನಲ್ಲಿ ಪುನಃ ಪುನಃ ಯೋಚಿಸುತ್ತಿರುವುದು ಅಂತರಶುದ್ಧಿಯು. ||೧೭-೧೮||

ಈ ಶರೀರವು ವಿಶೇಷ ಕೊಳೆಯಿಂದ ಕೂಡಿದುದು. ದೇಹಿಯಾದ ಆತ್ಮನು ಅತ್ಯಂತ ಪರಿಶುದ್ಧನು. ಹೀಗಿರುವಾಗ ಈ ಇಬ್ಬರ ಸ್ವರೂಪವನ್ನೂ ಚೆನ್ನಾಗಿ ವಿಚಾರ ಮಾಡಿ ತಿಳಿದುಕೊಂಡು ಶುಚಿತ್ವವನ್ನು ಯಾರಿಗೆ ವಿಧಿಸಬೇಕೆಂದು ತಿಳಿಯಬೇಕು. ||೧೯||

ಜ್ಞಾನಸಂಬಂಧವಾದ ಶುಚಿತ್ವವನ್ನು ಬಿಟ್ಟು ಹೊರಗಿನ ಶರೀರಶುದ್ಧಿಯಲ್ಲಿಯೇ ಯಾರು ಸಂತೋಷಪಡುವರೋ, ಅಂತಹ ಮನುಷ್ಯನು ಚಿನ್ನವನ್ನು ಬಿಟ್ಟು ಮಣ್ಣಿನ ಹೆಂಟೆಯನ್ನು ತೆಗೆದುಕೊಳ್ಳುವವನಿಗೆ ಸಮಾನನಾಗುವನು. ||೨೦||

ಜ್ಞಾನವೆಂಬ ನೀರಿನಿಂದ ಪರಿಶುದ್ಧನಾದ ಕೃತಾರ್ಥನಾದ ಯೋಗಿಗೆ ಈ ಲೋಕದಲ್ಲಿ ಮಾಡಬೇಕಾದ ಕೆಲಸವು ಒಂದೂ ಇರುವುದಿಲ್ಲ. ಇರುವುದೆಂದು ಹೇಳಿದರೆ ಅಂಥವನು ತತ್ವಜ್ಞಾನಿಯಲ್ಲ. ||೨೧||

ಲೋಕತ್ರಯೇಽಪಿ ಕರ್ತವ್ಯಂ ಕಿಂಚಿನ್ನಾಸ್ತ್ಯಾತ್ಮವೇದಿನಃ ।
ಇಹೈವ ಜೀವನ್ಮುಕ್ತಾಸ್ತ ಇಹ ಚೇದಿತಿ ಹ ಶ್ರುತಿಃ ॥೨೨॥

ತಸ್ಮಾತ್ಸರ್ವಪ್ರಯತ್ನೇನ ಮುನೇಽಹಿಂಸಾದಿಸಾಧನೈಃ ।
ಆತ್ಮಾನಮಕ್ಷರಂ ಬ್ರಹ್ಮ ವಿದ್ಧಿ ಜ್ಞಾನಾತ್ತು ವೇದಜಾತ್ ॥೨೩॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ ಯಮವಿಧಿನಿರೂಪಣಂ ನಾಮ ತ್ರಯೋದಶೋಽಧ್ಯಾಯಃ

ಆತ್ಮಜ್ಞಾನಿಯಾದವನಿಗೆ ಮೂರು ಲೋಕದಲ್ಲಿಯೂ ಮಾಡಬೇಕಾದ ಕೆಲಸ ವಾವುದೂ ಇರುವುದಿಲ್ಲ. ಅವನು ಕೃತಕೃತ್ಯನಾಗಿ ಜೀವನ್ಮುಕ್ತನಾಗಿರುವನು. "ಇಹಚೇದವೇದೀದಥ ಸತ್ಯಮಸ್ತಿ ನಚೇದಿಹಾವೇದೀನ್ಮಹತೀ ವಿನಷ್ಟಿಃ" ಎಂದು ಕೇನೋಪನಿಷತ್ತಿನಲ್ಲಿ, ಜ್ಞಾನವನ್ನು ಪಡೆಯಲು ಬೇಕಾದ ಸೌಕರ್ಯಗಳೆಲ್ಲವೂ ಈ ಮಾನವಜನ್ಮವನ್ನು ಪಡೆದಿರುವ ಸಮಯದಲ್ಲಿ ದೊರೆತಿರುವುದರಿಂದ ವಿವೇಕಿಯಾದವನು ಆತ್ಮತತ್ವದ ಸ್ವರೂಪವನ್ನು ತಿಳಿದು ಮುಕ್ತನಾಗಬೇಕು. ಹಾಗಿಲ್ಲದೆ ಈ ಸುಸಮಯವನ್ನು ವ್ಯರ್ಥವಾಗಿ ಕಳೆದರೆ, ಅವನಿಗೆ ಜನ್ಮಮರಣ ಪರಂಪರೆಯಿಂದ ಸಂಸಾರದುಃಖವು ಅನಂತವಾಗಿರುತ್ತಾ ತುಂಬ ಕಷ್ಟನಷ್ಟಗಳಾಗುವುವು. ಆದುದರಿಂದ ಇಲ್ಲಿಯೇ ಈಗಲೇ ಆತ್ಮಜ್ಞಾನವನ್ನು ಪಡೆಯುವುದು ಶ್ರೇಯಸ್ಕರವೆಂದು ಜೀವನ್ಮುಕ್ತನ ಸ್ವರೂಪವನ್ನು ವಿವರಿಸಿರುವುದು. ||೨೨||

ಆದುದರಿಂದ ಎಲೈ ತಪಸ್ವಿಯಾದ ಬೃಹಸ್ಪತಿಯೇ, ಅಹಿಂಸಾದಿ ಸಾಧನೆಯಿಂದ ಸಕಲ ಪ್ರಯತ್ನಗಳನ್ನೂ ಮಾಡಿ, ವೇದವಾಕ್ಯಗಳಿಂದುಂಟಾದ ಜ್ಞಾನದಿಂದ ನಾಶರಹಿತವಾದ ಪರಬ್ರಹಸ್ವರೂಪವಾದ ಆತ್ಮತತ್ವವನ್ನು ತಿಳಿಯಬೇಕು. ||೨೩||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ಯಮವೆಂಬ ಯೋಗಾಂಗವನ್ನು ವಿವರಿಸಿರುವ
ಹದಿಮೂರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಜ್ಞಾನಯೋಗಖಂಡಂ

|| ಚತುರ್ದಶೋಽಧ್ಯಾಯಃ ||

ಹದಿನಾಲ್ಕನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ನಿಯಮಾನ್ಮುನಿಸತ್ತಮ ।
ತಪಃ ಸಂತೋಷ ಆಸ್ತಿಕ್ಯಂ ದಾನಮೀಶ್ವರಪೂಜನಂ ॥೧॥

ಸಿದ್ಧಾಂತಶ್ರವಣಂ ಚೈವ ಹ್ರೀರ್ಮತಿಶ್ಚ ಜಪೋ ವ್ರತಂ ।
ಏತೇ ಚ ನಿಯಮಾಃ ಪ್ರೋಕ್ತಾ ಯೋಗವಿದ್ಭಿರ್ಮಹಾತ್ಮಭಿಃ ॥೨॥

ತಾನಹಂ ಕ್ರಮಶೋ ವಕ್ಷ್ಯೇ ಶೃಣು ಶ್ರದ್ಧಾಪುರಃ ಸರಂ ।

ಈಶ್ವರನು ಬೃಹಸ್ಪತಿಯನ್ನು ಕುರಿತು ಎಲೈ ಮುನಿಶ್ರೇಷ್ಠನೇ, ಇನ್ನು ಯೋಗಾಂಗಗಳಲ್ಲಿ ಎರಡನೆಯದಾದ ನಿಯಮಸ್ವರೂಪವನ್ನು ಹೇಳುವೆನು ಕೇಳು--ತಪಸ್ಸು, ಸಂತೋಷ, ಆಸ್ತಿಕ್ಯ, ದಾನ, ಈಶ್ವರ ಪೂಜೆ, ಸಿದ್ಧಾಂತಶ್ರವಣ, ಹ್ರೀ, ಮತಿ, ಜಪ, ವ್ರತ ಈ ಹತ್ತೂ ನಿಯಮಗಳೆಂದು ಯೋಗವನ್ನು ತಿಳಿದ ಮಹಾತ್ಮರು ಹೇಳುವರು. ||೧-೨||

ಅವುಗಳ ಸ್ವರೂಪವನ್ನು ಕ್ರಮವಾಗಿ ವಿವರಿಸುವೆನು. ಅತ್ಯಂತಾಸಕ್ತಿಯಿಂದ ಕೇಳು. ಎಂದು ಹೇಳಿದನು.

ವೇದೋಕ್ತೇನ ಪ್ರಕಾರೇಣ ಕೃಚ್ಛ್ರಚಾಂದ್ರಾಯಣಾದಿಭಿಃ ॥೩॥

ಶರೀರಶೋಷಣಂ ಯತ್ತತ್ತಪ ಇತ್ಯುಚ್ಯತೇ ಬುಧೈಃ ।
ಕೋಽಹಂ ಮೋಕ್ಷಃ ಕಥಂ ಕೇನ ಸಂಸಾರಂ ಪ್ರತಿಪನ್ನವಾನ್ ॥೪॥

ಇತ್ಯಾಲೋಚನಮರ್ಥಜ್ಞಾಸ್ತಪಃ ಶಂಸಂತಿ ಪಂಡಿತಾಃ ।
ಯದೃಚ್ಛಾಲಾಭತೋ ನಿತ್ಯಂ ಪ್ರೀತಿರ್ಯಾ ಜಾಯತೇ ನೃಣಾಂ ॥೫॥

ತಂ ಸಂತೋಷಂ ವಿದುಃ ಪ್ರಾಜ್ಞಾಃ ಪರಿಜ್ಞಾನೈಕ ತತ್ಪರಾಃ ।
ಬ್ರಹ್ಮಾದಿ ಲೋಕಪರ್ಯಂತಾದ್ವಿರಕ್ತಸ್ಯ ಪರಾತ್ಮನಿ ॥೬॥

ಪ್ರಿಯಂ ಯತ್ತನ್ಮಹಾಪ್ರಾಜ್ಞಾಃ ಸಂತೋಷಂ ಪರಮಂ ವಿದುಃ ।
ಶ್ರೌತೇ ಸ್ಮಾರ್ತೇ ಚ ವಿಶ್ವಾಸೋ ಯತ್ತದಾಸ್ತಿಕ್ಯಮುಚ್ಯತೇ ॥೭॥

ವಿದ್ವಾಂಸರು ವೇದದಲ್ಲಿ ಹೇಳುವಂತೆ ಕೃಚ್ಛ್ರಚಾಂದ್ರಾಯಣಾದಿ ವ್ರತಗಳಿಂದ ಶರೀರಶೋಷಣೆಯನ್ನು ಮಾಡುವುದೇ ತಪಸ್ಸೆಂದು ಹೇಳುವರು. ಜ್ಞಾನಿಗಳಾದವರು ನಾನು ಯಾರು? ಮೋಕ್ಷವು ಹೇಗೆ ಉಂಟಾಗುವುದು? ಯಾವ ಕಾರಣದಿಂದ ನನಗೆ ಸಂಸಾರದುಃಖವು ಪ್ರಾಪ್ತವಾಯಿತು? ಎಂದು ಆಲೋಚನೆಯನ್ನು ಮಾಡುವುದೇ ತಪಸ್ಸೆಂದು ಹೇಳುವರು. ಮನಸಶ್ಚೇಂದ್ರಿಯಾಣಾಂ ಚ ಏಕಾಗ್ರ್ಯಂ ಪರಮಂ ತಪಃ । ತಜ್ಜ್ಯಾಯಃ ಸರ್ವಧರ್ಮೇಭ್ಯಃ ಸ ಧರ್ಮಃ ಪರಮೋ ಮತಃ ॥ ಎಂದೂ ಒಂದು ಪ್ರಮಾಣವಚನವು. ॥೩-೪॥

ಮನುಷ್ಯರಿಗೆ ತಾನಾಗಿಯೇ ದೊರೆತ ಪದಾರ್ಥಗಳ ವಿಷಯದಲ್ಲಿ ಯಾವ ಪ್ರೀತಿಯುಂಟಾಗುವುದೋ ಅದನ್ನು ಸಂತೋಷವೆಂದು ಹೇಳುವರು. ಮಹಾಜ್ಞಾನಿಗಳಾದವರು ಬ್ರಹ್ಮಲೋಕಪರ್ಯಂತವಾಗಿರುವ ಸಮಸ್ತ ವಿಷಯಗಳಲ್ಲಿಯೂ ವೈರಾಗ್ಯವುಂಟಾಗಿ ಪರಮಾತ್ಮನ ವಿಷಯದಲ್ಲಿ ಯಾವ ಪ್ರೀತಿಯು ಉತ್ಪತ್ತಿಯಾಗುವುದೋ ಅದನ್ನು ಪರಮಸಂತೋಷವೆಂದು ಹೇಳುವರು. "ತೇ ಯೇ ಶತಂ ಬೃಹಸ್ಪತೇರಾನಂದಾಃ ಸ ಏಕಃ ಪ್ರಜಾಪತೇರಾನಂದಃ ಶ್ರೋತ್ರಿಯಸ್ಯಚಾಕಾಮಹತಸ್ಯ . . . ಸ ಏಕೋ ಬ್ರಹ್ಮಣ ಆನಂದಃ" ಎಂಬ ತೈತ್ತಿರೀಯ ಉಪನಿಷದ್ವಾಕ್ಯದಲ್ಲಿ ಆ ಪರಮಾನಂದ ಸ್ವರೂಪವನ್ನು ವಿವರಿಸಿರುವುದು. ॥೫-೬॥

ಶ್ರೌತಸ್ಮಾರ್ತಕರ್ಮಗಳ ವಿಷಯದಲ್ಲಿರುವ ನಂಬಿಕೆಯನ್ನು ಆಸ್ತಿಕ್ಯವೆಂದು ಹೇಳುವರು. ತಾನು ನ್ಯಾಯದಿಂದ ಸಂಪಾದಿಸಿದ ಹಣವನ್ನೂ ಅನ್ನವನ್ನೂ ಇತರ

ನ್ಯಾಯಾರ್ಜಿತಂ ಧನಂ ಚಾನ್ನಂ ಶ್ರದ್ಧಯಾ ವೈದಿಕೇದ್ವಿಜೇ ।
ಅನ್ಯದ್ವಾ ಯತ್ಪ್ರದೀಯೇತ ತದ್ದಾನಂ ಪ್ರೋಚ್ಯತೇ ಮಯಾ ॥೮॥

ಅವೈದಿಕಾಯ ವಿಪ್ರಾಯ ದತ್ತಂ ಯನ್ಮುನಿಪುಂಗವ ।
ನೋಪಕಾರಾಯ ತತ್ತಸ್ಯ ಭಸ್ಮನೀವ ಹುತಂ ಹವಿಃ ॥೯॥

ಬ್ರಹ್ಮಾಣಂ ವಿಷ್ಣುಮೀಶಾನಂ ವೈಶ್ಯಕ್ಷತ್ರಿಯವಾಡವೈಃ ।
ಯಥಾಶಕ್ತ್ಯರ್ಚನಂ ಭಕ್ತ್ಯಾ ಯತ್ತದೀಶ್ವರಪೂಜನಂ ॥೧೦॥

ರಾಗಾದ್ಯಪೇತಂ ಹೃದಯಂ ವಾಗದುಷ್ಟಾಽನೃತಾದಿನಾ ।
ಹಿಂಸಾವಿರಹಿತಃ ಕಾಯಃ ಏತಚ್ಚೇಶ್ವರಪೂಜನಂ ॥೧೧॥

ಸತ್ಯಂ ಜ್ಞಾನಮನಂತಂ ಚ ಪರಾನಂದಂ ಧ್ರುವಂ ಪರಂ ।
ಪ್ರತ್ಯಗಿತ್ಯವಗತ್ಯಂತಂ ವೇದಾಂತ ಶ್ರವಣಂ ಬುಧಾಃ ॥೧೨॥

ಪದಾರ್ಥಗಳನ್ನೂ ಭಕ್ತಿಯಿಂದ ವೇದವನ್ನು ಬಲ್ಲ ಬ್ರಾಹ್ಮಣನಿಗೆ ಕೊಡುವುದೇ ದಾನವೆಂದು ನಾನು ಹೇಳುತ್ತೇನೆ. ವೇದಶಾಸ್ತ್ರಪುರಾಣಗಳನ್ನು ತಿಳಿಯದವನಿಗೆ ದಾನ ಮಾಡಿದುದರಿಂದ ಯಾವ ಫಲವೂ ಬರುವುದಿಲ್ಲ. ಬೂದಿಯಲ್ಲಿ ಮಾಡಿದ ಹೋಮದಂತೆ ಅದು ವ್ಯರ್ಥವಾಗುವುದು. ॥೭-೮-೯॥

ವೈಶ್ಯರು ಬ್ರಹ್ಮನನ್ನೂ, ಕ್ಷತ್ರಿಯರು ವಿಷ್ಣುವನ್ನೂ, ಬ್ರಾಹ್ಮಣರು ಶಿವನನ್ನೂ ಭಕ್ತಿಯಿಂದ ತಮ್ಮ ಶಕ್ತಿಗನುಸಾರವಾಗಿ ಪೂಜೆ ಉತ್ಸವಗಳನ್ನು ಮಾಡುವುದೇ ಈಶ್ವರಪೂಜೆಯೆನಿಸುವುದು. ॥೧೦॥

ಕಾಮಕ್ರೋಧಾದಿಗಳನ್ನು ಬಿಟ್ಟ ಮನಸ್ಸು ಮತ್ತು ಸುಳ್ಳು ಮೊದಲಾದುವುಗಳಿಂದ ದುಷ್ಟವಾಗದ ಮಾತೂ, ಪ್ರಾಣಿಹಿಂಸೆ ಮಾಡದ ಶರೀರವೂ, ಯಾರಿಗೆ ಇರುವುದೋ ಅದೇ ಈಶ್ವರಪೂಜೆಯು. ಇದೇ ಅತ್ಯುತ್ತಮವಾದುದು. ॥೧೧॥

ಸತ್ಯಜ್ಞಾನಾನಂತರೂಪನಾದ ಪರಮಾನಂದರೂಪನಾದ ಪರಮಾತ್ಮನೇ ಪ್ರತ್ಯಗಾತ್ಮನೆಂದು ಸಾಕ್ಷಾತ್ಕಾರವಾಗುವ ಪರ್ಯಂತವಾಗಿ ವೇದಾಂತಶ್ರವಣವನ್ನು ಮಾಡಬೇಕು. ಇದನ್ನೇ ಸಿದ್ಧಾಂತಶ್ರವಣವೆಂದು ಪಂಡಿತರು ಹೇಳಿರುತ್ತಾರೆ. ॥೧೨॥

ಸಿದ್ಧಾಂತಶ್ರವಣಂ ಪ್ರಾಹುರ್ದ್ವಿಜಾನಾಂ ಮುನಿಸತ್ತಮ ।
ಶೂದ್ರಾಣಾಂ ಚ ವಿರಕ್ತಾನಾಂ ತಥಾ ಸ್ತ್ರೀಣಾಂ ಮಹಾಮುನೇ ॥೧೩॥

ಸಿದ್ಧಾಂತಶ್ರವಣಂ ಪ್ರೋಕ್ತಂ ಪುರಾಣಶ್ರವಣಂ ಬುಧೈಃ ।
ವೇದಲೌಕಿಕಮಾರ್ಗೇಷು ಕುತ್ಸಿತಂ ಕರ್ಮ ಯದ್ಭವೇತ್ ॥೧೪॥

ತಸ್ಮಿನ್ಭವತಿ ಯಾ ಲಜ್ಜಾ ಹ್ರೀಸ್ತು ಸೈವೇತಿ ಕೀರ್ತಿತಾ ।
ವೈದಿಕೇಷು ಹಿ ಸರ್ವೇಷು ಶ್ರದ್ಧಾ ಯಾ ಸಾ ಮತಿರ್ಭವೇತ್ ॥೧೫॥

ಗುರುಣಾ ಚೋಪದಿಷ್ಟೋಽಪಿ ತಂತ್ರಸಂಬಂಧವರ್ಜಿತಃ ।
ವೇದೋಕ್ತೇನೈವ ಮಾರ್ಗೇಣ ಮಂತ್ರಾಭ್ಯಾಸೋ ಜಪಃ ಸ್ಮೃತಃ ॥೧೬॥

ಕಲ್ಪೇ ಸೂತ್ರೇಽಥವಾ ವೇದೇ ಧರ್ಮಶಾಸ್ತ್ರೇ ಪುರಾಣಕೇ ।
ಇತಿಹಾಸೇಽನುವೃತ್ತಿರ್ಯಾ ಸ ಜಪಃ ಪ್ರೋಚ್ಯತೇ ಮಯಾ ॥೧೭॥

ಯಾ ವೇದ ಬಾಹ್ಯಾಃ ಸ್ಮೃತಯೋ ಯಾಶ್ಚ ಕಾಶ್ಚ ಕುದೃಷ್ಟಯಃ ।
ಸರ್ವಾಸ್ತಾ ನಿಷ್ಫಲಾಃ ಪ್ರೇತ್ಯ ತಮೋನಿಷ್ಠಾ ಹಿತಾಃ ಸ್ಮೃತಾಃ ॥೧೮॥

ಹೀಗೆ ಮಾಡುವ ವೇದಾಂತಶ್ರವಣವೇ ದ್ವಿಜರಾದ ಬ್ರಹ್ಮ, ಕ್ಷತ್ರಿಯ, ವೈಶ್ಯ ವರ್ಣದವರಿಗೂ ಇತರರಿಗೂ ಸಿದ್ಧಾಂತಶ್ರವಣವಾಗುವುದು. ಅಥವಾ ವಿರಕ್ತರಾದ ಶೂದ್ರರಿಗೂ, ಸ್ತ್ರೀಯರಿಗೂ, ಪುರಾಣಶ್ರವಣವೂ ಸಿದ್ಧಾಂತಶ್ರವಣವಾಗುವುದು. ॥೧೩॥

ವೇದೋಕ್ತವಾದ ಮತ್ತು ಲೌಕಿಕವಾದ ದಾರಿಯಲ್ಲಿ ಯಾವುದು ನೀಚ ಕಾರ್ಯವೋ ಅದನ್ನು ಮಾಡುವ ವಿಷಯದಲ್ಲಿ ಇರುವ ನಾಚಿಕೆಯನ್ನು ಹ್ರೀ ಎಂದು ಹೇಳುವರು. ವೈದಿಕಧರ್ಮದಲ್ಲಿ ಇರುವ ಆಸಕ್ತಿಯನ್ನೇ ಮತಿಯೆಂದು ಹೇಳುವರು. ॥೧೪-೧೫॥

ಗುರುಗಳು ಉಪದೇಶಮಾಡಿದ್ದರೂ ತಂತ್ರಶಾಸ್ತ್ರಮಾರ್ಗ ಒಂದರಲ್ಲಿಯೇ ಇರುವುದನ್ನು ಬಿಟ್ಟು ವೇದೋಕ್ತಮಾರ್ಗದಿಂದ ಮಂತ್ರವನ್ನು ಪುನಃ ಪುನಃ ಅಭ್ಯಾಸ ಮಾಡುವುದೇ ಜಪವು. ಕಲ್ಪಗಳೂ, ಸೂತ್ರಗಳೂ, ವೇದಗಳೂ, ಧರ್ಮಶಾಸ್ತ್ರಗಳೂ, ಪುರಾಣೇತಿಹಾಸಗಳೂ ಇವುಗಳನ್ನೂ ತಿಳಿಯಬೇಕೆಂಬ ಆಸಕ್ತಿಯಿಂದ ಓದುವುದನ್ನು ನಾನು ಜಪವೆಂದು ಹೇಳುವೆನು. ॥೧೬-೧೭॥

ವೇದಕ್ಕೆ ಹೊರಗಾದ ಸ್ಮೃತಿಗಳೂ, ದುರ್ಮಾರ್ಗಗಳೂ ತಮೋಗುಣ ಸಂಬಂಧವಾದುವುಗಳಾದುದರಿಂದ ಅವುಗಳಲ್ಲಿ ಹೇಳುವ ಮಂತ್ರಾನುಷ್ಠಾನಗಳು

ಶ್ರೇಯಾನ್ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥೧೯॥

ತಸ್ಮಾತ್ಸರ್ವಪ್ರಯತ್ನೇನ ವೇದಮಂತ್ರಂ ಸದಾ ಜಪೇತ್ ।
ಜಪಶ್ಚದ್ವಿವಿಧಃ ಪ್ರೋಕ್ತೋ ವಾಚಿಕೋ ಮಾನಸಸ್ತಥಾ ॥೨೦॥

ವಾಚಿ(ಚ)ಕೋಪಾಂಶುರುಚ್ಚೈಶ್ಚ ದ್ವಿವಿಧಃ ಪರಿಕೀರ್ತಿತಃ ।
ಮಾನಸೋ ಮನನಧ್ಯಾನ ಭೇದಾದ್ದ್ವೈವಿಧ್ಯಮಾಸ್ಥಿತಃ ॥೨೧॥

ಉಚ್ಚೈರ್ಜಪಾದುಪಾಂಶುಶ್ಚ ಸಹಸ್ರಗುಣ ಉಚ್ಯತೇ ।
ಮಾನಸಶ್ಚ ತಥೋಪಾಂಶೋಃ ಸಹಸ್ರಗುಣ ಉಚ್ಯತೇ ॥೨೨॥

ಉಚ್ಚೈರ್ಜಪಸ್ತು ಸರ್ವೇಷಾಂ ಯಥೋಕ್ತಫಲದೋ ಭವೇತ್ ।
ನೀಚೈಃ ಶ್ರುತೋ ನ ಚೇತ್ಸೋಽಪಿ ಶ್ರುತಶ್ಚೇನ್ನಿಷ್ಫಲೋ ಭವೇತ್ ॥೨೩॥

ಪರಲೋಕದಲ್ಲಿ ಫಲವನ್ನು ಕೊಡುವುದಿಲ್ಲ. ಪರಧರ್ಮವನ್ನು ಚೆನ್ನಾಗಿ ಅನುಷ್ಠಾನ ಮಾಡಿದರೂ ಅದು ಗುಣಹೀನವಾದುದರಿಂದ ಪರಲೋಕದಲ್ಲಿ ಶ್ರೇಯಸ್ಸನ್ನು ಕೊಡುವುದಿಲ್ಲ. ಸ್ವಧರ್ಮಾಚರಣೆಯಿಂದ ಈ ಲೋಕದಲ್ಲಿ ಕಷ್ಟವನ್ನನುಭವಿಸಿದರೂ ಪರಲೋಕದಲ್ಲಿ ಶ್ರೇಯಸ್ಸುಂಟಾಗುವುದು. ಆದುದರಿಂದ ಸರ್ವಪ್ರಯತ್ನದಿಂದಲೂ ವೇದಮಂತ್ರವನ್ನೇ ಯಾವಾಗಲೂ ಜಪಿಸಬೇಕು. ॥೧೮-೧೯॥

ಜಪವು ವಾಚಿಕ, ಮಾನಸಿಕ, ವೆಂದು ಎರಡು ವಿಧವು. ವಾಚಿಕಜಪದಲ್ಲಿ ಉಪಾಂಶುಜಪ (ಇತರರಿಗೆ ಕೇಳಿಸದಂತೆ ಮಂತ್ರೋಚ್ಚಾರಣೆ) ಗಟ್ಟಿಯಾಗಿ ಮಂತ್ರೋಚ್ಚಾರಣೆಯೆಂದು ಎರಡು ವಿಧ. ಮಾನಸಿಕಜಪದಲ್ಲಿ ಮನನ, ಧ್ಯಾನ ಎಂದು ಎರಡು ವಿಧ. ಗಟ್ಟಿಯಾಗಿ ಜಪಮಾಡುವುದಕ್ಕಿಂತಲೂ ಇತರರಿಗೆ ಕೇಳಿಸದಂತೆ ಮಂತ್ರೋಚ್ಚಾರಣೆಮಾಡುವುದು ಸಾವಿರಪಾಲು ಮೇಲಾದುದು. ಉಪಾಂಶುಜಪಕ್ಕಿಂತಲೂ ಮಾನಸಜಪವು ಸಾವಿರಪಾಲು ಮೇಲಾದುದು. ॥೨೦-೨೧-೨೨॥

ಗಟ್ಟಿಯಾಗಿ ಮಂತ್ರವನ್ನುಚ್ಚರಿಸಿ ಜಪಮಾಡುವುದು ಸಮಸ್ತರಿಗೂ ವೇದದಲ್ಲಿ ಹೇಳಿದ ಫಲವನ್ನು ಕೊಡುವುದು. ಆದರೆ ಅದನ್ನು ನೀಚಜನರು ಕೇಳದೇ ಇರಬೇಕು. ನೀಚರು ಕೇಳಿದರೆ ನಿಷ್ಫಲವಾಗುವುದು. ॥೨೩॥

ಋಷಿಂ ಛಂದೋಽಧಿ ದೈವಂ ಚ ಧ್ಯಾಯಮಾನೋ ಜಪೇನ್ನರಃ ।
ಪ್ರಸನ್ನ ಗುರುಣಾ ಪೂರ್ವಮುಪದಿಷ್ಟಂ ತ್ವನುಜ್ಞಯಾ ॥೨೪॥

ಧರ್ಮಾರ್ಥಮಾತ್ಮಶುದ್ಧ್ಯರ್ಥ ಮುಪಾಯಗ್ರಹಣಂ ವ್ರತಂ ।
ಅಥವಾಽಥರ್ವಣೈರ್ಮಂತ್ರೈರ್ಗೃಹೀತ್ವಾ ಭಸ್ಮ ಪಾಂಡುರಂ ॥೨೫॥

ಸರ್ವಾಂಗೋದ್ಧೂಲನಂ ಯತ್ತದ್ವ್ರತಂ ಪ್ರೋಕ್ತಂ ಮನೀಷಿಭಿಃ ।
ಏತದ್ವೇದ ಶಿರೋನಿಷ್ಠಾಃ ಪ್ರಾಹುಃ ಪಾಶುಪತಂ ಮುನೇ ॥೨೬॥

ಕೇಚಿಚ್ಛಿರೋವ್ರತಂ ಪ್ರಾಹುಃ ಕೇಚಿದತ್ಯಾಶ್ರಮಂ ವಿದುಃ ।
ಕೇಚಿತ್ತದ್ವ್ರತಮಿತ್ಯೂಚುಃ ಕೇಚಿಚ್ಛಾಂಭವಮೈಶ್ವರಂ ॥೨೭॥

ಅಸ್ಯ ವ್ರತಸ್ಯ ಮಾಹಾತ್ಮ್ಯ ಮಾಗಮಾಂತೇಷು ಸಂಸ್ಥಿತಂ ।
ಸರ್ವಪಾಪಹರಂ ಪುಣ್ಯಂ ಸಮ್ಯಜ್ಞಾನಪ್ರಕಾಶಕಂ ॥೨೮॥

ಮನುಷ್ಯನು ಮಂತ್ರಜಪವನ್ನು ಮಾಡುವಾಗ ಆ ಮಂತ್ರದ ಋಷಿದೇವತಾ ಛಂದಸ್ಸುಗಳನ್ನು ಧ್ಯಾನಮಾಡುತ್ತ ಜಪಮಾಡಬೇಕು. ಧರ್ಮಾಚರಣೆಗಾಗಿಯೂ ಆತ್ಮಶುದ್ಧಿಗಾಗಿಯೂ ಮಾಡುವ ಉಪಾಯವೇ ವ್ರತವು. ಇದನ್ನು ತನ್ನಮೇಲೆ ಪ್ರೀತಿಯುಳ್ಳ ಗುರುವು ವ್ರತಾಚರಣೆಯನ್ನು ಮಾಡೆಂದು ಅಪ್ಪಣೆಮಾಡಿದ ಮೇಲೆ ಮಾಡಬೇಕು. ॥೨೪॥

ಅಥವಾ ಅಥರ್ವ ಶಿರೋಪನಿಷತ್ತಿನಲ್ಲಿ ಹೇಳಿದಂತೆ "ಅಗ್ನಿರಿತಿಭಸ್ಮ" ಇತ್ಯಾದಿ ಮಂತ್ರಗಳಿಂದ ಬೆಳ್ಳಗಿರುವ ಭಸ್ಮವನ್ನು ತೆಗೆದುಕೊಂಡು ತನ್ನೆಲ್ಲ ಅಂಗಗಳಿಗೂ ಬಳಿದು ಕೊಳ್ಳುವುದನ್ನೇ ವ್ರತವೆಂದು ಹೇಳುವರು. ಅಥರ್ವಣೋಪನಿಷತ್ತಿನಲ್ಲಿ "ಶಿರೋವ್ರತಂ ವಿಧಿವದ್ಯೈಸ್ತು ಚೀರ್ಣಂ" ಎಂದು ಇದನ್ನು ಶಿರೋವ್ರತವೆಂದೂ ಪಾಶುಪತವ್ರತವೆಂದೂ ಹೇಳಿರುವರು. ಶ್ವೇತಾಶ್ವತರೋಪನಿಷತ್ತಿನಲ್ಲಿ "ಅತ್ಯಾಶ್ರಮಿಭ್ಯಃ ಪರಮಂಪವಿತ್ರಂ" ಎಂದು ಇದನ್ನು ಅತ್ಯಾಶ್ರಮವ್ರತವೆನ್ನುವರು. ಮತ್ತೆ ಕೆಲವರು ಇದನ್ನು ಶಾಂಭವ ವ್ರತವೆಂದೂ ಈಶ್ವರವ್ರತವೆಂದೂ ಹೇಳುವರು. ॥೨೫-೨೬-೨೭॥

ಈ ವ್ರತದ ಮಹಿಮೆಯನ್ನು ವೇದಾಂತಾರ್ಥವನ್ನು ಹೇಳುವ ಉಪನಿಷತ್ತು ಗಳಲ್ಲಿ ಹೇಳಿರುವುದು. ಇದು ಸಮಸ್ತಪಾಪಗಳನ್ನೂ ನಾಶಮಾಡತಕ್ಕುದಾಗಿಯೂ ಪುಣ್ಯವನ್ನು ಹೆಚ್ಚಿಸುವುದಾಗಿಯೂ, ಕೊನೆಯಲ್ಲಿ ಉತ್ತಮವಾದ ಜ್ಞಾನವನ್ನುಂಟು ಮಾಡುವುದಾಗಿಯೂ ಇರುವುದು. ॥೨೮॥

ಯಃ ಪಶುಸ್ತತ್ಪಶುತ್ವಂ ಚ ವ್ರತೇನಾನೇನ ನ ತ್ಯಜೇತ್ ।
ತಂ ಹತ್ವಾ ನ ಸ ಪಾಪೀ ಯಾ ನಿತಿ ವೇದಾಂತನಿಶ್ಚಯಃ ॥೨೯॥

ಸರ್ವಮುಕ್ತಂ ಸಮಾಸೇನ ನಿಯಮಂ ಮುನಿಸತ್ತಮ ।
ಅನೇನ ವಿಧಿನಾ ಯುಕ್ತೋ ಭಸ್ಮಜ್ಯೋತಿರ್ಭವಿಷ್ಯತಿ ॥೩೦॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ
ನಿಯಮವಿಧಿಕಥನಂ ನಾಮ ಚತುರ್ದಶೋಽಧ್ಯಾಯಃ

ಸುಲಭವಾಗಿ ಸಮಸ್ತ ಸುಖಗಳನ್ನೂ ಪರಮಪುರುಷಾರ್ಥವಾದ ಮೋಕ್ಷವನ್ನೂ ಕೊಡುವ ಈ ಪಾಶುಪತವ್ರತದಿಂದ ಯಾವ ಮನುಷ್ಯನು ತನ್ನ ಪಶುತ್ವವನ್ನು ಕಳೆದುಕೊಳ್ಳುವುದಿಲ್ಲವೋ ಅವನು ಆತ್ಮಘಾತಮಾಡಿದ ಪಾಪಿಯಾಗುವುದರಿಂದ ಆತತಾಯಿಯೆ ಎನಿಸಿಕೊಳ್ಳುವನು. "ಆತತಾಯಿವಧೇದೋಷೋಹಂತುರ್ನಾಸ್ತ್ಯೇವ ಕಶ್ಚನ" ಎಂಬ ವೇದವಿಧಿಯಂತೆ ಅವನನ್ನು ಕೊಂದರೂ ಕೊಂದವನಿಗೆ ದೋಷ ಬರುವುದಿಲ್ಲ. ||೨೯||

ಋಷಿಶ್ರೇಷ್ಠನಾದ ಬೃಹಸ್ಪತಿಯೇ, ಸಂಗ್ರಹವಾಗಿ ಯೋಗಾಂಗವಾದ ನಿಯಮವನ್ನು ಹೇಳಿರುವೆನು. ಈ ನಿಯಮವಿಧಿಯನ್ನು ಅನುಸರಿಸುವ ಮನುಷ್ಯರಿಗೆ ಭಸ್ಮವೇ ತತ್ವಜ್ಞಾನವನ್ನುಂಟುಮಾಡುವುದರಿಂದ ಅವರು ಭಸ್ಮಜ್ಯೋತಿ ಎನಿಸುವರು. ಎಂದರೆ ಭಸ್ಮವೆಂಬ ಬೆಳಕನ್ನು ಪಡೆದಿರುವವರು. ಎಂದು ಭಾವವು. ||೩೦||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಜ್ಞಾನಯೋಗಖಂಡಂ

|| ಪಂಚದಶೋಽಧ್ಯಾಯಃ ||

ಹದಿನೈದನೆಯ ಅಧ್ಯಾಯವು

|| ಈಶ್ವರ ಉವಾಚ ||

ಆಸನಾನಿ ಪೃಥಗ್ವಕ್ಷ್ಯೇ ಶೃಣು ವಾಚಸ್ಪತೇಽಧುನಾ ।
ಸ್ವಸ್ತಿಕಂ ಗೋಮುಖಂ ಪದ್ಮಂ ವೀರಂ ಸಿಂಹಾಸನಂ ತಥಾ ॥೧॥

ಭದ್ರಂ ಮುಕ್ತಾಸನಂ ಚೈವ ಮಯೂರಾಸನಮೇವ ಚ ।
ಸುಖಾಸನ ಸಮಾಖ್ಯಂ ಚ ನವಮಂ ಮುನಿಪುಂಗವ ॥೨॥

ಜಾನೂರ್ವೋರಂತರೇ ವಿಪ್ರ ಕೃತ್ವಾ ಪಾದತಲೇ ಉಭೇ ।
ಸಮಗ್ರೀವ ಶಿರಸ್ಕಸ್ಯ ಸ್ವಸ್ತಿಕಂ ಪರಿಚಕ್ಷತೇ ॥೩॥

ಈಶ್ವರನು ಹೇಳಿದನು—ಕ್ರಮವಾಗಿ ಬಂದ ಯೋಗಾಂಗವಾದ ಆಸನಗಳ ವಿಷಯವನ್ನು ಈಶ್ವರನು ಬೃಹಸ್ಪತಿಗೆ ಹೇಳುತ್ತಾ, ಎಲೈ ಮುನಿಶ್ರೇಷ್ಠನೇ, ಆಸನಗಳ ವಿಚಾರವನ್ನು ಬೇರೆಬೇರೆಯಾಗಿ ಹೇಳುವೆನು. ಸ್ವಸ್ತಿಕ, ಗೋಮುಖ, ಪದ್ಮ, ವೀರ, ಸಿಂಹಾಸನ, ಭದ್ರ, ಮುಕ್ತಾಸನ, ಮಯೂರಾಸನ, ಸುಖಾಸನ ಎಂಬ ಒಂಬತ್ತು ವಿಧವಾದ ಆಸನಗಳಿರುವುವು. ||೧-೨||

ಮಂಡಿಗೂ ತೊಡೆಗೂ ಮಧ್ಯದಲ್ಲಿ ಎರಡು ಪಾದಗಳನ್ನೂ ಇಟ್ಟು ತಲೆ ಮತ್ತು ಕುತ್ತಿಗೆಯನ್ನು ಸಮವಾಗಿಟ್ಟುಕೊಂಡಿರುವುದು ಸ್ವಸ್ತಿಕಾಸನವೆನಿಸುವುದು. ಬಲಗಡೆಯ ತೊಡೆಯ ಮೇಲೆ ಎಡಪಾದವೂ, ಎಡಗಡೆಯ ತೊಡೆಯಮೇಲೆ ಬಲ ಪಾದವೂ ಬರಬೇಕು. ||೩||

ಸವ್ಯೇ ದಕ್ಷಿಣಗುಲ್ಫಂ ತು ಪೃಷ್ಠಪಾರ್ಶ್ವೇ ನಿವೇಶಯೇತ್ ।
ದಕ್ಷಿಣೇಽಪಿ ತಥಾ ಸವ್ಯಂ ಗೋಮುಖಂ ತತ್ಪ್ರಚಕ್ಷತೇ ॥೪॥

ಅಂಗುಷ್ಠಾವಪಿ ಗೃಹ್ಣೀಯಾದ್ಧಸ್ತಾಭ್ಯಾಂ ವ್ಯುತ್ಕ್ರಮೇಣ ತು ।
ಊರ್ವೋರುಪರಿ ವಿಪ್ರೇಂದ್ರ ಕೃತ್ವಾಪಾದತಲದ್ವಯಂ ।
ಪದ್ಮಾಸನಂ ಭವೇದೇತತ್ಪಾಪರೋಗ ಭಯಾಪಹಂ ॥೫॥

ದಕ್ಷಿಣೋತ್ತರಪಾದಂ ತು ಸವ್ಯಊರುಣಿ ವಿನ್ಯಸೇತ್ ।
ಋಜುಕಾಯಃ ಸುಖಾಸೀನೋ ವೀರಾಸನಮುದಾಹೃತಂ ॥೬॥

ಗುಲ್ಫೌ ಚ ವೃಷಣಸ್ಯಾಧಃ ಸೀವನ್ಯಾಃ ಪಾರ್ಶ್ವಯೋಃ ಕ್ಷಿಪೇತ್ ।
ದಕ್ಷಿಣಂ ಸವ್ಯಗುಲ್ಫೇನ ವಾಮಂ ದಕ್ಷಿಣಗುಲ್ಫತಃ ॥೭॥

ಹಸ್ತೌ ಚ ಜಾನ್ವೋಃ ಸಂಸ್ಥಾಪ್ಯ ಸ್ವಾಂಗುಲೀಶ್ಚಪ್ರಸಾರ್ಯಚ ।
ನಾಸಾಗ್ರಂ ಚ ನಿರೀಕ್ಷೇತ ಭವೇತ್ಸಿಂಹಾಸನಂ ಹಿ ತತ್ ॥೮॥

ಬಲಗಡೆಯ ಪೃಷ್ಠಪ್ರದೇಶದಲ್ಲಿ ಎಡದ ಹಿಮ್ಮಡಿಯನ್ನೂ ಎಡಗಡೆಯ ಪೃಷ್ಠಪ್ರದೇಶದಲ್ಲಿ ಬಲದ ಹಿಮ್ಮಡಿಯನ್ನೂ ಇಟ್ಟು ಕುಳಿತುಕೊಳ್ಳುವುದು ಗೋಮುಖಾಸನವೆನಿಸುವುದು. ॥೪॥

ಬಲತೊಡೆಯ ಮೇಲೆ ಎಡದ ಅಂಗಾಲನ್ನಿಟ್ಟು ಅದರ ಹೆಬ್ಬೆರಳನ್ನು ಶರೀರದ ಹಿಂಭಾಗದಿಂದ ಬಂದ ಎಡಗೈಯಿಂದ ಹಿಡಿದು, ಎಡದತೊಡೆಯ ಮೇಲೆ ಬಲದ ಅಂಗಾಲನ್ನಿಟ್ಟು ಅದರ ಹೆಬ್ಬೆರಳನ್ನು ಶರೀರದ ಹಿಂಭಾಗದಿಂದ ಬಂದ ಬಲಗೈಯಿಂದ ಹಿಡಿದು ಕೊಂಡರೆ, ಇದನ್ನು ಪದ್ಮಾಸನವೆಂದು ಕರೆಯುವರು. ಈ ಪದ್ಮಾಸನವು ಪಾಪರೋಗ, ಭಯ ಇವುಗಳನ್ನು ಪರಿಹರಿಸುವುದು. ॥೫॥

ಬಲಗಡೆಯ ಪಾದವನ್ನು ಎಡದ ತೊಡೆಯಮೇಲೆಯೂ, ಎಡಗಡೆಯ ಪಾದವನ್ನು ಬಲದ ತೊಡೆಯ ಮೇಲೆಯೂ ಇಟ್ಟು ಶರೀರವನ್ನು ಸರಳವಾಗಿಟ್ಟುಕೊಂಡು ಸುಖವಾಗಿ ಕುಳಿತರೆ ವೀರಾಸನವೆನಿಸುವುದು. ॥೬॥

ವೃಷಣದ ಕೆಳಭಾಗಕ್ಕೆ ಸೀವನೀ ಎಂದು ಹೆಸರು. ಆ ಸೀವನಿಯ ಎರಡು ಭಾಗಗಳಲ್ಲಿಯೂ ಬಲದ ಹಿಮ್ಮಡಿಯಿಂದ ಎಡಗಡೆಯೂ ಎಡದ ಹಿಮ್ಮಡಿಯಿಂದ ಬಲಗಡೆಯೂ ಒತ್ತಿದಂತೆ ಇಟ್ಟುಕೊಂಡು ಎರಡು ಕೈಗಳನ್ನೂ ಬೆರಳುಗಳನ್ನೂ

ಗುಲ್ಫೌ ಚ ವೃಷಣಸ್ಯಾಧಃ ಸೀವನ್ಯಾಃ ಪಾರ್ಶ್ವಯೋಃ ಕ್ಷಿಪೇತ್ ॥೯॥

ಪಾರ್ಶ್ವಪಾದೌ ಚ ಪಾಣಿಭ್ಯಾಂ ದೃಢಂಬದ್ಧ್ವಾ ಸುನಿಶ್ಚಲಃ ।
ಭದ್ರಾಸನಂ ಭವೇದೇತದ್ವಿಷರೋಗ ವಿನಾಶನಂ ॥೧೦॥

ನಿಪೀಡ್ಯ ಸೀವನೀಂ ಸೂಕ್ಷ್ಮಾಂ ದಕ್ಷಿಣೋತ್ತರ ಗುಲ್ಫತಃ ।
ವಾಮಂ ಯಾಮ್ಯೇನ ಗುಲ್ಫೇನ ಮುಕ್ತಾಸನಮಿದಂಭವೇತ್ ॥೧೧॥

ಮೇಢ್ರೋಪರಿ ವಿನಿಕ್ಷಿಪ್ಯ ಸವ್ಯಗುಲ್ಫಂ ತತೋಪರಿ ।
ಗುಲ್ಫಾಂತರಂಚ ಸಂಕ್ಷಿಪ್ಯ ಮುಕ್ತಾಸನಮಿದಂ ಭವೇತ್ ॥೧೨॥

ಕೂರ್ಪರಾಗ್ರೌ ಮುನಿಶ್ರೇಷ್ಠ ನಿಕ್ಷಿಪೇನ್ನಾಭಿಪಾರ್ಶ್ವಯೋಃ ।
ಭೂಮ್ಯಾಂ ಪಾಣಿತಲ ದ್ವಂದ್ವಂ ನಿಕ್ಷಿಪ್ಯೈಕಾಗ್ರಮಾನಸಃ ॥೧೩॥

ಅರಳಿಸಿ ಮಂಡಿಯಮೇಲಿಟ್ಟುಕೊಂಡು ಮೂಗಿನ ತುದಿಯಲ್ಲಿ ದೃಷ್ಟಿಯನ್ನಿಟ್ಟು ಕುಳಿತಿರುವುದು ಸಿಂಹಾಸನವೆನಿಸುವುದು. ||೭-೮||

ಸೀವನಿಯ ಬಲಭಾಗದಲ್ಲಿ ಬಲಗಾಲಿನ ಹಿಮ್ಮಡಿಯನ್ನೂ ಎಡಭಾಗದಲ್ಲಿ ಎಡಗಾಲಿನ ಹಿಮ್ಮಡಿಯನ್ನೂ ಇಟ್ಟು ಎರಡು ಪಾದಗಳನ್ನೂ ಒಂದಕ್ಕೊಂದು ಅಭಿಮುಖವಾಗಿರುವಂತೆ ಇಟ್ಟುಕೊಂಡು ಬಲದ ತೊಡೆಯನ್ನು ಬಲಗೈಯಿಂದಲೂ, ಎಡದ ತೊಡೆಯನ್ನು ಎಡದ ಕೈಯಿಂದಲೂ ಗಟ್ಟಿಯಾಗಿ ಹಿಡಿದುಕೊಂಡು ಅಲ್ಲಾಡದೇ ಕುಳಿತಿರುವುದು ಭದ್ರಾಸನವೆನಿಸುವುದು. ಈ ಭದ್ರಾಸನವು ವಿಷವನ್ನೂ ರೋಗವನ್ನೂ ನಾಶಮಾಡುವುದು. ||೯-೧೦||

ಸೀವನಿಯ ಕೆಳಗಡೆ ಎಡದ ಹಿಮ್ಮಡಿಯನ್ನೂ ಅದರ ಕೆಳಗೆ ಬಲದ ಹಿಮ್ಮಡಿಯನ್ನೂ ಇಟ್ಟು ಕುಳಿತುಕೊಳ್ಳುವುದು ಮುಕ್ತಾಸನವೆನಿಸುವುದು. ಅಥವಾ ಎಡದ ಹಿಮ್ಮಡಿಯನ್ನು ಅಂಗದ ಮೇಲ್ಗಡೆಯಿಟ್ಟು ಅದರ ಮೇಲೆ ಬಲದ ಹಿಮ್ಮಡಿಯನ್ನಿಟ್ಟು ಕುಳಿತುಕೊಳ್ಳುವುದೂ ಮುಕ್ತಾಸನವೆನಿಸುವುದು. ಹೀಗೆ ಮುಕ್ತಾಸನವು ಎರಡು ಬಗೆಯಾಗಿರುವುದು. ||೧೧-೧೨||

ಎರಡು ಕೈಗಳನ್ನೂ ನೆಲದಮೇಲೆ ಊರಿ ಮೊಳಕೈಗಳ ತುದಿಯು ಹೊಕ್ಕುಳಿನ ಸಮೀಪಕ್ಕೆ ಬರುವಂತೆ ಇಟ್ಟುಕೊಂಡು ತಲೆಯನ್ನೂ ಕಾಲನ್ನೂ ಮೇಲಕ್ಕೆ

ಸಮುನ್ನತ ಶಿರಃಪಾದೋ ದಂಡವದ್ವ್ಯೋಮ್ನಿ ಸಂಸ್ಥಿತಃ ।
ಮಯೂರಾಸನ ಮೇತತ್ಸ್ಯಾ ತ್ಸರ್ವಪಾಪ ಪ್ರಣಾಶನಂ ॥೧೪॥

ಯೇನಕೇನ ಪ್ರಕಾರೇಣ ಸುಖಂ ಧೈರ್ಯಂ ಚ ಜಾಯತೇ ।
ತತ್ಸುಖಾಸನಮಿತ್ಯುಕ್ತಮಶಕ್ತ ಸ್ತತ್ಸಮಾಶ್ರಯೇತ್ ॥೧೫॥

ಆಸನಂ ವಿಜಿತಂ ಯೇನ ಜಿತಂ ತೇನ ಜಗತ್ತ್ರಯಂ ।
ಆಸನಂ ಸಕಲಂ ಪ್ರೋಕ್ತಂ ಮುನೇ ವೇದವಿದಾಂ ವರ ॥೧೬॥
ಅನೇನ ವಿಧಿನಾ ಯುಕ್ತಃ ಪ್ರಾಣಾಯಾಮಂ ಸದಾ ಕುರು ॥೧೭॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ ಆಸನವಿಧಿನಿರೂಪಣಂ ನಾಮ ಪಂಚದಶೋಽಧ್ಯಾಯಃ

ಎತ್ತಿ ಸರಳವಾಗಿ ಆಕಾಶದಲ್ಲಿಟ್ಟುಕೊಂಡು ಇರುವುದು ಮಯೂರಾಸನವೆನಿಸುವುದು. ಇದು ಸಮಸ್ತ ಪಾಪಗಳನ್ನೂ ನಾಶಮಾಡುವುದು. ||೧೩-೧೪||

ಯಾವುದಾದರೊಂದು ರೀತಿಯಿಂದ ಸುಖವೂ ಯೋಗಸಾಧನೆಯಲ್ಲಿ ಧೈರ್ಯವೂ ಯಾವ ಆಸನದಿಂದುಂಟಾಗುವುದೋ ಅದನ್ನು ಸುಖಾಸನವೆಂದು ಹೇಳುವರು. ಅಶಕ್ತರಾದವರು ಇಂತಹ ಆಸನವನ್ನಾಶ್ರಯಿಸಬೇಕು. ಆದಕ್ಕಾಗಿಯೇ ಪತಂಜಲಿ ಮುನಿಯು ಯೋಗಸೂತ್ರದಲ್ಲಿ "ಸ್ಥಿರಸುಖಮಾಸನಂ" ಎಂದು ಹೇಳಿರುವರು. ಯೋಗಿಯು ಹೆಚ್ಚುಹೊತ್ತು ಯಾವ ಆಸನದಲ್ಲಿರುವುದು ಸಾಧ್ಯವೋ ಅದೇ ಸುಖಾಸನವೆನಿಸುವುದು. ||೧೫||

ಆಸನಜಯದಿಂದ ಸುಖದುಃಖಾದಿ ದ್ವಂದ್ವಗಳನ್ನು ಜಯಿಸುವ ಶಕ್ತಿಯು ಬರುವುದರಿಂದ ಮೂರು ಲೋಕವನ್ನೂ ಅವನು ಜಯಿಸಿದಂತಾಗುವುದು. ಎಲೈ ಬೃಹಸ್ಪತಿಯೇ, ಮುಖ್ಯವಾದ ಎಲ್ಲ ಆಸನಗಳನ್ನೂ ಹೇಳಿದೆನು. ಈ ಆಸನವಿಧಿಯನ್ನು ಆಶ್ರಯಿಸಿ ಯಾವಾಗಲೂ ಪ್ರಾಣಾಯಾಮವನ್ನು ಅಭ್ಯಾಸಮಾಡು. ||೧೬-೧೭||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ ಹದಿನೈದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಜ್ಞಾನಯೋಗಖಂಡಂ

|| ಷೋಡಶೋಽಧ್ಯಾಯಃ ||

ಹದಿನಾರನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಪ್ರಾಣಾಯಾಮಂ ಯಥಾವಿಧಿ ।
ಪ್ರಾಣಾಯಾಮ ಇತಿ ಪ್ರೋಕ್ತೋ ರೇಚಪೂರಕ ಕುಂಭಕೈಃ ||೧||

ವರ್ಣತ್ರಯಾತ್ಮಕಾಃ ಪ್ರೋಕ್ತಾ ರೇಚ ಪೂರಕ ಕುಂಭಕಾಃ ।
ಸ ಏವ ಪ್ರಣವಃ ಪ್ರೋಕ್ತಃ ಪ್ರಾಣಾಯಾಮಶ್ಚ ತನ್ಮಯಃ ||೨||

ಇಡಯಾ ವಾಯುಮಾಕೃಷ್ಯ ಪೂರಯಿತ್ವೋದರಂ ಸ್ಥಿತಂ ।
ಶನೈಃ ಷೋಡಶಭಿರ್ಮಾತ್ರೈರಕಾರಂ ತತ್ರ ಸಂಸ್ಮರೇತ್ ||೩||

ಈಶ್ವರನು ಹಿಂದಿನ ಅಧ್ಯಾಯದ ಕೊನೆಯಲ್ಲಿ ಪ್ರಾಣಾಯಾಮವನ್ನು ಮಾಡಬೇಕೆಂದು ಸೂಚಿಸಿ, ಈ ಅಧ್ಯಾಯದಲ್ಲಿ ಬೃಹಸ್ಪತಿಯನ್ನು ಕುರಿತುಯೋಗಾಂಗಗಳಲ್ಲಿ ನಾಲ್ಕನೆಯದಾದ ಪ್ರಾಣಾಯಾಮಕ್ರಮವನ್ನು ವಿವರಿಸುತ್ತ, ಎಲೈ ಬೃಹಸ್ಪತಿಯೇ, ಪ್ರಾಣಾಯಾಮವು ಅಕಾರ ಉಕಾರ ಮಕಾರರೂಪವಾದ ವರ್ಣತ್ರಯಾತ್ಮಕವಾದ ರೇಚಕ, ಪೂರಕ, ಕುಂಭಕವೆಂಬ ಮೂರುರೂಪವಾಗಿದ್ದರೂ ಎಲ್ಲವೂ ಸೇರಿ ಪ್ರಣವಸ್ವರೂಪವಾದುದಾಗಿರುವುದು. ||೧-೨||

ಇಡಾನಾಡಿಯಿಂದ ವಾಯುವನ್ನು ಎಳೆದುಕೊಂಡು ಮೆಲ್ಲಗೆ ಶರೀರದೊಳಕ್ಕೆ ತುಂಬುತ್ತಾ ಹದಿನಾರು ಮಾತ್ರಾಕಾಲದ ವರೆಗೆ ಬ್ರಹ್ಮಸ್ವರೂಪವಾದ ಅಕಾರವನ್ನು

ಪೂರಿತಂ ಧಾರಯೇತ್ಪಶ್ಚಾಚ್ಚತುಃ ಷಷ್ಟ್ಯಾ ತು ಮಾತ್ರಯಾ ।
ಉಕಾರಮೂರ್ತಿಮತ್ರಾಪಿ ಸಂಸ್ಮರನ್ಪ್ರಣವಂ ಜಪೇತ್ ॥೪॥

ಯಾವದ್ವಾ ಶಕ್ಯತೇ ತಾವದ್ಧಾರಯನ್ ಜಪಸಂಯುತಂ ।
ಪೂರಿತಂ ರೇಚಯೇತ್ಪಶ್ಚಾನ್ಮಕಾರೇಣಾ ನಿಲಂ ಬುಧಃ ॥೫॥

ಶನೈಃ ಪಿಂಗಲಯಾ ವಿಪ್ರ ದ್ವಾತ್ರಿಂಶನ್ಮಾತ್ರಯಾ ಪುನಃ ।
ಪ್ರಾಣಾಯಾಮೋ ಭವೇದೇಷ ತತಶ್ಚೈವಂ ಸಮಭ್ಯಸೇತ್ ॥೬॥

ಪುನಃ ಪಿಂಗಲಯಾಽಽಪೂರ್ಯ ಮಾತ್ರೈಃ ಷೋಡಶಭಿಸ್ತಥಾ ।
ಮಕಾರ ಮೂರ್ತಿಮತ್ರಾಪಿ ಸ್ಮರೇದೇಕಾಗ್ರ ಮಾನಸಃ ॥೭॥

ಧಾರಯೇತ್ಪೂರಿತಂ ವಿದ್ವಾನ್ಪ್ರಣವಂ ವಿಂಶತಿದ್ವಯಂ ।
ಜಪೇದತ್ರ ಸ್ಮರೇನ್ಮೂರ್ತಿಮುಕಾರಾಖ್ಯಾಂ ತು ವೈಷ್ಣವೀಂ ॥೮॥

ಸ್ಮರಿಸುತ್ತಿರಬೇಕು. ತನ್ನ ಕೈಯನ್ನು ತನ್ನ ಮಂಡಿಯ ಸುತ್ತಲೂ ಒಂದಾವೃತ್ತಿ ಸುತ್ತಿಸುವುದಕ್ಕೆ ಎಷ್ಟು ಕಾಲವು ಬೇಕಾಗುವುದೋ ಆ ಕಾಲವನ್ನು ಮಾತ್ರೆಯೆಂದು ಹೇಳುವರು. ||೩||

ಹಾಗೆ ತುಂಬಿದ ವಾಯುವನ್ನು ಅರವತ್ತುನಾಲ್ಕು ಮಾತ್ರೆಯ ಕಾಲದ ವರೆಗೆ ಉಕಾರಸ್ವರೂಪನಾದ ವಿಷ್ಣುವನ್ನು ಧ್ಯಾನಮಾಡುತ್ತಾ ಶರೀರದೊಳಗೆ ಇಟ್ಟು ಕೊಂಡು ಪ್ರಣವಜಪವನ್ನು ಮಾಡುತ್ತಿರಬೇಕು. ಅಥವಾ ಆ ವಾಯುವನ್ನು ತನ್ನ ಶಕ್ತಿಯ ಅನುಸಾರವಾಗಿ ಎಷ್ಟುಕಾಲ ಸಾಧ್ಯವೋ ಅಷ್ಟು ಕಾಲದ ವರೆಗೆ ಇಟ್ಟು ಕೊಂಡಿರಬಹುದು. ಆಮೇಲೆ ಆ ವಾಯುವನ್ನು ಮಕಾರಸ್ವರೂಪನಾದ ರುದ್ರನನ್ನು ಧ್ಯಾನಮಾಡುತ್ತ ಮೂವತ್ತೆರಡು ಮಾತ್ರಾಕಾಲದವರೆಗೆ ಮೆಲ್ಲಗೆ ಪಿಂಗಲಾನಾಡಿ ಯಿಂದ ಹೊರಕ್ಕೆ ಬಿಡಬೇಕು. ||೪-೫||

ಇದು ಒಂದು ಪ್ರಾಣಾಯಾಮವಾಗುವುದು. ಆಮೇಲೆ ಮಕಾರಮೂರ್ತಿ ರುದ್ರನನ್ನು ಸ್ಮರಿಸುತ್ತ ಪಿಂಗಲಾನಾಡಿಯಿಂದ ಹದಿನಾರು ಮಾತ್ರಾ ಕಾಲದವರೆಗೆ ಮೆಲ್ಲಗೆ ವಾಯುವನ್ನೆಳೆದುಕೊಂಡು ಉಕಾರಮೂರ್ತಿಯಾದ ವಿಷ್ಣುವನ್ನು ಧ್ಯಾನಿಸುತ್ತ ನಲವತ್ತು ಪ್ರಣವಜಪವನ್ನು ಮಾಡುವವರೆಗೆ ಆ ವಾಯುವನ್ನು ಶರೀರ ದೊಳಗೆ ಇಟ್ಟುಕೊಂಡಿದ್ದು ಬಳಿಕ ಅಕಾರಮೂರ್ತಿಯಾದ ಬ್ರಹ್ಮನನ್ನು ಸ್ಮರಿಸುತ್ತಾ

ಅಕಾರಂ ತು ಸ್ಮರೇತ್ಪಶ್ಚಾದ್ರೇಚಯೇದಿಡಯಾಽನಿಲಂ ।
ಏವ ಮೇವ ಪುನಃ ಕುರ್ಯಾದಿಡಯಾಽಪೂರ್ಯ ಬುದ್ಧಿಮಾನ್ ॥೯॥

ಏವಂ ಸಮಭ್ಯಸೇ ನ್ನಿತ್ಯಂ ಪ್ರಾಣಾಯಾಮಂ ಯತೀಶ್ವರಃ ।
ಅಥವಾ ಪ್ರಾಣಮಾರೋಪ್ಯ ಪೂರಯಿತ್ವೋದರಸ್ಥಿತಂ ॥೧೦॥

ಪ್ರಣವೇನ ಸಮಾಯುಕ್ತಾಂ ವ್ಯಾಹೃತೀಭಿಶ್ಚ ಸಂಯುತಾಂ ।
ಗಾಯತ್ರೀಂ ಸಂಜಪೇಚ್ಛುದ್ಧಃ ಪ್ರಾಣಸಂಯಮನೇ ತ್ರಯಂ ॥೧೧॥

ಪುನಶ್ಚೈವಂ ತ್ರಿಭಿಃ ಕುರ್ಯಾದ್ಗೃಹಸ್ಥಶ್ಚ ತ್ರಿಸಂಧಿಷು ।
ಬ್ರಹ್ಮಚರ್ಯಾಶ್ರಮಸ್ಥಾನಾಂ ವನಸ್ಥಾನಾಂ ಮಹಾಮುನೇ ॥೧೨॥

ಪ್ರಾಣಾಯಾಮೋ ವಿಕಲ್ಪೇನ ಪ್ರೋಕ್ತೋ ವೇದಾಂತವೇದಿಭಿಃ ।
ದ್ವಿಜವತ್ಕ್ಷತ್ರಿಯಸ್ಯೋಕ್ತಃ ಪ್ರಾಣಾಯಾಮೋ ಮಹಾಮುನೇ॥೧೩॥

ಇಡಾನಾಡಿಯಿಂದ ವಾಯುವನ್ನು ಹೊರಕ್ಕೆ ಬಿಡಬೇಕು. ಹೀಗೆಯೇ ಪುನಃ ಇಡಾನಾಡಿಯಿಂದ ವಾಯುವನ್ನೆಳೆದುಕೊಂಡು ಹಿಂದೆ ಹೇಳಿದಂತೆ ಪುನಃ ಪ್ರಾಣಾಯಾಮವನ್ನು ಮಾಡಬೇಕು. ||೬-೭-೮-೯||

ಸನ್ಯಾಸಾಶ್ರಮಧರ್ಮವನ್ನಾಶ್ರಯಿಸುವ ಬ್ರಾಹ್ಮಣನು ಈ ರೀತಿಯಲ್ಲಿ ಪ್ರತಿದಿನವೂ ಪ್ರಾಣಾಯಾಮವನ್ನು ಅಭ್ಯಾಸಮಾಡುತ್ತಿರಬೇಕು. ಅಥವಾ ಪ್ರಾಣವಾಯುವನ್ನು ಶರೀರದೊಳಕ್ಕೆ ತುಂಬಿಕೊಂಡ ಮೇಲೆ ಕುಂಭಕವನ್ನು ಮಾಡುವಾಗ ಪ್ರಣವ ವ್ಯಾಹೃತಿಗಳಿಂದ ಕೂಡಿದ ಗಾಯತ್ರೀಮಂತ್ರವನ್ನು ಮೂರಾವೃತ್ತಿ ಜಪಮಾಡಬೇಕು. ||೧೦-೧೧||

ಗೃಹಸ್ಥನು ಮೂರು ಸಂಧ್ಯಾಕಾಲಗಳಲ್ಲಿಯೂ ಪ್ರಣವವ್ಯಾಹೃತಿಗಳಿಂದ ಕೂಡಿದ ಗಾಯತ್ರೀಮಂತ್ರವನ್ನು ಮೂರಾವೃತ್ತಿ ಉಚ್ಚರಿಸಿ ಮೂರು ಪ್ರಾಣಾಯಾಮಗಳನ್ನು ಮಾಡಬೇಕು. ಬ್ರಹ್ಮಚಾರಿಗಳೂ ವಾನಪ್ರಸ್ಥರೂ ಇದೇ ರೀತಿಯಲ್ಲಿ ಪ್ರಾಣಾಯಾಮವನ್ನು ಮಾಡಬೇಕೆಂದು ವೇದಾಂತವನ್ನು ಬಲ್ಲವರು ಹೇಳುವರು. ಬ್ರಾಹ್ಮಣರಂತೆಯೇ ಕ್ಷತ್ರಿಯ ವೈಶ್ಯರಿಗೂ ವೇದಾಧಿಕಾರವಿರುವುದರಿಂದ ತಿಳುವಳಿಕೆಯುಳ್ಳವರೂ ವಿರಕ್ತರೂ ಆದ ಕ್ಷತ್ರಿಯ ವೈಶ್ಯರು ಬ್ರಾಹ್ಮಣನಂತೆಯೇ ಪ್ರಾಣಾಯಾಮಾಭ್ಯಾಸವನ್ನು ಮಾಡಬೇಕು. ||೧೨-೧೩||

ವಿರಕ್ತಾನಾಂ ಪ್ರಬುದ್ಧಾನಾಂ ವೈಶ್ಯಾನಾಂ ಚ ತಥೈವ ಚ ।
ಶೂದ್ರಾಣಾಂ ಚ ತಥಾ ಸ್ತ್ರೀಣಾಂ ಪ್ರಾಣಸಂಯಮನಂ ಮುನೇ॥೧೪॥

ನಮೋಽಂತಂ ಶಿವಮಂತ್ರಂ ವಾ ವೈಷ್ಣವಂ ವಾ ನ ಚಾನ್ಯಥಾ ।
ನಿತ್ಯಮೇವಂ ಪ್ರಕುರ್ವೀತ ಪ್ರಾಣಾಯಾಮಾಂಸ್ತು ಷೋಡಶ ॥೧೫॥

ಬ್ರಹ್ಮಹತ್ಯಾದಿಭಿಃ ಪಾಪೈರ್ಮುಚ್ಯತೇ ಮಾಸಮಾತ್ರತಃ ।
ಷಣ್ಮಾಸಾಭ್ಯಾಸತೋ ವಿಪ್ರ ವೇದನೇಚ್ಛಾಮವಾಪ್ನುಯಾತ್॥೧೬॥

ವತ್ಸರಾದ್ಬ್ರಹ್ಮವಿದ್ವಾನ್ಸ್ಯಾತ್ತಸ್ಮಾನ್ನಿತ್ಯಂ ಸಮಭ್ಯಸೇತ್ ।
ಯೋಗಾಭ್ಯಾಸರತೋ ನಿತ್ಯಂ ಸ್ವಧರ್ಮನಿರತಶ್ಚ ಯಃ ॥೧೭॥

ಪ್ರಾಣಸಂಯಮನೇನೈವ ಜ್ಞಾನಾನ್ಮುಕ್ತೋ ಭವಿಷ್ಯತಿ ।
ಬಾಹ್ಯಾದಾ ಪೂರಣಂ ವಾಯೋರುದರೇ ಪೂರಕೋ ಹಿ ಸಃ ॥೧೮॥

ಶೂದ್ರರಿಗೂ, ಸ್ತ್ರೀಯರಿಗೂ, ವೇದಾಧಿಕಾರವಿಲ್ಲದಿರುವುದರಿಂದ ಅವರು ಪ್ರಾಣಾಯಾಮವನ್ನು ಮಾಡುವಾಗ ನಮೋಽಂತವಾದ ಶಿವಮಂತ್ರವನ್ನಾಗಲೀ, ವಿಷ್ಣುಮಂತ್ರವನ್ನಾಗಲೀ, ಹೇಳಿಸಿಕೊಂಡು ಪ್ರತಿದಿನವೂ ಹದಿನಾರು ಪ್ರಾಣಾಯಾಮಗಳನ್ನು ಮಾಡಬೇಕು.॥೧೪-೧೫॥

ಹೀಗೆ ಒಂದು ತಿಂಗಳು ಪ್ರಾಣಾಯಾಮವನ್ನು ಅಭ್ಯಾಸಮಾಡಿದರೆ ಬ್ರಹ್ಮಹತ್ಯಾದಿ ಮಹಾಪಾಪಗಳೂ ನಿವಾರಣೆಯಾಗುವುವು. ಆರು ತಿಂಗಳು ಅಭ್ಯಾಸಮಾಡಿದರೆ ಜ್ಞಾನವನ್ನು ಪಡೆಯಬೇಕೆಂಬ ಅಪೇಕ್ಷೆಯುಂಟಾಗುವುದು. ಒಂದು ವರ್ಷದ ವರೆಗೆ ತಪ್ಪದೇ ಪ್ರತಿದಿನವೂ ಪ್ರಾಣಾಯಾಮವನ್ನು ಮಾಡಿದವನು ಬ್ರಹ್ಮಜ್ಞಾನಿಯಾಗುವನು. ಆದುದರಿಂದ ಪ್ರತಿದಿನವೂ ಪ್ರಾಣಾಯಾಮವನ್ನು ಮಾಡಬೇಕು. ॥೧೬॥

ಮನುಷ್ಯನು ಪ್ರತಿದಿನವೂ ಯೋಗಾಭ್ಯಾಸದಲ್ಲಿ ಆಸಕ್ತನಾಗಿ ತನ್ನ ವರ್ಣಾಶ್ರಮಧರ್ಮವನ್ನಾಚರಿಸುತ್ತಾ ಪ್ರಾಣಾಯಾಮ ಮಾಡುವುದರಿಂದಲೇ ಬ್ರಹ್ಮಜ್ಞಾನವನ್ನು ಪಡೆದು ಮುಕ್ತನಾಗುವನು. ॥೧೭॥

ಹೊರಗಿನಿಂದ ಶರೀರದೊಳಕ್ಕೆ ವಾಯುವನ್ನು ಎಳೆದುಕೊಳ್ಳುವುದೇ ಪೂರಕವೆನಿಸುವುದು. ಆ ವಾಯುವನ್ನು ಶರೀರದೊಳಗೆ ಪೂರ್ಣಕುಂಭದಂತೆ ಧರಿಸುವುದು

ಸಂಪೂರ್ಣಕುಂಭವದ್ವಾಯೋರ್ಧಾರಣಂ ಕುಂಭಕೋ ಭವೇತ್ ।
ಬಹಿರ್ವಿರೇಚನಂ ವಾಯೋ ರುದರಾದ್ರೇಚಕಃ ಸ್ಮೃತಃ ॥೧೯॥

ಪ್ರಸ್ವೇದಜನಕೋ ಯಸ್ತು ಪ್ರಾಣಾಯಾಮೇಷು ಸೋಽಧಮಃ ।
ಕಂಪನಂ ಮಧ್ಯಮಂ ವಿದ್ಯಾದುತ್ಥಾನಂ ಚೋತ್ತಮಂ ತಥಾ ॥೨೦॥

ಪೂರ್ವಂ ಪೂರ್ವಂ ಪ್ರಕುರ್ವೀತ ಯಾವದುತ್ತಮಸಂಭವಃ ।
ಸಂಭವತ್ಯುತ್ತಮೇ ಪ್ರಾಜ್ಞಃ ಪ್ರಾಣಾಯಾಮೇ ಸುಖೀ ಭವೇತ್ ॥೨೧॥

ಪ್ರಾಣಾಯಾಮೇನ ಚಿತ್ತಂ ತು ಶುದ್ಧಂ ಭವತಿ ಸುವ್ರತ ।
ಚಿತ್ತೇ ಶುದ್ಧೇ ಮನಃ ಸಾಕ್ಷಾತ್ಪ್ರತ್ಯಗ್ಜ್ಯೋತಿಷ್ಯವಸ್ಥಿತಂ ॥೨೨॥

ಪ್ರಾಣಶ್ಚಿತ್ತೇನ ಸಂಯುಕ್ತಃ ಪರಮಾತ್ಮನಿ ತಿಷ್ಠತಿ ।
ಪ್ರಾಣಾಯಾಮ ಪರಸ್ಯಾಸ್ಯ ಪುರುಷಸ್ಯ ಮಹಾತ್ಮನಃ ॥೨೩॥
ದೇಹಶ್ಚೋತ್ತಿಷ್ಠತೇ ತೇನ ಕಿಂಚಿಜ್ಜ್ಞಾನಾದ್ವಿಮುಕ್ತತಾ ।

ಕುಂಭಕವೆನಿಸುವುದು. ಅದೇ ವಾಯುವನ್ನು ಶರೀರದೊಳಗಿನಿಂದ ಹೊರಕ್ಕೆ ಬಿಡುವುದು ರೇಚಕವೆನಿಸುವುದು. ॥೧೮-೧೯॥

ಪ್ರಾಣಾಯಾಮಕಾಲದಲ್ಲಿ ಶರೀರದಲ್ಲಿ ಬೆವರು ಉಂಟಾಗುವುದು ಅಧಮ ಲಕ್ಷಣವು. ಕಂಪನ (ನಡುಕ) ಉಂಟಾಗುವುದು ಮಧ್ಯಮಲಕ್ಷಣವು. ಶರೀರವೇ ಲಘುವಾಗಿ ಮೇಲಕ್ಕೇಳುವುದು ಉತ್ತಮಲಕ್ಷಣವು. ಉತ್ತಮಲಕ್ಷಣವುಂಟಾಗುವ ವರೆಗೂ ಪ್ರಾಣಾಯಾಮವನ್ನು ಮಾಡುತ್ತಲೇ ಇರಬೇಕು. ಉತ್ತಮ ಪ್ರಾಣಾಯಾಮಲಕ್ಷಣವು ಉಂಟಾಗುತ್ತಿದ್ದಹಾಗೆಯೇ ಯೋಗಿಗೆ ಜ್ಞಾನೋತ್ಪತ್ತಿಯಾಗಿ ಅತ್ಯಂತ ಸುಖವುಂಟಾಗುವುದು. ॥೨೦-೨೧॥

ಎಲೈ ತಪಸ್ವಿಯಾದ ಬೃಹಸ್ಪತಿಯೇ, ಪ್ರಾಣಾಯಾಮವನ್ನು ಮಾಡುವುದರಿಂದ ಚಿತ್ತವು ಶುದ್ಧಿಯಾಗುವುದು. ಚಿತ್ತಶುದ್ಧಿಯಾಗುತ್ತಲೂ ಮನುಷ್ಯನ ಮನಸ್ಸು ಸಾಕ್ಷಾತ್ಪ್ರಕಾಶಸ್ವರೂಪನಾದ ಅಂತರ್ಜ್ಯೋತಿಯಾದ ಪರಮಾತ್ಮನಲ್ಲಿ ನೆಲೆಸುವುದು. ಪ್ರಾಣವೂ ಕೂಡ ಚಿತ್ತದೊಡನೆ ಸೇರಿ ಪರಮಾತ್ಮನಲ್ಲಿಯೇ ನೆಲೆಸುವುದು. ॥೨೨॥

ಪ್ರಾಣಾಯಾಮವನ್ನು ಮಾಡುತ್ತಿರುವ ಮಹಾತ್ಮನಾದ ಪುರುಷನ ದೇಹವು ಸತ್ವಬುದ್ಧಿಯನ್ನು ಪಡೆದು ಲಘುವಾಗಿ ಭೂಮಿಯಿಂದ ಮೇಲಕ್ಕೇಳುವುದು. ಈ ಪ್ರಾಣಾಯಾಮದಿಂದ ಜ್ಞಾನಪ್ರಾಪ್ತಿಯಾಗಿ ಮೋಕ್ಷವುಂಟಾಗುವುದು. ॥೨೩॥

ರೇಚಕಂ ಪೂರಕಂ ಮುಕ್ತ್ವಾ ಕುಂಭಕಂ ನಿತ್ಯಮಭ್ಯಸೇತ್ ॥೨೪॥

ಸರ್ವಪಾಪವಿನಿರ್ಮುಕ್ತಃ ಸಮ್ಯಜ್ಜ್ಞಾನಮವಾಪ್ನುಯಾತ್ ।
ಮನೋಜಯತ್ವಮಾಪ್ನೋತಿ ಪಲಿತಾದಿಚ ನಶ್ಯತಿ ॥೨೫॥

ಪ್ರಾಣಾಯಾಮೈಕ ನಿಷ್ಠಸ್ಯ ನ ಕಿಂಚಿದಪಿ ದುರ್ಲಭಂ ।
ತಸ್ಮಾತ್ಸರ್ವಪ್ರಯತ್ನೇನ ಪ್ರಾಣಾಯಾಮಂ ಸಮಭ್ಯಸೇತ್ ೨೬॥

ವಿನಿಯೋಗಾನ್ಪ್ರವಕ್ಷ್ಯಾಮಿ ಪ್ರಾಣಾಯಾಮಸ್ಯಸುವ್ರತ ।
ಸಂಧ್ಯಯೋಃ ಬ್ರಾಹ್ಮಕಾಲೇ ವಾ ಮಧ್ಯಾಹ್ನೇ ವಾಽಥವಾ ಸದಾ ॥೨೭॥

ಬಾಹ್ಯಪ್ರಾಣಂ ಸಮಾಕೃಷ್ಯ ಪೂರಯಿತ್ವೋದರೇಽನಘ ।
ನಾಸಾಗ್ರೇ ನಾಭಿಮಧ್ಯೇ ಚ ಪಾದಾಂಗುಷ್ಠೇ ಚ ಧಾರಯೇತ್ ॥೨೮॥

ರೇಚಕ ಪೂರಕಗಳನ್ನು ಬಿಟ್ಟು ಕುಂಭಕ ಒಂದನ್ನೇ ಪ್ರತಿದಿನವೂ ಅಭ್ಯಾಸ ಮಾಡಬಹುದು. ಇದರಿಂದ ಸಮಸ್ತ ಪಾಪಗಳನ್ನೂ ಕಳೆದುಕೊಂಡು ಉತ್ತಮವಾದ ಜ್ಞಾನವನ್ನು ಪಡೆಯಬಹುದು. ಪ್ರಾಣಾಯಾಮದಿಂದ ಮನಸ್ಸನ್ನು ಜಯಿಸಿ ತನ್ನ ಧೀನದಲ್ಲಿಟ್ಟುಕೊಂಡಿರಬಹುದು. ನರೆತ ಕೂದಲೂ ಮುಂತಾದ ವಾರ್ಧಕ ದೋಷ ಗಳು ನಿವಾರಣೆಯಾಗುವುವು. ಪ್ರಾಣಾಯಾಮ ಒಂದರಲ್ಲಿಯೇ ಆಸಕ್ತನಾದ ಮನುಷ್ಯ ನಿಗೆ ಅಸಾಧ್ಯವಾದ ಕೆಲಸವಾವುದೂ ಇರುವುದಿಲ್ಲ. ಆದುದರಿಂದ ಸರ್ವಪ್ರಯತ್ನ ದಿಂದಲೂ ಪ್ರಾಣಾಯಾಮಾಭ್ಯಾಸವನ್ನು ಮಾಡಬೇಕು. ||೨೪-೨೫-೨೬||

ಎಲೈ ತಪಸ್ವಿಯೇ, ಪ್ರಾಣಾಯಾಮದ ಪ್ರಯೋಜನವನ್ನು ಹೇಳುವೆನು ಕೇಳು. ಎರಡು ಸಂಧ್ಯಾಕಾಲಗಳಲ್ಲಿಯಾಗಲೀ, ಬ್ರಾಹ್ಮೀಮುಹೂರ್ತದಲ್ಲಿಯಾಗಲೀ, ಮಧ್ಯಾಹ್ನಕಾಲದಲ್ಲಿಯಾಗಲಿ, ಹೊರಗಿನ ವಾಯುವನ್ನು ಎಳೆದುಕೊಂಡು ಶರೀರ ದೊಳಗಿಟ್ಟುಕೊಂಡು ಮೂಗಿನ ತುದಿ, ನಾಭಿಮಧ್ಯ, ಪಾದದ ಹೆಬ್ಬೆರಳು ಇವುಗಳಲ್ಲಿ ಮನಸ್ಸನ್ನಿಟ್ಟುಕೊಂಡಿದ್ದರೆ ಚಿತ್ತವು ದೃಢವಾಗುವುದು. ಇದರಿಂದ ಪ್ರಾಣಜಯವುಂ ಟಾಗುವುದು. ಈ ವಿಚಾರದಲ್ಲಿ ಬೇರೆ ಕಡೆಯಲ್ಲಿ ಹೆಚ್ಚು ವಿಷಯವನ್ನು ಹೇಳಿರುವು ದರಿಂದ ಅದನ್ನೇ ಮುಂದೆ ಹೇಳಿದೆ. ಅದೇನೆಂದರೆ—

ಇಡಯಾ ವಾಯುಮಾಕೃಷ್ಯಪೂರಯಿತ್ವೋದರೇ ದೃಢಂ ।
ವಾಮಾಘ್ರ್ಯಂಗುಷ್ಠಿಕೇ ನಾಭೌ ನಾಸಾಗ್ರೇ ಧಾರಯೇತ್ ಸ್ಥಿರಂ ॥

ಸರ್ವರೋಗವಿನಿರ್ಮುಕ್ತೋ ಜೀವೇದ್ವರ್ಷಶತಂ ನರಃ ।
ನಾಸಾಗ್ರ ಧಾರಣಾದ್ವಾಯು ರ್ಜಿತೋ ಭವತಿ ಸುವ್ರತ ॥೨೯॥

ಸರ್ವರೋಗವಿನಾಶಃ ಸ್ಯಾನ್ನಾಭಿಮಧ್ಯೇ ಚ ಧಾರಣಾತ್ ।
ಶರೀರಲಘುತಾ ವಿಪ್ರ ಪಾದಾಂಗುಷ್ಠ ನಿರೋಧನಾತ್ ॥೩೦॥

ಜಿಹ್ವಯಾ ವಾಯುಮಾ ಕೃಷ್ಯಯಃ ಪಿಬೇತ್ಸತತಂ ನರಃ ।
ಶ್ರಮದಾಹ ವಿನಿರ್ಮುಕ್ತೋ ಭವೇನ್ನೀರೋಗತಾಮಿಯಾತ್ ॥೩೧॥

ಜಿಹ್ವಯಾ ವಾಯುಮಾಕೃಷ್ಯ ಜಿಹ್ವಾಮೂಲೇ ನಿರೋಧಯೇತ್ ।
ಪಿಬೇದಮೃತಮವ್ಯಗ್ರಂ ಸಕಲಂ ಸುಖಮಾಪ್ನುಯಾತ್ ॥೩೨॥

ಪುನಃ ಪಿಂಗಲಯಾಽಽಪೂರ್ಯ ದಕ್ಷಾಂಘ್ರ್ಯಂಗುಷ್ಠಕೇಽನಿಲಂ ।
ನಾಭೌ ನಾಸಾಗ್ರಕೇ ಪ್ರಾಗ್ವದ್ಧಾರಯೇದ್ಧ್ಯಾನಸಂಯುತಃ ॥

ಪುಟಾಭ್ಯಾಮಥವಾ ವಾಯುಂ ಪೂರಿತಂ ಧಾರಯೇತ್ ಸ್ಥಿರಂ ।
ಅನೇನಾಭ್ಯಾಸಯೋಗೇನ ಪ್ರಾಣವಾಯುರ್ಜಿತೋ ಭವೇತ್ ॥ ॥೨೭-೨೮॥

ಪ್ರಾಣಾಯಾಮಕಾಲದಲ್ಲಿ ಮನಸ್ಸನ್ನು ಒಂದುಕಡೆ ನಿಲ್ಲಿಸುವುದರಿಂದ ಮನುಷ್ಯನು ಸಮಸ್ತ ರೋಗಗಳನ್ನೂ ನಾಶಮಾಡಿಕೊಂಡು ಒಂದುನೂರು ವರ್ಷ ಬದುಕುವನು. ಮೂಗಿನ ಕೊನೆಯಲ್ಲಿ ನಿಲ್ಲಿಸಿದರೆ ಪ್ರಾಣವಾಯುವನ್ನು ಜಯಿಸಬಹುದು. ಹೊಕ್ಕುಳಿನ ನಡುವೆ ನಿಲ್ಲಿಸಿದರೆ ಸಮಸ್ತ ರೋಗಗಳನ್ನೂ ನಾಶಮಾಡಿಕೊಳ್ಳಬಹುದು. ಕಾಲಿನ ಹೆಬ್ಬೆರಳಿನಲ್ಲಿ ನಿಲ್ಲಿಸಿದರೆ ಶರೀರದಲ್ಲಿ ಲಾಘವವುಂಟಾಗುವುದರಿಂದ (ತೂಕ ಕಡಿಮೆಯಾಗುವುದು) ಯೋಗಸಿದ್ಧಿಯುಂಟಾಗುವುದು.॥೨೯-೩೦॥

ನಾಲಿಗೆಯ ಮೂಲಕ ವಾಯುವನ್ನೆಳೆದುಕೊಂಡು ಯಾವಾಗಲೂ ಆ ವಾಯುವನ್ನೇ ಆಹಾರಮಾಡಿಕೊಂಡಿದ್ದರೆ ಶರೀರಕ್ಕೆ ಶ್ರಮವೂ, ದಾಹವೂ, ರೋಗವೂ ಇಲ್ಲದೇ ಇರಬಹುದು. ಹಾಗೆ ವಾಯುವನ್ನೆಳೆದುಕೊಳ್ಳುವಾಗ ಚಿತ್ತವನ್ನು ನಾಲಿಗೆಯ ಬುಡದಲ್ಲಿ ನೆಲಸುವಂತೆ ಮಾಡಿಕೊಂಡಿದ್ದರೆ ಆ ವಾಯುವೇ ಅತ್ಯಂತ ತಣ್ಣಗಾಗಿ ಅಮೃತಸ್ವರೂಪವಾಗಿರುವುದು. ಮೆಲ್ಲಗೆ ಅದನ್ನು ಪಾನಮಾಡಿದರೆ ಸಮಸ್ತ ಸುಖಗಳೂ ಅದರಿಂದ ಪ್ರಾಪ್ತವಾಗುವುವು. ॥೩೧-೩೨॥

ಇಡಯಾ ವಾಯುಮಾಕೃಷ್ಯ ಭ್ರುವೋರ್ಮಧ್ಯೇ ನಿರೋಧಯೇತ್ ।
ಯಃ ಪಿಬೇದಮೃತಂ ಶುದ್ಧಂ ವ್ಯಾಧಿಭಿರ್ಮುಚ್ಯತೇ ಹಿ ಸಃ ॥೩೩॥

ಇಡಯಾ ವೇದತತ್ವಜ್ಞ ತಥಾ ಪಿಂಗಲಯಾಽಪಿ ಚ ।
ನಾಭೌ ನಿರೋಧಯೇತ್ತೇನ ವ್ಯಾಧಿಭಿರ್ಮುಚ್ಯತೇ ನರಃ ॥೩೪॥

ಮಾಸಮಾತ್ರಂ ತ್ರಿಸಂಧ್ಯಾಯಾಂ ಜಿಹ್ವಯಾಽಽರೋಪ್ಯ ಮಾರುತಂ ।
ಅಮೃತಂ ಚ ಪಿಬೇನ್ನಾಭೌ ಮಂದಂ ಮಂದಂ ನಿರೋಧಯೇತ್ ॥೩೫॥

ವಾತಪಿತ್ತಾದಿಜಾ ದೋಷಾ ನಶ್ಯಂತ್ಯೇವ ನ ಸಂಶಯಃ ।
ನಾಡೀಭ್ಯಾಂ ವಾಯುಮಾಕೃಷ್ಯ ನೇತ್ರ ದ್ವಂದ್ವೇ ನಿರೋಧಯೇತ್॥೩೬॥

ನೇತ್ರರೋಗಾ ವಿನಶ್ಯಂತಿ ತಥಾ ಶ್ರೋತ್ರ(ತ್ರೇ) ನಿರೋಧನಾತ್ ।
ತಥಾ ವಾಯುಂ ಸಮಾರೋಪ್ಯ ಧಾರಯೇಚ್ಛಿರಸಿ ಸ್ಥಿರಂ ॥೩೭॥
ಶಿರೋರೋಗಾ ವಿನಶ್ಯಂತಿ ಸತ್ಯಮುಕ್ತಂ ಬೃಹಸ್ಪತೇ ।

ಇಡಾನಾಡಿಯಿಂದ ವಾಯುವನ್ನೆಳೆದುಕೊಂಡು ಮನಸ್ಸನ್ನು ಹುಬ್ಬುಗಳ ನಡುವೆ ನಿಲ್ಲಿಸಿದರೆ ಅಂತಹ ಮನುಷ್ಯನು ಶುದ್ಧವಾದ ಅಮೃತವನ್ನು ಪಾನಮಾಡಿದವನಂತಾಗಿ ರೋಗಗಳನ್ನೆಲ್ಲವನ್ನೂ. ಕಳೆದುಕೊಳ್ಳುವನು. ವೇದದ ತತ್ವವನ್ನು ತಿಳಿದ ಬೃಹಸ್ಪತಿಯೇ, ಇಡಾನಾಡಿಯಿಂದಲಾಗಲಿ, ಪಿಂಗಳಾನಾಡಿಯಿಂದಲಾಗಲಿ, ವಾಯುವನ್ನೆಳೆದುಕೊಳ್ಳುವಾಗ ಮನಸ್ಸನ್ನು ನಾಭಿಯಲ್ಲಿ ನಿಲ್ಲಿಸಿದರೆ ಸಕಲ ರೋಗಗಳಿಂದಲೂ ಬಿಡುಗಡೆಯನ್ನು ಹೊಂದುವನು. ॥೩೩-೩೪॥

ಒಂದು ತಿಂಗಳ ವರೆಗೆ ಮೂರು ಸಂಧ್ಯಾಕಾಲಗಳಲ್ಲಿಯೂ ಗಾಳಿಯು ನಾಲಿಗೆಯ ತುದಿಗೆ ತಗಲುವಂತೆ ತುಟಿಗಳನ್ನು ಕಾಗೆಯ ಕೊಕ್ಕಿನಂತೆ ಮಾಡಿಕೊಂಡು ಮೆಲ್ಲಗೆ ಗಾಳಿಯನ್ನೆಳೆದುಕೊಳ್ಳುತ್ತ ಹೊಕ್ಕುಳಿನಲ್ಲಿ ಮನಸ್ಸನ್ನು ನೆಲೆಗೊಳಿಸಿದರೆ ಅಮೃತಪಾನಮಾಡಿದಂತಾಗಿ ಶರೀರದಲ್ಲಿ ಉಂಟಾದ ವಾತಪಿತ್ತಾದಿ ದೋಷಗಳೆಲ್ಲವೂ ನಿವಾರಣೆಯಾಗುವುವು. ॥೩೫॥

ಇಡಾ ಪಿಂಗಳಾ ನಾಡಿಗಳಿಂದ ವಾಯುವನ್ನೆಳೆದುಕೊಳ್ಳುವಾಗ ಕಣ್ಣುಗಳಲ್ಲಿ ಮನಸ್ಸನ್ನು ನಿಲ್ಲಿಸಿದರೆ ಕಣ್ಣಿನ ರೋಗಗಳೂ, ಕಿವಿಗಳಲ್ಲಿ ಮನಸ್ಸನ್ನು ನಿಲ್ಲಿಸಿದರೆ ಕಿವಿಯ ರೋಗಗಳೂ, ತಲೆಯಲ್ಲಿ ನಿಲ್ಲಿಸಿದರೆ ತಲೆಯ ರೋಗಗಳೂ ನಿವಾರಣೆಯಾಗುವುವು. ॥೩೬-೩೭॥

ಸ್ವಸ್ತಿಕಾಸನಮಾಸ್ಥಾಯ ಸಮಾಹಿತ ಮನಾಸ್ತಥಾ ॥೩೮॥

ಅಪಾನಮೂರ್ಧ್ವಮಾಕೃಷ್ಯ ಪ್ರಣವೇನ ಶನೈಃ ಶನೈಃ ।
ಹಸ್ತಾಭ್ಯಾಂ ಬಂಧಯೇತ್ಸಮ್ಯಕ್ ಕರ್ಣಾದಿ ಕರಣಾನಿ ವೈ ॥೩೯॥

ಅಂಗುಷ್ಠಾಭ್ಯಾ ಮುಭೇನೇತ್ರೇ ತರ್ಜನೀಭ್ಯಾಂ ತು ಚಕ್ಷುಷೀ ।
ನಾಸಾಪುಟಾವಥಾನ್ಯಾಭ್ಯಾಂ ಪ್ರಚ್ಛಾದ್ಯ ಕರಣಾನಿ ವೈ ॥೪೦॥

ಆನಂದಾಽಽವಿರ್ಭವಂ ಯಾವತ್ತಾವನ್ಮೂರ್ಧನಿ ಧಾರಯೇತ್ ।
ಪ್ರಾಣಃ ಪ್ರಯಾತ್ಯ ನೇನೈವ ಬ್ರಹ್ಮರಂಧ್ರಂ ಮಹಾಮುನೇ ॥೪೧॥

ಬ್ರಹ್ಮರಂಧ್ರೇ ಗತೇ ವಾಯೌ ನಾದಶ್ಚೋತ್ಪದ್ಯತೇಽನಘ ।
ಶಂಖಧ್ವನಿನಿಭಶ್ಚಾದೌ ಮಧ್ಯೇ ಮೇಘಧ್ವನಿರ್ಯಥಾ ॥೪೨॥

ಸ್ವಸ್ತಿಕಾಸನದಲ್ಲಿ ಕುಳಿತು ಏಕಾಗ್ರಚಿತ್ತತೆಯಿಂದ ಅಪಾನವಾಯುವನ್ನು ಪ್ರಣವೋಚ್ಚಾರಣೆಮಾಡುತ್ತಾ ವಾಯು ನಾಡಿಯನ್ನು ಸಂಕೋಚಮಾಡಿ ಮೆಲ್ಲ ಮೆಲ್ಲನೆ ಮೇಲೆಕ್ಕೆ ಎಳೆಯುತ್ತ ಕೈಗಳಿಂದ ಇಂದ್ರಿಯದ್ವಾರಗಳನ್ನು ಮುಚ್ಚಬೇಕು. ವೇಗವಾಗಿ ವಾಯುವನ್ನು ಸೆಳೆದರೆ ನಾಡಿಯೊಳಗೆ ಇರುವ ವಾಯುವು ನೋವನ್ನುಂಟು ಮಾಡುವುದು. ||೩೮-೩೯||

ಎರಡು ಹೆಬ್ಬೆರಳುಗಳಿಂದ ಎರಡು ಕಿವಿಗಳನ್ನೂ ತರ್ಜನಿಯ ಬೆರಳುಗಳಿಂದ ಕಣ್ಣುಗಳನ್ನೂ ಹಾಗೆಯೇ ಇತರ ಬೆರಳುಗಳಿಂದ ಮೂಗಿನ ರಂಧ್ರಗಳನ್ನೂ ಮುಚ್ಚ ಬೇಕು. ||೪೦||

ಆನಂದವು ಉತ್ಪತ್ತಿಯಾಗುವವರೆಗೂ ನೆತ್ತಿಯಲ್ಲಿ ಮನಸ್ಸನ್ನು ನೆಲೆಗೊಳಿಸ ಬೇಕು. ಹಾಗೆ ಬ್ರಹ್ಮರಂಧ್ರದಲ್ಲಿ ಮನಸ್ಸನ್ನು ನೆಲೆಗೊಳಿಸಿದವನ ಪ್ರಾಣವಾಯುವು ಸುಷುಮ್ನಾ ನಾಡಿಯೊಳಕ್ಕೆ ಪ್ರವೇಶಿಸುವುದು. ||೪೧||

ಪ್ರಾಣವಾಯುವು ಬ್ರಹ್ಮರಂಧ್ರಕ್ಕೆ ಹೋಗಿ ಸೇರಿದರೆ ಶರೀರದೊಳಗೆ ನಾದವು ಉತ್ಪತ್ತಿಯಾಗುವುದು. ಮೊದಲು ಶಂಖವನ್ನೂದಿದ ಧ್ವನಿಗೆ ಸಮಾನವಾಗಿಯೂ, ನಡುವೆ ಮೇಘಧ್ವನಿಯಂತೆಯೂ, ಬಳಿಕ ವಾಯುವು ತಲೆಯ ಮಧ್ಯಕ್ಕೆ ಪ್ರವೇಶಿ ಸಲು ಗಿರಿನದಿಯು ಹರಿಯುವ ಧ್ವನಿಯಂತೆಯೂ, ಧ್ವನಿಯು ಗೋಚರವಾಗುವುದು. ಆಮೇಲೆ ಚಿತ್ತವು ಆತ್ಮಾಭಿಮುಖವಾಗುವುದು. (ಹಂಸೋಪನಿಷತ್ತಿನಲ್ಲಿ ನಾದವು

ಶಿರೋಮಧ್ಯಗತೇ ವಾಯೌ ಗಿರಿಪ್ರಸ್ರವಣಂ ಯಥಾ ।
ಪಶ್ಚಾಚ್ಚಿತ್ತಂ ಮಹಾಪ್ರಾಜ್ಞ ಸಾಕ್ಷಾದಾತ್ಮೋನ್ಮುಖಂ ಭವೇತ್ ॥೪೩॥

ಪುನಸ್ತಜ್ಜ್ಞಾನನಿಷ್ಪತ್ತಿಸ್ತಯಾ ಸಂಸಾರ ನಿಹ್ನುತಿಃ ।
ದಕ್ಷಿಣೋತ್ತರ ಗುಲ್ಫೇನ ಸೀವನೀಂ ಪೀಡಯೇಚ್ಛಿರಾಂ ॥೪೪॥

ಸವ್ಯೇತರೇಣ ಗುಲ್ಫೇನ ಪೀಡಯೇದ್ಬುದ್ಧಿಮಾನ್ನರಃ ।
ಜಾನ್ವೋರಧಃ ಸ್ಥಿತಂ ಸಂಧಿಂ ಸ್ಮೃತ್ವಾ ದೇವಂ ಚ ತ್ರ್ಯಂಬಕಂ ॥೪೫॥

ವಿನಾಯಕಂ ಚ ಸಂಸ್ಮೃತ್ಯ ತಥಾ ವಾಗೀಶ್ವರೀಂ ಪುನಃ ।
ಲಿಂಗನಾಲಾತ್ಸಮಾಕೃಷ್ಯ ವಾಯುಮಪ್ಯಗ್ರತೋ ಮುನೇ ॥೪೬॥

ಪ್ರಣವೇನಾಗ್ನಿಯುಕ್ತೇನ ಬಿಂದುಯುಕ್ತೇನ ಬುದ್ಧಿಮಾನ್ ।
ಮೂಲಾಧಾರಸ್ಯ ವಿಪ್ರೇಂದ್ರ ಮಧ್ಯಮೇ ತು ನಿರೋಧಯೇತ್ ॥೪೭॥

ನಿರುದ್ಧವಾಯುನಾ ದೀಪ್ತೋ ವಹ್ನಿರ್ದಹತಿಕುಂಡಲೀಂ ।
ಪುನಃ ಸುಷುಮ್ನಯಾ ವಾಯುರ್ವಹ್ನಿನಾ ಸಹ ಗಚ್ಛತಿ ॥೪೮॥

ಹತ್ತು ಬಗೆಯಲ್ಲಿ ವ್ಯಕ್ತವಾಗುವುದೆಂದು ಹೇಳಿರುವುದು. ೧ ಕಿಣಿಧ್ವನಿ, ೨ ಕಿಣಿಕಿಣಿ ಧ್ವನಿ, ೩ ಘಂಟೆಯ ಶಬ್ದ, ೪ ಶಂಖಧ್ವನಿ, ೫ ತಂಬೂರಿಯ ನಾದ, ೬ ತಾಳದ ಧ್ವನಿ, ೭ ಕೊಳಲಿನ ಧ್ವನಿ, ೮ ನಗಾರಿಯ ಧ್ವನಿ, ೯ ಮೃದಂಗಧ್ವನಿ, ೧೦ ಮೇಘ ಧ್ವನಿ ಇವುಗಳೇ ಆ ಹತ್ತುಬಗೆಗಳು). ಬಳಿಕ ಆತ್ಮಜ್ಞಾನವುಂಟಾಗಿ ಅದರಿಂದ ಸಂಸಾರ ದುಃಖವು ತೊಲಗುವುದು. ॥೪೨-೪೩॥

ಇಲ್ಲಿಂದ ಮುಂದೆ ಉತ್ಕರ್ಷಣಪ್ರಾಣಾಯಾಮದ ವಿಚಾರವನ್ನು ಶಿವನು ಹೇಳುತ್ತಾನೆ. ಎಲೈ ಬೃಹಸ್ಪತಿಯೇ, ಸೀವನೀ ಎಂಬ ನಾಳವನ್ನು ಎರಡು ಹಿಮ್ಮಡಿಗಳಿಂದಲೂ ಒತ್ತಿ ಶಿವ, ವಿನಾಯಕ, ಸರಸ್ವತೀ, ಇವರನ್ನು ಸ್ಮರಿಸಿ ಲಿಂಗನಾಳಗಳಿಂದ ವಾಯುವನ್ನು ಆಕರ್ಷಿಸಿ, ಬಿಂದುಸಹಿತವಾದ ಅಗ್ನಿಬೀಜವನ್ನೂ ಪ್ರಣವವನ್ನೂ ಏಕಾಗ್ರತೆಯಿಂದ ಜಪಿಸುತ್ತ ಮೂಲಾಧಾರದನಡುವೆ ಆ ವಾಯುವನ್ನು ನಿಲ್ಲಿಸಬೇಕು. ॥೪೪-೪೫-೪೬-೪೭॥

ಹೀಗೆ ಮೂಲಾಧಾರದಲ್ಲಿ ವಾಯುವನ್ನು ನಿರೋಧಗೊಳಿಸಿದರೆ ಅಲ್ಲಿದ್ದ ಅಗ್ನಿಯು ಹೆಚ್ಚು ಪ್ರಕಾಶವಾಗಿ ಕುಂಡಲಿನೀ ಎಂಬ ಸರ್ಪಾಕಾರವಾದ ನಾಳವನ್ನು ಸುಡುವುದು. ಇದರಿಂದ ಸುಷುಮ್ನಾನಾಡಿಯ ದ್ವಾರವು ತೆರೆಯುವುದು. ಆಗ ಆ

ಏವಮುಭ್ಯಸತಸ್ತಸ್ಯ ಜಿತೋ ವಾಯುರ್ಭವೇದ್ಧ್ರುವಂ ।
ಪ್ರಸ್ವೇದಃ ಪ್ರಥಮಃ ಪಶ್ಚಾತ್ಕಂಪನಂ ಮುನಿಸತ್ತಮ ॥೪೯॥

ಉತ್ಥಾನಂ ಚ ಶರೀರಸ್ಯ ಚಿಹ್ನಮೇತಜ್ಜಿತೇಽನಿಲೇ ।
ಏವ ಮಭ್ಯಸತಸ್ತಸ್ಯ ಮೂಲರೋಗೋ ವಿನಶ್ಯತಿ ॥೫೦॥

ವಾಯುವು ಅಗ್ನಿಯೊಡನೆ ಸುಷುಮ್ನಾನಾಡಿಯೊಳಕ್ಕೆ ಪ್ರವೇಶಿಸುವುದು. ॥೪೮॥ ಹೀಗೆಯೇ ಅಭ್ಯಾಸಮಾಡುತ್ತಿದ್ದ ಮನುಷ್ಯನಿಗೆ ಪ್ರಾಣವಾಯುವನ್ನು ಜಯಿಸುವ ಶಕ್ತಿಯುಂಟಾಗುವುದು. ಪ್ರಾಣವಾಯುವನ್ನು ಜಯಿಸಿದುದಕ್ಕೆ ಮೂರು ಮುಖ್ಯ ವಾದ ಗುರುತುಗಳು ಶರೀರದಲ್ಲಿ ಕಂಡುಬರುವುವು. ೧ ಮೈಯೆಲ್ಲವೂ ಬೆವರುವುದು. ೨ ಅವಯವಗಳೆಲ್ಲವೂ ನಡುಗುತ್ತಿರುವುದು. ೩ ಶರೀರವು ಲಘುವಾಗಿ ನೆಲದಿಂದ ಸ್ವಲ್ಪ ಮೇಲಕ್ಕೇಳುವುದು. ಈ ರೀತಿಯಲ್ಲಿ ಉತ್ಕರ್ಷಪ್ರಾಣಾಯಾಮವನ್ನು ಮಾಡುವವನ ಮೂಲವ್ಯಾಧಿ, ಭಗಂದರ, ಎಂಬ ರೋಗಗಳಿದ್ದರೆ ಅಥವಾ ಇತರ ಯಾವ ರೋಗಗಳಿದ್ದರೂ ಅವು ನಾಶವಾಗುವುವು. ಮತ್ತು ಅಲ್ಪಪಾಪಗಳೂ ಮಹಾ ಪಾಪಗಳೂ ಕೂಡ ನಾಶವಾಗುವುವು.

ಉತ್ಕರ್ಷಪ್ರಾಣಾಯಾಮದ ವಿಚಾರದಲ್ಲಿ ಆಗಮಶಾಸ್ತ್ರದಲ್ಲಿ ಹೆಚ್ಚು ವಿಷಯ ವನ್ನು ಹೇಳಿರುವುದು. ಇಡಾ ನಾಡಿಯ ಕೆಳಭಾಗದಲ್ಲಿರುವ ಸೀವನೀ ಎಂಬ ಸೂಕ್ಷ್ಮ ವಾದ ಅವಯವವನ್ನು ಎಡದ ಹಿಮ್ಮಡಿಯಿಂದ ಒತ್ತಿ, ಆ ಹಿಮ್ಮಡಿಯ ಮೇಲೆ ಬಲದ ಹಿಮ್ಮಡಿಯನ್ನು ಸಮವಾಗಿಟ್ಟು, ಮಂಡಿ ಮತ್ತು ತೊಡೆಗಳ ಸಂಧಿ ಪ್ರದೇಶದಲ್ಲಿ ಸ್ವಲ್ಪವೂ ಅವಕಾಶವಿಲ್ಲದಂತೆ ಸಮವಾಗಿ ಕುಳಿತುಕೊಂಡು ನಾಲ್ಕು ದಲಗಳುಳ್ಳ ಮೂಲಾಧಾರ ಚಕ್ರದ ನಡುವೇ ಇರುವ ರತ್ನಸಮಾನವಾದ ಕೇಸರಗಳಲ್ಲಿ ಮನಸ್ಸನ್ನು ನೆಲೆಗೊಳಿಸಿ ಪ್ರಣವವನ್ನು ಧ್ಯಾನಮಾಡುತ್ತಾ ಬಲದ ಹಿಮ್ಮಡಿಯನ್ನು ಕಣ್ಣಿನಿಂದ ನೋಡುತ್ತ, ಆ ಮೂಲಾಧಾರ ಚಕ್ರದಲ್ಲಿ ಮನೋಲಯವಾಗುವ ಪರ್ಯಂತವಾಗಿ ವಾಯುನಿರೋಧವನ್ನು ಮಾಡಬೇಕು. ಈ ಯೋಗದಿಂದ ಅಪಾನವಾಯುವು ಯೋಗಿಯ ಮೂಲಾಧಾರ ಚಕ್ರದ ಆಗ್ನೇಯ ದಿಕ್ಕಿನ ತ್ರಿಕೋಣಮಂಡಲದಲ್ಲಿರುವ, ಶರೀರದಲ್ಲಿರುವ ಅನ್ನಪಾನಗಳನ್ನು ಪಚನಮಾಡುವ, ಅಗ್ನಿಸ್ಥಾನಕ್ಕೆ ಹೋಗುವುದು. ಯೋಗಿಯು ಪ್ರಣವಧ್ಯಾನವನ್ನು ಮಾಡುತ್ತಾ ಆ ಸ್ಥಳದಲ್ಲಿಯೇ ಪ್ರಾಣವಾಯು ವನ್ನೂ ಸೇರಿಸಿ ಚಲಿಸದಂತೆ ಅಗ್ನಿಜಯ ಪರ್ಯಂತವಾಗಿ ಅದನ್ನು ಅಲ್ಲಿಯೇ ನಿರೋಧಿಸ ಬೇಕು. ಅಗ್ನಿಜಯವುಂಟಾಗುತ್ತಲೂ ಆ ಅಗ್ನಿಮಂಡಲದಿಂದ ಮೇಲಕ್ಕೆ ನಾಭಿ

ಭಗಂದರಂ ಚ ನಷ್ಟಂ ಸ್ಯಾತ್ತಥಾಽನ್ಯೇ ವ್ಯಾಧಯೋ ಮುನೇ ।
ಪಾತಕಾನಿ ವಿನಶ್ಯಂತಿ ಕ್ಷುದ್ರಾಣಿ ಚ ಮಹಾಂತಿ ಚ ॥೫೧॥

ನಷ್ಟೇ ಪಾಪೇ ವಿಶುದ್ಧಂ ಸ್ಯಾಚ್ಚಿತ್ತದರ್ಪಣಮುತ್ತಮಂ ।
ಪುನರ್ಬ್ರಹ್ಮಾದಿ ಲೋಕೇಭ್ಯೋ ವೈರಾಗ್ಯಂ ಜಾಯತೇ ಹೃದಿ ॥೫೨॥

ವಿರಕ್ತಸ್ಯ ತು ಸಂಸಾರಾ ಜ್ಜ್ಞಾನಂ ಕೈವಲ್ಯಸಾಧನಂ ।
ತೇನ ಪಾಶಾಪ ಹಾನಿಃ ಸ್ಯಾಜ್ಜ್ಞಾತ್ವಾ ದೇವ ಮಿತಿ ಶ್ರುತಿಃ ॥೫೩॥

ಮಂಡಲದಿಂದ ಕೆಳಭಾಗದಲ್ಲಿ ಆರು ದಲಗಳಿಂದ ಕೂಡಿದ ಸ್ವಾಧಿಷ್ಠಾನ ಚಕ್ರದ ಮಧ್ಯಭಾಗಕ್ಕೆ ಅಗ್ನಿಯೊಡನೆ ಕೂಡಿದ ಪ್ರಾಣಾಪಾನ ವಾಯುಗಳನ್ನು ತಂದು ನಿಲ್ಲಿಸ ಬೇಕು. ಅದುವರೆಗೂ ಯೋಗಿಯು ತನ್ನ ನಾಭಿಯನ್ನು ನೋಡುತ್ತಾ ಮನಸ್ಸಿನಲ್ಲಿ ಪ್ರಣವವನ್ನು ಸ್ಮರಿಸುತ್ತಿರಬೇಕು. ಸ್ವಾಧಿಷ್ಠಾನ ಚಕ್ರದಲ್ಲಿ ಮನೋಲಯವಾಗುವ ವರೆಗೂ ವಾಯು ನಿರೋಧವನ್ನು ಮಾಡಬೇಕು. ಆಮೇಲೆ ಸುತ್ತಲೂ ಇರುವ ಅಗ್ನಿಯಿಂದ ಕುಂಡಲಿನೀ ಶಕ್ತಿಯ ಪ್ರಬೋಧವಾಗುವುದು. ಹಾಗೆ ಎಚ್ಚರವನ್ನು ಹೊಂದಿದ ಕುಂಡಲಿಯು ನಾಭಿಕಂದದ ರಂಧ್ರದಿಂದ ತನ್ನ ಹೆಡೆಯನ್ನು ತೆಗೆದು ಬಿಡುವುದು. ಆಗ ಸುಷುಮ್ನಾ ನಾಡಿಯ ಬುಡದಲ್ಲಿರುವ ರಂಧ್ರದ ಬಾಯಿಯು ತೆರೆಯುವುದು. ಒಡನೆಯೇ ಮೆಲ್ಲಗೆ ಅಗ್ನಿಯನ್ನೂ ವಾಯುವನ್ನೂ ಸುಷುಮ್ನಾ ನಾಡಿಯೊಳಕ್ಕೆ ತುಂಬಬೇಕು. ಅದು ನೆತ್ತಿಗೆ ಹೋಗುವವರೆಗೂ ಪ್ರಣವವನ್ನು ಸ್ಮರಿಸುತ್ತಿರಬೇಕು. ಅಗ್ನಿಸಹಿತವಾದ ಪ್ರಾಣವಾಯುವನ್ನು ಸುಷುಮ್ನಾ ನಾಡಿಯಿಂದ ನೆತ್ತಿಗೆ ಸೇರುವ ರಂಧ್ರದ ತುದಿಯಲ್ಲಿ ನಿಶ್ಚಲವಾಗಿ ನಿಲ್ಲಿಸಿದರೆ ದೇಹದ ಸರ್ವಾಂಗ ಗಳಲ್ಲಿಯೂ ಪ್ರಾಣವಾಯುವು ಅಗ್ನಿಯೊಡನೆ ತುಂಬಿಕೊಳ್ಳುವುದು. ಆ ಸಮಯ ದಲ್ಲಿ ನೆತ್ತಿಯಲ್ಲಿ ಆಕಾಶದಲ್ಲಿ ಸೂರ್ಯನು ಕಾಣುವಂತೆ ಆತ್ಮನು ಪ್ರಕಾಶವಾಗಿ ಕಾಣುವನು. ॥೪೮-೪೯-೫೦-೫೧॥

ಪಾಪಗಳೆಲ್ಲ ನಾಶವಾಗುತ್ತಲೂ ಮನಸ್ಸೆಂಬ ಕನ್ನಡಿಯು ಪರಿಶುದ್ಧವಾಗು ವುದು. ಅಂತಹ ಮನಸ್ಸುಳ್ಳ ಜೀವನಿಗೆ ಬ್ರಹ್ಮಾದಿಲೋಕಗಳ ಸುಖವೂ ಬೇಕಾಗುವು ದಿಲ್ಲ. ಶುದ್ಧವಾದ ವೈರಾಗ್ಯವುಂಟಾಗುವುದು. ॥೫೨॥

ಸಂಸಾರದ ಪೆಸೆಯಿಂದ ವಿರಕ್ತನಾದ ಮನುಜನಿಗೆ ವೇದಾಂತಶ್ರವಣಾದಿಗಳಿಂದ ಮೋಕ್ಷಸಾಧಕನಾದ ಜ್ಞಾನವುಂಟಾಗುವುದು. ಅದರಿಂದ ಸಂಸಾರ ಪಾಶವು ನಾಶವಾಗಿ

ಅಹೋ ಜ್ಞಾನಾಮೃತಂ ಮುಕ್ತ್ವಾ ಮಾಯಯಾ ಪರಿಮೋಹಿತಾಃ ।
ಪರಿಭ್ರಮಂತಿ ಸಂಸಾರೇ ಸದಾಽಸಾರೇ ನರಾಧಮಾಃ ॥೫೪॥

ಜ್ಞಾನಾಮೃತ ರಸೋ ಯೇನ ಸಕೃದಾಸ್ವಾದಿತೋ ಭವೇತ್ ।
ಸ ಸರ್ವಕಾರ್ಯ ಮುತ್ಸೃಜ್ಯ ತತ್ರೈವ ಪರಿಧಾವತಿ ॥೫೫॥

ಜ್ಞಾನಾಮೃತರಸಃ ಪ್ರಾಯಸ್ತೇನ ನಾಸ್ವಾದಿತೋಭವೇತ್ ।
ಯೋಽಮಾಽನ್ಯತ್ರಾಪಿ ರಮತೇ ತದ್ವಿಹಾಯೈವ ದುರ್ಮತಿಃ ॥೫೬॥

ಜ್ಞಾನಸ್ವರೂಪಮೇವಾಹುರ್ಜಗದೇತದ್ವಿಚಕ್ಷಣಾಃ ।
ಅರ್ಥಸ್ವರೂಪ ಮಜ್ಞಾನಾತ್ಪಶ್ಯಂತ್ಯನ್ಯೇ ಕುದೃಷ್ಟಯಃ ॥೫೭॥

ಯಜ್ಞೈರ್ದೇವತ್ವಮಾಪ್ನೋತಿ ತಪೋಭಿರ್ಬ್ರಹ್ಮಣಃ ಪದಂ ।
ದಾನೈರ್ಭೋಗಾ ನವಾಪ್ನೋತಿ ಜ್ಞಾನಾದ್ಬ್ರಹ್ಮಾಧಿಗಚ್ಛತಿ ॥೫೮॥

ಹೋಗುವುದೆಂದು ವೇದದಲ್ಲಿ ಹೇಳಿರುವುದು. ಶ್ವೇತಾಶ್ವತರೋಪನಿಷತ್ತಿನಲ್ಲಿ "ಜ್ಞಾತ್ವಾದೇವಂ ಸರ್ವಪಾಶಾಪಹಾನಿಃ ಕ್ಷೀಣೈಃ ಕ್ಲೇಶೈರ್ಜನ್ಮಮೃತ್ಯು ಪ್ರಹಾಣಿಃ" ಎಂದು ಹೇಳಿದೆ. ||೫೩||

ಅಯ್ಯೋ! ಇಂತಹ ಜ್ಞಾನವೆಂಬ ಅಮೃತವನ್ನು ಬಿಟ್ಟು ನೀಚರಾದ ಮನುಜರು ಅಜ್ಞಾನದಿಂದ ಮೋಹಿತರಾಗಿ ಅಸಾರವಾದ ಸಂಸಾರದಲ್ಲಿ ಯಾವಾಗಲೂ ತೊಳಲುತ್ತಿರುವರು! ||೫೪||

ಒಂದಾವೃತ್ತಿ ಯಾವ ಮನುಜನು ಜ್ಞಾನವೆಂಬ ಅಮೃತದ ರುಚಿಯನ್ನು ನೋಡುವನೋ ಅವನು ಎಲ್ಲ ಕೆಲಸಗಳನ್ನೂ ಬಿಟ್ಟು ಆ ಅಮೃತಾಸ್ವಾದನೆಗಾಗಿಯೇ ಓಡುತ್ತಿರುವನು. ||೫೫||

ಜ್ಞಾನವೆಂಬ ಅಮೃತದ ರುಚಿಯನ್ನು ಕಾಣದ ಮೂಢನು ಅದನ್ನು ಬಿಟ್ಟು ಲೌಕಿಕವಾದ ಸುಖಾನುಭವಗಳಿಂದ ಸಂತೋಷಪಡುವನು. ||೫೬||

ಜ್ಞಾನಿಗಳಾದವರು ಪರಮಾತ್ಮನಿಂದ ಕಲ್ಪಿತವಾದ ಈ ಜಗತ್ತನ್ನು ಪರಮಾತ್ಮನ ಸ್ವರೂಪವೆಂದೇ ಹೇಳುವರು. ಮೂಢಮನುಜರು ಅಜ್ಞಾನದಿಂದ ಈ ಪ್ರಪಂಚವನ್ನು ಪದಾರ್ಥಗಳಿಂದ ಉತ್ಪತ್ತಿಯಾಯಿತೆಂದು ತಿಳಿದು ವಸ್ತುಸ್ವರೂಪವೆಂದು ಹೇಳುವರು. ||೫೭||

ಮನುಜನು ಯಜ್ಞಾದಿಕರ್ಮಗಳಿಂದ ದೇವತ್ವವನ್ನು ಹೊಂದುವನು. ತಪಸ್ಸಿ

ಕರ್ಮಣಾಕೇಚಿದಿಚ್ಛಂತಿ ಕೈವಲ್ಯಂ ಮುನಿಸತ್ತಮ ।
ತೇ ಮೂಢಾ ಮುನಿಶಾರ್ದೂಲ ಪ್ಲವಾ ಹ್ಯೇತ ಇತಿ ಶ್ರುತಿಃ ॥೫೯॥

ಆತ್ಮೈವೇದಂ ಜಗತ್ಸರ್ವಮಿತಿ ಜಾನಂತಿ ಪಂಡಿತಾಃ ।
ಅಜ್ಞಾನೇನಾವೃತಾ ಮರ್ತ್ಯಾ ನ ವಿಜಾನಂತಿ ಶಂಕರಂ ॥೬೦॥

ಅಜ್ಞಾನಪಾಶಬದ್ಧತ್ವಾದಮುಕ್ತಃ ಪುರುಷಃ ಸ್ಮೃತಃ।
ಜ್ಞಾನಾತ್ತಸ್ಯ ನಿವೃತ್ತಿಃ ಸ್ಯಾತ್ಪ್ರಕಾಶಾತ್ತಮಸೋ ಯಥಾ ॥೬೧॥

ನಿಂದ ಬ್ರಹ್ಮನ ಪದವಿಯನ್ನು ಪಡೆವನು. ದಾನದಿಂದ ಸುಖಾನುಭವಗಳನ್ನು ಪಡೆವನು. ಜ್ಞಾನದಿಂದ ಬ್ರಹ್ಮಸಾಕ್ಷಾತ್ಕಾರವನ್ನು ಪಡೆವನು. ॥೫೮॥

ಕೆಲವರು ಕರ್ಮದಿಂದಲೇ ಮೋಕ್ಷವುಂಟಾಗುವುದೆಂಬ ಅಪೇಕ್ಷೆಯಿಂದ ಕರ್ಮಾಸಕ್ತರಾಗಿಯೇ ಇರುವರು. ಅವರು ಅಜ್ಞಾನಿಗಳೆನಿಸುವರು. ಏತಕ್ಕೆಂದರೆ, ಎಲೈ ತಪಸ್ವಿಶ್ರೇಷ್ಠನೇ, ಮುಂಡಕೋಪನಿಷತ್ತಿನಲ್ಲಿ "ಪ್ಲವಾಹ್ಯೇತೇ ಅದೃಢಾಯಜ್ಞರೂಪಾ ಅಷ್ಟಾದಶೋಕ್ತಮವರಂ ಯೇಷು ಕರ್ಮ । ಏತಚ್ಛ್ರೇಯೋಽಭಿನಂದಂತಿ ಮೂಢಾ ಜರಾಮೃತ್ಯುಂತೇ ಪುನರೇವಾಪಿಯಂತಿ ॥" ಎಂದು ಹದಿನಾರು ಜನ ಋತ್ವಿಕ್ಕುಗಳು ಯಜಮಾನ ಪತ್ನಿಯೆಂಬ ಹದಿನೆಂಟು ಜನರು ಮಾಡಿದ ಯಜ್ಞವೆಂಬ ಕರ್ಮಫಲವು ಸ್ಥಿರವಾದುದಲ್ಲವಾದುದರಿಂದ ನಾಶವನ್ನು ಹೊಂದುವುದು. ಇಂತಹ ಕರ್ಮವನ್ನು ಶ್ರೇಯಸ್ಸಾಧನವಾದುದೆಂದು ಯಾರು ಒಪ್ಪುವರೋ ಅಂತಹ ಮೂಢರು ಯಜ್ಞಕರ್ಮಫಲವಾದ ಸ್ವರ್ಗಸುಖವನ್ನನುಭವಿಸಿದ ಮೇಲೆ ಮತ್ತೆ ಜನನಮರಣರೂಪವಾದ ಸಂಸಾರದುಃಖವನ್ನನುಭವಿಸುವರು. ಎಂದು ಹೇಳಿರುವುದು. ॥೫೯॥

ಜ್ಞಾನಿಗಳು ಈ ಸಮಸ್ತ ಜಗತ್ತೂ ಆತ್ಮಸ್ವರೂಪವಾದುದೆಂದು ತಿಳಿಯುವರು. ಅಜ್ಞಾನಿಗಳು ಮಾಯೆಯಿಂದ ಮೋಹಿತರಾಗಿ ಪರಮಾತ್ಮನಾದ ಶಿವನನ್ನು ತಿಳಿಯಲಾರರು. ॥೬೦॥

ಅಜ್ಞಾನವೆಂಬ ಹಗ್ಗದ ಕಟ್ಟಿಗೆ ಸಿಕ್ಕಿಕೊಂಡಿರುವುದರಿಂದ ಮನುಜನು ಮುಕ್ತನಾಗಲಿಲ್ಲ. ಪ್ರಕಾಶದಿಂದ ಕತ್ತಲೆಯು ಹೇಗೆ ಹೋಗುವುದೋ ಹಾಗೆ ಜ್ಞಾನದಿಂದ ಅಜ್ಞಾನವು ಹೋಗುವುದು. ॥೬೧॥

ಆತ್ಮಸ್ವರೂಪವಿಜ್ಞಾನಾದಜ್ಞಾನಸ್ಯ ಪರೀಕ್ಷಯಾ ।
ಕ್ಷೀಣೇಽಜ್ಞಾನೇ ಮಹಾಪ್ರಾಜ್ಞ ರಾಗಾದೀನಾಂ ಪರಿಕ್ಷಯಃ ॥೬೨॥

ರಾಗಾದ್ಯಸಂಭವೇ ಪ್ರಾಜ್ಞ ಪುಣ್ಯಪಾಪೋಪಮರ್ದನಂ ।
ತಯೋರ್ನಾಶೇ ಶರೀರೇಣ ನ ಪುನಃ ಸಂಪ್ರಯುಜ್ಯತೇ ॥೬೩॥

ಅಶರೀರೋ ಮಹಾನಾತ್ಮಾ ಸುಖ ದುಃಖೈರ್ನಬಾಧ್ಯತೇ ।
ಕ್ಲೇಶಮುಕ್ತಃ ಪ್ರಸನ್ನಾತ್ಮಾ ಮುಕ್ತ ಇತ್ಯುಚ್ಯತೇ ಬುಧೈಃ ॥೬೪॥

ತಸ್ಮಾದಜ್ಞಾನಮೂಲಾನಿ ಸರ್ವದುಃಖಾನಿ ದೇಹಿನಾಂ ।
ಜ್ಞಾನೇನೈವ ನಿವೃತ್ತಿಃ ಸ್ಯಾದಜ್ಞಾನಸ್ಯ ನ ಕರ್ಮಭಿಃ ॥೬೫॥

ನಾಸ್ತಿ ಜ್ಞಾನಾತ್ಪರಂ ಕಿಂಚಿತ್ಪವಿತ್ರಂ ಪಾಪನಾಶನಂ ।
ತದಭ್ಯಾಸಾದೃತೇ ನಾಸ್ತಿ ಸಂಸಾರಚ್ಛೇದಕಾರಣಂ ॥೬೬॥

ಆತ್ಮಸ್ವರೂಪವೆಂಬ ವಿಜ್ಞಾನದಿಂದ ಅಜ್ಞಾನದ ಸ್ವರೂಪವನ್ನು ವಿಮರ್ಶಿಸುತ್ತಿರುವಾಗ ಮಿಥ್ಯಾರೂಪವಾದ ಆ ಅಜ್ಞಾನವು ನಾಶವಾಗುತ್ತಿರಲಾಗಿ ರಾಗಾದಿದೋಷಗಳೂ ನಾಶವನ್ನು ಹೊಂದುವುವು. ||೬೨||

ಬುದ್ಧಿವಂತನಾದ ಬೃಹಸ್ಪತಿಯೇ, ರಾಗಾದಿದೋಷಗಳಿಲ್ಲದ ಮೇಲೆ ಪುಣ್ಯಪಾಪಗಳೂ ಇಲ್ಲದೇ ಹೋಗುವುವು. ಪುಣ್ಯಪಾಪರೂಪವಾದಕಾರಣ ಫಲಗಳಿಲ್ಲದಮೇಲೆ ಪುನಃ ಶರೀರವೇ ಬರುವುದಿಲ್ಲ. ಶರೀರವಿಲ್ಲದ ಮಹಾಮಹಿಮನಾದ ಆತ್ಮನಿಗೆ ಸುಖದುಃಖಗಳ ಬಾಧೆಯೇ ಇರುವುದಿಲ್ಲ. ಯಾವಾಗ ಕ್ಲೇಶಗಳೂ ಬಿಟ್ಟುಹೋದವೋ ಆಗಲೇ ಪರಿಶುದ್ಧನಾದ ಆತ್ಮನನ್ನು ವಿದ್ವಾಂಸರು ಮುಕ್ತನೆಂದು ಹೇಳುವರು. ||೬೩-೬೪||

ಆದುದರಿಂದ ಶರೀರವುಳ್ಳ ಮನುಜರಿಗೆ ಬರುವ ಸಮಸ್ತ ದುಃಖಗಳಿಗೂ ಅಜ್ಞಾನವೇ ಕಾರಣವು. ಆ ಅಜ್ಞಾನವು ಜ್ಞಾನದಿಂದಲೇ ತೊಲಗಬೇಕು. ಕರ್ಮಗಳಿಂದ ಎಂದಿಗೂ ಅದು ತೊಲಗುವುದಿಲ್ಲ. ||೬೫||

ಜ್ಞಾನಕ್ಕಿಂತಲೂ ಶ್ರೇಷ್ಠವೂ, ಪರಿಶುದ್ಧವೂ, ಪಾಪನಾಶಕವೂ ಆದುದು ಮತ್ತೊಂದಿರುವುದಿಲ್ಲ. ಆ ಜ್ಞಾನಾಭ್ಯಾಸವನ್ನೇ ಬಿಟ್ಟು ಮತ್ತೊಂದರಿಂದ ಜನನಮರಣದುಃಖರೂಪವಾದ ಸಂಸಾರವು ನಾಶವಾಗುವುದಿಲ್ಲ. ಗೌತಮಸೂತ್ರದಲ್ಲಿ, ದುಃಖಜನ್ಮಪ್ರವೃತ್ತಿದೋಷಮಿಥ್ಯಾ ಜ್ಞಾನಾನಾಮುತ್ತರೋತ್ತರಾಪಾಯೇತದನಂತರಾ

ಸರ್ವಮುಕ್ತಂ ಸಮಾಸೇನ ತವಸ್ನೇಹಾನ್ಮಹಾಮುನೇ ।
ಗೋಪನೀಯಂ ತ್ವಯೈವೈಷ ವೇದಾಂತಾರ್ಥೋ ಮಹಾಮುನೇ ॥೬೭॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ ಪ್ರಾಣಾಯಾಮವಿಧಿನಿರೂಪಣಂ ನಾಮ ಷೋಡಶೋಽಧ್ಯಾಯಃ

ಪಾಯಾದಪವರ್ಗಃ || ಎಂದು ಮಿಥ್ಯಾಜ್ಞಾನ, ದೋಷ, ಪ್ರವೃತ್ತಿ, ಜನ್ಮ, ದುಃಖ ಇವುಗಳಲ್ಲಿ ಕ್ರಮವಾಗಿ ಒಂದು ಹೋದಮೇಲೆ ಮತ್ತೊಂದು ಹೋಗುತ್ತಾ ಕೊನೆಯಲ್ಲಿ ದುಃಖವು ನಾಶವಾದ ಮೇಲೆ ಮೋಕ್ಷವು ಲಭಿಸುವುದೆಂದು ಹೇಳಿರುವುದು. ||೬೬||

ಮಹಾತಪಸ್ವಿಯಾದ ಬೃಹಸ್ಪತಿಯೇ, ನಿನ್ನಲ್ಲಿರುವ ಪ್ರೀತಿಯಿಂದ ಎಲ್ಲವನ್ನೂ ಸಂಗ್ರಹಿಸಿ ಹೇಳಿರುವೆನು. ಈ ವೇದಾಂತಾರ್ಥವನ್ನು ನೀನು ಅತ್ಯಂತ ಗೋಪ್ಯದಲ್ಲಿಡಬೇಕು. ಎಂದರೆ ಮೂರ್ಖರಿಗೆ ಇದನ್ನು ಹೇಳಬಾರದೆಂದು ಅಭಿಪ್ರಾಯವು. "ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ" ಭ. ಗೀ. ೩.೨೬. ಎಂದು ಗೀತೆಯಲ್ಲಿ ಹೇಳಿರುವುದು. ||೬೭||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ಪ್ರಾಣಾಯಾಮದ ಸ್ವರೂಪ, ಫಲಗಳನ್ನು ವಿವರಿಸಿರುವ
ಹದಿನಾರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಜ್ಞಾನಯೋಗಖಂಡಂ

|| ಸಪ್ತಮೋಽಧ್ಯಾಯಃ ||

ಹದಿನೇಳನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಪ್ರತ್ಯಾಹಾರಂ ಮಹಾಮುನೇ ।
ಇಂದ್ರಿಯಾಣಾಂ ವಿಚರತಾಂ ವಿಷಯೇಷು ಸ್ವಭಾವತಃ ॥೧॥

ಬಲಾದಾಕರ್ಷಣಾದೇಷಾಂ ಪ್ರತ್ಯಾಹಾರಃ ಸ ಉಚ್ಯತೇ ।
ಯದ್ಯತ್ಪಶ್ಯತಿ ತತ್ಸರ್ವಂ ಬ್ರಹ್ಮಪಶ್ಯೇತ್ಸಮಾಹಿತಃ ॥೨॥
ಪ್ರತ್ಯಾಹಾರೋ ಭವತ್ಯೇಷ ಬ್ರಹ್ಮವಿದ್ಭಿಃ ಪುರೋದಿತಃ ।

ಪ್ರಾಣವಾಯುವನ್ನು ಜಯಿಸಿದವರಿಗೆ ಇಂದ್ರಿಯಗಳನ್ನು ಕಟ್ಟಿನಲ್ಲಿರಿಸುವ ಪ್ರತ್ಯಾಹಾರವೆಂಬ ಯೋಗಾಂಗವು ಸಾಧ್ಯವಾಗುವುದರಿಂದ ಈಶ್ವರನು ಬೃಹಸ್ಪತಿಯನ್ನು ಕುರಿತು ಈ ಅಧ್ಯಾಯದಲ್ಲಿ ಪ್ರತ್ಯಾಹಾರವೆಂಬ ಯೋಗಾಂಗವನ್ನು ವಿವರಿಸುತ್ತ ಮೊದಲು ಅದರ ಲಕ್ಷಣವನ್ನು ಹೇಳುವನು. ಇಂದ್ರಿಯಗಳು ಸ್ವಾಭಾವಿಕವಾಗಿ ವಿಷಯಗಳ ಕಡೆಗೆ ಹೋಗುತ್ತಿರುವುವು. ಆ ವಿಷಯಗಳ ಕಡೆಗೆ ಹೋಗುತ್ತಿರುವ ಇಂದ್ರಿಯಗಳನ್ನು ಬಲಾತ್ಕಾರವಾಗಿ ಹಿಂತಿರುಗಿಸುವುದು ಪ್ರತ್ಯಾಹಾರವೆನಿಸುವುದು.||೧||

ಹೀಗೆ ಇಂದ್ರಿಯಗಳನ್ನು ಬಲಾತ್ಕಾರವಾಗಿ ತಡೆಯುವುದಕ್ಕಿಂತಲೂ ಪ್ರಪಂಚದಲ್ಲಿರುವ ಸಮಸ್ತ ವಸ್ತುಗಳೂ ಜ್ಞಾನಸ್ವರೂಪನಾದ ಪರಮಾತ್ಮನಿಗಿಂತ ಬೇರೆಯಾದುವುಗಳಲ್ಲ ಎಂದು ಸಮಸ್ತವನ್ನೂ ಪರಬ್ರಹ್ಮಸ್ವರೂಪವಾಗಿ ಅನುಸಂಧಾನ

ಯದಿ ಶುದ್ಧಮಶುದ್ಧಂ ವಾ ಕರೋತ್ಯಾ ಮರಣಾಂತಿಕಂ ॥೩॥

ತತ್ಸರ್ವಂ ಬ್ರಹ್ಮಣೇ ಕುರ್ಯಾತ್ಪ್ರತ್ಯಾಹಾರೋಽಯ ಮುಚ್ಯತೇ ।
ಅಥವಾ ನಿತ್ಯಕರ್ಮಾಣಿ ಬ್ರಹ್ಮಾರಾಧನ ಬುದ್ಧಿತಃ ॥೪॥

ಕಾಮ್ಯಾನಿ ಚ ತಥಾ ಕುರ್ಯಾತ್ಪ್ರತ್ಯಾಹಾರಃ ಸ ಉಚ್ಯತೇ ।
ಅಥವಾ ವಾಯುಮಾಕೃಷ್ಯ ತತ್ತತ್ಸ್ಥಾನೇ ನಿರೋಧಯೇತ್ ॥೫॥

ದಂತಮೂಲಾ ತ್ತಥಾ ಕಂಠೇ ಕಂಠಾದುರಸಿಮಾರುತಂ ।
ಉರೋ ದೇಶಾತ್ಸಮಾಕೃಷ್ಯ ನಾಭಿ ಕಂದೇ ನಿರೋಧಯೇತ್ ॥೬॥

ನಾಭಿಕಂದಾತ್ಸಮಾಕೃಷ್ಯ ಕುಂಡಲ್ಯಾಂ ತು ನಿರೋಧಯೇತ್ ।
ಕುಂಡಲೀ ದೇಶತೋ ವಿದ್ವಾನ್ಮೂಲಾಧಾರೇ ನಿರೋಧಯೇತ್ ॥೭॥

ತಥಾಽಪಾನೇ ಕಟಿದ್ವಂದ್ವೇ ತಥೋರುದ್ವಯ ಮಧ್ಯಮೇ ।
ತಥಾ ಜಾನುದ್ವಯೇ ಜಂಘೇ ಪಾದಾಂಗುಷ್ಠೇ ನಿರೋಧಯೇತ್॥೮॥
ಪ್ರತ್ಯಾಹಾರೋಽಯ ಮಿತ್ಯುಕ್ತಃ ಪ್ರತ್ಯಾಹಾರಪರೈಃ ಪುರಾ ।

ಮಾಡುವುದೇ ಪ್ರತ್ಯಾಹಾರವೆಂದು ಬ್ರಹ್ಮಜ್ಞಾನಿಗಳು ಹೇಳಿರುವರು. ಈ ವಿಷಯ ದಲ್ಲಿ ಮುಂಡಕೋಪನಿಷತ್ತಿನಲ್ಲಿ “ ಬ್ರಹ್ಮೈವೇದಮಮೃತಂ ಪುರಸ್ತಾದ್ಬ್ರಹ್ಮ ಪಶ್ಚಾದ್ಬ್ರಹ್ಮ ದಕ್ಷಿಣತಶ್ಚೋತ್ತರೇಣ । ಅಧಶ್ಚೋರ್ಧ್ವಂಚಪ್ರಸೃತಂ ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಂ” ಎಂದು ಹೇಳಿದೆ. ॥೨॥

ಅಥವಾ ಮನುಷ್ಯನು ತನ್ನ ಮರಣಕಾಲ ಪ್ರಾಪ್ತವಾಗುವವರೆಗೂ ಮಾಡುತ್ತಿರುವ ಶುಭಾಶುಭಕರ್ಮಗಳೆಲ್ಲವನ್ನೂ ಪರಬ್ರಹ್ಮನಿಗೆ ಸಮರ್ಪಿಸಿದರೂ, ಇಲ್ಲವೇ ನಿಷಿದ್ಧಕರ್ಮಗಳನ್ನು ಬಿಟ್ಟು ಮಿಕ್ಕ ನಿತ್ಯಕರ್ಮಗಳನ್ನೂ, ಕಾಮ್ಯಕರ್ಮಗಳನ್ನೂ ಫಲಾಪೇಕ್ಷೆಯಿಲ್ಲದೆ ಭಗವಂತನ ಪೂಜೆಯೆಂಬ ಬುದ್ಧಿಯಿಂದ ಅನುಷ್ಠಾನಮಾಡುತ್ತಿದ್ದರೂ, ಅದು ಪ್ರತ್ಯಾಹಾರವೆನಿಸುವುದು. ॥೩-೪॥

ಇಲ್ಲದಿದ್ದರೆ ಪ್ರಾಣವಾಯುವನ್ನು ಆಕರ್ಷಣೆಮಾಡಿ, ಕ್ರಮವಾಗಿ ಹಲ್ಲುಗಳ ಬುಡ, ಕುತ್ತಿಗೆ, ಎದೆ, ನಾಭಿಕಂದ, ಕುಂಡಲಿ, ಮೂಲಾಧಾರ, ಅಪಾನ, ಸೊಂಟ, ತೊಡೆಗಳು, ಮಂಡಿಗಳು, ಮೊಳಕಾಲು, ಕಾಲಿನ ಹೆಬ್ಬೆರಳುಗಳು, ಈ ಸ್ಥಳಗಳಲ್ಲಿ ಒಂದೊಂದು ಸ್ಥಳದಲ್ಲಿಯೂ ಚಿತ್ತದೊಡನೆ ಪ್ರಾಣವಾಯುವನ್ನು ನಿಲ್ಲಿಸಬೇಕು

ಏವಮಭ್ಯಾಸ ಯುಕ್ತಸ್ಯ ಪುರುಷಸ್ಯ ಮಹಾತ್ಮನಃ ॥೯॥
ಸರ್ವಪಾಪಾನಿ ನಶ್ಯಂತಿ ಭವರೋಗಾಶ್ಚ ಸುವ್ರತ ।
ಅಥವಾ ತವ ವಕ್ಷ್ಯಾಮಿ ಪ್ರತ್ಯಾಹಾರಾಂತರಂ ಮುನೇ ॥೧೦॥

ನಾಡೀಭ್ಯಾಂ ವಾಯುಮಾಕೃಷ್ಯ ನಿಶ್ಚಲಂ ಸ್ವಸ್ತಿಕಾಸನಃ ।
ಪೂರಯೇದನಿಲಂ ವಿದ್ವಾನಾಪಾದತಲ ಮಸ್ತಕಂ ॥೧೧॥

ಪಶ್ಚಾತ್ಪಾದದ್ವಯೇ ತದ್ವನ್ಮೂಲಾಧಾರೇ ತಥೈವ ಚ ।
ನಾಭಿಕಂದೇ ಚ ಹೃನ್ಮಧ್ಯೇ ಕಂಠಕೂಪೇ ಚ ತಾಲುಕೇ ॥೧೨॥

ಭ್ರುವೋರ್ಮಧ್ಯೇ ಲಲಾಟೇ ಚ ತಥಾ ಮೂರ್ಧನಿ ರೋಧಯೇತ್ ।
ಅಕಾರಂ ಚ ತಥೋಂಕಾರಂ ಮಕಾರಂ ಚ ತಥೈವ ಚ ॥೧೩॥
ನಕಾರಂ ಚ ಮಕಾರಂ ಚ ಶಿಕಾರಂ ಚ ವಕಾರಕಂ ।

ಪ್ರತ್ಯಾಹಾರವನ್ನು ತಿಳಿದವರು ಹೀಗೆ ಹಲ್ಲುಗಳ ಬುಡವನ್ನು ಮೊದಲುಮಾಡಿಕೊಂಡು ಪಾದಾಂಗುಷ್ಠದವರೆಗೆ ವಾಯುವನ್ನು ತೆಗೆದುಕೊಂಡು ಹೋಗುವ ಕ್ರಮವನ್ನು ಪ್ರತ್ಯಾಹಾರವೆಂದು ಹೇಳುವರು. ॥೫-೬-೭-೮॥

ತಪಸ್ವಿಯಾದ ಬೃಹಸ್ಪತಿಯೇ, ಈ ರೀತಿಯಲ್ಲಿ ಪ್ರತ್ಯಾಹಾರವನ್ನು ಅಭ್ಯಾಸ ಮಾಡುವ ಮಹಾತ್ಮನಾದ ಯೋಗಿಯ ಸಮಸ್ತ ಪಾಪಗಳೂ, ಸಮಸ್ತ ರೋಗಗಳೂ ನಾಶವಾಗುವುವು. ॥೯॥

ಎಲೈ ತಪಸ್ವಿಯೇ, ಮತ್ತೊಂದು ವಿಧವಾದ ಪ್ರತ್ಯಾಹಾರಕ್ರಮವನ್ನು ಹೇಳುವೆನು, ಕೇಳು. ಸ್ವಸ್ತಿಕಾಸನದಲ್ಲಿ ಚಲಿಸದಂತೆ ಕುಳಿತು ಇಡಾ ಪಿಂಗಳಾ ನಾಡಿಗಳಿಂದ ವಾಯುವನ್ನು ಶರೀರದೊಳಗೆ ಎಳೆದುಕೊಂಡು ಪಾದದಿಂದ ತಲೆಯ ಪರ್ಯಂತವಾಗಿ ತುಂಬಿಕೊಂಡು ಆಮೇಲೆ ಚಿತ್ತವನ್ನು ಕ್ರಮವಾಗಿ ಮುಂದೆ ಹೇಳುವ ಒಂಬತ್ತು ಸ್ಥಳಗಳಲ್ಲಿ ನಿಲ್ಲಿಸಿ ಒಂಬತ್ತು ಅಕ್ಷರಗಳನ್ನು ಜಪಿಸಬೇಕು. ಆ ಸ್ಥಳಗಳೂ, ಅಕ್ಷರಗಳೂ ಯಾವುವೆಂದರೆ? ಪಾದಗಳು, ಮೂಲಾಧಾರ, ನಾಭಿಕಂದ, ಹೃದಯಮಧ್ಯ, ಕಂಠ, ದವಡೆಗಳು, ಭ್ರೂಮಧ್ಯ, ಲಲಾಟ, ನೆತ್ತಿ, ಅ, ಉ, ಮ, ನ, ಮಃ, ಶಿ, ವಾ, ಯ, ಓಂ, ಇದು ಆರೋಹ ರೂಪವಾದ ಪ್ರತ್ಯಾಹಾರವು. ಇದನ್ನೇ ಆಗಮಶಾಸ್ತ್ರದಲ್ಲಿ ಬೇರೆ ವಿಧವಾಗಿ ಹೇಳಿರುವುದು.

ಯಕಾರಂ ಚ ತಥೋಂಕಾರಂ ಜಪೇದ್ಬುದ್ಧಿಮತಾಂ ವರ ॥೧೪॥

ಪ್ರತ್ಯಾಹಾರೋಽಯ ಮಿತ್ಯುಕ್ತಃ ಪಂಡಿತೈಃ ಪಂಡಿತೋತ್ತಮ ।
ಅಥವಾ ಮುನಿಶಾರ್ದೂಲ ಪ್ರತ್ಯಾಹಾರಂ ವದಾಮಿ ತೇ ॥೧೫॥

ದೇಹಾದ್ಯಾತ್ಮಮತಿಂ ವಿದ್ವಾನ್ಸಮಾಕೃಷ್ಯ ಸಮಾಹಿತಃ ।
ಆತ್ಮನಾಽಽತ್ಮನಿ ನಿರ್ದ್ವಂದ್ವೇ ನಿರ್ವಿಕಲ್ಪೇ ನಿರೋಧಯೇತ್ ೧೬॥

ಪ್ರತ್ಯಾಹಾರಃ ಸಮಾಖ್ಯಾತಃ ಸಾಕ್ಷಾದ್ವೇದಾಂತವೇದಿಭಿಃ ।
ಏವಮಭ್ಯಸತಸ್ತಸ್ಯ ನ ಕಿಂಚಿದಪಿ ದುರ್ಲಭಂ ॥೧೭॥
ತಸ್ಯ ಪುಣ್ಯಂ ಚ ಪಾಪಂ ಚ ನ ಹಿ ಸತ್ಯಂ ಬೃಹಸ್ಪತೇ ।

ಚಿತ್ತಾತ್ಮೈಕ್ಯಧೃತಸ್ಯ ಪ್ರಾಣಸ್ಯ ಸ್ಥಾನಸಂಗತಿಃ ಸ್ಥಾನಾತ್ ।
ಪ್ರತ್ಯಾಹಾರೋಜ್ಞೇಯಃ ಚೈತನ್ಯಯುತಸ್ಯ ಸಮ್ಯಗನಿಲಸ್ಯ ॥

ಎಂದು ಹೇಳಿ ಧಾರಣಾಸ್ಥಾನಗಳನ್ನು ಕೆಲವು ಹೆಚ್ಚಾಗಿ ಹೇಳಿರುವರು.

ಅಂಗುಷ್ಠಗುಲ್ಫಜಾನುದ್ವಿತಯಾನಿ ಗುದಂ ಚ ಸೀವನೀ ಮೇಢ್ರಂ ।
ನಾಭಿರ್ಹೃದಯಂಗ್ರೀವಾ ಸಲಂಬಿಕಾಗ್ರಂ ತಥೈವ ನಾಸಾಚ ॥
ಭ್ರೂಮಧ್ಯಲಲಾಟಾಗ್ರಂ ಸುಷುಮ್ನಾದ್ವಾದಶಾಂತ ಮಿತ್ಯೇವಂ ।
ಉತ್ಕ್ರಾಂತೌ ಪರಕಾಯಪ್ರವೇಶನೇ ಚಾಗತೌಪುನಃ ಸ್ವತನೌ ॥
ಸ್ಥಾನಾನಿಧಾರಣಾಯಾಃ ಪ್ರೋಕ್ತಾನಿಮರುತ್ಪ್ರಯೋಗ ವಿಧಿನಿಪುಣೈಃ ।

ಇಲ್ಲಿ ಹೇಳುವ ಹನ್ನೆರಡು ಸ್ಥಾನಗಳ ಧಾರಣೆಯ ಅಭ್ಯಾಸವು ಪರಕಾಯ ಪ್ರವೇಶಕ್ಕೂ ಮತ್ತೆ ತನ್ನ ದೇಹಕ್ಕೆ ಬರುವುದಕ್ಕೂ ಉಪಯೋಗವಾಗುವುದೆಂದು ಹೇಳಿರುವುದು. ॥೧೦-೧೧-೧೨-೧೩-೧೪॥

ಮುನಿಶ್ರೇಷ್ಠನಾದ ಬೃಹಸ್ಪತಿಯೇ, ಮತ್ತೊಂದು ಬಗೆಯ ಪ್ರತ್ಯಾಹಾರವನ್ನು ಹೇಳುವೆನು, ಕೇಳು. ಮನುಷ್ಯನು ದೇಹಾದಿಗಳಲ್ಲಿ ಆತ್ಮಬುದ್ಧಿಯನ್ನು ಬಿಟ್ಟು ಏಕಾಗ್ರಚಿತ್ತದಿಂದ ತನ್ನ ಮನಸ್ಸನ್ನು ದುಃಖಾದಿಗಳಿಲ್ಲದ ನಿರ್ವಿಕಾರವಾದ ಆತ್ಮಸ್ವರೂಪದಲ್ಲಿ ನೆಲೆಗೊಳಿಸುವುದು ಪ್ರತ್ಯಾಹಾರವೆನಿಸುವುದು. ಈ ಕ್ರಮವನ್ನು ಪ್ರತ್ಯಾಹಾರವೆಂದು ಆತ್ಮಸಾಕ್ಷಾತ್ಕಾರವುಳ್ಳ ವೇದಾಂತಿಗಳು ಹೇಳುವರು. ॥೧೫-೧೬॥

ಹೀಗೆ ಪ್ರತ್ಯಾಹಾರವನ್ನು ಅಭ್ಯಾಸಮಾಡತಕ್ಕ ಮನುಷ್ಯನಿಗೆ ಅಸಾಧ್ಯನಾದುದಾವುದೂ ಇರುವುದಿಲ್ಲ. ಬೃಹಸ್ಪತಿಯೇ, ಅಂತಹ ಮನುಷ್ಯನಿಗೆ ಪುಣ್ಯಪಾಪಗಳೆ

ಅಯಂ ಬ್ರಹ್ಮವಿದಾಂ ಶ್ರೇಷ್ಠಃ ಸಾಕ್ಷಾದ್ದೇವೇಶ್ವರಃ ಪುಮಾನ್ ॥೧೮॥

ಪ್ರತ್ಯಾಹಾರಃ ಸಮಾಖ್ಯಾತಃ ಸಂಕ್ಷೇಪೇಣ ಮಹಾಮುನೇ ।
ಗೋಪನೀಯ ಸ್ತ್ವಯಾ ನಿತ್ಯಂ ಗುಹ್ಯಾದ್ಗುಹ್ಯತರೋ ಹ್ಯಯಂ ॥೧೯॥

ಇತಿ ಶ್ರೀಸ್ಕಾಂದಪುರಾಣೇ ಶ್ರೀಸೂತಸಂಹಿತಾಯಾಂ ಜ್ಞಾನಯೋಗಖಂಡೇ ಪ್ರತ್ಯಾಹಾರ ವಿಧಾನನಿರೂಪಣಂ ನಾಮ ಸಪ್ತದಶೋಽಧ್ಯಾಯಃ

ರಡೂ ಅಂಟುವುದಿಲ್ಲ. ಇವನು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನೆನಿಸಿ ಸಾಕ್ಷಾತ್ ದೇವದೇವನಾದ ಶಿವನಸ್ವರೂಪವಾಗಿರುವನು. ಮುಂಡಕೋಪನಿಷತ್ತಿನಲ್ಲಿ "ತದಾ ವಿದ್ವಾನ್ಪುಣ್ಯಪಾಪೇವಿಧೂಯ ನಿರಂಜನಃ ಪರಮಂ ಸಾಮ್ಯ ಮುಪೈತಿ" ಎಂದು ಇಂತಹ ಜ್ಞಾನಿಯನ್ನು ಹೊಗಳಿರುವುದು. ||೧೭-೧೮||

ಮಹಾಮುನಿಯಾದ ಬೃಹಸ್ಪತಿಯೇ, ವಾಯು ಪ್ರತ್ಯಾಹಾರಕ್ಕಿಂತಲೂ ವಿಮರ್ಶರೂಪ ಪ್ರತ್ಯಾಹಾರವು ಶ್ರೇಷ್ಠವು. ಅತ್ಯಂತ ಗುಟ್ಟಾದ ಪ್ರತ್ಯಾಹಾರವಿಷಯವನ್ನು ಸಂಗ್ರಹವಾಗಿ ನಿನಗೆ ಹೇಳಿರುವೆನು. ಇದನ್ನು ನೀನು ಅಜ್ಞಾನಿಗಳಿಗೆ ತಿಳಿಸದೇ ಯಾವಾಗಲೂ ರಕ್ಷಿಸಿಕೊಂಡಿರಬೇಕು. ಎಂದರೆ ಶ್ರದ್ಧಾಭಕ್ತಿಯಿಂದ ಕೂಡಿದವರಿಗೆ ಮಾತ್ರ ಉಪದೇಶಮಾಡಬೇಕೆಂದು ಅಭಿಪ್ರಾಯವು. ||೧೯||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ಪ್ರತ್ಯಾಹಾರಕ್ರಮಗಳ ಸ್ವರೂಪವನ್ನು ವಿವರಿಸಿರುವ
ಹದಿನೇಳನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಂದಪುರಾಣಾಂತರ್ಗತಾ ಸೂತಸಂಹಿತಾ

ಜ್ಞಾನಯೋಗಖಂಡಂ

॥ ಅಷ್ಟಾದಶೋಽಧ್ಯಾಯಃ ॥

ಹದಿನೆಂಟನೆಯ ಅಧ್ಯಾಯವು

॥ ಈಶ್ವರ ಉವಾಚ ॥

ಅಥಾತಃ ಸಂಪ್ರವಕ್ಷ್ಯಾಮಿ ಧಾರಣಾಃ ಪಂಚ ಸುವ್ರತ ।
ದೇಹಮಧ್ಯಗತೇ ವ್ಯೋಮ್ನಿ ಬಾಹ್ಯಾಕಾಶಂ ತು ಧಾರಯೇತ್ ॥೧॥

ಪ್ರಾಣೇ ಬಾಹ್ಯಾನಿಲಂ ತದ್ವಜ್ಜ್ವಲನೇ ಚಾಗ್ನಿಮೌದರೇ ।
ತೋಯಂ ತೋಯಾಂಶಕೇಭೂಮಿಂ ಭೂಮಿಭಾಗೇ ಮಹಾಮುನೇ ॥೨॥

ಹಯವರಲಕಾರಾಖ್ಯಂ ಮಂತ್ರಮುಚ್ಚಾರಯೇತ್ಕ್ರಮಾತ್ ।
ಧಾರಣೈಷಾ ಮಯಾ ಪ್ರೋಕ್ತಾ ಸರ್ವಪಾಪವಿಶೋಧಿನೀ ॥೩॥

ಪ್ರತ್ಯಾಹಾರದಿಂದ ಚಿತ್ತವನ್ನು ವಶಮಾಡಿಕೊಂಡ ಯೋಗಿಗೆ ಧಾರಣರೂಪವಾದ ಯೋಗಾಂಗದಲ್ಲಿ ಯೋಗ್ಯತೆಯುಂಟಾಗುವುದರಿಂದ ಈ ಅಧ್ಯಾಯದಲ್ಲಿ ಧಾರಣರೂಪವಾದ ಯೋಗಾಂಗವನ್ನು ವಿವರಿಸುತ್ತಾ ಈಶ್ವರನು ಬೃಹಸ್ಪತಿಯನ್ನು ಕುರಿತು, ಎಲೈ ಮಹರ್ಷಿಯೇ, ಶರೀರದ ನಡುವೆ ಇರುವ ಆಕಾಶದಲ್ಲಿ ಹೊರಗಿನ ಆಕಾಶವನ್ನೂ ಪ್ರಾಣವಾಯುವಿನಲ್ಲಿ ಹೊರಗಿನ ವಾಯುವನ್ನೂ, ಉದರಾಗ್ನಿಯಲ್ಲಿ ಹೊರಗಿನ ಅಗ್ನಿಯನ್ನೂ ನೀರಿನ ಅಂಶದಲ್ಲಿ ಹೊರಗಿನ ನೀರನ್ನೂ, ಭೂಮಿಯ ಅಂಶದಲ್ಲಿ ಹೊರಗಿನ ಭೂಮಿಯನ್ನೂ ಹ, ಯ, ವ, ರ, ಲ ಎಂಬ ಐದು ಬೀಜಾಕ್ಷರಗಳನ್ನುಚ್ಚರಿಸಿ ತಾದಾತ್ಮ್ಯಭಾವನೆಯನ್ನು ಮಾಡುವುದೇ ಧಾರಣೆ ಎನಿಸುವುದು.

ಜಾನ್ವಂತಃ ಪೃಥಿವೀಭಾಗೋ ಹ್ಯಪಾಂ ಪಾಯ್ವಂತ ಉಚ್ಯತೇ ।
ಹೃದಯಾಂತಸ್ತಥಾಽಗ್ನ್ಯಂಶೋ ಭ್ರೂಮಧ್ಯಾಂತೋಽನಿಲಾಂಶಕಃ ॥೪॥

ಆಕಾಶಾಂತಸ್ತಥಾಪ್ರಾಜ್ಞ ಮೂರ್ಧಾಂತಃ ಪರಿಕೀರ್ತಿತಃ ।
ಬ್ರಹ್ಮಾಣಂ ಪೃಥಿವೀಭಾಗೇ ವಿಷ್ಣುಂ ತೋಯಾಂಶಕೇ ತಥಾ ॥೫॥

ಅಗ್ನ್ಯಂಶೇ ಚ ಮಹೇಶಾನ ಮೀಶ್ವರಂ ಚಾನಿಲಾಂಶಕೇ ।
ಆಕಾಶಾಂಶೇ ಮಹಾಪ್ರಾಜ್ಞ ಧಾರಯೇತ್ತು ಸದಾಶಿವಂ ॥೬॥

ಅಥವಾ ತವ ವಕ್ಷ್ಯಾಮಿ ಧಾರಣಾಂ ಮುನಿಪುಂಗವ ।
ಮನಸೀಂದುಂ ದಿಶಃ ಶ್ರೋತ್ರೇ ಕ್ರಾಂತೇ ವಿಷ್ಣುಂಬಲೇ ಹರಿಂ ॥೭॥

ವಾಚ್ಯಗ್ನಿಂ ಮಿತ್ರಮುತ್ಸರ್ಗೇ ತಥೋಪಸ್ಥೇ ಪ್ರಜಾಪತಿಂ ।
ತ್ವಚಿ ವಾಯುಂ ತಥಾ ನೇತ್ರೇ ಸೂರ್ಯಮೂರ್ತಿಂ ತಥೈವ ಚ ॥೮॥

ಜಿಹ್ವಾಯಾಂ ವರುಣಂ ಘ್ರಾಣೇ ಭೂಮಿದೇವೀಂ ತಥೈವಚ ।
ಪುರುಷೇ ಸರ್ವಶಾಸ್ತಾರಂ ಬೋಧಾನಂದಮಯಂ ಶಿವಂ ॥೯॥

ಇದನ್ನೇ ಶ್ವೇತಾಶ್ವರೋಪನಿಷತ್ತಿನಲ್ಲಿ "ಪೃಥ್ವ್ಯಪ್ತೇಜೋಽನಿಲಖೇಸಮುತ್ಥಿತೇ ಪಂಚಾತ್ಮಕೇ ಯೋಗಗುಣೇಪ್ರವೃತ್ತೇ । ನತಸ್ಯರೋಗೋನಜರಾನಮೃತ್ಯುಃ ಪ್ರಾಪ್ತಸ್ಯ ಯೋಗಾಗ್ನಿಮಯಂ ಶರೀರಂ ॥" ಎಂದು ಫಲಸಹಿತವಾಗಿ ಹೇಳಿರುವುದು.॥೧-೨-೩॥

ಮಂಡಿಯವರೆಗಿನ ಶರೀರದ ಭಾಗದಲ್ಲಿ ಬ್ರಹ್ಮನನ್ನೂ, ವಾಯುವಿನ ವರೆಗಿನ ಭಾಗದಲ್ಲಿ ವಿಷ್ಣುವನ್ನೂ, ಹೃದಯದ ವರೆಗಿನ ಭಾಗದಲ್ಲಿ ಮಹೇಶ್ವರನನ್ನೂ, ಭ್ರೂಮಧ್ಯದ ವರೆಗಿನ ಭಾಗದಲ್ಲಿ ಈಶ್ವರನನ್ನೂ ನೆತ್ತಿಯ ವರೆಗಿನ ಭಾಗದಲ್ಲಿ ಸದಾಶಿವನನ್ನೂ ಧ್ಯಾನಮಾಡಬೇಕು. ॥೪-೫-೬॥

ಇನ್ನೊಂದು ಬಗೆಯ ಧಾರಣಾಕ್ರಮವನ್ನು ಹೇಳುವೆನು ಕೇಳು. ಮನಸ್ಸಿನಲ್ಲಿ ಚಂದ್ರನನ್ನೂ, ಕಿವಿಗಳಲ್ಲಿ ದಿಗ್ದೇವತೆಗಳನ್ನೂ, ಪಾದದಲ್ಲಿ ವಿಷ್ಣುವನ್ನೂ, ಬಲದಲ್ಲಿ ದೇವೇಂದ್ರನನ್ನೂ, ಮಾತಿನಲ್ಲಿ ಅಗ್ನಿಯನ್ನೂ, ಅಪಾನದಲ್ಲಿ ಸೂರ್ಯನನ್ನೂ, ಉಪಸ್ಥೆಯಲ್ಲಿ ಪ್ರಜಾಪತಿಯನ್ನೂ, ಚರ್ಮದಲ್ಲಿ ವಾಯುವನ್ನೂ, ಕಣ್ಣಿನಲ್ಲಿ ಸೂರ್ಯನನ್ನೂ, ನಾಲಿಗೆಯಲ್ಲಿ ವರುಣನನ್ನೂ, ಮೂಗಿನಲ್ಲಿ ಭೂದೇವಿಯನ್ನೂ, ಜೀವನಲ್ಲಿ ಜ್ಞಾನಾನಂದಸ್ವರೂಪನಾದ ಪರಮಾತ್ಮನನ್ನೂ, ಪ್ರತಿದಿನದಲ್ಲಿಯೂ ಮೇಲೆ ಹೇಳಿದಂತೆ

ಧಾರಯೇದ್ಬುದ್ಧಿಮಾನ್ನಿತ್ಯಂ ಸರ್ವಪಾಪವಿಶುದ್ಧಯೇ ।
ಏಷಾ ಚ ಧಾರಣಾ ಪ್ರೋಕ್ತಾ ಯೋಗಶಾಸ್ತ್ರಾರ್ಥವೇದಿಭಿಃ ॥೧೦॥

ಬ್ರಹ್ಮಾದಿಕಾರ್ಯರೂಪಾಣಿ ಸ್ವೇಸ್ವೇ ಸಂಹೃತ್ಯ ಕಾರಣೇ ।
ಸರ್ವಕಾರಣಮವ್ಯಕ್ತಮನಿರೂಪ್ಯಮಚೇತನಂ ॥೧೧॥

ಸಾಕ್ಷಾದಾತ್ಮನಿ ಸಂಪೂರ್ಣೇ ಧಾರಯೇತ್ಪ್ರಯತೋ ನರಃ ।
ಧಾರಣೈಷಾ ಪರಾ ಪ್ರೋಕ್ತಾ ಧಾರ್ಮಿಕೈರ್ವೇದಪಾರಗೈಃ ॥೧೨॥

ಇಂದ್ರಿಯಾಣಿ ಸಮಾಹೃತ್ಯ ಮನಸಾಽಽತ್ಮನಿ ಧಾರಯೇತ್ ।
ಕಂಚಿತ್ಕಾಲಂ ಮಹಾಪ್ರಾಜ್ಞ ಧಾರಣೈಷಾ ಚ ಪೂಜಿತಾ ॥೧೩॥

ವೇದಾದೇವ ಸದಾ ದೇವಾ ವೇದಾದೇವ ಸದಾ ನರಾಃ ।
ವೇದಾದೇವ ಸದಾ ಲೋಕಾ ವೇದಾದೇವ ಮಹೇಶ್ವರಃ ॥೧೪॥

ಅಧ್ಯಾತ್ಮವಾದ ಶರೀರಭಾಗಗಳಲ್ಲಿ ಅಧಿದೇವತೆಗಳಾದ ಅಭಿಮಾನಿದೇವತೆಗಳನ್ನು ಧ್ಯಾನಮಾಡುತ್ತಿದ್ದರೆ ಸಮಸ್ತಪಾಪಗಳೂ ನಾಶವಾಗುವುವು. ಯೋಗಶಾಸ್ತ್ರವನ್ನು ಬಲ್ಲವರು ಇದನ್ನು ಧಾರಣೆಯೆಂದು ಹೇಳಿರುವರು. ||೭-೮-೯-೧೦||

ಬ್ರಹ್ಮಾದಿಕಾರ್ಯರೂಪರಾದ ದೇವತೆಗಳನ್ನು ಅವರವರ ಕಾರಣರೂಪದಲ್ಲಿ ಐಕ್ಯಮಾಡಿ, ಸರ್ವಕಾರಣವಾದ ರೂಪವಿಲ್ಲದ ಅಚೇತನವಾದ ಪ್ರಕೃತಿಯನ್ನು ಸಂಪೂರ್ಣನಾದ ಸಾಕ್ಷಾತ್ಪರಮಾತ್ಮನಲ್ಲಿ ಐಕ್ಯಗೊಳಿಸುವುದು, ಉತ್ತಮವಾದ ಧಾರಣೆಯೆಂದು ವೇದಾಂತವನ್ನು ತಿಳಿದವರು ಹೇಳಿರುವರು. ||೧೧-೧೨||

ಮನಸ್ಸಿನಿಂದಲೇ ಇಂದ್ರಿಯಗಳನ್ನು ವಿಷಯಗಳಿಂದ ಎಳೆದು ಕೆಲವು ಕಾಲದವರೆಗೆ ಆ ಮನಸ್ಸನ್ನು ಆತ್ಮನಲ್ಲಿಟ್ಟಿರಬೇಕು. ಇದೂ ಒಂದು ಬಗೆಯ ಧಾರಣೆಯು, ಇದು ಉತ್ತಮವಾದುದು. ||೧೩||

ವೇದದಿಂದಲೇ ಯಾವಾಗಲೂ ದೇವತೆಗಳನ್ನೂ, ಮನುಷ್ಯರನ್ನೂ, ಲೋಕಗಳನ್ನೂ, ಮಹೇಶ್ವರನು ಸೃಷ್ಟಿಸುವನು. ಆ ವೇದದಿಂದಲೇ ಆ ಮಹೇಶ್ವರನನ್ನು ತಿಳಿಯಬೇಕು. "ನಾವೇದವಿನ್ಮನುತೇ ತಂ ಬೃಹಂತಂ" ಎಂದು ವೇದವೇ ಹೇಳುವುದು. ||೧೪||

ಇತಿ ಚಿತ್ತವ್ಯವಸ್ಥಾಯಾ ಧಾರಣಾ ಸಾ ಪ್ರಕೀರ್ತಿತಾ ।
ಬ್ರಹ್ಮೈವಾಹಂ ಸದಾ ನಾಹಂ ದೇವೋ ಯಕ್ಷೋಽಥವಾ ನರಃ ॥೧೫॥

ನ ದೇಹೇಂದ್ರಿಯ ಬುದ್ಧ್ಯಾದಿರ್ನ ಮಾಯಾ ನಾನ್ಯದೇವತಾ ।
ಇತಿ ಬುದ್ಧಿ ವ್ಯವಸ್ಥಾಪಿ ಧಾರಣಾ ಸೇತಿ ಹಿ ಶ್ರುತಿಃ ॥೧೬॥

ಸರ್ವಂ ಸಂಕ್ಷೇಪತಃ ಪ್ರೋಕ್ತಂ ಸರ್ವಶಾಸ್ತ್ರವಿಶಾರದ ।
ಆಗಮಾಂತೈಕಸಂಸಿದ್ಧಮಾಸ್ಥೇಯಂ ಭವತಾ ಸದಾ ॥೧೭॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ ಧಾರಣಾವಿಧಿನಿರೂಪಣಂ ನಾಮ ಅಷ್ಟಾದಶೋಽಧ್ಯಾಯಃ

ಋಷೀಣಾಂ ನಾಮಧೇಯಾನಿ ಕರ್ಮಾಣಿ ಚ ಪೃಥಕ್ಪೃಥಕ್ ।
ವೇದಶಬ್ದೇಭ್ಯ ಏವಾದೌ ನಿರ್ಮಮೇ ಸ ಮಹೇಶ್ವರಃ ॥

ಎಂಬ ಸ್ಮೃತಿಯಂತೆ ಚಿತ್ತವನ್ನು ದೃಢವಾಗಿಟ್ಟುಕೊಂಡಿರುವುದೇ ಮತ್ತೊಂದು ಬಗೆಯ ಧಾರಣೆಯು.

ನಾನು ಯಾವಾಗಲೂ ಪರಬ್ರಹ್ಮಸ್ವರೂಪನು, ದೇವನೂ, ಯಕ್ಷನೂ, ಮನುಷ್ಯನೂ, ದೇಹೇಂದ್ರಿಯಾದಿಗಳೂ, ಪ್ರಕೃತಿಯೂ, ಇತರ ದೇವತೆಗಳೂ, ನಾನಲ್ಲ. ಎಂಬ ನಿಶ್ಚಲಬುದ್ಧಿಯನ್ನೂ ಧಾರಣೆಯೆಂದು ವೇದವು ಹೇಳುವುದು. ॥೧೫-೧೬॥

ಸಮಸ್ತ ಶಾಸ್ತ್ರಗಳನ್ನೂ ಬಲ್ಲ ಬೃಹಸ್ಪತಿಯೇ, ಎಲ್ಲವನ್ನೂ ಸಂಗ್ರಹವಾಗಿ ಹೇಳಿರುವೆನು. ನೀನು ಯಾವಾಗಲೂ ವೇದಾಂತದಲ್ಲಿ ಹೇಳಿದಂತೇ ಅನುಷ್ಠಾನ ಮಾಡು. "ಬ್ರಹ್ಮೈವಾಹಂ." "ಅಯಮಾತ್ಮಾಬ್ರಹ್ಮ" ಇವೇ ಮುಖ್ಯವಾದ ವೇದಾಂತವಾಕ್ಯಗಳು. ಇದರ ಅಭಿಪ್ರಾಯವನ್ನನುಸರಿಸೆಂದು ಭಾವವು. ॥೧೭॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ಧಾರಣಾ ಎಂಬ ಯೋಗಾಂಗವನ್ನು ವಿವರಿಸಿರುವ
ಹದಿನೆಂಟಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಜ್ಞಾನಯೋಗಖಂಡಂ

|| ಏಕೋನವಿಂಶೋಽಧ್ಯಾಯಃ ||

ಹತ್ತೊಂಬತ್ತನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಧ್ಯಾನಂ ಸಂಸಾರನಾಶನಂ ।
ಆಕಾಶೇ ನಿರ್ಮಲಂ ಶುದ್ಧಂ ಭಾಸಮಾನಂ ಸುಶೀತಲಂ ॥೧॥

ಸೋಮಮಂಡಲಮಾಪೂರ್ಣ ಮಚಲಂ ದೃಷ್ಟಿಗೋಚರಂ ।
ಧ್ಯಾತ್ವಾ ಮಧ್ಯೇ ಮಹಾದೇವಂ ಪರಮಾನಂದವಿಗ್ರಹಂ ॥೨॥

ಉಮಾರ್ಧದೇಹಂ ವರದ ಮುತ್ಪತ್ತಿಸ್ಥಿತಿವರ್ಜಿತಂ ।
ಶುದ್ಧಸ್ಫಟಿಕ ಸಂಕಾಶಂ ಚಂದ್ರರೇಖಾವತಂಸಕಂ ॥೩॥

ಹಿಂದೆ ಹೇಳಿದ ಧಾರಣಾಭ್ಯಾಸದಿಂದ ಮನಸ್ಸಿನ ಚಪಲತೆಯು ಬಿಟ್ಟು ಹೋಗಲು ಧ್ಯಾನಕ್ಕೆ ಯೋಗ್ಯತೆಯುಂಟಾಗುವುದು. ಎಂದು ಈಶ್ವರನು ಈ ಅಧ್ಯಾಯದಲ್ಲಿ, ಎಲೈ ಬೃಹಸ್ಪತಿಯೇ. ಇನ್ನು ಜನನ ಮರಣರೂಪವಾದ ಸಂಸಾರ ದುಃಖವನ್ನು ನಾಶಮಾಡುವ ಧ್ಯಾನದ ವಿಷಯವನ್ನು ಹೇಳುವೆನು ಕೇಳು. ಆ ಧ್ಯಾನವು ಸಗುಣ, ನಿರ್ಗುಣಗಳೆಂದು ಎರಡು ವಿಧಗಳಿರುವುವು. ಮೊದಲು ಸಗುಣ ಧ್ಯಾನವನ್ನು ಹೇಳುವೆನು. ಆಕಾಶದಲ್ಲಿ ಕೊಳೆಯಿಲ್ಲದೇ ಪರಿಶುದ್ಧವಾಗಿ ತಣ್ಣಗೆ ಪ್ರಕಾಶಿಸುತ್ತಿರುವ ಪೂರ್ಣ ಚಂದ್ರಮಂಡಲವನ್ನು ಧ್ಯಾನಮಾಡಿ ಆ ಮಂಡಲದ ನಡುವೆ “ವಿಜ್ಞಾನಮಾನಂದಬ್ರಹ್ಮ” ಎಂದು ವೇದದಲ್ಲಿ ಹೇಳಿದಂತೆ ಸಚ್ಚಿದಾನಂದ

ತ್ರಿಲೋಚನಂ ಚತುರ್ಬಾಹುಂ ನೀಲಗ್ರೀವಂ ಪರಾತ್ಪರಂ ।
ಧ್ಯಾಯೇನ್ನಿತ್ಯಂ ಸದಾ ಸೋಽಹ ಮಿತಿ ಬ್ರಹ್ಮವಿದಾಂ ವರ ॥೪॥

ಅಥವಾಽಽಕಾಶಮಧ್ಯಸ್ಥೇ ಭ್ರಾಜಮಾನೇ ಸುಶೋಭನೇ ।
ಆದಿತ್ಯಮಂಡಲೇ ಪೂರ್ಣೇ ಲಕ್ಷಯೋಜನ ವಿಸ್ತೃತೇ ॥೫॥

ಸರ್ವಲೋಕವಿಧಾತಾರಮೀಶ್ವರಂ ಹೇಮರೂಪಿಣಂ ।
ಹಿರಣ್ಮಯಂ ಶ್ಮಶ್ರುಕೇಶಂ ಹಿರಣ್ಮಯನಖಂ ತಥಾ ॥೬॥

ಕಪ್ಯಾಸ್ಯಾಸನವದ್ವಕ್ತ್ರಂ ನೀಲಗ್ರೀವಂ ವಿಲೋಹಿತಂ ।
ಆಗೋಪಾಲಪ್ರಸಿದ್ಧಂ ತಮಂಬಿಕಾರ್ಧಶರೀರಿಣಂ ॥೭॥
ಸೋಽಹಮಿತ್ಯನಿಶಂ ಧ್ಯಾಯೇತ್ಸಂಧ್ಯಾಕಾಲೇಷು ವಾ ನರಃ ।

ಸ್ವರೂಪನಾದ ಪರಬ್ರಹ್ಮನನ್ನು ಉಮಾಮಹೇಶ್ವರನೆಂದೂ, ಚಂದ್ರರೇಖೆಯನ್ನು ಜಟೆಯಲ್ಲಿ ಧರಿಸಿ, ಮೂರು ಕಣ್ಣುಗಳನ್ನೂ ನಾಲ್ಕು ತೋಳುಗಳನ್ನೂ ಪಡೆದು, ಶರೀರವೆಲ್ಲವೂ ಸ್ಫಟಿಕದಂತೆ ಬೆಳ್ಳಗಿದ್ದು, ಕುತ್ತಿಗೆಯು ಕಪ್ಪಾಗಿರುವ ಅರ್ಧನಾರೀಶ್ವರನನ್ನು ಲೀಲೆಗಾಗಿ ಪರಬ್ರಹ್ಮನೇ ಈ ರೂಪವನ್ನು ಧರಿಸಿದನೆಂದು ತಿಳಿದು, ತನ್ನ ಮನಸ್ಸಿನಲ್ಲಿ ಪ್ರತಿದಿನವೂ ಧ್ಯಾನಮಾಡಬೇಕು. ॥೧-೨-೩-೪॥

ಅಥವಾ ಆಕಾಶದ ನಡುವೆ ಪ್ರಕಾಶಿಸುತ್ತಿರುವ ಲಕ್ಷಯೋಜನ ವಿಸ್ತಾರವಾದ ಸೂರ್ಯಮಂಡಲದ ನಡುವೆ ಉದ್ಗೀಥವಿದ್ಯೆಯಲ್ಲಿ ಹೇಳುವಂತೆ "ಯ ಏಷೋಽಂತರಾದಿತ್ಯೇ ಹಿರಣ್ಮಯಃ ಪುರುಷೋದೃಶ್ಯತೇ । ಹಿರಣ್ಯಶ್ಮಶ್ರುರ್ಹಿರಣ್ಯಕೇಶ ಆಪ್ರಣಖಾತ್ಸರ್ವಏವ ಸುವರ್ಣಸ್ತಸ್ಯ ಯಥಾಕಪ್ಯಾಸಂ ಪುಂಡರೀಕ ಮೇವಮಕ್ಷಿಣಿ ॥" ಎಂಬ ಶ್ರುತಿಯ ಅನುಸಾರವಾಗಿ ಚಿನ್ನದ ಕೂದಲು, ಮೀಸೆ, ಉಗುರುಗಳುಳ್ಳ, ಕಪಿಯ ಆಸನ ಮತ್ತು ಮುಖದಂತೆ ಕೆಂಪಾದ ಮುಖವುಳ್ಳ, ಕಮಲದಂತೆ ಕಣ್ಣುಗಳುಳ್ಳ, ನೀಲವಾದ ಕುತ್ತಿಗೆಯುಳ್ಳ, ಕೆಂಪುಬಣ್ಣದ ಶರೀರವುಳ್ಳ, ಅರ್ಧಶರೀರದಲ್ಲಿ ದೇವಿಯನ್ನು ಧರಿಸಿದ, ದನಕಾಯುವವರೂ ಚೆನ್ನಾಗಿ ತಿಳಿದಿರುವ, ಸಮಸ್ತ ಲೋಕವನ್ನೂ ಸೃಷ್ಟಿಸುವ ಮಹೇಶ್ವರನನ್ನು ಸಂಧ್ಯಾಕಾಲಗಳಲ್ಲಿ "ಸೋಹಂ" ನಾನು ಅವನೇ ಎಂದು ಧ್ಯಾನಮಾಡಬೇಕು. "ಉತ್ತೈನಂಗೋಪಾ ಅದೃಶನ್ನದೃಶನ್ನುದಹಾರ್ಯಃ" ಎಂದು ರುದ್ರಾಧ್ಯಾಯದಲ್ಲಿ ಗೋಪಾಲಕರೂ ದೇವನನ್ನು ನೋಡಿರುವರೆಂದು ಹೇಳಿದೆ. ॥೫-೬-೭॥

ಅಥವಾ ವೈದಿಕೇ ಶುದ್ಧೇಽಪ್ಯಗ್ನಿಹೋತ್ರಾದಿಮಧ್ಯಗೇ ॥೮॥

ಆತ್ಮಾನಂ ಜಗದಾಧಾರಮಾನಂದಾನುಭವಂ ಸದಾ ।
ಗಂಗಾಧರಂ ವಿರೂಪಾಕ್ಷಂ ವಿಶ್ವರೂಪಂ ವೃಷಧ್ವಜಂ ॥೯॥

ಚತುರ್ಭುಜಂ ಸಮಾಸೀನಂ ಚಂದ್ರಮೌಲಿಂ ಕಪರ್ದಿನಂ ।
ರುದ್ರಾಕ್ಷಮಾಲಾಭರಣಮುಮಾಯಾಃ ಪತಿಮೀಶ್ವರಂ ॥೧೦॥

ಗೋಕ್ಷೀರ ಧವಲಾಕಾರಂ ಗುಹ್ಯಾದ್ಗುಹ್ಯತರಂ ಸದಾ ।
ಅತ್ಯದ್ಭುತಮನಿರ್ವಂದ್ವಮಹಂ ಬುದ್ಧ್ಯಾ ವಿಚಿಂತಯೇತ್ ॥೧೧॥

ಅಥವಾಽಹಂ ಹರಿಃ ಸಾಕ್ಷಾತ್ಸರ್ವಜ್ಞಃ ಪುರುಷೋತ್ತಮಃ ।
ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ॥೧೨॥

ವಿಶ್ವೋ ನಾರಾಯಣೋ ದೇವಃ ಅಕ್ಷರಃ ಪರಮಃ ಪ್ರಭುಃ ।
ಇತಿ ಧ್ಯಾತ್ವಾ ಪುನಸ್ತಸ್ಯ ಹೃದಯಾಂಭೋಜಮಧ್ಯಮೇ ॥೧೩॥

ಪ್ರಾಣಾಯಾಮೈರ್ವಿಕಸಿತೇ ಪರಮೇಶ್ವರಮಂದಿರೇ ।
ಅಷ್ಟೈಶ್ವರ್ಯದಲೋಪೇತೇ ವಿದ್ಯಾಕೇಸರ ಸಂಯುತೇ ॥೧೪॥

ಹಾಗಲ್ಲದೇ ಹೋದರೆ ವೇದೋಕ್ತವಾದ ಅಗ್ನಿಹೋತ್ರಾದಿ ಕರ್ಮಗಳನ್ನು ಮಾಡುವಾಗ ಅಗ್ನಿಯ ನಡುವೆ ಪರಮಾನಂದಸ್ವರೂಪನಾದ ಗಂಗೆಯನ್ನು ಧರಿಸಿದವನೂ, ಮುಕ್ಕಣ್ಣನೂ, ವೃಷಧ್ವಜವುಳ್ಳವನೂ, ಜಟೆಯಲ್ಲಿ ಚಂದ್ರನನ್ನು ಧರಿಸಿದವನೂ, ನಾಲ್ಕು ತೋಳುಗಳುಳ್ಳವನೂ ರುದ್ರಾಕ್ಷಿಮಾಲೆಯನ್ನು ಧರಿಸಿ ಉಮಾದೇವೀಸಹಿತನಾದವನೂ, ಹಾಲಿನಂತೆ ಬೆಳ್ಳಗಿರತಕ್ಕವನೂ, ಅತ್ಯಂತ ಗೋಪ್ಯನಾದವನೂ, ಸುಖದುಃಖಾದಿಗಳಿಲ್ಲದವನೂ, ಆಶ್ಚರ್ಯಕರವಾದ ರೂಪುಳ್ಳವನೂ ಆದ ಶಿವನೇ ನಾನು ಎಂಬ ಭಾವನೆಯಿಂದ ಧ್ಯಾನಮಾಡಬೇಕು. ॥೮-೯-೧೦-೧೧॥

ಅಥವಾ ಸರ್ವಜ್ಞನೂ, ಪುರುಷಶ್ರೇಷ್ಠನೂ ಆಗಿ, ಸಕಲ ಪ್ರಾಣಿಗಳಲ್ಲಿಯೂ ತಲೆ, ಕಣ್ಣು, ಕಾಲು ಮುಂತಾದ ಅವಯವಗಳಾಗಿ ವ್ಯಾಪಿಸಿ, ಪ್ರಪಂಚಸ್ವರೂಪನಾಗಿ ಸಮಸ್ತಪ್ರಪಂಚಕ್ಕೂ ಕಾರಣನಾಗಿ ನಾಶರಹಿತನಾಗಿ ಶ್ರೇಷ್ಠನಾದ ಹರಿಯೇ ನಾನೆಂದು ಧ್ಯಾನಮಾಡಿ, ಮತ್ತೆ ತನ್ನ ಹೃದಯಕಮಲದ ನಡುವೆ, ॥೧೨-೧೩॥

"ಪದ್ಮಕೋಶಪ್ರತೀಕಾಶಂ ಹೃದಯಂಚಾಪ್ಯಧೋಮುಖಂ" ಎಂಬ ಶ್ರುತಿ

ಜ್ಞಾನನಾಲ ಮಹತ್ಕಂದೇ ಪ್ರಣವೇನ ಪ್ರಬೋಧಿತೇ ।
ವಿಶ್ವಾರ್ಚಿಷಂ ಮಹಾವಹ್ನಿಂ ಜ್ವಲಂತಂ ವಿಶ್ವತೋ ಮುಖಂ ॥೧೫॥

ವೈಶ್ವಾನರಂ ಜಗದ್ಯೋನಿಂ ಶಿಖಾತನ್ವಿನಮೀಶ್ವರಂ ।
ತಾಪಯಂತಂ ಸ್ವಕಂ ದೇಹ ಮಾಪಾದತಲ ಮಸ್ತಕಂ ॥೧೬॥

ನಿರ್ವಾತ ದೀಪವತ್ತಸ್ಮಿನ್ ದೀಪಿತಂ ಹವ್ಯವಾಹನಂ ।
ನೀಲತೋಯದಮಧ್ಯಸ್ಥಂ ವಿದ್ಯುಲ್ಲೇಖೇವಭಾಸ್ವರಂ ॥೧೭॥

ನೀವಾರ ಶೂಕವದ್ರೂಪಂ ಪೀತಾಭಾಸಂ ವಿಚಿಂತಯೇತ್ ।
ತಸ್ಯವಹ್ನೇಃ ಶಿಖಾಯಾಂತು ಮಧ್ಯೇ ಪರಮಕಾರಣಂ ॥೧೮॥

ಯಂತೆ ಅಧೋಮುಖವಾದ ಹೃದಯಕಮಲವನ್ನು ರೇಚಕಪ್ರಾಣಾಯಾಮದಿಂದ ಅರಳಿಸಿ ಊರ್ಧ್ವಮುಖವಾಗಿ ಮಾಡಿದ ಪರಮೇಶ್ವರನ ಸ್ಥಾನವಾದ ಅಣಿಮಾದಿ ಅಷ್ಟಸಿದ್ಧಿಗಳೇ ದಲಗಳಾಗಿರುವ ತತ್ವವಿದ್ಯಾಸ್ವರೂಪವಾದ ಕೇಸರಗಳಿಂದ ಕೂಡಿದ ॥೧೪॥

ಶಾಸ್ತ್ರಜ್ಞಾನವೇ ನಾಳವಾಗಿಯೂ, ಮಹತ್ತತ್ವವೇ ಗೆಡ್ಡೆಯಾಗಿಯೂ, ಇರುವ ಪ್ರಣವವೆಂಬ ಸೂರ್ಯನಿಂದ ಚೆನ್ನಾಗಿ ಅರಳಿದ ಹೃದಯಕಮಲದಲ್ಲಿ ಮೂಲಾಧಾರದಲ್ಲಿ ಹುಟ್ಟಿ ಸುಷುಮ್ನಾನಾಡಿಯಿಂದ ಹೃದಯಕಮಲದ ನಡುವೆ ಬಂದು ತನ್ನ ಉರಿಯನ್ನು ಎಲ್ಲ ಕಡೆಗೂ ಹರಡಿ ಸುತ್ತಲೂ ಶರೀರದಲ್ಲೆಲ್ಲಾ ಪ್ರಕಾಶಿಸುತ್ತಿರುವ ಜಗತ್ತಿಗೆ ಕಾರಣವಾದ ತನ್ನ ದೇಹವನ್ನು ಕಾಲಿನಿಂದ ತಲೆಯವರೆಗೂ ಬಿಸಿಯಾಗಿ ಮಾಡುತ್ತಿರುವ ಈಶ್ವರನನ್ನು ॥೧೫-೧೬॥

ಗಾಳಿಯಿಲ್ಲದ ಕಡೆಯಲ್ಲಿ ಉರಿಯುತ್ತಿರುವ ದೀಪದಂತೆ ಚಲಿಸದೇ ಪ್ರಕಾಶಿಸುತ್ತಿರುವ ಅಗ್ನಿಯನ್ನಾಗಿಯೂ, ನೀಲವಾದ ಮೇಘದ ನಡುವೆ ಪ್ರಕಾಶಿಸುವ ಮಿಂಚಿನಂತೆಯೂ, ತೃಣಧಾನ್ಯದ ಮುಳ್ಳಿನಂತೆ ಸಣ್ಣಗೆ ಹಳದಿಯ ಬಣ್ಣದಿಂದ ಹೊಳೆಯುತ್ತಿರುವಂತೆಯೂ ಧ್ಯಾನಮಾಡಬೇಕು. ॥೧೭॥

"ತಸ್ಯಾಃ ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ" ಎಂಬ ವೇದ ವಚನದಂತೆ ಹೃದಯಕಮಲದ ನಡುವೆ ಇರುವ ಅಗ್ನಿಯ ಮಧ್ಯದಲ್ಲಿ ಪರಮಾ-

ಪರಮಾತ್ಮಾನಮಾನಂದಂ ಪರಮಾಕಾಶಮೀಶ್ವರಂ ।
ಋತಂ ಸತ್ಯಂ ಪರಂ ಬ್ರಹ್ಮ ಸಾಂಬಂ ಸಂಸಾರಭೇಷಜಂ ॥೧೯॥

ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಂ ಮಹೇಶ್ವರಂ ।
ನೀಲಗ್ರೀವಂ ಸ್ವಮಾತ್ಮಾನಂ ಪಶ್ಯಂತಂ ಪಾಪನಾಶನಂ ॥೨೦॥

ಬ್ರಹ್ಮವಿಷ್ಣುಮಹೇಶಾನ್ಯೈರ್ಧ್ಯೇಯಂ ಧ್ಯೇಯವಿವರ್ಜಿತಂ ।
ಸೋಽಹಮಿತ್ಯಾದರೇಣೈವ ಧ್ಯಾಯೇದ್ಯೋಗೀ ಮಹೇಶ್ವರಂ ॥೨೧॥

ಅಯಂ ಮುಕ್ತೇರ್ಮಹಾಮಾರ್ಗ ಆಗಮಾಂತೈಕ ಸಂಸ್ಥಿತಃ ।
ಅಥವಾಽಹಂ ಮುನಿಶ್ರೇಷ್ಠ ಬ್ರಹ್ಮಾ ಲೋಕ ಪಿತಾಮಹಃ ॥೨೨॥

ಇತಿ ಸ್ಮೃತ್ವಾ ಸ್ವಹೃನ್ಮಧ್ಯೇ ಶಿವಂ ಪರಮಕಾರಣಂ ।
ಸಾಕ್ಷಾದ್ವೇದಾಂತಸಂವೇದ್ಯಂ ಸಾಂಬಂ ಸಂಸಾರಭೇಷಜಂ ॥೨೩॥

ಅಹಂ ಬುದ್ಧ್ಯಾ ವಿಮುಕ್ತ್ಯರ್ಥಂ ಧ್ಯಾಯೇದೀಶಾನಮವ್ಯಯಂ ।
ಅಥವಾ ಸತ್ಯಮೀಶಾನಂ ಜ್ಞಾನಮಾನಂದ ಮದ್ವಯಂ ॥೨೪॥

ನಂದಸ್ವರೂಪನಾಗಿ ಋತ, ಸತ್ಯಸ್ವರೂಪನೂ, ದೇವೀಸಹಿತನೂ, ಸಂಸಾರರೋಗಕ್ಕೆ ಔಷಧರೂಪನೂ, ನೀಲಕಂಠನೂ, ಮುಕ್ಕಣ್ಣನೂ, ಪ್ರಪಂಚಸ್ವರೂಪನೂ, ಊರ್ಧ್ವ ರೇತಸುಳ್ಳವನೂ, ಬ್ರಹ್ಮ, ವಿಷ್ಣು, ಮಹೇಶ್ವರರ ಧ್ಯಾನಕ್ಕೆ ಲಕ್ಷ್ಯನೂ, ತನ್ನ ಧ್ಯಾನಕ್ಕೆ ಗುರಿಯಿಲ್ಲದವನೂ ಆದ ಪರಬ್ರಹ್ಮನನ್ನು ಪ್ರೀತಿಯಿಂದ ಅವನೇ ನಾನೆಂದು ಯೋಗಿಯು ಧ್ಯಾನಮಾಡಬೇಕು. ||೧೮-೧೯-೨೦-೨೧||

ಇದು ವೇದಾಂತದಲ್ಲಿ ಹೇಳಿರುವ ಮುಕ್ತಿಗೆ ಒಂದು ದೊಡ್ಡದಾರಿಯಾಗಿರುವುದು. ಅಥವಾ ಎಲೈ ಬೃಹಸ್ಪತಿಯೇ, ಲೋಕವನ್ನು ಸೃಷ್ಟಿಸಿದ ಬ್ರಹ್ಮನೇ ನಾನು ಎಂಬುದಾಗಿ ಮನಸ್ಸಿನಲ್ಲಿ ಸ್ಮರಿಸಿ, ವೇದಾಂತಗಳಿಂದ ತಿಳಿಯತಕ್ಕವನೂ, ಸಮಸ್ತಕ್ಕೂ ಕಾರಣನೂ, ಸಂಸಾರದುಃಖವನ್ನು ನಾಶಮಾಡತಕ್ಕವನೂ ಆದ ನಾಶರಹಿತನಾದ ಈಶ್ವರನನ್ನು ಧ್ಯಾನಮಾಡಬೇಕು. ||೨೨-೨೩||

ಇಲ್ಲಿಂದ ಮುಂದೆ " ಸೋಽಹಂ" ಎಂಬ ಮಹಾವಾಕ್ಯದಿಂದ ನಿಷ್ಕಲ(ನಿರ್ಗುಣ) ವಿಷಯವಾದ ಧ್ಯಾನಕ್ರಮವನ್ನು ಈಶ್ವರನು ವಿವರಿಸುವನು. " ಅಹಂ " ಎಂಬ ಪದಕ್ಕೆ ಬುದ್ಧ್ಯಾದಿಗಳಿಂದ ಕೂಡಿದ ಒಳಗಿನ ಚೈತನ್ಯವೇ ಅರ್ಥವು. ಇದು ಎಲ್ಲ

ಅನಂತಮಮಲಂ ನಿತ್ಯಮಾದಿಮಧ್ಯಾಂತವರ್ಜಿತಂ ।
ತಥಾಽಸ್ಥೂಲಮನಾಕಾಶಮಸಂಸ್ಪೃಶ್ಯಮಚಕ್ಷುಷಂ ॥೨೫॥

ನ ರಸಂ ನ ಚ ಗಂಧಾಖ್ಯಮಪ್ರಮೇಯಮನೂಪಮಂ ।
ಸರ್ವಾಧಾರಂ ಜಗದ್ರೂಪಮಮೂರ್ತಂ ಮೂರ್ತಮವ್ಯಯಂ ॥೨೬॥

ಅದೃಶ್ಯಂ ದೃಶ್ಯಮಂತಸ್ಥಂ ಬಹಿಸ್ಥಂ ಸರ್ವತೋಮುಖಂ ।
ಸರ್ವತಃ ಪಾಣಿಪಾದಂ ಚ ಸರ್ವಕಾರಣಕಾರಣಂ ॥೨೭॥

ಸರ್ವಜ್ಞಾನಾದಿಸಂಯುಕ್ತಮಹ ಮಿತ್ಯೇವ ಚಿಂತಯೇತ್ ।
ಅಯಂ ಪಂಥಾ ಮುನಿಶ್ರೇಷ್ಠ ಸಾಕ್ಷಾತ್ಸಂಸಾರನಾಶನೇ ॥೨೮॥

ಅಥವಾ ಸಚ್ಚಿದಾನಂದ ಮನಂತಂ ಬ್ರಹ್ಮ ಸುವ್ರತ ।
ಅಹಮಸ್ಮೀತ್ಯಭಿಧ್ಯಾಯೇತ್ ಧ್ಯೇಯಾತೀತಂ ವಿಮುಕ್ತಯೇ ॥೨೯॥

ರಿಗೂ ಪ್ರತ್ಯಕ್ಷವಾದುದು. "ಸಃ" ಎಂಬ ಪದಕ್ಕೆ ಪರಮಾತ್ಮ ಚೈತನ್ಯವೇ ಅರ್ಥವು. ಇದು ಪರೋಕ್ಷವಾದುದರಿಂದ ಅಪ್ರಸಿದ್ಧವಾದುದಾಗಿರುವುದು. ಮನುಷ್ಯನು ಸತ್ಯಜ್ಞಾನಾನಂದಸ್ವರೂಪನೂ, ನಾಶರಹಿತನೂ, ಅದ್ವಿತೀಯನೂ, ಆದಿಮಧ್ಯಾಂತವಿಲ್ಲದವನೂ, ಸ್ಥೂಲ ಸೂಕ್ಷ್ಮಭಾವವಿಲ್ಲದವನೂ, ಪಂಚೇಂದ್ರಿಯಗಳಿಗೆ ಗೋಚರವಾಗದವನೂ, ಆದ ಅಹಂಪದಕ್ಕೆ ಲಕ್ಷ್ಯಾರ್ಥಸ್ವರೂಪನಾದ ಪ್ರತ್ಯಕ್ ಚೈತನ್ಯನಾದ ಜೀವಾತ್ಮನನ್ನು ಸಮಸ್ತಕ್ಕೂ ಆಶ್ರಯಸ್ವರೂಪನೂ, ಪ್ರಪಂಚಸ್ವರೂಪನೂ ಆಗಿ, ನಿರಾಕಾರನೂ, ಸಾಕಾರನೂ ಆಗಿರುವ ನಾಶರಹಿತನಾದ ಅದೃಶ್ಯನಾಗಿ ಒಳಗೂ, ದೃಶ್ಯನಾಗಿ ಹೊರಗೂ ಎಲ್ಲೆಡೆಯಲ್ಲಿಯೂ ಇರುವ ಸಕಲೇಂದ್ರಿಯಗಳನ್ನೂ ಪಡೆದಿರುವ ಸರ್ವಕಾರಣವಾದ ಪ್ರಕೃತಿಗೂ ಕಾರಣನಾದ, ಸಕಲ ವಿಧವಾದ ಜ್ಞಾನಗಳಿಂದಲೂ ಕೂಡಿದ "ಸಃ" ಎಂಬ ಪದಕ್ಕೆ ಲಕ್ಷ್ಯಾರ್ಥಸ್ವರೂಪನಾದ ಪರಮಾತ್ಮನನ್ನಾಗಿ ಧ್ಯಾನಮಾಡಬೇಕು. ಋಷಿಶ್ರೇಷ್ಠನಾದ ಬೃಹಸ್ಪತಿಯೇ, ಜನನ ಮರಣ ರೂಪವಾದ ಸಂಸಾರದುಃಖವು ನಾಶವಾಗಬೇಕಾದರೆ ಇದೇ ಮುಖ್ಯವಾದ ಮಾರ್ಗವು. ||೨೪-೨೫-೨೬-೨೭-೨೮||

ಎಲೈ ತಪಸ್ವಿಯೇ, ಸಚ್ಚಿದಾನಂದಸ್ವರೂಪವೂ ಅನಂತವೂ ಆದ ಪರಬ್ರಹ್ಮವಸ್ತುವು ಧ್ಯಾನಗೋಚರವಲ್ಲದುದರಿಂದ ಈ ಶಬ್ದಗಳ ವಾಚ್ಯಾರ್ಥವನ್ನು ಬಿಟ್ಟು

ಇದಂತಯಾ ನ ದೇವೇಶಮಭಿಧ್ಯಾಯೇನ್ಮಹಾನಪಿ ।
ಬ್ರಹ್ಮಣಃ ಸಾಕ್ಷಿರೂಪತ್ವಾನ್ನೇದಂ ಯದಿತಿ ಹಿ ಶ್ರುತಿಃ ॥೩೦॥

ಏವಂ ಧ್ಯಾನಪರಃ ಸಾಕ್ಷಾಚ್ಛಿವಮೇವ ನ ಚಾನ್ಯಥಾ ।
ಅನೇನ ಸದೃಶೋಲೋಕೇ ನ ಹಿ ವೇದವಿದಾಂ ವರ ॥೩೧॥

ಪ್ರಕ್ಷೀಣಾಶೇಷಪಾಪಸ್ಯ ಜ್ಞಾನೇ ಧ್ಯಾನೇ ಭವೇನ್ಮತಿಃ ।
ಪಾಪೋಪ ಹತಬುದ್ಧೀನಾಂ ತದ್ವಾರ್ತಾಽಪಿ ಸುದುರ್ಲಭಾ ॥೩೨॥

ಅಥವಾ ವಿಷ್ಣುಮವ್ಯಕ್ತ ಮಾಧಾರಂ ದೇವನಾಯಕಂ ।
ಶಂಖಚಕ್ರಧರಂ ದೇವಂ ಪದ್ಮಹಸ್ತಂ ಸುಲೋಚನಂ ॥೩೩॥

ಲಕ್ಷ್ಯಾರ್ಥವಾದ ಅಖಂಡೈಕರಸರೂಪವಾದ ವಸ್ತುವೇ ನಾನಾಗಿರುವೆನೆಂದು ಭಾವನೆ ಮಾಡಬೇಕು. ॥೨೯॥

ಇದೇ ಪರಬ್ರಹ್ಮವಸ್ತುವೆಂದು ಮೂರ್ತ್ಯಾದಿಗಳ ರೂಪದಿಂದ ಪರಮಾತ್ಮನನ್ನು ಧ್ಯಾನಮಾಡಲು ಸಾಧ್ಯವಿಲ್ಲ. ಕಾರಣವೇನೆಂದರೆ? ಬ್ರಹ್ಮನು ಸಾಕ್ಷಿಸ್ವರೂಪನು. ಪರಬ್ರಹ್ಮನು ಸಾಕ್ಷಿಸ್ವರೂಪನೆಂಬುದನ್ನು "ಯಚ್ಚಕ್ಷುಷಾ ನಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ । ತದೇವಬ್ರಹ್ಮತ್ವಂ ವಿದ್ಧಿನೇದಂ ಯದಿದ ಮುಪಾಸತೇ ॥" ಇತ್ಯಾದಿಯಾದ ಕೇನೋಪನಿಷತ್ತಿನ ವಾಕ್ಯಗಳು ವಿವರಿಸುತ್ತ, ಪರಬ್ರಹ್ಮನನ್ನು ಹೊರಗೆ ಕಾಣುವ ಮೂರ್ತ್ಯಾದಿಸ್ವರೂಪಗಳಿಂದ ಅನುಸಂಧಾನಮಾಡಲಾಗುವುದಿಲ್ಲವೆಂದು ಹೇಳಿರುವುದು. ॥೩೦॥

ವೇದವನ್ನು ತಿಳಿದವರಲ್ಲಿ ಶ್ರೇಷ್ಠನಾದ ಬೃಹಸ್ಪತಿಯೇ, ಸರ್ವಾಂತರವಾದ ಚೈತನ್ಯರೂಪನಾದ ಪ್ರರಬ್ರಹ್ಮನೇ ನಾನೆಂದು ಧ್ಯಾನಮಾಡುವ ಮನುಷ್ಯನು ಸಾಕ್ಷಾತ್ ಶಿವಸ್ವರೂಪನೇ ಹೊರತು ಬೇರೆಯಲ್ಲ. ಲೋಕದಲ್ಲಿ ಇವನಿಗೆ ಸಮಾನನಾದ ಮನುಷ್ಯನಾವನೂ ಇರುವುದಿಲ್ಲ. ॥೩೧॥

ಪಾಪಗಳೆಲ್ಲವೂ ನಾಶವಾದ ಮನುಷ್ಯನಿಗೆ ಜ್ಞಾನಾಭ್ಯಾಸದಲ್ಲಿಯೂ, ಧ್ಯಾನದಲ್ಲಿಯೂ ಮನಸ್ಸುಂಟಾಗುವುದು. ಪಾಪಗಳಿಂದ ನಾಶವಾದ ಬುದ್ಧಿಯುಳ್ಳವರಿಗೆ ಇವುಗಳ ಹೆಸರೂ ಕಿವಿಗೆ ಬೀಳುವುದಿಲ್ಲ. ॥೩೨॥

ಹಾಗಲ್ಲದೇಹೋದರೆ ಪ್ರಕೃತಿಸ್ವರೂಪನೂ, ಸಮಸ್ತ ಪ್ರಪಂಚಕ್ಕೂ ಕಾರಣನೂ, ದೇವತೆಗಳಿಗೆಲ್ಲರಿಗೂ ಒಡೆಯನೂ, ಶಂಖಚಕ್ರಗಳನ್ನೂ ಕಮಲವನ್ನೂ

ಕಿರೀಟಕೇಯೂರಧರಂ ಪೀತಾಂಬರಧರಂ ಹರಿಂ ।
ಶ್ರೀವತ್ಸಲಕ್ಷಣಂ ವಿಷ್ಣುಂ ಪೂರ್ಣಚಂದ್ರನಿಭಾನನಂ ॥೩೪॥

ಪದ್ಮಪುಷ್ಪದಲಾಭೋಷ್ಠಂ ಸುಪ್ರಸನ್ನಂ ಶುಚಿಸ್ಮಿತಂ ।
ಶುದ್ಧ ಸ್ಫಟಿಕ ಸಂಕಾಶ ಮಹಮಿತ್ಯೇವ ಚಿಂತಯೇತ್ ॥೩೫॥

ಏತಚ್ಚದುರ್ಲಭಂ ಪ್ರೋಕ್ತಂ ಯೋಗಶಾಸ್ತ್ರವಿಶಾರದೈಃ ।
ಅಥವಾ ದೇವದೇವೇಶಂ ಬ್ರಹ್ಮಾಣಂ ಪರಮೇಷ್ಠಿನಂ ॥೩೬॥

ಅಕ್ಷಮಾಲಾಧರಂ ದೇವಂ ಕಮಂಡಲು ಕರಾಂಬುಜಂ ।
ವರದಾಭಯಹಸ್ತಂ ಚ ವಾಗ್ದೇವ್ಯಾ ಸಹಿತಂ ಸದಾ ॥೩೭॥

ಕುಂದೇಂದು ಸದೃಶಾಕಾರ ಮಹಮಿತ್ಯೇವ ಚಿಂತಯೇತ್ ।
ಅಥವಾಽಗ್ನಿಂ ತಥಾಽಽದಿತ್ಯಂ ಚಂದ್ರಂ ವಾ ದೇವತಾಂತರಂ ॥೩೮॥
ವೇದೋಕ್ತೇನೈವಮಾರ್ಗೇಣ ಸದಾಽಹಮಿತಿ ಚಿಂತಯೇತ್ ।

ಧರಿಸಿದವನೂ, ಪೀತಾಂಬರವನ್ನುಟ್ಟು ಕಿರೀಟಾದಿಗಳನ್ನೂ ಆಭರಣಗಳನ್ನೂ ಧರಿಸಿದವನೂ, ಎದೆಯಲ್ಲಿ ಶ್ರೀವತ್ಸವೆಂಬ ಗುರುತುಳ್ಳವನೂ, ಪೂರ್ಣಚಂದ್ರನಂತೆ ಮುಖವುಳ್ಳವನೂ, ಕಮಲದಂತೆ ತುಟಿಯುಳ್ಳವನೂ, ಶುದ್ಧವಾದ ಸ್ಫಟಿಕದಂತೆ ಹೊಳೆಯುತ್ತಿರುವ ಶರೀರಕಾಂತಿಯುಳ್ಳವನೂ, ಪ್ರಸನ್ನನೂ, ಮಂದಹಾಸಯುಕ್ತನೂ, ಆದ ವಿಷ್ಣುವನ್ನು ಸಕಲರೂಪದಿಂದಲೂ, ನಿಷ್ಕಲರೂಪದಿಂದಲೂ, ಧ್ಯಾನಮಾಡಬೇಕು. ಹೀಗೆ ಧ್ಯಾನಮಾಡುವುದೂ ಕಷ್ಟವಾದುದೆಂದೂ, ಪುಣ್ಯಫಲದಿಂದ ಇದು ದೊರೆಯಬೇಕೆಂದೂ ಯೋಗಶಾಸ್ತ್ರವನ್ನು ಬಲ್ಲವರು ಹೇಳುವರು. ॥೩೩-೩೪-೩೫॥

ಇಲ್ಲದಿದ್ದರೆ ಶ್ರೇಷ್ಠವಾದ ಯಜ್ಞಾದಿಗಳನ್ನು ಮಾಡಿದ ಜಪಸರವನ್ನೂ, ಕಮಂಡಲುವನ್ನೂ, ಅಭಯ ವರದ ಹಸ್ತಗಳನ್ನೂ ಧರಿಸಿದ ಸರಸ್ವತೀ ಸಹಿತನಾದ ಮೊಲ್ಲೆಯ ಹೂವಿನಂತೆಯೂ ಚಂದ್ರನಂತೆಯೂ ಕಾಂತಿಯುಕ್ತನಾದ, ದೇವತೆಗಳಿಗೆಲ್ಲರಿಗೂ ಸ್ವಾಮಿಯಾದ ಬ್ರಹ್ಮನನ್ನು ಸಕಲ ನಿಷ್ಕಲ ರೂಪವಾಗಿ ಧ್ಯಾನಮಾಡಬಹುದು. ॥೩೬-೩೭॥

ಅಗ್ನಿಯನ್ನೂ, ಸೂರ್ಯನನ್ನೂ, ಚಂದ್ರನನ್ನೂ, ಬೇರೆ ತನಗೆ ಇಷ್ಟವಾದ

ಏವಮಭ್ಯಾಸಯುಕ್ತಸ್ಯ ಪುರುಷಸ್ಯ ಮಹಾತ್ಮನಃ ॥೩೯॥

ಕ್ರಮಾದ್ವೇದಾಂತವಿಜ್ಞಾನಂ ವಿಜಾಯೇತ ನ ಸಂಶಯಃ ।
ಜ್ಞಾನಾದಜ್ಞಾನವಿಚ್ಛಿತ್ತಿಃ ಸೈವ ತಸ್ಯ ವಿಮುಕ್ತತಾ ॥೪೦॥

ಸರ್ವಮುಕ್ತಂ ಸಮಾಸೇನ ಮಯಾ ವೇದಾಂತಸಂಗ್ರಹಂ ।
ಮತ್ಪ್ರಸಾದಾದ್ವಿಜಾನೀಹಿ ಮಾ ಶಂಕಿಷ್ಠಾಃ ಕದಾಚನ ॥೪೧॥

ಇತಿ ಶ್ರೀಸ್ಕಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ
ಧ್ಯಾನವಿಧಿನಿರೂಪಣಂ ನಾಮ ಏಕೋನವಿಂಶೋಽಧ್ಯಾಯಃ

ದೇವತೆಗಳನ್ನಾದರೂ ವೇದದಲ್ಲಿ ಹೇಳಿರುವಂತೆ ಯಾವಾಗಲೂ ನಾನೇ ಆ ದೇವತಾ ಸ್ವರೂಪನೆಂದು ಸಕಲ ನಿಷ್ಕಲರೂಪವಾಗಿ ಧ್ಯಾನಮಾಡಬಹುದು. ॥೩೮॥

ಹೀಗೆ ಅಭ್ಯಾಸಮಾಡುತ್ತಿರುವ ಮಹಾತ್ಮನಾದ ಮನುಜನಿಗೆ ಕ್ರಮವಾಗಿ ವೇದಾಂತ ವಿಷಯಕವಾದ ಜ್ಞಾನವುಂಟಾಗುವುದರಲ್ಲಿ ಸಂದೇಹವಿಲ್ಲವು. ಜ್ಞಾನದಿಂದ ಅಜ್ಞಾನವು ನಾಶವಾಗುವುದು. (ಅದನ್ನೇ ಮುಕ್ತಿಸ್ವರೂಪವೆಂದು ಹೇಳುವರು.) ಅದೇ ಮುಕ್ತಿಸ್ವರೂಪವು. ॥೩೯-೪೦॥

ಬೃಹಸ್ಪತಿಯೇ, ವೇದಾಂತಶಾಸ್ತ್ರವನ್ನೆಲ್ಲವನ್ನೂ ಸಂಗ್ರಹಿಸಿ ಎಲ್ಲವನ್ನೂ ಹೇಳಿರುವೆನು. ನನ್ನ ಅನುಗ್ರಹದಿಂದ ಇದೆಲ್ಲವನ್ನೂ ನೀನು ತಿಳಿದೆಂದಿಗೂ ಸಂದೇಹ ವನ್ನು ಹೊಂದಬೇಡ. ಎಂದು ವಿವರಿಸಿದನು. ॥೪೧॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ ಧ್ಯಾನಪ್ರಕಾರಗಳನ್ನು ವಿವರಿಸಿರುವ ಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಂದಪುರಾಣಾಂತರ್ಗತಾ ಸೂತಸಂಹಿತಾ

ಜ್ಞಾನಯೋಗಖಂಡಂ

|| ವಿಂಶೋಽಧ್ಯಾಯಃ ||

ಇಪ್ಪತ್ತನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಸಮಾಧಿಂ ಭವನಾಶನಂ ।
ಸಮಾಧಿಃ ಸಂವಿದುತ್ಪತ್ತಿಃ ಪರಜೀವೈಕ್ಯತಾಮತಿಃ ॥೧॥

ಯದಿ ಜೀವಃ ಪರಾದ್ಭಿನ್ನಃ ಕಾರ್ಯತಾಮೇತಿ ಸುವ್ರತ ।
ಅಚಿತ್ತ್ವಂ ಚ ಪ್ರಸಜ್ಯೇತ ಘಟವತ್ಪಂಡಿತೋತ್ತಮ ॥೨॥
ವಿನಾಶಿತ್ವಂ ಭಯಂ ಚ ಸ್ಯಾದ್ದ್ವಿತೀಯಾದ್ವಾ ಇತಿ ಶ್ರುತಿಃ ।

ಈಶ್ವರನು ಹಿಂದಿನ ಅಧ್ಯಾಯದಲ್ಲಿ ಧ್ಯಾನಸ್ವರೂಪವನ್ನು ವಿವರಿಸಿ ಈ ಅಧ್ಯಾಯದಲ್ಲಿ ಅದರ ಫಲವಾದ ಸಮಾಧಿಯ ಸ್ವರೂಪವನ್ನು ಹೇಳುತ್ತ, ಎಲೈ ಬೃಹಸ್ಪತಿಯೇ, ಸಂಸಾರದುಃಖನಾಶಕವಾದ ಸಮಾಧಿಯ ಸ್ವರೂಪವನ್ನು ಹೇಳುವೆನು, ಕೇಳು. ಜೀವಾತ್ಮಪರಮಾತ್ಮರು ಒಂದೇ ಎಂಬ ಬುದ್ಧಿಯನ್ನುಂಟುಮಾಡುವ ಮಹಾವಾಕ್ಯಾರ್ಥ ಲಕ್ಷ್ಯಾರ್ಥಸಾಕ್ಷಾತ್ಕಾರರೂಪವಾದ ಜ್ಞಾನೋತ್ಪತ್ತಿಯೇ ಸಮಾಧಿ ಎನಿಸುವುದು. ||೧||

ತತ್ವವಿಮರ್ಶಸ್ವರೂಪವೆಂತೆಂದರೆ ? ಎಲೈ ತಪಸ್ವಿಯೇ, ಜೀವನು ಪರಮಾತ್ಮನಿಗಿಂತ ಬೇರೆಯಾದರೆ ಕಾರ್ಯರೂಪನಾಗುವನು. ಕಾರ್ಯರೂಪವಾದ ವಸ್ತುಗಳೆಲ್ಲವೂ ಘಟದಂತೆ ಜಡವೂ ವಿನಾಶಿಯೂ ಆದವುಗಳು. ಅವುಗಳಿಗೆ ಎರಡನೆಯ ವಸ್ತುಗಳಿಂದ ಭಯವೂ ಸಂಭವಿಸುವುದು. ಜೀವಾತ್ಮನಿಗೂ ಇವುಗಳೆಲ್ಲವೂ ಉಂಟಾಗಬೇಕಾಗುವುದು. ಚೈತನ್ಯಸ್ವರೂಪನಾದ ಜೀವನು ಜಡನಲ್ಲ. ಚೈತನ್ಯವು ನಾಶವಾಗತಕ್ಕ

ನಿತ್ಯಃ ಸರ್ವಗತೋ ಹ್ಯಾತ್ಮಾ ಕೂಟಸ್ಥೋ ದೋಷವರ್ಜಿತಃ ॥೩॥

ಏಕಃ ಸ ಭಿದ್ಯತೇ ಭ್ರಾಂತ್ಯಾ ಮಾಯಯಾ ನ ಸ್ವರೂಪತಃ ।
ತಸ್ಮಾದದ್ವೈತಮೇವಾಸ್ತಿ ನ ಪ್ರಪಂಚೋ ನ ಸಂಸೃತಿಃ ॥೪॥

ಯಥಾಕಾಶೋ ಘಟಾಕಾಶೋ ಮಹಾಕಾಶ ಇತೀರಿತಃ ।
ತಥಾ ಭ್ರಾಂತ್ಯೈ ದ್ವಿಧಾ ಪ್ರೋಕ್ತೋ ಹ್ಯಾತ್ಮಾ ಜೀವೇಶ್ವರಾತ್ಮನಾ ॥೫॥

ನಾಹಂ ದೇಹೋ ನ ಚ ಪ್ರಾಣೋ ನೇಂದ್ರಿಯಾಣಿ ತಥೈವ ಚ ।
ನ ಮನೋಽಹಂ ನ ಬುದ್ಧಿಶ್ಚ ನೈವ ಚಿತ್ತಮಹಂಕೃತಿಃ ॥೬॥

ನಾಹಂ ಪೃಥ್ವೀ ನ ಸಲಿಲಂ ನ ಚ ವಹ್ನಿರ್ನಚಾನಿಲಃ ।
ನ ಚಾಕಾಶೋ ನ ಶಬ್ದಶ್ಚ ನ ಚ ಸ್ಪರ್ಶಸ್ತಥಾ ರಸಃ ॥೭॥

ನಾಹಂ ಗಂಧೋ ನ ರೂಪಂ ಚ ನ ಮಾಯಾಽಹಂ ನ ಸಂಸೃತಿಃ ।
ಸದಾ ಸಾಕ್ಷಿಸ್ವರೂಪತ್ವಾಚ್ಛಿವ ಏವಾಸ್ಮಿ ಕೇವಲಃ ॥೮॥
ಇತಿ ಧೀರ್ಯಾ ಮುನಿಶ್ರೇಷ್ಠ ಸಾ ಸಮಾಧಿರಿಹೋಚ್ಯತೇ ।

ದಲ್ಲ. ಚೈತನ್ಯಯುಕ್ತವಾದ ಬೇರೇ ವಸ್ತುಗಳಿಲ್ಲವಾದುದರಿಂದ ಭಯವೂ ಇಲ್ಲ. "ದ್ವಿತಿಯಾದ್ವೈ ಭಯಂ ಭವತಿ" ಎಂದು ವೇದವಚನವಿರುವುದು. ॥೨॥

ನಿತ್ಯನೂ, ಸರ್ವವ್ಯಾಪಿಯೂ, ನಿರ್ವಿಕಾರನೂ, ದೋಷರಹಿತನೂ, ಏಕನೂ (ಅದ್ವಿತೀಯನೂ) ಆದ ಆತ್ಮನು ಮಾಯಾಸಂಬಂಧವಾದ ಭ್ರಾಂತಿಯಿಂದ ಬೇರೆ ಬೇರೆಯಾಗಿ ತೋರುವನು. ಸ್ವರೂಪದಿಂದ ಭೇದವಿಲ್ಲವು. ಆದುದರಿಂದ ಪ್ರಪಂಚವೂ ಇಲ್ಲ. ಜನನಮರಣರೂಪವಾದ ಸಂಸಾರವೂ ಇಲ್ಲ. ಆತ್ಮಸ್ವರೂಪ ಒಂದೇ ಇರುವುದು. ಉಪಾಧಿಯಾದ ಘಟದಿಂದ ಆಕಾಶವು ಘಟಾಕಾಶಮಹಾಕಾಶವೆಂದು ಹೆಸರನ್ನು ಪಡೆವಂತೆ ಶರೀರವೆಂಬ ಉಪಾಧಿಯಿಂದ ಭ್ರಾಂತರಾದವರು ಜೀವಾತ್ಮ ಪರಮಾತ್ಮ ಎಂದು ಎರಡುಬಗೆಯಾಗಿ ಹೇಳುವರು. ॥೩-೪-೪-೫॥

ಕಾರ್ಯರೂಪವಾದ ದೇಹ, ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಇವುಗಳು ನಾನಲ್ಲ. ॥೬॥

ಕಾರಣ ರೂಪಗಳಾದ ಭೂಮಿ, ನೀರು, ಅಗ್ನಿ, ವಾಯು, ಆಕಾಶ ಎಂಬ ಪಂಚಭೂತಗಳೂ, ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಪಂಚತನ್ಮಾತ್ರಗಳೂ,

ಅಥವಾ ಪಂಚಭೂತೇಭ್ಯೋ ಜಾತಮಂಡಂ ಮಹಾಮುನೇ ॥೯॥

ಭೂತಮಾತ್ರತಯಾ ದಗ್ಧ್ವಾ ವಿವೇಕೇನೈವ ವಹ್ನಿನಾ ।
ಪುನಃ ಸ್ಥೂಲಾದಿಭೂತಾನಿ ಸೂಕ್ಷ್ಮಭೂತಾತ್ಮನಾ ತಥಾ ॥೧೦॥

ವಿಲಾಪ್ಯೈವಂ ವಿವೇಕೇನ ತತಸ್ತಾನ್ಯಪಿಬುದ್ಧಿಮಾನ್ ।
ಮಾಯಾಮಾತ್ರತಯಾ ದಗ್ಧ್ವಾ ಮಾಯಾಂ ಚ ಪ್ರತ್ಯಗಾತ್ಮನಾ ॥೧೧॥

ಸೋಽಹಂ ಬ್ರಹ್ಮ ನ ಸಂಸಾರೀ ನ ಮತ್ತೋಽನ್ಯತ್ಕದಾಚನ ।
ಇತಿ ವಿದ್ಯಾತ್ಸ್ವಮಾತ್ಮಾನಂ ಸ ಸಮಾಧಿಃ ಪ್ರಕೀರ್ತಿತಃ ॥೧೨॥

ಅಥವಾ ಯೋಗಿನಾಂ ಶ್ರೇಷ್ಠ ಪ್ರಣವಾತ್ಮಾನಮೀಶ್ವರಂ ।
ವರ್ಣತ್ರಯಾತ್ಮನಾ ವಿದ್ಯಾದಕಾರಾದಿ ಕ್ರಮೇಣ ತು ॥೧೩॥

ಋಗ್ವೇದೋಽಯಮಕಾರಾಖ್ಯ ಉಕಾರೋ ಯಜುರುಚ್ಯತೇ ।
ಮಕಾರಸ್ಸಾಮವೇದಾಖ್ಯೋ ನಾದಸ್ತ್ವಾಥರ್ವಣೀ ಶ್ರುತಿಃ ॥೧೪॥

ಪ್ರಕೃತಿಯೂ, ಸಂಸಾರವೂ, ನಾನಲ್ಲ. ನಾನು ಸಾಕ್ಷಿಸ್ವರೂಪನಾದುದರಿಂದ ಸಾಕ್ಷಾತ್ ಶಿವನೇ ಆಗಿರುವೆನು. ಹೀಗೆಂಬ ಬುದ್ಧಿಯೇ ಸಮಾಧಿ ಎನಿಸುವುದು. ॥೭-೮॥

ಅಥವಾ ಎಲೈ ಬೃಹಸ್ಪತಿಯೇ, ಪಂಚಭೂತಗಳಿಂದ ಉತ್ಪತ್ತಿಯಾದ ಬ್ರಹ್ಮಾಂಡವನ್ನು ನಿತ್ಯಾನಿತ್ಯವಸ್ತುವಿವೇಕವೆಂಬ ಬೆಂಕಿಯಿಂದ ಸುಟ್ಟು, ಪಂಚಭೂತಗಳಲ್ಲಿಯೇ ಸೇರಿಸಿ. ಆ ಪಂಚಭೂತಗಳನ್ನು ಸೂಕ್ಷ್ಮಭೂತಗಳಲ್ಲಿ ಸೇರಿಸಿ, ಅದೇ ವಿವೇಕದಿಂದಲೇ ಸೂಕ್ಷ್ಮಭೂತಗಳನ್ನು ಮಾಯೆಯಲ್ಲಿಯೂ, ಮಾಯೆಯನ್ನು ಪ್ರತ್ಯಗಾತ್ಮನಲ್ಲಿಯೂ ಸೇರಿಸಿ. ನಾನು ಪರಬ್ರಹ್ಮಸ್ವರೂಪನು. ಜೀವನಲ್ಲ. ನನಗಿಂತ ಬೇರೆಯಾದ ವಸ್ತುವೇ ಇಲ್ಲವು ಎಂದು ತನ್ನ ಆತ್ಮಸ್ವರೂಪವನ್ನು ತಿಳಿದುಕೊಳ್ಳುವುದೇ ಸಮಾಧಿ ಎನಿಸುವುದು. ॥೯-೧೦-೧೧-೧೨॥

ಯೋಗಿಗಳಲ್ಲಿ ಶ್ರೇಷ್ಠನಾದ ಬೃಹಸ್ಪತಿಯೇ, ಪ್ರಣವಸ್ವರೂಪನಾದ ಪರಮಾತ್ಮನನ್ನು ಅಕಾರ, ಉಕಾರ, ಮಕಾರ ರೂಪವಾದ ವರ್ಣತ್ರಯಸ್ವರೂಪನೆಂದು ತಿಳಿಯಬೇಕು. ॥೧೩॥

ಅಕಾರವು ಋಗ್ವೇದವು. ಉಕಾರವು ಯಜುರ್ವೇದವು. ಮಕಾರವು ಸಾಮವೇದವು. ನಾದವು ಅಥರ್ವಣವೇದವು. ಕ್ರಮವಾಗಿ ಅಕಾರ, ಉಕಾರ, ಮಕಾರ

ಅಕಾರೋ ಭಗವಾನ್ ಬ್ರಹ್ಮಾ ತಥೋ ಕಾರೋ ಹರಿಃ ಸ್ವಯಂ ।
ಮಕಾರೋ ಭಗವಾನ್ ರುದ್ರಸ್ತಥಾ ನಾದಸ್ತು ಕಾರಣಂ ॥೧೫॥

ಅಗ್ನಯಶ್ಚ ತಥಾ ಲೋಕಾ ಅವಸ್ಥಾಽವಸಥಾಸ್ತ್ರಯಃ ।
ಉದಾತ್ತಾದಿ ಸ್ವರಾಃ ಕಾಲಾಶ್ಚೈತೇ ವರ್ಣತ್ರಯಾತ್ಮಕಾಃ ॥೧೬॥

ಇತಿ ಜ್ಞಾತ್ವಾ ಪುನಃ ಸರ್ವಮಕ್ಷರತ್ರಯಮಾತ್ರತಃ ।
ವಿಲಾಪ್ಯಾಕಾರ ಮುದ್ವಂದ್ವಮುಕಾರಾಖ್ಯೇ ವಿಲಾಪಯೇತ್ ॥೧೭॥

ಉಕಾರಂ ಚ ಮಕಾರಾಖ್ಯೇ ಮಹಾನಾದೇ ಮಕಾರಕಂ ।
ತಥಾ ಮಾಯಾತ್ಮನಾ ನಾದಂ ಮಾಯಾಂ ಜೀವಾತ್ಮರೂಪತಃ ॥೧೮॥

ಜೀವಮಿಶ್ವರಭಾವೇನ ವಿದ್ಯಾತ್ಸೋಽಹಮಿತಿ ಧ್ರುವಂ ।
ಏಷಾಽಬುದ್ಧಿಶ್ಚ ವಿದ್ವದ್ಭಿಃ ಸಮಾಧಿರಿತಿ ಕೀರ್ತಿತಾ ॥೧೯॥

ನಾದಗಳು ಬ್ರಹ್ಮಾ, ವಿಷ್ಣು, ರುದ್ರ, ತ್ರಿಮೂರ್ತಿಗಳಿಗೂ ಕಾರಣವಾದ ವಿರಾಟ್ ಆತ್ಮಾ, ಇವರೇ ಕ್ರಮವಾಗಿ ದೇವತೆಗಳಾಗಿ ಉಳ್ಳವು. ||೧೪-೧೫||

ಈ ವರ್ಣತ್ರಯಗಳೂ, ಮತ್ತು ನಾದರೂಪವಾದ ಓಂಕಾರವೂ, ಕ್ರಮವಾಗಿ ಗಾರ್ಹಪತ್ಯ, ದಕ್ಷಿಣಾಗ್ನಿ, ಆಹವನೀಯ, ಸಂವರ್ತಕಾಗ್ನಿ ಸ್ವರೂಪಗಳಾಗಿಯೂ ಪೃಥಿವೀ, ಅಂತರಿಕ್ಷ, ದ್ಯು, ಸೋಮಲೋಕಸ್ವರೂಪಗಳಾಗಿಯೂ, ಜಾಗ್ರತ್, ಸ್ವಪ್ನ, ತುರೀಯ ಎಂಬ ಅವಸ್ಥಾ ಸ್ವರೂಪಗಳಾಗಿಯೂ, ನಾಭಿ, ಹೃದಯ, ಕಂಠ, ಮೂರ್ಧ ಸುಷುಪ್ತಿ, ಸ್ಥಾನಸ್ವರೂಪಗಳಾಗಿಯೂ, ಭೂತ, ಭವಿಷ್ಯದ್ವರ್ತಮಾನ ಸಾಧಾರಣ ಕಾಲಸ್ವರೂಪಗಳಾಗಿಯೂ, ಇರುವುವು. ||೧೬||

ಹೀಗೆ ಸಮಸ್ತವೂ ಅಕ್ಷರತ್ರಯರೂಪವಾದುದೆಂದು ತಿಳಿದು, ಅಕಾರವನ್ನು ಉಕಾರದಲ್ಲಿಯೂ, ಉಕಾರವನ್ನು ಮಕಾರದಲ್ಲಿಯೂ, ಮಕಾರವನ್ನು ನಾದದಲ್ಲಿಯೂ, ನಾದವನ್ನು ಮಾಯೆಯಲ್ಲಿಯೂ, ಮಾಯೆಯನ್ನು ಜೀವಾತ್ಮನಲ್ಲಿಯೂ, ಜೀವಾತ್ಮ ನನ್ನು ಪರಮಾತ್ಮನಲ್ಲಿಯೂ, ಐಕ್ಯಗೊಳಿಸಿ, ಆ ಪರಮಾತ್ಮನೇ ನಾನು. ಎಂಬ ಭಾವನೆಯಿಂದ ಇರಬೇಕು. ಈ ರೀತಿಯಾದ ಬುದ್ಧಿಯನ್ನೇ ಜ್ಞಾನಿಗಳು ಸಮಾಧಿ ಎಂದು ಹೇಳುವರು. ||೧೭-೧೮-೧೯||

ಯಥಾ ಫೇನತರಂಗಾದಿ ಸಮುದ್ರಾದುತ್ಥಿತಂ ಪುನಃ ।
ಸಮುದ್ರೇ ಲೀಯತೇ ತದ್ವಜ್ಜಗನ್ಮಯ್ಯೇವ ಲೀಯತೇ ॥೨೦॥

ತಸ್ಮಾನ್ಮತ್ತಃ ಪೃಥಙ್ನಾಸ್ತಿ ಜಗನ್ಮಾಯಾ ಚ ಸರ್ವದಾ ।
ಇತಿ ಬುದ್ಧಿ(ಃ) ಸಮಾಧಿಃ ಸ್ಯಾತ್ಸಮಾಧಿರಿತಿ ಹಿ ಶ್ರುತಿಃ ॥೨೧॥

ಯಸ್ಯೈವಂ ಪರಮಾತ್ಮಾಽಯಂ ಪ್ರತ್ಯಗ್ಭೂತಃ ಪ್ರಕಾಶಿತಃ ।
ಸ ಯಾತಿ ಪರಮಂ ಭಾವಂ ಸ್ವಕಂ ಸಾಕ್ಷಾತ್ಪರಾಮೃತಂ ॥೨೨॥

ಯದಾ ಮನಸಿ ಚೈತನ್ಯಂ ಭಾತಿ ಸರ್ವತ್ರಗಂ ಸದಾ ।
ಯೋಗಿನೋಽವ್ಯವಧಾನೇನ ತದಾ ಸಂಪದ್ಯತೇ ಸ್ವಯಂ ॥೨೩॥

ಯದಾ ಸರ್ವಾಣಿ ಭೂತಾನಿ ಸ್ವಾತ್ಮನ್ಯೇವಾಭಿಪಶ್ಯತಿ ।
ಸರ್ವಭೂತೇಷು ಚಾತ್ಮಾನಂ ಬ್ರಹ್ಮ ಸಂಪದ್ಯತೇ ತದಾ ॥೨೪॥

ಸಮುದ್ರದಲ್ಲಿ ಹುಟ್ಟಿದ ನೊರೆ ಅಲೆ ಮುಂತಾದುವು ಸಮುದ್ರದಲ್ಲಿಯೇ ಲಯವಾಗುವಂತೆ ನನ್ನಲ್ಲಿ ಹುಟ್ಟಿದ ಜಗತ್ತು ನನ್ನಲ್ಲಿಯೇ ಲಯವನ್ನು ಹೊಂದುವುದು. ಆದುದರಿಂದ ನನಗಿಂತ ಬೇರೆಯಾದ ವಸ್ತುವೇ ಇಲ್ಲ. ಪ್ರಪಂಚವು ಯಾವಾಗಲೂ ಮಾಯಾಸ್ವರೂಪವಾದುದು. ಎಂದು ತಿಳಿದುಕೊಳ್ಳುವುದೇ ಸಮಾಧಿ ಎನಿಸುವುದು. "ಇದಂ ಸರ್ವಂ ಯದಯಮಾತ್ಮಾ" ಬೃ. ಉ. ೨, ೪. ೬. ಎಂಬುದೇ ಇದಕ್ಕೆ ಪ್ರಮಾಣವಚನವು. ॥೨೦-೨೧॥

ಯಾವ ಮನುಜನಿಗೆ ಈ ರೀತಿಯಲ್ಲಿ ಅಂತರಾತ್ಮನಾದ ಪರಮಾತ್ಮನು ಪ್ರಕಾಶಿಸುವನೋ ಅವನು ಪರಮಾನಂದ ಸ್ವರೂಪವಾದ ಸ್ವಸ್ವರೂಪವನ್ನು ಪಡೆಯುವನು. ಇದನ್ನು ಹಿಂದಿನ ಖಂಡದ ಮೂರನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ಹೇಳಿದೆ. ॥೨೨॥

ಯೋಗಿಗೆ ತನ್ನ ಮನಸ್ಸಿನಲ್ಲಿ ಎಲ್ಲೆಡೆಯಲ್ಲಿಯೂ ಇರುವ ಚೈತನ್ಯವು ಅಜ್ಞಾನದ ಆವರಣವಿಲ್ಲದೇ ಪ್ರಕಾಶಿಸಿದಾಗ ಆ ಯೋಗಿಯು ಬ್ರಹ್ಮಸ್ವರೂಪನಾಗುವನು. ॥೨೩॥

ಯಾವಾಗ ಸಮಸ್ತ ಪ್ರಾಣಿಗಳೂ ಆತ್ಮಸ್ವರೂಪದಿಂದ ತನ್ನಲ್ಲಿಯೇ ಇರುವುವೆಂದೂ, ಸಮಸ್ತ ಪ್ರಾಣಿಗಳಲ್ಲಿಯೂ ಆತ್ಮಸ್ವರೂಪದಿಂದ ತಾನು ಇರುವೆನೆಂದೂ ಯೋಗಿಯು ತಿಳಿಯುವನೋ ಆಗ ಅವನು ಪರಬ್ರಹ್ಮಸ್ವರೂಪನಾಗಿರುವನು. ॥೨೪॥

ಯದಾ ಸರ್ವಾಣಿ ಭೂತಾನಿ ಸಮಾಧಿಸ್ಥೋ ನ ಪಶ್ಯತಿ ।
ಏಕೀಭೂತಃ ಪರೇಣಾಸೌ ತದಾ ಭವತಿ ಕೇವಲಃ ॥೧೫॥

ಯದಾ ಸರ್ವೇ ಪ್ರಮುಚ್ಯಂತೇ ಕಾಮಾ ಯೇಽಸ್ಯ ಹೃದಿ ಸ್ಥಿತಾಃ ।
ತದಾಽಸಾವಮೃತೀಭೂತಃ ಕ್ಷೇಮಂ ಗಚ್ಛತಿ ಪಂಡಿತಃ ॥೧೬॥

ಯದಾ ಭೂತ ಪೃಥಗ್ಭಾವಮೇಕಸ್ಥಮನುಪಶ್ಯತಿ ।
ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ ॥೧೭॥

ಯದಾ ಪಶ್ಯತಿ ಚಾತ್ಮಾನಂ ಕೇವಲಂ ಪರಮಾರ್ಥತಃ ।
ಮಾಯಾ ಮಾತ್ರಂ ಜಗತ್ಕೃತ್ಸ್ನಂ ತದಾ ಭವತಿ ನಿರ್ವೃತಃ ॥೧೮॥

ಯಾವಾಗ ಪರಮಾತ್ಮನಲ್ಲಿ ಐಕ್ಯನಾಗಿ ಸಮಾಧಿಯಲ್ಲಿರುವ ಯೋಗಿಯು ಸಮಸ್ತ ಪ್ರಾಣಿಗಳಿಂದ ಕೂಡಿದ ಪ್ರಪಂಚವ್ಯವಹಾರವನ್ನು ಕಾಣುವುದಿಲ್ಲವೋ ಆಗ ಅವನು ಕೈವಲ್ಯವನ್ನು ಪಡೆದವನಾಗುವನು. ||೧೫||

ಮನುಷ್ಯನ ಮನಸ್ಸಿನಲ್ಲಿರುವ ಕಾಮನೆಗಳೆಲ್ಲ ಯಾವಾಗ ಬಿಟ್ಟುಹೋಗುವವೋ ಆಗ ಅವನು ಅಮೃತಸ್ವರೂಪನಾಗಿ ಜ್ಞಾನಿಯಾಗಿ ಸುಖವನ್ನು ಹೊಂದುವನು. "ಯೋಽಕಾಮೋ ನಿಷ್ಕಾಮ ಆಪ್ತಕಾಮ ಆತ್ಮಕಾಮೋ ನತಸ್ಯಪ್ರಾಣಾ ಉತ್ಕ್ರಾಮಂತ್ಯತ್ರೈವ ಸಮವನೀ(ಲೀ)ಯಂಯಂತೇ" "ಬ್ರಹ್ಮೈವಸನ್ ಬ್ರಹ್ಮಾಪ್ಯೇತಿ" ಎಂಬ ಬೃ. ಉ. ೪. ೪. ೬. ಶ್ರುತಿಯಲ್ಲಿ ಹೇಳಿದಂತೆ ಬ್ರಹ್ಮಸ್ವರೂಪನಾಗುವನೆಂದು ಮುಖ್ಯಾರ್ಥವು. ||೧೬||

ಭೂಮಿಯೇ ಮುಂತಾದ ಪಂಚಭೂತಗಳು ಎಲ್ಲವೂ ಪ್ರಳಯಕಾಲದಲ್ಲಿ ಪರಬ್ರಹ್ಮನಲ್ಲಿಯೇ ಆ ಪರಬ್ರಹ್ಮಸ್ವರೂಪವಾಗಿಯೇ ಇದ್ದು ಪುನಃ ಸೃಷ್ಟಿಕಾಲದಲ್ಲಿ ಪ್ರಪಂಚರೂಪವಾಗಿ ವಿಸ್ತಾರವಾಗುವುದೆಂದು ಯಾವನು ತಿಳಿಯುವನೋ ಅವನು ಬ್ರಹ್ಮಸ್ವರೂಪವಾಗುವನು. ||೧೭||

ಯಾವಾಗ ಮನುಷ್ಯನು ಆತ್ಮನೊಬ್ಬನೇ ಸತ್ಯಸ್ವರೂಪನೆಂದೂ, ಪ್ರಪಂಚವೆಲ್ಲವೂ ಕಲ್ಪಿತವಾಗಿ ಮಾಯಾಸ್ವರೂಪವಾದುದೆಂದೂ ತಿಳಿಯುವನೋ, ಆಗ ಅವನು ತೃಪ್ತನಾಗಿ ಮೋಕ್ಷವನ್ನು ಪಡೆವನು. ||೧೮||

ಯದಾ ಜನ್ಮ ಜರಾದುಃಖ ವ್ಯಾಧೀನಾಮೇಕಭೇಷಜಂ ।
ಕೇವಲಂ ಬ್ರಹ್ಮವಿಜ್ಞಾನಂ ಜಾಯತೇಽಸೌ ತದಾ ಶಿವಃ ॥೨೯॥

ತಸ್ಮಾದ್ವಿಜ್ಞಾನತೋ ಮುಕ್ತಿರ್ನಾನ್ಯಥಾ ಕರ್ಮಕೋಟಿಭಿಃ ।
ಕರ್ಮಸಾಧ್ಯಸ್ಯ ನಿತ್ಯತ್ವಂ ನ ಸಿಧ್ಯತಿ ಕದಾಚನ ॥೩೦॥

ಜ್ಞಾನಂ ವೇದಾಂತ ವಿಜ್ಞಾನಮಜ್ಞಾನ ಮಿತರನ್ಮುನೇ ।
ಅಹೋ ಜ್ಞಾನಸ್ಯ ಮಾಹಾತ್ಮ್ಯಂ ಮಯಾ ವಕ್ತುಂ ನ ಶಕ್ಯತೇ॥೩೧॥

ಅತ್ಯಲ್ಪೋಽಪಿ ಯಥಾ ವಹ್ನಿಃ ಸುಮಹನ್ನಾಶಯೇತ್ತಮಃ ।
ಜ್ಞಾನಾಭ್ಯಾಸಸ್ತಥಾಲ್ಪೋಽಪಿ ಮಹತ್ಪಾಪಂ ವಿನಾಶಯೇತ್ ॥೩೨॥

ಯಥಾ ವಹ್ನಿ ರ್ಮಹಾದೀಪ್ತಃ ಶುಷ್ಕಮಾರ್ದ್ರಂ ಚ ನಿರ್ದಹೇತ್ ।
ತಥಾ ಶುಭಾಶುಭಂ ಕರ್ಮ ಜ್ಞಾನಾಗ್ನಿರ್ದಹತಿ ಕ್ಷಣಾತ್ ॥೩೩॥

ಯಾವಾಗ ಮನುಷ್ಯನಿಗೆ ಹುಟ್ಟು, ಮುಪ್ಪು, ದುಃಖ ಈ ರೋಗಗಳಿಗೆ ಒಂದೇ ಔಷಧವಾದ ಬ್ರಹ್ಮಜ್ಞಾನವು ಹುಟ್ಟುವುದೋ ಆಗ ಅವನು ಶಿವಸ್ವರೂಪನಾಗುವನು. ||೨೯||

ಆದುದರಿಂದ ಜ್ಞಾನದಿಂದಲೇ ಮುಕ್ತಿಯುಂಟಾಗುವುದು. ಅನೇಕ ಕರ್ಮಗಳಿಂದಲೂ ಮುಕ್ತಿಯು ಲಭಿಸುವುದಿಲ್ಲ. ಕರ್ಮಜನ್ಯವಾದ ಫಲವು ಎಂದಿಗೂ ನಿತ್ಯವಾದುದಲ್ಲ. ||೩೦||

ವೇದಾಂತದ ತಿಳಿವಳಿಕೆಯೇ ಜ್ಞಾನವೆನಿಸುವುದು. ಮಿಕ್ಕ ಸಮಸ್ತಶಾಸ್ತ್ರಗಳೂ ಅಜ್ಞಾನದಲ್ಲಿ ಸೇರಿಹೋಗುವುವು. ಎಲೈ ಬೃಹಸ್ಪತಿಯೇ, ಜ್ಞಾನದ ಮಹಿಮೆಯನ್ನು ನಾನು ಸಂಪೂರ್ಣವಾಗಿ ವರ್ಣಿಸಲು ಸಾಧ್ಯವಾಗುವುದಿಲ್ಲ. ||೩೧||

ಬೆಂಕಿಯು ಸ್ವಲ್ಪವಾದುದಾದರೂ ದೊಡ್ಡ ಕತ್ತಲೆಯನ್ನು ನಾಶಮಾಡುವಂತೆ ಜ್ಞಾನಾಭ್ಯಾಸವು ಸ್ವಲ್ಪವಾದರೂ ದೊಡ್ಡ ದೊಡ್ಡ ಪಾಪಗಳನ್ನು ನಾಶಮಾಡುವುದು. ||೩೨||

ಹೆಚ್ಚಾಗಿ ಉರಿಯುತ್ತಿರುವ ಬೆಂಕಿಯು ಒಣಗಿದ ಮತ್ತು ಹಸಿಯ ಕಟ್ಟಿಗೆಯನ್ನು ಸುಟ್ಟುಹಾಕುವಂತೆ ಜ್ಞಾನವೆಂಬ ಅಗ್ನಿಯು ಶುಭಾಶುಭಕರ್ಮಫಲಗಳನ್ನು ನಾಶಮಾಡಬಿಡುವುದು. ಶುಭಕರ್ಮವೂ ಫಲಾನುಭವವಾದ ಮೇಲೆ ದುಃಖಕಾರಣವಾಗುವುದು. " ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ " ಭಗವದ್ಗೀತಾ ೯. ೨೧. ಎಂಬ ನ್ಯಾಯದಂತೆ. ||೩೩||

ಪದ್ಮಪತ್ರಂ ಯಥಾ ತೋಯೈಃ ಸ್ವಸ್ಥೈರಪಿ ನ ಲಿಪ್ಯತೇ ।
ತಥಾ ಶಬ್ದಾದಿಭಿರ್ಜ್ಞಾನೀ ವಿಷಯೈರ್ನ ಹಿ ಲಿಪ್ಯತೇ ॥೩೪॥

ಮಂತ್ರೌಷಧ ಬಲೈರ್ಯದ್ವಜ್ಜೀರ್ಯತೇ ಭಕ್ಷಿತಂ ವಿಷಂ ।
ತದ್ವತ್ಸರ್ವಾಣಿ ಪಾಪಾನಿ ಜೀರ್ಯಂತೇ ಜ್ಞಾನಿನಃ ಕ್ಷಣಾತ್ ॥೩೫॥

ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ ಅಶ್ನನ್ ಗಚ್ಛನ್ ಸ್ವಪನ್ ಶ್ವಸನ್ ।
ಪ್ರಲಪನ್ ವಿಸೃಜನ್ ಗೃಹ್ಣನ್ ಉನ್ಮಿಷನ್ ನಿಮಿಷನ್ನಪಿ ॥೩೬॥

ಅಕರ್ತಾಽಹಮ ಭೋಕ್ತಾಽಹ ಮಸಂಗಃ ಪರಮೇಶ್ವರಃ ।
ಸದಾ ಮತ್ಸನ್ನಿಧಾನೇನ ಚೇಷ್ಟತೇ ಸರ್ವಮಿಂದ್ರಿಯಂ ॥೩೭॥

ಇತಿ ವಿಜ್ಞಾನ ಸಂಪನ್ನಃ ಸಂಗಂ ತ್ಯಕ್ತ್ವಾ ಕರೋತಿ ಯಃ ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥೩೮॥

ತನ್ನಲ್ಲಿಯೇ ಇರುವ ನೀರು ಕಮಲದ ಎಲೆಗಳಿಗೆ ಹೇಗೆ ಅಂಟುವುದಿಲ್ಲವೋ ಹಾಗೆ ಜ್ಞಾನಿಯು ಶಬ್ದಾದಿವಿಷಯಗಳನ್ನನುಭವಿಸುತಿದ್ದರೂ ಆ ವಿಷಯಸಂಬಂಧ ವಾದ ದೋಷಗಳು ಅವನನ್ನಂಟುವುದಿಲ್ಲ. ॥೩೪॥

ಆಹಾರದೊಡನೆ ತಿಂದ ವಿಷವು ಮಂತ್ರ ಮತ್ತು ಔಷಧಿಗಳ ಬಲದಿಂದ ಜೀರ್ಣವಾಗುವಹಾಗೆ ಜ್ಞಾನಿಯ ಸಮಸ್ತ ಪಾಪಗಳೂ ಒಂದು ಕ್ಷಣದೊಳಗಾಗಿ ಬ್ರಹ್ಮಜ್ಞಾನದಿಂದ ನಾಶವಾಗುವುವು. ॥೩೫॥

ನೋಡುವುದು, ಕೇಳುವುದು, ಮುಟ್ಟುವುದು, ಮೂಸುವುದು, ಉಣ್ಣುವುದು, ನಡೆವುದು, ಮಲಗುವುದು, ಉಸಿರು ಬಿಡುವುದು, ಮಾತನಾಡುವುದು, ವಿಸರ್ಜನ ಮಾಡುವುದು, ತೆಗೆದುಕೊಳ್ಳುವುದು, ಕಣ್ಣಿರೆಪ್ಪೆಗಳನ್ನು ಬಡಿಯುವುದು, ಮುಂತಾದ ಕೆಲಸಗಳನ್ನು ಮಾಡುತ್ತಿರುವಾಗಲೂ ಪರಬ್ರಹ್ಮಸ್ವರೂಪನಾದ ನಾನು ಈ ಕೆಲಸ ಗಳನ್ನು ಮಾಡುವವನೂ ಅಲ್ಲ ಇದರಿಂದುಂಟಾದ ಸುಖದುಃಖಗಳನ್ನನುಭವಿಸುವವನೂ ಅಲ್ಲ. ನಾನು ಅಸಂಗನಾದ ಪರಮೇಶ್ವರನು. ಯಾವಾಗಲೂ ನನ್ನ ಸಾಮೀಪ್ಯದಿಂದ ಈ ಇಂದ್ರಿಯಗಳು ಕೆಲಸಮಾಡುವುವು. ಹೀಗೆಂಬ ತಿಳಿವಳಿಕೆಯಿಂದ ಅಭಿಮಾನವನ್ನು ಬಿಟ್ಟು ಯಾವನು ಕೆಲಸಗಳನ್ನು ಮಾಡುತ್ತಿರುವನೋ ಅವನು ಕಮಲದ ಎಲೆಗೆ ನೀರು ಅಂಟದಿರುವಂತೆ ಪಾಪಗಳ ಸಂಬಂಧವನ್ನು ಪಡೆಯುವುದಿಲ್ಲ.॥೩೬-೩೭-೩೮॥

ಯೇ ದ್ವಿಷಂತಿ ಮಹಾತ್ಮಾನಂ ಜ್ಞಾನವಂತಂ ನರಾಧಮಾಃ ।
ಪಚ್ಯಂತೇ ರೌರವೇ ಕಲ್ಪ ಮೇಕಾಂತೇ ನರಕೇ ಸದಾ ॥೩೯॥

ದುರ್ವೃತ್ತೋ ವಾ ಸುವೃತ್ತೋ ವಾ ಮೂರ್ಖಃ ಪಂಡಿತ ಏವ ವಾ ।
ಜ್ಞಾನಾಭ್ಯಾಸಪರಃ ಪೂಜ್ಯಃ ಕಿಂಪುನರ್ಜ್ಞಾನವಾನ್ನರಃ ॥೪೦॥

ನಿರಪೇಕ್ಷಂ ಮುನಿಂ ಶಾಂತಂ ನಿರ್ವೈರಂ ಸಮದರ್ಶಿನಂ ।
ಅನುವ್ರಜಾಮ್ಯಹಂ ನಿತ್ಯಂ ಪೂಯೇಯೇತ್ಯಂಘ್ರಿರೇಣುಭಿಃ ॥೪೧॥

ಯಥಾ ರಾಜಾ ಜನೈಃ ಸರ್ವೈಃ ಪೂಜ್ಯತೇ ಮುನಿಸತ್ತಮ ।
ತಥಾ ಜ್ಞಾನೀ ಸದಾ ದೇವೈರ್ಮುನಿಭಿಃ ಪೂಜ್ಯ ಏವ ಹಿ ॥೪೨॥

ಯಸ್ಯ ಗೇಹಂ ಸ ಮುದ್ದಿಶ್ಯಜ್ಞಾನೀ ಗಚ್ಛತಿ ಸುವ್ರತ ।
ತಸ್ಯ ಕ್ರೀಡಂತಿ ಪಿತರೋ ಯಾಸ್ಯಾಮಃ ಪರಮಾಂ ಗತಿಂ ॥೪೩॥

ಜ್ಞಾನಿಯಾದ ಮಹಾತ್ಮನನ್ನು ಯಾವ ನೀಚರು ದ್ವೇಷಿಸುವರೋ ಅವರು ಒಬ್ಬರೇ ರೌರವವೆಂಬ ನರಕದಲ್ಲಿ ಒಂದು ಕಲ್ಪದವರೆಗೆ ಯಾವಾಗಲೂ ದುಃಖವನ್ನನುಭವಿಸುತ್ತಿರುವರು. ॥೩೯॥

ದುರ್ಮಾರ್ಗಿಯಾಗಲೀ ಸನ್ಮಾರ್ಗಿಯಾಗಲೀ ಅವಿವೇಕಿಯಾಗಲೀ ವಿದ್ವಾಂಸನಾಗಲೀ ಜ್ಞಾನಸಾಧನವಾದ ಯಮನಿಯಮಾದಿಯೋಗಾಂಗಗಳನ್ನು ಅಭ್ಯಾಸ ಮಾಡುತ್ತಿದ್ದರೆ ಪೂಜ್ಯನಾಗುವನು. ಎಂದಮೇಲೆ ಜ್ಞಾನವನ್ನು ಪಡೆದವನು ಪೂಜ್ಯನೆಂಬ ವಿಷಯದಲ್ಲಿ ಹೇಳಬೇಕಾದುದೇನಿರುವುದು ? ॥೪೦॥

ಯಾವ ಅಪೇಕ್ಷೆಯೂ ಇಲ್ಲದವನಾಗಿರುವ ಶಾಂತನಾದ ಕ್ರೋಧವಿಲ್ಲದ ಎಲ್ಲರನ್ನೂ ತನ್ನಂತೆ ತಿಳಿಯುವ ಜ್ಞಾನಿಯನ್ನು ನಾನು ಯಾವಾಗಲೂ ಅನುಸರಿಸುತ್ತಿರುತ್ತೇನೆ. ಕಾರಣವೇನೆಂದರೆ ಅವನ ಪಾದಧೂಳಿಯು ನನ್ನನ್ನು ಪರಿಶುದ್ಧನನ್ನಾಗಿ ಮಾಡುವುದೆಂಬುದೇ ನನ್ನಾಸೆಯು. ॥೪೧॥

ಬೃಹಸ್ಪತಿಯೇ, ರಾಜನು ಸಮಸ್ತಜನರಿಗೂ ಹೇಗೆ ಪೂಜ್ಯನೋ ಹಾಗೆ ಜ್ಞಾನಿಯು ದೇವತೆಗಳಿಗೂ ಮುನಿಗಳಿಗೂ ಪೂಜ್ಯನಾಗಿರುವನು. ॥೪೨॥

ಯಾರ ಮನೆಗೆ ಜ್ಞಾನಿಯು ಹೋಗುವನೋ ಅವನ ಪಿತೃಗಳು ತಮಗೆ ಉತ್ತಮವಾದ ಸ್ವರ್ಗಾದಿಲೋಕಗಳು ಪ್ರಾಪ್ತವಾಗುವುವೆಂದು ಸಂತೋಷಪಡುವರು. ॥೪೩॥

ಯಸ್ಯಾನುಭವಪರ್ಯಂತಾ ಬುದ್ಧಿಸ್ತತ್ವೇ ಪ್ರವರ್ತತೇ ।
ತದ್ದೃಷ್ಟಿಗೋಚರಾಃ ಸರ್ವೇ ಮುಚ್ಯಂತೇ ಸರ್ವಕಿಲ್ಬಿಷೈಃ ॥೪೪॥

ಕುಲಂ ಪವಿತ್ರಂ ಜನನೀ ಕೃತಾರ್ಥಾ
ವಿಶ್ವಂಭರಾ ಪುಣ್ಯವತೀ ಚ ತೇನ ।
ಅಪಾರಸಚ್ಚಿತ್ಸುಖಸಾಗರೇ ಸದಾ
ವಿಲೀಯತೇ ಯಸ್ಯ ಮನಃ ಪ್ರಚಾರಃ ॥೪೫॥

ಮಹಾತ್ಮನೋ ಜ್ಞಾನವತಃ ಪ್ರದರ್ಶನಾ
ತ್ಸುರೇಶ್ವರತ್ವಂ ಝಟಿತಿ ಪ್ರಯಾತಿ ।
ವಿಹಾಯ ಸಂಸಾರ ಮಹೋದಧೌ ನರಾ
ರಮಂತಿ ತೇ ಪಾಪ ಬಲಾದಹೋ ಮುನೇ ॥೪೬॥

ಯಾವನ ಬುದ್ಧಿಯು ತತ್ವಾನುಭವ ಪರ್ಯಂತವಾಗಿ ಹೋಗಿರುವುದೋ ಅವನ ಕಣ್ಣಿಗೆ ಕಂಡ ಸಮಸ್ತರೂ ತಮ್ಮ ಸಕಲ ಪಾಪಗಳನ್ನೂ ಕಳೆದುಕೊಳ್ಳುವರು. ||೪೪||

ಯಾವನ ಮನಸ್ಸು ದೊಡ್ಡದಾದ ಸಚ್ಚಿದಾನಂದ ಸುಖಸ್ವರೂಪನಾದ ಸಾಗರದಲ್ಲಿ ಕರಗಿಹೋಗುವುದೋ ಅವನ ಕುಲವು ಶುದ್ಧವಾದುದಾಗುವುದು. ಅವನ ತಾಯಿಯು ಪುಣ್ಯವಂತಳಾಗುವಳು. ಅವನಿರುವ ಭೂಮಿಯು ಪುಣ್ಯಭೂಮಿಯಾಗುವುದು. ||೪೫||

ಮಹಾತ್ಮರಾದ ಜ್ಞಾನಿಗಳ ದರ್ಶನದಿಂದ ಒಡನೆಯೇ ದೇವೇಂದ್ರನ ಪದವಿಯು ಬಂದು ಬಿಡುವುದು. ಇಂತಹ ಪ್ರಯೋಜನವನ್ನು ಬಿಟ್ಟು ಮನುಷ್ಯರು ಸಂಸಾರವೆಂಬ ಸಮುದ್ರದಲ್ಲಿ ವಿನೋದಪಡುತ್ತಿರುವರಲ್ಲಾ? ಅಯ್ಯೋ ಅವರ ಪಾಪದ ಬಲವನ್ನು ಎಷ್ಟೆಂದು ಹೇಳಲೀ? ಮುಂಡಕೋಪನಿಷತ್ತಿನಲ್ಲಿ "ಯಂ ಯಂ ಲೋಕಂ ಮನಸಾ ಸಂವಿಭಾತಿ ವಿಶುದ್ಧಸತ್ವಃ ಕಾಮಯತೇ ಯಾಂಶ್ಚ ಕಾಮಾನ್ । ತಂ ತಂ ಲೋಕಂ ಜಯತೇ ತಾಂಶ್ಚ ಕಾಮಾನ್ ತಸ್ಮಾದಾತ್ಮಜ್ಞಂ ಹ್ಯರ್ಚಯೇದ್ಭೂತಿ ಕಾಮಃ" ಎಂದು ಆತ್ಮಜ್ಞಾನಿಯನ್ನು ಪೂಜಿಸಬೇಕೆಂದು ಹೇಳಿರುವುದು. ||೪೬||

ಮಹಾನಿಧಿಂ ಪ್ರಾಪ್ಯ ವಿಹಾಯ ತಂ ವೃಥಾ
ವಿಚೇಷ್ಟತೇ ಮೋಹಬಲೇನ ಬಾಲಕಃ ।
ಯಥಾತಥಾ ಜ್ಞಾನಿನ ಮೀಶ್ವರೇಶ್ವರಂ
ವಿಹಾಯ ಮೋಹೇನ ಚರಂತಿ ಮಾನವಾಃ ॥೪೭॥

ಅಹೋ ಮಹಾಂತಂ ಪರಮಾರ್ಥದರ್ಶಿನಂ
ವಿಹಾಯ ಮಾಯಾ ಪರಿಮೋಹಿತಾ ನರಾಃ ।
ಹಿತಾಯ ಲೋಕೇ ವಿಚರಂತಿ ತೇ ಮುನೇ
ವಿಷಂ ಪಿಬಂತ್ಯೇವ ಮಹಾಽಮೃತಂ ವಿನಾ ॥೪೮॥

ಬಹುನೋಕ್ತೇನ ಕಿಂ ಸರ್ವಂ ಸಂಗ್ರಹೇಣೋಪಪಾದಿತಂ ।
ಶ್ರದ್ಧಯಾ ಗುರುಭಕ್ತ್ಯಾ ತ್ವಂ ವಿದ್ಧಿ ವೇದಾಂತಸಂಗ್ರಹಂ ॥೪೯॥

ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ನ ಸಂಶಯಃ ॥೫೦॥

ದೊಡ್ಡ ನಿಧಿ ಸಿಕ್ಕಿದರೂ ಬಾಲಕನು ಅದನ್ನು ಅಜ್ಞಾನದಿಂದ ಹೇಗೆ ಬಿಟ್ಟು ಬಿಡುವನೋ ಹಾಗೆ ದೇವತೆಗಳಿಗೆಲ್ಲರಿಗೂ ಪೂಜ್ಯನಾದ ಜ್ಞಾನಿಯು ಸಿಕ್ಕಿದರೂ ಮಾನವರು ಅಜ್ಞಾನದಿಂದ ಅವನನ್ನರಿಯದೇ ಇರುವರು. ॥೪೭॥

ಜನರಾದರೋ ಮಹಾಮಹಿಮನಾದ ತತ್ವಜ್ಞಾನಿಯನ್ನು ಬಿಟ್ಟು ಅಜ್ಞಾನದಿಂದ ಮೋಹಿತರಾಗಿರುವರು. ಆ ಜ್ಞಾನಿಗಳಾದರೋ ಅಮೃತವನ್ನು ಬಿಟ್ಟು ವಿಷವನ್ನೇ ಪಾನಮಾಡುವ ಶಿವನಂತೆ ಲೋಕಹಿತಕ್ಕಾಗಿ ಭೂಮಿಯಲ್ಲಿಯೇ ಸಂಚರಿಸುತ್ತಿರುವರು. ॥೪೮॥

ಬೃಹಸ್ಪತಿಯೇ, ಹೆಚ್ಚಾಗಿ ಹೇಳಿದರೆ ಪ್ರಯೋಜನವೇನು? ಸಂಗ್ರಹವಾಗಿ ಎಲ್ಲವನ್ನೂ ಹೇಳಿರುವೆನು. ಈ ಸಂಗ್ರಹವಾದ ವೇದಾಂತವನ್ನು ಆಸಕ್ತಿಯಿಂದಲೂ ಗುರುಭಕ್ತಿಯಿಂದಲೂ ತಿಳಿದುಕೊ. ಏತಕ್ಕೆಂದರೆ— ॥೪೯॥

ಯಾರಿಗೆ ದೇವರಲ್ಲಿ ವಿಶೇಷವಾದ ಭಕ್ತಿಯು ಇರುವುದೋ ಅಂತಹ ಭಕ್ತಿಯೇ ಗುರುವಿನ ವಿಷಯದಲ್ಲಿಯೂ ಇದ್ದರೆ ಅವನಿಗೆ ಗುರುವು ಹೇಳಿದ ಸಮಸ್ತ ಶಾಸ್ತ್ರಾರ್ಥಗಳೂ ಚೆನ್ನಾಗಿ ತಿಳಿವುವು. ಈ ವಿಷಯದಲ್ಲಿ ಸಂದೇಹವಿರುವುದಿಲ್ಲ. ॥೫೦॥

|| ಸೂತ ಉವಾಚ ||

ಇತ್യೇವಮುಕ್ತ್ವಾ ಭಗವಾಂ ಸ್ತೂಷ್ಣೀಮಾಸ್ತೇ ಮಹೇಶ್ವರಃ ।
ವಕ್ತವ್ಯಾಭಾವ ಮಾಲೋಕ್ಯ ಮುನಯಃ ಕರುಣಾನಿಧಿಃ ||೫೧||

ಬೃಹಸ್ಪತಿಶ್ಚ ಮುನಯೋ ವೇದಾಂತಶ್ರವಣಾತ್ಪುನಃ ।
ಆನಂದಾಕ್ಲಿನ್ನಸರ್ವಾಂಗ ಆತ್ಮಾನಂದವಶೋಽಭವತ್ ||೫೨||

ಭವಂತೋಽಪಿ ಮಹಾಪ್ರಾಜ್ಞಾ ಮತ್ತಃ ಪ್ರಾಪ್ತಾತ್ಮವೇದನಾಃ ।
ಅಭವನ್ ಕೃತಕೃತ್ಯಾಶ್ಚ ಮಾಶಂಕಧ್ವಂ ಕದಾಚನ ||೫೩||

ಸ್ಥಾಪಯಧ್ವಮಿಮಂ ಮಾರ್ಗಂ ಪ್ರಯತ್ನೇನಾಪಿ ಹೇ ದ್ವಿಜಾಃ ।
ಸ್ಥಾಪಿತೇ ವೈದಿಕೇ ಮಾರ್ಗೇ ಸಕಲಂ ಸುಸ್ಥಿರಂ ಭವೇತ್ ||೫೪||

ಯೋ ಹಿ ಸ್ಥಾಪಯಿತುಂ ಶಕ್ತೋ ನ ಕುರ್ಯಾನ್ಮೋಹತೋ ನರಃ ।
ತಸ್ಯ ಹನ್ತಾ ನ ಪಾಪೀಯಾ ನಿತಿ ವೇದಾಂತನಿರ್ಣಯಃ ||೫೫||

ಸೂತನು ಹೇಳಿದನು—ಎಲೈ ಮುನಿಗಳೇ, ಮಹೇಶ್ವರನು ಹೀಗೆ ಹೇಳಿ ಇನ್ನು ಹೇಳಬೇಕಾದುದೇನೂ ಇಲ್ಲವೆಂದು ಸುಮ್ಮನಾದನು. ಬೃಹಸ್ಪತಿಯೂ ಅಲ್ಲಿದ್ದ ಮುನಿಗಳೂ ವೇದಾಂತಶ್ರವಣದಿಂದ ಆನಂದಾಮೃತದಿಂದ ತಮ್ಮ ಅಂಗಗಳೆಲ್ಲವೂ ನೆನೆದಿರಲು ಆತ್ಮಾನಂದಪರವಶರಾದರು. ||೫೧-೫೨||

ಮಹಾಬುದ್ಧಿಶಾಲಿಗಳಾದ ನೀವೂ ಕೂಡ ನನ್ನಿಂದ ಪಡೆದ ಆತ್ಮಜ್ಞಾನಾನುಭವದಿಂದ ಕೃತಾರ್ಥರಾದಿರಿ. ಎಂದಿಗೂ ಸಂದೇಹಪಡಬೇಕಾದುದಿರುವುದಿಲ್ಲ. ||೫೩||

ಎಲೈ ಬ್ರಾಹ್ಮಣರೇ, ಪ್ರಯತ್ನಪೂರ್ವಕವಾಗಿ ಈ ವೇದಾಂತಮಾರ್ಗವನ್ನು ಲೋಕದಲ್ಲಿ ನೆಲೆಗೊಳಿಸಿರಿ. ವೇದಮಾರ್ಗವು ನೆಲೆಸಿ, ಧರ್ಮವು ಅದಕ್ಕೆ ಅನುಸಾರವಾಗಿ ನಡೆಯುತ್ತಿದ್ದರೆ, ಲೋಕವೆಲ್ಲವೂ ಸ್ಥಿರತೆಯಿಂದಿರುವುದು. ಯಾರಿಗೂ ಯಾವ ವಿಧವಾದ ಮನಸ್ಸಿನ ಚಾಂಚಲ್ಯವೂ ಇರುವುದಿಲ್ಲ. ||೫೪||

ಯಾವನು ಧರ್ಮವನ್ನು ಸ್ಥಾಪಿಸುವ ಶಕ್ತಿಯಿದ್ದರೂ ಅಜ್ಞಾನದಿಂದ ಆ ಕೆಲಸವನ್ನು ಮಾಡದಿದ್ದರೆ ಅಂತಹ ಮನುಷ್ಯನನ್ನು ಕೊಂದವನು ಪಾಪಮಾಡಿದವನಾಗುವುದಿಲ್ಲವೆಂದು ವೇದಾಂತವು ನಿಶ್ಚಯಿಸಿರುವುದು. ||೫೫||

ಯಃ ಸ್ಥಾಪಯಿತು ಮುದ್ಯುಕ್ತಃ ಶ್ರದ್ಧಯೈವಾಕ್ಷಮೋಽಪಿಸಃ ।
ಸರ್ವಪಾಪ ವಿನಿರ್ಮುಕ್ತಃ ಸಾಕ್ಷಾಜ್ಜ್ಞಾನಮವಾಪ್ನುಯಾತ್ ॥೫೬॥

ಯಃ ಸ್ವವಿದ್ಯಾಽಭಿಮಾನೇನ ವೇದಮಾರ್ಗಪ್ರವರ್ತಕಂ ।
ಛಲಜಾತ್ಯಾದಿಭಿರ್ಜೀಯಾತ್ ಸ ಮಹಾಪಾತಕೀ ಭವೇತ್ ॥೫೭॥

ಯ ಇಮಂ ಜ್ಞಾನಯೋಗಾಖ್ಯಂ ಖಂಡಂ ಶ್ರದ್ಧಾಪುರಸ್ಸರಂ ।
ಪಠತೇ ಸುಮುಹೂರ್ತೇಷು ನ ಸ ಭೂಯೋಽಭಿಜಾಯತೇ ॥೫೮॥

ಜ್ಞಾನಾರ್ಥೀ ಜ್ಞಾನಮಾಪ್ನೋತಿ ಸುಖಾರ್ಥೀ ಸುಖಮಾಪ್ನುಯಾತ್ ।
ವೇದಕಾಮೀ ಲಭೇದ್ವೇದಂ ವಿಜಯಾರ್ಥೀ ಜಯಂ ಲಭೇತ್ ॥೫೯॥

ಅತ್ಯಂತಾಸಕ್ತಿಯಿಂದ ಧರ್ಮವನ್ನು ನೆಲೆಗೊಳಿಸಲು ಪ್ರಯತ್ನಪಟ್ಟು ಸಾಧ್ಯವಾಗದೇ ಹೋದರೆ ಅವನು ಸಕಲಪಾಪಗಳನ್ನೂ ಕಳೆದುಕೊಂಡು ಆತ್ಮಸಾಕ್ಷಾತ್ಕಾರರೂಪವಾದ ಜ್ಞಾನವನ್ನು ಪಡೆಯುವನು. ||೫೬||

ವೇದಧರ್ಮವನ್ನು ನೆಲೆಗೊಳಿಸುತ್ತಿರುವ ಮನುಷ್ಯನನ್ನು ತನ್ನ ವಿದ್ಯೆಯ ಮದದಿಂದಲೂ ಹಳ ಕುತರ್ಕ ಮುಂತಾದವುಗಳಿಂದಲೂ, ಜಯಿಸಿದವನು ಮಹಾಪಾಪಿಯಾಗುವನು. ||೫೭||

ಯಾವ ಮನುಜನು ಈ ಜ್ಞಾನಯೋಗಖಂಡವನ್ನು ಅತ್ಯಂತಾಸಕ್ತಿಯಿಂದ ಒಳ್ಳೆಯ ದಿನದಲ್ಲಿ ಪಾರಾಯಣಮಾಡುವನೋ ಅವನಿಗೆ ಪುನರ್ಜನ್ಮವು ಬರುವುದಿಲ್ಲ. ಮೋಕ್ಷದ ಪ್ರಾಪ್ತಿಯೇ ಆಗುವುದೆಂದು ಭಾವವು. ||೫೮||

ಈ ಜ್ಞಾನಯೋಗಖಂಡವನ್ನು ಪಾರಾಯಣಮಾಡುವವರ ಇಷ್ಟವು ಜ್ಞಾನವಾಗಿದ್ದರೆ ಜ್ಞಾನವು ದೊರೆವುದು. ಸುಖವಾಗಿದ್ದರೆ ಸುಖವನ್ನನುಭವಿಸುವರು. ವೇದವು ತಿಳಿಯಬೇಕೆಂಬ ಅಪೇಕ್ಷೆಯಿದ್ದರೆ ವೇದಾರ್ಥಜ್ಞಾನವನ್ನು ಪಡೆವರು. ಜಯಾಪೇಕ್ಷೆಯಾಗಿದ್ದರೆ ಜಯವು ಲಭಿಸುವುದು. ರಾಜ್ಯಾಪೇಕ್ಷೆಯಿದ್ದರೆ ರಾಜ್ಯಪ್ರಾಪ್ತಿಯಾಗುವುದು. ಕ್ಷಮಾಗುಣಾಪೇಕ್ಷೆಯಿದ್ದರೆ ಆ ಗುಣವು ಸಿದ್ಧಿಸುವುದು. ಆದುದರಿಂದ ಎಲ್ಲ ಇಷ್ಟಾರ್ಥಗಳನ್ನೂ ಹೊಂದಬೇಕಾದರೆ ಎಲ್ಲ ಕಾಲಗಳಲ್ಲಿಯೂ

ರಾಜ್ಯಕಾಮೋ ಲಭೇದ್ರಾಜ್ಯಂ ಕ್ಷಮಾಕಾಮಃ ಕ್ಷಮೀ ಭವೇತ್ ।
ತಸ್ಮಾತ್ಸರ್ವೇಷು ಕಾಲೇಷು ಪಠಿತವ್ಯೋ ಮನೀಷಿಭಿಃ ॥೬೦॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಜ್ಞಾನಯೋಗಖಂಡೇ
ಸಮಾಧಿರ್ನಾಮ ವಿಂಶೋಽಧ್ಯಾಯಃ

ಜ್ಞಾನಯೋಗಖಂಡಃ ಸಮಾಪ್ತಃ

ಇದನ್ನು ಪಾರಾಯಣಮಾಡಬಹುದು. ಬದ್ಧಿವಂತರು ಇದರ ಉಪಯೋಗವನ್ನು ಮಾಡಿಕೊಳ್ಳಬೇಕು. ॥೫೯-೬೦॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಜ್ಞಾನಯೋಗಖಂಡದಲ್ಲಿ
ಸಮಾಧಿಯೋಗಾಂಗವನ್ನು ವಿವರಿಸಿರುವ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

ಜ್ಞಾನಯೋಗಖಂಡವು ಸಮಾಪ್ತಿಯಾಯಿತು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಂದಪುರಾಣಾಂತರ್ಗತಾ ಸೂತಸಂಹಿತಾ

ಮುಕ್ತಿಖಂಡಂ

॥ ಪ್ರಥಮೋಽಧ್ಯಾಯಃ ॥

ಒಂದನೆಯ ಅಧ್ಯಾಯವು

ಸೌಮ್ಯಂ ಮಹೇಶ್ವರಂ ಸಾಕ್ಷಾತ್ ಸತ್ಯವಿಜ್ಞಾನಂ ಅದ್ವಯಂ ।
ವಂದೇ ಸಂಸಾರರೋಗಸ್ಯ ಭೇಷಜಂ ಪರಮಂ ಮುದಾ ॥೧॥

ಯಸ್ಯ ಶಕ್ತಿಃ ಉಮಾದೇವೀ ಜಗನ್ಮಾತಾ ತ್ರಯೀಮಯೀ ।
ತಮಹಂ ಶಂಕರಂ ವಂದೇ ಮಹಾಮಾಯಾ ನಿವೃತ್ತಯೇ ॥೨॥

ವ್ಯಾಸಮಹರ್ಷಿಗಳು ಹಿಂದಿನ ಜ್ಞಾನಯೋಗಖಂಡದಲ್ಲಿ ಜ್ಞಾನಪ್ರಾಪ್ತಿಯ ಉಪಾಯವನ್ನು ವಿವರಿಸಿ, ಈ ಖಂಡದಲ್ಲಿ ಜ್ಞಾನಕ್ಕೆ ಫಲವಾದ ಮುಕ್ತಿಯ ಸ್ವರೂಪ ವನ್ನು ಹೇಳಲು ಪ್ರಾರಂಭಿಸಿ, ಮೊದಲು ಸಪರಿವಾರನಾದ ಶಿವನಿಗೆ ನಮಸ್ಕಾರವನ್ನು ಮಾಡುವುದರಿಂದ ಮಂಗಳವನ್ನು ಮಾಡಿರುವರು. ಸತ್ಯಜ್ಞಾನಸ್ವರೂಪನೂ, ಸೌಮ್ಯನೂ ಸಂಸಾರರೋಗಕ್ಕೆ ಔಷಧಸ್ವರೂಪನೂ, ಪರಬ್ರಹ್ಮಸ್ವರೂಪನೂ ಆದ ಶಿವನಿಗೆ ಸಂತೋಷದಿಂದ ನಮಸ್ಕರಿಸುವೆನು. ॥೧॥

ಲೋಕಕ್ಕೆ ತಾಯಿಯೂ, ವೇದತ್ರಯಸ್ವರೂಪಳೂ ಆದ ಉಮಾದೇವಿಯ ಮಾಯೆಯಿಂದ ಸಕಲ ಜೀವರೂ ಮೋಹಿತರಾಗಿ ಸಂಸಾರದಲ್ಲಿ ಸಿಕ್ಕಿಕೊಂಡಿರು ವರು. ಆ ಮಾಯೆಯು ಈಶ್ವರಾಧೀನವಾಗಿರುವುದು. ಇದು ನಿವೃತ್ತಿಯಾಗದೇ ಪರಮಾನಂದ ಸ್ವರೂಪವಾದ ಮೋಕ್ಷವು ದೊರೆಯುವುದಿಲ್ಲ. ಈಶ್ವರಾನುಗ್ರಹವಿಲ್ಲದೇ ಮಾಯಾನಿವೃತ್ತಿಯಾಗಲಾರದು. ಆದುದರಿಂದ ಮಹಾಮಾಯಾನಿವೃತ್ತಿಗಾಗಿ ಆ ಶಂಕರನಿಗೆ ನಮಸ್ಕಾರಮಾಡುವೆನು. ॥೨॥

ಯಸ್ಯ ವಿಘ್ನೇಶ್ವರಃ ಶ್ರೀಮಾನ್ ಪುತ್ರಃ ಸ್ಕಂದಶ್ಚ ವೀರ್ಯವಾನ್ ।
ತಂ ನಮಾಮಿ ಮಹಾದೇವಂ ಸರ್ವದೇವನಮಸ್ಕೃತಂ ॥೩॥

ಯಸ್ಯ ಪ್ರಸಾದ ಲೇಶಸ್ಯ ಲೇಶಲೇಶ ಲವಾಂಶಕಂ ।
ಲಬ್ಧ್ವಾ ಮುಕ್ತೋ ಭವೇತ್ ಜಂತುಃ ತಂ ವಂದೇ ಪರಮೇಶ್ವರಂ ॥೪॥

ಯಸ್ಯ ಲಿಂಗಾರ್ಚನೇನೈವ ವ್ಯಾಸಃ ಸರ್ವಾರ್ಥವಿತ್ತಮಃ ।
ಅಭವತ್ ತಂ ಮಹೇಶಾನಂ ಪ್ರಣಮಾಮಿ ಘೃಣಾನಿಧಿಂ ॥೫॥

ಯಸ್ಯ ಮಾಯಾಮಯಂ ಸರ್ವಂ ಜಗತ್ ಈಕ್ಷಣ ಪೂರ್ವಕಂ ।
ತಂ ವಂದೇ ಶಿವಂ ಈಶಾನಂ ತೇಜೋರಾಶಿಂ ಉಮಾಪತಿಂ ॥೬॥

ಯಃ ಸಮಸ್ತಸ್ಯ ಲೋಕಸ್ಯ ಚೇತನಾಚೇತನಸ್ಯ ಚ ।
ಸಾಕ್ಷೀ ಸರ್ವಾಂತರಃ ಶಂಭುಃ ತಂ ವಂದೇ ಸಾಂಬಂ ಈಶ್ವರಂ ॥೭॥

ಸಕಲ ವಿಘ್ನನಿವಾರಕನಾದ ವಿಘ್ನೇಶ್ವರನೂ, ಸರ್ವಶತ್ರುಸಂಹಾರಕನಾದ ಪರಾಕ್ರಮಶಾಲಿಯಾದ ಕುಮಾರಸ್ವಾಮಿಯೂ, ಯಾವ ಮಹಾದೇವನ ಪುತ್ರರಾಗಿ ಅವನ ಅಪ್ಪಣೆಯನ್ನು ಪಾಲಿಸುತ್ತಿರುವರೋ ಅಂತಹ ಸಕಲ ದೇವತೆಗಳ ನಮಸ್ಕಾರವನ್ನೂ ಒಪ್ಪಿಕೊಳ್ಳುತ್ತಿರುವ ಮಹಾದೇವನಿಗೆ ನಮಸ್ಕರಿಸುವನು. ॥೩॥

ಯಾವ ದೇವನ ಅನುಗ್ರಹದ ಅತ್ಯಂತ ಸೂಕ್ಷ್ಮಾಂಶವನ್ನು ಪಡೆದು ಪ್ರಾಣಿಗಳು ಮುಕ್ತರಾಗುವರೋ ಅಂತಹ ಪರಮೇಶ್ವರನಿಗೆ ನಮಸ್ಕರಿಸುವೆನು. ॥೪॥

ಯಾವ ದೇವನ ಪ್ರತೀಕವಾದ ಲಿಂಗವನ್ನು ಪೂಜಿಸುವುದರಿಂದ ವ್ಯಾಸನು ಸರ್ವಜ್ಞರಲ್ಲಿ ಶ್ರೇಷ್ಠನೆನಿಸಿದನೋ ಅಂತಹ ದಯಾನಿಧಿಯಾದ ಮಹೇಶ್ವರನಿಗೆ ನಮಸ್ಕರಿಸುವೆನು. ॥೫॥

"ತದೈಕ್ಷತಬಹುಸ್ಯಾಂ ಪ್ರಜಾಯಾಯೇತಿ" ಎಂಬ ವೇದವಚನದಂತೆ ಪರಮಾತ್ಮನ ಈಕ್ಷಣಶಕ್ತಿಯಿಂದ ಕಲ್ಪಿತವಾದ ಮಾಯಾಸ್ವರೂಪವಾದ ಈ ಪ್ರಪಂಚವು ತೋರುತ್ತಿರುವುದೋ ಅಂತಹ ಪ್ರಕಾಶಸ್ವರೂಪನಾದ ಉಮಾಪತಿಯೂ, ಮಂಗಳಸ್ವರೂಪನೂ, ಆದ ಶಿವನಿಗೆ ನಮಸ್ಕರಿಸುವೆನು. ॥೬॥

ಯಾವದೇವನು ಚೇತನ, ಅಚೇತನರೂಪವಾದ ಸಕಲ ಪ್ರಪಂಚಕ್ಕೂ ಸಾಕ್ಷಿಸ್ವರೂಪನಾಗಿ ಸರ್ವಾಂತರನಾಗಿರುವನೋ ಅಂತಹ ದೇವೀಸಹಿತನಾದ ಈಶ್ವರನಿಗೆ ನಮಸ್ಕರಿಸುವೆನು ॥೭॥

ಯಂ ನಿಶಿಷ್ಟಾ ಜನಾಃ ಶಾಂತಾ ವೇದಾಂತಶ್ರವಣಾದಿನಾ ।
ಜಾನಂತಿ ಆತ್ಮತಯಾ ವಂದೇ ತಮಹಂ ಸತ್ಯಚಿತ್ಸುಖಂ ॥೮॥

ಹರಭಕ್ತಃ ಹಿರಣ್ಯಾಕ್ಷಃ ಶೈವಪೂಜಾ ಪರಾಯಣಃ ।
ಅಂಬಿಕಾ ಚರಣಸ್ನೇಹ ಈಶ್ವರಾಂಘ್ರಿ ಪರಾಯಣಃ ॥೯॥

ಕ್ಲಾಂತಃ ಕ್ಲೇಶಹರಃ ಕ್ಲೀಬ ಈಶಪೂಜಾ ಪರಾಯಣಃ ।
ಓಂಕಾರವಲ್ಲಭಃ ಲುಬ್ಧಃ ಲೋಲುಪಃ ಲೋಲಲೋಚನಃ ॥೧೦॥

ಮಹಾಪ್ರಾಜ್ಞಃ ಮಹಾಧೀಮಾನ್ ಮಹಾಬಾಹುಃ ಮಹೋದರಃ ।
ಶಕ್ತಿಮಾನ್ ಶಕ್ತಿದಃ ಶಂಕುಃ ಶಂಕುಕರ್ಣಃ ಶನೈಶ್ಚರಃ ॥೧೧॥

ಭಗವಾನ್ ಭಗ್ನಪಾಪಶ್ಚ ಭವಃ ಭವಭಯಾಪಹಃ ।
ಭಗ್ನದರ್ಪಃ ಭವಪ್ರೀತಃ ಭಾಗಜ್ಞಃ ಭಂಗುರಾಶುಭಃ ॥೧೨॥

ಅಗ್ನಿವರ್ಣಃ ಜಪಾವರ್ಣಃ ಬಂಧೂಕ ಕುಸುಮಚ್ಛವಿಃ ।
ವಿರಕ್ತೋ ವಿರಜೋ ವಿದ್ವಾನ್ ವೇದಪಾರಾಯಣೇ ರತಃ ॥೧೩॥

ಸಮಚಿತ್ತಃ ಸಮಗ್ರೀವಃ ಸಮಲೋಷ್ಟಾಶ್ಮ ಕಾಂಚನಃ ।
ಶಾಕಾಶೀ ಫಲಮೂಲಾಶೀ ಶತ್ರುಮಿತ್ರ ವಿವರ್ಜಿತಃ ॥೧೪॥

ಶಿಷ್ಟಾಚಾರವನ್ನು ಅನುಸರಿಸುವ ಜನರು, ಶಾಂತರಾಗಿ ವೇದಾಂತಶ್ರವಣಾದಿಗಳಿಂದ ಯಾವನನ್ನು ಆತ್ಮನೆಂದು ತಿಳಿಯುತ್ತಾರೆಯೋ, ಅಂತಹ ಸಚ್ಚಿದಾನಂದ ಸ್ವರೂಪನಾದ ಪರಮೇಶ್ವರನಿಗೆ ನಮಸ್ಕರಿಸುವೆನು. ॥೮॥

ಶಿವನ ಭಕ್ತರೂ, ಶಿವನ ಮತ್ತು ಶಿವೆಯ ಪೂಜೆಯಲ್ಲಾಸಕ್ತರೂ ಆದ ಹಿರಣ್ಯಾಕ್ಷ, ಕ್ಲಾಂತ, ಕ್ಲೇಶಹರ, ಕ್ಲೀಬ, ಓಂಕಾರವಲ್ಲಭ, ಲುಬ್ಧ, ಲೋಲುಪ, ಲೋಲಲೋಚನ, ಮಹಾಪ್ರಾಜ್ಞ, ಮಹಾಧೀಮಾನ್, ಮಹಾಬಾಹು, ಮಹೋದರ, ಶಕ್ತಿ ಮತ್ತು ಶಕ್ತಿದ, ಶಂಕು, ಶಂಕುಕರ್ಣ, ಶನೈಶ್ಚರ, ಭಗ್ನಪಾಪ, ಭವ, ಭಗ್ನದರ್ಪ, ಭವಪ್ರೀತ, ಭಾಗಜ್ಞ, ಭಂಗುರಾಶುಭ, ॥೯-೧೦-೧೧-೧೨॥

ಅಗ್ನಿವರ್ಣ, ಜಪಾವರ್ಣ, ವೈರಾಗ್ಯವುಳ್ಳ ವಿರಜ, ವೇದಪಾರಾಯಣ ಮಾಡುವ ವಿದ್ವಾನ್ ಎಂಬ ಮುನಿ, ಸಮಚಿತ್ತ, ಸಮಗ್ರೀವ, ಶಾಕಾಹಾರಿ, ಫಲ

ಕಾಲರೂಪಃ ಕಾಲಮಾಲೀ ಕಾಲತತ್ವ ವಿಶಾರದಃ ।
ಅಣಿಮಾಂಡಃ ಮುನಿಶ್ರೇಷ್ಠಃ ಸೋಮನಾಥಃ ಪ್ರಿಯಃ ಸುಧೀಃ ॥೧೫॥

ವೇದವಿತ್ ವೇದವಿನ್ಮುಖ್ಯಃ ವಿದ್ವತ್ಪಾದ ಪರಾಯಣಃ ।
ವಿಶಾಲಹೃದಯಃ ವಿಶ್ವಃ ವಿಶ್ವವಾನ್ ವಿಶ್ವದಂಡಧೃತ್ ॥೧೬॥

ಪವಿತ್ರಃ ಪರಮಃ ಪಂಗುಃ ಪಂಕಜಾರುಣ ಲೋಚನಃ ।
ಲಂಬಕರ್ಣಃ ಮಹಾತೇಜಾ ಲಂಬಪಿಂಗ ಜಟಾಧರಃ ॥೧೭॥

ಗ್ರಾಹ್ಯಾಯಣ ಸುತಃ ಗ್ರೀಷ್ಮಃ ಗ್ರಾಹಭಂಗ ಪರಾಯಣಃ ।
ಲೋಕಾಕ್ಷಿತನಯಃ ಉದ್ಭೂತಃ ಲೋಕಯಾತ್ರಾಪರಾಯಣಃ ॥೧೮॥

ಜೈಗೀಷವ್ಯಸ್ಯ ಪುತ್ರಶ್ಚ ಪ್ರಾತಸ್ಸ್ನಾಯೀ ಜಿತೇಂದ್ರಿಯಃ ।
ವತ್ಸಪುತ್ರಃ ಮುನಿಶ್ರೇಷ್ಠಃ ವಂಶಕಾಂಡ ಪ್ರಭೋ ಮುನಿಃ ॥೧೯॥

ಊರ್ಧ್ವರೇತಾ ಉಮಾಭಕ್ತಃ ರುದ್ರಭಕ್ತಶ್ಚ ವಲ್ಕಲೀ ।
ಆಶ್ವಲಾಯನಸೂನುಶ್ಚ ಬ್ರಹ್ಮವಿದ್ಯಾರತಃ ಮುನಿಃ ॥೨೦॥

ಮುಕುಂದಃ ಮೋಚಕಃ ಮುಖ್ಯಃ ಮುಸಲೀ ಮೂಲಕಾರಣಃ ।
ಸರ್ವಜ್ಞಃ ಸರ್ವವಿತ್ ಸರ್ವಃ ಸರ್ವಪ್ರಾಣಿಹಿತೇ ರತಃ ॥೨೧॥

ಅತ್ಯುಗ್ರಃ ಅತಿಪ್ರಸನ್ನಃ ಚ ಪ್ರಮೋಣಜ್ಞಾನವರ್ಧಕಃ ।
ಆರುಣೇಯಃ ಮಹಾವೀರ ಆರುಣ್ಯುಪನಿಷತ್ಪರಃ ॥೨೨॥

ಮೂಲಾಹಾರಿ, ಕಾಲರೂಪ, ಕಾಲತತ್ವವನ್ನು ತಿಳಿದ ಕಲಾಮಾಲಿ, ಅಣಿಮಾಂಡ, ಸೋಮನಾಥಪ್ರಿಯ, ವೇದವಿತ್ತು, ವೇದವಿನ್ಮುಖ್ಯ, ವಿಶಾಲಹೃದಯ, ವಿಶ್ವ, ಪವಿತ್ರ, ಪಂಗು, ಲಂಬಕರ್ಣ, ಲಂಬಪಿಂಗಜಟಾಧರ, ॥೧೩-೧೪-೧೫-೧೬-೧೭॥

ಗ್ರಾಹ್ಯಾಯಣನ ಮಗ ಗ್ರೀಷ್ಮನು, ಲೋಕಾಕ್ಷಿಯ ಮಗನಾದ ಉದ್ಭೂತನು, ಜೈಗೀಷವ್ಯಪುತ್ರ, ವತ್ಸಪುತ್ರ, ಊರ್ಧ್ವರೇತಸ್ಸುಳ್ಳ ಉಮಾ ಭಕ್ತ, ರುದ್ರಭಕ್ತ, ಆಶ್ವಲಾಯನಪುತ್ರನಾದ ಬ್ರಹ್ಮವಿದ್ಯಾಸಕ್ತ, ಮುಕುಂದ, ಮೋಚಕ, ಮುಸಲಿ, ಸರ್ವಜ್ಞ, ಸರ್ವ, ಅತ್ಯುಗ್ರ, ಅತಿಪ್ರಸನ್ನ, ಆರುಣೇಯ, ॥೧೮-೧೯-೨೦-೨೧-೨೨॥

ಆತ್ಮವಿದ್ಯಾರತಃ ಶ್ರೀಮಾನ್ ಶ್ವೇತಾಶ್ವತರ ಪುತ್ರಕಃ ।
ಶ್ವೇತಾಶ್ವತರ ಶಾಖಾಯಾಃ ಶ್ರದ್ಧಯೈವ ಪ್ರವರ್ತಕಃ ॥೨೩॥

ಶತರುದ್ರ ಸಮಾಖ್ಯಶ್ಚ ಶತರುದ್ರೀಯ ಭಕ್ತಿಮಾನ್ ।
ಪಂಚಪ್ರಸ್ಥಾನಹೇತುಜ್ಞಃ ಶ್ರೀಮತ್ ಪಂಚಾಕ್ಷರಪ್ರಿಯಃ ॥೨೪॥

ಶಿವಸಂಕಲ್ಪ ಭಕ್ತಶ್ಚ ಶಿವಸೂಕ್ತಪ್ರವರ್ತಕಃ ।
ಲಿಂಗಸೂಕ್ತಪ್ರಿಯಃ ಸಾಕ್ಷಾತ್ ಕೈವಲ್ಯೋಪನಿಷತ್ಪ್ರಿಯಃ ॥೨೫॥

ಜಾಬಾಲಾಽಧ್ಯಯನಧ್ವಸ್ತ ಪಾಪಪಂಜರ ಸುಂದರಃ ।
ಪುರಾಣಃ ಪುಣ್ಯಕರ್ಮಾ ಚ ಪುರುಷಾರ್ಥಪ್ರವರ್ತಕಃ ॥೨೬॥

ಮೈತ್ರಾಯಣಃ ಶ್ರುತಿ ಸ್ನೇಹೀ ಮಹಾಮೈತ್ರಾಯಣಃ ಮುನಿಃ ।
ಬಾಷ್ಕಲಾಧ್ಯಯನ ಪ್ರೀತಃ ಶಾಕಲಾಧ್ಯಯನೇ ರತಃ ॥೨೭॥

ಸರ್ವ ಶಾಖಾರತಃ ಶ್ರೀಮಾನ್ ಸಂಗಮಾದಿ ಮಹರ್ಷಯಃ ।
ದ್ವಿಸಪ್ತತಿ ಸಹಸ್ರಾಣಿ ಸಹ ದ್ವಾದಶ ಸಂಖ್ಯಯಾ ॥೨೮॥

ಶ್ವೇತಾಶ್ವತರ ವೇದಶಾಖೆಯನ್ನು ಅನುಸರಿಸುವ ಆತ್ಮವಿದ್ಯೆಯನ್ನು ತಿಳಿದ ಶ್ವೇತಾಶ್ವತರನೆಂಬ ಋಷಿಪುತ್ರನೂ, ಶತರುದ್ರಮಂತ್ರದಲ್ಲಿ ಭಕ್ತಿಯುಳ್ಳ ಶತರುದ್ರ ಮುನಿಯೂ, ಪಂಚಾಕ್ಷರಮಂತ್ರದಲ್ಲಾಸಕ್ತನಾದ ಪಂಚಪ್ರಸ್ಥಾನಹೇತುಜ್ಞನೆಂಬು ವನೂ, ಶಿವಸೂಕ್ತಗಳಲ್ಲಿ ಭಕ್ತಿಯುಳ್ಳ, ಶಿವಸಂಕಲ್ಪಮಂತ್ರದಲ್ಲಿ ಭಕ್ತಿಯುಳ್ಳ, ಲಿಂಗಸೂಕ್ತ, ಜಾಬಾಲೋಪನಿಷತ್ತು, ಕೈವಲ್ಯೋಪನಿಷತ್ತು ಇವುಗಳಲ್ಲಿ ಪ್ರೀತಿಯು ಳ್ಳವರಾಗಿ, ಅವುಗಳನ್ನು ಅಧ್ಯಯನಮಾಡಿ ಸಮಸ್ತ ಪಾಪಗಳನ್ನೂ ಕಳೆದುಕೊಂಡು, ಸುಂದರರಾದ ಮುನಿಗಳೂ, ॥೨೩-೨೪-೨೫॥

ಪುರುಷಾರ್ಥಸಾಧನೆಯ ಮಾರ್ಗವನ್ನು ಲೋಕದಲ್ಲಿ ಹರಡಿದ ಪುರಾತನ ನಾದ ಪುಣ್ಯಕರ್ಮನೆಂಬಮುನಿ, ಮೈತ್ರಾಯಣಶಾಖೆಯ ವೇದಾಭ್ಯಾಸವನ್ನು ಮಾಡಿದ ಮಹಾಮೈತ್ರಾಯಣಮುನಿ, ಬಾಷ್ಕಲಶಾಖಾಧ್ಯಯನ, ಶಾಕಲ ಶಾಖಾಧ್ಯ ಯನ, ಸರ್ವಶಾಖಾಧ್ಯಯನ ಇವುಗಳನ್ನು ಮಾಡುವ ಸಂಗಮ ಮುಂತಾದ ಎಪ್ಪತ್ತೆರಡು ಸಾವಿರದ ಹನ್ನೆರಡು ಜನ ಮುನಿಗಳು, ॥೨೬-೨೭-೨೮॥

ಸರ್ವೇ ಶಮದಮೋಪೇತಾಃ ಶಿವಭಕ್ತಪರಾಯಣಾಃ ।
ಅಗ್ನಿಃ ಇತ್ಯಾದಿಭಿಃ ಮಂತ್ರೈಃ ಭಸ್ಮೋದ್ಧೂಲಿತವಿಗ್ರಹಾಃ ॥೨೯॥

ರುದ್ರಾಕ್ಷಮಾಲಾಭರಣಾಃ ತ್ರಿಪುಂಡ್ರಾಂಕಿತ ಮಸ್ತಕಾಃ ।
ಲಿಂಗಾರ್ಚನ ಪರಾ ನಿತ್ಯಂ ಶಂಭೋಃ ಅಮಿತತೇಜಸಃ ॥೩೦॥

ಸತ್ರಾವಸಾನೇ ಸಂಭೂಯ ಮೇರುಪಾರ್ಶ್ವೇ ವಿಚಕ್ಷಣಾಃ ।
ಪರಸ್ಪರಂ ಸಮಾಲೋಚ್ಯ ಶ್ರದ್ಧಯಾ ಸುಚಿರಂ ಬುಧಾಃ ॥೩೧॥

ಮುಕ್ತಿಂ ಮುಕ್ತೇಃ ಉಪಾಯಂ ಚ ಮೋಚಕಂ ಮೋಚಕಪ್ರದಂ ।
ತಪಶ್ಚೇರುಃ ಮಹಾಧೀರಾಃ ಶಂಕರಂ ಪ್ರತಿ ಸಾದರಂ ॥೩೨॥

ಪ್ರಸಾದಾದೇವ ರುದ್ರಸ್ಯ ಶಿವಸ್ಯ ಪರಮಾತ್ಮನಃ ।
ವ್ಯಾಸಶಿಷ್ಯಃ ಮಹಾಧೀಮಾನ್ ಸೂತಃ ಪೌರಾಣಿಕೋತ್ತಮಃ ॥೩೩॥
ಆವಿರ್ಬಭೂವ ಸರ್ವಜ್ಞಃ ತೇಷಾಂ ಮಧ್ಯೇ ಮಹಾತ್ಮನಾಂ ।

ಎಲ್ಲರೂ ಶಮದಮಾದಿ ಸದ್ಗುಣಗಳಿಂದಲೂ, ಶಿವಭಕ್ತಿಯಿಂದಲೂ ಕೂಡಿದವರಾಗಿ "ಅಗ್ನಿರಿತಿಭಸ್ಮ" ಎಂಬ ಮಂತ್ರಗಳಿಂದ ಭಸ್ಮೋದ್ಧೂಲನವನ್ನು ಮಾಡಿಕೊಂಡು, ಹಣೆಯಲ್ಲಿ ಭಸ್ಮದ ತ್ರಿಪುಂಡ್ರಗಳನ್ನು ಧರಿಸಿ, ರುದ್ರಾಕ್ಷಿಯ ಮಾಲೆಯನ್ನಲಂಕರಿಸಿಕೊಂಡು, ಪ್ರತಿದಿನವೂ ಶಿವಲಿಂಗಾರ್ಚನೆಯಲ್ಲಿ ಆಸಕ್ತರಾಗಿರುವರು. ||೨೯-೩೦||

ಇವರೆಲ್ಲರೂ ಒಂದು ದೊಡ್ಡ ಯಜ್ಞಕಾಲದಲ್ಲಿ ಮೇರುಪರ್ವತದ ತಪ್ಪಲಿನಲ್ಲಿ ಕೂಡಿ, ವಿದ್ವಾಂಸರಾದುದರಿಂದ, ಅತ್ಯಂತಾಸಕ್ತಿಯಿಂದ ಒಬ್ಬರಿಗೊಬ್ಬರು ಕೂಡಿ ವಿಚಾರಮಾಡುತ್ತಾ, ಮುಕ್ತಿ, ಮುಕ್ತಿಗೆ ಉಪಾಯ, ಮೋಚಕ, ಮೋಚಕಪ್ರದ, ಈ ನಾಲ್ಕು ವಿಷಯಗಳನ್ನು ತಿಳಿಯುವುದಕ್ಕಾಗಿ, ಮಹಾಧೈರ್ಯದಿಂದ ಕೂಡಿ, ಶಿವನನ್ನು ಕುರಿತು ತಪಸ್ಸುಮಾಡಿದರು. ||೩೧-೩೨||

ಪರಮಾತ್ಮನಾದ ಶಿವನ ಅನುಗ್ರಹದಿಂದ ತಪಸ್ಸುಮಾಡುತ್ತಿದ್ದ ಆ ಋಷಿಗಳ ನಡುವೆ ಪುರಾಣವನ್ನು ಹೇಳುವುದರಲ್ಲಿ ಶ್ರೇಷ್ಠನೂ, ಮಹಾಬುದ್ಧಿವಂತನೂ, ಸರ್ವಜ್ಞನೂ, ಆದ ವ್ಯಾಸಮಹಾಮುನಿಯ ಶಿಷ್ಯನಾದ ಸೂತನು ಕಾಣಿಸಿಕೊಂಡನು. ||೩೩||

ಮುನಯಶ್ಚ ಮಹಾತ್ಮಾನಂ ಆಗತಂ ರೋಮಹರ್ಷಣಂ ॥೩೪॥

ದೃಷ್ಟ್ವಾ ಉತ್ಥಾಯ ಅತಿಸಂಭ್ರಾಂತಾಃ ಸಂತುಷ್ಟಾ ಗದ್ಗದಸ್ವರಾಃ ।
ಪ್ರಣಮ್ಯ ಬಹುಶಃ ಭಕ್ತ್ಯಾ ದಂಡವತ್ ಪೃಥಿವೀತಲೇ ॥೩೫॥

ಪಾದಪ್ರಕ್ಷಾಲನಾದ್ಯೈಶ್ಚ ಶ್ರದ್ಧಯಾ ಆರಾಧ್ಯ ಸತ್ವರಂ ।
ಸಮಾಶ್ವಸ್ಯ ಚಿರಂ ಕಾಲಂ ಪ್ರಸನ್ನಂ ಕರುಣಾನಿಧಿಂ ॥೩೬॥

ಸರ್ವಜ್ಞಂ ಸರ್ವಜಂತೂನಾಂ ನಿಶ್ಚಿತಾರ್ಥ ಪ್ರದಾಯಿನಂ ।
ಪಪ್ರಚ್ಛುಃ ಪರಮಾಂ ಮುಕ್ತಿಂ ಮುಕ್ತ್ಯುಪಾಯಂ ಚ ಮೋಚಕಂ ॥೩೭॥

ಮೋಚಕಪ್ರದಂ ಅನ್ಯಚ್ಚ ವಿನಯೇನ ಸಹ ದ್ವಿಜಾಃ ।
ಶ್ರುತ್ವಾ ಮುನೀನಾಂ ತದ್ವಾಕ್ಯಂ ಲೋಕಾನಾಂ ಹಿತಂ ಉತ್ತಮಂ ॥೩೮॥

ಸೂತಃ ಪೌರಾಣಿಕಃ ಶ್ರೀಮಾನ್ ಧ್ಯಾತ್ವಾ ಸಾಂಬಂ ತ್ರಿಯಂಬಕಂ ।
ವೇದವ್ಯಾಸಂ ಚ ವೇದಾರ್ಥಪರಿಜ್ಞಾನವತಾಂ ವರಂ ॥೩೯॥

ಆ ಮುನಿಗಳೆಲ್ಲರೂ ಅಲ್ಲಿಗೆ ಬಂದ ಮಹಾತ್ಮನಾದ ಸೂತನನ್ನು ಕಂಡು, ಸಂತೋಷದಿಂದಲೂ, ಅತ್ಯಂತ ಆಶ್ಚರ್ಯದಿಂದಲೂ ಕೂಡಿದವರಾಗಿ, ಎದ್ದು ನಮಸ್ಕಾರ ಮಾಡಿ, ಭಕ್ತಿಯಿಂದ ಕೂಡಿ, ಗದ್ಗದಧ್ವನಿಯಿಂದ ಮಾತನಾಡುತ್ತಾ, ಕಾಲು ತೊಳೆಯುವುದೇ ಮುಂತಾದ ಪೂಜೆಗಳನ್ನು ಅತ್ಯಂತಾಸಕ್ತಿಯಿಂದ ಮಾಡಿದ ಮೇಲೆ, ಸ್ವಲ್ಪಕಾಲ ವಿಶ್ರಾಂತಿಯನ್ನು ಪಡೆದು, ಆಯಾಸವನ್ನು ಪರಿಹರಿಸಿಕೊಂಡ, ದಯಾನಿಧಿಯೂ, ಸರ್ವಜ್ಞನೂ, ಸಮಸ್ತಪ್ರಾಣಿಗಳಿಗೂ ಶಾಶ್ವತವಾದ ಪ್ರಯೋಜನವನ್ನುಂಟುಮಾಡಿಕೊಡತಕ್ಕವನೂ, ಆದ ಆ ರೋಮಹರ್ಷಣನನ್ನು ಕುರಿತು. ||೩೪-೩೫-೩೬||

ಶ್ರೇಷ್ಠವಾದ ಮೋಕ್ಷವನ್ನೂ, ಮೋಕ್ಷೋಪಾಯವನ್ನೂ, ಮುಕ್ತಿಯನ್ನು ಕೊಡತಕ್ಕವುಗಳನ್ನೂ, ಮೋಚಕಪ್ರದನಾದವನನ್ನೂ, ಇನ್ನೂ ಇತರ ಪ್ರಶ್ನೆಗಳನ್ನೂ, ಕೇಳಿ ತಿಳಿಯಲು ಅತ್ಯಂತ ವಿನಯದಿಂದ ಕೂಡಿದ ತಮಗೆ ಹೇಳಬೇಕೆಂದು ಅಲ್ಲಿದ್ದ ಬ್ರಾಹ್ಮಣರೆಲ್ಲರೂ ಕೇಳಿಕೊಂಡರು. ||೩೭||

ಸಮಸ್ತ ಪ್ರಾಣಿಗಳಿಗೂ ಹಿತವನ್ನುಂಟುಮಾಡುವುದರಲ್ಲಿ ಆಸಕ್ತನಾದ ಸೂತನು, ಸಮಸ್ತ ಲೋಕಗಳಿಗೂ ಹಿತವನ್ನು ಉಂಟುಮಾಡುವ ಮುನಿಗಳ

ಪ್ರಣಮ್ಯ ದಂಡವತ್ ಭೂಮೌ ಭಕ್ತ್ಯಾ ಪರವಶಃ ಪುನಃ ।
ವಕ್ತುಂ ಆರಭತೇ ಸರ್ವಂ ಸರ್ವಭೂತ ಹಿತೇ ರತಃ ॥೪೦॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಮುಕ್ತಿಖಂಡೇ ಚತುರ್ವಿಧ ಪ್ರಶ್ನನಿರೂಪಣಂ ನಾಮ ಪ್ರಥಮೋಽಧ್ಯಾಯಃ

ಮಾತನ್ನು ಕೇಳಿ, ಮುಕ್ಕಣ್ಣನೂ, ಉಮಾದೇವಿಯೊಡಗೂಡಿದವನೂ ಆದ ಮಹೇಶ್ವರನನ್ನು ಧ್ಯಾನಿಸಿ, ವೇದಾರ್ಥಗಳನ್ನು ತಿಳಿದವರಲ್ಲಿ ಶ್ರೇಷ್ಠರಾದ ತನ್ನ ಗುರುಗಳಾದ ವ್ಯಾಸರಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ, ಅತ್ಯಂತ ಭಕ್ತಿಯಿಂದ ಅವರ ಪ್ರಶ್ನೆಗಳಿಗೆ ಉತ್ತರವನ್ನು ಸಂಪೂರ್ಣವಾಗಿ ಹೇಳಲು ಪ್ರಾರಂಭಿಸಿದನು. ಇಲ್ಲಿ ಮುಕ್ತಿ ಎಂದರೆ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯಗಳೆಂಬ ನಾಲ್ಕುಬಗೆಯ ಮುಕ್ತಿಗಳಲ್ಲಿ ಸಾಯುಜ್ಯವೆಂಬ ಉತ್ತಮವಾದ ಮೋಕ್ಷಪ್ರಕಾರವನ್ನೂ, ಮುಕ್ತ್ಯುಪಾಯವೆಂದರೆ "ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ" । ಎಂದು ಮುಂತಾಗಿ ವಿವರಿಸಿರುವ ತಿಳಿವಳಿಕೆಯನ್ನೂ, ಮೋಚಕ ಎಂದರೆ ಮುಕ್ತಿಯನ್ನು ಅನುಗ್ರಹಿಸುವ ಪರಮೇಶ್ವರನು, ಮೋಚಕಪ್ರದ ಎಂದರೆ ಈ ಎಲ್ಲ ಸಹಾಯಗಳನ್ನೂ ತಿಳಿಸಿಕೊಡುವ ಸದ್ಗುರುವು ಅಥವಾ ಆಚಾರ್ಯನು; ಈ ನಾಲ್ಕು ವಿಷಯಗಳನ್ನೂ ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗುವುದು. ॥೩೮-೩೯-೪೦॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಮುಕ್ತಿಖಂಡದಲ್ಲಿ ನಾಲ್ಕುಬಗೆಯ ಪ್ರಶ್ನೆಗಳನ್ನು ನಿರೂಪಿಸಿರುವ ಒಂದನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಮುಕ್ತಿಖಂಡಂ

॥ ದ್ವಿತೀಯೋಽಧ್ಯಾಯಃ ॥

ಎರಡನೆಯ ಅಧ್ಯಾಯವು

॥ ಸೂತ ಉವಾಚ ॥

ಶೃಣುಧ್ವಂ ವೇದವಿನ್ಮುಖ್ಯಾಃ ಶ್ರದ್ಧಯಾ ಸಹ ಸುವ್ರತಾಃ ।
ಪುರಾ ನಾರಾಯಣಃ ಶ್ರೀಮಾನ್ ಸರ್ವಭೂತ ಹಿತೇ ರತಃ ॥೧॥

ಕಿರೀಟೀ ಕೇಯೂರಧರಃ ರತ್ನಕುಂಡಲಮಂಡಿತಃ ।
ಪೀತವಾಸಾ ವಿಶಾಲಾಕ್ಷಃ ಶಂಖ ಚಕ್ರಗದಾಧರಃ ॥೨॥

ಕುಂದೇಂದುಸದೃಶಾಕಾರಃ ಸರ್ವಾಭರಣಭೂಷಿತಃ ।
ಉಪಾಸ್ಯಮಾನೋ ಮುನಿಭಿಃ ದೇವಗಂಧರ್ವರಾಕ್ಷಸೈಃ ॥೩॥

ಮುನಿಗಳ ಪ್ರಶ್ನೆಯನ್ನು ಕೇಳಿದ ಸೂತನು, ಅವರ ಮುಕ್ತ್ಯಾದಿನಾಲ್ಕು ಪ್ರಶ್ನೆಗಳಿಗೆ ಹೇಳಿದ ಉತ್ತರವನ್ನು ತಿಳಿದುಕೊಳ್ಳುವುದು ಅತ್ಯಂತ ಕಷ್ಟವಾದುದರಿಂದ ಅವರಿಗೆ ಕೇಳುವುದರಲ್ಲಿ ಆದರವನ್ನು ಹುಟ್ಟಿಸುವುದಕ್ಕೂ, ತನ್ನ ಗರ್ವಪರಿಹಾರಕ್ಕೂ, ವಿಷ್ಣುವಿಗೆ ಶಿವನು ಹೇಳಿದುದನ್ನೇ ಹೇಳುವೆನೆಂದು ಪ್ರಾರಂಭಿಸಿ, ಎಲೈ ಮುನಿಗಳೇ, ತಪಸ್ವಿಗಳಾದ ನೀವು ಅತ್ಯಂತಾಸಕ್ತಿಯಿಂದ ಕೇಳಿ. ಹಿಂದೆ ಸಮಸ್ತ ಪ್ರಾಣಿಗಳಿಗೂ ಹಿತವನ್ನುಂಟುಮಾಡುವುದರಲ್ಲಿ ಆಸಕ್ತನಾದ ಶಂಖಚಕ್ರಗದಾಧಾರಿಯೂ, ಪೀತಾಂಬರವನ್ನುಟ್ಟು, ಕಿರೀಟಾದಿ ಸಕಲಾಭರಣಗಳನ್ನೂ ಧರಿಸಿ, ಚಂದ್ರನಂತೆ ಕಾಂತಿಯುಕ್ತನೂ ಆದ ನಾರಾಯಣನು ದೇವಗಂಧರ್ವರಾಕ್ಷಸರೂ, ಮುನಿಗಳೂ, ತನ್ನ ಸೇವೆಯನ್ನು ಮಾಡುತ್ತಿರಲು, ॥೧-೨-೩॥

ಶ್ರೀಮತ್ ಉತ್ತರಕೈಲಾಸಂ ಪರ್ವತಂ ಪರ್ವತೋತ್ತಮಂ ।
ಸ್ಮರಣಾದೇವ ಸರ್ವಸ್ಯ ಪಾಪಸ್ಯ ತು ವಿನಾಶಕಂ ॥೩॥

ಅನೇಕಜನ್ಮಸಂಸಿದ್ಧೈಃ ಶ್ರೌತಸ್ಮಾರ್ತಪರಾಯಣೈಃ ।
ಶಿವಭಕ್ತೈಃ ಮಹಾಪ್ರಾಜ್ಞೈಃ ಏವ ಪ್ರಾಪ್ಯಂ ಮಹತ್ತರಂ ॥೫॥

ಅವೈದಿಕೈಃ ಚ ಪಾಪಿಷ್ಠೈಃ ವೇದನಿಂದಾಪರೈಃ ಅಪಿ ।
ದೇವತಾ ದೂಷಕೈಃ ಅನ್ಯೈಃ ಅಪ್ರಾಪ್ಯಂ ಅತಿಶೋಭನಂ ॥೬॥

ಅನೇಕ ಕೋಟಿಭಿಃ ಕಲ್ಪೈಃ ಮಯಾ ಮದ್ಗುರುಣಾಽಥವಾ ।
ಬ್ರಹ್ಮನಾರಾಯಣಾಭ್ಯಾಂ ವಾ ನ ಶಕ್ಯಂ ವರ್ಣಿತಂ ಬುಧೈಃ ॥೭॥

ಪ್ರಾಪ್ಯ ಸಾಕ್ಷಾತ್ ಮಹಾವಿಷ್ಣುಃ ಸರ್ವಲೋಕೇಶ್ವರಃ ಹರಿಃ ।
ತತಾಪ ಪರಮಂ ಘೋರಂ ತಪಃ ಸಂವತ್ಸರತ್ರಯಂ ॥೮॥

ತತಃ ಪ್ರಸನ್ನೋ ಭಗವಾನ್ ಭವಃ ಭಕ್ತಹಿತೇ ರತಃ ।
ಸರ್ವಲೋಕ ಜಗತ್ ಸೃಷ್ಟಿಸ್ಥಿತಿ ನಾಶಸ್ಯ ಕಾರಣಂ ॥೯॥

ಸ್ಮರಣಮಾತ್ರದಿಂದಲೇ ಸಕಲ ಪಾಪಗಳನ್ನೂ ನಾಶಮಾಡುವಂಥ, ಅನೇಕ ಜನ್ಮಗಳ ವರೆಗೆ ಶ್ರೌತ, ಸ್ಮಾರ್ತ, ಕರ್ಮಾನುಷ್ಠಾನಗಳನ್ನು ಮಾಡಿದ ಮಹಾಪ್ರಾಜ್ಞರಾದ ಶಿವಭಕ್ತರು ಮಾತ್ರ ಪ್ರವೇಶಮಾಡಲು ಸಾಧ್ಯವಾದ, ||೪-೫||

ವೇದವಿಹಿತವಾದ ಕರ್ಮಾಚರಣೆಯಿಲ್ಲದ, ವೇದವನ್ನು ನಿಂದಿಸುವ, ವೇದಗಳನ್ನು ದೂಷಿಸುವ ಪಾಪಿಷ್ಠರುಗಳಿಗೆ ಪ್ರವೇಶಮಾಡಲು ಅಸಾಧ್ಯವಾದ ಅತ್ಯಂತ ಮಂಗಳಕರವಾದ, ||೬||

ಅನೇಕ ಕೋಟಿ ಕಲ್ಪಗಳಾದರೂ, ನಾನಾಗಲಿ, ನನ್ನ ಗುರುವಾಗಲಿ, ಬ್ರಹ್ಮನಾರಾಯಣರಾಗಲಿ, ಮತ್ತಾವ ವಿದ್ವಾಂಸರಾಗಲಿ, ವರ್ಣನೆ ಮಾಡಲು ಅಸಾಧ್ಯವಾದ ಪರ್ವತಶ್ರೇಷ್ಠವಾದ ಉತ್ತರ ಕೈಲಾಸಪರ್ವತಕ್ಕೆ ಹೋಗಿ ಅಲ್ಲಿ ಮೂರು ವರ್ಷಗಳ ವರೆಗೆ ಕಠಿಣವಾದ ತಪಸ್ಸನ್ನು ಮಾಡಿದನು. ||೭-೮||

ಆಮೇಲೆ ಭಕ್ತರಿಗೆ ಹಿತವನ್ನುಂಟುಮಾಡುವುದರಲ್ಲಿ ಆಸಕ್ತನೂ, ಸಮಸ್ತ ಲೋಕಗಳನ್ನೂ ಸೃಷ್ಟಿಸಿ, ಕಾಪಾಡಿ, ನಾಶಮಾಡಲು ಕಾರಣನಾದವನೂ, ಸರ್ವ

ಸರ್ವಜ್ಞಃ ಸರ್ವವಿತ್ ಸಾಕ್ಷೀ ಸರ್ವಸ್ಯ ಜಗತಃ ಸದಾ ।
ಪರಮಾರ್ಥ ಪರಾನಂದಃ ಪರಜ್ಞಾನ ಘನಾದ್ವಯಃ ॥೧೦॥

ಶಿವಃ ಶಂಭುಃ ಮಹಾದೇವಃ ರುದ್ರಃ ಬ್ರಹ್ಮಮಹೇಶ್ವರಃ ।
ಸ್ಥಾಣುಃ ಪಶುಪತಿಃ ವಿಷ್ಣುಃ ಈಶ ಈಶಾನ ಈಶ್ವರಃ ॥೧೧॥

ಪರಮಾತ್ಮಾ ಪರಃ ಪಾರಃ ಪುರುಷಃ ಪರಮೇಶ್ವರಃ ।
ಪುರಾಣಃ ಪರಮಃ ಪೂರ್ಣಃ ತತ್ವಂ ಕಾಷ್ಠಾ ಪರಾ ಗತಿಃ ॥೧೨॥

ಪತಿಃ ದೇವಃ ಹರಃ ಹರ್ತಾ ಭರ್ತಾ ಸ್ರಷ್ಟಾ ಪುರಾತನಃ ।
ಮಹಾಗ್ರೀವಃ ಮಹಾಧಾರಃ ಅತ್ತಾ ವಿಶ್ವಾಧಿಪಃ ಪ್ರಭುಃ ॥೧೩॥

ಮಹರ್ಷಿಃ ಭೂತಪಾಲಃ ಅಗ್ನಿಃ ಆಕಾಶಃ ಹರಿಃ ಅವ್ಯಯಃ ।
ಪ್ರಾಣಃ ಜ್ಯೋತಿಃ ಪುಮಾನ್ ಭೀಮಃ ಅಂತರ್ಯಾಮೀ ಸನಾತನಃ ॥೧೪॥

ಅಕ್ಷರೋ ದಹರಃ ಸಾಕ್ಷಾತ್ ಅಪರೋಕ್ಷಃ ಸ್ವಯಂ ಪ್ರಭುಃ ।
ಅಸಂಗ ಆತ್ಮಾ ನಿರ್ದ್ವಂದ್ವಃ ಪ್ರತ್ಯಗಾತ್ಮಾದಿ ಸಂಜ್ಞಿತಃ ॥೧೫॥

ಜ್ಞನೂ, ಸಾಮಾನ್ಯ ಮತ್ತು ವಿಶೇಷಜ್ಞಾನವುಳ್ಳವನೂ, ಸಕಲ ಪ್ರಪಂಚ ಕಾರ್ಯಕ್ಕೂ ಸಾಕ್ಷಿಸ್ವರೂಪನೂ, ಸತ್ಯವಾದ ಆನಂದಸ್ವರೂಪನೂ, ಅಖಂಡೈಕರಸಸ್ವರೂಪನೂ, ||೯-೧೦||

ಶಿವ, ಶಂಭು, ಮಹಾದೇವ, ರುದ್ರ, ಬ್ರಹ್ಮಾ, ಮಹೇಶ್ವರ, ಸ್ಥಾಣು, ಪಶುಪತಿ, ವಿಷ್ಣು, ಈಶ, ಈಶಾನ, ಈಶ್ವರ, ಪರಮಾತ್ಮ, ಪರ, ಪಾರ, ಪುರುಷ, ಪರಮೇಶ್ವರ, ಪುರಾಣ, ಪರಮ, ಪೂರ್ಣ, ತತ್ವ, ಕಾಷ್ಠ, ಪರಾಗತಿ, ಪತಿ, ದೇವ, ಹರ, ಹರ್ತಾ, ಭರ್ತಾ, ಸ್ರಷ್ಟಾ, ಪುರಾತನ, ಮಹಾಗ್ರೀವ, ಮಹಾಧಾರಾ, ಅತ್ತಾ, ವಿಶ್ವಾಧಿಕ, ಪ್ರಭು, ಮಹರ್ಷಿ, ಭೂತಪಾಲ, ಅಗ್ನಿ, ಆಕಾಶ, ಹರಿ, ಅವ್ಯಯ, ಪ್ರಾಣ, ಜ್ಯೋತಿ, ಪುಮಾನ್, ಭೀಮ, ಅಂತರ್ಯಾಮಿ, ಸನಾತನ, ಅಕ್ಷರ, ದಹರ, ಸಾಕ್ಷಾದ ಪರೋಕ್ಷ, ಸ್ವಯಂಪ್ರಭು, ಅಸಂಗ, ಆತ್ಮ, ನಿರ್ದ್ವಂದ್ವ, ಪ್ರತ್ಯಗಾತ್ಮಾ, ಮುಂತಾದ ವೇದೋಕ್ತವಾದ ಅನ್ವರ್ಥವಾದ ಹೆಸರುಗಳನ್ನು ಹೊಂದಿರುವ, ||೧೧-೧೨-೧೩-೧೪-೧೫||

ಉಮಾಸಹಾಯಃ ಭಗವಾನ್ ನೀಲಕಂಠಃ ತ್ರಿಲೋಚನಃ ।
ಬ್ರಹ್ಮಣಾ ವಿಷ್ಣುನಾ ಚೈವ ರುದ್ರೇಣಾಪಿ ಸದಾ ಹೃದಿ ॥೧೬॥

ಉಪಾಸ್ಯಮಾನಃ ಸರ್ವಾತ್ಮಾ ಸರ್ವವಸ್ತು ವಿವರ್ಜಿತಃ ।
ಕೃಪಯಾ ಕೇವಲಂ ವಿಷ್ಣುಂ ವಿಶ್ವಮೂರ್ತಿಃ ವೃಷಧ್ವಜಃ ॥೧೭॥

ಅನುಗೃಹ್ಯಾ ಬ್ರವೀತ್ ವಿಪ್ರಾ ದೇವಃ ಮಧುರಯಾ ಗಿರಾ ।
ಕಿಮರ್ಥಂ ತಪ್ತವಾನ್ ವಿಷ್ಣೋ ಮಹಾಘೋರಂ ತಪಶ್ಚಿರಂ ॥೧೮॥

ಅತ್ಯಂತಂ ಪ್ರೀತವಾನ್ ಅಸ್ಮಿ ತವ ತದ್ವದ ಮೇಽನಘ ।
ಇತ್ಯುಕ್ತಃ ಶಂಕರೇಣ ಅಸೌ ವಿಷ್ಣುಃ ವಿಶ್ವಜಗನ್ಮಯಃ ॥೧೯॥

ಪ್ರದಕ್ಷಿಣತ್ರಯಂ ಕೃತ್ವಾ ದಂಡವತ್ ಪೃಥಿವೀತಲೇ ।
ಪ್ರಣಮ್ಯ ಬಹುಶಃ ಶ್ರೀಮಾನ್ ಭಕ್ತ್ಯಾ ಪರವಶಃ ಹರಿಃ ॥೨೦॥

ಸಾಂಬಂ ಶೈವಂ ಪರಾನಂದ ಸಮುದ್ರಂ ಪುರುಷೋತ್ತಮಃ ।
ನೇತ್ರಾಭ್ಯಾಂ ಮಂಗಲಂ ಪೀತ್ವಾ ಕಂಚಿತ್ಕಾಲಂ ದ್ವಿಜರ್ಷಭಾಃ ॥೨೧॥
ಪ್ರಮತ್ತಃ ಶಂಕರಾದನ್ಯಂ ನ ಕಿಂಚಿತ್ ವೇದ ಸುವ್ರತಾಃ ।

ನೀಲಕಂಠನೂ, ಮುಕ್ಕಣ್ಣನೂ, ಉಮಾದೇವಿಯೊಡನೆ ಕೂಡಿದವನೂ, ಬ್ರಹ್ಮ, ವಿಷ್ಣು, ರುದ್ರರ ಹೃದಯದಲ್ಲಿ ಧ್ಯಾನಗೋಚರನಾದವನೂ, ಪೂರ್ಣನಾಗಿ ಸರ್ವವ್ಯಾಪಿಯಾಗಿರುವುದರಿಂದ ಸರ್ವಾತ್ಮನೂ, ಆಗಿರುವ, ಪರಮೇಶ್ವರನು ಅತ್ಯಂತ ದಯೆಯಿಂದ ವಿಷ್ಣುವಿಗೆ ಅನುಗ್ರಹವನ್ನು ಮಾಡಿ ಮಧುರವಾದ ಮಾತಿನಿಂದ ಅವನಿಗೆ ಹೇಳಿದನು. ||೧೬-೧೭||

ಎಲೈ ವಿಷ್ಣುವೇ, ಬಹಳಕಾಲ ಕಠಿಣವಾದ ತಪಸ್ಸನ್ನೇಕೆ ಮಾಡಿದೆ? ನಿನಗೆ ನಾನು ಪ್ರಸನ್ನನಾಗಿರುವೆನು. ನಿರ್ದುಷ್ಟನಾದ ನೀನು ಮಾಡಿದ ತಪಸ್ಸಿಗೆ ಕಾರಣವನ್ನು ನನಗೆ ಹೇಳು. ||೧೮||

ಹೀಗೆಂದು ಹೇಳುತ್ತಲು ವಿಷ್ಣುವು ಮೂರು ಪ್ರದಕ್ಷಿಣೆಯನ್ನು ಮಾಡಿ ಭೂಮಿಯಲ್ಲಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಭಕ್ತ್ಯತಿಶಯದಿಂದ ಪರವಶನಾಗಿ ಉಮಾಸಹಿತನೂ, ಪುರುಷಶ್ರೇಷ್ಠನೂ, ಪರಮಾನಂದ ಸಮುದ್ರಸ್ವರೂಪನೂ, ಆದ ಶಿವನನ್ನು ತನ್ನ ಕಣ್ಣುಗಳಿಂದ ಕೆಲವು ಹೊತ್ತುನೋಡಿ ಕಂಠಪೂರ್ತಿಯ

ತತಃ ಪ್ರಬುದ್ಧೋ ಭಗವಾನ್ ಪ್ರಸನ್ನಃ ಕಮಲೇಕ್ಷಣಃ ॥೨೨॥
ಅಪೃಚ್ಛತ್ ದೇವಂ ಈಶಾನಂ ಕೃಪಾಮೂರ್ತಿಂ ಜಗತ್ಪತಿಂ ।

॥ ವಿಷ್ಣುರುವಾಚ ॥

ಭಗವನ್ ಭೂತ ಭವ್ಯಜ್ಞ ಭವಾನೀಸಖ ಶಂಕರ ॥೨೩॥
ಮುಕ್ತಿಂ ಮುಕ್ತೇರುಪಾಯಂ ಚ ಮೋಚಕಂ ಮೋಚಕಪ್ರದಂ ।
ತಥೈವ ಅನ್ಯಚ್ಚ ಮೇ ಬ್ರೂಹಿ ಶ್ರದ್ಧಧಾನಸ್ಯ ಶಂಕರ ॥೨೪॥

॥ ಸೂತ ಉವಾಚ ॥

ಏವಂ ಪೃಷ್ಟಃ ಮಹಾದೇವಃ ವಿಷ್ಣುನಾ ವಿಶ್ವಯೋನಿನಾ ।
ವಿಲೋಕ್ಯ ದೇವೀಂ ಆಹ್ಲಾದಾತ್ ಅಂಬಿಕಾಂ ಅಖಿಲೇಶ್ವರೀಂ ॥೨೫॥
ಪ್ರಹಸ್ಯ ಕಿಂಚಿತ್ ಭಗವಾನ್ ಭವಾನೀಸಹಿತಃ ಹರಃ ।
ಪ್ರಾಹ ಸರ್ವಾಮರೇಶಾನಃ ವಿಷ್ಣವೇ ಮುನಿಸತ್ತಮಾಃ ॥೨೬॥

ಪರ್ಯಂತವಾಗಿ ಆನಂದಸಮುದ್ರವನ್ನು ಪಾನಮಾಡಿ, ಮತ್ತನಾಗಿ ಶಿವನನ್ನು ಬಿಟ್ಟು ಮತ್ತೊಂದನ್ನು ಕಾಣದಿದ್ದನು ! ॥೧೯-೨೦-೨೧॥

ಆಮೇಲೆ ಕಮಲದಂತೆ ಕಣ್ಣುಗಳುಳ್ಳ ಮಹಾಮಹಿಮನಾದ ವಿಷ್ಣುವು ಎಚ್ಚರಗೊಂಡು ದಯಾಮೂರ್ತಿಯೂ, ಲೋಕಗಳಿಗೆಲ್ಲಕ್ಕೂ ಒಡೆಯನೂ ಆದ ಈಶ್ವರನನ್ನು ಕುರಿತು ಲೋಕಾನುಗ್ರಹಕ್ಕೋಸ್ಕರ ಹೀಗೆ ಪ್ರಶ್ನೆಮಾಡಿದನು. ॥೨೨॥

ಮಹಾಮಹಿಮನಾದ, ಭೂತಭವಿಷ್ಯತ್ತುಗಳನ್ನು ಬಲ್ಲ, ಭವಾನೀಪತಿಯಾದ ಶಂಕರನೇ, ಅತ್ಯಂತಾಸಕ್ತಿಯಿಂದ ಕೂಡಿದ ನನಗೆ ಮುಕ್ತಿ, ಮುಕ್ತಿಯ ಉಪಾಯ, ಮೋಚಕ,ಮೋಚಕಪ್ರದ, ಮುಂತಾದುವುಗಳನ್ನೆಲ್ಲವನ್ನೂ ತಿಳಿಸಿಕೊಡಬೇಕೆಂದು ವಿಷ್ಣುವು ಕೇಳಿಕೊಂಡನು. ॥೨೩-೨೪॥

ಪ್ರಪಂಚಕ್ಕೆ ಕಾರಣನಾದ ವಿಷ್ಣುವು, ಹೀಗೆ ಪ್ರಶ್ನೆಮಾಡುತ್ತಲು, ಮಹಾದೇವನಾದ ಈಶ್ವರನು ಜ್ಞಾನಾಧಿಪತಿಯಾದ ಉಮಾದೇವಿಯನ್ನು ಸಂತೋಷದಿಂದ ನೋಡುತ್ತಾ, ಸ್ವಲ್ಪನಕ್ಕು, ಸಮಸ್ತ ಪಾಪಪರಿಹಾರಕನೂ, ಸಮಸ್ತ ದೇವತೆಗಳಿಗೆ ಒಡೆಯನೂ ಆದ ಶಿವನು, ದೇವೀಸಹಿತನಾಗಿ ವಿಷ್ಣುವನ್ನು ಕುರಿತು ಹೇಳಿದನು. ॥೨೫-೨೬॥

|| ಈಶ್ವರ ಉವಾಚ ||

ಭದ್ರಂ ಭದ್ರಂ ಮಹಾವಿಷ್ಣೋ ತ್ವಯಾ ಪೃಷ್ಟಂ ಜಗದ್ಧಿತಂ ।
ವದಾಮಿ ಸಂಗ್ರಹೇಣ ಅಹಂ ತಚ್ಛೃಣು ಶ್ರದ್ಧಯಾ ಸಹ ॥೨೭॥

ಬಹುಧಾ ಶ್ರೂಯತೇ ಮುಕ್ತಿಃ ವೇದಾಂತೇಷು ವಿಚಕ್ಷಣ ।
ಏಕಾ ಸಾಲೋಕ್ಯರೂಪೋಕ್ತಾ ದ್ವಿತೀಯಾ ಕಮಲೇಕ್ಷಣ ॥೨೮॥

ಈಶ್ವರನು ಹೇಳಿದನು—ಎಲೈ ಮಹಾವಿಷ್ಣುವೇ, ಶುಭವಾದ ಪ್ರಶ್ನೆಯನ್ನು ಕೇಳಿದೆ. ನಿನ್ನ ಪ್ರಶ್ನೆಯು ಲೋಕಕ್ಕೆ ಹಿತವನ್ನುಂಟುಮಾಡತಕ್ಕದ್ದಾಗಿರುವುದು. ನಿನಗೆ ಸಂಗ್ರಹವಾಗಿ ಎಲ್ಲವನ್ನೂ ಹೇಳುವೆನು, ಆಸಕ್ತಿಯಿಂದ ಕೇಳು. ||೨೭||

ಬುದ್ಧಿವಂತನಾದ ವಿಷ್ಣುವೇ, ವೇದಾಂತಶಾಸ್ತ್ರದಲ್ಲಿ ಮುಕ್ತಿಯು ಅನೇಕ ವಿಧವೆಂದು ಹೇಳಿರುವುದು. ಅವುಗಳಲ್ಲಿ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ, ಸ್ವರೂಪಾವಸ್ಥಾನ ಎಂದು ಐದು ಬಗೆಯ ಮುಕ್ತಿಗಳು ಪ್ರಸಿದ್ಧವಾದವುಗಳು. ಮುಂಡಕೋಪನಿಷತ್ತಿನಲ್ಲಿ "ತಪಃ ಶ್ರದ್ಧೇಯೇಹ್ಯುಪವಸಂತ್ಯರಣ್ಯೇ ಶಾಂತಾ ವಿದ್ವಾಂಸೋ ಭೈಕ್ಷ್ಯಚರ್ಯಾಂ ಚರಂತಃ | ಸೂರ್ಯದ್ವಾರೇಣ ತೇ ವಿರಜಾಃ ಪ್ರಯಾಂತಿ ಯತ್ರಾಮೃತಃ ಸಪುರುಷೋಹ್ಯವ್ಯಯಾತ್ಮಾ" ಎಂದು ತಪಸ್ವಿಯಾದ ಯತಿಯು ಸೂರ್ಯನ ಮಾರ್ಗವಾಗಿ, ಬ್ರಹ್ಮನು ವಾಸವಾಗಿರುವ ಸತ್ಯಲೋಕಕ್ಕೆ ಹೋಗುವನೆಂದು ಹೇಳಿದೆ. ಇದು ಸಾಮೀಪ್ಯಮುಕ್ತಿಯು. ತಂತಮ್ಮ ಆಶ್ರಮೋಚಿತವಾದ ಕರ್ಮಾಚರಣೆಮಾಡುವವರಿಗೆ ದೊರೆಯತಕ್ಕದ್ದು. ಪ್ರತಿಮಾದಿಗಳಲ್ಲಿ ವಿಷ್ಣುವೇ ಮುಂತಾದ ದೇವತಾಬುದ್ಧಿಯಿಂದ ಉಪಾಸನೆ ಮಾಡತಕ್ಕವರಿಗೆ ಆ ದೇವತೆಗಳ ಲೋಕಗಳಲ್ಲಿ ಸಮವಾದ ವಾಸವು ಪ್ರಾಪ್ತವಾಗುವುದು. ಇದು ಸಾಲೋಕ್ಯಮುಕ್ತಿಯು. ಪ್ರತಿಮಾದಿಗಳಿಲ್ಲದೆ ದೇವನು ತನಗಿಂತಲೂ ಬೇರೆಯಾದವನು ಅನೇಕ ಐಶ್ವರ್ಯಯುಕ್ತವಾದ ಗುಣಗಳಿಂದ ಕೂಡಿದವನು ಎಂಬ ಮನಸ್ಸಿನ ಭಾವನೆಯಿಂದ ಮಾಡುವ ಉಪಾಸನೆಯನ್ನು, ಇದಂ ಗ್ರಹೋಪಾಸನೆಯೆಂದೂ, ಸಂಪದುಪಾಸನೆಯೆಂದೂ ಹೇಳುವರು. ಇಂತಹ ಉಪಾಸಕರಿಗೆ ಅವರು ಉಪಾಸನೆ ಮಾಡುವ ದೇವತೆಗಳ ಸಮಾನರೂಪವು ಪ್ರಾಪ್ತವಾಗುವುದು. ಇದು ಸಾರೂಪ್ಯಮುಕ್ತಿಯು. ಉಪಾಸ್ಯದೇವತೆಯು ಸಗುಣವೆಂದು ಭಾವಿಸಿ, ಆ ದೇವತೆಯನ್ನು ತನ್ನ ಮನೋರೂಪವಾಗಿ ಮಾಡಿಕೊಂಡು, ನಾನೇ ಆ ದೇವನೆಂಬ ಬುದ್ಧಿಯಿಂದ ಮಾಡುವ ಉಪಾಸನೆಯನ್ನು ಅಹಂಗ್ರಹೋಪಾಸನೆ ಎನ್ನುವರು. ಇಂತಹ ಉಪಾಸ

ಸಾಮೀಪ್ಯರೂಪಾ ಸಾರೂಪ್ಯಾ ತೃತೀಯಾ ಪುರುಷೋತ್ತಮ ।
ಅನ್ಯಾ ಸಾಯುಜ್ಯ ರೂಪಾ ಉಕ್ತಾ ಸುಖದುಃಖ ವಿವರ್ಜಿತಾ ॥೨೯॥

ಷಡ್ಭಾವ ವಿಕ್ರಿಯಾಹೀನಾ ಶುಭಾಶುಭ ವಿವರ್ಜಿತಾ ।
ಸರ್ವ ದ್ವಂದ್ವವಿನಿರ್ಮುಕ್ತಾ ಸತ್ಯವಿಜ್ಞಾನ ರೂಪಿಣೀ ॥೩೦॥
ಕೇವಲಂ ಬ್ರಹ್ಮರೂಪೋಕ್ತಾ ಸರ್ವದಾ ಸುಖಲಕ್ಷಣಾ ।

ಕರಿಗೆ ಅವರು ಉಪಾಸನೆ ಮಾಡುವ ದೇವತಾ ತಾದಾತ್ಮ್ಯವೇ ಪ್ರಾಪ್ತಿಯಾಗುವುದು. ಇದೇ ಸಾಯುಜ್ಯಮುಕ್ತಿಯು. ಈ ನಾಲ್ಕು ಮುಕ್ತಿಗಳೂ ಕರ್ಮಜನ್ಯ ಫಲರೂಪವಾದುವುಗಳಾದುದರಿಂದ ಸಗುಣಗಳಾಗಿ ಅನಿತ್ಯವಾದವುಗಳು. ಜ್ಞಾನಕ್ಕೆ ಫಲವಾದ ಮುಕ್ತಿಯಾದರೋ ನಿತ್ಯವಾಗಿ ನಿರತಿಶಯಾನಂದಸ್ವರೂಪವಾದುದಾಗಿರುವುದು. ಇದೇ ಐದನೆಯದಾದ ಸುಖದುಃಖವರ್ಜಿತವಾದ ಮುಕ್ತಿಯು. ತೈತ್ತಿರೀಯಕ ಶ್ರುತಿಯಲ್ಲಿ "ಯ ಏವಂ ವಿದ್ವಾನುದಗಯನೇ ಪ್ರಮಿಾಯತೇ ದೇವಾನಾಮೇವ ಮಹಿಮಾನಂಗತ್ವಾ ಚಂದ್ರಮಸಃ ಸಾಯುಜ್ಯಂ ಸಲೋಕತಾಮಾಪ್ನೋತಿ" ಇತ್ಯಾದಿಯಾಗಿ ಕೇವಲ ಕರ್ಮಮಾಡತಕ್ಕವರಿಗೆ, ಧೂಮಾದಿಮಾರ್ಗದಿಂದ ಚಂದ್ರಲೋಕಪ್ರಾಪ್ತಿರೂಪವಾದ ಸಾಮಿಾಪ್ಯಮುಕ್ತಿಯನ್ನೂ, ವಿದ್ವಾನ್ ಎಂಬ ಶಬ್ದದಿಂದ ಹಿಂದೆ ಹೇಳಿದಂತೆ ಮೂರು ವಿಧವಾದ ಉಪಾಸನೆಯನ್ನು ಮಾಡತಕ್ಕವರಿಗೆ ಸಾಲೋಕ್ಯ, ಸಾರೂಪ್ಯ, ಸಾಯುಜ್ಯ, ಎಂಬ ಮೂರು ವಿಧವಾದ ಮುಕ್ತಿಗಳನ್ನು ಹೇಳಿರುವುದು-- "ಬ್ರಾಹ್ಮಣೋ ವಿದ್ವಾನಭಿಜಯತಿ ತಸ್ಮಾದ್ಬ್ರಹ್ಮಣೋ ಮಹಿಮಾನಮಾಪ್ನೋತಿ" ಎಂದು ಬ್ರಹ್ಮನಿಷ್ಠನನ್ನು ತತ್ವಜ್ಞಾನಿಯೆಂದು ಹೇಳಿ ಅವನು ತನ್ನಲ್ಲಿಯೇ ಯಾವ ವಿಶೇಷವೂ ಇಲ್ಲದ, ಪರಮಾನಂದರಸೈಕಸ್ವರೂಪನಾಗಿ ಉಳಿದಿರುವನೆಂದು "ಬ್ರಹ್ಮೈವಸನ್ ಬ್ರಹ್ಮಾಪ್ಯೇತಿ" ಎಂದು ಹೇಳಿರುವುದು. ॥೨೮-೨೯॥

ಅಸ್ತಿ, ಜಾಯತೇ, ವರ್ಧತೇ, ವಿಪರಿಣಮತೇ, ಅಪಕ್ಷೀಯತೇ, ನಶ್ಯತಿ ಇವುಗಳೇ ಷಡ್ಭಾವವಿಕಾರಗಳು. ವಿಷಯಸುಖಪ್ರಾಪ್ತಿಯಲ್ಲಿಯೂ, ದುಃಖನಿವೃತ್ತಿಯಲ್ಲಿಯೂ ಇವು ಇದ್ದೇ ಇರುವುವು. ನಿತ್ಯವಾದ ನಿರತಿಶಯಾನಂದಸ್ವರೂಪವಾದ ಆತ್ಮಸ್ವರೂಪಾಭಿವ್ಯಕ್ತಿಯಲ್ಲಿ ಇವುಗಳಿರುವುದಿಲ್ಲ. ವಿಹಿತವಾದ ಯಾಗಾದಿ ಶುಭಕರ್ಮಗಳೂ ನಿಷಿದ್ಧವಾದ ಹಿಂಸಾದಿ ಅಶುಭಕರ್ಮಗಳೂ, ಜ್ಞಾನಿಗೆ ಇರುವುದಿಲ್ಲ. ರಾಗದ್ವೇಷ, ಮಾನಾವಮಾನ, ಶೀತೋಷ್ಣ ಮುಂತಾದ ದ್ವಂದ್ವಗಳಿಲ್ಲದ ಸತ್ಯಜ್ಞಾನಸ್ವರೂಪವಾದ ನಿತ್ಯಸುಖಸ್ವರೂಪವೇ ಬ್ರಹ್ಮಸ್ವರೂಪವು. ॥೩೦॥

ನ ಹೇಯಾ ನಾಪ್ಯುಪಾದೇಯಾ ಸರ್ವಸಂಬಂಧವರ್ಜಿತಾ ॥೩೧॥

ನ ದೃಷ್ಟಾ ನ ಶ್ರುತಾ ವಿಷ್ಣೋ ನ ಚಾಸ್ವಾದ್ಯಾ ನ ತರ್ಕಿತಾ ।
ಸರ್ವಾವರಣ ನಿರ್ಮುಕ್ತಾ ನ ವಿಜ್ಞೇಯಾ ನಿರಾಶ್ರಯಾ ॥೩೨॥

ವಾಚ್ಯ ವಾಚಕ ನಿರ್ಮುಕ್ತಾ ಲಕ್ಷ್ಯ ಲಕ್ಷಣ ವರ್ಜಿತಾ ।
ಸರ್ವೇಷಾಂ ಪ್ರಾಣಿನಾಂ ಸಾಕ್ಷಾತ್ ಆತ್ಮಭೂತಾ ಸ್ವಯಂಪ್ರಭಾ॥೩೩॥

ಪ್ರತಿಬಂಧ ವಿನಿರ್ಮುಕ್ತಾ ಸರ್ವದಾ ಪರಮಾರ್ಥತಃ ।
ಅವಿಚಾರ ದಶಾಯಾಂ ತು ಪ್ರತಿಬದ್ಧಾ ಸ್ವಮಾಯಯಾ ॥೩೪॥

ಏಷೈವ ಪರಮಾ ಮುಕ್ತಿಃ ಪ್ರೋಕ್ತಾ ವೇದಾರ್ಥವೇದಿಭಿಃ ।
ಅನ್ಯಾಶ್ಚಮುಕ್ತಯಃ ಸರ್ವಾ ಅವರಾಃ ಪರಿಕೀರ್ತಿತಾಃ ॥೩೫॥

ಜನ್ಮನಾಶಾಭಿ ಭೂತಾಶ್ಚ ತಾರತಮ್ಯೇನ ಸಂಸ್ಥಿತಾಃ ।
ಸ್ಪರ್ಧಯೋಪಹತಾ ನಿತ್ಯಂ ಪರತಂತ್ರಾಶ್ಚ ಸರ್ವದಾ ॥೩೬॥

ಈ ಬ್ರಹ್ಮಸ್ವರೂಪವು ಆತ್ಮಸ್ವರೂಪವೇ ಆದುದರಿಂದ ಬಿಡಲಾಗುವುದಿಲ್ಲ. ಯಾವಾಗಲೂ ತನ್ನಲ್ಲಿಯೇ ಇರುವುದರಿಂದ ಗ್ರಹಿಸತಕ್ಕುದಲ್ಲ. ಈ ಅತ್ಮವಸ್ತುವಿಗೆ ಅವಿದ್ಯಾದಿ ಯಾವ ಸಂಬಂಧವೂ ಇರುವುದಿಲ್ಲ. ಎಲೈ ವಿಷ್ಣುವೇ, ಈ ವಸ್ತುವು ಕಣ್ಣು, ಕಿವಿ, ನಾಲಿಗೆ ಮುಂತಾದ ಇಂದ್ರಿಯಗಳಿಗೆ ಗೋಚರವಾಗುತಕ್ಕುದಲ್ಲ. ಊಹೆಗೂ ಸಿಕ್ಕತಕ್ಕುದಲ್ಲ. ಇದಕ್ಕೆ ಯಾವ ಮರೆಯೂ ಇಲ್ಲ. ಸಕಲ ವಸ್ತುಗಳಿಗೂ ಆಶ್ರಯವಾದ ಈ ತತ್ವಕ್ಕೆ ಬೇರೇ ಆಶ್ರಯವಾದುದಿಲ್ಲವಾದುದರಿಂದ ತಿಳಿಯಲಸಾಧ್ಯವಾದುದು. ವಾಚ್ಯ, ವಾಚಕಸಂಬಂಧವಾಗಲಿ, ಲಕ್ಷ್ಯ, ಲಕ್ಷಕಸಂಬಂಧವಾಗಲಿ ಇಲ್ಲದುದು. ಸಮಸ್ತಪ್ರಾಣಿಗಳಿಗೂ ಆತ್ಮಸ್ವರೂಪವಾದ ಸ್ವಪ್ರಕಾಶಸ್ವರೂಪವಾದುದು. ಇದು ಅವಿಶುದ್ಧಿ ಮುಂತಾದ ದೋಷಗಳೂ ಇಲ್ಲದೆ ಉತ್ತಮವಾಗಿದೆ. ||೩೧-೩೨-೩೩||

ಯಾವಾಗಲೂ ಸ್ವಸ್ವರೂಪವಾದ ಜ್ಞಾನಕ್ಕೆ ಯಾವ ತಡೆಯೂ ಇರುವುದಿಲ್ಲ. ವಿಚಾರವಿಲ್ಲದಾಗ ಮಾತ್ರ ತನ್ನ ಮಾಯಾಶಕ್ತಿಯಾದ ಅಜ್ಞಾನದಿಂದ ತಡೆಯಾಗಿರುವುದು. ಆದುದರಿಂದ ವಿಚಾರದ ದೆಸೆಯಲ್ಲಿ ಉಂಟಾಗಿರುವ ಸ್ವಸ್ವರೂಪಜ್ಞಾನವೇ ಶ್ರೇಷ್ಠವಾದ ಮುಕ್ತಿಯೆಂದು ವೇದಾರ್ಥವನ್ನು ಬಲ್ಲವರು ಹೇಳುವರು. ||೩೪||

ಮಿಕ್ಕ ಮುಕ್ತಿಗಳೆಲ್ಲವೂ ಉತ್ಪತ್ತಿನಾಶಗಳಿಗೆ ಗುರಿಯಾಗಿರುವುದರಿಂದಲೂ

ಸುಖೋತ್ತರಾ ಅಪಿ ಶ್ರೇಷ್ಠಾ ದುಃಖಮಿಶ್ರಾಶ್ಚ ಸರ್ವದಾ ।
ಏತಾಶ್ಚ ಮುಕ್ತಯೋಽಸ್ಯೇಷಾಂ ಕೇಷಾಂಚಿದಧಿಕಾರಿಣಾಂ ॥೩೭॥

ವಿಶ್ರಾಂತಿಭೂಮಯಃ ಸಾಕ್ಷಾನ್ಮುಕ್ತೇಃ ಪ್ರೋಕ್ತಾಃ ಕ್ರಮೇಣ ವೈ ।
ಅತ್ಯಂತ ಶುದ್ಧಚಿತ್ತಾನಾಂ ನೃಣಾಮೇತಾ ವಿಮುಕ್ತಯಃ ॥೩೮॥

ಭವಂತಿ ವಿಷ್ಣೋ ಭೋಗಾರ್ಥಂ ಸ್ವರ್ಗವತ್ತಾಶ್ಚ ನಶ್ವರಾಃ ।
ಏತಾಶ್ಚ ಬಹುಧಾ ಭಿನ್ನಾ ವಿದ್ಧಿ ಪಂಕಜಲೋಚನ ॥೩೯॥

ಕಾಶ್ಚಿಚ್ಛಂಕರಸಾರೂಪ್ಯ ರೂಪಾಃ ಪ್ರೋಕ್ತಾ ವಿಮುಕ್ತಯಃ ।
ಕಾಶ್ಚಿನ್ಮುಕುಂದಸಾರೂಪ್ಯ ರೂಪಾಃ ಕಾಶ್ಚಿಜ್ಜನಾರ್ದನ ॥೪೦॥

ಬ್ರಹ್ಮಸಾರೂಪ್ಯ ರೂಪಾಶ್ಚ ತಥಾ ಕಾಶ್ಚಿದ್ವಿಮುಕ್ತಯಃ ।
ಬ್ರಹ್ಮವಿಷ್ಣುಮಹೇಶಾನಾ ಮಮಾರ್ಗ್ಗೋಪಸಮಾಃ ಸ್ಮೃತಾಃ ॥೪೧॥

ಕಾಶ್ಚಿತ್ಸದಾಶಿವಾದೀನಾಂ ರೂಪೇಣ ಸದೃಶಾ ಹರೇ ।
ಕಾಶ್ಚಿದನ್ಯ ಸಮಾ ವಿಷ್ಣೋ ಮುಕ್ತಯಃ ಪರಿಕೀರ್ತಿತಾಃ ॥೪೨॥

ಹೆಚ್ಚುಕಡಿಮೆಗಳೆಂಬ ಭಾವದಿಂದ ಅಸೂಯೆಮೇಲಾಟವನ್ನು ಹುಟ್ಟಿಸುವುದರಿಂದಲೂ, ಕರ್ಮೋಪಾಸನಾದಿಗಳಿಗೆ ಆಧೀನವಾದುದರಿಂದಲೂ ಶ್ರೇಷ್ಠವಾದುವಲ್ಲವು.||೩೫-೩೬||

ಈ ಮುಕ್ತಿಗಳು ಶ್ರೇಷ್ಠವಾದ ಸುಖವುಳ್ಳವಾದರೂ ದುಃಖಮಿಶ್ರವಾದುದರಿಂದ ಪರಿಶುದ್ಧವಾದುವುಗಳಲ್ಲ. ಇವುಗಳು ಕ್ರಮವಾಗಿ ಸಾಕ್ಷಾತ್ ಆತ್ಮಜ್ಞಾನಸ್ವರೂಪವಾದ ಮುಕ್ತಿಯನ್ನು ಪಡೆವಮಾರ್ಗದಲ್ಲಿ ಆಯಾ ಅಧಿಕಾರಿಗಳಿಗೆ ವಿಶ್ರಾಂತಿಸ್ಥಳವಾಗಿರುವುದರಿಂದ ಇದನ್ನೂ ಮುಕ್ತಿಯೆಂದು ಉಪಚಾರಕ್ಕೆ ಹೇಳಿರುವರು.||೩೭||

ಎಲೈ ವಿಷ್ಣುವೇ, ಅತ್ಯಂತ ಪರಿಶುದ್ಧವಾದ ಮನಸ್ಸುಳ್ಳ ಜೀವರುಗಳಿಗೆ ಈ ಮುಕ್ತಿಗಳು ಸ್ವರ್ಗದಂತೆ ಸುಖವನ್ನು ಕೊಡತಕ್ಕವುಗಳು. ಅವರು ಸಂಪಾದಿಸಿದ್ದ ಪುಣ್ಯಕ್ಕೆ ತಕ್ಕಷ್ಟು ಸುಖಾನುಭವವಾದ ಮೇಲೆ ನಾಶವಾಗತಕ್ಕವುಗಳು. ||೩೮||

ಕಮಲದಂತೆ ಕಣ್ಣುಳ್ಳ ವಿಷ್ಣುವೇ, ಮುಕ್ತಿಗಳಲ್ಲಿ ಅನೇಕ ಬಗೆಗಳಿರುವುವು. ಶಂಕರ, ಮುಕುಂದ, ಬ್ರಹ್ಮ, ಸದಾಶಿವನೇ ಮೊದಲಾದ ಉಪಾಸ್ಯ ದೇವತೆಗಳಿಗೆ ಸಮಾನವಾದ ಸಗುಣಸಾಕಾರವಾದ ರೂಪವು ಜೀವರಿಗೆ ಉಂಟಾಗಿ, ಆರೂಪದಿಂದ ಸ್ವರ್ಗದಲ್ಲಿ ಸುಖವನ್ನನುಭವಿಸುತ್ತಿರುವುದು ಸಾರೂಪ್ಯಮುಕ್ತಿಯು. ||೩೯-೪೦-೪೧-೪೨||

ಕಾಶ್ಚಿಚ್ಛಂಕರಸಾಮಿಪ್ಯ ರೂಪಾಃ ಪ್ರೋಕ್ತಾ ವಿಮುಕ್ತಯಃ ।
ವಿಷ್ಣುಸಾಮಿಪ್ಯರೂಪಾಶ್ಚ ಕಾಶ್ಚಿದ್ವಿಷ್ಣೋ ವಿಮುಕ್ತಯಃ ॥೪೩॥

ಬ್ರಹ್ಮಸಾಮಿಪ್ಯರೂಪಾಶ್ಚ ತಥಾ ಕಾಶ್ಚಿದ್ದ್ವಿಮುಕ್ತಯಃ ।
ವಿಭೂತಿರೂಪ ಸಾಮಿಪ್ಯರೂಪಾ ಜ್ಞೇಯಾ ವಿಮುಕ್ತಯಃ ॥೪೪॥

ಶಿವಸಾಲೋಕ್ಯರೂಪಾಶ್ಚ ಪ್ರೋಕ್ತಾಃ ಕಾಶ್ಚಿದ್ವಿಮುಕ್ತಯಃ ।
ವಿಷ್ಣು ಸಾಲೋಕ್ಯ ರೂಪಾಶ್ಚ ಕಾಶ್ಚಿದ್ವಿಷ್ಣೋ ವಿಮುಕ್ತಯಃ ॥೪೫॥

ಬ್ರಹ್ಮಸಾಲೋಕ್ಯ ರೂಪಾಶ್ಚ ತಥಾ ತೇಷಾಂ ಜನಾರ್ದನ ।
ವಿಭೂತಿರೂಪ ಸಾಲೋಕ್ಯರೂಪಾ ಜ್ಞೇಯಾ ವಿಮುಕ್ತಯಃ ॥೪೬॥

ಏವಂ ಬಹುವಿಧಾಜ್ಞೇಯಾ ಮುಕ್ತಯಃ ಪುರುಷೋತ್ತಮ ।
ಏತಾಸ್ವಶುದ್ಧ ಚಿತ್ತಾನಾಂ ಇಚ್ಛಾ ನಿತ್ಯಂ ಪ್ರಜಾಯತೇ ॥೪೭॥

ನೃಣಾಂ ವಿಶುದ್ಧಚಿತ್ತಾನಾಂ ಕ್ರಮಮುಕ್ತೌ ಜನಾರ್ದನ ।
ವಾಂಛಾ ವಿಜಾಯತೇ ತೇಷಾಂ ಸಿಧ್ಯತ್ಯೇವ ಪರಾ ಗತಿಃ ॥೪೮॥

ಶಿವ, ವಿಷ್ಣು, ಬ್ರಹ್ಮ ತ್ರಿಮೂರ್ತಿಗಳ ಅವತಾರಗಳು ಈ ದೇವತಾಸಾಮಿಪ್ಯ ರೂಪವಾದ ಮುಕ್ತಿಗಳು. ಕೆಲವು ದೇವತಾಸಾಮಿಪ್ಯ ಮುಕ್ತಿಯಿಂದ ಆ ದೇವತೆಗಳ ಲೋಕದಲ್ಲಿ ಜೀವರು ಆ ದೇವತೆಗಳೊಡನೆ ಇದ್ದು ಪ್ರಳಯದಲ್ಲಿ ದೇವತೆಗಳೊಡನೆ ಪ್ರಕೃತಿಯಲ್ಲಿ ವಿಲೀನವಾಗುವರು. ||೪೩-೪೪||

ಶಿವ, ವಿಷ್ಣು, ಬ್ರಹ್ಮ, ಇಂದ್ರಾದಿದೇವತೆಗಳು ಇವರ ಲೋಕಗಳಂತಿರುವ ಲೋಕಗಳಲ್ಲಿ ಜೀವರು ಸುಖವನ್ನು ಅನುಭವಿಸುತ್ತಿರುವುದು ಸಾಲೋಕ್ಯಮುಕ್ತಿಯು. ಜೀವರುಗಳು ಮಾಡಿದ ಪುಣ್ಯವು ಈ ಲೋಕಗಳಲ್ಲಿ ಸುಖವನ್ನು ಅನುಭವಿಸುವುದರಿಂದ ಮುಗಿದುಹೋಗುತ್ತಲು, ಮತ್ತೆ ಪುನರ್ಜನ್ಮವು ಪ್ರಾಪ್ತವಾಗುವುದು. ಎಲೈ ಪುರುಷಶ್ರೇಷ್ಠನಾದ ವಿಷ್ಣುವೇ, ಇಂತಹ ಮುಕ್ತಿಗಳು ಅನೇಕ ಬಗೆಯಾಗಿರುವುವು. ||೪೫-೪೬||

ಅಶುದ್ಧಚಿತ್ತರು, ವಿಶುದ್ಧಚಿತ್ತರು, ಅತೀವಶುದ್ಧಚಿತ್ತರು ಎಂದು ಅಧಿಕಾರಿಗಳಲ್ಲಿ ಮೂರುಬಗೆಯಿರುವುದು. ಅಶುದ್ಧಚಿತ್ತರು ಭ್ರಮರೂಪವಾದ ಸಾರೂಪ್ಯ, ಸಾಲೋಕ್ಯ, ಸಾಮಿಪ್ಯ, ಮುಕ್ತಿಯನ್ನು ಅಪೇಕ್ಷಿಸುವರು. ವಿರುದ್ಧಚಿತ್ತರು ಕ್ರಮ

ಅತೀವ ಶುದ್ಧಚಿತ್ತಾನಾಂ ಪ್ರಸಾದಾದೇವ ಮೇ ಹರೇ ।
ಇಚ್ಛಾ ಸಾಯುಜ್ಯ ರೂಪಾಯಾಂ ಮುಕ್ತೌ ಸಮ್ಯಗ್ವಿಜಾಯತೇ ॥೪೯॥

ಸಾಕ್ಷಾತ್ ಪ್ರಸಾದ ಹೀನಾನಾಂ ಮುಕ್ತೌ ನೇಚ್ಛಾ ವಿಜಾಯತೇ ।
ವೇದಮಾರ್ಗೈಕನಿಷ್ಠಾನಾಂ ಮದ್ಭಕ್ತಾನಾಂ ಮಹಾತ್ಮನಾಂ ॥೫೦॥

ಶ್ರದ್ಧಾಪ್ರವೃತ್ತಿ ಪರ್ಯಂತಾ ಸಾಕ್ಷಾನ್ಮುಕ್ತೌ ವಿಜಾಯತೇ ।
ಸಾಯುಜ್ಯರೂಪಾ ಪರಮಾ ಮುಕ್ತಿಃ ಜೀವಪರಾತ್ಮನೋಃ ॥೫೧॥

ಪಾರಮಾರ್ಥಿಕ ತಾದಾತ್ಮ್ಯರೂಪಾಽಪ್ಯಜ್ಞಾನ ನಾಶಕಃ ।
ಮುಮುಕ್ಷೋಃ ವ್ಯಜ್ಯತೇ ಸಮ್ಯಕ್ ಇತಿ ವೇದಾಂತ ನಿರ್ಣಯಃ ॥೫೨॥

ಯಸ್ಯ ಸ್ವಭಾವ ಭೂತೇಯಂ ಮುಕ್ತಿಃ ಸಾಕ್ಷಾತ್ ಪರಾ ಹರೇ ।
ಅಭಿವ್ಯಕ್ತಾ ಸ ಏವಾಹ ಮಿತಿ ಮೇ ನಿಶ್ಚಿತಾ ಮತಿಃ ॥೫೩॥

ಮುಕ್ತಿಯನ್ನು ಎಂದರೆ ಚಿತ್ತಶುದ್ಧಿಯ ಮೂಲಕವಾಗಿ ಜ್ಞಾನೋತ್ಪತ್ತಿಯಾಗಿ, ಬಳಿಕ ಆತ್ಮಸಾಕ್ಷಾತ್ಕಾರರೂಪವಾದ ಮುಕ್ತಿಯನ್ನು ಅಪೇಕ್ಷಿಸುವರು. ಇದು ಅವರಿಗೆ ಸಿದ್ಧಿಸುವುದು. ಅತೀವ ಶುದ್ಧಚಿತ್ತರಿಗೆ ನನ್ನ ಅನುಗ್ರಹದಿಂದಲೇ ಸಾಯುಜ್ಯರೂಪವಾದ ನಿರ್ಗುಣಬ್ರಹ್ಮಾತ್ಮಭಾವವು ಉಂಟಾಗುವುದು. ||೪೭-೪೮-೪೯||

ನನ್ನ ಅನುಗ್ರಹವಿಲ್ಲದವರಿಗೆ ಈ ಮುಕ್ತಿಯಲ್ಲಿ ಅಪೇಕ್ಷೆಯುಂಟಾಗುವುದಿಲ್ಲ. ವೇದಮಾರ್ಗದಲ್ಲಿಯೇ ನಡೆಯುತ್ತಿರುವ ನನ್ನ ಭಕ್ತರಾದ ಮಹಾತ್ಮರಿಗೆ ಆತ್ಮಸಾಕ್ಷಾತ್ಕಾರ ರೂಪವಾದ ಮುಕ್ತಿಯಪರ್ಯಂತವಾಗಿ ಆವಶ್ಯಕವಾಗಿ ಮಾಡಬೇಕಾದ ಕಾರ್ಯಗಳಲ್ಲಿ ಆಸಕ್ತಿಯುಂಟಾಗುವುದು. ||೫೦||

ಸಾಯುಜ್ಯವೆಂಬ ಶ್ರೇಷ್ಠವಾದ ಮುಕ್ತಿಯು ಜೀವಾತ್ಮ, ಪರಮಾತ್ಮರಿಗೆ ಪಾರಮಾರ್ಥಿಕವಾದ ತಾದಾತ್ಮ್ಯವಿದ್ದರೂ ಮುಮುಕ್ಷುವಾದ ಜೀವಾತ್ಮನ ಅಜ್ಞಾನ ನಾಶದಿಂದ ಸ್ವಸ್ವರೂಪವು ಚೆನ್ನಾಗಿ ವ್ಯಕ್ತವಾಗುವುದೇ ಆಗಿರುವುದೆಂದು “ಬ್ರಹ್ಮವೇದ ಬ್ರಹ್ಮೈವಭವತಿ” ಎಂದು ವೇದಾಂತಶಾಸ್ತ್ರದಲ್ಲಿ ನಿರ್ಣಯವಾಗಿರುವುದು.||೫೧-೫೨||

ನಿಷ್ಪನ್ನವೇ, ಸಾಕ್ಷಾತ್ ಪರಬ್ರಹ್ಮಸ್ವರೂಪವು ಜೀವಾತ್ಮನಿಗೆ ಸ್ವಾಭಾವಿಕವಾದುದಾದರೂ, ಅವಿದ್ಯೆಯಿಂದ ತಾನು ಮುಕ್ತನಲ್ಲವೆಂಬ ಭಾವವು ಉಂಟಾಗಿದೆ. ಅದು ಜ್ಞಾನದಿಂದ ಹೊರಟುಹೋಗುವುದನ್ನೇ ಅಭಿವ್ಯಕ್ತಿಯೆಂಬ ಶಬ್ದದಿಂದ ಹೇಳುವರು. ||೫೩||

ಯಸ್ಯ ಮುಕ್ತಿಃ ಅಭಿವ್ಯಕ್ತಾ ಸ್ವಾತ್ಮಸರ್ವಾರ್ಥವೇದಿನೀ ।
ತಸ್ಯ ಪ್ರಾರಬ್ಧಕರ್ಮಾಂತಂ ಜೀವನ್ಮುಕ್ತಿಃ ಪ್ರಕೀರ್ತಿತಾ ॥೫೪॥

ಸ್ವತಃ ಸಿದ್ಧಾತ್ಮಭೂತಾಯಾ ಮುಕ್ತೇರಜ್ಞಾನಹಾನತಃ ।
ಅಭಿವ್ಯಕ್ತೇಃ ಮಹಾವಿಷ್ಣೋ ಬದ್ಧತ್ವಂ ದಗ್ಧವಸ್ತ್ರವತ್ ॥೫೫॥

ಸಮಸ್ತವನ್ನೂ ಆತ್ಮಸ್ವರೂಪವಾಗಿ ತಿಳಿಯುವಂತಹ ಮುಕ್ತಿಯು ಯಾವನಿಗೆ ಅಭಿವ್ಯಕ್ತವಾಯಿತೋ ಅವನನ್ನು ಅವನ ಪ್ರಾರಬ್ಧಕರ್ಮಫಲವು ಕಳೆವ ಪರ್ಯಂತವಾಗಿ ಜೀವನ್ಮುಕ್ತನೆಂದು ಕರೆಯುವರು.

ಇಲ್ಲಿ ವಿಶೇಷವೇನೆಂದರೆ, ಅವಿದ್ಯೆಯ ಕಾರ್ಯವು ಎರಡು ಬಗೆಯಾಗಿರುವುದು. ಒಂದು ದೃಶ್ಯವನ್ನು ಪ್ರಕಾಶಪಡಿಸುವುದು. ಮತ್ತೊಂದು ಪ್ರಕಾಶಪಡಿಸಿದ ದೃಶ್ಯದಲ್ಲಿ ವಸ್ತುತ್ವಾಭಿಮಾನವನ್ನು ಹುಟ್ಟಿಸುವುದು. ಜೀವನಿಗೆ ಯಾವ ಶರೀರದಲ್ಲಿ ಆ ಶರೀರವು ಬರುವುದಕ್ಕೆ ಕಾರಣವಾದ ಕರ್ಮದ ಕೊನೆಯಲ್ಲಿ ಜ್ಞಾನವುಂಟಾಗುವುದೋ ಆ ಜ್ಞಾನವು ಆ ಜೀವನಿಗಿರುವ ದೇಹಾಭಾಸ ಜಗದವಭಾಸರೂಪವಾದ ಅಜ್ಞಾನಗಳೆರಡನ್ನೂ ನಾಶಮಾಡಿಬಿಡುವುದು. ಆದರೆ ದೇಹವು ಬರುವುದಕ್ಕೆ ಕಾರಣವಾದ ಕರ್ಮಫಲವಿನ್ನೂ ಉಳಿದಿರುವಾಗ ಜ್ಞಾನವುಂಟಾದರೆ ಆ ಕರ್ಮಫಲಾನುಭವರೂಪವಾದ ತಡೆಯುಂಟಾಗಿದ್ದರೂ ಜೀವನಿಗೆ ದೃಶ್ಯಸಂಬಂಧವಾದ ವಸ್ತುತ್ವಾಭಿಮಾನವನ್ನು ಮಾತ್ರ ನಾಶಮಾಡುವುದು. ಸ್ವರೂಪಾವಭಾಸವನ್ನೂ ನಾಶಮಾಡುವುದಿಲ್ಲ. ಇದನ್ನೇ ಜೀವನ್ಮುಕ್ತಿಯೆಂದು ಹೇಳುವರು. ಅಲ್ಲದೆ ಮಾಯಾವಸ್ಥೆಯು ಮೂರು ಬಗೆಯಾಗಿರುವುದು. ದೃಶ್ಯವು ನಿಜವಾದುದು ಎಂಬ ಅಭಿಮಾನವನ್ನಿಟ್ಟುಕೊಂಡಿರುವುದು ಮೊದಲನೆಯದು. ಇದು ಯುಕ್ತಿಶಾಸ್ತ್ರಜ್ಞಾನದಿಂದುಂಟಾದ ವಿವೇಕರೂಪವಾದ ಜ್ಞಾನದಿಂದ ತೊಲಗುವುದು. ಇದು ಹೋದರೂ ಮೊದಲಿನಂತೆಯೇ ಅತ್ಯಾಸಕ್ತಿಯಿಂದ ವ್ಯವಹಾರಗಳನ್ನು ನಡೆಸಿಕೊಂಡು ಬರುತ್ತಿರುವುದಕ್ಕೆ ಕಾರಣವಾದ ಅವಸ್ಥೆಯು ಎರಡನೆಯದು ಇರುವುದು. ಇದು ತತ್ವಸಾಕ್ಷಾತ್ಕಾರದಿಂದ ತೊಲಗುವುದು. ಇದು ಹೋದರೂ ದೇಹಾಭಾಸ ಜಗದವಭಾಸಗಳಿಗೆ ಕಾರಣವಾದ ಅವಸ್ಥೆಯು ಮೂರನೆಯದು ಇರುವುದು. ಇದು ಪ್ರಾರಬ್ಧಕರ್ಮಫಲವು ತೀರುವವರೆಗೂ ಇದ್ದು ಕೊನೆಯಲ್ಲಿ ತೊಲಗುವುದು. ॥೫೪॥

ಮಹಾತ್ಮನಾದ ವಿಷ್ಣುವೇ, ಅಜ್ಞಾನವು ನಾಶವಾಗಿ ಅಭಿವ್ಯಕ್ತವಾದ ಸ್ವತಸ್ಸಿದ್ಧವಾದ ಆತ್ಮಸ್ವರೂಪವುಳ್ಳ ಜೀವನ್ಮುಕ್ತನನ್ನು ದಗ್ಧಪಟನ್ಯಾಯದಂತೆ ಬದ್ಧನೆಂದು

ಪ್ರಪಂಚಸ್ಯ ಪ್ರತೀಕತ್ವಾತ್ ಜೀವನಂ ಪುರುಷೋತ್ತಮ ।
ಫಲೋಪಭೋಗಾತ್ಪ್ರಾರಬ್ಧ ಕರ್ಮಣಃ ಸಂಕ್ಷಯೇ ಹರೇ ॥೫೬॥

ಪ್ರತಿಭಾಸೋ ನಿವರ್ತೇತ ಪ್ರಪಂಚಸ್ಯ ನ ಸಂಶಯಃ ।
ಯಸ್ಯ ದೃಶ್ಯ ಪ್ರಪಂಚಸ್ಯ ಪ್ರತಿಭಾಸೋಽಪಿ ಕೇಶವ ॥೫೭॥

ನಿವೃತ್ತಃ ಸ್ವಪ್ನವತ್ ಸೋಽಯಂ ಮುಕ್ತ ಏವ ನ ಸಂಶಯಃ ।
ಭೂತಪೂರ್ವಾನುಸಂಧಾನಾನ್ಮುಕ್ತ ಇತ್ಯುಚ್ಯತೇ ಮಯಾ ॥೫೮॥

ಸ ನ ಮುಕ್ತೋ ನ ಬದ್ಧಶ್ಚ ನ ಮುಮುಕ್ಷುಃ ನ ಚಾಪರಃ ।
ಯ ಏವ ಮಾತ್ಮನಾಽಽತ್ಮಾನಂ ಸುದೃಢಂ ವೇದ ಕೇಶವ ॥೫೯॥
ಸ ಏವ ಪರಮಜ್ಞಾನೀ ನೇತರೋ ಮಾಯಯಾಽಽವೃತಃ ।

ಹೇಳುವರು. ಸುಟ್ಟುಹೋದ ವಸ್ತ್ರವು ವಸ್ತ್ರಾಕಾರದಿಂದ ಇದ್ದರೂ ಹೊದೆಯುವ ಕಾರ್ಯಕ್ಕೆ ಬರಲಾರದು. ಹಾಗೆಯೇ ಜೀವನ್ಮುಕ್ತನು ಲೋಕವ್ಯವಹಾರವನ್ನು ಮೊದಲಿನಂತೆ ನಡೆಸುತ್ತಿದ್ದರೂ ಜ್ಞಾನಾಗ್ನಿಯಿಂದ ಸಮಸ್ತಪ್ರಪಂಚವನ್ನೂ ದಹಿಸಿರುವುದರಿಂದ ತಾನು, ತನ್ನದು ಎಂಬ ಅಭಿನಿವೇಶವಿಲ್ಲದವನಾಗಿ ಮುಕ್ತನಾಗಿರುವನು.॥೫೫॥

ಪುರುಷಶ್ರೇಷ್ಠನಾದ ವಿಷ್ಣುವೇ, ಜೀವನ್ಮುಕ್ತನಿಗೆ ಪ್ರಪಂಚ ಪ್ರತಿಭಾಸವು ಜ್ಞಾನದಿಂದ ನಿವೃತ್ತಿಯಾದರೂ ಪ್ರಾರಬ್ಧಕರ್ಮಫಲಾನುಭವಪರ್ಯಂತವಾಗಿ ಪ್ರಪಂಚ ಪ್ರತೀತಿಯೂ, ಜೀವನವೂ ಇದ್ದೇ ಇರುವುದು. ॥೫೬॥

ಯಾರಿಗೆ ದೃಶ್ಯಪ್ರಪಂಚದ ಪ್ರತಿಭಾಸವೂ ಕೂಡ ಸ್ವಪ್ನದಂತೆ ನಾಶವಾಗಿ ಹೋಗುವುದೋ ಅಂತಹವನು ಮುಕ್ತನೆಂಬುವುದರಲ್ಲಿ ಸಂದೇಹವೇ ಇರುವುದಿಲ್ಲ. ॥೫೭॥

ಬಂಧವೆಂಬುದು ವಸ್ತುಸ್ವರೂಪವಲ್ಲವಾದುದರಿಂದ ಅದೇ ಇಲ್ಲದಿರುವಾಗ ಅದರ ನಿವೃತ್ತಿಯು ತಾನೇ ಎಲ್ಲಿರುವುದು ? ಆ ಬಂಧನಿವೃತ್ತಿಯೇ ಮುಕ್ತಿಯೆಂದು ಹೇಗೆ ಹೇಳುವುದು? ಎಂದರೆ ಬಂಧವು ವಸ್ತುತಃ ಇಲ್ಲದಿದ್ದರೂ ಅವಿದ್ಯಾಸಂಬಂಧವಾಗಿ ಅದರ ಸತ್ವವನ್ನೊಪ್ಪಿಕೊಂಡು, ಜ್ಞಾನದಿಂದ ಅದರ ನಿವೃತ್ತಿಯನ್ನು ಹೇಳಿರುವುದು. ಇದೂ ಕೂಡ ಅವಿದ್ಯೆಯೇ. ಇದೇ ಅಧ್ಯಾರೋಪ, ಅಪವಾದ, ನ್ಯಾಯವು. ॥೫೮॥

ವಸ್ತುಸ್ವಭಾವದಲ್ಲಿ ಮುಕ್ತನೂ ಇಲ್ಲ, ಬದ್ಧನೂ ಇಲ್ಲ, ಮುಮುಕ್ಷುವೂ ಇಲ್ಲ. ಗೌಡಪಾದಾಚಾರ್ಯರು ಹೇಳಿರುವಂತೆ " ನನಿರೋಧೋ ನಚೋತ್ಪತ್ತಿರ್ನಬದ್ಧೋ ನಚ

ಏವಂ ಜಾನಾಮಿ ಸುದೃಢ ಮಿತಿ ಯೋ ವೇತ್ತಿ ಕೇಶವ ॥೬೦॥

ಸ ಮೂಢಏವ ಸಂದೇಹೋ ನಾಸ್ತಿ ವಿಜ್ಞಾನಪಂಚಕಃ ।
ಮುಕ್ತಿಸ್ವಭಾವೋ ವೇದಾಂತೈರ್ಮಯಾ ಚ ಪರಿಭಾಷಿತಂ ॥೬೧॥

ಅಶಕ್ಯಃ ಸ್ವಾನುಭೂತ್ಯಾ ಚ ಮೌನಮೇವಾತ್ರ ಯುಜ್ಯತೇ ।
ಮುಕ್ತಿರುಕ್ತಾ ಮಯಾ ವಿಷ್ಣೋ ಮಹತ್ಯಾ ಶ್ರದ್ಧಯಾ ತವ ॥೬೨॥

ತ್ವಮಪಿ ಶ್ರದ್ಧಯಾ ವಿದ್ಧಿ ಶ್ರೇಯಸೇ ಭೂಯಸೇ ಸದಾ ।

॥ ಸೂತ ಉವಾಚ ॥

ಏವಂ ನಿಶಮ್ಯ ಭಗವಾನ್ ವಿಷ್ಣುಃ ವೇದಾರ್ಥಂ ಉತ್ತಮಂ ॥೬೩॥

ಸಾಧಕಃ । ನ ಮುಮುಕ್ಷುರ್ನವೈಮುಕ್ತ ಇತ್ಯೇಷಾ ಪರಮಾರ್ಥತಾ ॥ ” ಎಂಬ ವಚನದಿಂದ ಎಲ್ಲವನ್ನೂ ಅವಿದ್ಯೆ ಎಂಬುದಾಗಿ ತಿಳಿದು, ತನ್ನ ಮನಸ್ಸಿನಲ್ಲಿಯೇ ಆತ್ಮಸ್ವರೂಪವನ್ನು ದೃಢವಾಗಿ ತಿಳಿವನೋ ಅವನೇ ಶ್ರೇಷ್ಠವಾದ ಜ್ಞಾನಿಯು. ಮಾಯಾಪರಣದಿಂದ ಕೂಡಿದವನು ಜ್ಞಾನಿಯಾಗಲಾರನು. ಗೌ. ಕಾರಿಕಾ. ವೈ. ೩೨. ॥೫೯॥

ಎಲೈ ವಿಷ್ಣುವೇ, ಆತ್ಮಸ್ವರೂಪವನ್ನು ತಿಳಿಯದೇ, ನಾನು ಆತ್ಮಸ್ವರೂಪವನ್ನು ದೃಢವಾಗಿ ತಿಳಿದುಕೊಂಡಿರುವೆನೆಂದು ಯಾವನು ಭಾವಿಸಿರುವನೋ ಅವನು ಮೂಢನಾಗಿಯೂ, ತನಗೆತಾನೇ ವಂಚಕನಾಗಿಯೂ ಇರುವನು. ಈ ವಿಷಯದಲ್ಲಿ ಸಂದೇಹವಿರುವುದಿಲ್ಲ. ॥೬೦॥

ಮುಕ್ತಿಯೆಂಬುದು ಆತ್ಮಸ್ವರೂಪವಾದುದರಿಂದಲೂ, ಅದು ವಾಕ್ಕಿಗೂ, ಮನಸ್ಸಿಗೂ, ಗೋಚರವಾಗುವುದಿಲ್ಲವಾದುದರಿಂದಲೂ, ವೇದಾಂತವಾಕ್ಯಗಳಿಂದಲೂ, ನನ್ನಿಂದಲೂ, ಹೇಳಿ ತಿಳಿಸಲು ಸಾಧ್ಯವಾದುದಲ್ಲ ಸ್ವಾನುಭವದಿಂದಲೇ ತಿಳಿಯತಕ್ಕುದಾದುದರಿಂದ ಮೌನವೇ ಈ ಸಂದರ್ಭದಲ್ಲಿ ಉಚಿತವಾಗಿರುವುದು. “ ಅವಚನೇನೈವ ಪ್ರೋವಾಚ ” ಎಂದು ವೇದವು ಹೇಳುವುದು. ॥೬೧॥

ಎಲೈ ವಿಷ್ಣುವೇ, ಅತ್ಯಂತಾಸಕ್ತಿಯಿಂದ ನಿನಗೆ ಮುಕ್ತಿಸ್ವರೂಪವನ್ನು ವಿವರಿಸಿರುವೆನು. ಇದು ನಿನ್ನ ಶ್ರೇಯಸ್ಸಿಗೂ, ಮಹತ್ವಕ್ಕೂ ಕಾರಣವಾದುದೆಂದು ಅತ್ಯಂತಾಸಕ್ತಿಯಿಂದ ನೀನು ತಿಳಿದುಕೊಳ್ಳಬೇಕು. ॥೬೨॥

ಮಹಾಮಹಿಮನಾದ ವಿಷ್ಣುವು, ಶಿವನು ಹೇಳಿದ ಉತ್ತಮವಾದ ವೇದಾರ್ಥಗಳನ್ನು ಕೇಳಿ, ಸರ್ವಜ್ಞನೂ, ಸರ್ವಪ್ರಾಣಿಗಳಿಗೆ ಒಡೆಯನೂ, ಸಮಸ್ತ ಭೂತ

ಸರ್ವಜ್ಞಂ ಸರ್ವಭೂತೇಶಂ ಸರ್ವಭೂತಪ್ರಿಯೇ ರತಂ ।
ಪ್ರದಕ್ಷಿಣತ್ರಯಂ ಕೃತ್ವಾ ಭವಾನೀ ಸಹಿತಂ ಹರಂ ॥೬೪॥

ಪ್ರಣಮ್ಯ ದಂಡವತ್ ಭಕ್ತ್ಯಾ ಭವಂ ಭವಹರಂ ಶಿವಂ ।
ಸ್ತೋತ್ರೈಃ ಸ್ತುತ್ವಾ ಮಹಾದೇವಂ ಪೂಜಯಾಮಾಸ ಸುವ್ರತಾಃ ॥೬೫॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಮುಕ್ತಿಖಂಡೇ
ಮುಕ್ತಿಭೇದಕಥನಂ ನಾಮ ದ್ವಿತೀಯೋಽಧ್ಯಾಯಃ

ಗಳಿಗೂ ಹಿತವನ್ನುಂಟುಮಾಡುವುದರಲ್ಲಿ ಆಸಕ್ತನೂ ಆದ ದೇವೀಸಹಿತನಾದ ಶಿವನಿಗೆ ಮೂರು ಪ್ರದಕ್ಷಿಣೆಯನ್ನು ಮಾಡಿ, ಭೂಮಿಯ ಮೇಲೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಅನೇಕ ಸ್ತೋತ್ರಗಳಿಂದ ಸ್ತುತಿಸಿ ಪೂಜೆಯನ್ನು ಮಾಡಿದನು. ಎಂದು ಸೂತನು ಮುನಿಗಳಿಗೆ ಹೇಳಿದನು. ॥೬೩-೬೪-೬೫॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಮುಕ್ತಿಖಂಡದಲ್ಲಿ
ಮೋಕ್ಷದ ಸ್ವರೂಪವನ್ನು ವಿವರಿಸಿರುವ ಎರಡನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ

ಸೂತಸಂಹಿತಾ

ಮುಕ್ತಿಖಂಡಂ

|| ದ್ವಿತೀಯೋಽಧ್ಯಾಯಃ ||

ಎರಡನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಮುಕ್ತ್ಯುಪಾಯಂ ಸಮಾಸತಃ ।
ಶ್ರದ್ಧಯಾ ಸಹ ಭಕ್ತ್ಯಾ ಚ ವಿದ್ಧಿ ಪಂಕಜಲೋಚನ ||೧||

ಆತ್ಮನಃ ಪರಮಾ ಮುಕ್ತಿಃ ಜ್ಞಾನಾದೇವ ನ ಕರ್ಮಣಾ ।
ಜ್ಞಾನಂ ವೇದಾಂತವಾಕ್ಯಾನಾಂ ಮಹಾತಾತ್ಪರ್ಯನಿರ್ಣಯಾತ್ ||೨||

ಹಿಂದಿನ ಅಧ್ಯಾಯದಲ್ಲಿ ಈಶ್ವರನು ಮುಕ್ತಿಸ್ವರೂಪವನ್ನು ಹೇಳಿ, ಈ ಅಧ್ಯಾಯದಲ್ಲಿ ವಿಷ್ಣುವನ್ನು ಕುರಿತು, ಎಲೈ ಕಮಲಾಕ್ಷನಾದ ವಿಷ್ಣುವೇ ಮುಕ್ತಿಗೆ ಉಪಾಯವನ್ನು ಸಂಗ್ರಹವಾಗಿ ಹೇಳುವೆನು. ಆಸಕ್ತಿಯಿಂದಲೂ, ಭಕ್ತಿಯಿಂದಲೂ, ಇದನ್ನು ತಿಳಿದುಕೊಳ್ಳಬೇಕು ||೧||

ಜೀವಾತ್ಮನಿಗೆ ಶ್ರೇಷ್ಠವಾದ ಮುಕ್ತಿಯು ದೊರೆಯಬೇಕಾದರೆ ಜ್ಞಾನದಿಂದಲೇ ಉಂಟಾಗುವುದು. ಕರ್ಮಗಳಿಂದ ಸಾಕ್ಷಾತ್ತಾಗಿ ಉಂಟಾಗಲಾರದು. ಆ ಜ್ಞಾನವು ವೇದಾಂತವಾಕ್ಯಗಳ ಮಹಾತಾತ್ಪರ್ಯನಿರ್ಣಯದಿಂದುಂಟಾಗುವುದು. ತತ್ ಮತ್ತು ತ್ವಂ ಪದಾರ್ಥಗಳಲ್ಲಿ ಪ್ರತಿಯೊಂದರ ಸ್ವರೂಪವನ್ನೂ "ಸತ್ಯಂ ಜ್ಞಾನಮನಂತಂ ಬ್ರಹ್ಮ" ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ ಪುರುಷಃ" ಇತ್ಯಾದಿ ಅವಾಂತರವಾಕ್ಯಗಳ, ಅವಾಂತರ ತಾತ್ಪರ್ಯಗಳನ್ನೂ, ವೇದಾಂತ ಮೀಮಾಂಸಾನ್ಯಾಯ ಸಂದರ್ಭಗಳಿಂದ ನಿರ್ಣಯಿಸಿ, ತತ್ ತ್ವಂ ಪದಾರ್ಥಗಳನ್ನು

ಉತ್ಪನ್ನಾಯಾಂ ಮನೋವೃತ್ತೌ ಮಹತ್ಯಾಂ ಅಂಬುಜೇಕ್ಷಣ ।
ಅಭಿವ್ಯಕ್ತಂ ಭವೇದೇತತ್ ಬ್ರಹ್ಮೈವ ಆತ್ಮವಿಚಾರತಃ ॥೩॥

ಅನೇನೈವ ಆತ್ಮನೋಽಜ್ಞಾನಮಾತ್ಮನ್ಯೇವ ವಿಲೀಯತೇ ।
ವಿಲೀನೇ ಸ್ವಾತ್ಮನೋಽಜ್ಞಾನೇ ದ್ವೈತಂ ವಸ್ತುವಿನಶ್ಯತಿ ॥೪॥

ದ್ವೈತವಸ್ತು ವಿನಾಶೇ ಚ ಶೋಭನಾಽಶೋಭನಾ ಮತಿಃ ।
ಕ್ಷೀಯತೇ ಮತಿನಾಶೇನ ರಾಗದ್ವೇಷೌ ವಿನಶ್ಯತಃ ॥೫॥

ತಯೋರ್ನಾಶೇ ಮಹಾವಿಷ್ಣೋ ಧರ್ಮಾಧರ್ಮೌ ವಿನಶ್ಯತಃ ।
ಧರ್ಮಾಧರ್ಮಕ್ಷಯಾದ್ದೇಹೋ ವಿಷಯಾಣೀಂದ್ರಿಯಾಣಿಚ ॥೬॥
ನಶ್ಯಂತ್ಯೇವ ನ ಸಂದೇಹೋ ಜ್ಞಾತ್ವಾ ದೇವ ಮಿತಿಶ್ರುತಿಃ ।

ಶೋಧಿಸಿ ಅಖಂಡೈಕರಸರೂಪನಾದ ಆತ್ಮನಲ್ಲಿ ತತ್ವಮಸ್ಯಾದಿ ವಾಕ್ಯಗಳ ತಾತ್ಪರ್ಯಗಳನ್ನು ನಿರ್ಣಯಿಸುವುದೇ ಮಹಾತಾತ್ಪರ್ಯ ನಿರ್ಣಯವೆನಿಸುವುದು. ॥೨॥

ಎಲೈ ಕಮಲಾಕ್ಷನೇ, ಅಖಂಡೈಕರಸರೂಪವೇ ಪರಮಪುರುಷಾರ್ಥವಾದುದದರಿಂದ ವೇದಾಂತವಿಚಾರದಿಂದ ದೊಡ್ಡದಾದ ಈ ಮನೋವೃತ್ತಿಯು ,ಉಂಟಾಗುಗುತ್ತಿರಲಾಗಿ ಈ ಬ್ರಹ್ಮಾತ್ಮಭಾವವು ವ್ಯಕ್ತವಾಗುವುದು. ॥೩॥

ಈ ಬ್ರಹ್ಮಾತ್ಮರೂಪವಾದ ವೃತ್ತಿಯಿಂದ ಆತ್ಮನಲ್ಲಿ ಅಧ್ಯಸ್ತವಾದ ಮಾಯಾ ಮತ್ತು ಮಾಯಾಕಾರ್ಯರೂಪವಾದ ಅಜ್ಞಾನವು ಆತ್ಮನಲ್ಲಿಯೇ ವಿಲೀನವಾಗುವುದು. ಆತ್ಮಸಂಬಂಧವಾದ ಅಜ್ಞಾನವು ವಿಲೀನವಾಗುತ್ತಲು ಬ್ರಹ್ಮಾತ್ಮೈಕ್ಯಜ್ಞಾನದಿಂದ ದ್ವೈತಭ್ರಾಂತಿಯು ನಾಶವಾಗುತ್ತದೆ. "ಯಃ ಸರ್ವಜ್ಞಃ ಸರ್ವವಿತ್" ಎಂದು ವೇದದಲ್ಲಿ ಹೇಳಿರುವ ವಾಕ್ಯದಿಂದ ಬ್ರಹ್ಮವಸ್ತುವು ಆತ್ಮನಲ್ಲಿಯೇ ಅಧ್ಯಸ್ತವಾದ ಮಾಯಾ ಮತ್ತು ಮಾಯಾಕಾರ್ಯಗಳನ್ನು ನಾಶಮಾಡುವುದೆಂದೂ ಅರ್ಥವಾಗುವುದು. ಒಂದೇ ವಸ್ತುವು ಅವಸ್ಥಾಭೇದದಿಂದ ಪ್ರಕಟಕವಾಗಿಯೂ, ನಿವರ್ತಕವಾಗಿಯೂ, ಇರುವುದಕ್ಕೆ ಸೂರ್ಯಕಿರಣವೇ ದೃಷ್ಟಾಂತವು. ಸೂರ್ಯಕಿರಣವು ಹತ್ತಿ, ಹುಲ್ಲುಗಳು ಇವುಗಳನ್ನು ಪ್ರಕಾಶಪಡಿಸುವುದು. ಅದೇ ಕಿರಣವು ಸೂರ್ಯಕಾಂತ ಶಿಲೆಯ ಸಂಬಂಧದಿಂದ ಹತ್ತಿ ಮುಂತಾದುವನ್ನು ಸುಟ್ಟುಬಿಡುವುದು. ॥೪॥

ದ್ವೈತಭ್ರಾಂತಿಯು ನಾಶವಾದರೆ ಪುಣ್ಯಪಾಪಸುಖದುಃಖಗಳ ಬುದ್ಧಿಯು ನಾಶವಾಗುವುದು. ರಾಗದ್ವೇಷಗಳಿಲ್ಲದ ಮೇಲೆ ಧರ್ಮಾಧರ್ಮಗಳು ನಾಶವಾಗುವುವು. ಇವುಗಳು ನಾಶವಾದರೆ ದೇಹವೂ, ವಿಷಯಗಳೂ, ಇಂದ್ರಿಯಗಳೂ, ಎಲ್ಲವೂ

ಘಟಜ್ಞಾನಾದ್ಘಟಾಜ್ಞಾನಂ ಯಥಾಲೋಕೇಽಪಿ ನಶ್ಯತಿ ॥೭॥

ತಥಾತ್ಮಜ್ಞಾನಮಾತ್ರೇಣ ನಶ್ಯತ್ಯಜ್ಞಾನಮಾತ್ಮನಃ ।
ರಜ್ಜ್ವಜ್ಞಾನ ವಿನಾಶೇನ ರಜ್ಜುಸರ್ಪೋ ವಿನಶ್ಯತಿ ॥೮॥

ತಥಾಽಽತ್ಮಾಜ್ಞಾನನಾಶೇನ ಸಂಸಾರಶ್ಚ ವಿನಶ್ಯತಿ ।
ತಸ್ಮಾದಜ್ಞಾನಮೂಲಸ್ಯ ಸಂಸಾರಸ್ಯ ಕ್ಷಯೋ ಹರೇ ॥೯॥

ಆತ್ಮನಸ್ತತ್ವವಿಜ್ಞಾನಾತ್ ತತ್ತ್ವಂ ಬ್ರಹ್ಮೈವ ಕೇವಲಂ ।
ಯಥಾ ಸರ್ಪೇದಮಂಶಸ್ಯ ತತ್ತ್ವಂ ದಂಡಾದಿ ಕೇವಲಂ ॥೧೦॥
ಅಸ್ಯ ಸಂಸಾರಿಣಸ್ತತ್ವಂ ತಥಾ ಬ್ರಹ್ಮೈವ ಕೇವಲಂ ।

ನಾಶವಾಗುವುವು. ಈ ವಿಷಯವನ್ನು "ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ" ಎಂದು ಶ್ವೇತಾಶ್ವತರೋಪನಿಷತ್ತಿನಲ್ಲಿ ಹೇಳಿರುವುದು. ॥೫-೬॥

ಈ ವಿಷಯದಲ್ಲಿ ದೃಷ್ಟಾಂತವೇನೆಂದರೆ, ಲೋಕವ್ಯವಹಾರದಲ್ಲಿ ಘಟಜ್ಞಾನದಿಂದ ಘಟದ ಅಜ್ಞಾನವು ಹೇಗೆ ನಾಶವಾಗುವುದೋ ಹಾಗೆ ಆತ್ಮಜ್ಞಾನಮಾತ್ರದಿಂದ ಆತ್ಮನ ಅಜ್ಞಾನವು ನಾಶವಾಗುವುದು. ॥೭॥

ಹಗ್ಗವನ್ನು ಹಾವೆಂದು ತಿಳಿದ ಭ್ರಾಂತಿರೂಪವಾದ ಅಜ್ಞಾನವು ಹಗ್ಗದ ಜ್ಞಾನದಿಂದ ಹೇಗೆ ನಾಶವಾಗುವುದೋ ಹಾಗೆ ಆತ್ಮಸಂಬಂಧವಾದ ಅಜ್ಞಾನವು ನಾಶವಾದರೆ, ಆ ಅಜ್ಞಾನದಿಂದುಂಟಾದ ಸಂಸಾರವೂ ನಾಶವಾಗುವುದು. ॥೮॥

ಆತ್ಮತತ್ವಜ್ಞಾನದಿಂದ ಅಜ್ಞಾನವೇ ಕಾರಣವಾಗಿದ್ದ ಸಂಸಾರದ ನಾಶವಾಗುವುದು. ತತ್ವವೆಂಬುದು ಅಖಂಡೈಕರಸವಾದ ಪರಬ್ರಹ್ಮವಸ್ತುವೇ ಆಗಿರುವುದು. ಒಂದು ದಂಡವನ್ನು ನೋಡಿ ಸರ್ಪವೆಂಬ ಭ್ರಮೆಯುಂಟಾಗುವುದಕ್ಕೆ ದಂಡದ ಉದ್ದ, ಗಾತ್ರ ಮುಂತಾದುವು ಸಾಧಾರಣ ಕಾರಣವು. ಈ ಭ್ರಮೆಯು ಇದಂ ಎಂಬ ಅಂಶದಲ್ಲಿರುವ ದಂಡತ್ವವೆಂಬ ನಿಜವಾದ ರೂಪವನ್ನು ಮರೆಮಾಡಿಕೊಂಡು ಉತ್ಪತ್ತಿಯಾಗುವುದು. ದಂಡತ್ವದ ನಿಜಸ್ವರೂಪಜ್ಞಾನವಾದರೆ ಮೊದಲಿದ್ದ ಅಜ್ಞಾನವು ತೊಲಗಿ ಭ್ರಾಂತಿಯ ನಿವಾರಣೆಯಾಗುವುದು. ಇದರಂತೆ ಆತ್ಮತತ್ವದಲ್ಲಿ ನಾನು, ಜೀವನು, ಸಂಸಾರಿಯು ಎಂಬ ಭ್ರಮೆಯು ಆತ್ಮತತ್ವದ ಅಜ್ಞಾನದಿಂದ ಬಂದಿರುವುದು. ಆತ್ಮತತ್ವದ ಜ್ಞಾನವುಂಟಾದರೆ ಅಜ್ಞಾನವು ತೊಲಗಿ ಸಂಸಾರಭ್ರಾಂತಿಯು ನಾಶವಾಗುವುದು. ॥೯-೧೦॥

ಅಜ್ಞಾನಮೂಲಂ ಕರ್ತ್ರಾದಿಕಾರಕಜ್ಞಾನ ನಿರ್ಮಿತಂ ॥೧೧॥

ಅಜ್ಞಾನಬಾಧಕಂ ಕರ್ಮ ನ ಭವೇದಂಬುಜೇಕ್ಷಣ ।
ಕರ್ಮಣಾ ಪರಮಾ ಮುಕ್ತಿರ್ಯದಿ ಸಿಧ್ಯತಿ ಕೇಶವ ॥೧೨॥

ಸಾ ವಿನಶ್ಯತ್ಯಸಂದೇಹಃ ಸ್ವರ್ಗಲೋಕೋ ಯಥಾ ತಥಾ ।
ತಸ್ಮಾನ್ನಕರ್ಮಣಾ ಮುಕ್ತಿಃ ಕಲ್ಪಕೋಟಿಶತೈರಪಿ ॥೧೩॥
ಕರ್ಮಣ್ಯೈವಾ ಪರಾ ಮುಕ್ತಿರ್ನ ಜ್ಞಾನಾದೇವ ಕೇವಲಾತ್ ।

ಕರ್ತೃ ಮುಂತಾದ ಕಾರಕಜ್ಞಾನಗಳೆಲ್ಲವೂ ಅಜ್ಞಾನದಿಂದಲೇ ಹುಟ್ಟಿದವುಗಳು. ಆದುದರಿಂದ ಕರ್ಮಗಳಿಂದ ಅಜ್ಞಾನವು ಎಂದಿಗೂ ನಾಶವಾಗುವುದಿಲ್ಲ. ॥೧೧॥

ಎಲೈ ವಿಷ್ಣುವೇ, ಕರ್ಮಗಳಿಂದಲೇ ಮುಕ್ತಿಯು ದೊರೆಯುವುದಾದರೆ ಆ ಮುಕ್ತಿಯು ಸ್ವರ್ಗಾದಿ ಫಲಗಳಂತೆ ನಾಶವಾಗುವುದರಲ್ಲಿ ಸಂದೇಹವಿಲ್ಲವು. "ಕರ್ಮಣ್ಯೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ" ಎಂಬ ಸ್ಥಳದಲ್ಲಿ ಸಂಸಿದ್ಧಿ ಎಂಬ ಪದಕ್ಕೆ ಜ್ಞಾನಕ್ಕೆ ಪ್ರತಿಬಂಧಕವಾದ ಪಾಪನಿವಾರಣೆಯಿಂದ ಜ್ಞಾನಸಿದ್ಧಿಯೆಂದು ಅರ್ಥಮಾಡಬೇಕು. ಅದುದರಿಂದ ನೂರುಕೋಟಿ ಕಲ್ಪದವರೆಗೆ ಕರ್ಮಗಳನ್ನು ಮಾಡಿದರೂ ಅದರಿಂದ ಮುಕ್ತಿಯು ದೊರೆಯುವುದಿಲ್ಲ. ಹಾಗಾದರೆ ಕರ್ಮವಿಧಾನವು ವ್ಯರ್ಥವಾಗುವುದಲ್ಲವೇ? ಎಂದರೆ ಕರ್ಮವು ವಿಚಿತ್ರವಾದುದು. ಇದು ಮುಕ್ತಿಗೆ ಸಾಕ್ಷಾತ್ತಾಗಿ ಕಾರಣವಲ್ಲದಿದ್ದರೂ ಜ್ಞಾನೋತ್ಪತ್ತಿಯ ಮೂಲಕವಾಗಿ ಪರಮಮುಕ್ತಿಗೆ ಕಾರಣವಾಗಿರುವುದು. ಕೆಲವು ಕರ್ಮಗಳು ಪರಿಪಕ್ವವಾದ ಜ್ಞಾನದೊಂದಿಗೆ ಅಪರಮುಕ್ತಿಗೆ ಕಾರಣವಾಗಿರುವುವು. ಕೆಲವು ಕರ್ಮಗಳು ಸುಖಾನುಭವ ಸಾಧನಗಳಾಗಿರುವುವು. ಕರ್ಮ ಮತ್ತು ಉಪಾಸನೆಗಳಿಂದ ಅಪರಿಪಕ್ವವಾದ ಜ್ಞಾನದ ದೆಸೆಯಲ್ಲಿ ಕರ್ಮಾದಿಗಳನ್ನು ಬಿಡುವುದರಿಂದುಂಟಾಗುವ ಪ್ರತ್ಯವಾಯದ ದೆಸೆಯಿಂದ ಪರಿಪಕ್ವವಾದ ಆತ್ಮಜ್ಞಾನಕ್ಕೆ ತಡೆಯುಂಟಾಗುವುದು. ಪರಿಪಕ್ವವಾದ ಆತ್ಮಜ್ಞಾನವಾದರೋ ಅನಾದಿಯಾದ ಜನ್ಮಪರಂಪರೆಯಿಂದ ಸಂಪಾದಿಸಿದ ಸಂಚಿತಕರ್ಮವನ್ನೂ ನಾಶಮಾಡಬಲ್ಲದು ಎಂಬ ವಿಷಯದಲ್ಲಿ "ಏತಂ ಹವಾವನತಪತಿ । ಕಿಮಹಂ ಸಾಧುನಾಕರವಂ । ಕಿಮಹಂ ಪಾಪಮ ಕರವಮಿತಿ । ಸಯ ಏವಂ ವಿದ್ವಾನೇತೇ ಆತ್ಮಾನಂ ಸ್ಪೃಣುತೇ ।" ಎಂದು ವೇದ ತೈ. ಉ. ಅ. ೯. ದಲ್ಲಿಯೂ, "ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇಽರ್ಜುನ । ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹವಿದ್ಯತೇ ।" ಎಂದು ಗೀತೆ ೪-೩೭-೮. ಯಲ್ಲಿಯೂ ಹೇಳಿರುವುದು. ॥೧೨-೧೩॥

ತತ್ರ ಕರ್ಮ ದ್ವಿಧಾ ವಿಷ್ಣೋ ವಿಜಾನೀಹಿ ವಿಚಕ್ಷಣ ॥೧೪॥

ಏಕಂ ಕರ್ಮಾಂತರಂ ಬಾಹ್ಯಮಪರಂ ಪಂಕಜೇಕ್ಷಣ ।
ವಾಚಿಕಂ ಕಾಯಿಕಂ ಬಾಹ್ಯಂ ಕರ್ಮ ಮಾನಸ ಮಾಂತರಂ ॥೧೫॥

ತತ್ರ ಸರ್ವಂ ಪರಂ ಬ್ರಹ್ಮ ನ ಚಾನ್ಯದಿತಿ ಯಃ ಪುಮಾನ್ ।
ಉಪಾಸ್ತೇ ಶ್ರದ್ಧಯಾ ನಿತ್ಯಂ ಸ ಸಮ್ಯಜ್ಞಾನಮಾಪ್ನುಯಾತ್ ॥೧೬॥

ಯಃ ಪುಮಾನ್ ದೇವದೇವೇಶಂ ತ್ರಿನೇತ್ರಂ ಚಂದ್ರಶೇಖರಂ ।
ಉಮಾರ್ಧವಿಗ್ರಹಂ ಶುದ್ಧಂ ನೀಲಗ್ರೀವಂ ಮಹೇಶ್ವರಂ ॥೧೭॥

ಬ್ರಹ್ಮ ವಿಷ್ಣು ಮಹಾದೇವೈಃ ಉಪಾಸ್ಯಂ ಗುಣಮೂರ್ತಿಭಿಃ ।
ಉಪಾಸ್ತೇ ತಸ್ಯ ವಿಜ್ಞಾನಂ ಜಾಯತೇ ಪಾರಮೇಶ್ವರಂ ॥೧೮॥

ಅಥವಾ ಚಿತ್ತಕಾಲುಷ್ಯಾಚ್ಛಿವಸಾರೂಪ್ಯಮಚ್ಯುತ ।
ಲಬ್ಧ್ವಾ ಭುಕ್ತ್ವಾ ಮಹಾಭೋಗಾನಂತೇ ವಿಜ್ಞಾನಮೈಶ್ವರಂ ॥೧೯॥

ಬುದ್ಧಿವಂತನಾದ ವಿಷ್ಣುವೇ, ಕರ್ಮವು ಬಾಹ್ಯಕರ್ಮ, ಆಂತರಕರ್ಮ ಎಂದು ಎರಡು ಬಗೆಯಾಗಿರುವುದು. ಮಾತಿನಿಂದಲೂ, ಶರೀರದಿಂದಲೂ ಮಾಡುವ ಕರ್ಮಗಳು ಬಾಹ್ಯಕರ್ಮಗಳೆನಿಸುವುವು. ಮನಸ್ಸಿನಿಂದ ಮಾಡುವ ಕರ್ಮವು ಆಂತರ ಕರ್ಮವೆನಿಸುವುದು. ॥೧೪-೧೫॥

ಮನಸ್ಸಿನಲ್ಲಿ ಸಮಸ್ತವೂ ಪರಬ್ರಹ್ಮಸ್ವರೂಪವಾದುದು. ಬೇರೆ ಯಾವುದೂ ಇರುವುದಿಲ್ಲ. ಎಂದು ಯಾವ ಮನುಜನು ಪ್ರತಿದಿನವೂ ಆಸಕ್ತಿಯಿಂದ ಉಪಾಸನೆ ಮಾಡುವನೋ ಅವನು ಉತ್ತಮವಾದ ಜ್ಞಾನವನ್ನು ಪಡೆಯುವನು. ॥೧೬॥

ಯಾವ ಮನುಷ್ಯನು ದೇವದೇವನೂ, ಮುಕ್ಕಣ್ಣನೂ, ಚಂದ್ರಶೇಖರನೂ, ನೀಲಕಂಠನೂ, ಅರ್ಧಶರೀರದಲ್ಲಿ ಉಮಾದೇವಿಯಿಂದ ಕೂಡಿದವನೂ ಆದ ಬ್ರಹ್ಮ, ವಿಷ್ಣು, ಮಹೇಶ್ವರರು ಪೂಜಿಸುವ ಸಗುಣಮೂರ್ತಿಯಾದ ಶಿವನನ್ನು ಉಪಾಸನೆ ಮಾಡುವನೋ ಅವನಿಗೆ ಪರಮೇಶ್ವರ ಸಂಬಂಧವಾದ ಸಕಲರೂಪಸಾಕ್ಷಾತ್ಕಾರಕ್ರಮದಿಂದ ನಿಷ್ಕಲಪರಬ್ರಹ್ಮಸಾಕ್ಷಾತ್ಕಾರವುಂಟಾಗುವುದು. ॥೧೭-೧೮॥

ಉಪಾಸನೆ ಮಾಡುವಾಗ ಮನಸ್ಸಿನಲ್ಲಿ ರಾಗಾದಿದೋಷಗಳುಂಟಾದರೆ ಶಿವನ ಸಾರೂಪ್ಯವು ಪ್ರಾಪ್ತವಾಗಿ ಅನೇಕ ಸುಖಗಳನ್ನನುಭವಿಸಿ, ಕೊನೆಯಲ್ಲಿ ಪರಮೇಶ್ವ

ಲಬ್ಧ್ವಾತೇನ ಮಹಾವಿಷ್ಣೋ ಪ್ರಾಪ್ನೋತಿ ಪರಮಾಂ ಗತಿಂ ।
ಯಃ ಶಿವಂ ಗುಣಮೂರ್ತೀನಾಂ ಉಪಾಸ್ತೇ ಶ್ರದ್ಧಯಾ ಸಹ ॥೨೦॥

ಸ ಲಬ್ಧ್ವಾ ರುದ್ರಸಾರೂಪ್ಯಂ ಕ್ರಮಾತ್ ಜ್ಞಾನೇನ ಮುಚ್ಯತೇ ।
ಯೋ ರುದ್ರಸ್ಯಾ ಪರಾಂ ಮೂರ್ತಿಂ ಉಪಾಸ್ತೇ ಶ್ರದ್ಧಯಾಸಹ ॥೨೧॥

ಸ ಲಬ್ಧ್ವಾರುದ್ರಸಾರೂಪ್ಯಂ ಭುಕ್ತ್ವಾ ಭೋಗಾನತಿಪ್ರಿಯಾನ್ ।
ಚಿತ್ತಪಾಕಾನುಗುಣ್ಯೇನ ಶಿವಸಾರೂಪ್ಯಮೇವಚ ॥೨೨॥

ಶಿವಸಾಯುಜ್ಯ ಮಾಪ್ನೋತಿ ಶಿವಜ್ಞಾನೇನ ಕೇಶವ ।
ಅತ್ಯಂತಾ ಪರಮಾಂ ಮೂರ್ತಿಂ ಯಃ ಪುಮಾನೀಶ್ವರಸ್ಯ ತು ॥೨೩॥

ಉಪಾಸ್ತೇ ರುದ್ರ ಸಾಲೋಕ್ಯಂ ಸ ಲಬ್ಧ್ವಾ ಪುರುಷೋತ್ತಮ ।
ಭುಕ್ತ್ವಾ ಭೋಗಾನ್ ಕ್ರಮಾತ್ ವಿಷ್ಣೋ ರುದ್ರ ಸಾರೂಪ್ಯಮೇವಚ ॥೨೪॥
ರುದ್ರ ಸಾಮೀಪ್ಯ ಮನ್ಯದ್ವಾ ಸಾಯುಜ್ಯಂ ವಿದ್ಯಯಾಽಽಪ್ನುಯಾತ್ ।

ರನ ಸಂಬಂಧವಾದ ನಿರ್ವಿಕಲ್ಪಜ್ಞಾನವನ್ನು ಹೊಂದಿ ಪರಮಪದವನ್ನು ಹೊಂದು ವನು. ॥೧೯॥

ವಿಷ್ಣುವೇ, ಬ್ರಹ್ಮ, ವಿಷ್ಣು, ರುದ್ರರೆಂಬ ತ್ರಿಮೂರ್ತಿಗಳಲ್ಲಿ, ರುದ್ರನನ್ನು ಆಸಕ್ತಿಯಿಂದ ಉಪಾಸನೆಮಾಡಿದವನು ರುದ್ರಸಾರೂಪ್ಯವನ್ನು ಪಡೆದು ಕ್ರಮವಾಗಿ ಜ್ಞಾನವನ್ನು ಹೊಂದಿ ಮುಕ್ತನಾಗುವನು. ರುದ್ರನ ಅಪರಮೂರ್ತಿಸ್ವರೂಪರಾದ ಬೇರೆ ಬೇರೆ ದೇವತೆಗಳನ್ನು ಉಪಾಸನೆ ಮಾಡಿದವರು ಇದಂಗ್ರಹ, ಅಹಂಗ್ರಹ ಉಪಾಸನಾ ತಾರತಮ್ಯದಿಂದ ಶಿವಸಾರೂಪ್ಯವನ್ನೋ, ಶಿವಸಾಯುಜ್ಯವನ್ನೋ ಪಡೆದು ಸುಖವನ್ನನುಭವಿಸುವರು. ॥೨೦-೨೧-೨೨॥

ಯಾವ ಮನುಷ್ಯನು ಈಶ್ವರನ ಅತ್ಯಂತ ನಿಕೃಷ್ಟವಾದ ಕಲ್ಲು, ಮರ, ಮುಂತಾದುವುಗಳಿಂದ ಕೂಡಿದ ಮೂರ್ತಿಗಳನ್ನು ಉಪಾಸನೆ ಮಾಡುವನೋ ಅವನು ರುದ್ರನ ಸಾಮೀಪ್ಯ, ಸಾಲೋಕ್ಯ, ಸಾರೂಪ್ಯ ರೂಪವಾದ ಮುಕ್ತಿಗಳನ್ನು ಹೊಂದಿ ಅನೇಕ ಸುಖಗಳನ್ನನುಭವಿಸಿ ಕ್ರಮವಾಗಿ ಜ್ಞಾನವನ್ನು ಪಡೆದು ಸಾಯುಜ್ಯವನ್ನು ಸಾವಕಾಶವಾಗಿ ಕಡೆಗೆ ಹೊಂದುವನು. ॥೨೩-೨೪॥

ಅಥವಾ ವಿಷ್ಣುಲೋಕಾದೀ ನವಾಪ್ಯ ಪುರುಷೋತ್ತಮ ॥೨೫॥

ತತ್ರ ತತ್ರ ಮಹಾಭೋಗಾನವಾಪ್ಯ ಕಮಲೇಕ್ಷಣ ।
ಪೃಥಿವ್ಯಾಂ ಜಾಯತೇ ಶುದ್ಧೇ ಬ್ರಾಹ್ಮಣಾನಾಂ ಕುಲೇ ನರಃ ॥೨೬॥

ಯಃ ಪುಮಾನ್ ಶ್ರದ್ಧಯಾ ನಿತ್ಯಂ ತ್ವಾಮುಪಾಸ್ತೇ ಜನಾರ್ದನ ।
ಸ ಶುದ್ಧಚಿತ್ತಸ್ತ್ವಾಂ ವಿಷ್ಣೋ ಪ್ರಾಪ್ಯ ಕಾಲೇನ ಮಾಮಿಹ ॥೨೭॥

ಭುಕ್ತ್ವಾ ಭೋಗಾನ್ಪುನರ್ಜ್ಞಾನಂ ಲಬ್ಧ್ವಾ ಮುಕ್ತೋ ಭವೇನ್ನರಃ ।
ಅಥವಾ ಚಿತ್ತವೈಕಲ್ಯಾತ್ ವಿಷ್ಣುಸಾರೂಪ್ಯಮೇವ ವಾ ॥೨೮॥

ವಿಷ್ಣುಸಾಮೀಪ್ಯಮನ್ಯದ್ವಾ ವಿಷ್ಣುಸಾಲೋಕ್ಯಮಾಪ್ನುಯಾತ್ ।
ಯಸ್ತವಾಪರಮಾಂ ಮೂರ್ತಿಂ ಉಪಾಸ್ತೇ ಶ್ರದ್ಧಯಾ ನರಃ ॥೨೯॥

ತವ ಸಾಮೀಪ್ಯ ಮಾಪ್ನೋತಿ ಕ್ರಮೇಣೈವ ವಿಮುಚ್ಯತೇ ।
ಅತ್ಯಂತಾಪರಮಾಂ ಮೂರ್ತಿಂ ಯ ಉಪಾಸ್ತೇ ತವಾಚ್ಯುತ ॥೩೦॥
ಸ ಲಬ್ಧ್ವಾ ತವ ಸಾಲೋಕ್ಯಂ ಪುನಃ ಸಾಮೀಪ್ಯಮೇವ ವಾ ।

ಎಲೈ ಪುರುಷಶ್ರೇಷ್ಠನೇ, ಕ್ರಮವಾಗಿ ಜ್ಞಾನವನ್ನು ಪಡೆದವನು ವಿಷ್ಣು ಲೋಕವೇ ಮುಂತಾದ ಲೋಕಗಳನ್ನು ಪಡೆದು, ಆ ಲೋಕಗಳಲ್ಲಿ ಸುಖವನ್ನು ಅನುಭವಿಸಿ ಮತ್ತೆ ಭೂಮಿಯಲ್ಲಿ ಶುದ್ಧವಾದ ಬ್ರಾಹ್ಮಣರ ವಂಶದಲ್ಲಿ ಜನಿಸುವನು. ॥೨೫-೨೬॥

ಎಲೈ ವಿಷ್ಣುವೇ, ಯಾವ ಮನುಷ್ಯನು ಪ್ರತಿದಿನವೂ ಭಕ್ತಿಯಿಂದ ನಿನ್ನನ್ನು ಪೂಜಿಸುವನೋ ಅವನು ಶುದ್ಧಚಿತ್ತನಾಗಿ ನಿನ್ನನ್ನೂ, ಕ್ರಮವಾಗಿ ನನ್ನನ್ನೂ ಹೊಂದಿ, ಅನೇಕ ಸುಖಗಳನ್ನನುಭವಿಸಿ ಜ್ಞಾನವನ್ನು ಪಡೆದು ಕಡೆಗೆ ಮುಕ್ತನಾಗುವನು. ॥೨೭॥

ಅಥವಾ ಉಪಾಸನೆಯನ್ನು ಮಾಡುವಾಗ ಇದ್ದ ಮನಸ್ಸಿನ ಸ್ಥಿತಿಗೆ ಅನುಸಾರವಾಗಿ ವಿಷ್ಣುವಿನ ಸಾಮೀಪ್ಯ ಸಾಲೋಕ್ಯ ಮುಕ್ತಿಗಳಲ್ಲಿ ಒಂದನ್ನು ಪಡೆವನು. ॥೨೮॥

ಯಾವ ಮನುಷ್ಯನು ನಿನ್ನನ್ನು ಸಗುಣಮೂರ್ತಿಯನ್ನಾಗಿ ಧ್ಯಾನಮಾಡುವನೋ ಅವನು ನಿನ್ನ ಸಾಮೀಪ್ಯವನ್ನು ಹೊಂದಿ ಕ್ರಮವಾಗಿ ಮೋಕ್ಷವನ್ನು ಹೊಂದುವನು. ನಿನ್ನ ಸಂಬಂಧವಾದ ವಿಗ್ರಹಗಳನ್ನು ಪೂಜೆಮಾಡುವವನೂ,

ಸಾರೂಪ್ಯಂ ವಾ ಪುನಶ್ಚಿತ್ತ ಪರಿಪಾಕಾನುಕೂಲತಃ ॥೩೧॥

ಮಾಮವಾಪ್ಯ ಪರಿಜ್ಞಾನಂ ಲಬ್ಧ್ವಾತೇನ ಪ್ರಮುಚ್ಯತೇ ।
ಅಥವಾ ಚಿತ್ತ ಕಾಲುಷ್ಯಾತ್ ಬ್ರಹ್ಮಾದಿ ಭವನಂ ಗತಃ ॥೩೨॥

ತತ್ರಭುಕ್ತ್ವಾಮಹಾಭೋಗಾನ್ ಕ್ರಮಾದ್ಭೂಮೌ ವಿಜಾಯತೇ ।
ಯಃ ಪುಮಾನ್ ಹೃದಯೇ ನಿತ್ಯಂ ಬ್ರಹ್ಮಾಣಂ ಪಂಕಜೇಕ್ಷಣ ॥೩೩॥

ಅಕ್ಷಮಾಲಾಧರಂ ಶುಭ್ರಂ ಕಮಂಡಲು ಕರಾಂಬುಜಂ ।
ವರದಾಭಯ ಹಸ್ತಂ ಚ ವಾಚಾ ಸಹಿತಮೀಶ್ವರಂ ॥೩೪॥

ಉಪಾಸ್ತೇ ಬ್ರಹ್ಮಸಾರೂಪ್ಯಂ ಸ ಯಾತಿಪುರುಷೋತ್ತಮ ।
ವಿಶುದ್ಧ ಚಿತ್ತಶ್ಚೇನ್ಮರ್ತ್ಯಃ ತ್ವಾಮವಾಪ್ಯತತಃ ಪರಂ ॥೩೫॥

ಪ್ರಾಪ್ಯ ಮಾಮದ್ವಯಂ ಜ್ಞಾನಂ ಲಬ್ಧ್ವಾತೇನ ಪ್ರಮುಚ್ಯತೇ ।
ಅಥವಾಽಪಕ್ವಚಿತ್ತಶ್ಚೇದ್ಬ್ರಹ್ಮಲೋಕೇ ಮಹಾಸುಖಂ ॥೩೬॥

ಅವನ ಮನಸ್ಸಿನ ಪರಿಪಾಕಾನುಸಾರವಾಗಿ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯರೂಪವಾದ ಮುಕ್ತಿಗಳನ್ನು ಪಡೆದು ಕ್ರಮವಾಗಿ ನನ್ನ ಸಂಬಂಧವಾದ ಜ್ಞಾನವನ್ನು ಹೊಂದಿ ಮುಕ್ತಿಯನ್ನು ಪಡೆಯುವನು. ||೨೯-೩೦-೩೧||

ಹಾಗಲ್ಲದೇ ಹೋದರೆ ಮನಸ್ಸಿನಲ್ಲಿ ರಾಗಾದಿದೋಷಗಳಿದ್ದರೆ ಬ್ರಹ್ಮಲೋಕವೇ ಮುಂತಾದ ಲೋಕಗಳಲ್ಲಿ ಅನೇಕ ಸುಖಗಳನ್ನನುಭವಿಸಿ ಕ್ರಮವಾಗಿ ಭೂಮಿಯಲ್ಲಿ ಜನ್ಮವನ್ನೆತ್ತುವನು. ||೩೨||

ಕಮಲಾಕ್ಷನಾದ ವಿಷ್ಣುವೇ, ಯಾವ ಮನುಷ್ಯನು ಜಪಸರಕಮಂಡಲುಗಳನ್ನು ಧರಿಸಿದ ವರದಾಭಯಹಸ್ತಗಳುಳ್ಳ ಸರಸ್ವತೀಸಹಿತನಾದ ಬ್ರಹ್ಮನನ್ನು ಧ್ಯಾನಮಾಡುವನೋ ಅವನು ಬ್ರಹ್ಮಸಾರೂಪ್ಯವನ್ನು ಹೊಂದುವನು. ಅವನು ಶುದ್ಧಚಿತ್ತನಾದರೆ ನಿನ್ನನ್ನು ಹೊಂದಿ, ಆ ಮೇಲೆ ನನ್ನನ್ನು ಹೊಂದಿ, ಬಳಿಕ ಬ್ರಹ್ಮಜ್ಞಾನವನ್ನು ಪಡೆದು ಮೋಕ್ಷವನ್ನು ಹೊಂದುವನು. ||೩೩-೩೪-೩೫||

ಅಥವಾ ಅವನು ಅಪಕ್ವವಾದ ಮನಸ್ಸುಳ್ಳವನಾದರೆ ಬ್ರಹ್ಮಲೋಕದಲ್ಲಿ ವಿಶೇಷವಾದ ಸುಖವನ್ನನುಭವಿಸಿ, ಬಳಿಕ ಭೂಮಿಯಲ್ಲಿ ಒಳ್ಳೆಯ ಆಚಾರಶೀಲರ

ಭುಕ್ತ್ವಾ ಭೂಮೌ ಮಹಾಪ್ರಾಜ್ಞಃ ಸದಾಚಾರವತಾಂ ಕುಲೇ ।
ಜಾಯತೇ ಪೂರ್ವಭಾವೇನ ಬ್ರಹ್ಮಧ್ಯಾನರತೋ ಭವೇತ್ ॥೩೭॥

ಬ್ರಹ್ಮಣಃ ಪರಮಾಂ ಮೂರ್ತಿಂ ಯ ಉಪಾಸ್ತೇ ಜನಾರ್ದನ ।
ಬ್ರಹ್ಮಸಾಮೀಪ್ಯ ಮಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥೩೮॥

ವಿಶುದ್ಧ ಹೃದಯೋ ಮರ್ತ್ಯಃ ಕ್ರಮಾನ್ಮಾಮಾಪ್ನುಯಾದ್ಧರೇ ।
ಅವಿಶುದ್ಧೋ ವಿಜಾಯೇತ ಕ್ರಮೇಣ ವಸುಧಾತಲೇ ॥೩೯॥

ಅತ್ಯಂತಾಪರಮಾಂ ಮೂರ್ತಿಂ ಬ್ರಹ್ಮಣಃ ಪರಮೇಷ್ಠಿನಃ ।
ಯ ಉಪಾಸ್ತೇ ಸ ಸಾಲೋಕ್ಯಂ ಯಾತಿ ಶುದ್ಧಸ್ತು ಮುಚ್ಯತೇ ॥೪೦॥

ಅಶುದ್ಧೋ ಜಾಯತೇ ಭೂಮೌ ಕ್ರಮಾದ್ಭುಕ್ತ್ವಾ ಮಹಾಸುಖಂ ।
ಯೋ ದೇವತಾಂತರಂ ನಿತ್ಯ ಮುಪಾಸ್ತೇ ಶ್ರದ್ಧಯಾ ಸಹ ॥೪೧॥
ಚಿತ್ತ ಪಾಕಾನುಗುಣ್ಯೇನ ಮೂರ್ತ್ಯುತ್ಕರ್ಷಬಲೇನಚ ।

ವಂಶದಲ್ಲಿ ಹುಟ್ಟಿ ಬುದ್ಧಿವಂತನಾಗಿ, ಹಿಂದಿನಜನ್ಮದ ಸಂಸ್ಕಾರಕ್ಕನುಸಾರವಾಗಿ ಮತ್ತೆ ಬ್ರಹ್ಮಧ್ಯಾನಾಸಕ್ತನಾಗಿ ಮುಂದುವರಿಯುವನು. ॥೩೬-೩೭॥

ಬ್ರಹ್ಮನ ಸಂಬಂಧವಾದ ಮನೋಹರವಾದ ಸಗುಣಮೂರ್ತಿಯನ್ನು ಉಪಾಸನೆ ಮಾಡುವ ಮನುಷ್ಯನು ಬ್ರಹ್ಮಸಾಮೀಪ್ಯವನ್ನು ಪಡೆವನು. ಅವನು ಪರಿಶುದ್ಧವಾದ ಅಂದರೆ ರಾಗದ್ವೇಷಾದಿಗಳಿಲ್ಲದ ಮನಸ್ಸುಳ್ಳವನಾದರೆ ಕ್ರಮವಾಗಿ ನನ್ನನ್ನು ಸೇರುವನು. ಅಶುದ್ಧವಾದ ಮನಸ್ಸಿನವನಾದರೆ ಭೂಮಿಯಲ್ಲಿ ಮತ್ತೆ ಹುಟ್ಟುವನು. ॥೩೮-೩೯॥

ಬ್ರಹ್ಮನ ಸಂಬಂಧವಾದ ಕಲ್ಲು, ಮರ ಮುಂತಾದುವುಗಳಿಂದ ಮಾಡಿದ ವಿಗ್ರಹಗಳನ್ನು ಪೂಜಿಸುವ ಮನುಷ್ಯನು ಸಾಲೋಕ್ಯಮುಕ್ತಿಯನ್ನು ಹೊಂದುವನು. ಶುದ್ಧಚಿತ್ತನಾದರೆ ಕ್ರಮವಾಗಿ ಬ್ರಹ್ಮನೊಡನೆ ಮೋಕ್ಷವನ್ನು ಹೊಂದುವನು. ಅಶುದ್ಧಚಿತ್ತನಾದರೆ ಆ ಬ್ರಹ್ಮಲೋಕದಲ್ಲಿ ಅನೇಕ ಸುಖಗಳನ್ನನುಭವಿಸಿ ಮತ್ತೆ ಭೂಮಿಯಲ್ಲಿ ಹುಟ್ಟುವನು. ॥೪೦॥

ಯಾವ ಮನುಷ್ಯನು ಪ್ರತಿದಿನವೂ ತನಗಿಷ್ಟವಾದ ದೇವತೆಯನ್ನು ಅತ್ಯಂತಾಸಕ್ತಿಯಿಂದ ಉಪಾಸನೆ ಮಾಡುವನೋ ಅವನು ತನ್ನ ಮನಸ್ಸಿನ ಪರಿಪಾಕಾನುಸಾರವಾಗಿಯೂ, ತಾನು ಉಪಾಸನೆ ಮಾಡುವ ಮೂರ್ತಿಯ ವಿಶೇಷಗುಣಾನುಸಾರ

ಸಾಲೋಕ್ಯಾದಿಪದಂ ಲಬ್ಧ್ವಾ ಪುನಃ ಬ್ರಹ್ಮಪದಂ ಹರೇ ॥೪೨॥

ಲಬ್ಧ್ವಾ ವಿಷ್ಣುಪದಂ ವಾಽಪಿ ಮಮ ರೂಪಂ ಮಹತ್ತರಂ ।
ಮತ್ತೋ ಲಬ್ಧ್ವಾ ಮಮ ಜ್ಞಾನಂ ತೇನ ಮುಚ್ಯೇತ ಬಂಧನಾತ್ ॥೪೩॥

ಅಥವಾ ಮಲಿನಸ್ತತ್ರ ಭುಕ್ತ್ವಾ ಭೋಗಾನನೇಕಶಃ ।
ಭೂಮೌ ವಿಜಾಯತೇ ಮರ್ತ್ಯಃ ಸತ್ಯಮೇವ ನ ಸಂಶಯಃ ॥೪೪॥

ಸರ್ವಮೂರ್ತಿಷು ಮಾಂ ಬುದ್ಧ್ವಾ ಶ್ರದ್ಧಯಾ ಪರಯಾಸಹ ।
ಯ ಉಪಾಸ್ತೇ ಮಹಾವಿಷ್ಣೋ ಮೂರ್ತ್ಯುತ್ಕರ್ಷಕ್ರಮೇಣ ತು ॥೪೫॥

ಚಿತ್ತಪಾಕಾನುಗುಣ್ಯೇನ ಹರೇ ಶೀಘ್ರಂ ಕ್ರಮೇಣ ತು ।
ಅವಾಪ್ಯ ಪರಮಾಂ ಮೂರ್ತಿಂ ಮಮ ಸರ್ವೋತ್ತಮಾಂ ನರಃ ॥೪೬॥

ಲಬ್ಧ್ವಾ ಮತ್ತಃ ಶಿವಜ್ಞಾನಂ ತೇನ ಯಾತಿ ಪರಾಂ ಗತಿಂ ।

ವಾಗಿಯೂ, ಸಾಲೋಕ್ಯಾದಿ ಮುಕ್ತಿಗಳನ್ನು ಪಡೆದು ಬ್ರಹ್ಮಲೋಕವನ್ನೋ, ವಿಷ್ಣು ಲೋಕವನ್ನೋ ಹೊಂದಿ, ಬಳಿಕ ನನ್ನ ಸಮೀಪಕ್ಕೆ ಬಂದು, ನನ್ನಿಂದ ಜ್ಞಾನವನ್ನು ಪಡೆದು, ಆ ಜ್ಞಾನದಿಂದ ಸಂಸಾರದ ಕಟ್ಟಿನ ಬಿಡುಗಡೆಯನ್ನು ಹೊಂದುವನು. ||೪೧-೪೨-೪೩||

ಮಲಿನಚಿತ್ತನಾದ ಮನುಷ್ಯನಾದರೆ ತನ್ನ ಕರ್ಮದಿಂದ ಪಡೆದ ಸ್ವರ್ಗಾದಿ ಲೋಕಗಳಲ್ಲಿ ಅನೇಕ ಸುಖಗಳನ್ನನುಭವಿಸಿ, ಮತ್ತೆ ಭೂಮಿಯಲ್ಲಿ ಜನಿಸುವನು. ||೪೪||

ಹರಿಯೇ, ಎಲ್ಲ ಮೂರ್ತಿಗಳಲ್ಲಿಯೂ ನಾನೇ ಇರುವೆನೆಂದು ತಿಳಿದು, ಅತ್ಯಂತಾಸಕ್ತಿಯಿಂದ ಯಾವ ಮನುಷ್ಯನು ಉಪಾಸನೆಯನ್ನು ಮಾಡುವನೋ ಅವನು ಮೂರ್ತಿಗುಣಗಳ ತಾರತಮ್ಯಾನುರೂಪವಾಗಿಯೂ, ಚಿತ್ತಶುದ್ಧಿಗನುಸಾರವಾಗಿಯೂ, ಶೀಘ್ರವಾಗಿಯೋ, ಕ್ರಮವಾಗಿಯೋ, ನನ್ನ ಶ್ರೇಷ್ಠವಾದ ಸಗುಣಮೂರ್ತಿಯ ಸಾಮೀಪ್ಯವನ್ನು ಹೊಂದಿ, ನನ್ನಿಂದ ಶಿವಜ್ಞಾನವನ್ನು ಪಡೆದು ಕಡೆಗೆ ಪರಬ್ರಹ್ಮ ಸ್ವರೂಪನಾಗುವನು. ||೪೫-೪೬||

ಏವಮೇವ ಕ್ರಮಾದ್ವಿಷ್ಣೋ ನರೋ ಬಾಹ್ಯೇನ ಕರ್ಮಣಾ ॥೪೭॥

ಮಾಮವಾಪ್ಯ ಶಿವಜ್ಞಾನಂ ಲಬ್ಧ್ವಾತೇನ ಪ್ರಮುಚ್ಯತೇ ।
ಅವಿಶುದ್ಧೋಽಪಿ ಬಾಹ್ಯೇನ ಕರ್ಮಣಾ ತತ್ರ ತತ್ರ ತು ॥೪೮॥

ಸಾಲೋಕ್ಯಾದಿ ಪದಂ ಲಬ್ಧ್ವಾ ಪುಣ್ಯಕರ್ಮಕ್ಷಯೇ ಪುನಃ ।
ಭೂಮೌ ವಿಜಾಯತೇ ಪಶ್ಚಾತ್ಕುರುತೇ ಕರ್ಮ ಪೂರ್ವವತ್ ॥೪೯॥

ಬಾಹ್ಯೇನ ಕರ್ಮಣಾ ಮುಕ್ತಿಃ ಕ್ರಮಾತ್ಕಾಲೇನ ಸಿಧ್ಯತಿ ।
ಆಂತರೇಣಾ ಚಿರಾದೇವ ಕರ್ಮಣಾ ಮುಕ್ತಿರಚ್ಯುತ ॥೫೦॥

ಯಥಾಂತರೋಪಚಾರೇಣ ನರಾಣಾಂ ವಲ್ಲಭಾಃ ಸ್ತ್ರಿಯಃ ।
ತಥಾಂತರೇಣ ಧ್ಯಾನೇನ ವಲ್ಲಭಾ ಮಮ ಜಂತವಃ ॥೫೧॥

ಬಾಹ್ಯಂ ಕರ್ಮ ಮಹಾವಿಷ್ಣೋ ಜ್ಞಾನೇಚ್ಛೋತ್ಪಾದಕಂ ಭವೇತ್ ।
ತ್ಯಾಗಶ್ಚ ಕರ್ಮಣಾಂ ತದ್ವನ್ಮಹಾವಿಷ್ಣೋ ಶಮಾದಯಃ ॥೫೨॥
ಇಹೈವ ಸಂಮ್ಯಜ್ಞಾನಾಂಗ ಮಿತ್ಯೇಷಾ ಶಾಶ್ವತೀ ಶ್ರುತಿಃ ।

ಎಲೈ ವಿಷ್ಣುವೇ, ಹೀಗೆಯೇ ಮನುಷ್ಯನು ಬಾಹ್ಯವಾದ ಕಾಯಿಕ, ವಾಚಿಕ, ಕರ್ಮಗಳಿಂದ ಕ್ರಮವಾಗಿ ನನ್ನಲ್ಲಿ ಬಂದು, ನನ್ನಿಂದ ಜ್ಞಾನವನ್ನು ಪಡೆದು ಮುಕ್ತಿಯನ್ನು ಹೊಂದುವನು. ಶುದ್ಧಚಿತ್ತನಲ್ಲದಿದ್ದರೆ ಬಾಹ್ಯಕರ್ಮಫಲವಾದ ಸಾಲೋಕ್ಯಾದಿಪದವಿಯನ್ನು ಪಡೆದು, ಅಲ್ಲಿ ಸುಖವನ್ನು ಅನುಭವಿಸಿ, ಪುಣ್ಯಕರ್ಮ ಕ್ಷಯವಾಗುತ್ತಲೂ ಭೂಮಿಯಲ್ಲಿ ಹುಟ್ಟಿ, ಮತ್ತೆ ಮೊದಲಿನಂತೆಯೇ ಕರ್ಮಗಳನ್ನು ಮಾಡುವನು. ಬಾಹ್ಯಕರ್ಮಗಳಿಂದ ಕ್ರಮವಾಗಿ ಬಹಳಕಾಲದಮೇಲೆ ಮುಕ್ತಿಯುಂಟಾಗುವುದು. ಆಂತರಕರ್ಮಗಳಿಂದ ಬೇಗನೆ ಮುಕ್ತಿಯುಂಟಾಗುವುದು. ||೪೭-೪೮-೪೯-೫೦||

ಮನಃಪೂರ್ವಕವಾದ ಉಪಚಾರದಿಂದ ಸ್ತ್ರೀಯರು ಮನುಷ್ಯರಿಗೆ ಹೇಗೆ ಪ್ರೀತಿವಿಷಯರಾಗುವರೋ ಹಾಗೆ ಆಂತರವಾದ ಧ್ಯಾನದಿಂದ ಪ್ರಾಣಿಗಳು ನನಗೆ ಪ್ರೀತಿಪಾತ್ರರಾಗುವರು. ||೫೧||

ಮಹಾಮಹಿಮನಾದ ವಿಷ್ಣುವೇ, ಬೃ.ಉ. ೪.೪ ೨೨. " ತಮೇತಂ ವೇದಾನುವಚನೇ ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನದಾನೇನೇತ್ಯಾದಿ " ವೇದಪ್ರಮಾಣದಿಂದ

ವಾರಾಣಸ್ಯಾದಿಕೇ ಸ್ಥಾನೇ ವಿಶಿಷ್ಟೇ ಪಾರಮೇಶ್ವರೇ ॥೫೩॥

ವರ್ತನಂ ಕೇವಲಂ ವಿಷ್ಣೋ ನರಾಣಾಂ ಮರಣಾತ್ಪರಂ ।
ಸಮ್ಯಜ್ಞಾನಪ್ರದಂ ದಿವ್ಯಂ ಸತ್ಯಮುಕ್ತಂ ಜನಾರ್ದನ ॥೫೪॥

ನಿತ್ಯಂ ದ್ವಾದಶಸಾಹಸ್ರಂ ಪ್ರಣವಂ ಯೋ ಜಪತ್ಯಸೌ ।
ಮತ್ಪ್ರಸಾದಾನ್ಮಮ ಜ್ಞಾನಂ ಮರಣಾದೂರ್ಧ್ವಮಾಪ್ನುಯಾತ್ ॥೫೫॥

ಶ್ರೀಮತ್ಪಂಚಾಕ್ಷರಂ ಮಂತ್ರಂ ಪ್ರಣವೇನ ಷಡಕ್ಷರಂ ।
ನಿತ್ಯಂ ದ್ವಾದಶಸಾಹಸ್ರಂಯೋ ಜಪೇಚ್ಛ್ರದ್ಧಯಾ ಸಹ ॥೫೬॥

ಸ ಪುನರ್ಮರಣಾದೂರ್ಧ್ವಂ ಮಮ ಜ್ಞಾನಂ ಮಹತ್ತರಂ ।
ಮತ್ತೋ ಲಬ್ಧ್ವಾಪರಾಂ ಮುಕ್ತಿಂ ತೇನ ಯಾತಿ ನ ಸಂಶಯಃ ॥೫೭॥

ಬಾಹ್ಯಕರ್ಮಗಳು ಮನುಷ್ಯನಿಗೆ ಜ್ಞಾನದಲ್ಲಿ ಅಪೇಕ್ಷೆಯನ್ನು ಹುಟ್ಟಿಸುವುವು. "ಶಾಂತೋದಾಂತ ಉಪರತಸ್ತಿತಿಕ್ಷುಃ ಸಮಾಹಿತೋಭೂತ್ವಾತ್ಮನ್ಯೇವಾತ್ಮಾನಂ ಪಶ್ಯೇತ್ ತ್ಯಾಗೇ ನೈಕೇಮೃತತ್ವಮಾನಶುಃ" ಎಂಬ ಸುಬಾಲೋಪನಿಷತ್. ೯. ೧೪. ಶ್ರುತಿ ಪ್ರಾಮಾಣ್ಯದಿಂದ, ಶಮದಮಾದಿಗುಣಸಂಪತ್ತಿಯೂ, ಸಂನ್ಯಾಸವೂ, ಜ್ಞಾನೋತ್ಪತ್ತಿಗೆ ಅಂತರಂಗಸಾಧನಗಳಾಗಿರುವುವು. ॥೫೨॥

ಕಾಶೀ ಮುಂತಾದ ಪರಮೇಶ್ವರಸಂಬಂಧವಾದ ಕ್ಷೇತ್ರಗಳಲ್ಲಿ ವಾಸಮಾಡುವುದೊಂದೇ ಮನುಷ್ಯರಿಗೆ ಮರಣಾನಂತರದಲ್ಲಿ ಉತ್ತಮವಾದ ಜ್ಞಾನವನ್ನು ಕೊಡತಕ್ಕುದಾಗಿರುವುದು. ಪ್ರತಿದಿನವೂ ಹನ್ನೆರಡುಸಾವಿರ ಪ್ರಣವ ಜಪವನ್ನು ಮಾಡತಕ್ಕ ಮನುಷ್ಯನು, ನನ್ನ ಅನುಗ್ರಹದಿಂದ ಮರಣಾನಂತರದಲ್ಲಿ ಉತ್ತಮವಾದ ಜ್ಞಾನವನ್ನು ಪಡೆವನು. ॥೫೩-೫೫॥

ಪ್ರಣವದಿಂದ ಕೂಡಿದ ಶಿವಪಂಚಾಕ್ಷರೀಮಂತ್ರವನ್ನು ಪ್ರತಿದಿನವೂ ಅತ್ಯಂತಾಸಕ್ತಿಯಿಂದ ಕೂಡಿ, ಹನ್ನೆರಡುಸಾವಿರ ಮಂತ್ರಜಪವನ್ನು ಮಾಡುವ ಮನುಷ್ಯನು ಮರಣವನ್ನು ಹೊಂದಿದಮೇಲೆ, ನನ್ನಿಂದಲೇ ಅತ್ಯುತ್ತಮವಾದ ಜ್ಞಾನವನ್ನು ಹೊಂದಿ ಮುಕ್ತಿಯನ್ನು ಪಡೆಯುವನು. ಈ ವಿಷಯದಲ್ಲಿ ಸಂದೇಹವಿರುವುದಿಲ್ಲ. ॥೫೬-೫೭॥

ಯಃ ಪುಮಾನ್ ಶತರುದ್ರೀಯಂ ಜಪತಿ ಶ್ರದ್ಧಯಾ ಸಹ ।
ದಿನೇ ದಿನೇ ಮಹಾವಿಷ್ಣೋ ಮರಣಾದೂರ್ಧ್ವಮೈಶ್ವರಂ ॥೫೮॥

ಜ್ಞಾನಂ ಲಬ್ಧ್ವಾ ಸ ವಿಜ್ಞಾನಾದೇವ ಯಾತಿ ಪರಾಂ ಗತಿಂ ।
ಯಾನಿ ಕರ್ಮಾಣಿ ಬಾಹ್ಯಾನಿ ಮರಣಾದೂರ್ಧ್ವಮಚ್ಯುತ ॥೫೯॥

ಮಮ ಜ್ಞಾನಪ್ರದಾನೀತಿ ಕಥಿತಾನಿ ಮಯಾ ತವ ।
ತಾನಿ ಕಲ್ಯಾಣ ವೃತ್ತಸ್ಯ ವಿದ್ಧಿ ನಾನ್ಯಸ್ಯ ಕಸ್ಯಚಿತ್ ॥೬೦॥

ಪಾಪಿಷ್ಠಾನಾಮಪಿ ಶ್ರದ್ಧಾವಿಹೀನಾನಾಂ ಜನಾರ್ದನ ।
ಮುಕ್ತಿದಂ ಮರಣಾದೂರ್ಧ್ವಂ ಶಿವಕ್ಷೇತ್ರೈಕವರ್ಧನಂ ॥೬೧॥

ಪುರಾ ಕೋಲಾಹಲೋ ನಾಮ್ನಾ ವೃಷಲೋ ವಿಧಿಚೋದಿತಃ ।
ಕಾಮೇನ ಪೀಡಿತಃ ಸ್ವಸ್ಯ ಪಿತರಂ ಪಂಕಜೇಕ್ಷಣ ॥೬೨॥

ಹತ್ವಾ ಮಾತರಮಾದಾಯ ಗತ್ವಾ ಮೋಹೇನ ಕೇಶವ ।
ವೇದಾರಣ್ಯೇ ಯಥಾ ಕಾಮಂ ಚರಿತ್ವಾ ಮರಣಂ ಗತಃ ॥೬೩॥

ಯಾವ ಮನುಷ್ಯನು ಪ್ರತಿದಿನವೂ, ಭಕ್ತಿಯಿಂದಶತರುದ್ರೀಯ ಮಂತ್ರವನ್ನು ಜಪಿಸುವನೋ ಅವನು ಮರಣಹೊಂದಿದಮೇಲೆ ಶಿವಸಂಬಂಧವಾದ ಜ್ಞಾನವನ್ನು ಹೊಂದಿ, ಆ ಜ್ಞಾನದಿಂದಲೇ ಪರಮಗತಿಯನ್ನು ಹೊಂದುವನು. ॥೫೮॥

ನಾಶರಹಿತನಾದ ವಿಷ್ಣುವೇ, ಯಾವ ಬಾಹ್ಯಕರ್ಮಗಳು ಮನುಷ್ಯನ ಮರಣಾನಂತರದಲ್ಲಿ ನನ್ನ ಜ್ಞಾನನನ್ನು ಕೊಡತಕ್ಕವುಗಳೆಂದು ಹೇಳಿದೆಯೋ, ಅವುಗಳಿಂದ ಸನ್ಮಾರ್ಗದಲ್ಲಿ ನಡೆವ ಮನುಷ್ಯನಿಗೆ ಮಾತ್ರ ಆ ಫಲವುದೊರೆಯುತಕ್ಕದ್ದೆಂದು ತಿಳಿ. ಇತರರಿಗೆ ಯಾರಿಗೂ ದೊರೆಯುವುದಿಲ್ಲ. ॥೫೯-೬೦॥

ಜನರನ್ನು ಸನ್ಮಾರ್ಗದಲ್ಲಿ ನಡೆಸುವ ವಿಷ್ಣುವೇ, ಪಾಪಿಗಳಿಗೂ, ಶಕ್ತಿಯಿಲ್ಲದವರಿಗೂ, ಮರಣಾನಂತರದಲ್ಲಿ ಮುಕ್ತಿಯನ್ನು ಕೊಡತಕ್ಕದ್ದು ಶಿವಕ್ಷೇತ್ರವಾಸವು ಒಂದೇ ಆಗಿರುವುದು. ಇದಕ್ಕೊಂದು ಕಥೆಯಿರುವುದು. ॥೬೧॥

ಹಿಂದೆ ಕೋಲಾಹಲನೆಂಬ ಶೂದ್ರನು ತನ್ನ ಪೂರ್ವಜನ್ಮದ ಕರ್ಮಬಲದಿಂದ ಕಾಮಾತುರನಾಗಿ ತನ್ನ ತಂದೆಯನ್ನು ಕೊಂದು ತಾಯಿಯಲ್ಲಿ ಅಜ್ಞಾನದಿಂದ ಸಂಗ

ತತ್ರವರ್ತನಮಾತ್ರೇಣ ಸ ಪುನಃ ಪುರುಷಾಧಮಃ ।
ಪ್ರಣಷ್ಟಪಾಪಃ ಶುದ್ಧಾತ್ಮಾ ವೇದಾರಣ್ಯವಶೋ ಮಮ ॥೬೪॥

ಪ್ರಸಾದಾದೇವ ವೇದಾಂತಜ್ಞಾನಂ ಲಬ್ಧ್ವಾಽಮೃತೋಽಭವತ್ ।
ತಸ್ಮಾದ್ವಿಮುಕ್ತಿಕಾಮಾನಾಂ ವಿಶಿಷ್ಟೇಷು ಜನಾರ್ದನ ॥೬೫॥

ಶಿವಕ್ಷೇತ್ರೇಷು ಮದ್ಭಕ್ತ್ಯಾ ವರ್ತನಂ ಕೇವಲಂ ಪರಂ ।

॥ ಸೂತ ಉವಾಚ ॥

ಏವಂ ಮಹೇಶ್ವರೇಣೋಕ್ತಂ ನಿಶಮ್ಯ ಪುರುಷೋತ್ತಮಃ ॥೬೬॥

ಪ್ರಣಮ್ಯ ಪರಯಾ ಭಕ್ತ್ಯಾ ಪಪ್ರಚ್ಛೇದಂ ಪುನರ್ದ್ವಿಜಾಃ ।

॥ ವಿಷ್ಣುರುವಾಚ ॥

ವೇದಾರಣ್ಯಸ್ಯ ಮಾಹಾತ್ಮ್ಯಂ ಶ್ರೋತುಮಿಚ್ಛಾಮಿ ಶಂಕರ ॥೬೭॥

ತದದ್ಯ ಭಗವನ್ ಬ್ರೂಹಿ ಮಮ ಕಾರುಣ್ಯ ವಿಗ್ರಹ ।

ಮಾಡಿದನು. ಅವನು ವೇದಾರಣ್ಯಕ್ಷೇತ್ರದಲ್ಲಿಯೇ ಮನಬಂದಂತೆ ವಾಸವಾಗಿದ್ದು ಮರಣಹೊಂದಿದನು. ॥೬೨-೬೩॥

ಅವನು ಆ ವೇದಾರಣ್ಯದಲ್ಲಿದ್ದಮಾತ್ರದಿಂದಲೇ ನೀಚನಾದರೂ ಪಾಪಗಳನ್ನೆಲ್ಲವನ್ನೂ ಕಳೆದುಕೊಂಡು ಶುದ್ಧವಾದ ಮನಸ್ಸುಳ್ಳವನಾಗಿ ನನ್ನ ಅನುಗ್ರಹದಿಂದಲೇ ವೇದಾಂತಜ್ಞಾನವನ್ನು ಪಡೆದು ಮೋಕ್ಷವನ್ನು ಹೊಂದಿದನು. ಆದುದರಿಂದ ಎಲೈ ವಿಷ್ಣುವೇ, ಮುಕ್ತಿಯನ್ನಪೇಕ್ಷಿಸುವವರಿಗೆ ಪ್ರಸಿದ್ಧವಾದ ಶಿವಕ್ಷೇತ್ರಗಳಲ್ಲಿ ನನ್ನಲ್ಲಿ ಭಕ್ತಿಯಿಂದ ಕೂಡಿ ವಾಸಮಾಡುವುದೊಂದೇ ಅತ್ಯುತ್ತಮವಾದ ಮಾರ್ಗವು. ॥೬೪-೬೫॥

ಸೂತನು ಹೇಳಿದನು — ಹೀಗೆ ಮಹೇಶ್ವರನು ಹೇಳಿದ ಮಾತನ್ನು ಕೇಳಿ ವಿಷ್ಣುವು ನಮಸ್ಕರಿಸಿ ಅತ್ಯಂತ ಭಕ್ತಿಯಿಂದ ಕೂಡಿ ಮತ್ತೆ ಪ್ರಶ್ನೆಮಾಡಿದನು.॥೬೬॥

ವಿಷ್ಣುವು ಹೇಳಿದನು — ವೇದಾರಣ್ಯದ ಮಹಿಮೆಯನ್ನು ಕೇಳಬೇಕೆಂದು ಅಪೇಕ್ಷಿಸುವೆನು. ಕರುಣಾಮೂರ್ತಿಯಾದ ಶಂಕರನೇ, ಅದನ್ನು ಈಗಲೇ ನನಗೆ ಹೇಳಬೇಕು. ॥೬೭॥

॥ ಈಶ್ವರ ಉವಾಚ ॥

ವದಾಮಿ ತವ ವಿಷ್ಣೋ ಶ್ರೀವೇದಾರಣ್ಯಸ್ಯ ವೈಭವಂ ॥೬೮॥

ಅತೀವ ಶ್ರದ್ಧಯಾ ಸಾರ್ಧಂ ಶೃಣು ಸರ್ವ ಜಗದ್ಧಿತಂ ।
ಶ್ರೀಮದ್ವಲ್ಮೀಕ ಸಂಜ್ಞಸ್ಯ ಮಮ ಸ್ಥಾನಸ್ಯ ದಕ್ಷಿಣೇ ॥೬೯॥

ಸಮುದ್ರತೀರೇ ಮದ್ಭಕ್ತೈಃ ಅಖಿಲೈರಾವೃತಂ ಸದಾ ।
ಪುರಾ ಸರ್ಗೇ ಮಹಾವಿಷ್ಣೋ ಪ್ರಲಯೇ ವಿಲಯಂ ಗತೇ ॥೭೦॥

ಮಯಿ ಸಂಸ್ಕಾರರೂಪೇಣ ಸ್ಥಿತಾಃ ವೇದಾಃ ಸನಾತನಾಃ ।
ಕಲ್ಪಾದೌ ಪೂರ್ವವನ್ಮತ್ತಃ ಪ್ರವೃತ್ತಾ ವಿಮಲಾಃ ಪುನಃ ॥೭೧॥

ಸಮಸ್ತಲೋಕರಕ್ಷಾರ್ಥಂ ಹರೇ ಭೂತ್ವಾ ಶರೀರಿಣಃ ।
ಶ್ರದ್ಧಯಾ ಸಹಿತಾಃ ಶ್ರೀಮದ್ವೇದಾರಣ್ಯಂ ಮಹತ್ತರಂ ॥೭೨॥

ಅವಾಪ್ಯ ವೇದತೀರ್ಥಾಖ್ಯೇ ಸಮುದ್ರೇ ಸಂಸ್ಥಿತೇ ಹರೇ ।
ಅರ್ಧಯೋಜನವಿಸ್ತೀರ್ಣೇ ಪಾದಯೋಜನ ಮಾಯತೇ ॥೭೩॥

ಈಶ್ವರನು ಹೇಳಿದನು—ಎಲೈ ವಿಷ್ಣುವೇ, ವೇದಾರಣ್ಯದ ಮಹಿಮೆಯನ್ನು ನಿನಗೆ ಹೇಳುವೆನು. ಅದು ಸಮಸ್ತಲೋಕಕ್ಕೂ ಹಿತವನ್ನುಂಟುಮಾಡುವುದರಿಂದ, ಅತ್ಯಂತಾಸಕ್ತಿಯಿಂದ ಕೇಳು. ಆ ವೇದಾರಣ್ಯವು ಸಂಪದ್ಯುಕ್ತವಾದ ವಲ್ಮೀಕವೆಂಬ ತನ್ನ ಕ್ಷೇತ್ರದಲ್ಲಿ ದಕ್ಷಿಣದಿಕ್ಕಿನಲ್ಲಿ ಸಮುದ್ರತೀರದಲ್ಲಿರುವುದು. ಅಲ್ಲಿ ಯಾವಾಗಲೂ ನನ್ನ ಭಕ್ತರು ತುಂಬಿರುವರು. ॥೬೮-೬೯॥

ಮಹಾವಿಷ್ಣುವೇ, ಹಿಂದಿನ ಸೃಷ್ಟಿಯು ಪ್ರಕೃತಿಯಲ್ಲಿ ಪ್ರಳಯವಾದಮೇಲೆ, ಅನಾದಿಯಾದ ವೇದಗಳು ಸಂಸ್ಕಾರರೂಪವಾಗಿ ನನ್ನಲ್ಲಿದ್ದವು. ಪುನಃ ಸೃಷ್ಟಿಯ ಪ್ರಾರಂಭದಲ್ಲಿ ಸಮಸ್ತ ಲೋಕಗಳ ಪಾಲನೆಗಾಗಿ ಆ ವೇದಗಳು ನನ್ನಿಂದಲೇ ಶರೀರಗಳನ್ನು ಧರಿಸಿ ಲೋಕದಲ್ಲಿ ಹರಡಿದವು. ಆ ವೇದಮೂರ್ತಿಗಳು ಅತ್ಯಂತಾಸಕ್ತಿಯಿಂದ ದೊಡ್ಡದಾದ ವೇದಾರಣ್ಯಕ್ಕೆ ಬಂದು, ಸಮುದ್ರದಲ್ಲಿ ಅರ್ಧಯೋಜನ ಅಗಲವೂ, ಕಾಲುಯೋಜನ ಉದ್ದವೂ, ಉಳ್ಳ ವೇದತೀರ್ಥದಲ್ಲಿ ಪ್ರತಿಯೊಂದು ಭಾನುವಾರದಲ್ಲಿಯೂ, ಪೂರ್ಣಿಮಾ, ಅಮಾವಾಸ್ಯೆಗಳಲ್ಲಿಯೂ, ಸ್ನಾನವನ್ನು ಮಾಡಿ,

ಸ್ನಾನಂ ಕೃತ್ವಾಽರ್ಕವಾರೇ ಚ ಸದಾಽಪರ್ವಣಿ ಕೇಶವ ।
ಪೂಜಯಾಮಾಸುರೀಶಾನಂ ಶ್ರೀವೇದಾರಣ್ಯ ನಾಯಕಂ ॥೭೪॥

ಶ್ರೀವೇದಾರಣ್ಯ ನಾಥೋಽಪಿ ಸಹ ದೇವ್ಯಾ ಜನಾರ್ದನ ।
ಪ್ರಸಾದ ಮಕರೋತ್ತೇಷಾಂ ವೇದಾನಾಮಂಬಿಕಾಪತಿಃ ॥೭೫॥

ಸ್ಕಂದಶ್ಚ ಮತ್ಸುತಸ್ತಸ್ಮಿಂಸ್ತೀರ್ಥೇ ಸ್ನಾತ್ವಾ ಮಹತ್ತರೇ ।
ಶ್ರೀವೇದಾರಣ್ಯ ನಾಥಾಖ್ಯಂ ಸಮಾರಾಧ್ಯ ಪ್ರಸಾದತಃ ॥೭೬॥

ನಿಹತ್ಯ ತಾರಕಂ ವಿಷ್ಣೋ ಮಹಾವೀರ್ಯ ಪರಾಕ್ರಮಂ ।
ಪ್ರದದೌ ಸರ್ವಲೋಕಾನಾಂ ಪರಮಂ ಸುಖಮಚ್ಯುತ ॥೭೭॥

ನಾರದೋ ಮುನಿರತ್ರೈವ ಸ್ನಾತ್ವಾ ಪರ್ವಣಿ ಶಂಕರಂ ।
ಶ್ರೀವೇದಾರಣ್ಯ ನಾಥಾಖ್ಯಂ ಶ್ರದ್ಧಯಾ ಪರಯಾ ಸಹ ॥೭೮॥

ಸಮಾರಾಧ್ಯಾತ್ಮವಿಜ್ಞಾನಂ ಸಂಸಾರಚ್ಛೇದಕಾರಣಂ ।
ಸನತ್ಕುಮಾರಾತ್ಸರ್ವಜ್ಞಾದಾಪ್ತವಾನಂಬುಜೇಕ್ಷಣ ॥೭೯॥

ಆ ವೇದಾರಣ್ಯಕ್ಕೆ ಅಧಿಪತಿಯಾದ ಈಶ್ವರನನ್ನು ಪೂಜಿಸಿದರು. ಆ ವೇದಾರಣ್ಯನಾಥನಾದ ಶಿವನು ದೇವೀಸಹಿತನಾಗಿ ಆ ವೇದಮೂರ್ತಿಗಳಿಗೆ ಅನುಗ್ರಹವನ್ನು ಮಾಡಿದನು. ||೭೦-೭೧-೭೨-೭೩-೭೪-೭೫||

ನಾಶರಹಿತನಾದ ವಿಷ್ಣುವೇ, ನನ್ನ ಪುತ್ರನಾದ ಸ್ಕಂದನು ಆ ವೇದತೀರ್ಥದಲ್ಲಿ ಸ್ನಾನಮಾಡಿ, ವೇದಾರಣ್ಯನಾಥನೆಂಬ ಹೆಸರಿನ ಶಿವನನ್ನು ಪೂಜಿಸಿ, ಅವನ ಅನುಗ್ರಹದಿಂದ, ಮಹಾಬಲಪರಾಕ್ರಮದಿಂದ ಕೂಡಿದ, ತಾರಕಾಸುರನನ್ನು ಕೊಂದು ಸಮಸ್ತಲೋಕಗಳಿಗೂ ಸುಖವನ್ನುಂಟುಮಾಡಿದನು. ||೭೬-೭೭||

ನಾರದಮುನಿಯು ಪರ್ವಕಾಲಗಳಲ್ಲಿ ಈ ವೇದತೀರ್ಥದಲ್ಲಿ ಸ್ನಾನಮಾಡಿ ವೇದಾರಣ್ಯನಾಥನಾದ ಶಿವನನ್ನು ಪೂಜಿಸಿ, ಜನನ, ಮರಣ, ರೂಪವಾದ ಸಂಸಾರ ದುಃಖವನ್ನು ನಾಶಮಾಡುವ ಜ್ಞಾನವನ್ನು, ಓ ಕಮಲಾಕ್ಷನಾದ ವಿಷ್ಣುವೇ, ಸರ್ವಜ್ಞನಾದ ಸನತ್ಕುಮಾರನಿಂದ ಪಡೆದನು. ||೭೮-೭೯||

ಯಾಜ್ಞವಲ್ಕ್ಯೋ ಮುನಿಸ್ತತ್ರ ಸ್ನಾತ್ವಾ ತೀರ್ಥೇ ಮಹತ್ತರೇ ।
ವೇದಾರಣ್ಯೇಶ್ವರಂ ಭಕ್ತ್ಯಾ ಪ್ರಾತಃಕಾಲೇ ಸಮಾಹಿತಃ ॥೮೦॥

ಪರ್ವಣ್ಯಾರಾಧ್ಯ ತಸ್ಯೈವ ಪ್ರಸಾದಾದೇವ ಕೇವಲಾತ್ ।
ಯೋಗೀಶ್ವರೋಽಭವದ್ಧೀಮಾನ್ ಅಚಿರಾದೇವ ಕೇಶವ ॥೮೧॥

ತಥಾ ಗಾರ್ಗೀ ಚ ಮೈತ್ರೇಯೀ ತತ್ರ ತೀರ್ಥೇ ಮಹತ್ತರೇ ।
ವೇದತೀರ್ಥಾಭಿಧೇ ಸ್ನಾನಂ ಕೃತ್ವಾ ಪರ್ವಣಿ ಕೇಶವ ॥೮೨॥

ಶ್ರೀವೇದಾರಣ್ಯನಾಥಾಖ್ಯಂ ಶಂಕರಂ ಲಿಂಗರೂಪಿಣಂ ।
ಪ್ರದಕ್ಷಿಣತ್ರಯಂ ಕೃತ್ವಾ ಪ್ರಣಮ್ಯ ವಸುಧಾತಲೇ ॥೮೩॥

ಪ್ರಸಾದಾದೇವ ತಸ್ಯೈವ ಜ್ಞಾನಯೋಗಂ ವಿಮುಕ್ತಿದಂ ।
ಅಚಿರಾದೇವ ಸರ್ವಜ್ಞಾದ್ಯಾಜ್ಞವಲ್ಕ್ಯಾದವಾಪತುಃ ॥೮೪॥

ಶ್ವೇತಕೇತುಃ ಮುನಿಃ ತತ್ರ ಸ್ನಾನಂ ಕೃತ್ವಾ ಅಂಬುಜೇಕ್ಷಣ ।
ಪ್ರದಕ್ಷಿಣತ್ರಯಂ ಕೃತ್ವಾ ವೇದಾರಣ್ಯಾಧಿಪಂ ಹರಂ ॥೮೫॥

ಯಾಜ್ಞವಲ್ಕ್ಯಮುನಿಯೂ ಕೂಡ ಆ ದೊಡ್ಡದಾದ ವೇದತೀರ್ಥದಲ್ಲಿ ಸ್ನಾನಮಾಡಿ, ಪರ್ವತಿಥಿಯ ಪ್ರಾತಃಕಾಲದಲ್ಲಿ, ಭಕ್ತಿಯಿಂದ ವೇದಾರಣ್ಯೇಶ್ವರನನ್ನು ಪೂಜಿಸಿ, ಅವನ ಅನುಗ್ರಹದಿಂದಲೇ ಸ್ವಲ್ಪಕಾಲದಲ್ಲಿಯೇ ಯೋಗೀಶ್ವರನಾದನು. ||೮೦-೮೧||

ಹಾಗೆಯೇ, ಗಾರ್ಗೀ, ಮೈತ್ರೇಯಿ, ಎಂಬಿಬ್ಬರು ಸ್ತ್ರೀಯರು ಆ ವೇದತೀರ್ಥದಲ್ಲಿ ಪರ್ವಕಾಲದಲ್ಲಿ ಸ್ನಾನವನ್ನು ಮಾಡಿ, ವೇದಾರಣ್ಯನಾಥನೆಂದು ಪ್ರಸಿದ್ಧನಾದ, ಲಿಂಗರೂಪಿಯಾದ ಶಿವನಿಗೆ ಮೂರು ಪ್ರದಕ್ಷಿಣೆಯನ್ನು ಮಾಡಿ, ಭೂಮಿಯಲ್ಲಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಅವನ ಅನುಗ್ರಹದಿಂದಲೇ ಸ್ವಲ್ಪಕಾಲದಲ್ಲಿಯೇ ಸರ್ವಜ್ಞನಾದ ಯಾಜ್ಞವಲ್ಕ್ಯಮುನಿಯಿಂದ ಮೋಕ್ಷವನ್ನು ಕೊಡತಕ್ಕ ಜ್ಞಾನಯೋಗವನ್ನು ಪಡೆದರು. ||೮೨-೮೩-೮೪||

ಶ್ವೇತಕೇತುವೆಂಬ ಮುನಿಯೂ, ಆ ವೇದತೀರ್ಥದಲ್ಲಿ ಸ್ನಾನವನ್ನು ಮಾಡಿ, ವೇದಾರಣ್ಯಾಧಿಪತಿಯಾದ ಶಿವನಿಗೆ ಅತ್ಯಂತ ಭಕ್ತಿಯಿಂದ ಮೂರು ಪ್ರದಕ್ಷಿಣೆಯನ್ನು

ಪ್ರಣಮ್ಯ ದಂಡವತ್‌ಭೂಮೌ ಭಕ್ತ್ಯಾ ಪರಮಯಾ ಸಹ ।
ಪಿತುಃ ಉದ್ದಾಲಕಾತ್ ಸಾಕ್ಷಾತ್ ಆತ್ಮವಿಜ್ಞಾನಂ ಅಚ್ಯುತ ॥೮೬॥

ಅವಾಪ ಸರ್ವಸಂಸಾರ ಕಾರಣಂ ಜ್ಞಾನನಾಶಕಂ ।
ವರುಣೋ ವೇದತೀರ್ಥೇಽಸ್ಮಿನ್ಪರ್ವಣಿ ಶ್ರದ್ಧಯಾ ಸಹ ॥೮೭॥

ಸ್ನಾನಂಕೃತ್ವಾ ಮಹಾದೇವಂ ಶ್ರೀವೇದಾರಣ್ಯನಾಯಕಂ ।
ಸಮಾರಾಧ್ಯ ಪ್ರಸಾದೇನ ಪ್ರಾಪ್ತವಾನಾತ್ಮದರ್ಶನಂ ॥೮೮॥

ತಸ್ಯ ಪುತ್ರಃ ಭೃಗುಃ ತಸ್ಮಿನ್ ತೀರ್ಥೇ ಸ್ನಾತ್ವಾ ಮಹತ್ತರೇ ।
ವೇದಾರಣ್ಯಾಧಿಪಂ ದೇವಂ ವೇದವೇದಾಂತನಾಯಕಂ ॥೮೯॥

ದೃಷ್ಟ್ವಾ ಪ್ರದಕ್ಷಿಣೀಕೃತ್ಯ ಶ್ರದ್ಧಯಾಽಽರಾಧ್ಯ ಶಂಕರಂ ।
ಪ್ರಸಾದಾತ್ತಸ್ಯ ವಿಜ್ಞಾನಂ ಬ್ರಹ್ಮಾತ್ಮೈಕ್ಯಪ್ರಕಾಶಕಂ ॥೯೦॥

ಅಪರೋಕ್ಷಂ ಪಿತುಃ ಲೇಭೇ ವರುಣಾದೃಷಿಸತ್ತಮಃ ।
ತ್ರಿಶಂಕುರ್ವೇದ ತೀರ್ಥೇಽಸ್ಮಿನ್ ಶ್ರದ್ಧಯಾ ಸಹ ಪರ್ವಣಿ ॥೯೧॥

ಮಾಡಿ, ತನ್ನ ತಂದೆಯಾದ ಉದ್ದಾಲಕನಿಂದ, ಸಂಸಾರಕ್ಕೆ ಕಾರಣವಾದ ಅಜ್ಞಾನವನ್ನು ನಾಶಮಾಡುವ ಆತ್ಮಜ್ಞಾನವನ್ನು ಪಡೆದನು. ॥೮೫-೮೬॥

ಜಲಾಧಿಪತಿಯಾದ ವರುಣನೂ ಕೂಡ ಈ ವೇದತೀರ್ಥದಲ್ಲಿ ಭಕ್ತಿಯಿಂದ, ಪರ್ವಕಾಲದಲ್ಲಿ ಸ್ನಾನವನ್ನು ಮಾಡಿ, ವೇದಾರಣ್ಯಾಧಿಪತಿಯಾದ ಮಹಾದೇವನನ್ನು ಪೂಜಿಸಿ ಅವನ ಅನುಗ್ರಹದಿಂದ ಆತ್ಮಸಾಕ್ಷಾತ್ಕಾರವನ್ನು ಪಡೆದನು. ॥೮೭-೮೮॥

ವರುಣನ ಪುತ್ರನಾದ ಋಷಿಶ್ರೇಷ್ಠನಾದ ಭೃಗುವು, ವೇದತೀರ್ಥದಲ್ಲಿ ಸ್ನಾನ ಮಾಡಿ ವೇದವೇದಾಂತಶಾಸ್ತ್ರಗಳಿಗೆ ಒಡೆಯನಾದ ವೇದಾರಣ್ಯಾಧಿಪತಿಯಾದ ಶಿವನನ್ನು ಪೂಜಿಸಿ, ಭಕ್ತಿಯಿಂದ ಪ್ರದಕ್ಷಿಣೆಯನ್ನು ಮಾಡಿ, ಆ ದೇವನ ಅನುಗ್ರಹ ದಿಂದ ಜೀವಬ್ರಹ್ಮೈಕ್ಯವನ್ನು ಪ್ರಕಾಶಪಡಿಸುವ ಅಪರೋಕ್ಷಜ್ಞಾನವನ್ನು ತನ್ನ ತಂದೆಯಾದ ವರುಣನ ಉಪದೇಶದಿಂದ ಪಡೆದನು. ॥೮೯-೯೦॥

ತ್ರಿಶಂಕುವೆಂಬ ರಾಜನು, ಅತ್ಯಂತಾಸಕ್ತಿಯಿಂದ ಪರ್ವಕಾಲದಲ್ಲಿ, ಈ ವೇದತೀರ್ಥದಲ್ಲಿ ಸ್ನಾನವನ್ನು ಮಾಡಿ ವೇದಾರಣ್ಯಾಧಿಪತಿಗೆ ಮೂರು ಪ್ರದಕ್ಷಿಣೆ

ಸ್ನಾನಂ ಕೃತ್ವಾ ಮಹಾದೇವಂ ವೇದಾರಣ್ಯಾಧಿಪಂ ಹರಂ ।
ಪ್ರದಕ್ಷಿಣತ್ರಯಂ ಕೃತ್ವಾ ಪ್ರಣಮ್ಯ ವಸುಧಾತಲೇ ॥೯೨॥

ಲೇಭೇ ಪರಮವಿಜ್ಞಾನಂ ಸುದೃಢಂ ಸರ್ವದುಃಖನುತ್ ।
ಬಹವೋ ವೇದತೀರ್ಥೇಽಸ್ಮಿನ್ ವೇದಾರಣ್ಯೇಽತಿ ಶೋಭನೇ ॥೯೩॥

ಸ್ನಾನಂ ಕೃತ್ವಾಽಂಬಿಕಾನಾಥಂ ಶ್ರೀವೇದಾರಣ್ಯನಾಯಕಂ ।
ದೃಷ್ಟ್ವಾ ಪ್ರದಕ್ಷಿಣೀ ಕೃತ್ಯ ಬ್ರಹ್ಮವಿಜ್ಞಾನಮುಚ್ಯುತ ॥೯೪॥

ಅವಾಪುರ್ವೇದಜಂ ತಸ್ಯ ಪ್ರಸಾದಾದೇವ ಮುಕ್ತಿದಂ ।
ಅತ್ರ ಭೂಮಿಪ್ರದಃ ಸಾಕ್ಷಾದ್ರುದ್ರಲೋಕೇ ಮಹೀಯತೇ ॥೯೫॥

ಆವಾಸಭೂಮಿದೋ ರೌದ್ರಂ ಪದಮಾಪ್ನೋತ್ಯ ಸಂಶಯಂ ।
ಧನಧಾನ್ಯಪ್ರದೋಮರ್ತ್ಯಃ ಧನದೇನ ಸಮೋಭವೇತ್ ॥೯೬॥

ಅನ್ನಪಾನಪರಃ ಶ್ರೀಮಾ ನ ರೋಗೀ ಭವತಿಧ್ರುವಂ ।
ತಿಲದಾನಾನ್ಮಹಾಪಾಪಾನ್ಮುಚ್ಯತೇ ನಾತ್ರಸಂಶಯಃ ॥೯೭॥

ಗಳನ್ನೂ ಭೂಮಿಯಲ್ಲಿ ಸಾಷ್ಟಾಂಗ ನಮಸ್ಕಾರವನ್ನೂ ಮಾಡಿ, ಸಮಸ್ತದುಃಖವನ್ನೂ ನಾಶಮಾಡುವ ದೃಢವಾದ ವಿಜ್ಞಾನವನ್ನು ಪಡೆದನು. ॥೯೧-೯೨॥

ನಾಶರಹಿತನಾದ ವಿಷ್ಣುವೇ, ಇನ್ನೂ ಅನೇಕರು ಈ ಮಂಗಲಕರವಾದ ವೇದಾರಣ್ಯದಲ್ಲಿ ಸ್ನಾನವನ್ನೂ, ಶಿವದರ್ಶನವನ್ನೂ, ಪ್ರದಕ್ಷಿಣೆಯನ್ನೂ ಮಾಡಿ, ಆ ದೇವನ ಅನುಗ್ರಹದಿಂದಲೇ ವೇದಾಂತ ಸಂಬಂಧವಾದ ಬ್ರಹ್ಮಜ್ಞಾನವನ್ನು ಪಡೆದು ಮುಕ್ತರಾದರು. ॥೯೩-೯೪॥

ಈ ವೇದಾರಣ್ಯಕ್ಷೇತ್ರದಲ್ಲಿ ಭೂದಾನಮಾಡಿದವನು ರುದ್ರಲೋಕದಲ್ಲಿ ಸುಖಾನುಭವವನ್ನು ಮಾಡುವನು. ಮನೆಯನ್ನು ಕಟ್ಟುವುದಕ್ಕಾಗಿ ಭೂದಾನ ಮಾಡಿದವನು ರುದ್ರಪದವಿಯನ್ನೇ ಪಡೆವನು. ಧನಧಾನ್ಯಗಳನ್ನು ದಾನಮಾಡಿ ದವನು ಕುಬೇರನಿಗೆ ಸಮಾನನಾಗುವನು. ಅನ್ನದಾನಮಾಡಿದವನು ಆರೋಗ್ಯ ವಂತನಾಗುವನು. ಎಳ್ಳನ್ನು ದಾನಮಾಡಿದವನ ಮಹಾಪಾಪಗಳೆಲ್ಲವೂ ಬಿಡುಗಡೆ ಯಾಗುವುವು. ಇಲ್ಲಿ ಕನ್ಯಾದಾನವನ್ನು ಮಾಡಿದವನು ಪಾರ್ವತಿಯ ಲೋಕದಲ್ಲಿ

ಕನ್ಯಾದಾನ ಪ್ರದಾನೇನ ಪಾರ್ವತೀ ಲೋಕಮಾಪ್ನುಯಾತ್ ।
ವಸ್ತ್ರದಾನೇನ ದೇವೇಂದ್ರೋ ಭವತ್ಯೇವ ನ ಸಂಶಯಃ ॥೯೮॥

ವಿಷುವಾಯನ ಕಾಲೇಷು ಗ್ರಹಣೇ ಸೋಮಸೂರ್ಯಯೋಃ ।
ವ್ಯತೀಪಾತೇ ತಥಾ ಪರ್ವಣ್ಯಾರ್ದ್ರಾಯಾಂ ಇಂದುವಾಸರೇ ॥೯೯॥

ಸ್ನಾತ್ವಾ ಯೋ ವೇದತೀರ್ಥೇಽಸ್ಮಿನ್ ಶ್ರದ್ಧಯಾ ಪರಯಾಸಹ ।
ಪ್ರದಕ್ಷಿಣತ್ರಯಂ ಕೃತ್ವಾ ವೇದಾರಣ್ಯಾಧಿಪಂ ಶಿವಂ ॥೧೦೦॥

ಪ್ರಣಮ್ಯ ದಂಡವತ್ತಸ್ಮೈ ಪ್ರದತ್ವಾ ದೀಪಮುಚ್ಛ್ರಿತ ।
ನಿಷ್ಕಮಾತ್ರಂ ಧನಂ ದತ್ವಾ ಶ್ರದ್ಧಯಾ ಶಿವ ಯೋಗಿನೇ ॥೧೦೧॥

ಉಪವಾಸಂ ಕರೋತ್ಯತ್ರ ಸ ಮುಕ್ತೋ ನಾತ್ರ ಸಂಶಯಃ ।
ಸುಮುಹೂರ್ತೇಷು ಯಸ್ತತ್ರ ಸ್ನಾತ್ವಾ ದೃಷ್ಟ್ವಾ ಮಹೇಶ್ವರಂ ॥೧೦೨॥

ಶಿವಯೋಗಿ ಕರೇ ದತ್ವಾ ಪಣಮಾತ್ರಂ ಧನಂ ಮುದಾ ।
ಬ್ರಹ್ಮಹತ್ಯಾದಿಭಿಃ ಪಾಪೈಃ ಮುಚ್ಯತೇ ನಾತ್ರ ಸಂಶಯಃ ॥೧೦೩॥

ಸುಖವನ್ನನುಭವಿಸುವನು. ವಸ್ತ್ರದಾನಮಾಡಿದವನಿಗೆ ದೇವೇಂದ್ರನ ಪದವಿಯೇ ಬರುವುದು. ಈ ವಿಷಯದಲ್ಲಿ ಸಂದೇಹವಿಲ್ಲ. ॥೯೫-೯೬-೯೭-೯೮॥

ಮೇಷ, ತುಲಾ, ಕಟಕ, ಮಕರ, ಈ ಸಂಕ್ರಮಣಗಳಲ್ಲಿಯೂ, ಚಂದ್ರ, ಸೂರ್ಯಗ್ರಹಣಗಳಲ್ಲಿಯೂ, ವ್ಯತೀಪಾತ, ಪರ್ವತಿಥಿಗಳು, ಆರ್ದ್ರಾನಕ್ಷತ್ರ, ಸೋಮವಾರ, ಈ ದಿನಗಳಲ್ಲಿಯೂ, ವೇದತೀರ್ಥದಲ್ಲಿ ಸ್ನಾನಮಾಡಿ ಭಕ್ತಿಯಿಂದ ಶಿವನಿಗೆ ಮೂರು ಪ್ರದಕ್ಷಿಣೆಯನ್ನು ಮಾಡಿ, ಸಾಷ್ಟಾಂಗನಮಸ್ಕಾರವನ್ನು ಮಾಡಿ, ಆ ಶಿವಲಿಂಗದ ಸಮೀಪದಲ್ಲಿ ದೀಪವನ್ನು ಹತ್ತಿಸಿ, ಭಕ್ತಿಯಿಂದ ಒಂದು ನಾಣ್ಯವನ್ನಾದರೂ ಆ ಶಿವಯೋಗಿಗೆ ದಾನವನ್ನು ಮಾಡಿ, ಆ ದಿನ ಉಪವಾಸವನ್ನು ಮಾಡಿದವನು ಮೋಕ್ಷವನ್ನೇ ಪಡೆಯುವನು. ಈ ವಿಷಯದಲ್ಲಿ ಸಂದೇಹವಿರುವುದಿಲ್ಲ. ॥೯೯-೧೦೦-೧೦೧॥

ಒಳ್ಳೆಯ ಲಗ್ನದಲ್ಲಿ ಆ ವೇದತೀರ್ಥದಲ್ಲಿ ಸ್ನಾನಮಾಡಿ ಮಹೇಶ್ವರನ ದರ್ಶನವನ್ನು ಮಾಡಿ ಶಿವಯೋಗಿಗೆ ಒಂದು ಹಣವನ್ನಾದರೂ ಸಂತೋಷದಿಂದ ಕೊಟ್ಟವನ ಬ್ರಹ್ಮಹತ್ಯಾದಿ ಮಹಾಪಾಪಗಳೂ ನಾಶನಾಗುವುದರಲ್ಲಿ ಸಂದೇಹವಿರುವುದಿಲ್ಲ. ॥೧೦೨-೧೦೩॥

ಅತ್ರೈವ ಮರಣಂ ಪ್ರಾಪ್ತೋ ವಿಮುಕ್ತೋ ಭವತಿ ಧ್ರುವಂ ।
ಸರ್ವರೋಗಹರಂ ಸ್ಥಾನಮಿದಂ ಭಕ್ತಿಮತಾಂ ನೃಣಾಂ ॥೧೦೪॥

ಮಯಾ ಚ ಮಮ ದೇವ್ಯಾ ಚ ಮಮ ಭಕ್ತೈಃ ಮಹತ್ತಮೈಃ ।
ಪೂಜಿತಂ ಪುಣ್ಯದಂ ಸ್ಥಾನಮೇತದ್ಭುಕ್ತಿವಿಮುಕ್ತಿದಂ ॥೧೦೫॥

ಮುಕ್ತ್ಯುಪಾಯೋ ಮಯಾ ಪ್ರೋಕ್ತಃ ಸರ್ವವೇದಾಂತಸಂಗ್ರಹಃ ।
ಶ್ರದ್ಧಾಹೀನಾಯ ಮರ್ತ್ಯಾಯ ನದೇಯೋಽಯಂ ತ್ವಯಾಽಚ್ಯುತ ॥೧೦೬॥

॥ ಸೂತ ಉವಾಚ ॥

ಇತಿ ಮಾಹೇಶ್ವರಂ ವಾಕ್ಯಂ ನಿಶಮ್ಯ ಕಮಲೇಕ್ಷಣಃ ।
ಪ್ರಣಮ್ಯ ದೇವಮೀಶಾನಂ ಪರಿತೃಪ್ತೋಽಭವದ್ಧರಿಃ ॥೧೦೭॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಮುಕ್ತಿಖಂಡೇ ಮುಕ್ತ್ಯುಪಾಯಕಥನಂ ನಾಮ ತೃತೀಯೋಽಧ್ಯಾಯಃ

ವೇದಾರಣ್ಯಕ್ಷೇತ್ರದಲ್ಲಿಯೇ ಮರಣವನ್ನು ಹೊಂದಿದವನು ಮುಕ್ತನಾಗುವುದು ಖಂಡಿತವಾದುದು. ಭಕ್ತಿಯುಳ್ಳ ಮನುಜರಿಗೆ ಸಮಸ್ತ ರೋಗಪರಿಹಾರಕವಾದ ಸ್ಥಳವು ಇದೇ ಆಗಿರುವುದು. ನಾನೂ, ದೇವಿಯಾದ ಪಾರ್ವತಿಯೂ, ಅತ್ಯಂತ ಶ್ರೇಷ್ಠರಾದ ನನ್ನ ಭಕ್ತರೂ, ಭುಕ್ತಿಮುಕ್ತಿಗಳನ್ನು ಕೊಡತಕ್ಕ ಈ ಕ್ಷೇತ್ರವನ್ನು ಪೂಜಿಸುವೆವು. ॥೧೦೪-೧೦೫॥

ನಾಶರಹಿತನಾದ ವಿಷ್ಣುವೇ, ಸಮಸ್ತ ವೇದಾಂತಗಳ ಸಂಗ್ರಹರೂಪವಾದ ಮುಕ್ತಿಯನ್ನು ಹೊಂದುವ ಉಪಾಯವನ್ನು ನಾನು ನಿನಗೆ ಹೇಳಿರುವೆನು. ಇದನ್ನು ನೀನು ಆಸಕ್ತಿಯಿಲ್ಲದ ಮನುಜನಿಗೆ ಹೇಳಬೇಡ. ॥೧೦೬॥

ಸೂತನು ಹೇಳಿದನು—ಹೀಗೆಂದು ಹೇಳಿದ ಪರಮೇಶ್ವರನ ಮಾತನ್ನು ಕೇಳಿ, ಕಮಲದಂತೆ ಕಣ್ಣುಗಳುಳ್ಳ ಹರಿಯು ಆ ದೇವನಿಗೆ ನಮಸ್ಕಾರಮಾಡಿ ಸಂತೋಷವನ್ನು ಹೊಂದಿದನು. ॥೧೦೭॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಮುಕ್ತಿಖಂಡದಲ್ಲಿ ಮುಕ್ತಿಗೆ ಸಾಧನವನ್ನು ತಿಳಿಸುವ ಮೂರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಮುಕ್ತಿಖಂಡಂ

|| ಚತುರ್ಥೋಽಧ್ಯಾಯಃ ||

ನಾಲ್ಕನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಮೋಚಕಂ ಪುರುಷೋತ್ತಮ ।
ಶ್ರದ್ಧಯಾ ಚ ಮಹಾಭಕ್ತ್ಯಾ ವಿದ್ಧಿ ವೇದೈಕದರ್ಶಿತಂ ॥೧॥

ಪುರಾ ಸರಸ್ವತೀದೇವೀ ಸರ್ವವಿದ್ಯಾಲಯಾ ಶುಭಾ ।
ಅಕಾರಾದಿಕ್ಷಕಾರಾಂತೈಃ ವರ್ಣೈಃ ಅತ್ಯಂತನಿರ್ಮಲೈಃ ॥೨॥

ಆವಿರ್ಭೂತಸ್ವರೂಪಾ ಶ್ರೀ ಜ್ಞಾನಮುದ್ರಾಕರಾ ಪರಾ ।
ಅಕ್ಷಮಾಲಾಧರಾ ಹೈಮ ಕಮಂಡಲುಕರಾಂಬುಜಾ ॥೩॥

ಮುಕ್ತಿಯಸ್ವರೂಪವನ್ನೂ, ಅದು ದೊರೆಯುವ ಮಾರ್ಗವನ್ನೂ ಹೇಳಿದ ಮೇಲೆ, ಮುಕ್ತಿಯನ್ನು ಕೊಡತಕ್ಕವನ ವಿಷಯವನ್ನು ತಿಳಿಯುವುದು ಆವಶ್ಯಕವಾದುದರಿಂದ ಈಶ್ವರನು ಆ ವಿಷಯವನ್ನು ಹೇಳುವುದಕ್ಕಾಗಿ ವಿಷ್ಣುವನ್ನು ಕುರಿತು ಪುರುಷಶ್ರೇಷ್ಠನಾದ ವಿಷ್ಣುವೇ, ಮುಕ್ತಿಯನ್ನು ಕೊಡತಕ್ಕವನ ವಿಷಯವನ್ನು ಹೇಳುವೆನು. ವೇದ ಒಂದರಲ್ಲಿಯೇ ಮುಖ್ಯವಾಗಿ ಹೇಳಿರುವ ಆ ವಿಷಯವನ್ನು ಅತ್ಯಂತಾಸಕ್ತಿಯಿಂದಲೂ ಭಕ್ತಿಯಿಂದಲೂ ಕೇಳಿ ತಿಳಿದುಕೊಳ್ಳಬೇಕು. ||೧||

ಹಿಂದೆ ಒಂದು ಕಾಲದಲ್ಲಿ ಸಮಸ್ತ ವಿದ್ಯೆಗೂ ಮನೆಯಾದ ಸರಸ್ವತೀ ದೇವಿಯು, ಅಕಾರಾದಿಯಾಗಿ ಕ್ಷಕಾರಾಂತವಾದ ಸಮಸ್ತ ಶುದ್ಧಾಕ್ಷರಗಳ ಸ್ವರೂಪ

ಸರ್ವಜ್ಞಾನಮಹಾರತ್ನ ಕೋಶಪುಸ್ತಕಧಾರಿಣೀ ।
ಕುಂದೇಂದು ಸದೃಶಾಕಾರಾ ಕುಂಡಲದ್ವಯಮಂಡಿತಾ ॥೪॥

ಪ್ರಸನ್ನ ವದನಾ ದಿವ್ಯಾ ವಿಚಿತ್ರಕಟಕೋಜ್ವಲಾ ।
ಜಟಾಜೂಟಧರಾ ಶುದ್ಧಾ ಚಂದ್ರಾರ್ಧಕೃತಶೇಖರಾ ॥೫॥

ಪುಂಡರೀಕಸಮಾಸೀನಾ ನೀಲಗ್ರೀವಾ ತ್ರಿಲೋಚನಾ ।
ಸರ್ವಲಕ್ಷಣಸಂಪೂರ್ಣಾ ಸರ್ವಾಭರಣಭೂಷಿತಾ ॥೬॥

ಉಪಾಸ್ಯಮಾನಾ ಮುನಿಭಿಃ ದೇವಗಂಧರ್ವರಾಕ್ಷಸೈಃ ।
ಮಾಮಪೃಚ್ಛದಿದಂಭಕ್ತ್ಯಾ ಪ್ರಣಮ್ಯ ಭುವಿ ದಂಡವತ್ ॥೭॥

ಅಹಂ ಚ ಪರಯಾ ಯುಕ್ತಃ ಕೃಪಯಾ ಪುರುಷೋತ್ತಮ ।
ಅವೋಚಂ ಮೋಚಕಂ ದೇವ್ಯೈ ಹಿತಾಯಾಖಿಲದೇಹಿನಾಂ ॥೮॥

ವಾಗಿ ಪ್ರಕಾಶಿಸುತ್ತಾ ತನ್ನ ಸಗುಣರೂಪದಿಂದ ಜಪಸರವನ್ನು ಕೈಯಲ್ಲಿ ಹಿಡಿದು, ಮತ್ತೊಂದು ಕೈಯ್ಯಲ್ಲಿ ಜ್ಞಾನಮುದ್ರೆಯನ್ನು ಧರಿಸಿ, ಇನ್ನೊಂದರಲ್ಲಿ ಚಿನ್ನದ ಕಮಂಡಲುವನ್ನೂ ಮತ್ತೊಂದರಲ್ಲಿ ಸಮಸ್ತ ಜ್ಞಾನಗಳೆಂಬ ರತ್ನಗಳಿಗೆ ಭಂಡಾರದಂತಿರುವ ಪುಸ್ತಕವನ್ನೂ ಹಿಡಿದು, ಚಂದ್ರನಂತೆ ಕಾಂತಿಯುಕ್ತಳಾಗಿ, ಕಿವಿಗಳಲ್ಲಿ ಕರ್ಣಾಭರಣಗಳನ್ನು ಧರಿಸಿ, ವಿಚಿತ್ರವಾದ ಕೈಕಡಗ ಮುಂತಾದ ಆಭರಣಗಳನ್ನು ಧರಿಸಿ, ಜಡೆಯನ್ನು ಹಾಕಿಕೊಂಡು, ತಲೆಗೆ ಅರ್ಧಚಂದ್ರವನ್ನು ಅಲಂಕರಿಸಿಕೊಂಡು, ನೀಲಿಯ ಬಣ್ಣದ ಕುತ್ತಿಗೆಯುಳ್ಳವಳಾಗಿಯೂ, ಮೂರು ಕಣ್ಣುಗಳುಳ್ಳವಳಾಗಿಯೂ, ಸಮಸ್ತ ಶುಭಲಕ್ಷಣಗಳಿಂದ ಕೂಡಿ, ಕಮಲದ ಪೀಠದಲ್ಲಿ ಕುಳಿತಿರಲು, ದೇವತೆಗಳೂ, ಗಂಧರ್ವರೂ, ಮುನಿಗಳೂ, ರಾಕ್ಷಸರೂ, ತನ್ನನ್ನು ಸೇವಿಸುತ್ತಿರಲು, ನನ್ನನ್ನು ಕುರಿತು ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಮುಕ್ತಿಯನ್ನು ಕೊಡತಕ್ಕವನು ಯಾರು? ಎಂದು ಪ್ರಶ್ನೆಮಾಡಿದಳು. ॥೨-೩-೪-೫-೬-೭॥

ಪುರುಷಶ್ರೇಷ್ಠನೇ, ನಾನಾದರೋ ಅತ್ಯಂತ ಕರುಣೆಯಿಂದ ಕೂಡಿದವನಾಗಿ, ಸಮಸ್ತ ಪ್ರಾಣಿಗಳಿಗೂ ಹಿತವಾಗಬೇಕೆಂದು ಅಪೇಕ್ಷಿಸಿ ಆ ದೇವಿಗೆ ಮೋಚಕಸ್ವರೂಪವನ್ನು ಹೇಳಿದೆನು. ॥೮॥

ಬ್ರಹ್ಮಾದ್ಯಾಃ ಸ್ಥಾವರಾಂತಾಶ್ಚ ಪಶವಃ ಪರಿಕೀರ್ತಿತಾಃ ।
ತೇಷಾಂ ಪತಿರಹಂ ದೇವಃ ಸ್ಮೃತಃ ಪಶುಪತಿಃ ಬುಧೈಃ ॥೯॥

ಮಾಯಾಪಾಶೇನ ಬಧ್ನಾಮಿ ಪಶೂನೇತಾನ್ಸರಸ್ವತಿ ।
ತೇಷಾಂ ಪಶೂನಾಂ ಸರ್ವೇಷಾಂ ಮೋಚಕೋಽಹಂ ಸುಲೋಚನೇ ॥೧೦॥

ಮಾಮೇವ ಮೋಚಕಂ ಪ್ರಾಹ ಶ್ರುತಿಃ ಸಾಧ್ವೀ ಸನಾತನೀ ।
ಶ್ರುತಿಃ ಬಲೀಯಸೀ ಪ್ರೋಕ್ತಾ ಪ್ರಮಾಣಾನಾಂ ಸುಲೋಚನೇ ॥೧೧॥

ಸ್ವತಶ್ಚ ಪರತೋ ದೋಷಃ ನ ಹಿ ತಸ್ಯಾಃ ಕದಾಚನ ।
ಅನ್ಯೇಷಾಂ ಅಕ್ಷಜಾದೀನಾಂ ಪ್ರಮಾಣಾನಾಮವಿದ್ಯಯಾ ॥೧೨॥

ದೋಷಸಂಭಾವನಾಽಸ್ತ್ಯೇವ ತತಸ್ತೇಷಾಂ ಸುಲೋಚನೇ ।
ವಿರೋಧೇ ವೇದವಾಕ್ಯೇನ ಪ್ರಾಮಾಣ್ಯಂ ನೈವ ಸಿಧ್ಯತಿ ॥೧೩॥

ಬ್ರಹ್ಮನೇ ಮೊದಲುಗೊಂಡು ಸ್ಥಾವರವಾಗಿರುವ ಮರ ಮುಂತಾದ ಪ್ರಾಣಿಗಳ ವರೆಗೆ ಇರುವ ಸಮಸ್ತಜೀವರುಗಳೂ ಪಶುಗಳೆನಿಸುವರು. ಅವರುಗಳಿಗೆಲ್ಲರಿಗೂ ನಾನು ಅಧಿಪತಿಯಾಗಿರುವುದರಿಂದ ದೇವನಾದ ನನಗೆ ಪಶುಪತಿಯೆಂದು ಹೆಸರು ಬಂದಿರುವುದು. ಜೀವರ ಕಾಮ್ಯಕರ್ಮಗಳು ಪರಿಪಾಕಾವಸ್ಥೆಗೆ ಬರಲುಅವುಗಳಿಗೆ ತಕ್ಕಂತೆ ಅವರಿಗೆ ಭೋಗಗಳನ್ನೂ, ನಿಷ್ಕಾಮಕರ್ಮಗಳು ಪರಿಪಾಕಾವಸ್ಥೆಗೆ ಬಂದಮೇಲೆ ಮೋಕ್ಷವನ್ನೂ ಕೊಟ್ಟು ರಕ್ಷಿಸುವುದರಿಂದ ಪಶುಪತಿಯೆಂದು ಹೆಸರು ಬಂದಿರುವುದು. ॥೯॥

ಸುಂದರವಾದ ಕಣ್ಣುಗಳುಳ್ಳ ಸರಸ್ವತೀದೇವಿಯೇ, ಪಶುಸ್ವರೂಪರಾದ ಈ ಜೀವರುಗಳನ್ನು ಮಾಯೆಯೆಂಬ ಹಗ್ಗದಿಂದ ಕಟ್ಟುವೆನು. ಆ ಸಮಸ್ತ ಪಶುಗಳನ್ನೂ ಹಗ್ಗದ ಕಟ್ಟಿನಿಂದ ಬಿಚ್ಚಿ ಬಿಡತಕ್ಕವನೂ ನಾನೇ. ॥೧೦॥

ಸರಸ್ವತಿಯೇ, ಪ್ರಮಾಣಗಳಲ್ಲೆಲ್ಲಾ ಶ್ರುತಿಪ್ರಮಾಣವು ಬಲವಾದುದೆಂದು ಹೇಳಿರುವುದು. ಆ ಶ್ರುತಿಯು ಅನಾದಿಯಾದುದು. ಮತ್ತು ದೋಷವಿಲ್ಲದುದಾದುದರಿಂದ ಶುದ್ಧವಾದುದು. "ಅಶುಭಕ್ಷಯ" ಇತ್ಯಾದಿಯಾಗಿ ಹೇಳುವ ಗರ್ಭೋಪನಿಷತ್ತಿನಲ್ಲಿ ನಾನೇ ಮೋಚಕನೆಂಬದಾಗಿ ಹೇಳಿರುವುದು. ॥೧೧॥

ಇಂದ್ರಿಯಜನ್ಯವಾದ ಪ್ರತ್ಯಕ್ಷಾದಿಪ್ರಮಾಣಗಳಿಗೆ ಅವಿದ್ಯಾಸಂಬಂಧದಿಂದ ವ್ಯಾವಹಾರಿಕವಾದ ಪ್ರಾಮಾಣ್ಯಮಾತ್ರವಿರುವುದು. ಉಪನಿಷದ್ವಾಕ್ಯಗಳಿಗಾದರೋ,

ಸ್ಮೃತಯಶ್ಚ ಪುರಾಣಾನಿ ಭಾರತಾದೀನಿ ಸುಂದರಿ ।
ವೇದಮೂಲಾನ್ಯತಸ್ತೇನ ವಿರೋಧೇ ಮೂಲಿನಾಮಪಿ ॥೧೪॥

ನ ಸಿಧ್ಯೇತ್ಯೇವ ಸುಶ್ರೋಣಿ ಪ್ರಾಮಾಣ್ಯಂ ಸೂಕ್ಷ್ಮದರ್ಶನೇ ।
ಪಾಂಚರಾತ್ರಾದಿ ಮಾರ್ಗಾಣಾಂ ವೇದಮೂಲತ್ವಮಾಸ್ತಿಕೇ ॥೧೫॥

ನ ಹಿ ಸ್ವತಂತ್ರಾಸ್ತೇ ತೇನ ಭ್ರಾಂತಿಮೂಲಾ ನಿರೂಪಣೇ ।
ತಥಾಽಪಿ ಯೋಽಂಶೋ ಮಾರ್ಗಾಣಾಂ ವೇದೇನ ನ ವಿರುಧ್ಯತೇ॥೧೬॥

ಸೋಽಂಶಃ ಪ್ರಮಾಣಮಿತ್ಯುಕ್ತಂ ಕೇಷಾಂಚಿದಧಿಕಾರಿಣಾಂ ।
ಅತ್ಯಂತ ಗಲಿತಾನಾಂ ತು ಪ್ರಾಣಿನಾಂ ವೇದಮಾರ್ಗತಃ ॥೧೭॥
ಪಂಚರಾತ್ರಾದಯೋ ಮಾರ್ಗಾಃ ಕಾಲೇ ನೈವೋಪಕಾರಕಾಃ ।

ತತ್ವಾವೇದನ ಲಕ್ಷಣರೂಪವಾದ ಪ್ರಾಮಾಣ್ಯವಿರುವುದು. ವ್ಯಾವಹಾರಿಕವಾದ ಪ್ರಮಾಣಗಳಿಗೆ ದೋಷಗಳಿದ್ದೇ ಇರುವುವು. ಇವುಗಳು ವೇದವಾಕ್ಯಗಳಿಗೆ ವಿರೋಧವಾಗಿದ್ದಲ್ಲಿ ಪ್ರಮಾಣವಾಗಲಾರವು. ದೇಹವೇ ಆತ್ಮನೆಂಬ ನಂಬಿಕೆಯು ಆತ್ಮಸ್ವರೂಪ ನಿಶ್ಚಯ ಪರ್ಯಂತವಾಗಿ ಲೌಕಿಕಪ್ರಮಾಣವಾಗಿರುವುದು. ||೧೩||

ಸುಂದರಿಯಾದ ಸರಸ್ವತಿಯೇ, ಸ್ಮೃತಿಗಳು, ಪುರಾಣಗಳು, ಭಾರತಾದಿ ಇತಿಹಾಸಗಳು ಇವುಗಳಲ್ಲಿ ಹೇಳುವ ಅಂಶಗಳು ವೇದಮೂಲಕವಾದುವಾಗಿದ್ದರೆ, ಅವುಗಳು ಪ್ರಮಾಣಗಳಾಗುವುವು. ಆ ಅಂಶಗಳು ಪ್ರತ್ಯಕ್ಷಶ್ರುತಿಗೆ ವಿರೋಧಿಗಳಾಗಿದ್ದು ಅನುಮಿತಶ್ರುತಿಗಳಿಗೆ ಅನುಕೂಲವಾಗಿದ್ದರೂ ಆ ಅನುಮಿತಶ್ರುತಿಗಳು ದೊರೆಯುವವರೆಗೂ ಅವುಗಳನ್ನು ಅನುಷ್ಠಾನಮಾಡಲಾಗದು. ಅಂಥವುಗಳಿಗೆ ಪ್ರಾಮಾಣ್ಯವು ಸಿದ್ಧಿಸುವುದಿಲ್ಲ. ||೧೪||

ಪಾಂಚರಾತ್ರಾದಿ ಆಗಮುಗಳೂ ವೇದಕ್ಕೆ ಅವಿರುದ್ಧವಾದ ಅಂಶಗಳಲ್ಲಿ ಪ್ರಮಾಣಗಳು. ಅವುಗಳಲ್ಲಿ ಭ್ರಾಂತಿಮೂಲಕವಾದ ಕೆಲವಂಶಗಳಿರುವುದರಿಂದ ಅವುಗಳೆಲ್ಲವೂ ಸ್ವತಂತ್ರವಾಗಿ ಪ್ರಮಾಣವಾದವುಗಳಲ್ಲ. ||೧೫||

ಹಾಗಾದರೂ ಆಗಮುಗಳಲ್ಲಿರುವ ಯಾವ ಅಂಶಗಳು ವೇದಕ್ಕೆ ವಿರುದ್ಧಗಳಲ್ಲವೋ ಆ ಅಂಶಗಳು ಪ್ರಮಾಣಗಳು. ವೇದಮಾರ್ಗವನ್ನು ಸಂಪೂರ್ಣವಾಗಿ ಬಿಟ್ಟ ಕೆಲವು ಅನಧಿಕಾರಿಗಳಿಗೆ ಪಂಚರಾತ್ರಾದಿ ಆಗಮುಮಾರ್ಗಗಳು ಕೆಲವು ಕಾಲಗಳಲ್ಲಿ ಉಪಕಾರವನ್ನು ಮಾಡುವುವು. ||೧೬-೧೭||

ತಾಂತ್ರಿಕಾಣಾ ಮಹಂ ದೇವೀ ನ ಲಭ್ಯೋಽವ್ಯವಧಾನತಃ ॥೧೮॥

ಕಾಲೇನ ದೇವತಾಪ್ರಾಪ್ತಿ ದ್ವಾರೇಣೈವಾಹಮಾಸ್ತಿಕೇ ।
ಲಭ್ಯೋ ವೇದೈಕನಿಷ್ಠಾನಾಂ ಅಹಮವ್ಯವಧಾನತಃ ॥೧೯॥

ತತ್ರಾಪಿ ಕರ್ಮನಿಷ್ಠೇಭ್ಯೋ ಜ್ಞಾನನಿಷ್ಠಸ್ಯ ಸುಂದರಿ ।
ಲಭ್ಯೋ ನ ಜ್ಞಾನಿನಾಂ ಲಭ್ಯಸ್ತೇಷಾಮಾತ್ಮೈವ ಕೇವಲಂ ॥೨೦॥

ಸರ್ವೇಷಾಮಾತ್ಮಭೂತೋಽಹ ಮೇವ ಸಂಸಾರಮೋಚಕಃ ।
ನ ಮತ್ತೋಽನ್ಯಃ ಪುಮಾನಜ್ಞ ಇತ್ಯೇಷಾ ಶಾಶ್ವತೀಶ್ರುತಿಃ ॥೨೧॥

ಮಾಮೃತೇ ಸಾಂಬಮೀಶಾನಂ ಮೋಚಕೋಽನ್ಯೋ ನ ವಿದ್ಯತೇ ।
ಅಹಮಪ್ರಾಪ್ತಸಂಸಾರಃ ಸರ್ವಜ್ಞಶ್ಚ ಸ್ವಭಾವತಃ ॥೨೨॥

ಸರಸ್ವತಿಯೇ, ತಂತ್ರಶಾಸ್ತ್ರಕ್ರಮದಿಂದ ಉಪಾಸನೆ ಮಾಡತಕ್ಕವರಿಗೂ ನಾನು ತಡೆಯಿಲ್ಲದೇ ನೇರವಾಗಿ ಸಿಕ್ಕತಕ್ಕವನಲ್ಲ. ಆದರೆ ಉಪಾಸನೆಯಿಂದ ಕಾಲಕ್ರಮದಲ್ಲಿ ದೇವತಾಪ್ರಾಪ್ತಿಯಾದ ಮೇಲೆ, ಆ ಮೂಲಕವಾಗಿ ಅವರಿಗೆ ಸಾವಕಾಶವಾಗಿ ದೊರೆವೆನು. (ವೇದಜ್ಞಾನ) ಒಂದನ್ನೇ ಅಭ್ಯಾಸಮಾಡುವವರಿಗೆ ನಾನು ಯಾವ ಅಂತರವೂ ಇಲ್ಲದೇ ಪ್ರತ್ಯಕ್ಷವಾಗಿ ಬಿಡುವೆನು. ॥೧೮-೧೯॥

ಕರ್ಮಾಸಕ್ತರಾದವರಿಗೆ ಕರ್ಮಗಳಿಂದ ಪಾಪಕ್ಷಯವಾದ ಮೇಲೆ ಜ್ಞಾನನಿಷ್ಠರೆಂದರೆ ತತ್ವಜಿಜ್ಞಾಸುಗಳಾದವರಿಗೆ ನಾನು ದೊರೆವೆನು. ಜ್ಞಾನಿಗಳಿಗೆ ನಾನು ಹೊರಗಿನಿಂದ ದೊರೆಯಬೇಕಾದವನಲ್ಲ. ಕಾರಣವೇನೆಂದರೆ ಆ ಜ್ಞಾನಿಗಳು ಆತ್ಮಸ್ವರೂಪರೇ ಆಗಿರುವುದರಿಂದ ಅವರಿಗೆ ದೊರೆಯಬೇಕಾದುದಾವುದೂ ಇರುವುದಿಲ್ಲ. ಇತರರಿಗೂ ಆತ್ಮಸ್ವರೂಪನಾಗಿದ್ದರೂ ಅಜ್ಞಾನದಿಂದ ಆ ಸ್ವರೂಪಾನುಭವವಿಲ್ಲದಿರುವುದರಿಂದ ಆತ್ಮಪ್ರಾಪ್ತಿಯು ಅವರಿಗಿಲ್ಲ. ॥೨೦॥

ಸಮಸ್ತ ಜೀವರಿಗೂ ಆತ್ಮಸ್ವರೂಪನಾದ ನಾನೇ ಸಂಸಾರಮೋಚಕನಾಗಿರುವೆನು. ನನಗಿಂತ ಬೇರೆಯಾದ ಜನರೆಲ್ಲರೂ ಅಜ್ಞಾನಿಗಳೆಂದು ವೇದದಲ್ಲಿ ಹೇಳಿರುವುದು. ॥೨೧॥

ಅಂಬಾಸಹಿತನಾದ ನನ್ನನ್ನು ಬಿಟ್ಟು ಬೇರೆಯಾದ ಸಂಸಾರಮೋಚಕನು ಇರುವುದಿಲ್ಲ, ನಾನು ಸಂಸಾರದ ಕಟ್ಟಿಗೆ ಸಿಕ್ಕದ ಸರ್ವಜ್ಞನಾದ ಈಶ್ವರನಾದುದರಿಂದ ನನಗಿಂತ ಬೇರೆ ಮೋಚಕರು ಬೇಕಾಗಿಲ್ಲ. ॥೨೨॥

ಮದನ್ಯೇ ತ್ವಾತ್ಮವಿಜ್ಞಾನ ವಿಹೀನಾ ಮಾಯಯಾಽವೃತಾಃ ।
ಸದಾ ಸಂಸಾರಿಣೋ ಮೋಚ್ಯಾಃ ಪ್ರಕೃತಿಃ ಕೇವಲಂ ಜಡಾ ॥೨೩॥

ತಸ್ಮಾತ್ಪಶೂನಾಂ ಸರ್ವೇಷಾಂ ಅಹಂ ಸಂಸಾರಮೋಚಕಃ ।
ನ ಮತ್ತೋಽನ್ಯಃ ಪುಮಾನ್ ಸತ್ಯ ಮಿತ್ಯೇಷಾ ಶಾಶ್ವತೀ ಶ್ರುತಿಃ ॥೨೪॥

ಏವಂ ನಿಶಮ್ಯ ಮದ್ವಾಕ್ಯಂ ಮಹಾವಿಷ್ಣೋ ಸರಸ್ವತೀ ।
ಪೂಜಯಾಮಾಸ ಮಾಂ ಭಕ್ತ್ಯಾ ಜಗನ್ಮಾತಾ ತ್ರಯೀಮಯೀ ॥೨೫॥

ತ್ವಮಪ್ಯತ್ಯಂತ ಕಲ್ಯಾಣೋ ಮದ್ಭಕ್ತಶ್ಚ ವಿಶೇಷತಃ ।
ತ್ವಯಾ ನಾಸ್ತಿ ಸಮಃ ಕಶ್ಚಿಲ್ಲೋಕೇ ವಿಷ್ಣೋ ಮಹಾಮತೇ ॥೨೬॥

ಶಿವನನ್ನು ಬಿಟ್ಟು ಬೇರೆಯಾದ ಸಂಸಾರಿಗಾಗಲಿ, ಪ್ರಕೃತಿಗಾಗಲಿ ಮೋಚಕತ್ವವಿರುವುದೇ ಎಂದು ವಿಚಾರಮಾಡಿದರೆ, ಸಂಸಾರಿಗಳು ಮಾಯೆಯಿಂದ ಆವೃತರಾಗಿ ಆತ್ಮವಿಜ್ಞಾನವಿಲ್ಲದವರು. ತಾವೇ ಬದ್ಧರಾಗಿರುವಾಗ ಮತ್ತೊಬ್ಬರನ್ನು ಹೇಗೆ ಬಂಧನದಿಂದ ಬಿಡಿಸುವರು? ಸಾಂಖ್ಯರು ರೂಪೈಃ ಸಪ್ತಭಿರೇವಂ ಬಧ್ನಾತ್ಯಾತ್ಮಾನಮಾತ್ಮನಾಪ್ರಕೃತಿಃ । ಸೈವಚ ಪುರುಷಸ್ಯಾರ್ಥೇ ವಿಮೋಚಯತ್ಯೇಕರೂಪೇಣ ॥ ಎಂದು ಪ್ರಕೃತಿಗೆ ಮೋಚ್ಯತ್ವ, ಮೋಚಕತ್ವವೆರಡೂ ಇರುವುದೆಂದು ಹೇಳುವರು. ಆ ಪ್ರಕೃತಿಯು ಕೇವಲ ಜಡವಾದುದರಿಂದ ಅದು ಮೋಚಕವಾಗಲಾರದು. ॥೨೩॥

ಆದುದರಿಂದ ಸಮಸ್ತ ಪಶು (ಜೀವ)ಗಳಿಗೂ ನಾನೇ ಜನನಮರಣರೂಪ ಸಂಸಾರದುಃಖವನ್ನು ಬಿಡಿಸತಕ್ಕವನು. ನನಗಿಂತ ಬೇರೆಯಾದ ಪುರುಷನು ನಿಜವಾಗಿಯೂ ಇಲ್ಲವೆಂದು "ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ ಏಕೋ ಬಹೂನಾಂ ಯೋ ವಿದಧಾತಿಕಾಮಾನ್ । ತಮಾತ್ಮಸ್ಥಂ ಯೇಽನು ಪಶ್ಯಂತಿ ಧೀರಾಸ್ತೇಷಾಂ ಶಾಂತಿಃ ಶಾಶ್ವತೀನೇತರೇಷಾಂ ॥" ಎಂದು ಕಠೋಪನಿಷತ್ತಿನಲ್ಲಿ ಹೇಳಿರುವುದು. ॥೨೪॥

ಎಲೈ ಮಹಾವಿಷ್ಣುವೇ, ಹೀಗೆ ಹೇಳಿದ ನನ್ನ ಮಾತನ್ನು ಕೇಳಿ ಲೋಕಕ್ಕೆ ತಾಯಿಯೂ, ವೇದಸ್ವರೂಪಳೂ ಆದ ಸರಸ್ವತಿಯು ಭಕ್ತಿಯಿಂದ ನನ್ನನ್ನು ಪೂಜಿಸಿದಳು. ॥೨೫॥

ಮಹಾಬುದ್ಧಿಶಾಲಿಯಾದ ವಿಷ್ಣುವೇ, ನೀನು ಅತ್ಯಂತ ಮಂಗಳಸ್ವರೂಪನು. ವಿಶೇಷವಾಗಿ ನನ್ನಲ್ಲಿ ಭಕ್ತಿಯುಳ್ಳವನು. ನಿನಗೆ ಸಮಾನನಾದ ಪುರುಷನು ಲೋಕದಲ್ಲಿ ಯಾರೂ ಇರುವುದಿಲ್ಲ. ॥೨೬॥

ತಸ್ಮಾದೇವ ಮಯಾ ಪ್ರೋಕ್ತಸ್ತವ ಸಂಸಾರಮೋಚಕಃ ।
ವೇದಮಾರ್ಗೈಕನಿಷ್ಠಾನಾಂ ಧಾರ್ಮಿಕಾಣಾ ಮಮಾನಿನಾಂ ॥೨೭॥

ಮದ್ಭಕ್ತಾನಾಂ ವಿಶುದ್ಧಾನಾಂ ದ್ವಿಜಾನಾಮಂಬುಜೇಕ್ಷಣ ।
ಮಯೋಕ್ತೋಽರ್ಥಸ್ತ್ವಯಾ ದೇಯೋನ ದೇಯೋಽಯಸ್ಯಕಸ್ಯಚಿತ್॥೨೮॥

॥ ಸೂತ ಉವಾಚ ॥

ಏವಂ ನಿಶಮ್ಯ ಪುರುಷೋತ್ತಮು ಆದಿಭೂತ
ಮಂಬಾಸಹಾಯ ಮಮಲೇಂದು ಕಲಾವತಂಸಂ ।
ಸರ್ವಾಮರ್ಶೈರಖಿಲಯೋಗಿಭಿರರ್ಚನೀಯಂ
ಸಂಸಾರ ಮೋಚಕ ಇತಿ ಪ್ರತಿಪದ್ಯ ಭಕ್ತ್ಯಾ ॥೨೯॥

ನತ್ವಾ ಪರಾಪರ ವಿಭಾಗ ವಿಹೀನಬೋಧಃ
ಸತ್ಯಾ ಮೃತಾದ್ವಯ ಶಿವಾಭಿಧ ಸರ್ವನಾಥಂ ।

ಕಮಲಾಕ್ಷನಾದ ವಿಷ್ಣುವೇ, ಈ ಕಾರಣದಿಂದಿಲೇ ನಾನು ನಿನಗೆ ಸಂಸಾರ ಮೋಚಕನ ಸ್ವರೂಪವನ್ನು ಹೇಳಿರುವೆನು. ಇದನ್ನು ನೀನು ವೇದಮಾರ್ಗದಲ್ಲಿ ನಡೆಯುತಕ್ಕವರೂ, ಧರ್ಮಿಷ್ಠರೂ, ಅಹಂಕಾರವಿಲ್ಲದವರೂ, ಪರಿಶುದ್ಧರೂ, ನನ್ನ ಭಕ್ತರೂ ಆದ ಬ್ರಾಹ್ಮಣರಿಗೆ ಉಪದೇಶಮಾಡಬೇಕು. ಈ ಗುಣಗಳಿಲ್ಲದ ಯಾರಿಗೂ ಉಪದೇಶಮಾಡಬಾರದು. "ವಿದ್ಯಾಹ ವೈ ಬ್ರಾಹ್ಮಣಮಾಜಗಾಮ । ಗೋಪಾಯ ಮಾಂಶೇವಧಿಷ್ಟೇಹಮಸ್ಮಿ । ಅಸೂಯಕಾಯಾನೃಜವೇ ಜಡಾಯನೇಮಾಂ ಬ್ರೂಯಾ ದ್ವೀರ್ಯವತೀ ತಥಾಸ್ಯಾಂ ॥" ಎಂದು ನಿರುಕ್ತದಲ್ಲಿ ಹೇಳಿದೆ. ॥೨೭-೨೮॥

ಪುರುಷಶ್ರೇಷ್ಠನಾದ ವಿಷ್ಣುವು ಶಿವನು ಹೇಳಿದುದನ್ನು ಕೇಳಿ ಅನಾದಿಯಾದ ವನೂ, ಪಾರ್ವತೀಸಹಿತನೂ, ಚಂದ್ರಕಲೆಯನ್ನು ತಲೆಯಲ್ಲಿ ಧರಿಸಿದವನೂ, ಸಮಸ್ತ ದೇವತೆಗಳೂ, ಯೋಗಿಗಳೂ, ಮಾಡುವ ಪೂಜೆಯನ್ನು ಸ್ವೀಕರಿಸತಕ್ಕವನೂ, ಆದ ಶಿವನನ್ನು ಸಂಸಾರದುಃಖವನ್ನು ಬಿಡಿಸತಕ್ಕವನೆಂದು ತಿಳಿದುಕೊಂಡು ಅತ್ಯಂತ ಭಕ್ತಿಯಿಂದ ॥೨೯॥

ನಮಸ್ಕರಿಸಿ, ಶ್ರೇಷ್ಠ, ನಿಕೃಷ್ಟ, ಎಂಬ ಭೇದಗಳಿಲ್ಲದ ಜ್ಞಾನಸ್ವರೂಪನಾದ ಕಮಲಾಕ್ಷನಾದ ವಿಷ್ಣುವು ಸತ್ಯಸ್ವರೂಪನೂ, ಅಮೃತಸ್ವರೂಪನೂ, ಸಮಸ್ತಕ್ಕೂ

ಸ್ತುತ್ವಾ ಗಿರಾ ಪರವಶೋಽಭವದಂಬುಜಾಕ್ಷಃ
ಶಿಷ್ಟಾದೃತಂ ಶಿವಕರಂ ಶಿವಮಾದರೇಣ ॥೩೦॥

ಶೃಣುಧ್ವಮನ್ಯದ್ವಕ್ಷ್ಯಾಮಿ ಮೋಚಕತ್ವಪ್ರಸಾಧಕಂ ।
ಶ್ರದ್ಧಯಾ ಸಹಿತಾ ಯೂಯಂ ಮುನಯೋ ಮುನಿಸತ್ತಮಾಃ ॥೩೧॥

ಪುರಾ ಕಶ್ಚಿದ್ದ್ವಿಜಶ್ರೇಷ್ಠಃ ಶ್ರದ್ಧಯಾ ಕರ್ಮ ವೈದಿಕಂ।
ಕೃತ್ವಾ ಪ್ರದಗ್ಧಪಾಪಸ್ತು ವಿಶುದ್ಧಹೃದಯೋ ಭೃಶಂ ॥೩೨॥

ಭೀತೋ ಜನ್ಮವಿನಾಶಾಭ್ಯಾಂ ಅತೀವ ಮುನಿಪುಂಗವಾಃ ।
ಕ್ರಮೇಣ ಸಕಲಾನ್ ದೇವಾನ್ ಸ್ವಸಂಸಾರ ವಿಮೋಚಕಾನ್ ॥೩೩॥

ಮತ್ವಾಽಽರಾಧ್ಯ ಪುನಃ ಸರ್ವಾನ್ ಜನ್ಮನಾಶಾ ವೃತಾನಿಮಾನ್ ।
ಪರಿತ್ಯಜ್ಯ ವಿಚಾರೇಣ ಭಗವಂತಂ ತ್ರಿಲೋಚನಂ ॥೩೪॥

ಸ್ವಾಮಿಯೂ, ಶಿಷ್ಟರ ಆದರಣೆಗೆ ಪಾತ್ರನೂ, ಮಂಗಳವನ್ನುಂಟುಮಾಡುವವನೂ, ಆದ ಶಿವನನ್ನು ಅನೇಕ ಮಾತುಗಳಿಂದ ಸ್ತೋತ್ರಮಾಡಿ, ಪರವಶನಾಗಿಬಿಟ್ಟನು. ಎಂದರೆ ಸಮಾಧಿಯಲ್ಲಿ ಆನಂದಸ್ವರೂಪನಾಗಿದ್ದನು. ॥೩೦॥

ಸೂತನು ಮುನಿಗಳನ್ನು ಕುರಿತು, ಎಲೈ ಮುನಿಶ್ರೇಷ್ಠರೇ, ಮೋಚಕಸ್ವರೂಪವನ್ನು ಚೆನ್ನಾಗಿ ತಿಳಿಸತಕ್ಕ ಒಂದು ಕಥೆಯನ್ನು ಹೇಳುವೆನು. ನೀವೆಲ್ಲರೂ ಆಸಕ್ತಿಯಿಂದ ಕೇಳಿರಿ. ॥೩೧॥

ಹಿಂದಿನಕಾಲದಲ್ಲಿ ಒಬ್ಬ ಬ್ರಾಹ್ಮಣನು ಅತ್ಯಂತಾಸಕ್ತಿಯಿಂದ ವೇದವು ವಿಧಿಸಿರುವ ಕರ್ಮಗಳನ್ನು ಮಾಡಿ ಪಾಪವೆಲ್ಲ ನಾಶವಾಗುತ್ತಲು, ಮನಸ್ಸು ಶುದ್ಧವಾಗಲು ಹುಟ್ಟುಸಾವುಗಳಿಂದ ಕೂಡಿದ ಸಂಸಾರಕ್ಕೆ ವಿಶೇಷವಾಗಿ ಭಯಪಟ್ಟು ಕ್ರಮವಾಗಿ ಸಕಲದೇವತೆಗಳೂ ತನ್ನ ಸಂಸಾರದುಃಖವನ್ನು ನಾಶಮಾಡುವರೆಂದು ಪೂಜಿಸಿ ಇವರೆಲ್ಲರೂ ಜನ್ಮಮರಣ ಉಳ್ಳವರೆಂದು ತಿಳಿದುಕೊಂಡು ಆ ದೇವತೆಗಳನ್ನೆಲ್ಲರನ್ನೂ ಬಿಟ್ಟು ಮತ್ತೆ ವಿಚಾರಮಾಡಿ, ॥೩೨-೩೩॥

ಮಹಾಮುನಿಮನೂ, ಮೂರು ಕಣ್ಣುಳ್ಳವನೂ, ಉದ್ದವಾದ ಜಟೆಯನ್ನು ಬಿಟ್ಟು ಚಂದ್ರಕಲೆಯನ್ನು ತಲೆಯಲ್ಲಿ ಧರಿಸಿದವನೂ, ನೀಲಕಂಠನೂ, ಶರತ್ಕಾಲದ

ಪ್ರಲಂಬಿತ ಜಟಾಬದ್ಧಂ ಚಂದ್ರರೇಖಾವತಂಸಕಂ ।
ನೀಲಗ್ರೀವಂ ಶರಚ್ಚಂದ್ರ ಚಂದ್ರಿಕಾಭಿರ್ವಿರಾಜಿತಂ ॥೩೫॥

ಗೋಕ್ಷೀರ ಧವಲಾಕಾರಂ ಚಂದ್ರಬಿಂಬ ಸಮಾನನಂ ।
ಸುಸ್ಮಿತಂ ಸುಪ್ರಸನ್ನಂ ಚ ಸ್ವಾತ್ಮ ತತ್ವೈಕಸಂಸ್ಥಿತಂ ॥೩೬॥

ಗಂಗಾಧರಂ ಶಿವಂ ಶಾಂತಂ ಲಸತ್ಕೇಯೂರಮಂಡಿತಂ ।
ಸರ್ವಾಭರಣ ಸಂಯುಕ್ತಂ ಸರ್ವಲಕ್ಷಣಸಂಯುತಂ ॥೩೭॥

ವೀರಾಸನೇ ಸಮಾಸೀನಂ ವೇದಯಜ್ಞೋಪವೀತಿನಂ ।
ಭಸ್ಮಧಾರಾಭಿರಾಮಂ ತಂ ನಾಗಾಭರಣಭೂಷಿತಂ ॥೩೮॥

ವ್ಯಾಘ್ರಚರ್ಮಾಂಬರಂ ಶುದ್ಧಂ ಯೋಗಪಟ್ಟಾವೃತಂ ಶುಭಂ ।
ಸರ್ವೇಷಾಂ ಪ್ರಾಣಿನಾ ಮಾತ್ಮಾಜ್ಞಾನಾಪಸ್ಮಾರಪೃಷ್ಠತಃ ॥೩೯॥

ವಿನ್ಯಸ್ತಚರಣಂ ಸಮ್ಯಜ್ಞಾನಮುದ್ರಾಧರಂ ಹರಂ ।
ಸರ್ವವಿಜ್ಞಾನರತ್ನಾನಾಂ ಕೋಶಭೂತಂ ಸು ಪುಸ್ತಕಂ ॥೪೦॥

ಚಂದ್ರನಂತೆ ಕಾಂತಿಯುಳ್ಳವನೂ, ಹಸುವಿನ ಹಾಲಿನಂತೆ ಬೆಳ್ಳಗಿರುವ ಮೈಬಣ್ಣವುಳ್ಳವನೂ, ಚಂದ್ರನಂತೆ ಸಂತೋಷವನ್ನುಂಟುಮಾಡುವ ಮುಖವುಳ್ಳವನೂ, ಮುಗುಳು ನಗೆಯಿಂದ ಪ್ರಸನ್ನನಾಗಿರುವವನೂ, ತನ್ನ ಸ್ವಸ್ವರೂಪವನ್ನೇ ಧ್ಯಾನಮಾಡುತ್ತಿರುವವನೂ, ಗಂಗೆಯನ್ನು ತಲೆಯಲ್ಲಿ ಧರಿಸಿ ಮಂಗಳಕರನಾಗಿ ಶಾಂತನಾಗಿ ಸಮಸ್ತವಾದ ಆಭರಣಗಳನ್ನೂ ಧರಿಸಿ ಶುಭಕರವಾದ ಲಕ್ಷಣಗಳಿಂದ ಕೂಡಿದವನೂ, ॥೩೪-೩೫-೩೬-೩೭॥

ವೀರಾಸನದಲ್ಲಿ ಕುಳಿತು ವೇದಸ್ವರೂಪವಾದ ಯಜ್ಞೋಪವೀತವನ್ನು ಧರಿಸಿ, ಭಸ್ಮಧಾರಣೆಯಿಂದ ಮನೋಹರನಾಗಿ ಕಾಣುತ್ತಾ, ನಾಗಗಳನ್ನೇ ಆಭರಣವಾಗಿ ಮಾಡಿಕೊಂಡು ಹುಲಿಯ ಚರ್ಮವನ್ನು ಹೊದೆದು, ಯೋಗಪಟ್ಟೆಯನ್ನು ಸುತ್ತಿಕೊಂಡು ಮಂಗಳಕರನಾಗಿ ಕಾಣುತ್ತಾ ಸಮಸ್ತ ಪ್ರಾಣಿಗಳ ಆತ್ಮಸ್ವರೂಪವನ್ನು ತಿಳಿಯದಿರುವುದೆಂಬ ಅಜ್ಞಾನಸ್ವರೂಪವಾದ ಅಪಸ್ಮಾರದ ಬೆನ್ನಿನಮೇಲೆ ಎಡಗಾಲನ್ನಿಟ್ಟು, ಜ್ಞಾನಮುದ್ರೆಯನ್ನೂ, ಸಮಸ್ತ ವಿಜ್ಞಾನವೆಂಬ ರತ್ನಗಳಿಗೆ ಭಂಡಾರದಂತಿರುವ ಪುಸ್ತಕವನ್ನೂ, ಸಕಲ ತತ್ವಸ್ವರೂಪವಾದ ಜಪಸರವನ್ನೂ, ಕಮಂಡಲು

ದಧಾನಂ ಸರ್ವತತ್ವಾಕ್ಷಮಾಲಿಕಾಂ ಕುಂಡಿಕಾಮಪಿ ।
ಸ್ವಾತ್ಮಭೂತ ಪರಾನಂದ ಪರಶಕ್ತ್ಯರ್ಧವಿಗ್ರಹಂ ॥೪೧॥

ಧರ್ಮರೂಪವೃಷೋಪೇತಂ ಧಾರ್ಮಿಕೈರ್ವೇದಪಾರಗೈಃ ।
ಮುನಿಭಿಃ ಸಂವೃತಂ ಮಾಯಾ ವಟಮೂಲಾಶ್ರಿತಂ ಶುಭಂ ॥೪೨॥

ಈಶಾನಂ ಸರ್ವವಿದ್ಯಾನಾಂ ಈಶ್ವರೇಶ್ವರಮವ್ಯಯಂ ।
ಉತ್ಪತ್ತ್ಯಾದಿ ವಿನಿರ್ಮುಕ್ತ ಮೋಂಕಾರ ಕಮಲಾಸನಂ ॥೪೩॥

ಸ್ವಾತ್ಮವಿದ್ಯಾಪ್ರದಾನೇನ ಸದಾ ಸಂಸಾರಮೋಚಕಂ ।
ರುದ್ರಂ ಪರಮಕಾರುಣ್ಯಾತ್ ಸರ್ವಪ್ರಾಣಿ ಹಿತೇ ರತಂ ॥೪೪॥

ಉಪಾಸಕಾನಾಂ ಸರ್ವೇಷಾಂ ಅಭೀಷ್ಟಸಕಲಪ್ರದಂ ।
ದಕ್ಷಿಣಾಮೂರ್ತಿದೇವಾಖ್ಯಂ ಜಗತ್ಸರ್ಗಾದಿಕಾರಣಂ ॥೪೫॥

ಸಮಾಗತ್ಯ ಮಹಾಭಕ್ತ್ಯಾದಂಡವತ್ ಪೃಥಿವೀತಲೇ ।
ಪ್ರಣಮ್ಯ ಬಹುಶೋ ದೇವಂ ಸಮಾರಾಧ್ಯಯಥಾಬಲಂ ॥೪೬॥

ವನ್ನೂ ಧರಿಸಿ ಸ್ವಸ್ವರೂಪವಾದ ಪರಮಾನಂದರೂಪವಾದ ಪರಾಶಕ್ತಿಯನ್ನು ಅರ್ಧ ಶರೀರದಲ್ಲಿ ಧರಿಸಿರುವ, ॥೩೮-೩೯-೪೦-೪೧॥

ಧರ್ಮಸ್ವರೂಪವಾದ ಎತ್ತಿನಿಂದ ಕೂಡಿರುವ, ಧರ್ಮಕಾರ್ಯಗಳನ್ನು ಮಾಡುವವರೂ, ವೇದಗಳನ್ನು ಸಂಪೂರ್ಣವಾಗಿ ತಿಳಿದವರೂ, ಆದ ಮುನಿಗಳಿಂದ ಸುತ್ತುಗಟ್ಟಿರುವ, ಮಾಯೆಯೆಂಬ ಆಲದ ಮರದ ಬುಡದಲ್ಲಿ ಕುಳಿತಿರುವ, ಶುಭಕರನಾದ ಸಮಸ್ತವಿದ್ಯೆಗಳಿಗೂ, ಸಕಲ ದೇವತೆಗಳಿಗೂ ಸ್ವಾಮಿಯಾದ, ನಾಶರಹಿತನೂ, ಹುಟ್ಟಿಲ್ಲದವನೂ ಆದ, ಪ್ರಣವಬ್ರಹ್ಮಸ್ವರೂಪನಾದ, ಆತ್ಮವಿದ್ಯೆಯನ್ನು ಉಪದೇಶ ಮಾಡುವುದರಿಂದ ಯಾವಾಗಲೂ ಪ್ರಾಣಿಗಳ ಸಂಸಾರದುಃಖವನ್ನು ಬಿಡಿಸುತ್ತಿರುವ, ಅತ್ಯಂತ ಕರುಣೆಯಿಂದ ಸಮಸ್ತ ಪ್ರಾಣಿಗಳಿಗೂ ಹಿತವನ್ನು ಮಾಡುವುದರಲ್ಲಿ ಆಸಕ್ತನಾದ ತನ್ನನ್ನು ಧ್ಯಾನಮಾಡತಕ್ಕವರೆಲ್ಲರ ಸಮಸ್ತ ಇಷ್ಟಾರ್ಥಗಳನ್ನೂ ಕೊಡುವ ಪ್ರಪಂಚಸೃಷ್ಟಿಗೆ ಮೂಲಕಾರಣನಾದ ದಕ್ಷಿಣಾಮೂರ್ತಿದೇವನ ಸಮೀಪಕ್ಕೆ ಬಂದು ಅತ್ಯಂತ ಭಕ್ತಿಯಿಂದ ನೆಲದಮೇಲೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ತನ್ನ ಶಕ್ತ್ಯನುಸಾರವಾಗಿ ಆ ದೇವನನ್ನು ಅನೇಕಬಗೆಯಿಂದ ಪೂಜಿಸಿ ದಕ್ಷಿಣಾಮೂರ್ತಿ

ರುದ್ರ ಯತ್ತೇ ಮುಖಂ ತೇನ ದಕ್ಷಿಣಂ ಪಾಹಿ ಮಾಮಿತಿ ।
ಉಕ್ತ್ವಾ ಪುನಃ ಪುನರ್ದೇವಂ ಪೂಜಯಾಮಾಸ ಭಕ್ತಿತಃ ॥೪೭॥

ಪುನರ್ದೇವೋ ಮಹಾದೇವೋ ದಕ್ಷಿಣಾಮೂರ್ತಿರೀಶ್ವರಃ ।
ಪ್ರದತ್ವಾ ಸ್ವಾತ್ಮವಿಜ್ಞಾನಂ ತಸ್ಮೈ ವಿಪ್ರಾಯ ಸುವ್ರತಾಃ ॥೪೮॥

ತಸ್ಯ ಸಂಸಾರವಿಚ್ಛೇದ ಮಕರೋ ದಂಬಿಕಾಪತಿಃ ।
ಬಹವೋ ದಕ್ಷಿಣಾಮೂರ್ತಿ ಪ್ರಸಾದಾದೇವ ಜಂತವಃ ॥೪೯॥

ಅನಾಯಾಸೇನ ಸಂಸಾರಾದ್ವಿಮುಕ್ತಾಃ ಪರಮರ್ಷಯಃ ।
ಭವಂತೋಽಪಿ ಮಹಾದೇವಂ ಮಹಾನಂದಸ್ವರೂಪಿಣಂ ॥೫೦॥

ಸಂಸಾರಮೋಚಕಂ ಬುಧ್ವಾ ಭಜಧ್ವಂ ಸರ್ವಭಾವತಃ ।
ಅಸ್ಯೈವ ಭಜನಾದೇವ ಸರ್ವಂ ಸಿಧ್ಯತ್ಯಸಂಶಯಂ ॥೫೧॥

ರೂಪನಾದ ಶಿವನೇ ನನ್ನನ್ನು ರಕ್ಷಿಸುವನೆಂದು ಹೇಳಿ ಮತ್ತೆ ಮತ್ತೆ ಭಕ್ತಿಯಿಂದ ದೇವನನ್ನು ಪೂಜಿಸಿದನು. ॥೪೨-೪೩-೪೪-೪೫-೪೬-೪೭॥

ದಕ್ಷಿಣಾಮೂರ್ತಿಸ್ವರೂಪನಾದ, ಪಾರ್ವತೀಪತಿಯಾದ, ಈಶ್ವರನು ಆ ಬ್ರಾಹ್ಮಣನಿಗೆ ಆತ್ಮಸ್ವರೂಪವಾದ ಜ್ಞಾನವನ್ನು ಉಪದೇಶಿಸಿ ಅವನ ಸಂಸಾರದುಃಖವನ್ನು ಬಿಡಿಸಿದನು. ॥೪೮॥

ಎಲೈ ವ್ರತನಿಷ್ಠರಾದ ಋಷಿಗಳೇ, ಅನೇಕರು ದಕ್ಷಿಣಾಮೂರ್ತಿಯ ಅನುಗ್ರಹದಿಂದ ಆಯಾಸವಿಲ್ಲದೇ ಸಂಸಾರ ದುಃಖದ ಬಿಡುಗಡೆಯನ್ನು ಹೊಂದುವರು. ॥೪೯॥

ನೀವೂ ಕೂಡ ಆನಂದಸ್ವರೂಪನಾದ ಮಹಾದೇವನನ್ನು ಸಂಸಾರದುಃಖವನ್ನು ಬಿಡಿಸುವವನೆಂದು ತಿಳಿದು, ಸಂಪೂರ್ಣವಾದ ಭಕ್ತಿಯಿಂದ ಧ್ಯಾನಮಾಡಿರಿ. ಈ ದೇವನ ಧ್ಯಾನದಿಂದಲೇ ಸಕಲ ಇಷ್ಟಾರ್ಥಗಳೂ ಸಿದ್ಧಿಸುವುದರಲ್ಲಿ ಸಂದೇಹವಿಲ್ಲ ॥೫೦-೫೧॥

ಇತಿ ಶ್ರುತ್ವಾ ದ್ವಿಜಾಃ ಸರ್ವೇ ಶ್ರದ್ಧಯಾ ಪರಯಾ ಸಹ ।
ಪ್ರಣಮ್ಯ ಸೂತಂ ಸರ್ವಜ್ಞಂ ಪೂಜಯಾಮಾಸುರದ್ಭುತಂ ॥೫೨॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಮುಕ್ತಿಖಂಡೇ
ಮೋಚಕಕಥನಂ ನಾಮ ಚತುರ್ಥೋಽಧ್ಯಾಯಃ

ಸೂತನು ಹೇಳಿದ ಈ ಕಥೆಯನ್ನು ಕೇಳಿ ಋಷಿಗಳೆಲ್ಲರೂ ಅತ್ಯಂತಾಸಕ್ತಿಯಿಂದ ಸರ್ವಜ್ಞನಾದ ಶಿವನಿಗೆ ನಮಸ್ಕರಿಸಿ, ಆಶ್ಚರ್ಯವಾಗುವಂತೆ ಪೂಜಿಸಿದರು. ||೫೨||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಮುಕ್ತಿಖಂಡದಲ್ಲಿ
ಮೋಚಕಸ್ವರೂಪವನ್ನು ತಿಳಿಸುವ ನಾಲ್ಕನೆಯ ಅಧ್ಯಾಯವು ಮುಗಿದುದು.

॥ ಓಂ ತತ್ಸದ್ಬ್ರಹ್ಮಣೇ ನಮಃ ॥

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಮುಕ್ತಿಖಂಡಂ

॥ ಪಂಚಮೋಽಧ್ಯಾಯಃ ॥

ಐದನೆಯ ಅಧ್ಯಾಯವು

॥ ಈಶ್ವರ ಉವಾಚ ॥

ಅಥಾತಃ ಸಂಪ್ರವಕ್ಷ್ಯಾಮಿ ತವಾಹಂ ಮೋಚಕಪ್ರದಂ ।
ಅತೀವ ಶ್ರದ್ಧಯಾ ಸಾರ್ಧಂ ಶೃಣು ಪಂಕಜಲೋಚನ ॥೧॥

ಆಚಾರ್ಯ ಏವ ಸಂಸಾರ ಮೋಚಕಪ್ರದ ಉಚ್ಯತೇ ।
ಆಚಾರ್ಯೋನಾಮ ವೇದಾಂತ ವಿಚಾರೇಣಾಪ್ತವೇದನಃ ॥೨॥

ತಮುಪ್ಯನೇಕಧಾ ವಿದ್ಧಿ ಶ್ರದ್ಧಯಾ ಪುರುಷೋತ್ತಮ ।
ಉತ್ತಮೋ ಮಧ್ಯಮಸ್ತದ್ವತ್ ಅಧಮಶ್ಚಾಂಬುಜೇಕ್ಷಣ ॥೩॥

ಈಶ್ವರನು ವಿಷ್ಣುವನ್ನು ಕುರಿತು—ಇಲ್ಲಿಂದ ಮುಂದೆ ನಿನಗೆ ಮೋಚಕಪ್ರದನಾದ ಗುರುವಿನ ವಿಷಯವನ್ನು ಹೇಳುವೆನು. ಕಮಲಾಕ್ಷನೇ, ಅತ್ಯಂತಾಸಕ್ತಿ ಕೂಡಿ ಇದನ್ನು ಕೇಳಬೇಕು. ॥೧॥

ಶ್ರುತಿ, ಸ್ಮೃತಿ, ಪುರಾಣಾದಿಗಳಲ್ಲಿ ಈಶ್ವರನೇ ಸಂಸಾರಮೋಚಕನೆಂದು ಹೇಳಿರುವುದು. ಹಾಗಾದರೂ ಆ ಈಶ್ವರಸ್ವರೂಪವನ್ನು ಗುರುವಿನ ಮೂಲಕವಾಗಿ ತಿಳಿದರೆ ಫಲದಾಯಕವಾದುದರಿಂದ ಹಾಗೆಯೇ ತಿಳಿಯಬೇಕು. ಛಾಂ.ಉ. ೪.೯.೩. ಲ್ಲಿ "ಆಚಾರ್ಯಾದ್ಧ್ಯೇವ ವಿದ್ಯಾ ವಿದಿತಾ ಸಾಧಿಷ್ಠಂ ಪ್ರಾಪತ್" ಎಂದು ಹೇಳಿರುವುದು. ಆಕಾರಣದಿಂದ ಆಚಾರ್ಯನೇ ಸಂಸಾರಮೋಚಕಪ್ರದನು. ಎಂದು ಹೇಳಿರುವುದು. ಆಚಾರ್ಯನೆಂದರೆ ವೇದಾಂತ ವಿಚಾರದಿಂದ ಸಂಪಾದಿಸಿದ ಆತ್ಮಜ್ಞಾನ

ಉತ್ತಮೋ ಬ್ರಾಹ್ಮಣಃ ಪ್ರೋಕ್ತೋ ಮಧ್ಯಮಃ ಕ್ಷತ್ರಿಯಸ್ತಥಾ ।
ಅಧಮೋ ವೈಶ್ಯ ಇತ್ಯುಕ್ತಃ ಸರ್ವಶಾಸ್ತ್ರಾರ್ಥವೇದಿಭಿಃ ॥೪॥

ಅಧಮೋಽಚ್ಯುತ ವೈಶ್ಯಸ್ಯ ಶೂದ್ರಸ್ಯಾಪಿ ಗುರುರ್ಭವೇತ್ ।
ಮಧ್ಯಮೋ ಮಧ್ಯಮಸ್ಯಾಪಿ ತಥಾ ವೈಶ್ಯಸ್ಯ ಕೇಶವ ॥೫॥

ಶೂದ್ರಸ್ಯಾಪಿ ಗುರುಃ ಪ್ರೋಕ್ತಃ ಶುಶ್ರೂಷೋರಾತ್ಮವೇದಿಭಿಃ ।
ಉತ್ತಮೋ ಬ್ರಾಹ್ಮಣಸ್ಯಾಪಿ ಕ್ಷತ್ರಿಯಸ್ಯ ತಥೈವಚ ॥೬॥

ವಿಶಾಂ ಶೂದ್ರಸ್ಯ ಶುಶ್ರೂಷೋಃ ಗುರುರಿತ್ಯುಚ್ಯತೇ ಮಯಾ ।
ಶೂದ್ರಾಣಾಂ ಚ ತಥಾ ಸ್ತ್ರೀಣಾಂ ಗುರುತ್ವಂ ನ ಕದಾಚನ ॥೭॥

ವುಳ್ಳವನೆಂದು ಅರ್ಥವು. ಗುರುಗಳು, ಉತ್ತಮ, ಮಧ್ಯಮ, ಅಧಮ ಎಂದು ಮೂರು ಬಗೆಯಾದವರಿರುವರು. ॥೨-೩॥

ಬ್ರಾಹ್ಮಣನೇ ಉತ್ತಮ ಗುರುವು. ಕ್ಷತ್ರಿಯನು ಮಧ್ಯಮನು, ವೈಶ್ಯನು ಅಧಮನು. ಎಂದು ಸಕಲ ಶಾಸ್ತ್ರಜ್ಞರೂ ಹೇಳುವರು. ॥೪॥

ಅಧಮ ಗುರುವು ವೈಶ್ಯನಿಗೂ, ಶೂದ್ರನಿಗೂ ಗುರುವಾಗಿರುವನು. ಮಧ್ಯಮ ಗುರುವು. ಕ್ಷತ್ರಿಯನಿಗೂ, ವೈಶ್ಯನಿಗೂ, ಶೂದ್ರನಿಗೂ, ಗುರುವಾಗಿರುವನು. ॥೫॥

ಉತ್ತಮ ಗುರುವು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಈ ನಾಲ್ಕು ವರ್ಣದವರಿಗೂ, ಗುರುವಾಗಿರುವನು. ಶೂದ್ರರಿಗೂ, ಸ್ತ್ರೀಯರಿಗೂ ಎಂದಿಗೂ ಗುರುತ್ವವಿಲ್ಲ. ॥೬-೭॥

ವೈಶ್ಯನಿಗೂ, ರಾಜನಿಗೂ, ಜ್ಞಾನೋತ್ಕರ್ಷದ ಬಲವಿದ್ದರೆ ಅವರ ವರ್ಣಕ್ಕಿಂತಲೂ, ಉತ್ತಮವರ್ಣದವರಿಗೆ ಅವರು ಗುರುವಾಗಬಹುದೆಂದು ಕೆಲವರು ಅಭಿಪ್ರಾಯಪಡುವರು. ಈ ವಿಷಯದಲ್ಲಿ ಬೃಹದಾರಣ್ಯಕೋಪನಿಷತ್ತಿನಲ್ಲಿ, ಬಾಲಾಕೀ ಎಂಬ ಬ್ರಾಹ್ಮಣನು ಕ್ಷತ್ರಿಯನಾದ ಅಜಾತಶತ್ರು ಎಂಬ ರಾಜನ ಸಮೀಪಕ್ಕೆ ಹೋದನೆಂದೂ ಮತ್ತು ಕೈಕೇಯರಾಜನಸಮೀಪಕ್ಕೆ ಪ್ರಾಚೀನಶಾಲನೇ ಮುಂತಾದ ಆರು ಜನ ಋಷಿಗಳು ವೈಶ್ವಾನರ ವಿದ್ಯೆಯನ್ನು ತಿಳಿಸುವುದಕ್ಕಾಗಿ ಹೋದರೆಂದೂ ಹೇಳಿರುವುದರಿಂದ ವಿದ್ಯೆಯಲ್ಲಿ ಉತ್ಕೃಷ್ಟನಾದ ಕ್ಷತ್ರಿಯನು ಬ್ರಾಹ್ಮಣನಿಗೆ ಗುರುವಾಗಬಹುದೆಂದು ಅವರ ಅಭಿಪ್ರಾಯವಿರುವುದು. "ಪ್ರತಿಲೋಮಂ ವೈತದ್ಯದ್ಬ್ರಾಹ್ಮಣಃ ಕ್ಷತ್ರಿಯ ಮುಪೇಯಾತ್" ಎಂಬ ವೇದವಚನವು ಬ್ರಾಹ್ಮಣನು ಕ್ಷತ್ರಿಯನನ್ನು

ವೈಶ್ಯಸ್ಯಾಪಿ ತಥಾ ರಾಜ್ಞೋ ವಿದ್ಯೋತ್ಕರ್ಷಬಲೇನ ಚ ।
ಗುರುತ್ವಂ ಕೇಚಿದಿಚ್ಛಂತಿ ಸ್ವೋತ್ತಮಂ ಪ್ರತಿ ಕೇಶವ ॥೮॥

ಉತ್ತಮಃ ಪಂಚಧಾ ಪ್ರೋಕ್ತೋ ಗುರುಬ್ರಹ್ಮಾತ್ಮವೇದಿಭಿಃ ।
ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥಶ್ಚ ಭಿಕ್ಷುಕಃ ॥೯॥

ಅತಿವರ್ಣಾಶ್ರಮೀ ಚೇತಿ ಕ್ರಮಾತ್ ಶ್ರೇಷ್ಠಾ ವಿಚಕ್ಷಣ ।
ಅಶ್ರೇಷ್ಠಾನಾಂ ಹರೇ ಶ್ರೇಷ್ಠಾ ಗುರವಃ ಪರಿಕೀರ್ತಿತಾಃ ॥೧೦॥

ಬ್ರಹ್ಮಚಾರೀ ಗೃಹಸ್ಥಸ್ಯ ವನಸ್ಥಸ್ಯ ಯತೇರಪಿ ।
ವಿದ್ಯೋತ್ಕರ್ಷ ಬಲೇನೈವ ಗುರುರ್ಭವತಿ ನಾನ್ಯಥಾ ॥೧೧॥

ಗೃಹಸ್ಥೋಽಪಿ ವನಸ್ಥಸ್ಯ ಯತೇರಪ್ಯಂಬುಜೇಕ್ಷಣ ।
ವಿದ್ಯೋತ್ಕರ್ಷಬಲೇನೈವ ಗುರುರ್ಭವತಿ ನಾನ್ಯಥಾ ॥೧೨॥

ಗುರುವನ್ನಾಗಿ ಮಾಡಿಕೊಳ್ಳುವುದು ಪ್ರತಿಲೋಮವೆಂದು ನಿಂದಿಸಿರುವುದರಿಂದಲೂ, ಕ್ಷತ್ರಿಯನಾದ ಅಜಾತಶತ್ರುವು ಗುರುತ್ವವನ್ನು ಒಪ್ಪಿಕೊಂಡು ಗಾರ್ಗ್ಯನನ್ನು ಕುರಿತು ವಿಜ್ಞಾಪಿಸುವೆನೆಂದು ಹೇಳಿರುವುದರಿಂದಲೂ, ಕೈಕೇಯ ರಾಜನು ಪ್ರಾಚೀನ ಶಾಲಾದಿಗಳನ್ನು ಕುರಿತು "ತಾನ್ಹಾನುಪನೀಯೈವೈತದುವಾಚ" ಎಂದು ಗುರೂಪಸದನರೂಪ ಕರ್ಮವಿಲ್ಲದೇ ವೈಶ್ವಾನರ ವಿದ್ಯೆಯನ್ನು ಹೇಳಿರುವುದರಿಂದಲೂ, ಉತ್ತಮ ವರ್ಣದವರು ಹೇಳಿದರೂ ಕ್ಷತ್ರಿಯಾದಿಗಳು ಗುರುತ್ವವನ್ನು ಅಂಗೀಕರಿಸಕೂಡದೆಂದು ಮತ್ತೆ ಕೆಲವರು ಹೇಳುವರು. ॥೮॥

ಉತ್ತಮಗುರುಗಳಲ್ಲಿ, ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ, ಅತಿವರ್ಣಾಶ್ರಮಿಯೆಂದು ಐದು ಬಗೆಯಿರುವುದು. ಕ್ರಮವಾಗಿ ಇವರಲ್ಲಿ ಒಬ್ಬರಿಗಿಂತ ಮತ್ತೊಬ್ಬರು ಶ್ರೇಷ್ಠರೆನಿಸುವರು. ॥೯॥

ಅಶ್ರೇಷ್ಠರಾದವರೂ, ವಿದ್ಯಾಬಲದಿಂದ ಶ್ರೇಷ್ಠಗುರುವೆನಿಸುವರು. ಹೇಗೆಂದರೆ ವಿದ್ಯಾಬಲವುಳ್ಳ ಬ್ರಹ್ಮಚಾರಿಯು ಗೃಹಸ್ಥ, ವಾನಪ್ರಸ್ಥ, ಸನ್ಯಾಸಿಗಳಿಗೂ ಗುರುವಾಗುವನು. ॥೧೦-೧೧॥

ಗೃಹಸ್ಥನೂ ಕೂಡ ವಿದ್ಯಾಬಲದಿಂದ ವಾನಪ್ರಸ್ಥನಿಗೂ, ಯತಿಗೂ ಗುರುವಾಗುವನು. ॥೧೨॥

ವಾನಪ್ರಸ್ಥಾಶ್ರಮಸ್ಥೋಽಪಿ ತಥಾ ಸಂನ್ಯಾಸಿನಾಂ ಹರೇ ।
ವಿದ್ಯೋತ್ಕರ್ಷಬಲೇನೈವ ಗುರುರ್ಭವತಿ ನಾನ್ಯಥಾ ॥೧೩॥

ಅತಿವರ್ಣಾಶ್ರಮೀ ಪ್ರೋಕ್ತೋ ಗುರುಃ ಸರ್ವಾಧಿಕಾರಿಣಾಂ ।
ನ ಕಸ್ಯಾಪಿ ಭವೇಚ್ಛಿಷ್ಯೋ ಯಥಾಽಹಂ ಪುರುಷೋತ್ತಮ ॥೧೪॥

ಅತಿವರ್ಣಾಶ್ರಮೀ ಸಾಕ್ಷಾದ್ಗುರೂಣಾಂ ಗುರುರುಚ್ಯತೇ ।
ತತ್ಸಮೋ ನಾಧಿಕಶ್ಚಾಸ್ಮಿಂಲ್ಲೋಕೇಽಸ್ತ್ಯೇವ ನ ಸಂಶಯಃ ॥೧೫॥

ಯಃ ಶರೀರೇಂದ್ರಿಯಾದಿಭ್ಯೋ ವಿಭಿನ್ನಂ ಸರ್ವಸಾಕ್ಷಿಣಂ ।
ಪಾರಮಾರ್ಥಿಕವಿಜ್ಞಾನ ಸುಖಾತ್ಮಾನಂ ಸ್ವಯಂಪ್ರಭಂ ॥೧೬॥

ಪರತತ್ವಂ ವಿಜಾನಾತಿ ಸೋಽಪಿ ವರ್ಣಾಶ್ರಮೀ ಭವೇತ್ ।
ಯೋ ವೇದಾಂತ ಮಹಾವಾಕ್ಯ ಶ್ರವಣೇನೈವ ಕೇಶವ ॥೧೭॥
ಆತ್ಮಾನ ಮೀಶ್ವರಂ ವೇದ ಸೋಽತಿ ವರ್ಣಾಶ್ರಮೀ ಭವೇತ್ ।

ವಾನಪ್ರಸ್ಥಾಶ್ರಮಿಯೂ ಕೂಡ ವಿದ್ಯಾಬಲದಿಂದ ಸಂನ್ಯಾಸಿಗೆ ಗುರುವಾಗುವನು. ॥೧೩॥

ಸಮಸ್ತರಿಗೂ ಅತಿವರ್ಣಾಶ್ರಮಿಯೇ ಗುರುವು. ಅವನು ನಿರತಿಶಯವಾದ ಜ್ಞಾನೋತ್ಕರ್ಷವುಳ್ಳವನಾದುದರಿಂದ ಯಾರಿಗೂ ಶಿಷ್ಯನಾಗಲಾರನು. ನಾನು ಹೇಗೆ ದೇವೋತ್ತಮನೋ ಹಾಗೆ ಅತಿವರ್ಣಾಶ್ರಮಿಯು ಗುರುಗಳಿಗೆಲ್ಲರಿಗೂ ಗುರುವು. ಅವನಿಗೆ ಸಮನಾದವರಾಗಲಿ, ಹೆಚ್ಚಾದವರಾಗಲಿ, ಲೋಕದಲ್ಲಿ ಯಾರೂ ಇಲ್ಲವೇ ಇಲ್ಲ. ಈ ವಿಷಯದಲ್ಲಿ ಸಂದೇಹವಿಲ್ಲ. ॥೧೪-೧೫॥

ಯಾವನು ಶರೀರೇಂದ್ರಿಯಾದಿಗಳಿಗಿಂತ ಬೇರೆಯಾದವನೂ, ಸಮಸ್ತಕ್ಕೂ ಸಾಕ್ಷಿಸ್ವರೂಪನೂ, ಪರಮಾರ್ಥವಾದ ವಿಜ್ಞಾನಸ್ವರೂಪನೂ, ಸುಖಸ್ವರೂಪನೂ, ಸ್ವಪ್ರಕಾಶಸ್ವರೂಪನೂ, ಶ್ರೇಷ್ಠವಾದ ತತ್ವಸ್ವರೂಪನೂ, ಆದ ಪರಬ್ರಹ್ಮನನ್ನು ಸಾಕ್ಷಾತ್ಕಾರಮಾಡಿಕೊಂಡಿರುವನೋ ಅವನೇ ಅತಿವರ್ಣಾಶ್ರಮಿಯು. ಇಂತಹವನು ಲೋಕಸಂಗ್ರಹಕ್ಕಾಗಿ ವರ್ಣಾಶ್ರಮಧರ್ಮಗಳನ್ನು ಆಚರಿಸಿದರೂ, ಆಚರಿಸದಿದ್ದರೂ ಸರ್ವೋತ್ತಮನಾದುದರಿಂದ ಅವನು ಗುರುವೇ ಆಗಿರುವನು. ॥೧೬॥

ಎಲೈ ವಿಷ್ಣುವೇ, ಯಾವನು ವೇದಾಂತದ ಮಹಾವಾಕ್ಯಶ್ರವಣದಿಂದಲೇ ತನ್ನನ್ನು ಈಶ್ವರಸ್ವರೂಪನೆಂದು ತಿಳಿವನೋ ಅವನೇ ಅತಿವರ್ಣಾಶ್ರಮಿಯು.

ಯೋಽವಸ್ಥಾತ್ರಯ ನಿರ್ಮುಕ್ತ ಮವಸ್ಥಾತ್ರಯಸಾಕ್ಷಿಣಂ ॥೧೮॥

ಮಹಾದೇವಂ ವಿಜಾನಾತಿ ಸೋಽತಿವರ್ಣಾಶ್ರಮೀ ಭವೇತ್ ।
ವರ್ಣಾಶ್ರಮಾದಯೋ ದೇಹೇ ಮಾಯಯಾ ಪರಿಕಲ್ಪಿತಾಃ ॥೧೯॥

ನಾತ್ಮನೋ ಬೋಧರೂಪಸ್ಯ ಮಮ ತೇ ಸಂತಿ ಸರ್ವದಾ ।
ಇತಿ ಯೋ ವೇದ ವೇದಾಂತೈಃ ಸೋಽತಿವರ್ಣಾಶ್ರಮೀ ಭವೇತ್ ॥೨೦॥

ಆದಿತ್ಯಸನ್ನಿಧೌ ಲೋಕಶ್ಚೇಷ್ಟತೇ ಸ್ವಯಮೇವ ತು ।
ತಥಾ ಮತ್ಸನ್ನಿಧಾವೇವ ಚೇಷ್ಟತೇ ಸಕಲಂ ಜಗತ್ ॥೨೧॥

ಇತಿ ಯೋ ವೇದ ವೇದಾಂತೈಃ ಸೋಽತಿವರ್ಣಾಶ್ರಮೀ ಭವೇತ್ ।
ಸುವರ್ಣೇ ಹಾರಕೇಯೂರ ಕಟಕ ಸ್ವಸ್ತಿಕಾದಯಃ ॥೨೨॥

ಕಲ್ಪಿತಾ ಮಾಯಯಾ ತದ್ವಜ್ಜಗನ್ಮಯ್ಯೇವ ಸರ್ವದಾ ।
ಇತಿ ಯೋ ವೇದ ವೇದಾಂತೈಃ ಸೋಽತಿವರ್ಣಾಶ್ರಮೀ ಭವೇತ್ ॥೨೩॥

ಯಾವನು ಜಾಗ್ರದಾದಿ ಮೂರು ಅವಸ್ಥೆಗಳಿಲ್ಲದವನೂ, ಆ ಮೂರು ಅವಸ್ಥೆಗಳಿಗೂ ಸಾಕ್ಷಿಸ್ವರೂಪನೂ, ಎಲ್ಲ ದೇವತೆಗಳಿಗಿಂತ ದೊಡ್ಡ ದೇವನೂ ಆದ ಮಹಾದೇವನನ್ನು ತಿಳಿದವನೋ ಅವನೇ ಅತಿವರ್ಣಾಶ್ರಮಿಯು. ॥೧೭-೧೮॥

ವರ್ಣಗಳೂ, ಆಶ್ರಮಗಳೂ, ದೇಹದಲ್ಲಿ ಮಾಯೆಯಿಂದ ಕಲ್ಪಿತವಾದವುಗಳು. ಜ್ಞಾನಸ್ವರೂಪನೂ ಆತ್ಮಸ್ವರೂಪನೂ ಆದ ನನಗೆ ಅವುಗಳಿಲ್ಲ. ಎಂಬು ವೇದಾಂತ ದಿಂದ ಯಾವನು ತಿಳಿದಿರುವನೋ ಅವನು ಅತಿವರ್ಣಾಶ್ರಮಿಯಾಗುವನು.॥೧೯-೨೦॥

ಸೂರ್ಯೋದಯವಾದರೆ ಪ್ರಾಣಿಗಳೆಲ್ಲವೂ ತಮ್ಮಷ್ಟಕ್ಕೆ ತಾವೇ ಕೆಲಸಮಾಡುತ್ತವೆ. ಸೂರ್ಯನು ಕೆಲಸ ಮಾಡಿಸುವುದಿಲ್ಲ. ಅದರಂತೆಯೇ ಈಶ್ವರನಾದ ನನ್ನಲ್ಲಿ ಕಲ್ಪಿತವಾದ ಸಮಸ್ತ ಪ್ರಪಂಚವೂ ನನ್ನ ಸನ್ನಿಧಾನದಲ್ಲಿಯೇ ಕೆಲಸವನ್ನು ಮಾಡುತ್ತಿರುವುದು. ಹೀಗೆಂದು ವೇದಾಂತವಾಕ್ಯಗಳಿಂದ ಯಾವನು ತಿಳಿಯುತ್ತಾನೆಯೋ ಅವನು ಅತಿವರ್ಣಾಶ್ರಮಿಯಾಗುವನು. ॥೨೧॥

ಚಿನ್ನದಲ್ಲಿಯೇ ಹಾರ, ಕೇಯೂರ, ಕಟಕ ಮುಂತಾದ ಆಭರಣಗಳು ನಾಮ ರೂಪಗಳಿಂದ ಕಲ್ಪಿತವಾಗಿರುವಂತೆ ಜಗತ್ತು ನನ್ನಲ್ಲಿಯೇ ಮಾಯೆಯಿಂದ ಕಲ್ಪಿತ ವಾಗಿರುವುದು. ಎಂದು ವೇದಾಂತಗಳಿಂದ ಯಾವನು ತಿಳಿವನೋ ಅವನು ಅತಿ ವರ್ಣಾಶ್ರಮಿಯು. ॥೨೨-೨೩॥

ಶುಕ್ತಿಕಾಯಾಂ ಯಥಾ ತಾರಂ ಕಲ್ಪಿತಂ ಮಾಯಯಾ ತಥಾ ।
ಮಹದಾದಿ ಜಗನ್ಮಾಯಾ ಮಯಂ ಮಯ್ಯೇವ ಕಲ್ಪಿತಂ ॥೨೪॥

ಇತಿ ಯೋ ವೇದ ವೇದಾಂತೈಃ ಸೋಽತಿವರ್ಣಾಶ್ರಮೀ ಭವೇತ್ ।
ಚಂಡಾಲದೇಹೇ ಪಶ್ವಾದಿ ಶರೀರೇ ಬ್ರಹ್ಮವಿಗ್ರಹೇ ॥೨೫॥

ಅನ್ಯೇಷು ತಾರತಮ್ಯೇನ ಸ್ಥಿತೇಷು ಪುರುಷೋತ್ತಮ ।
ವ್ಯೋಮವತ್ಸರ್ವದಾ ವ್ಯಾಪ್ತಃ ಸರ್ವಸಂಬಂಧವರ್ಜಿತಃ ॥೨೬॥

ಏಕರೂಪೋ ಮಹಾದೇವಃ ಸ್ಥಿತಃ ಸೋಽಹಂ ಪರಾಮೃತಃ ।
ಇತಿ ಯೋ ವೇದ ವೇದಾಂತೈಃ ಸೋಽತಿವರ್ಣಾಶ್ರಮೀ ಭವೇತ್ ॥೨೭॥

ವಿನಷ್ಟದಿಗ್ಭ್ರಮಸ್ಯಾಪಿ ಯಥಾಪೂರ್ವಂ ವಿಭಾತಿ ದಿಕ್ ।
ತಥಾ ವಿಜ್ಞಾನವಿಧ್ವಸ್ತಂ ಜಗನ್ಮೇ ಭಾತಿ ತನ್ನಹಿ ॥೨೮॥

ಕಪ್ಪೆಯ ಚಿಪ್ಪಿನಲ್ಲಿ ಬೆಳ್ಳಿಯು ಹೇಗೆ ಮಾಯೆಯಿಂದ ಕಲ್ಪಿತವಾದುದೋ ಹಾಗೆ ಮಹತ್ತತ್ವವೇ ಮೊದಲಾದ ಮಾಯಮಯವಾದ ಜಗತ್ತು ನನ್ನಲ್ಲಿಯೇ ಕಲ್ಪಿತವಾಗಿರುವುದೆಂದು ವೇದಾಂತವಾಕ್ಯಗಳಿಂದ ಯಾವನು ತಿಳಿವನೋ ಅವನು ಅತಿವರ್ಣಾಶ್ರಮಿ ಎನಿಸುವನು. ॥೨೪॥

ಚಂಡಾಲ, ಪಶು, ಬ್ರಾಹ್ಮಣ ಮುಂತಾದ ಶರೀರಗಳ ತಾರತಮ್ಯವಿದ್ದರೂ, ಅವುಗಳಲ್ಲೆಲ್ಲಾ ಆಕಾಶದಂತೆ ಯಾವಾಗಲೂ ವ್ಯಾಪಿಸಿಕೊಂಡಿರುವ, ಯಾವುದರ ಸಂಬಂಧವನ್ನೂ ಹೊಂದದ ಏಕರೂಪನಾದ ಮಹಾದೇವನೇ ಇರುವನು. ಶ್ರೇಷ್ಠನಾದ ಮರಣಧರ್ಮವಿಲ್ಲದ ಅವನೇ ನಾನು ಎಂದು ವೇದಾಂತವಾಕ್ಯಗಳಿಂದ ಯಾವನು ತಿಳಿಯುವನೋ ಅವನೇ ಅತಿವರ್ಣಾಶ್ರಮಿ ಎನಿಸುವನು. ॥೨೫-೨೬-೨೭॥

ಅತಿವರ್ಣಾಶ್ರಮಿಯಾದ ಮನುಜನಿಗೆ ತತ್ವಜ್ಞಾನದಿಂದ ಕಾರ್ಯಕಾರಣ ಸಹಿತವಾದ ಅಜ್ಞಾನವು ಇಲ್ಲದಿರುವಾಗ ಅವನಿಗೆ ಸಮಸ್ತ ಪ್ರಪಂಚವೂ ಆತ್ಮಸ್ವರೂಪವಾಗಿ ಕಾಣುವುದರಿಂದ ಶಿಷ್ಯನೇ ಇಲ್ಲದಿರುವಾಗ ಗುರುತ್ವವು ಹೇಗೆ ಬರುವುದು ? ಶಿಷ್ಯನಿದ್ದಲ್ಲಿ ದ್ವೈತಕಾರಣವಾದ ಅಜ್ಞಾನವನ್ನು ಅನುಭವಿಸುತ್ತಿರಲು ಅವನು ಹೇಗೆ ಜ್ಞಾನಿಯಾಗುವನು. ಎಂದರೆ ಅಜ್ಞಾನಕ್ಕೆ ಮೂರು ಅವಸ್ಥೆಗಳಿರುವುವು. ಒಂದು ಸಮಸ್ತ ದೃಶ್ಯಪದಾರ್ಥಗಳೂ ಸತ್ಯವಾದುವು. ಎಂಬ ಅಭಿಮಾನಕಾರಣವು. ಇದು

ಇತಿ ಯೋ ವೇದ ವೇದಾಂತೈಃ ಸೋಽಪಿ ವರ್ಣಾಶ್ರಮೀ ಭವೇತ್ ।
ಯಥಾ ಸ್ವಪ್ನಪ್ರಪಂಚೋಽಯಂ ಮಯಿ ಮಾಯಾವಿಜೃಂಭಿತಂ ॥೨೯॥

ತಥಾ ಜಾಗ್ರತ್ಪ್ರಪಂಚೋಽಪಿ ಪರಮಾಯಾ ವಿಜೃಂಭಿತಃ ।
ಇತಿ ಯೋ ವೇದ ವೇದಾಂತೈಃ ಸೋಽತಿವರ್ಣಾಶ್ರಮೀ ಭವೇತ್ ॥೩೦॥

ಯುಕ್ತಿಯಿಂದಲೂ, ಶಾಸ್ತ್ರಜನ್ಯವಾದ ವಿವೇಕದಿಂದಲೂ ನಿವೃತ್ತಿಯಾಗುವುದು. ಅದು ನಿವೃತ್ತಿಯಾದರೂ ಮೊದಲಿನಂತೆ ಆಸಕ್ತಿಯಿಂದ ವ್ಯವಹಾರವನ್ನು ನಡೆಸುತ್ತಲೇ ಇರುವುದು ಎರಡನೆಯದು. ಅದು ತತ್ವಸಾಕ್ಷಾತ್ಕಾರದಿಂದ ನಿವೃತ್ತಿಯಾಗುವುದು. ಇದು ನಿವೃತ್ತಿಯಾದರೂ ಸಂಸ್ಕಾರರೂಪದಿಂದ ದೇಹಾಭಾಸವೂ, ಜಗದವಭಾಸವೂ ಇರುವುದು. ಇದೇ ಮೂರನೆಯ ಅವಸ್ಥೆಯು. ಇದನ್ನೇ ಬಾಧಿತಾನುವೃತ್ತಿ ಎನ್ನುವರು. ಇದು ಕೊನೆಯ ಸಾಕ್ಷಾತ್ಕಾರದಿಂದ ನಿವೃತ್ತಿಯಾಗುವುದು.

"ತಸ್ಯಾಭಿಧ್ಯಾನಾದ್ಯೋಜನಾತ್ತತ್ವಭಾವಾದ್ಭೂಯಶ್ಚಾಂತೇ ವಿಶ್ವಮಾಯಾನಿವೃತ್ತಿಃ" ಎಂದು ಶ್ವೇತಾಶ್ವತರ ಉಪನಿಷತ್ತಿನಲ್ಲಿ ಈ ಮೂರು ಅವಸ್ಥೆಗಳನ್ನೂ ಕ್ರಮವಾಗಿ ವಿವರಿಸಿರುವುದು. ಇಲ್ಲಿ ಈ ಮೂರನೆಯ ಅವಸ್ಥೆಯಲ್ಲಿರುವ ಮನುಜನೇ ಅತಿವರ್ಣಾಶ್ರಮಿಯಾದುದರಿಂದ ಅವನಿಗೆ ಶಿಷ್ಯಾದಿಗಳು ಇರುವುದರಿಂದ ಉಪದೇಶಾದಿಗಳು ಸಂಭವಿಸುವುವು. ಎಂದು ಈ ಶ್ಲೋಕದಲ್ಲಿ ದೃಷ್ಟಾಂತಪೂರ್ವಕವಾಗಿ ಹೇಳಿರುವುದು. ರಾತ್ರಿಕಾಲದಲ್ಲಿ ಒಬ್ಬನಿಗೆ ದಾರಿತಪ್ಪಿ ದಿಕ್ಕು ಯಾವುದೆಂದು ತಿಳಿಯದಿರುವಾಗ ಗ್ರಹಗಳೂ, ನಕ್ಷತ್ರಗಳೂ ಇವುಗಳನ್ನು ನೋಡುವುದರಿಂದ ದಿಕ್ಕಿನ ಭ್ರಾಂತಿಯು ಹೊರಟುಹೋದರೂ ಸಂಸ್ಕಾರರೂಪವಾಗಿ ಹೇಗೆ ಇರುವುದೋ, ಹಾಗೆ ಸಂಸ್ಕಾರಮಾತ್ರದಿಂದ ಬಾಧಿತಾನುವೃತ್ತಿರೂಪವಾಗಿ ಶಿಷ್ಯಾದಿ ಭಾವನೆಯೂ ದ್ವೈತಾವಭಾಸವೂ ಇರುವುದು. ಯುಕ್ತಿ ಮತ್ತು ಶಾಸ್ತ್ರಾನುಭವಗಳಿಂದುಂಟಾದ ವಿಜ್ಞಾನದಿಂದ ಜಗತ್ತು ಭಾಸಿಸುತ್ತಿದ್ದರೂ, ಅದು ನಿಜವಾಗಿ ಇಲ್ಲ. ಎಂದು ಯಾವನು ತಿಳಿದಿರುವನೋ ಅವನು ಅತಿವರ್ಣಾಶ್ರಮಿಯು. ||೨೮||

ಹಿಂದೆ ಬಾಧಿತಾನುವೃತ್ತಿಯನ್ನು ಹೇಳಿತಷ್ಟೆ? ಬಾಧಿತವಾದುದು ಅನುವೃತ್ತಿಯಾಗುವುದು ಹೇಗೆ? ಅನುವೃತ್ತಿಯಾದಮೇಲೆ ಬಾಧೆಯು ಹೇಗೆ? ಅಭಾವಜ್ಞಾನವೇ ಬಾಧೆ ಎನಿಸುವುದು. ಭಾವದೊಡನೆ ಅಭಾವವು ಕಾಣುವುದಿಲ್ಲವಲ್ಲ. ಎಂದರೆ ಈ ಶ್ಲೋಕದಲ್ಲಿ ದೃಷ್ಟಾಂತಪೂರ್ವಕವಾಗಿ ಅದನ್ನು ವಿವರಿಸಿರುವುದು. ಸ್ವಪ್ನದಲ್ಲಿ ಅನೇಕ ವಿಷಯಗಳನ್ನು ಕಂಡು, ಎಚ್ಚರವಾದಮೇಲೆ, ಅದು ನಿಜವಲ್ಲ

ಯಸ್ಯ ವರ್ಣಾಶ್ರಮಾಚಾರೋ ಗಲಿತಃ ಸ್ವಾತ್ಮದರ್ಶನಾತ್ ।
ಸ ವರ್ಣಾನಾಶ್ರಮಾನ್ ಸರ್ವಾನತೀತ್ಯ ಸ್ವಾತ್ಮನಿ ಸ್ಥಿತಃ ॥೩೧॥

ಯೋಽತೀತ್ಯ ಸ್ವಾಶ್ರಮಾನ್ ವರ್ಣಾನಾತ್ಮನ್ಯೇವ ಸ್ಥಿತಃ ಪುಮಾನ್ ।
ಸೋಽತಿ ವರ್ಣಾಶ್ರಮೀ ಪ್ರೋಕ್ತಃ ಸರ್ವವೇದಾಂತವೇದಿಭಿಃ ॥೩೨॥

ನ ದೇಹೋ ನೇಂದ್ರಿಯಂ ಪ್ರಾಣೋ ನ ಮನೋ ಬುದ್ಧ್ಯಹಂಕೃತಿಃ ।
ನ ಚಿತ್ತಂ ನೈವ ಮಾಯಾ ಚ ನ ಚ ವ್ಯೋಮಾದಿಕಂ ಜಗತ್ ॥೩೩॥

ನ ಕರ್ತಾ ನೈವ ಭೋಕ್ತಾ ಚ ನ ಚ ಭೋಜಯಿತಾ ತಥಾ ।
ಕೇವಲಂ ಚಿತ್ಸದಾನಂದಂ ಬ್ರಹ್ಮೈವಾತ್ಮಾ ಯಥಾರ್ಥತಃ ॥೩೪॥

ವೆಂದು ತಿಳಿದಿದ್ದರೂ ಜ್ಞಾಪಕಶಕ್ತಿಯಿಂದ ಜ್ಞಾನವಿಷಯವಾಗುವುದು. ಸ್ವಪ್ನ ಪ್ರಪಂಚವು ನನ್ನಲ್ಲಿ ಮಾಯೆಯಿಂದ ಹೇಗೆ ಗೋಚರಿಸುವುದೋ ಹಾಗೆ ಜಾಗ್ರತ್ಪ್ರಪಂಚವು ಈಶ್ವರನ ಮಾಯಾಕಾರ್ಯವೆಂದು ವೇದಾಂತವಾಕ್ಯಗಳಿಂದ ಯಾವನು ತಿಳಿಯುವನೋ ಅವನೇ ಅತಿವರ್ಣಾಶ್ರಮಿಯು. ||೨೯-೩೦||

ಆತ್ಮದರ್ಶನರೂಪವಾದ ತತ್ವಸಾಕ್ಷಾತ್ಕಾರದಿಂದ ದೇಹಾಭಿಮಾನವು ಹೊರಟು ಹೋಗಿ, ಅದನ್ನನುಸರಿಸಿದ ವರ್ಣಾಶ್ರಮಾಚಾರಗಳೂ ಗಳಿತವಾಗಿ, ಸಮಸ್ತವರ್ಣಗಳನ್ನೂ, ಆಶ್ರಮಗಳನ್ನೂ, ಅತಿಕ್ರಮಿಸಿ, ಸ್ವಸ್ವರೂಪವಾದ ಆತ್ಮನಲ್ಲಿಯೇ ಸ್ಥಿರವಾಗಿ ನೆಲಸಿದ ಮನುಷ್ಯನೇ ಅತಿವರ್ಣಾಶ್ರಮಿಯೆಂದು ಸಮಸ್ತ ವೇದಾಂತಶಾಸ್ತ್ರಜ್ಞರೂ ಹೇಳುವರು. ಪ್ರಮಾದಾಲಸ್ಯದೋಷಗಳಿಂದ ವರ್ಣಾಶ್ರಮಾಚಾರಗಳನ್ನು ಬಿಟ್ಟವನು ನಾಸ್ತಿಕನಾಗುವನು. ಇವನು ಹೀಗಲ್ಲವು. ಮಹೇಶ್ವರಾನುಗ್ರಹವನ್ನು ಪಡೆದು ದೇಹಾದ್ಯಭಿಮಾನವಿಲ್ಲದೇ ವರ್ಣಾಶ್ರಮಾಚಾರಗಳು ತನಗೆ ತಾನೇ ಇವನಲ್ಲಿ ಬಿಟ್ಟುಹೋಗಿರುವುವು. ||೩೧-೩೨||

ಅತಿವರ್ಣಾಶ್ರಮಿಯು ನಾನು ದೇಹವಲ್ಲ, ಇಂದ್ರಿಯವಲ್ಲ, ಪ್ರಾಣವೂ, ಮನಸ್ಸೂ, ಬುದ್ಧಿಯೂ, ಅಹಂಕಾರವೂ, ಚಿತ್ತವೂ, ನಾನಲ್ಲ. ಪ್ರಕೃತಿಯು, ಆಕಾಶಾದಿ ಪಂಚಭೂತಗಳೂ, ಪ್ರಪಂಚವೂ ನಾನಲ್ಲ. ಕರ್ತೃವೂ, ಭೋಕ್ತೃವೂ, ಸುಖವನ್ನು ಕೊಡತಕ್ಕವನೂ ನಾನಲ್ಲ. ಜ್ಞಾನಾನಂದೈಕರಸಸ್ವರೂಪನಾದ ಆತ್ಮನೇ ನಾನು. ನಿಜವಾದ ಪರಬ್ರಹ್ಮಸ್ವರೂಪನು ನಾನು. ಎಂದು ತಿಳಿದಿರುವನು. ||೩೩-೩೪||

ಜಲಸ್ಯ ಚಲನಾದೇವ ಚಂಚಲತ್ವಂ ಯಥಾ ರವೇಃ ।
ತಥಾಽಹಂಕಾರ ಸಂಬಂಧಾ ದೇವ ಸಂಸಾರ ಆತ್ಮನಃ ॥೩೫॥

ತಸ್ಮಾದನ್ಯ ಗತಾ ವರ್ಣಾ ಆಶ್ರಮಾ ಅಪಿ ಕೇಶವ ।
ಆತ್ಮನ್ಯಾರೋಪಿತಾ ಏವ ಭ್ರಾಂತ್ಯಾ ತೇನಾತ್ಮವೇದಿನಃ ॥೩೬॥

ನ ವಿಧಿರ್ನ ನಿಷೇಧಶ್ಚ ನ ವರ್ಜ್ಯಾ ವರ್ಜ್ಯಕಲ್ಪನಾ ।
ಆತ್ಮವಿಜ್ಞಾನಿನಾಮಸ್ತಿ ತಥಾ ನಾನ್ಯಜ್ಜನಾರ್ದನ ॥೩೭॥

ಆತ್ಮವಿಜ್ಞಾನಿನೋ ನಿಷ್ಠಾಮೀಶ್ವರೀ ಮಂಬುಜೇಕ್ಷಣ ।
ಮಾಯಯಾ ಮೋಹಿತಾ ಮರ್ತ್ಯಾ ನೈವ ಜಾನಂತಿ ಸರ್ವದಾ ॥೩೮॥

ನ ಮಾಂಸ ಚಕ್ಷುಷಾ ನಿಷ್ಠಾ ಬ್ರಹ್ಮವಿಜ್ಞಾನಿನಾಮಯಂ ।
ದ್ರಷ್ಟುಂ ಶಕ್ಯಾ ಸ್ವತಃ ಸಿದ್ಧಾ ವಿದುಷಃ ಸೈವ ಕೇಶವ ॥೩೯॥

ಎಲೈ ವಿಷ್ಣುವೇ, ನೀರಿನ ಚಲನೆಯಿಂದ ಅದರಲ್ಲಿ ಪ್ರತಿಬಿಂಬಿಸಿರುವ ಸೂರ್ಯನು ಚಲಿಸುತ್ತಿರುವನೆಂದು ತಿಳಿಯುವಂತೆ, ಆತ್ಮನಿಗೆ ಅಹಂಕಾರಸಂಬಂಧದಿಂದ ಸಂಸಾರ ವುಂಟಾಗಿರುವುದು. ಆದುದರಿಂದ ಶರೀರಗತವಾದ ವರ್ಣಗಳೂ, ಆಶ್ರಮಗಳೂ, ಭ್ರಾಂತಿಯಿಂದ ಆತ್ಮನಲ್ಲಿ ಆರೋಪಿತವಾಗಿರುವುವು. ಆತ್ಮಜ್ಞಾನಿಗೆ ವರ್ಣಾಶ್ರಮ ಗಳಿಲ್ಲ. ॥೩೫-೩೬॥

ಆತ್ಮಜ್ಞಾನಿಯಾದವನಿಗೆ ವಿಧಿನಿಷೇಧಗಳಾಗಲೀ, ವರ್ಜ್ಯ, ಅವರ್ಜ್ಯಗಳೆಂಬ ಕಲ್ಪನೆಯಾಗಲಿ, ಹಾಗೆಯೇ ಇತರ ಲೋಕವ್ಯವಹಾರವಾಗಲಿ, ಇರುವುದಿಲ್ಲ. ॥೩೭॥

ಕಮಲಾಕ್ಷನಾದ ವಿಷ್ಣುವೇ, ಆತ್ಮಜ್ಞಾನಿಯ ಈಶ್ವರಸ್ವರೂಪವಾದ ಆತ್ಮನಿಷ್ಠೆ ಯನ್ನು ಮಾಯೆಯಿಂದ ಮೋಹಿತರಾದ ಜನರು ಯಾವಾಗಲೂ ತಿಳಿಯಲಾರರು. ॥೩೮॥

ಬ್ರಹ್ಮವಿಜ್ಞಾನಿಗಳಿಗೆ ಸ್ವಾಭಾವಿಕವಾದ ಈ ಆತ್ಮನಿಷ್ಠೆಯನ್ನು ಮಾಂಸಮಯ ವಾದ ಕಣ್ಣಿನಿಂದ ನೋಡಲುಸಾಧ್ಯವಿಲ್ಲ. ಅದು ವಿದ್ವಾಂಸನಿಗೆ ಸ್ವಾನುಭವೈಕವೇದ್ಯ ವಾಗಿರುವುದು. ॥೩೯॥

ಯತ್ರ ಸುಪ್ತಾ ಜನಾ ನಿತ್ಯಂ ಪ್ರಬುದ್ಧ ಸ್ತತ್ರ ಸಂಯಮೀ ।
ಪ್ರಬುದ್ಧಾ ಯತ್ರ ತೇ ವಿದ್ವಾನ್ಸುಷುಪ್ತಸ್ತತ್ರ ಕೇಶವ ॥೪೦॥

ಏವಮಾತ್ಮಾನಮದ್ವಂದ್ವಂ ನಿರ್ವಿಕಲ್ಪಂ ನಿರಂಜನಂ ।
ನಿತ್ಯಂ ಶುದ್ಧಂ ನಿರಾಭಾಸಂ ಸಂವಿನ್ಮಾತ್ರಂ ಪರಾಮೃತಂ ॥೪೧॥

ಯೋ ವಿಜಾನಾತಿ ವೇದಾಂತೈಃ ಸ್ವಾನುಭೂತ್ಯಾ ಚ ನಿಶ್ಚಿತಂ ।
ಸೋಽತಿವರ್ಣಾಶ್ರಮೀ ನಾಮ್ನಾ ಸ ಏವ ಗುರುರುತ್ತಮಃ ॥೪೨॥

ಸ ಏವ ವೇದವಿತ್ತಮಃ ಸ ಏವ ಮೋಚಕಪ್ರದಃ ।
ಸ ಏವ ಸರ್ವಮೋಚಕಃ ಸ ಏವ ಸರ್ವಕಾರಣಂ ॥೪೩॥

ಸ ಏವ ಸತ್ಯಚಿದ್ಘನಃ ಸ ಏವ ಮುಕ್ತಿರುತ್ತಮಾ ।
ಸ ಏವ ಸರ್ವಮುಕ್ತಿದಃ ಸ ಏವ ಸರ್ವಮಚ್ಯುತ ॥೪೪॥

ತತ್ವಸ್ವರೂಪವನ್ನು ತಿಳಿಯುವ ವಿಷಯದಲ್ಲಿ ಜನರು ಯಾವಾಗಲೂ ನಿದ್ರೆಮಾಡುತ್ತಿರುವರು. ಯೋಗಿಯು ಆ ಸಂದರ್ಭದಲ್ಲಿ ಎಚ್ಚರವಾಗಿರುವನು. ಪ್ರಪಂಚ ವ್ಯವಹಾರದಲ್ಲಿ ಜನರು ಎಚ್ಚರವಾಗಿರುವರು. ಈ ವಿಷಯದಲ್ಲಿ ಯೋಗಿಯು ನಿದ್ರೆಮಾಡುತ್ತಿರುವನು. ಇದನ್ನೇ ಭಗವದ್ಗೀತೆಯಲ್ಲಿ ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ । ಯಸ್ಯಾಂ ಜಾಗ್ರತಿ ಭೂತಾನಿ ಸಾನಿಶಾಪಶ್ಯತೋ ಮುನೇಃ ॥ ಎಂದು ಕೃಷ್ಣನು ಹೇಳಿರುವನು. ॥೪೦॥

ಈ ರೀತಿಯಲ್ಲಿ ಏಕನೂ, ವಿಕ್ಷೇಪಾವರಣಶಕ್ತಿ ಇಲ್ಲದವನೂ, ಶಾಶ್ವತನೂ, ಪರಿಶುದ್ಧನೂ, ಉಪಾಧಿರಹಿತನೂ, ಜ್ಞಾನೈಕಸ್ವರೂಪನೂ, ಶ್ರೇಷ್ಠನೂ, ಅಮೃತ ಸ್ವರೂಪನೂ, ಆದ ಪರಮಾತ್ಮನನ್ನು ವೇದಾಂತವಾಕ್ಯದಿಂದಲೂ, ತನ್ನ ಅನುಭವ ದಿಂದಲೂ, ನಿಶ್ಚಯಿಸಿ ಯಾವನು ತಿಳಿದಿರುವನೋ ಅವನೇ ಅತಿವರ್ಣಾಶ್ರಮೀ ಎನಿಸಿಕೊಳ್ಳುವನು. ಅವನೇ ಉತ್ತಮವಾದ ಗುರುವು. ॥೪೧-೪೨॥

ಅವನೇ ಉಪನಿಷತ್ತಿನ ತತ್ವಾರ್ಥವನ್ನು ತಿಳಿದವನು. ಅವನೇ ಮೋಚಕ ಪ್ರದನಾದ ಗುರುವು. ಅವನೇ ಸಮಸ್ತರನ್ನೂ ಸಂಸಾರದುಃಖದಿಂದ ಬಿಡಿಸುವನು. ಅವನೇ ಸಮಸ್ತಕ್ಕೂ ಕಾರಣನಾದ ಈಶ್ವರಸ್ವರೂಪನು. ॥೪೩॥

ಎಲೈ ನಾಶರಹಿತನಾದ ವಿಷ್ಣುವೇ, ಆ ಗುರುವೇ ಸತ್ಯಸ್ವರೂಪನೂ, ಜ್ಞಾನ

ಇತಿ ತವ ಪರಮಾರ್ಥಃ ಸರ್ವವೇದಾಂತಸಿದ್ಧಃ
ಸಕಲ ಮುನಿವರಾಣಾಂ ದೇವತಾನಾಂ ನರಾಣಾಂ ।
ಪರಮಪುರುಷಸಾಕ್ಷಾನ್ಮುಕ್ತಿ ಸಿದ್ಧ್ಯೈಮಯೋಕ್ತಃ
ಪರಮಕರುಣಯೈವ ಪ್ರಾರ್ಥಿತೇನ ತ್ವಯೈವ ॥೪೫॥

॥ ಸೂತ ಉವಾಚ ॥

ಏವಂ ನಿಶಮ್ಯ ಭಗವಾನ್ ವಾಸುದೇವೋ ಜಗನ್ಮಯಃ ।
ಸ್ವಮೂರ್ಧ್ನಿ ಚರಣದ್ವಂದ್ವಂ ಶಿವಸ್ಯ ಪರಮಾತ್ಮನಃ ॥೪೬॥

ವಿನ್ಯಸ್ಯ ಬ್ರಹ್ಮವಿಜ್ಞಾನಂ ವೇದಾಂತೋಕ್ತಂ ವಿಮುಕ್ತಿದಂ ।
ಲಬ್ಧ್ವಾಭೂಮೌ ಮಹಾಭಕ್ತ್ಯಾವಿವಶೋ ಗದ್ಗದಸ್ವರಃ ॥೪೭॥

ಪ್ರಣಮ್ಯ ಬಹುಶಃ ಶ್ರೀಮಾನ್ ಸಲಿಲಾರ್ದ್ರ ಸುಲೋಚನಃ ।
ಕೃತಾರ್ಥೋಽಭವದೀಶಾನ ಪ್ರಸಾದಾದೇವ ಸುವ್ರತಾಃ ॥೪೮॥

ಘನಸ್ವರೂಪನೂ, ಶ್ರೇಷ್ಠವಾದ ಮುಕ್ತಿಸ್ವರೂಪನೂ ಆಗಿರುವನು. ಆವನೇ ಸಮಸ್ತ ವಸ್ತುಸ್ವರೂಪನೂ, ಆಗಿ ಸಕಲ ವಿಧವಾದ ಮುಕ್ತಿಗಳನ್ನೂ ಕೊಡತಕ್ಕವನು. ॥೪೪॥

ಎಲೈ ಪರಮಪುರುಷನಾದ ವಿಷ್ಣುವೇ, ಈ ರೀತಿಯಲ್ಲಿ ಸಮಸ್ತ ಉಪನಿಷತ್ತುಗಳ ಸಿದ್ಧಾಂತಸ್ವರೂಪವಾದ ಮೋಕ್ಷಸ್ವರೂಪವನ್ನು ಸಮಸ್ತರಾದ ಮುನಿಗಳು ದೇವತೆಗಳು, ಮನುಷ್ಯರು, ಇವರುಗಳಿಗೆ ಮೋಕ್ಷವು ದೊರೆಯುವುದಕ್ಕಾಗಿ ನೀನು ಪ್ರಾರ್ಥಿಸಿ ಕೇಳಿಕೊಂಡ ಮೇರೆ ಅತ್ಯಂತ ಕರುಣೆಯಿಂದ ನಾನು ನಿನಗೆ ಹೇಳಿರುವೆನು. ॥೪೫॥

ಸೂತನು ಹೇಳಿದನು—ಎಲೈ ತಪಸ್ವಿಗಳಾದ ಮುನಿಗಳೇ, ಸಕಲ ಜಗತ್ತಿನ ಸ್ವರೂಪನಾದ ಮಹಾಮಹಿಮನಾದ ವಿಷ್ಣುವು, ಶಿವನು ಹೇಳಿದುದನ್ನು ಕೇಳಿ, ಆ ಪರಮಾತ್ಮನಾದ ಶಿವನ ಪಾದಗಳೆರಡನ್ನೂ ತನ್ನ ತಲೆಯ ಮೇಲೆ ಇಟ್ಟುಕೊಂಡು, ವೇದಾಂತದಲ್ಲಿ ಹೇಳಿರುವ, ಸಂಸಾರಬಂಧವನ್ನು ಬಿಡಿಸುವ, ಬ್ರಹ್ಮಜ್ಞಾನವನ್ನು ಹೊಂದಿ, ಮಹಾಭಕ್ತಿಯಿಂದ ಪರವಶನಾಗಿ, ಗದ್ಗದಧ್ವನಿಯಿಂದ ಕೂಡಿ, ನೆಲದ ಮೇಲೆ ಅನೇಕಬಾರಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಕಣ್ಣಿನಲ್ಲಿ ಆನಂದ ಬಾಷ್ಪವು ಸುರಿಯುತ್ತಿರಲು, ಈಶ್ವರನ ಅನುಗ್ರಹದಿಂದ ಕೃತಾರ್ಥನಾದನು. ॥೪೬-೪೭-೪೮॥

ಭವಂತೋಽಪಿ ದ್ವಿಜಾ ಏವಂ ಶ್ರದ್ಧಯಾ ಮೋಚಕಪ್ರದಂ ।
ವಿದಿತ್ವಾ ತಸ್ಯ ಶುಶ್ರೂಷಾಂ ಕುರುಧ್ವಂ ಯತ್ನತಃ ಸದಾ ॥೪೯॥

ಯಸ್ಯದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯ ಪ್ರೋಕ್ತಾದ್ವಿಜಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥೫೦॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಮುಕ್ತಿಖಂಡೇ
ಮೋಚಕಪ್ರದಕಥನಂನಾಮ ಪಂಚಮೋಽಧ್ಯಾಯಃ

ಎಲೈ ಬ್ರಾಹ್ಮಣರೇ, ನೀವೂ ಕೂಡ ಈರೀತಿಯಲ್ಲಿಯೇ ಅತ್ಯಂತಾಸಕ್ತಿಯಿಂದ ಮೋಚಕಪ್ರದನಾದ ಗುರುವನ್ನು ತಿಳಿದುಕೊಂಡು, ಅವನ ಸೇವೆಯನ್ನು ಯಾವಾಗಲೂ ಪ್ರಯತ್ನಪೂರ್ವಕವಾಗಿ ಮಾಡಿರಿ. ಯಾವನಿಗೆ ದೇವರಲ್ಲಿ ಅತ್ಯಂತ ಭಕ್ತಿಯಿರುವುದೋ, ಅದರಂತೆಯೇ ಗುರುವಿನಲ್ಲಿ ಅತ್ಯಂತ ಭಕ್ತಿಯನ್ನು ಇಟ್ಟುಕೊಂಡಿದ್ದರೆ, ಆ ಮಹಾತ್ಮನಿಗೆ ಗುರುವು ಹೇಳಿದುದರ ಅಭಿಪ್ರಾಯವೆಲ್ಲವೂ ವಿಶದವಾಗಿ ತಿಳಿಯುವುದು. ||೪೯-೫೦||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಮುಕ್ತಿಖಂಡದಲ್ಲಿ ಮೋಚಕಪ್ರದ ಸ್ವರೂಪವನ್ನು ವಿವರಿಸಿರುವ ಐದನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಮುಕ್ತಿಖಂಡಂ

|| ಷಷ್ಠೋಽಧ್ಯಾಯಃ ||

ಆರನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಜ್ಞಾನಾನುತ್ಪತ್ತಿಕಾರಣಂ ।
ಶೃಣು ತ್ವಂ ಶ್ರದ್ಧಯಾ ಯುಕ್ತಃ ಪರಿಹಾರಾಯ ಕೇಶವ ॥೧॥

ಶಿವದ್ರೋಹಸ್ತು ವಿಜ್ಞಾನಾನುತ್ಪತ್ತೇರ್ಮೂಲಕಾರಣಂ ।
ಶಿವಭಕ್ತಾಪರಾಧಶ್ಚ ಶಿವಜ್ಞಾನಸ್ಯ ದೂಷಣಂ ॥೨॥

ತ್ರಿಪುಂಡ್ರೋದ್ಧೂಲನದ್ವೇಷಸ್ತದನುಷ್ಠಾನ ವರ್ಜನಂ ।
ರುದ್ರಾಕ್ಷಧಾರಣಾಭಾವೋ ಜ್ಞಾನಾನುತ್ಪತ್ತಿಕಾರಣಂ ॥೩॥

ಮುಕ್ತಿಸ್ವರೂಪವನ್ನು ತಿಳಿದರೂ, ಆ ಮುಕ್ತಿಪ್ರಾಪ್ತಿಗೆ ಇರುವ ಪ್ರತಿಬಂಧಕಗಳ ಸ್ವರೂಪವನ್ನು ತಿಳಿಯದಿದ್ದರೆ, ಆ ಪ್ರತಿಬಂಧಕಗಳನ್ನು ಪರಿಹಾರ ಮಾಡಿಕೊಳ್ಳಲಾಗುವುದಿಲ್ಲವಾದಕಾರಣ, ಈಶ್ವರನು ವಿಷ್ಣುವನ್ನು ಕುರಿತು ಹೇಳಿದನು. ಎಲೈ ಕೇಶವನೇ, ಸಂಸಾರದುಃಖದ ಬಿಡುಗಡೆಯ ಸ್ವರೂಪವಾದ ಮೋಕ್ಷಕ್ಕೆ ಬೇಕಾದ ಜ್ಞಾನವು ಉತ್ಪತ್ತಿಯಾಗದಿರುವುದಕ್ಕೆ ಕಾರಣವನ್ನು ವಿವರಿಸುವೆನು. ಆ ಪ್ರತಿಬಂಧಕಗಳನ್ನು ನಿವಾರಣೆ ಮಾಡಿಕೊಳ್ಳುವುದಕ್ಕಾಗಿ ಆಸಕ್ತಿಯಿಂದ ನಾನು ಹೇಳುವುದನ್ನು ಕೇಳು. ||೧||

ಆತ್ಮಜ್ಞಾನವು ಉತ್ಪತ್ತಿಯಾಗದಿರುವುದಕ್ಕೆ ಶಿವದ್ರೋಹವೇ ಮುಖ್ಯವಾದ ಕಾರಣವು. ಶಿವಭಕ್ತರಿಗೆ ಕೆಡುಕುಮಾಡುವುದೂ, ಶಿವಜ್ಞಾನವನ್ನು ದೂಷಿಸುವುದೂ,

ತವ ದ್ರೋಹಸ್ತ್ವದೀಯಾನಾಂ ಪ್ರದ್ವೇಷಶ್ಚ ಜನಾರ್ದನ ।
ತ್ವದೀಯಧನವಾಂಛಾ ಚ ಜ್ಞಾನಾನುತ್ಪತ್ತಿಕಾರಣಂ ॥೪॥

ಬ್ರಹ್ಮದ್ರೋಹಸ್ತದೀಯಾನಾಂ ಪ್ರದ್ವೇಷಶ್ಚ ಜನಾರ್ದನ ।
ತದೀಯಧನವಾಂಛಾ ಚ ಜ್ಞಾನಾನುತ್ಪತ್ತಿಕಾರಣಂ ॥೫॥

ಕಾಮಃ ಕ್ರೋಧಶ್ಚ ಲೋಭಶ್ಚ ಮೋಹೋ ದಂಭಸ್ತಥೈವಚ ।
ಆಲಸ್ಯಮಪಿ ಮಾತ್ಸರ್ಯಂ ಜ್ಞಾನಾನುತ್ಪತ್ತಿಕಾರಣಂ ॥೬॥

ಧರ್ಮಾಧರ್ಮೇಶ್ವರಾಸ್ತಿತ್ವೇ ಸಂದೇಹಶ್ಚ ತಥೈವಚ ।
ತೇಷಾಮಭಾವ ಬುದ್ಧಿಶ್ಚ ಜ್ಞಾನಾನುತ್ಪತ್ತಿಕಾರಣಂ ॥೭॥

ಮಾತೃಸಂರಕ್ಷಣಾಭಾವೋ ಮಾತೃದ್ರೋಹಶ್ಚ ಕೇಶವ ।
ಮಾತೃ ಸಂತಾಪಕಾರಿತ್ವಂ ಜ್ಞಾನಾನುತ್ಪತ್ತಿಕಾರಣಂ ॥೮॥

ಭಸ್ಮ, ತ್ರಿಪುಂಡ್ರವನ್ನೂ, ಉದ್ಧೂಳನವನ್ನೂ, ದ್ವೇಷಿಸುವುದೂ, ತಾನು ಭಸ್ಮಧಾರಣೆಯನ್ನು ಮಾಡಿಕೊಳ್ಳದಿರುವುದೂ, ರುದ್ರಾಕ್ಷಿಗಳನ್ನು ಧರಿಸದಿರುವುದೂ, ಇವು ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳು. ||೨-೩||

ಎಲೈ ಜನಾರ್ದನನೇ, ನಿನಗೆ ದ್ರೋಹವನ್ನೆಣಿಸುವುದು. ನಿನ್ನ ಭಕ್ತರನ್ನು ದ್ವೇಷಿಸುವುದು. ನಿನ್ನವರ ಸಂಬಂಧವಾದ ಧನವನ್ನು ಆಶಿಸುವುದು ಇವುಗಳು ಜ್ಞಾನವುಂಟಾಗದಿರುವುದಕ್ಕೆ ಕಾರಣಗಳು. ಬ್ರಹ್ಮನಿಗೆ ದ್ರೋಹವನ್ನೆಣಿಸುವುದೂ ಅವನ ಭಕ್ತರನ್ನು ದ್ವೇಷಿಸುವುದೂ ಅವರ ಧನವನ್ನು ಬಯಸುವುದೂ ಜ್ಞಾನವುಂಟಾಗದಿರುವುದಕ್ಕೆ ಕಾರಣಗಳು. ||೪-೫||

ಕಾಮ, ಕ್ರೋಧ, ಲೋಭ, ಮೋಹ, ದಂಭ, ಆಲಸ್ಯ, ಮಾತ್ಸರ್ಯ, ಈ ಕೆಟ್ಟ ಗುಣಗಳು ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳು. ||೬||

ಧರ್ಮಾಧರ್ಮಗಳೂ, ಈಶ್ವರನೂ, ಇವರ ವಿಷಯದಲ್ಲಿ ಸಂದೇಹಬುದ್ಧಿಯೂ, ಇವರ ವಿಷಯದಲ್ಲಿ ಅಭಾವರೂಪವಾದ ಶೂನ್ಯವಾದ ಬುದ್ಧಿಯೂ ಜ್ಞಾನವುಂಟಾಗದಿರುವುದಕ್ಕೆ ಕಾರಣಗಳು. ||೭||

ಹೆತ್ತತಾಯಿಯನ್ನು ಕಾಪಾಡದಿರುವುದು ಮತ್ತು ಆಕೆಗೆ ದ್ರೋಹವನ್ನೆಣಿಸುವುದು ತಾಯಿಗೆ ದುಃಖವುಂಟಾಗುವ ಕೆಲಸವನ್ನು ಮಾಡುವುದು ಇವು ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳು. ||೮||

ವೇದ ವೇದಾಂತ ವಿದ್ವೇಷಸ್ತದಧ್ಯಯನವರ್ಜನಂ ।
ಶ್ರೋತ್ರಿಯಸ್ಯಾಪರಾಧಶ್ಚ ಜ್ಞಾನಾನುತ್ಪತ್ತಿಕಾರಣಂ ॥೯॥

ವೇದಾಂಗಾನಾಂ ಚ ವಿದ್ವೇಷಃ ಸ್ಮೃತೀನಾಂ ಚ ತಥೈವ ಚ ।
ಪುರಾಣಾನಾಂ ಚ ವಿದ್ವೇಷೋ ಭಾರತಸ್ಯ ತಥೈವ ಚ ॥೧೦॥

ತೇಷಾಮಧ್ಯೇತೃ ವಿದ್ವೇಷಸ್ತೇಷಾಂ ಬಾಧಶ್ಚ ಕೇಶವ ।
ತೇಷಾಮರ್ಥಾಪಹಾರಶ್ಚ ಜ್ಞಾನಾನುತ್ಪತ್ತಿಕಾರಣಂ ॥೧೧॥

ವಾಮಪಾಶುಪತಾದೀನಾಂ ಅಶ್ರೌತಾನಾಂ ಪರಿಗ್ರಹಃ ।
ಪಾಂಚರಾತ್ರಾ ಶ್ರಯಶ್ಚಾಪಿ ಜ್ಞಾನಾನುತ್ಪತ್ತಿಕಾರಣಂ ॥೧೨॥

ಶಿಷ್ಟಾನಾಮು ಸದಾರೋಪಃ ಶಿಷ್ಟಸಂಸರ್ಗವರ್ಜನಂ ।
ಅಶಿಷ್ಟತಾ ಚ ಮದ್ಭಕ್ತೇಃ ಜ್ಞಾನಾನುತ್ಪತ್ತಿಕಾರಣಂ ॥೧೩॥

ವೇದಗಳನ್ನೂ, ಉಪನಿಷತ್ತುಗಳನ್ನೂ ದ್ವೇಷಿಸುವುದೂ, ಅವುಗಳನ್ನು ಅಭ್ಯಾಸಮಾಡದಿರುವುದೂ, ವೇದಾರ್ಥವನ್ನು ತಿಳಿದವನಿಗೆ ಕೆಡಕನ್ನು ಮಾಡುವುದೂ, ಇವು ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳು. ||೯||

ವೇದಾಂತಗಳನ್ನೂ, ಧರ್ಮಶಾಸ್ತ್ರಗಳನ್ನೂ, ಪುರಾಣಗಳನ್ನೂ, ಭಾರತವನ್ನೂ, ದ್ವೇಷಿಸುವುದೂ, ಇವುಗಳನ್ನು ಓದುವವರನ್ನೂ ದ್ವೇಷಿಸುವುದೂ ಮತ್ತು ಅವರಿಗೆ ತೊಂದರೆಗಳನ್ನುಂಟುಮಾಡುವುದೂ, ಅವರ ಧನವನ್ನು ಅಪಹರಿಸುವುದೂ ಇವುಗಳೆಲ್ಲವೂ ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳು. ||೧೦-೧೧||

ವಾಮಾಚಾರ, ಪಾಶುಪತಾಚಾರ ಮುಂತಾದ ವೇದವಿರುದ್ಧವಾದ ಆಚಾರಗಳನ್ನು ಅನುಸರಿಸುವುದು, ಇವುಗಳೂ ಜ್ಞಾನವುಂಟಾಗದಿರಲು ಕಾರಣಗಳು. ||೧೨||

ಯೋಗ್ಯರಾದ ಜನರನ್ನು ದುಷ್ಟರೆಂದು ಹೇಳುವುದು, ಯೋಗ್ಯರ ಸಹವಾಸ ಮಾಡದಿರುವುದು, ನನ್ನಲ್ಲಿ ಭಕ್ತಿಯನ್ನಿಡುವ ಯೋಗ್ಯತೆಯಿಲ್ಲದಿರುವುದು, ಇವುಗಳೂ ಜ್ಞಾನವುಂಟಾಗದಿರುವುದಕ್ಕೆ ಕಾರಣಗಳು. ||೧೩||

ದುರ್ವೃತ್ತೈರಪಿ ಸಂಸರ್ಗೋ ದುರ್ವೃತ್ತಾನಾಂ ಚ ಪೋಷಣಂ ।
ದುರ್ವೃತ್ತತ್ವಂ ಚ ಭೂನಾಥ ಜ್ಞಾನಾನುತ್ಪತ್ತಿಕಾರಣಂ ॥೧೪॥

ಪಿತೃದ್ರೋಹಶ್ಚ ಶುಶ್ರೂಷಾಽಭಾವಸ್ತಸ್ಯ ತಥೈವಚ ।
ಪಿತೃಸಂತಾಪಕಾರಿತ್ವಂ ಜ್ಞಾನಾನುತ್ಪತ್ತಿಕಾರಣಂ ॥೧೫॥

ಗವಾಂ ಸಂರಕ್ಷಣಾಭಾವೋ ಗವಾಂ ಹಿಂಸಾ ತಥೈವಚ ।
ಗೋಪ್ರಚಾರಸ್ಥಲೇ ಬಾಧೋ ಜ್ಞಾನಾನುತ್ಪತ್ತಿಕಾರಣಂ ॥೧೬॥

ಪ್ರಾಣಿಸಂಚಾರಮಾರ್ಗಸ್ಯ ನಿರೋಧಸ್ತಸ್ಯ ಬಾಧನಂ ।
ತತ್ರ ಕಂಟಕ ನಿಕ್ಷೇಪೋ ಜ್ಞಾನಾನುತ್ಪತ್ತಿಕಾರಣಂ ॥೧೭॥

ವೃಷ್ಟಿವಾತಾತಪಕ್ಲೇಶೈರ್ಗೃಹಪ್ರಾಪ್ತಸ್ಯ ವರ್ಜನಂ ।
ತದ್ರಕ್ಷಾಽಕರಣಂ ಚಾಪಿ ಜ್ಞಾನಾನುತ್ಪತ್ತಿಕಾರಣಂ ॥೧೮॥

ಭೂದೇವಿಯ ಪತಿಯಾದ ವಿಷ್ಣುವೇ, ಕೆಟ್ಟನಡತೆಯುಳ್ಳವರೊಡನೆ ಸಂಬಂಧವೂ, ಆ ಕೆಟ್ಟನಡತೆಯ ಜನರನ್ನು ಪೋಷಿಸುವುದೂ, ತಾನೂ ಕೆಟ್ಟ ನಡತೆಯಿಂದಿರುವುದೂ, ಇವುಗಳೆಲ್ಲವೂ ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳು. ||೧೪||

ತಂದೆಗೆ ಕೇಡುಕನ್ನೆಣಿಸುವುದು, ಅವನ ಸೇವೆಯನ್ನು ಮಾಡದಿರುವುದು, ಮತ್ತು ಅವನ ಮನಸ್ಸಿಗೆ ದುಃಖವುಂಟಾಗುವ ಕೆಲಸವನ್ನು ಮಾಡುವುದು, ಇವುಗಳು ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳು. ||೧೫||

ಗೋವುಗಳನ್ನು ಕಾಪಾಡದಿರುವುದು. ಅವುಗಳಿಗೆ ಹಿಂಸೆಯನ್ನುಂಟುಮಾಡುವುದು. ಗೋವುಗಳು ಮೇಯುವ ಸ್ಥಳದಲ್ಲಿ ಅವುಗಳಿಗೆ ತೊಂದರೆಯನ್ನುಂಟುಮಾಡುವುದು. ಇವು ಜ್ಞಾನವುಂಟಾಗದಿರುವುದಕ್ಕೆ ಕಾರಣಗಳು. ||೧೬||

ಪ್ರಾಣಿಗಳು ಸಂಚರಿಸುವ ದಾರಿಗೆ ತಡೆಯನ್ನುಂಟುಮಾಡುವುದು, ಆ ದಾರಿಯಲ್ಲಿ ಮುಳ್ಳುಗಳನ್ನು ಹಾಕುವುದು, ಇವು ಜ್ಞಾನೋತ್ಪತ್ತಿಯ ಪ್ರತಿಬಂಧಕಗಳು. ||೧೭||

ಮಳೆ, ಗಾಳಿ, ಬಿಸಲು ಇವುಗಳಿಂದ ತೊಂದರೆ ಪಡುತ್ತಿರುವವರು ಮನೆಗೆ ಬಂದರೆ ಅವರಿಗೆ ರಕ್ಷಣೆಯನ್ನುಂಟುಮಾಡವೇ ಅವರನ್ನು ಬರದಂತೆ ಮಾಡುವುದೂ, ಜ್ಞಾನೋತ್ಪತ್ತಿಗೆ ಪ್ರತಿಬಂಧಕವಾಗುವುದು. ||೧೮||

ವಾಪೀ ಕೂಪತಡಾಗಾದಿ ಬಾಧಸ್ತಜ್ಜಲದೂಷಣಂ ।
ತಥಾ ತಜ್ಜಲಚೌರ್ಯಂಚ ಜ್ಞಾನಾನುತ್ಪತ್ತಿಕಾರಣಂ ॥೧೯॥

ವ್ಯಾಘ್ರಚೋರಾದಿಭೀತಸ್ಯ ರಕ್ಷಣಾಕರಣಂ ತಥಾ ।
ಸಾಧೂನಾಂ ಭಯಕಾರಿತ್ವಂ ಜ್ಞಾನಾನುತ್ಪತ್ತಿಕಾರಣಂ ॥೨೦॥

ವಶ್ಯಾಕರ್ಷಣ ವಿದ್ವೇಷ ಸ್ತಂಭೋಚ್ಚಾಟನಕಾರಿತಾ ।
ಅಭಿಚಾರಕ್ರಿಯಾ ಚಾಪಿ ಜ್ಞಾನಾನುತ್ಪತ್ತಿಕಾರಣಂ ॥೨೧॥

ಅಕ್ಷದ್ಯೂತ ವಿನೋದಶ್ಚ ನೃತ್ಯಗೀತೇಷು ಮೋಹನಂ ।
ಅಪಶಬ್ದ ಪ್ರಯೋಗಶ್ಚ ಜ್ಞಾನಾನುತ್ಪತ್ತಿಕಾರಣಂ ॥೨೨॥

ವರ್ಣಾಶ್ರಮ ವಿಶಿಷ್ಟಾನಾ ಮವಮಾನಸ್ತಥೈವಚ ।
ತೇಷಾಂ ಶುಶ್ರೂಷಣಾಭಾವೋ ಜ್ಞಾನಾನುತ್ಪತ್ತಿಕಾರಣಂ ॥೨೩॥

ಬಾವಿ, ಕೊಳ, ಕೆರೆ, ಮುಂತಾದ ಜಲಾಶಯಗಳಲ್ಲಿ ತೊಂದರೆಯನ್ನುಂಟು ಮಾಡಿ, ಅವುಗಳ ನೀರನ್ನು ಕೆಡಿಸಿ, ಆ ನೀರು ಎಲ್ಲರಿಗೂ ದೊರೆಯದಂತೆ ತಾನೇ ಉಪಯೋಗಿಸಿಕೊಳ್ಳುವುದು, ಇವು ಜ್ಞಾನವುಂಟಾಗದಿರುವುದಕ್ಕೆ ಕಾರಣವಾಗಿರುವುವು. ॥೧೯॥

ಹುಲಿ, ಕಳ್ಳರು, ಮುಂತಾದವರಿಂದ ಭಯಪಟ್ಟವನನ್ನು ಕಾಪಾಡದಿರುವುದು ಸಜ್ಜನರಿಗೆ ಭಯವನ್ನುಂಟುಮಾಡುವುದು, ಇವು ಜ್ಞಾನೋತ್ಪತ್ತಿಯ ಪ್ರತಿಬಂಧಕಗಳು. ॥೨೦॥

ವಶೀಕರಣ, ಆಕರ್ಷಣ, ವಿದ್ವೇಷ, ಸ್ತಂಭನ, ಉಚ್ಚಾಟನ, ಮುಂತಾದ ಆಭಿಚಾರಿಕ (ಮಾಟ) ಕಾರ್ಯಗಳನ್ನು ಮಾಡುವುದು, ಜ್ಞಾನೋತ್ಪತ್ತಿಗೆ ಪ್ರತಿಬಂಧಕವಾಗಿರುವುದು. ॥೨೧॥

ಪಗಡೆಯು ಜೂಜನ್ನಾಡಿ ಸಂತೋಷಪಡುವುದು, ನೃತ್ಯಗೀತಗಳಲ್ಲಿ ಅತ್ಯಂತಾಸಕ್ತಿಯೂ, ಆಡಬಾರದ ಮಾತುಗಳನ್ನಾಡುವುದೂ, ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳಾಗಿರುವುವು. ॥೨೨॥

ವರ್ಣಾಶ್ರಮಧರ್ಮಗಳನ್ನು ಆಚರಿಸುತ್ತಿರುವವರನ್ನು ಅಪಮಾನಪಡಿಸುವುದು, ಅವರ ಸೇವೆಯನ್ನು ಮಾಡದಿರುವುದು, ಇವು ಜ್ಞಾನೋತ್ಪತ್ತಿಯಾಗದಿರಲು ಕಾರಣಗಳು. ॥೨೩॥

ಪುತ್ರ ಮಿತ್ರ ಗೃಹ ಕ್ಷೇತ್ರ ಭ್ರಾತೃ ಬಂಧುಜನೇ ರತಿಃ ।
ಅರತಿರ್ಗುರುಪಾದೇ ಚ ಜ್ಞಾನಾನುತ್ಪತ್ತಿಕಾರಣಂ ॥೨೪॥

ಅಭಕ್ಷ್ಯ ಭಕ್ಷಣ ಶ್ರದ್ಧಾ ತಥಾಽಭಕ್ಷ್ಯಸ್ಯ ಭಕ್ಷಣಂ ।
ಅಭಕ್ಷ್ಯ ಭಕ್ಷಣಸ್ಪೃಷ್ಟಿಃ ಜ್ಞಾನಾನುತ್ಪತ್ತಿಕಾರಣಂ ॥೨೫॥

ಪರಸ್ತ್ರೀದರ್ಶನಶ್ರದ್ಧಾ ಪರಸ್ತ್ರೀಗಮನೇ ರತಿಃ ।
ಪರಸ್ತ್ರೀಗಮನಂ ಚಾಪಿ ಜ್ಞಾನಾನುತ್ಪತ್ತಿಕಾರಣಂ ॥೨೬॥

ಸ್ವಸ್ತ್ರೀ ದರ್ಶನವಿದ್ವೇಷಃ ಸ್ವಸ್ತ್ರೀ ದರ್ಶನವರ್ಜನಂ ।
ಸ್ವಸ್ತ್ರೀ ಬಾಧಶ್ಚ ಕಲ್ಯಾಣ ಜ್ಞಾನಾನುತ್ಪತ್ತಿಕಾರಣಂ ॥೨೭॥

ಗುರೋರನಿಷ್ಟಾಚರಣಂ ಗುರೋರಿಷ್ಟವಿವರ್ಜನಂ ।
ಗುರೋಶ್ಚ ಸೇವಾಽಕರಣಂ ಜ್ಞಾನಾನುತ್ಪತ್ತಿಕಾರಣಂ ॥೨೮॥

ಮಗ, ಗೆಳೆಯ, ಮನೆ, ಗದ್ದೆ, ಹೊಲ, ಅಣ್ಣತಮ್ಮಂದಿರು, ನಂಟರು, ಇವರುಗಳಲ್ಲಿ ಅತಿಪ್ರೀತಿಯೂ, ಪೂಜ್ಯರಾದ ಗುರುಗಳಲ್ಲಿ ಪ್ರೀತಿಯಿಲ್ಲದಿರುವುದೂ, ಜ್ಞಾನೋತ್ಪತ್ತಿಗೆ ಪ್ರತಿಬಂಧಕವಾದುದು. ||೨೪||

ತಿನ್ನಬಾರದ ಪದಾರ್ಥಗಳನ್ನು ತಿನ್ನುವುದರಲ್ಲಿ ಆಸಕ್ತಿಯೂ, ಅವುಗಳನ್ನು ತಿನ್ನುವುದೂ, ಅವುಗಳನ್ನು ತಿಂದವರ ಸಹವಾಸವೂ, ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳು. ||೨೫||

ಪರರ ಹೆಂಡಿರನ್ನು ನೋಡುವುದರಲ್ಲಿ ಆಸಕ್ತಿಯೂ, ಅವರ ಸಂಗವನ್ನು ಮಾಡಬೇಕೆಂಬ ಆಸೆಯೂ, ಪರಸ್ತ್ರೀಸಂಗವೂ, ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳಾಗಿರುವುವು. ||೨೬||

ಮಂಗಳಸ್ವರೂಪನಾದ ವಿಷ್ಣುವೇ, ತನ್ನ ಹೆಂಡಿತಿಯನ್ನು ನೋಡುವ ವಿಷಯದಲ್ಲಿಯೇ ದ್ವೇಷಿಸುವುದೂ, ಅವಳನ್ನು ನೋಡದೇ ಇರುವುದೂ, ಮತ್ತು ಆ ಹೆಂಡಿತಿಗೆ ತೊಂದರೆಯನ್ನು ಕೊಡುವುದು, ಇವುಗಳೂ ಜ್ಞಾನೋತ್ಪತ್ತಿಯಾಗುವುದಕ್ಕೆ ಪ್ರತಿಬಂಧಕಗಳು. ||೨೭||

ಗುರುವಿಗೆ ಕೆಡುಕನ್ನು ಮಾಡುವುದೂ, ಆ ಗುರುವಿನ ಇಷ್ಟದಂತೆ ನಡೆಯದಿರುವುದೂ, ಗುರುಸೇವೆಯನ್ನು ಮಾಡದಿರುವುದೂ, ಇವುಗಳು ಜ್ಞಾನ ಬರದಿರುವುದಕ್ಕೆ ಕಾರಣಗಳು. ||೨೮||

ಈಶ್ವರೇ ಚ ಗುರೌ ದೇವೇ ಜ್ಞಾನೇ ಚಾ ಭಕ್ತಿರಚ್ಯುತ ।
ತಥಾ ಸ್ವಗುರುಸಂತಾನೇ ಜ್ಞಾನಾನುತ್ಪತ್ತಿಕಾರಣಂ ॥೨೯॥

ಸ್ವಾಚಾರ್ಯಾಯ ಮಹಾಭಕ್ತ್ಯಾ ಸ್ವದೇಹಸ್ಯಾ ನಿವೇದನಂ ।
ನಿವೇದನಂ ತಥಾಽನ್ಯಸ್ಮೈ ಜ್ಞಾನಾನುತ್ಪತ್ತಿಕಾರಣಂ ॥೩೦॥

ಆಚಾರ್ಯನಿಂದಾಶ್ರವಣಂ ತದ್ಬಾಧಸ್ಯ ಚ ದರ್ಶನಂ ।
ವಿವಾದಶ್ಚ ತಥಾ ತೇನ ಜ್ಞಾನಾನುತ್ಪತ್ತಿಕಾರಣಂ ॥೩೧॥

ಆಚಾರ್ಯೇಽನೀಶ್ವರ ಜ್ಞಾನ ಮುಪೇಕ್ಷಾ ಚ ತಥೈವಚ ।
ತದುಕ್ತವಿಸ್ಮೃತಿಶ್ಚಾಪಿ ಜ್ಞಾನಾನುತ್ಪತ್ತಿಕಾರಣಂ ॥೩೨॥

ಆಚಾರ್ಯೇ ಬಾಲಬುದ್ಧಿಶ್ಚ ನರಬುದ್ಧಿಸ್ತಥೈವಚ ।
ಅಶಿಷ್ಟಬುದ್ಧಿರ್ಭೂರ್ನಾಥ ಜ್ಞಾನಾನುತ್ಪತ್ತಿಕಾರಣಂ ॥೩೩॥

ನಾಶರಹಿತನಾದ ವಿಷ್ಣುವೇ, ಗುರು, ದೇವತೆಗಳು, ಜ್ಞಾನ, ಇವುಗಳಲ್ಲಿ ಭಕ್ತಿ, ಆದರ, ಪ್ರೇಮ ಇಲ್ಲದಿರುವುದು, ಇವು ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳು. ॥೨೯॥

ತನ್ನ ಗುರುವಿಗೆ ಭಕ್ತಿಯಿಂದ ತನ್ನ ಶರೀರವನ್ನು ಅರ್ಪಿಸದೇ ಇತರರಿಗೆ ಶರೀರವನ್ನು ವಶಮಾಡಿ ಅವರು ಹೇಳುವುದನ್ನು ಮಾಡುವುದೂ ಜ್ಞಾನೋತ್ಪತ್ತಿಗೆ ತಡೆಯಾಗುವುದು. ॥೩೦॥

ಗುರುಗಳ ನಿಂದೆಯನ್ನು ಕೇಳುವುದು, ಅವರಿಗೆ ತೊಂದರೆಕೊಡುತ್ತಿರುವುದನ್ನು ನೋಡುತ್ತಿರುವುದು, ಆ ಗುರುಗಳೊಡನೆ ವಾಗ್ವಾದಮಾಡುವುದು, ಇವುಗಳೆಲ್ಲವೂ ಜ್ಞಾನೋತ್ಪತ್ತಿಗೆ ತಡೆಗಳು. ॥೩೧॥

ಗುರುವು ಈಶ್ವರನಲ್ಲವೆಂಬ ಬುದ್ಧಿಯೂ, ಆ ಗುರುವನ್ನು ಉಪೇಕ್ಷೆಮಾಡುವುದೂ, ಮತ್ತು ಆ ಗುರುವು ಹೇಳಿದುದನ್ನು ಮರೆತುಬಿಡುವುದೂ, ಇವುಗಳೂ ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳು. ॥೩೨॥

ಗುರುವು ವಯಸ್ಸಿನಲ್ಲಿ ಚಿಕ್ಕವನಾದಮಾತ್ರಕ್ಕೆ ಹುಡುಗನೆಂದು ತಿಳಿಯುವುದೂ, ಯೋಗ್ಯತೆಯಿಂದ ದೇವನೆಂದು ಭಾವಿಸದೇ ಮನುಷ್ಯನೆಂದು ತಿಳಿಯುವುದೂ, ಪೂಜ್ಯನಲ್ಲವೆಂದು ತಿಳಿಯುವುದೂ ಜ್ಞಾನೋತ್ಪತ್ತಿಗೆ ತಡೆಗಳು. ॥೩೩॥

ಅಶಕ್ತಾನಾಮ ರಕ್ಷಾ ಚ ತಥಾಽಶಕ್ತಾಪರಾಧನಂ ।
ಅಶಕ್ತಾನಾಂ ಚ ನಿಂದಾ ಚ ಜ್ಞಾನಾನುತ್ಪತ್ತಿಕಾರಣಂ ॥೩೪॥

ಅರ್ಥಹೀನಸ್ಯ ನಿಂದಾ ಚ ತಥಾ ತಸ್ಯಾಪರಾಧನಂ ।
ತಸ್ಯ ಸಂಕೋಚ ಸಂತುಷ್ಟಿಃ ಜ್ಞಾನಾನುತ್ಪತ್ತಿಕಾರಣಂ ॥೩೫॥

ರೂಪಹೀನಸ್ಯ ನಿಂದಾ ಚ ತಥಾ ತಸ್ಯಾಪರಾಧನಂ ।
ವೈರೂಪ್ಯೇ ತಸ್ಯ ಸಂತುಷ್ಟಿ ಜ್ಞಾನಾನುತ್ಪತ್ತಿಕಾರಣಂ ॥೩೬॥

|| ಸೂತ ಉವಾಚ ||

ಏವಂ ಮಹೇಶ್ವರಾದ್ವಿಷ್ಣು ಜ್ಞಾನಾನುತ್ಪತ್ತಿಕಾರಣಂ ।
ಶ್ರುತ್ವಾ ಪ್ರಣಾಮಂ ಕೃತವಾನ್ ಭಕ್ತ್ಯಾ ಪರಮಯಾ ಸಹ ॥೩೭॥

ಭವಂತೋಽಪಿ ಶಿವಜ್ಞಾನ ಸಿದ್ಧ್ಯರ್ಥಂ ಮುನಿಪುಂಗವಾನ್ ।
ಪರಿಹೃತ್ಯೈವ ವರ್ತಧ್ವ ಮೇತಾನರ್ಥಾನಶೇಷತಃ ॥೩೮॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಮುಕ್ತಿಖಂಡೇ
ಜ್ಞಾನಾನುತ್ಪತ್ತಿಕಾರಣಕಥನಂ ನಾಮ ಷಷ್ಠೋಽಧ್ಯಾಯಃ

ಅಶಕ್ತರನ್ನು ಕಾಪಾಡದಿರುವುದೂ, ಅವರಿಗೆ ಕೇಡುಕನ್ನು ಮಾಡುವುದೂ, ಅವರನ್ನು ನಿಂದಿಸುವುದೂ, ಜ್ಞಾನೋತ್ಪತ್ತಿಯಾಗದಿರುವುದಕ್ಕೆ ಕಾರಣಗಳು. ||೩೪||

ಹಣವಿಲ್ಲದ ದರಿದ್ರನನ್ನು ನಿಂದಿಸುವುದೂ, ಅವನಿಗೆ ಕೇಡುಕನ್ನು ಮಾಡುವುದು, ಅವನ ಸಂಕೋಚಸ್ವಭಾವದಿಂದ ತೃಪ್ತಿಪಡುವುದು, ಕರುಣೆ ಇಲ್ಲದಿರುವಿಕೆ, ಇವು ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳು. ||೩೫||

ಕುರೂಪಿಗಳನ್ನು ನಿಂದಿಸುವುದೂ, ಅವರಿಗೆ ಕೇಡುಕನ್ನು ಮಾಡುವುದೂ, ಅವನ ವಿಕಾರವನ್ನು ನೋಡಿ ತಾನು ತೃಪ್ತಿಪಡುವುದೂ ಇವುಗಳೂ ಜ್ಞಾನೋತ್ಪತ್ತಿಗೆ ಪ್ರತಿಬಂಧಕಗಳು. ||೩೬||

ಸೂತನು ಹೇಳಿದನು---ಈ ರೀತಿಯಲ್ಲಿ ವಿಷ್ಣುವು ಮಹೇಶ್ವರನು ಹೇಳಿದ ಜ್ಞಾನೋತ್ಪತ್ತಿಯಾಗದಿರುವುದಕ್ಕೆ ಕಾರಣಗಳನ್ನು ಕೇಳಿ ಅತ್ಯಂತ ಭಕ್ತಿಯಿಂದ

ಆ ದೇವನಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿದನು. ಎಲೈ ಮುನಿಶ್ರೇಷ್ಠರೇ, ನೀವೂ ಕೂಡ ಶಿವಜ್ಞಾನಸಿದ್ಧಿಗೋಸ್ಕರವಾಗಿ ಶಿವನು ಹೇಳಿದ ಜ್ಞಾನೋತ್ಪತ್ತಿಗೆ ಇರುವ ಪ್ರತಿಬಂಧಕಗಳನ್ನೆಲ್ಲವನ್ನೂ ನಿವಾರಿಸುತ್ತಾ, ನಿಮ್ಮ ನಡತೆಯನ್ನು ಸನ್ಮಾರ್ಗದಲ್ಲಿಟ್ಟುಕೊಳ್ಳಿರಿ. ||೩೭-೩೮||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಮುಕ್ತಿಖಂಡದಲ್ಲಿ
ಜ್ಞಾನೋತ್ಪತ್ತಿಗೆ ಅಡ್ಡಿಗಳನ್ನು ತಿಳಿಸುವ ಆರನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ ಸೂತಸಂಹಿತಾ

ಮುಕ್ತಿಖಂಡಂ

|| ಸಪ್ತಮೋಽಧ್ಯಾಯಃ ||

ಏಳನೆಯ ಅಧ್ಯಾಯವು

|| ಈಶ್ವರ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ತವಾಹಂ ಪುರುಷೋತ್ತಮ ।
ವಿದ್ವಚ್ಛುಶ್ರೂಷಣಪರಂ ಶ್ರುಣು ಶ್ರದ್ಧಾ ಪುರಸ್ಸರಂ ||೧||

ಪುರಾ ಕಶ್ಚಿದ್ದ್ವಿಜಶ್ರೇಷ್ಠಃ ಶಶಿವರ್ಣ ಸಮಾಹ್ವಯಃ ।
ಪಾಕಯಜ್ಞ ಸಮಾಖ್ಯಸ್ಯ ತನಯಃ ಪಾಪಕರ್ಮಕೃತ್ ||೨||

ಹಿಂದಿನ ಅಧ್ಯಾಯದಲ್ಲಿ ಜ್ಞಾನೋತ್ಪತ್ತಿಗೆ ಇರುವ ಪ್ರತಿಬಂಧಕಗಳನ್ನು ಹೇಳಿ, ಆದರ ತಿಳಿವಳಿಕೆಗಳಿಂದ ಪ್ರತಿಬಂಧಕಗಳನ್ನು ನಿವೃತ್ತಿಮಾಡಿಕೊಂಡವರಿಗೆ, ಮುಂದೆ ಜ್ಞಾನರೂಪವಾದ ಫಲಪ್ರಾಪ್ತಿಸಾಧನವಾದುವುಗಳನ್ನು ಹೇಳುವ ಮನಸ್ಸಿನಿಂದ ಈಶ್ವರನು ವಿಷ್ಣುವನ್ನು ಕುರಿತು, ಎಲೈ ಪುರುಷಶ್ರೇಷ್ಠನಾದ ವಿಷ್ಣುವೇ, ಇನ್ನು ಮುಂದೆ ವಿದ್ವಾಂಸರ ಶುಶ್ರೂಷೆಯೇ ಮೊದಲಾದ ಜಾನೋತ್ಪತ್ತಿಸಾಧನಗಳನ್ನು ಹೇಳುವೆನು. ಆದರದಿಂದ ಕೇಳು. ||೧||

ಹಿಂದಿನಕಾಲದಲ್ಲಿ ಶ್ರೇಷ್ಠವಾದ ಬ್ರಾಹ್ಮಣವಂಶದಲ್ಲಿ ಹುಟ್ಟಿದ ಪಾಕಯಜ್ಞನೆಂಬ ಬ್ರಾಹ್ಮಣನಿಗೆ ಶಶಿವರ್ಣನೆಂಬ ಮಗನು ಹುಟ್ಟಿದನು. ಅವನು ಅತ್ಯಂತ ಪಾಪಕಾರ್ಯಗಳನ್ನು ಮಾಡುತ್ತಿದ್ದನು. ||೨||

ತಮೋಽಭಿಭೂತಚಿತ್ತಶ್ಚ ಬ್ರಹ್ಮವಿಜ್ಞಾನದೂಷಕಃ ।
ವೇದನಿಂದಾಪರಃ ಸರ್ವಪ್ರಾಣಿಹಿಂಸಾಪರೋಽಧಮಃ ॥೩॥

ಶಿವನಿಂದಾಪರಃ ಸರ್ವದೇವತಾದೂಷಕಃ ಸದಾ ।
ಧರ್ಮನಿಂದಾಪರ ಸ್ತದ್ವದ್ಧಾರ್ಮಿಕಸ್ಯಾಪರಾಧಕೃತ್ ॥೪॥

ವರ್ಣಧರ್ಮವಿನಿರ್ಮುಕ್ತ ಸ್ತಥೈವಾಶ್ರಮವರ್ಜಿತಃ ।
ಮಾತೃಹಾ ಪಿತೃಹಾ ತದ್ವದ್ಭ್ರಾತೃದ್ರೋಹೀ ಯಥಾಬಲಂ ॥೫॥

ಗೋಘ್ನಶ್ಚೈವ ಕೃತಘ್ನಶ್ಚ ಮಹಾನಾಸ್ತಿಕ್ಯಗರ್ವಿತಃ ।
ಕ್ಷೇತ್ರದಾರ ಹರಸ್ತದ್ವದಗ್ನಿದೋ ಗರದಸ್ತಥಾ ॥೬॥

ಚಂಡಾಲಸ್ತ್ರೀಪತಿ ಸ್ತದ್ವನ್ಮಧುಮಾಂಸಾದಿಭಕ್ಷಕಃ ।
ಮಹಾಧೀರೋ ಮಹಾಪಾಪ್ಮಾ ಚಚಾರ ಪೃಥಿವೀತಲೇ ॥೭॥

ಅವನು ತಮೋಗುಣದಿಂದ ಮನಸ್ಸನ್ನು ಕೆಡಿಸಿಕೊಂಡವನು, ಬ್ರಹ್ಮಜ್ಞಾನವನ್ನು ನಿಂದಿಸುವನು, ವೇದವನ್ನೂ ದೂಷಿಸುವನು, ಸಮಸ್ತ ಪ್ರಾಣಿಗಳಿಗೂ ಹಿಂಸೆಯನ್ನು ಮಾಡುವುದರಲ್ಲಿ ಆಸಕ್ತನೂ, ಅತ್ಯಂತ ನೀಚನೂ ಆಗಿದ್ದನು. ॥೩॥

ಅವನು ಯಾವಾಗಲೂ ಶಿವನಿಂದೆಯನ್ನೂ, ಸಕಲ ದೇವತೆಗಳ ದೂಷಣೆಯನ್ನೂ, ಧರ್ಮನಿಂದೆಯನ್ನೂ ಮಾಡತಕ್ಕವನು, ಧರ್ಮಮಾರ್ಗದಲ್ಲಿರುವವರಿಗೆ ಕೆಡುಕನ್ನು ಮಾಡತಕ್ಕವನೂ ಆಗಿದ್ದನು. ॥೪॥

ವರ್ಣಾಶ್ರಮಧರ್ಮಗಳನ್ನು ಬಿಟ್ಟವನೂ, ತಾಯಿತಂದೆಗಳನ್ನು ಕೊಂದವನೂ ತನ್ನ ಶಕ್ತ್ಯನುಸಾರವಾಗಿ ಅಣ್ಣತಮ್ಮಂದಿರಿಗೆ ಕೆಡುಕನ್ನು ಮಾಡಿದವನೂ, ॥೫॥

ಗೋವನ್ನು ಕೊಂದವನು, ಉಪಕಾರ ಮಾಡಿದವರಿಗೆ ಅಪಕಾರ ಮಾಡುವವನೂ, ವೇದಾದಿಗಳಲ್ಲಿ ಆದರವಿಲ್ಲದೇ ಮಹಾ ನಾಸ್ತಿಕ್ಯದಿಂದ ಅಹಂಕಾರಪಡುತ್ತಿದ್ದವನೂ, ಮತ್ತೊಬ್ಬರ ಭೂಮಿ, ಹೆಂಡಿತಿ, ಮನೆ, ಮುಂತಾದುವುಗಳನ್ನು ಆಕ್ರಮಿಸುವುದು, ಬೆಂಕಿಯಿಂದ ಸುಡುವುದು, ವಿಷವನ್ನು ಕೊಟ್ಟು ಸಾಯಿಸುವುದು, ಮುಂತಾದ ಕೆಲಸವನ್ನು ಮಾಡುತ್ತಿದ್ದವನೂ, ಚಂಡಾಲಸ್ತ್ರೀಯನ್ನು ಮದುವೆಮಾಡಿಕೊಂಡು, ಮದ್ಯ ಮಾಂಸಗಳನ್ನು ಸೇವಿಸುತ್ತಾ, ಅತ್ಯಂತ ಧೈರ್ಯದಿಂದ ಮಹಾಪಾಪಕಾರ್ಯಗಳನ್ನು ಮಾಡುತ್ತಾ ಭೂಮಿಯಲ್ಲಿ ಸಂಚರಿಸುವವನೂ ಆಗಿದ್ದನು. ॥೬-೭॥

ಪಿತರಸ್ತಸ್ಯ ಮೂರ್ಖಸ್ಯ ಬ್ರಹ್ಮಲೋಕಗತಾ ಅಪಿ ।
ಸ್ವರ್ಗಲೋಕಗತಾಶ್ಚಾನ್ಯೇ ವಿವಶಾ ನರಕಂ ಗತಾಃ ॥೮॥

ಶಶಿವರ್ಣೋಽಪಿ ಕಾಲೇನ ವ್ಯಾಧಿಭಿಃ ಪೀಡಿತೋಽಚ್ಯುತ ।
ಅಪಸ್ಮಾರ ಪಿಶಾಚಾದಿ ಗ್ರಹಗ್ರಸ್ತೋಽಭವದ್ಭೃಶಂ ॥೯॥

ಪಾಕಯಜ್ಞಃ ಪಿತಾ ತಸ್ಯ ಮಮ ಭಕ್ತೋ ಮಹತ್ತರಃ ।
ನಿಶಮ್ಯ ತನಯಕ್ಲೇಶಂ ನಿರ್ಗತಪ್ರಾಣವತ್ಸುಧೀಃ ॥೧೦॥

ಪತಿತೋ ಭೂತಲೇ ವಿಷ್ಣೋ ರೋದಮಾನೋಽತಿದುಃಖಿತಃ ।
ತಂ ದೃಷ್ಟ್ವಾ ದೇವಭಕ್ತಾಖ್ಯೋ ಮುನಿಃ ಸರ್ವಾರ್ಥವಿತ್ತಮಃ ॥೧೧॥
ಕೃಪಯಾ ಪಾಕಯಜ್ಞಾಖ್ಯಂ ಬಭಾಷೇ ವಾಕ್ಯಮುತ್ತಮಂ ।

ಆ ಮೂರ್ಖನು ಮಾಡುತ್ತಿದ್ದ ಪಾಪಕಾರ್ಯಗಳ ದೆಸೆಯಿಂದ ಬ್ರಹ್ಮಲೋಕದಲ್ಲಿಯೂ, ಸ್ವರ್ಗಲೋಕದಲ್ಲಿಯೂ ತಂತಮ್ಮ ಪುಣ್ಯಕರ್ಮಗಳಿಂದ ಸುಖವನ್ನನುಭವಿಸುತ್ತಿದ್ದ ಅವನ ವಂಶದ ಪಿತೃಗಳು ಇವನ ಪಾಪಕಾರ್ಯಗಳ ಫಲಕ್ಕೆ ಅಧೀನರಾಗಿ ನರಕಕ್ಕೆ ಬಂದರು. ವೇದವಿಹಿತವಾದ ಕರ್ಮಗಳನ್ನು ಮಾಡದೇ ಇದ್ದರೆ ಪಿತೃಗಳಿಗೆ ಅಧೋಗತಿಯೆಂದು ಗೀತೆಯಲ್ಲಿ "ಅಧರ್ಮಾಭಿಭವಾತ್ಕೃಷ್ಣ" ಇತ್ಯಾದಿಯಾಗಿ "ಪತಂತಿ ಪಿತರೋಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ" ಎಂಬುದಾಗಿ ಅರ್ಜುನನು ಕೃಷ್ಣನಿಗೆ ಹೇಳಿರುವನು. ॥೮॥

ಆ ಶಶಿವರ್ಣನು ಕೆಲವು ದಿವಸಗಳ ಮೇಲೆ ಅನೇಕ ರೋಗಗಳಿಂದ ಪೀಡಿತನಾಗಿ ಅಪಸ್ಮಾರ, ಪಿಶಾಚ ಮುಂತಾದ ಗ್ರಹಗಳ ಬಾಧೆಯನ್ನು ಅನುಭವಿಸುತ್ತಿದ್ದನು. ॥೯॥

ಅವನ ತಂದೆಯಾದ ಪಾಕಯಜ್ಞನು ನನ್ನಲ್ಲಿ ಮಹಾಭಕ್ತಿಯುಳ್ಳವನು. ಎಲೈ ಮಹಾವಿಷ್ಣುವೇ, ಅವನು ತನ್ನ ಮಗನ ದುಃಖವನ್ನು ಕೇಳಿ ಅತ್ಯಂತ ಸಂಕಟದಿಂದ ಅಳುತ್ತಾ ಪ್ರಾಣಹೋದವನಂತೆ ನೆಲದಮೇಲೆ ಬಿದ್ದುಬಿಟ್ಟನು. ॥೧೦॥

ಆ ಪಾಕಯಜ್ಞನನ್ನು ನೋಡಿ ಸರ್ವಜ್ಞರಲ್ಲಿ ಶ್ರೇಷ್ಠನಾದ ದೇವಭಕ್ತನೆಂಬ ಮುನಿಯು ದಯೆಯಿಂದ ಕೂಡಿ ಅವನಿಗೆ ಹಿತಕರವಾದ ಶ್ರೇಷ್ಠವಾದ ಮಾತನ್ನು ಹೇಳಿದನು. ॥೧೧॥

ಉತ್ತಿಷ್ಠೋತ್ತಿಷ್ಠ ಮಾಭೈಷೀಃ ಪಾಕಯಜ್ಞ ಭವಪ್ರಿಯ ॥೧೨॥

ತ್ವತ್ಪುತ್ರಸ್ಯಾಪಿ ವಕ್ಷ್ಯಾಮಿ ಶ್ರೇಯಃ ಪ್ರಾಪ್ತೇಸ್ತು ಸಾಧನಂ ।
ಶ್ರೀಮದ್ಗೋಪರ್ವತೇ ರಮ್ಯೇ ಶಿವಪ್ರಾಪ್ತ್ಯೇಕಸಾಧನಂ ॥೧೩॥

ಷೋಡಶಕ್ರೋಶವಿಸ್ತೀರ್ಣೇ ತಾವನ್ಮಾತ್ರಾಯತೇ ವರೇ ।
ಶಿವಶಕ್ತಿರುಮಾದೇವೀ ಯತ್ರ ಗೋಪರ್ವತೇಶ್ವರಃ ॥೧೪॥

ಆರಾಧ್ಯ ಶ್ರದ್ಧಯಾ ಸಂಜ್ಞಾಂ ಚಕಾರ ಪರಮೇಶ್ವರೀ ।
ಶಕ್ತೀಶ್ವರ ಇತಿ ಸ್ವಸ್ಯ ಸಂಜ್ಞಯಾ ಭವನಾಶಿನೀ ॥೧೫॥

ಯತ್ರ ಶಕ್ತೀಶ್ವರಂ ಭಕ್ತ್ಯಾ ಬ್ರಹ್ಮಾಽಽರಾಧ್ಯ ಯಥಾಬಲಂ ।
ಶಕ್ತಿಮಾನ ಭವತ್ಸೃಷ್ಟೌ ಜಗತಸ್ತತ್ಪ್ರಸಾದತಃ ॥೧೬॥

ಯತ್ರ ಶಕ್ತೀಶ್ವರಂ ಪೂಜ್ಯ ಪ್ರಸಾದೇನ ಪುರಂದರಃ ।
ಅಧಿಪಃ ಸರ್ವದೇವಾನಾಂ ಅಭವತ್ತಾರಕೋಽಸುರಃ ॥೧೭॥

ಯತ್ರ ಶಕ್ತೀಶ್ವರಂ ಪೂಜ್ಯ ಪ್ರಬಲೋಽಭೂನ್ಮಹೀತಲೇ ।
ಉರ್ವಶೀ ಯತ್ರ ಶಕ್ತೀಶಂ ಭಕ್ತ್ಯಾ ಪೂಜ್ಯೇಂದ್ರವಲ್ಲಭಾ ॥೧೮॥

ಈಶ್ವರಭಕ್ತನಾದ ಎಲೈ ಪಾಕಯಜ್ಞನೇ, ಏಳು, ಏಳು, ಹೆದರಬೇಡ, ನಿನ್ನ ಮಗನಿಗೂ ಕೂಡ ಶ್ರೇಯಸ್ಸುಂಟಾಗುವ ಮಾರ್ಗವನ್ನು ಹೇಳುವೆನು. ||೧೨||

ಹದಿನಾರು ಹರಿದಾರಿಯುದ್ದವೂ ಅಷ್ಟೇ ಅಗಲವೂ ಉಳ್ಳ ಮನೋಹರವಾದ, ಶಿವಪ್ರಾಪ್ತಿಗೆ ಮುಖ್ಯಸಾಧನವಾದ, ಗೋಪರ್ವತದಲ್ಲಿರುವ, ಗೋಪರ್ವತೇಶ್ವರನನ್ನು ಶಿವಶಕ್ತಿಸ್ವರೂಪಳಾದ ಉಮಾದೇವಿಯು ಅತ್ಯಂತಾಸಕ್ತಿಯಿಂದ ಪೂಜೆಮಾಡಿ ಜನನ ಮರಣರೂಪವಾದ ಸಂಸಾರದುಃಖವನ್ನು ನಾಶಮಾಡುವ ಆ ದೇವಿಯು ಆ ಲಿಂಗಕ್ಕೆ ಶಕ್ತೀಶ್ವರನೆಂಬುದಾಗಿ ತನ್ನ ಹೆಸರನ್ನು ಇಟ್ಟಿರುವಳು. ||೧೩-೧೪-೧೫||

ಆ ಗೋಪರ್ವತದಲ್ಲಿರುವ ಶಕ್ತೀಶ್ವರನನ್ನು ಬ್ರಹ್ಮನು ಭಕ್ತಿಯಿಂದ ಪೂಜಿಸಿ, ಅವನ ಅನುಗ್ರಹದಿಂದ ಪ್ರಪಂಚವನ್ನು ಸೃಷ್ಟಿಮಾಡುವ ಶಕ್ತಿಯುಳ್ಳವನಾದನು. ||೧೬||

ಆ ಶಕ್ತೀಶ್ವರನನ್ನು ಪೂಜೆಮಾಡಿ ಅವನ ಅನುಗ್ರಹದಿಂದ ದೇವೇಂದ್ರನು ದೇವತೆಗಳಿಗೆಲ್ಲರಿಗೂ ಸ್ವಾಮಿಯಾದನು. ತಾರಕಾಸುರನೂ ಭೂಮಂಡಲದಲ್ಲಿ ಪ್ರಬಲ ನಾದನು. ಊರ್ವಶಿಯೂ ದೇವೇಂದ್ರನಿಗೆ ಪ್ರೀತಿಪಾತ್ರಳಾದಳು. ||೧೭-೧೮||

ಯತ್ರ ವಾಚಸ್ಪತಿರ್ದೇವಂ ಶಕ್ತೀಶಾಖ್ಯಂ ಯಥಾಬಲಂ ।
ಸಮಾರಾಧ್ಯಾ ಭವತ್ಸಾಕ್ಷಾದ್ದೇವೇಂದ್ರಸ್ಯ ಪುರೋಹಿತಃ ॥೧೯॥

ಯತ್ರ ಪೂಜ್ಯೋಽಭವಚ್ಛುಕ್ರಃ ಶಕ್ತೀಶಾಖ್ಯಂ ಮಹೇಶ್ವರಂ ।
ಆರ್ದ್ರಾಯಾಂ ನೈರ್ಋತೇ(ಃ) ಸಾಕ್ಷಾದಸುರಾಣಾಂ ಪುರೋಹಿತಃ॥೨೦॥

ಯತ್ರ ಪರ್ವಣಿ ದೇವೇಶಂ ದೃಷ್ಟ್ವಾ ಶಕ್ತೀಶ್ವರಾಭಿಧಂ ।
ಪ್ರದತ್ವಾ ಧನಮನ್ಯದ್ವಾ ನರಃ ಸಾಕ್ಷಾತ್ ಶಿವಂ ವ್ರಜೇತ್ ॥೨೧॥

ಯತ್ರ ಪುಣ್ಯೇಷು ಕಾಲೇಷು ಶ್ರದ್ಧಯಾ ಪರಮೇಶ್ವರಂ ।
ಪ್ರಣಮ್ಯ ಶಿವಭಕ್ತೇಭ್ಯಃ ಪ್ರದತ್ವಾ ಧನಮುತ್ತಮಂ ॥೨೨॥

ನರೋ ಮುಕ್ತಿಮವಾಪ್ನೋತಿ ಶಕ್ತೀಶಸ್ಯ ಪ್ರಸಾದತಃ ।
ಯತ್ರ ದೃಷ್ಟ್ವಾ ಮಹಾದೇವಂ ಶಕ್ತೀಶಾಖ್ಯಂ ಧನಂ ಮುದಾ ॥೨೩॥

ತನ್ನ ಶಕ್ತ್ಯನುಸಾರವಾಗಿ ಶಕ್ತೀಶ್ವರನನ್ನು ಪೂಜೆಮಾಡಿ, ಬೃಹಸ್ಪತಿಯು ಸಾಕ್ಷಾದ್ದೇವೇಂದ್ರನಿಗೆ ಪುರೋಹಿತನಾದನು. ||೧೯||

ಆರ್ದ್ರಾನಕ್ಷತ್ರದ ದಿನ ಶಕ್ತೀಶ್ವರನನ್ನು ಪೂಜಿಸಿ ಶುಕ್ರನು ನಿರ್ಋತಿಯೇ ಮುಂತಾದ ಅಸುರರಿಗೆ ಪುರೋಹಿತನಾಗಿ ಪೂಜ್ಯನಾಗಿರುವನು. ||೨೦||

ಅಮಾವಾಸ್ಯಾ ಮತ್ತು ಪೂರ್ಣಿಮಾದಿನಗಳಲ್ಲಿ ದೇವತೆಗಳಿಗೆ ಸ್ವಾಮಿಯಾದ ಶಕ್ತೀಶ್ವರನನ್ನು ದರ್ಶನಮಾಡಿ, ಧನವನ್ನೋ ಮತ್ತೆ ಯಾವುದಾದರೂ ವಸ್ತುಗಳನ್ನೋ ದಾನಮಾಡಿದ ಮನುಷ್ಯನು ಸಾಕ್ಷಾತ್ ಶಿವನ ಸಮೀಪಕ್ಕೆ ಹೋಗುವನು. ||೨೧||

ಪುಣ್ಯಕಾಲಗಳಲ್ಲಿ ಭಕ್ತಿಯಿಂದ ಪರಮೇಶ್ವರನಿಗೆ ನಮಸ್ಕಾರವನ್ನು ಮಾಡಿ, ಶಿವಭಕ್ತರಿಗೆ ಉತ್ತಮವಾದಂಥ ಧನವನ್ನು ದಾನಮಾಡಿದ ಮನುಷ್ಯನು ಶಕ್ತೀಶ್ವರನ ಅನುಗ್ರಹದಿಂದ ಮೋಕ್ಷವನ್ನು ಹೊಂದುವನು. ||೨೨||

ಮನುಷ್ಯನು ಶಕ್ತೀಶ್ವರನ ದರ್ಶನವನ್ನು ಮಾಡಿ ಸಂತೋಷದಿಂದ ಧನವನ್ನು ದಾನಮಾಡಿದರೆ, ಜಯವನ್ನೂ, ಸುಖಾನುಭವವನ್ನೂ ಪಡೆಯುವನು. ||೨೩||

ದತ್ವಾ ಭೋಗಾನವಾಪ್ನೋತಿ ವಿಜಯಂ ಚಾಪಿ ಮಾನವಃ ।
ಯತ್ರ ಶಕ್ತೀಶ್ವರಂ ನಿತ್ಯಂ ದೃಷ್ಟ್ವಾ ಸಂಕಲ್ಪಪೂರ್ವಕಂ ॥೨೪॥

ಪ್ರದತ್ವಾ ಮುಷ್ಟಿಮಾತ್ರಂ ವಾ ಪ್ರಸ್ಥಂ ವಾ ಸಿಕ್ತ ಮೇವ ವಾ ।
ತಂಡುಲಂ ಬ್ರಹ್ಮವಿದ್ಹಸ್ತೇ ವಿಮುಕ್ತೋ ಮಾನವೋ ಭವೇತ್ ॥೨೫॥

ಯತ್ರ ಸರ್ವ ಮಹಾಪಾಪ ಯುಕ್ತೋಽಪಿ ಮರಣಂ ಗತಃ ।
ನರೋ ಮುಕ್ತಿಮವಾಪ್ನೋತಿ ಶಕ್ತೀಶಸ್ಯ ಪ್ರಸಾದತಃ ॥೨೬॥

ಯತ್ರ ಸಾಕ್ಷಾನ್ಮಹಾಯೋಗೀ ಸರ್ವವೇದಾಂತಪಾರಗಃ ।
ಮಹಾ ಕಾರುಣಿಕೋ ನಾಮ್ನಾ ಮಹಾನಂದ ಪರಾಯಣಃ ॥೨೭॥

ಆಸ್ತೇ ತಂ ವೇದವಿಚ್ಛ್ರೇಷ್ಠಂ ಪಾಕಯಜ್ಞ ಸ್ವಸೂನುನಾ ।
ಸಹ ದೃಷ್ಟ್ವಾ ಮಹಾಭಕ್ತ್ಯಾ ಪ್ರಣಮ್ಯ ಭುವಿ ದಂಡವತ್ ॥೨೮॥

ಗೋಪರ್ವತದಲ್ಲಿರುವ ಶಕ್ತೀಶ್ವರನನ್ನು ಮನಸ್ಸಿನ ದೃಢವಾದ ಸಂಕಲ್ಪದಿಂದ ಪ್ರತಿದಿನವೂ ದರ್ಶನಮಾಡಿ ಒಂದು ಹಿಡಿ, ಅಥವ ಪಾವು, ಸೇರು ಮುಂತಾದ ಯಾವುದಾದರೊಂದು ಅಳತೆಯ ಪ್ರಮಾಣದ ಅಕ್ಕಿಯನ್ನು ಬ್ರಹ್ಮಜ್ಞನಾದ ಬ್ರಾಹ್ಮಣನಿಗೆ ದಾನಮಾಡಿದರೆ ಹಾಗೆ ಮಾಡಿದ ಮನುಷ್ಯನು ಉತ್ತಮವಾದ ಮೋಕ್ಷವನ್ನು ಪಡೆಯುವನು. ||೨೪-೨೫||

ಆ ಶಕ್ತೀಶ್ವರನಿರುವ ಗೋಪರ್ವತದಲ್ಲಿ ಮ್ರರಣವನ್ನು ಹೊಂದಿದವನು ಮಹಾಪಾಪಿಯಾದರೂ ಶಕ್ತೀಶ್ವರನ ಅನುಗ್ರಹದಿಂದ ಮುಕ್ತನಾಗುವನು. ||೨೬||

ಎಲೈ ಪಾಕಯಜ್ಞನೇ, ಆ ಶಕ್ತೀಶ್ವರನಿರುವ ಗೋಪರ್ವತದಲ್ಲಿ ಮಹಾ ಯೋಗಿಯೂ, ಸಮಸ್ತ ಉಪನಿಷತ್ತುಗಳನ್ನೂ ತಿಳಿದವನೂ, ಆನಂದಸ್ವರೂಪನಾದ ಪರಬ್ರಹ್ಮತತ್ವದಲ್ಲಿ ಆಸಕ್ತನೂ ಆದ ಮಹಾಕಾರುಣಿಕನೆಂಬ ಹೆಸರಿನ ತಪಸ್ವಿಯು (ಗುರು) ಇರುವನು. ನಿನ್ನ ಮಗನೊಡನೆ ಹೋಗಿ ನೀನು ಅವನ ದರ್ಶನವನ್ನು ಮಾಡಿ, ಭೂಮಿಯಲ್ಲಿ ಸಾಷ್ಟಾಂಗನಮಸ್ಕಾರವನ್ನು ಮಾಡಿ, ಪ್ರತಿದಿನವೂ ಅವನ ಸೇವೆಯನ್ನು ಮಾಡುತ್ತಿರು. ಅದು ನಿನ್ನ ಸಮಸ್ತ ದುಃಖಗಳನ್ನೂ ನಾಶಮಾಡುವುದು. ಎಂದು ಹೇಳಿದನು. ||೨೭-೨೮||

ತಸ್ಯ ಶುಶ್ರೂಷಣಂ ನಿತ್ಯಂ ಕುರು ತತ್ತಾರಕಂ ಭವೇತ್ ।
ಇತ್ಯುಕ್ತೋ ದೇವಭಕ್ತೇನ ಮುನಿನಾ ಪಂಕಜೇಕ್ಷಣ ॥೨೯॥

ಪಾಕಯಜ್ಞಃ ಪಿತಾ ಪುತ್ರಂ ಶಶಿವರ್ಣ ಸಮಾಹ್ವಯಂ ।
ಅತೀವ ಪ್ರೀತಿಮಾಪನ್ನಃ ಶ್ರೀಮದ್ಗೋಪರ್ವತಂ ಗತಃ ॥೩೦॥

ಪುನಃ ಶಕ್ತೀಶ್ವರಂ ದೇವಂ ಸಹ ಪುತ್ರೇಣ ಪರ್ವಣಿ ।
ದೃಷ್ಟ್ವಾ ಪ್ರದಕ್ಷಿಣೀಕೃತ್ಯ ಶ್ರದ್ಧಯಾಽಷ್ಟೋತ್ತರಂ ಶತಂ ॥೩೧॥

ಪ್ರಸಾದಾತ್ತಸ್ಯ ಸರ್ವಜ್ಞಂ ಜೀವನ್ಮುಕ್ತಂ ಜಗದ್ಗುರುಂ ।
ಅತಿವರ್ಣಾಶ್ರಮಂ ಧೀರಂ ಮಹಾನಂದಪರಾಯಣಂ ॥೩೨॥

ದೃಷ್ಟ್ವಾ ದೂರೇ ಸ್ವಪುತ್ರೇಣ ಸಹ ಭೂಮೌ ಮುಹುರ್ಮುಹುಃ ।
ಪ್ರಣಮ್ಯ ದಂಡವದ್ಭಕ್ತ್ಯಾ ಪಾಕಯಜ್ಞಃ ಕೃತಾಂಜಲಿಃ ॥೩೩॥

ಸರ್ವಂ ವಿಜ್ಞಾಪಯಾಮಾಸ ಪುಂಡರೀಕ ನಿಭೇಕ್ಷಣಂ ।
ಸೋಽಪಿ ಸಾಕ್ಷಾನ್ಮಹಾಯೋಗೀ ಮಹಾಕಾರುಣಿಕೋತ್ತಮಃ ॥೩೪॥

ಕಮಲಾಕ್ಷನಾದ ವಿಷ್ಣುವೇ, ದೇವಭಕ್ತಮುನಿಯು ಹೀಗೆ ಹೇಳುತ್ತಲು, ಪಾಕಯಜ್ಞನು ಆ ವೇಳೆಗೆ ಪಶ್ಚಾತ್ತಪ್ತನಾಗಿದ್ದ ತನ್ನ ಮಗನಾದ ಶಶಿವರ್ಣನೊಡನೆ ಅತ್ಯಂತ ಸಂತೋಷದಿಂದ ಗೋಪರ್ವತಕ್ಕೆ ಹೋದನು. ||೨೯-೩೦||

ಅಲ್ಲಿ ಪರ್ವಕಾಲಗಳಲ್ಲಿ ಮಗನೊಡನೆ ಕೂಡಿ, ಶಕ್ತೀಶ್ವರನನ್ನು ಪುನಃ ಪುನಃ ದರ್ಶನಮಾಡಿ, ಅತ್ಯಂತಾಸಕ್ತಿಯಿಂದ ನೂರೆಂಟು ಪ್ರದಕ್ಷಿಣೆಯನ್ನು ಮಾಡಿ, ಆ ದೇವನ ಅನುಗ್ರಹದಿಂದ ಸರ್ವಜ್ಞನೂ, ಜೀವನ್ಮುಕ್ತನೂ, ಅತಿ ವರ್ಣಾಶ್ರಮಿಯೂ, ಆನಂದಸ್ವರೂಪನಾದ ಪರಮಾತ್ಮನಲ್ಲಿ ಆಸಕ್ತನೂ, ಆದ ಗುರುವನ್ನು ನೋಡಿ, ಮಗನೊಡನೆ ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಕೈಮುಗಿದುಕೊಂಡು ತನ್ನ ಸಂಗತಿಯೆಲ್ಲವನ್ನೂ ಆ ಗುರುವಿನಲ್ಲಿ ವಿಜ್ಞಾಪಿಸಿಕೊಂಡನು. ||೩೧-೩೨-೩೩||

ಕರುಣಾಶಾಲಿಯಾದ ಅತ್ಯಂತ ಶ್ರೇಷ್ಠನೂ, ಮಹಾ ಯೋಗಿಯೂ ಆದ ಗುರುವು, ಆತ್ಮಾನಂದವನ್ನು ಅನುಭವಿಸುವ ಸಂತೋಷದೊಡನೆ ಕೂಡಿ, ಆ ಪಾಪಿ

ಸ್ವಾತ್ಮಾನಂದಾನುಸಂಧಾನ ಪ್ರಮೋದೇನ ಸಹಾಚ್ಯುತ ।
ವಿಲೋಕ್ಯ ಪುತ್ರಂ ಪಾಪಿಷ್ಠಂ ಶಶಿವರ್ಣಸಮಾಹ್ವಯಂ ॥೩೫॥

ಶಿಷ್ಯತ್ವೇನಾಗ್ರಹೀದ್ವಿಪ್ರೋ ಬ್ರಹ್ಮವಿದ್ಯಾಬಲೇನ ತು ।
ತಸ್ಯಾವಲೋಕನಾದೇವ ಶಶಿವರ್ಣಸ್ಯ ಕಾನಿ ಚಿತ್ ॥೩೬॥

ವಿನಷ್ಟಾನಿ ಚ ಪಾಪಾನಿ ತತ್ಪರಿಗ್ರಹಕಾರಣಾತ್ ।
ಕಾನಿ ಚಿತ್ಕಲ್ಮಷಾಣ್ಯಸ್ಯ ಸೋಽಪಿ ನೀರೋಗತಾಂ ಗತಃ ॥೩೭॥

ಪುನಃ ಕಾಷ್ಠಂ ತೃಣಂ ತೋಯಂ ಶಾಕಮೂಲಫಲಾನಿಚ ।
ದಿನೇ ದಿನೇ ಸಮಾದಾಯ ಗುರವೇ ದತ್ತವಾನ್ಮುದಾ ॥೩೮॥

ತಸ್ಯ ಗೋರಕ್ಷಣಂ ಚಾಪಿ ಶಶಿವರ್ಣಃ ಸಮಾಹಿತಃ ।
ಅಕರೋತ್ತೇನ ಪಾಪಾನಿ ನಷ್ಟಾನಿ ಸುಬಹೂನಿ ಚ ॥೩೯॥

ಪುನಸ್ತಸ್ಯಚ ಶುಶ್ರೂಷಾಂ ಪಾದಮರ್ದನಮಚ್ಯುತ ।
ತೈಲಾಭ್ಯಂಗಂ ಚ ವಸ್ತ್ರಾದಿ ಶೋಭನಂ ಚಾಕರೋನ್ಮುದಾ ॥೪೦॥

ಯಾದ ಶಶಿವರ್ಣನೆಂಬ ಮಗನನ್ನು ನೋಡಿ ತನ್ನ ಸರ್ವಾತ್ಮಭಾವದ ಸಹಾನುಭೂತಿಯಿಂದ ಅವನನ್ನು ಶಿಷ್ಯನನ್ನಾಗಿ ಪರಿಗ್ರಹಿಸಿದನು. ॥೩೪-೩೫॥

ಆ ಗುರುವಿನ ನೋಟದಿಂದಲೇ ಶಶಿವರ್ಣನ ಕೆಲವು ಪಾಪಗಳು ನಾಶವಾದವು. ಅವನನ್ನು ಶಿಷ್ಯನನ್ನಾಗಿ ಪರಿಗ್ರಹಿಸಿದುದರಿಂದ ಮತ್ತೆ ಕೆಲವು ಪಾಪಗಳು ನಾಶವಾಗುತ್ತಲು, ಆ ಶಶಿವರ್ಣನ ಸಮಸ್ತ ರೋಗಗಳೂ ನಾಶವಾಗಿ ಅವನು ಆರೋಗ್ಯವುಳ್ಳವನಾದನು. ॥೩೬-೩೭॥

ಆ ಶಶಿವರ್ಣನು ಕಟ್ಟಿಗೆ, ಹುಲ್ಲು, ನೀರು, ಸೊಪ್ಪುಗಳು, ಗೆಡ್ಡೆಗೆಣಸುಗಳು ಇವುಗಳನ್ನು ಪ್ರತಿದಿನವೂ ಗುರುವಿಗೆ ತಂದುಕೊಡುವ ಕೆಲಸವನ್ನು ಅತ್ಯಂತ ಸಂತೋಷದಿಂದಲೂ, ಆಸಕ್ತಿಯಿಂದಲೂ ಮಾಡುತ್ತ ಆ ಗುರುಗಳ ಗೋವುಗಳನ್ನು ಮೇಯಿಸುತ್ತಾ ಸೇವೆಮಾಡುತ್ತಿದ್ದುದರಿಂದ ಅವನ ಪಾಪಗಳು ಹೀಗೆ ಪಶ್ಚಾತ್ತಾಪ, ಉಪರಮ, ಪ್ರಾಯಶ್ಚಿತ್ತಾಚರಣೆಗಳಿಂದ ನಾಶವಾದುವು. ॥೩೮-೩೯॥

ಮತ್ತೆ ಆ ಗುರುವಿನ ಸೇವಾರೂಪವಾದ ಕಾಲುಗಳನ್ನೊತ್ತುವುದು, ಅಭ್ಯಂಜನ ಸ್ನಾನಮಾಡಿಸುವುದು, ಬಟ್ಟೆಗಳನ್ನೊಗೆಯುವುದು ಮುಂತಾದ ಕೆಲಸಗಳನ್ನೂ

ತೈನ್ನೈವ ಹೇತುನಾಽಸ್ಯಸ್ಯ ಶಶಿವರ್ಣಸ್ಯ ಕೇಶವ ।
ಮಹತ್ತರಾಣಿ ನಷ್ಟಾನಿ ಪಾಪಾನಿ ಸುಬಹೂನಿ ಚ ॥೪೧॥

ತತಃ ಪ್ರಸನ್ನಃ ಸರ್ವಜ್ಞೋ ಮಹಾಯೋಗೀಶ್ವರೇಶ್ವರಃ ।
ಸ್ವಭುಕ್ತಶೇಷಂ ಕಾರುಣ್ಯಾದ್ದದೌ ತಸ್ಮೈ ಪ್ರಿಯೇಣ ಸಃ ॥೪೨॥

ತದ್ಭುಕ್ತಶೇಷಾಮೃತಪಾನಶಾಂತ ।
ಸರ್ವಾಘತಾಪೋ ಗುರುಮಾದರೇಣ ॥
ನತ್ವಾಽಥ ಶುಶ್ರೂಷಣಮಸ್ಯ ಶಿಷ್ಯ ।
ಶ್ಚಕ್ರೇ ಸದಾಽತೀವ ಮಹಾನುಭಾವಃ ॥೪೩॥

ತತಃ ಪ್ರಸನ್ನೋ ಗುರುರಸ್ಯ ವಿದ್ವಾನ್ ।
ಸ್ವಶಿಷ್ಯಮೇವಂ ಶಶಿವರ್ಣಸಂಜ್ಞಂ ॥
ಪ್ರಣಷ್ಟ ಪಾಪಂ ಪರಿಶುದ್ಧಚಿತ್ತಂ ॥
ಪ್ರಗೃಹ್ಯಭೂತ್ಯಾ ಸಿತಯಾಸ್ಯ ದೇಹಂ ॥೪೪॥

ಅತ್ಯಂತ ಸಂತೋಷದಿಂದ ಮಾಡಿದ ಕಾರಣದಿಂದ ಆ ಶಶಿವರ್ಣನ ಮಹಾಪಾಪಗಳನೇಕಗಳು ನಾಶವಾಗಿಹೋದವು. ||೪೦-೪೧||

ಶಿಷ್ಯನ ಈ ಸೇವೆಯಿಂದ ಸಂತುಷ್ಟನಾದ ಸರ್ವಜ್ಞನೂ, ಮಹಾಯೋಗೀಶ್ವರನೂ ಆದ ಗುರುವು ಅತ್ಯಂತ ಕರುಣೆಯಿಂದಲೂ, ಪ್ರೀತಿಯಿಂದಲೂ ಕೂಡಿ ತಾನು ತಿಂದು ಮಿಕ್ಕ ಆಹಾರವನ್ನು ಆ ಶಿಷ್ಯನಿಗೆ ಕೊಟ್ಟನು. ||೪೨||

ಆ ಶಿಷ್ಯನು ಗುರುವಿನ ಪ್ರಸಾದರೂಪವಾದ ಅಮೃತಪಾನದಿಂದ ತನ್ನ ಸಮಸ್ತವಾದ ಪಾಪಸಂಬಂಧವಾದ ತಾಪಗಳೆಲ್ಲವೂ ಶಾಂತವಾಗಲು ಪ್ರೀತಿಯಿಂದ ಗುರುಗಳಿಗೆ ನಮಸ್ಕಾರವನ್ನು ಮಾಡಿ ಅವರ ಸೇವೆಯನ್ನು ಯಾವಾಗಲೂ ಮಾಡುತ್ತ ತಾನೂ ಮಹಾತ್ಮನ ಸ್ಥಿತಿಯನ್ನು ಪಡೆದನು. ||೪೩||

ಆಮೇಲೆ ಶಿಷ್ಯನ ಸೇವೆಗೆ ಸಂತುಷ್ಟನಾದ ಜ್ಞಾನಿಯಾದ ಗುರುವು ತನ್ನ ಶಿಷ್ಯನಾದ ಶಶಿವರ್ಣನು ಪಾಪಗಳನ್ನೆಲ್ಲವನ್ನೂ ಕಳೆದುಕೊಂಡು ಶುದ್ಧಚಿತ್ತನಾಗಿರುವ

ಉದ್ಧೂಳ್ಯ ತಸ್ಮೈ ಪ್ರದದೌ ಮಹಾತ್ಮಾ ।
ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಂ ॥
ಬುಧ್ವಾ ಹೃಷೀಕೇಶ ಮಮಪ್ರಸಾದಾ ।
ಚ್ಛಿಷ್ಯೋಽಪಿ ಮಾಮಾತ್ಮತಯಾಽಪರೋಕ್ಷಂ ॥೪೫॥

ಮುಕ್ತೋಽಭವತ್ತಸ್ಯ ಪಿತಾಽಪಿ ವಿಷ್ಣೋ ।
ಶ್ರುತ್ವಾ 'ಬಲೇನೈವ ಮಮ ಪ್ರಸಾದಾತ್ ॥
ಶುಶ್ರೂಷಯಾ ತಸ್ಯ ವಿಲಕ್ಷಣಸ್ಯ ।
ವಿದ್ಯಾ ಮವಾಪ್ಯಾಶು ವಿಮುಕ್ತಿಮಾಪ ॥೪೬॥

ಪಿತರಸ್ತಸ್ಯ ಪರಾತ್ಮ ವಿದ್ಯಯಾ ।
ನರಕಾದೇವ ಸಮುದ್ಧೃತಾ ಹರೇ ॥
ಕುಲಮಪ್ಯಸ್ಯ ಪವಿತ್ರತಾಂ ಗತಂ ।
ಪೃಥಿವೀ ಪುಣ್ಯವತೀ ವಿಶೇಷತಃ ॥೪೭॥

ನೆಂದು ತಿಳಿದು, ಅವನನ್ನು ಹಿಡಿದುಕೊಂಡು ಅವನ ಮೈಗೆಲ್ಲಕ್ಕೂ ಬೆಳ್ಳಗಿರುವ ವಿಭೂತಿಯನ್ನು ಬಳಿದು ಅವನಿಗೆ ವೇದಾಂತ ವಿಜ್ಞಾನದಿಂದ ನಿಶ್ಚಿತವಾದ ಪರಬ್ರಹ್ಮ ತತ್ವವನ್ನು ಉಪದೇಶಮಾಡಿದನು. ॥೪೪॥

ಇಂದ್ರಿಯಗಳಿಗೆಲ್ಲಕ್ಕೂ ಒಡೆಯನಾದ ವಿಷ್ಣುವೇ, ಆ ಶಿಷ್ಯನೂ ಕೂಡ ನನ್ನ ಅನುಗ್ರಹದಿಂದ ನನ್ನನ್ನು ಆತ್ಮಸ್ವರೂಪದಿಂದ ತಿಳಿದು ಅಪರೋಕ್ಷಜ್ಞಾನದಿಂದ ಮುಕ್ತಿಯನ್ನು ಪಡೆದನು. ಅವನ ತಂದೆಯಾದ ಪಾಕಯಜ್ಞನೂ, ನನ್ನ ಅನುಗ್ರಹ ಬಲದಿಂದಲೇ ಆ ವಿಲಕ್ಷಣಸ್ವರೂಪನಾದ ಗುರುವಿನ ಸೇವೆಯಿಂದ ಬೇಗನೆ ನಿತ್ಯಾನಂದ ಸ್ವರೂಪವಾದ ಬ್ರಹ್ಮವಿದ್ಯೆಯನ್ನು ಪಡೆದು ಮುಕ್ತನಾದನು. ॥೪೫-೪೬॥

ಹರಿಯೇ, ಆ ಪಾಕಯಜ್ಞನಿಗೆ ಆತ್ಮವಿದ್ಯಾಪ್ರಾಪ್ತಿಯಾದುದರಿಂದ ಅವನ ಪಿತೃಗಳೂ ನರಕದುಃಖವನ್ನು ಕಳೆದುಕೊಂಡು ಉದ್ಧಾರವನ್ನು ಪಡೆದರು. ಅವನ ವಂಶವೂ ಪವಿತ್ರವಾಯಿತು. ಇವರುಗಳ ವಾಸದಿಂದ ಭೂಮಿಯೂ ವಿಶೇಷ ಪುಣ್ಯವನ್ನು ಪಡೆಯಿತು. ॥೪೭॥

ಭುಕ್ತ್ವಾ ಪುರಾ ತೇನ ಮಹಾನುಭಾವ ।
ಚಂಡಾಲಕನ್ಯಾಽಪಿ ದಿವಂ ಪ್ರವಿಷ್ಟಾ ॥
ನ(ಭ್ರ)ಷ್ಟಾ ನರಾ ಭೂಧರ ನಾಕಪೃಷ್ಠೇ ।
ವಿದ್ಯಾಬಲೇನಾಸ್ಯ ಸುಖಂ ಪ್ರಯಾತಾಃ ॥೪೮॥

ಶೃಣುಷ್ವ ಚಾನ್ಯತ್ಪರಯಾ ಮುದಾ ಹರೇ ।
ತವಾಹಮದ್ಯಾಭಿವದಾಮಿ ಸದ್ಗುರೋಃ ॥
ವಿಲಕ್ಷಣಸ್ಯಾತ್ಮವಿದೋ ಮಹಾತ್ಮನಃ ।
ಶರೀರಶುಶ್ರೂಷಣಜಂ ಮಹಾಫಲಂ ॥೪೯॥

ಪುರಾ ಮಹಾಪಾಪಬಲಾತ್ಪುರಾತನಾ ।
ನ್ನಿಹತ್ಯ ವೇಶ್ಯಾ ಸುಭಗಾಭಿಧಾ ಪತೀನ್ ॥
ಧನಾನಿ ತೇಷಾಮಭಿವಾಂಛಯಾ ಸದಾ ।
ಹರೇ ಸಮಾದಾಯ ಸುಹೃಜ್ಜನೈರಪಿ ॥೫೦॥

ಮಹಾಮಹಿಮನಾದ ವಿಷ್ಣುವೇ, ಕೇಳು. ಹಿಂದೆ ಆ ಶಶಿವರ್ಣನು ಅನುಭವಿಸಿದ ಚಂಡಾಲಕನ್ಯೆಯೂ ಕೂಡ ಸ್ವರ್ಗಕ್ಕೆ ಹೋದಳು. ಆಗ ಸ್ವರ್ಗಲೋಕದಲ್ಲಿ ಸುಖವನ್ನನುಭವಿಸಿ ಪುಣ್ಯವನ್ನು ಕಳೆದುಕೊಂಡಿದ್ದ ಜನರು ಈ ಶಶಿವರ್ಣನಿಗೆ ಉಂಟಾದ ವಿದ್ಯಾಬಲದಿಂದ ಮತ್ತೆ ಸುಖವನ್ನು ಹೊಂದಿದರು. ॥೪೮॥

ಎಲೈ ಹರಿಯೇ, ಆತ್ಮಜ್ಞಾನಿಯೂ ಮಹಾಮಹಿಮನೂ, ಅತಿ ವರ್ಣಾಶ್ರಮಿಯಾದುದರಿಂದ ವಿಲಕ್ಷಣವಾದ ಆಚಾರವುಳ್ಳವನೂ ಆದ ಸದ್ಗುರುವಿನ ಶರೀರ ಸಂಬಂಧವಾದ ಸೇವೆಯ ಮಹಾಫಲವೆಂಬ ಮತ್ತೊಂದು ವಿಷಯವನ್ನು ಹೇಳುವೆನು. ಅತ್ಯಂತ ಸಂತೋಷದಿಂದ ಕೇಳು. ॥೪೯॥

ಬಹಳ ಕಾಲದ ಹಿಂದೆ ಸುಭಗಾ ಎಂಬ ಹೆಸರಿನ ಒಬ್ಬ ಸೂಳೆಯು ತನ್ನ ಮಹಾಪಾಪದೋಷದ ಬಲದಿಂದ ತನ್ನಲ್ಲಿಗೆ ಬಂದ ಅನೇಕ ವಿಟರನ್ನು ಕೊಂದು ಅತ್ಯಾಸೆಯಿಂದ ಅವರ ಧನವನ್ನೆಲ್ಲವನ್ನೂ ತೆಗೆದುಕೊಂಡು ತನ್ನ ಗೆಳೆಯರು, ಸೇವಕರು, ಮಕ್ಕಳು, ತಾಯಿ ಇವರೊಡನೆ ಕೂಡಿ ವಿಶೇಷ ಸುಖಾನುಭವವನ್ನು ಮಾಡುತ್ತಿದ್ದಳು. ॥೫೦॥

ಸ್ವದಾಸವರ್ಗೈಃ ಸಹ ಪುತ್ರಕೈಃ ಸ್ವಕೈಃ ।
ಸ್ತ್ರಥಾಽಂಬಯಾ ಭುಕ್ತವತೀ ಮಹಾಸುಖಂ ।
ಪಿಶಾಚಿಕಾಭಿಃ ಪರಿಪೀಡಿತಾ ಪುನಃ ।
ಸದಾ ಮಹಾವ್ಯಾಧಿಭಿರಪ್ಯತೀವ ಸಾ ॥೫೧॥

ನಿದ್ರಾಽಪಿ ನಾಭೂತ್ಪುರುಷೋತ್ತಮಾಸ್ಯಾಃ ।
ಕಷ್ಟಾಂ ದಶಾಮಾಪ ಸಹ ಸ್ವಕೀಯೈಃ ॥
ತಸ್ಯಾ ಗೃಹಂ ಚಕ್ರಧರಾತಿ ವಿದ್ವಾನ್ ।
ಕ್ಷುತ್ಪೀಡಿತೋ ವಿವಶಃ ಸಂಪ್ರಪೇದೆ ॥೫೨॥

ಅನೇಕಜನ್ಮಾರ್ಜಿತ ಪುಣ್ಯ ಕರ್ಮಣಾ ।
ವಿಲಕ್ಷಣಂ ಬ್ರಹ್ಮವಿದಂ ಗೃಹಾಗತಂ ॥
ವಿಲೋಕ್ಯ ಸಾ ಭೂಮಿತಲೇ ಸಮಾಹಿತಾ ।
ಪ್ರಣಮ್ಯ ತತ್ಪಾದ ಸರೋರುಹದ್ವಯಂ ॥೫೩॥

ಸ್ವಾಂತರ್ಗೃಹೇ ಶೀತಲಗಂಧತೋಯೈಃ ।
ಪ್ರಕ್ಷಾಲ್ಯ ಪಾದೋದಕ ಮಾದರೇಣ ॥
ಆದಾಯ ಪೀತ್ವಾ ಸುಭಗಾ ವಿಮುಕ್ತಾ ।
ಪಿಶಾಚಿಕಾಭಿಶ್ಚ ಸಮಸ್ತ ರೋಗೈಃ ॥೫೪॥

ಎಲೈ ಪುರುಷಶ್ರೇಷ್ಠನೇ, ಆ ಸೂಳೆಯ ಪಾಪವು ಪರಿಪಾಕಾವಸ್ಥೆಗೆ ಬರುತ್ತಲು ಅವಳಿಗೆ ಪಿಶಾಚಿಗಳ ಬಾಧೆಯೂ, ರೋಗಗಳ ಬಾಧೆಯೂ, ಯಾವಾಗಲೂ ಹೆಚ್ಚಿ ಅವಳು ನಿದ್ರೆಯನ್ನೂ ಕೂಡ ಅನುಭವಿಸದೆ ತನ್ನ ಬಂಧುಗಳೊಡನೆ ಬಹಳ ಕಷ್ಟಕ್ಕೆ ಗುರಿಯಾದಳು. ॥೫೧॥

ಚಕ್ರವನ್ನು ಧರಿಸಿದ ವಿಷ್ಣುವೇ, ಆ ಸೂಳೆಯ ಮನೆಗೆ ಮಹಾವಿದ್ವಾಂಸನಾದ ಒಬ್ಬನು ಹಸಿವಿನಿಂದ ಕೂಡಿದವನಾಗಿ ಅಕಸ್ಮಾತ್ತಾಗಿ ಪ್ರವೇಶಮಾಡಿದನು. ಅವಳು ಅನೇಕ ಜನ್ಮಗಳಲ್ಲಿ ಸಂಪಾದಿಸಿದ ಯಾವುದೋ ಪುಣ್ಯಕರ್ಮಗಳ ಪರಿಪಾಕದಿಂದ ತನ್ನ ಮನೆಗೆ ಬಂದ, ವಿಲಕ್ಷಣವಾಗಿದ್ದ ಬ್ರಹ್ಮಜ್ಞಾನಿಯನ್ನು ಕಂಡು, ಅವಳು ಸಾಷ್ಟಾಂಗನಮಸ್ಕಾರವನ್ನು ಮಾಡಿ ಒಳಗೆ ಕರೆದುಕೊಂಡು ಹೋಗಿ, ತಣ್ಣಗಿರುವ ಸುಗಂಧವಾದ ನೀರಿನಿಂದ ಅವನ ಪಾದಕಮಲಗಳನ್ನು ತೊಳೆದು, ಆ ನೀರನ್ನು

ತತಃ ಪ್ರಶಾಂತಂ ಸುಭಗಾತಿವಿಸ್ಮಿತಾ ।
ಮಹಾನುಭಾವಂ ಪರಮಾರ್ಥವೇದಿನಂ ॥
ಅಪೂಗ ಶಾಲ್ಯೋದನ ಪೂರ್ವಕೈರ್ವರೈಃ ।
ಸುಭೋಜ್ಯ ತಂ ಚಂದನ ಕುಂಕುಮಾದಿಭಿಃ ॥೫೫॥

ವಸ್ತ್ರೈಃ ಸುಸೂಕ್ಷ್ಮೈಶ್ಚ ಸುಗಂಧ ಪುಷ್ಪೈ ।
ಸ್ತಾಂಬೂಲವಲ್ಲೀದಲ ಪೂರ್ವಕೈಶ್ಚ ॥
ಆರಾಧ್ಯ ಭಕ್ತ್ಯಾ ಸಹಸುಪ್ರಸನ್ನಾ ।
ತಂ ಪ್ರಾರ್ಥಯಾಮಾಸ ಪರಾತ್ಮನಿಷ್ಠಂ ॥೫೬॥

ತ್ವದ್ದರ್ಶನೇನೈವ ಸಮಸ್ತರೋಗತೋ ।
ವಿಮುಕ್ತದೇಹಾಹಮತೀವ ನಿರ್ಮಲಾ ॥
ಅತಶ್ಚ ಮಾಮಾಮರಣಾದಪಿ ಪ್ರಭೋ ।
ಸುಭುಂಕ್ಷ್ವ ದಾಸ್ಯಂ ಕರವಾಣಿ ತೇ ಸದಾ ॥೫೭॥

ಪ್ರೀತಿಯಿಂದ ತೆಗೆದುಕೊಂಡು ಕುಡಿದು, ಆ ಸುಭಗೆಯು ಪಿಶಾಚಿಗಳ ಬಾಧೆಯನ್ನೂ ಸಮಸ್ತ ರೋಗಗಳ ಬಾಧೆಯನ್ನೂ ಕಳೆದುಕೊಂಡಳು. ||೫೨-೫೩-೫೪||

ಆಮೇಲೆ ಆ ಸುಭಗಾ ಎಂಬ ಸೂಳೆಯು ತನಗೆ ಉಂಟಾದ ಸುಖದಿಂದ ಅತ್ಯಂತಾಶ್ಚರ್ಯವನ್ನು ಹೊಂದಿ, ಶಾಂತನೂ, ಪರಮಾತ್ಮಸ್ವರೂಪವನ್ನು ತಿಳಿದವನೂ, ಮಹಾಮಹಿಮಾವಂತನೂ ಆದ ಅವನಿಗೆ ಭಕ್ಷ್ಯಭೋಜ್ಯಾದಿಗಳಿಂದ ತೃಪ್ತಿಪಡಿಸಿ, ವಸ್ತ್ರಗಂಧ ತಾಂಬೂಲ ಮುಂತಾದವುಗಳಿಂದ ಅತ್ಯಂತಭಕ್ತಿಯಿಂದ ಅವನನ್ನು ಪೂಜಿಸಿ, ಸಂತೋಷದಿಂದ ಆತ್ಮಜ್ಞಾನನಿಷ್ಠನಾದ ಆತನನ್ನು ಪ್ರಾರ್ಥಿಸಿದಳು. ||೫೫-೫೬||

ಓ ಸ್ವಾಮಿಯೇ, ನಿನ್ನ ದರ್ಶನದಿಂದಲೇ ನನ್ನ ಸಮಸ್ತ ರೋಗಗಳೂ ನಾಶವಾಗಿ ನಾನು ಅತ್ಯಂತ ಪರಿಶುದ್ಧಳಾಗಿರುವೆನು. ಆ ಕಾರಣದಿಂದ ನನ್ನ ಮರಣ ಪರ್ಯಂತವಾಗಿಯೂ, ನೀನು ನನ್ನನ್ನು ಅನುಭವಿಸಬಹುದು. ನಾನು ನಿನ್ನ ದಾಸಿಯಾಗಿ ಯಾವಾಗಲೂ ನಿನ್ನ ಸೇವೆಯನ್ನು ಮಾಡಿಕೊಂಡಿರುವೆನು. ||೫೭||

ಇತ್ಯೇವಂ ಪ್ರಾರ್ಥಿತಃ ಸಮ್ಯಕ್ತಯಾ ಪ್ರೀತೋ ಜನಾರ್ದನ ।
ಪ್ರಾರಬ್ಧಕರ್ಮಣಾ ನೀತ ಸ್ತಥಾ ಚಕ್ರೇ ಮತಿಂ ಬುಧಃ ॥೫೮॥

ಸಾಽಪಿ ನಿತ್ಯಂ ಮಹಾವಿಷ್ಣೋ ಶ್ರದ್ಧಯಾ ಪರಯಾ ಸಹ ।
ಅತೀವ ಪೂಜಯಾಮಾಸ ಸ್ವಾತ್ಮನಾ ಚ ಧನೇನ ಚ ॥೫೯॥

ವತ್ಸರಾಣಾಂ ತ್ರಯಂ ಪೂಜಾಂ ಕೃತ್ವಾ ತಸ್ಯ ಮಹಾತ್ಮನಃ ।
ಸುಭಗಾ ಸಾ ತಥಾ ಜ್ಞಾನಂ ಲಬ್ಧ್ವಾ ಮುಕ್ತಾಽಭವದ್ಧರೇ ॥೬೦॥

ತಸ್ಯಾಃ ಪುತ್ರಾಶ್ಚ ಪೌತ್ರಾಶ್ಚ ಸುಹೃದೋ ಬಂಧು ಬಾಂಧವಾಃ ।
ದಾಸವರ್ಗಾಶ್ಚ ಮಾತಾ ಚ ಸ್ವರ್ಗಲೋಕಂ ಗತಾ ಹರೇ ॥೬೧॥

ಬಹವೋ ಬ್ರಹ್ಮವಿದ್ವಾಂಸಂ ಸಮಾರಾಧ್ಯ ಯಥಾಬಲಂ ।
ತೇನ ಬ್ರಹ್ಮಾತ್ಮ ವಿಜ್ಞಾನಂ ವೇದಾಂತಾರ್ಥಂ ವಿಮುಕ್ತಿದಂ ॥೬೨॥
ಅಪರೋಕ್ಷ ಮವಾಪ್ಯಾಶು ವಿಮುಕ್ತಾ ಭವಬಂಧನಾತ್ ।

ಹೀಗೆಂದು ಅವಳು ಪ್ರಾರ್ಥಿಸುತ್ತಲು ಆತನು ಸಂತೋಷಪಡುತ್ತಾ ಪ್ರಾರಬ್ಧ ಕರ್ಮವಶದಿಂದ ಅವಳ ಇಷ್ಟಾನುಸಾರವಾಗಿ ಇರಬೇಕೆಂದು ಮನಸ್ಸು ಮಾಡಿದನು. ॥೫೮॥

ಮಹಾವಿಷ್ಣುವೇ, ಆ ಸುಭಗೆಯೂ ಕೂಡ ಅತ್ಯಂತಾಸಕ್ತಿಯಿಂದ ಕೂಡಿ, ತನ್ನ ಶರೀರದಿಂದಲೂ, ಧನದಿಂದಲೂ, ಅವನನ್ನು ಪೂಜಿಸಿದಳು. ॥೫೯॥

ಸುಭಗೆಯು ಮೂರು ವರ್ಷಗಳವರೆಗೆ ಆ ಮಹಾತ್ಮನ ಪೂಜೆಯನ್ನು ಮಾಡಿ ಅವನಂತೆಯೇ ಜ್ಞಾನವನ್ನು ಪಡೆದು ಮೋಕ್ಷವನ್ನು ಹೊಂದಿದಳು. ॥೬೦॥

ಆಕೆಯ ಮಕ್ಕಳೂ, ಮೊಮ್ಮಕ್ಕಳೂ, ಸ್ನೇಹಿತರೂ, ನೆಂಟರೂ, ಆಳುಗಳೂ, ತಾಯಿಯೂ, ಸ್ವರ್ಗಲೋಕಕ್ಕೆ ಹೋದರು. ॥೬೧॥

ಅನೇಕ ಜನರು ತಮ್ಮ ಶಕ್ತ್ಯನುಸಾರವಾಗಿ ಬ್ರಹ್ಮಜ್ಞಾನಿಯನ್ನು ಪೂಜಿಸಿ, ಅವನಿಂದ ಮುಕ್ತಿಯನ್ನು ಕೊಡತಕ್ಕ ವೇದಾಂತಾರ್ಥವುಳ್ಳ ಬ್ರಹ್ಮಜ್ಞಾನವನ್ನು ಅಪರೋಕ್ಷವಾಗಿ ಪಡೆದು ಸಂಸಾರಬಂಧದ ಪಾಶದಿಂದ ಬಿಡುಗಡೆಯನ್ನು ಹೊಂದಿದರು. ॥೬೨॥

ಯತ್ರ ನಿತ್ಯಂ ವಸೇತ್ ಜ್ಞಾನೀ ತತ್ರಾಹಂ ಸರ್ವದಾ ಸ್ಥಿತಃ ॥೬೩॥

ಸುದೂರಮಪಿ ಗಂತವ್ಯಂ ಯತ್ರ ಮಾಹೇಶ್ವರೋ ಜನಃ ।
ಪ್ರಯತ್ನೇನಾಪಿ ದ್ರಷ್ಟವ್ಯ ಸ್ತತ್ರಾಹಂ ಸರ್ವದಾ ಸ್ಥಿತಃ ॥೬೪॥

ನಿಮೇಷಂ ವಾ ತದರ್ಧಂ ವಾ ಯತ್ರ ಜ್ಞಾನೀ ಹರೇ ಸ್ಥಿತಃ ।
ತತ್ರ ತೀರ್ಥಾನಿ ಸರ್ವಾಣಿ ತಿಷ್ಠಂತ್ಯೇವ ನ ಸಂಶಯಃ ॥೬೫॥

ಯೋಽನಿಷ್ಟಂ ಬ್ರಹ್ಮನಿಷ್ಠಸ್ಯ ಕರೋತ್ಯಜ್ಞಾನತೋಽಪಿ ವಾ ।
ವಿಮೂಢಃ ಸ ಮಮಾನಿಷ್ಟಂ ಕರೋತ್ಯೇವ ನ ಸಂಶಯಃ ॥೬೬॥

ಅಂಬಿಕಾಯಾಃ ಪ್ರಿಯೋಽತ್ಯರ್ಥಂ ಮಮ ಜ್ಞಾನೀ ಸದಾ ಹರೇ ।
ಬಹಿಷ್ಠಾಃ ಸರ್ವದಾ ಸರ್ವೇ ಜ್ಞಾನೀ ತ್ವಾತ್ಮೈವ ಮೇ ಸದಾ ॥೬೭॥

ಆತ್ಮನಿಷ್ಠಂಚ ಮಾಂ ವಿಷ್ಣೋ ವಿಭಿನ್ನಂ ಪ್ರವದಂತಿ ಯೇ ।
ತೇ ಮೂಢಾ ಏವ ಮನುಜಾ ನಾತ್ರ ಕಾರ್ಯಾ ವಿಚಾರಣಾ ॥೬೮॥

ಯಾವ ಸ್ಥಳದಲ್ಲಿ ಜ್ಞಾನಿಯು ವಾಸಮಾಡುತ್ತಿರುವನೋ ಅಲ್ಲಿ ನಾನು ಯಾವಾಗಲೂ ಇರುವೆನು. ಎಲ್ಲಿ ಮಹೇಶ್ವರನ ಭಕ್ತರಿರುವರೋ ಅದು ಎಷ್ಟು ದೂರವಾದರೂ ಪ್ರಯತ್ನಪೂರ್ವಕವಾಗಿ ಅಲ್ಲಿಗೆ ಹೋಗಿ ಅವರ ದರ್ಶನವನ್ನು ಮಾಡಬೇಕು. ಅಲ್ಲಿ ನಾನು ಯಾವಾಗಲೂ ನೆಲೆಸಿರುವೆನು. ॥೬೩-೬೪॥

ಹರಿಯೇ, ಒಂದು ನಿಮಿಷವಾಗಲೀ, ಅರ್ಧನಿಮಿಷವಾಗಲೀ, ಎಲ್ಲಿ ಜ್ಞಾನಿಯು ಇರುವನೋ ಅಲ್ಲಿ ಸಮಸ್ತ ಪುಣ್ಯತೀರ್ಥಗಳೂ ಇರುವುವು. ಸಂದೇಹವಿಲ್ಲ. ॥೬೫॥

ಯಾವನು ಬ್ರಹ್ಮಜ್ಞಾನಿಗೆ ತಿಳಿವಳಿಕೆಯಿಲ್ಲದೆಯಾದರೂ ಕೆಡುಕನ್ನು ಮಾಡುವನೋ ಆ ಮೂಢನು ನನಗೆ ಕೆಡುಕನ್ನು ಮಾಡಿದಂತೆ ಭಾವಿಸುವೆನು.॥೬೬॥

ಹರಿಯೇ, ಜ್ಞಾನಿಯು ಉಮಾದೇವಿಗಿಂತಲೂ ನನಗೆ ಅತ್ಯಂತ ಪ್ರೀತಿಪಾತ್ರನು. ನನಗೆ ಸಕಲರೂ ಯಾವಾಗಲೂ ಹೊರಗಿನವರು. ಜ್ಞಾನಿಯಾದರೋ ನನ್ನ ಆತ್ಮಸ್ವರೂಪವೇ ಆಗಿರುವನು. ॥೬೭॥

ವಿಷ್ಣುವೇ, ಯಾರು ಆತ್ಮನಿಷ್ಠನನ್ನೂ ನನ್ನನ್ನೂ ಬೇರೆ ಬೇರೆ ಎಂಬುದಾಗಿ ತಿಳಿಯುವರೋ ಅವರು ಅಜ್ಞಾನಿಗಳೇ ಆಗಿರುವರು. ॥೬೮॥

ತಸ್ಮಾದಾತ್ಮವಿದಃ ಸರ್ವೈಃ ಪೂಜನೀಯಾ ವಿಶೇಷತಃ ।
ವೇದ ವೇದಾಂತ ವಾಕ್ಯಾನಾಂ ಮುಖ್ಯಾಽರ್ಥಃ ಸಂಗ್ರಹೇಣ ತೇ॥೬೯॥

ಕಥಿತಃ ಸಾರಭೂತೋಽಯಂ ಶೇಷೋಽನ್ಯೋ ಗ್ರಂಥವಿಸ್ತರಃ ।
ಶಾಸ್ತ್ರಾಣ್ಯಧೀತ್ಯ ಮೇಧಾವೀ ಗುರೋರಭ್ಯಸ್ಯ ತಾನ್ಯಪಿ ।
ಪಲಾಲಮಿವ ಧಾನ್ಯಾರ್ಥೀ ತ್ಯಜೇದ್ಗ್ರಂಥಮಶೇಷತಃ ॥೭೦॥

ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ ।
ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥೭೧॥

ದುರ್ಲಭಂ ಪ್ರಾಪ್ಯ ಮಾನುಷ್ಯಂ ತತ್ರಾಪಿ ಬ್ರಹ್ಮವಿಗ್ರಹಂ ।
ಬ್ರಾಹ್ಮಣ್ಯಂ ಚ ತಥಾ ವಿಷ್ಣೋ ವೇದಾಂತಶ್ರವಣಾದಿನಾ ॥೭೨॥

ಅತಿವರ್ಣಾಶ್ರಮಂ ರೂಪಂ ಸಚ್ಚಿದಾನಂದಮದ್ವಯಂ ।
ಯೋ ನ ಜಾನಾತಿ ಸೋಽವಿದ್ವಾನ್ಕದಾ ಮುಕ್ತೋ ಭವಿಷ್ಯತಿ ॥೭೩॥

ಆದುದರಿಂದ ಆತ್ಮಜ್ಞಾನಿಗಳನ್ನು ಸಮಸ್ತರೂ ವಿಶೇಷವಾಗಿ ಪೂಜಿಸಬೇಕು. ಎಲೈ ವಿಷ್ಣುವೇ, ವೇದ ಮತ್ತು ಉಪನಿಷತ್ತಿನ ವಾಕ್ಯಗಳಿಗೆ ಸಂಗ್ರಹವಾಗಿಯೂ, ಸಾರವಾದುದಾಗಿಯೂ ಇರುವ ಅರ್ಥವನ್ನು ನಿನಗೆ ಹೇಳಿರುವೆನು. ಇನ್ನೇನು ವಿಶೇಷವನ್ನು ಹೇಳಿದರೂ ಅದು ಬರಿಯ ಗ್ರಂಥದ ವಿಸ್ತಾರವಾಗುವುದು. ॥೬೯॥

ಬುದ್ಧಿವಂತನಾದವನು ಶಾಸ್ತ್ರಗಳನ್ನು ಓದಿ ಅವುಗಳ ಅಭಿಪ್ರಾಯವನ್ನು ಗುರುಗಳಿಂದ ತಿಳಿದುಕೊಂಡು ಅಭ್ಯಾಸಮಾಡಿ, ಧಾನ್ಯವನ್ನು ಅಪೇಕ್ಷಿಸುವನು ಹೊಟ್ಟನ್ನು ಬಿಟ್ಟು ಕಾಳನ್ನು ತರುವಂತೆ, ಗ್ರಂಥವನ್ನು ಬಿಟ್ಟು ಅದರ ಸಾರವನ್ನು ಗ್ರಹಿಸಬೇಕು. ॥೭೦॥

ಭೂಮಂಡಲದಲ್ಲೆಲ್ಲಾ ವಿಶೇಷ ಮಳೆಯಾಗಿ ಎಲ್ಲೆಲ್ಲಿಯೂ ನೀರು ತುಂಬಿರುವಾಗ ಬಾಯಾರಿಕೆಯುಳ್ಳವನಿಗೆ ಬಾವಿಯಿಂದ ಹೆಚ್ಚಿನ ಪ್ರಯೋಜನವಿರುವುದಿಲ್ಲ. ಹೀಗೆಯೇ ತತ್ವಜ್ಞನಾದವನಿಗೆ ವೇದಗಳಿಂದಲೂ, ಅದರಲ್ಲಿ ಹೇಳುವ ಕರ್ಮಗಳಿಂದಲೂ ಯಾವ ಪ್ರಯೋಜನವೂ ಇರುವುದಿಲ್ಲ. ॥೭೧॥

ಜೀವನಿಗೆ ಮನುಷ್ಯಜನ್ಮವೇ ದುರ್ಲಭವಾದುದು. ಹೀಗಿರುವಲ್ಲಿ ಇಂತಹ ಮನುಷ್ಯಜನ್ಮವನ್ನು ಪಡೆದು, ಅದರಲ್ಲಿ ವೇದಾಧ್ಯಯನಕ್ಕೆ ಅಧಿಕಾರವುಳ್ಳ ಶರೀರವನ್ನು ಹೊಂದಿ (ವರ್ಣತ್ರಯ ಶರೀರ) ವೇದಾಂತಶ್ರವಣಾದಿಗಳಿಂದ ಬ್ರಹ್ಮನಿಷ್ಠತೆ

ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ ।
ತದಾಽವಿಜ್ಞಾಯಚ ಶಿವಂ ದುಃಖಸ್ಯಾಂತೋ ಭವಿಷ್ಯತಿ ॥೭೪॥

ಬಹೂನಾಂ ಜನ್ಮನಾಮಂತೇ ಮಹಾಪುಣ್ಯವತಾಂ ನೃಣಾಂ ।
ಪ್ರಸಾದಾದೇವ ಮೇ ವಾಕ್ಯಾತ್ ಜ್ಞಾನಂ ಸಮ್ಯಗ್ವಿಜಾಯತೇ ॥೭೫॥

ಯಸ್ಮಿನ್ದೇಹೇ ದೃಢಂ ಜ್ಞಾನ ಮಪರೋಕ್ಷಂ ವಿಜಾಯತೇ ।
ತದ್ದೇಹನಾಶಪರ್ಯಂತ ಮೇವ ಸಂಸಾರದರ್ಶನಂ ॥೭೬॥

ಯನ್ನು ಪಡೆದು ಸಚ್ಚಿದಾನಂದೈಕರಸಸ್ವರೂಪವಾದ ಅತಿವರ್ಣಾಶ್ರಮಸ್ವರೂಪ ವನ್ನು ಯಾವನು ತಿಳಿಯುವುದಿಲ್ಲವೋ ಅಂತಹ ಮೂಢನು ಬೇರೆ ಯಾವಾಗ ಮುಕ್ತ ನಾಗುತ್ತಾನೆ? ॥೭೨-೭೩॥

ಮನುಷ್ಯರು ಯಾವಾಗ ಅಮೂರ್ತವಾದ ಆಕಾಶವನ್ನು ಚರ್ಮದಂತೆ ಸುತ್ತಿ ಹೊದೆದುಕೊಳ್ಳುವರೋ ಆಗ ಶಿವನಸ್ವರೂಪವನ್ನು ತಿಳಿಯದಿದ್ದರೂ ಮೋಕ್ಷವನ್ನು ಪಡೆಯುವರು. ಎಂದರೆ ಆಕಾಶವನ್ನು ಚರ್ಮದಂತೆ ಸುತ್ತಿಹೊದೆದುಕೊಳ್ಳುವುದು ಹೇಗೆ ಸಾಧ್ಯವಲ್ಲವೋ ಹಾಗೆ ಆತ್ಮತತ್ವಸ್ವರೂಪನಾದ ಶಿವನ ಜ್ಞಾನವಿಲ್ಲದೇ ಸಮಸ್ತ ದುಃಖನಿವೃತ್ತಿರೂಪವಾದ ಮೋಕ್ಷವನ್ನು ಹೊಂದಲು ಸಾಧ್ಯವಾಗುವುದಿಲ್ಲ ವೆಂದು ತಾತ್ಪರ್ಯವು. ॥೭೪॥

ಅನೇಕ ಜನ್ಮಗಳನ್ನು ಅನುಭವಿಸಿ, ಕೊನೆಯಲ್ಲಿ ಮಹಾಪುಣ್ಯಫಲವುಳ್ಳವನಿಗೆ ನನ್ನ ಅನುಗ್ರಹದಿಂದಲೇ ವೇದಾಂತಮಹಾವಾಕ್ಯಗಳ ವಿಮರ್ಶೆಯಿಂದ ಜ್ಞಾನವು ಸ್ಫೂರ್ತಿಯಾಗುವುದು. ॥೭೫॥

ಜೀವನಿಗೆ ಯಾವ ದೇಹದಲ್ಲಿ ದೃಢವಾದ ಅಪರೋಕ್ಷಜ್ಞಾನವುಂಟಾಗುವುದೋ ಆ ದೇಹವು ನಾಶವಾಗುವ ವರೆಗೆ ಮಾತ್ರ ಆ ಜೀವನಿಗೆ ಸಂಸಾರ ದರ್ಶನವಿರುವುದು. ಎಂದರೆ, ಅಪರೋಕ್ಷಜ್ಞಾನವುಂಟಾದರೂ ಆ ಶರೀರಪ್ರಾಪ್ತಿಗೆ ಕಾರಣವಾದ ಪ್ರಾರಬ್ಧ ಕರ್ಮವು ತನ್ನ ಫಲವನ್ನು ಕೊಟ್ಟು ಮುಗಿಯುವ ಪ್ರಾರಬ್ಧಕ್ಷಯ ಪರ್ಯಂತವಾಗಿ ಆ ದೇಹವಿರುವುದರಿಂದ ಇಂತಹರು ಜೀವನ್ಮುಕ್ತರೆನಿಸಿಕೊಂಡು ಅತಿವರ್ಣಾಶ್ರಮಿಗಳಾಗಿ, ಗುರುಗಳಾಗಿ ಜ್ಞಾನೋಪದೇಶವನ್ನು ಮಾಡುತ್ತಿರುವರೆಂದು ಅಭಿಪ್ರಾಯವು. ॥೭೬

ಪುರಾಽಪಿ ನಾಸ್ತಿ ಸಂಸಾರ ದರ್ಶನಂ ಪರಮಾರ್ಥತಃ ।
ಕಥಂ ತದ್ದರ್ಶನಂ ದೇಹವಿನಾಶಾದೂರ್ಧ್ವಮುಪ್ಯತ ॥೭೭॥

ತಸ್ಮಾದ್ಬ್ರಹ್ಮಾತ್ಮವಿಜ್ಞಾನಂ ದೃಢಂ ಚರಮವಿಗ್ರಹೇ ।
ಜಾಯತೇ ಮುಕ್ತಿದಂ ಶುದ್ಧಂ ಪ್ರಸಾದಾದೇವ ಮೇಽಚ್ಯುತ ॥೭೮॥

॥ ಸೂತ ಉವಾಚ ॥

ಇತ್ಯೇವಮುಕ್ತ್ವಾ ಪರಮೇಶ್ವರೋಹರಃ ।
ತ್ರಯೀಮಯೋಽಭೀಷ್ಟಫಲಪ್ರದೋ ನೃಣಾಂ ।
ತ್ರಿಲೋಚನೋಽಂಬಾಸಹಿತಃ ಕೃಪಾಕರೋ ।
ನ ಕಿಂಚಿದಪ್ಯಾಹ ಪುನರ್ದ್ವಿಜೋತ್ತಮಾಃ ॥೭೯॥

ನಿಶಮ್ಯ ವೇದಾರ್ಥಮಶೇಷಮಚ್ಯುತಃ ।
ಪ್ರಣಮ್ಯ ಶಂಭುಂ ಶಶಿಶೇಖರಂ ಹರಂ ।

ಜ್ಞಾನಿಗೆ ದೇಹನಾಶಕ್ಕಿಂತ ಮುಂಚಿತವಾಗಿಯೂ, ಪಾರಮಾರ್ಥಿಕವಾಗಿ ಸಂಸಾರದರ್ಶನವಿಲ್ಲ. ಹೀಗಿರುವಲ್ಲಿ ದೇಹನಾಶವಾದ ಮೇಲೆ ಹೇಗೆತಾನೇ ಸಂಸಾರ ದರ್ಶನವುಂಟಾಗುವುದು ? ॥೭೭॥

ಆದುದರಿಂದ ಎಲೈ ನಾಶರಹಿತನಾದ ವಿಷ್ಣುವೇ, ನನ್ನ ಅನುಗ್ರಹದಿಂದಲೇ ಜ್ಞಾನಿಯಾಗುವ ಜೀವನಿಗೆ ಮುಕ್ತಿಯನ್ನು ಕೊಡತಕ್ಕ ಶುದ್ಧವಾದ ದೃಢವಾದ ಬ್ರಹ್ಮಾತ್ಮಜ್ಞಾನವು ಆ ಕೊನೆಯಜನ್ಮದಲ್ಲಿಯೇ ಉಂಟಾಗುವುದು. ॥೭೮॥

ಸೂತನು ಹೇಳಿದನು --ಎಲೈ ಬ್ರಾಹ್ಮಣರೇ, ಪಾಪ ಪರಿಹಾರಕನೂ, ವೇದ ಸ್ವರೂಪನೂ, ಜನರಿಗೆ ಇಷ್ಟಾರ್ಥಗಳನ್ನು ಕೊಡತಕ್ಕವನೂ, ಮುಕ್ಕಣ್ಣನೂ, ದೇವೀ ಸಹಿತನೂ, ದಯಾಶಾಲಿಯೂ ಆದ ಪರಮೇಶ್ವರನು ಹೀಗೆಂದು ಹೇಳಿ ಮುಂದೆ ಯಾವ ಮಾತನ್ನೂ ಆಡಲಿಲ್ಲ. ಹೇಳಬೇಕಾದುದನ್ನು ಸಂಪೂರ್ಣವಾಗಿ ಹೇಳಿ ಮುಗಿದುದರಿಂದಲೂ, ಮುಂದೆ ಹೆಚ್ಚಿನದೇನನ್ನೂ ಹೇಳಬೇಕಾದುದಿಲ್ಲವಾದುದರಿಂದಲೂ ಮೌನವನ್ನು ವಹಿಸಿದನೆಂದು ಭಾವವು. ॥೭೯॥

ಸೂತನು ಹೇಳಿದನು—ನಾಶರಹಿತನಾದ ವಿಷ್ಣುವು ಶಿವನು ಹೇಳಿದ ಸಮಸ್ತ ವೇದಗಳ ಸಾರಾರ್ಥವನ್ನೂ ಕೇಳಿ, ಚಂದ್ರಶೇಖರನಾದ ಶಿವನಿಗೆ ನಮಸ್ಕಾರವನ್ನು

ಪ್ರಗೃಹ್ಯ ಪಾದಾಂಬುಜ ಮಾಸ್ತಿಕೋ ಹರಿಃ ।
ಸ್ವಮೂರ್ಧ್ನಿ ವಿನ್ಯಸ್ಯ ಕರದ್ವಯೇನ ಸಃ ॥೮೦॥

ಅತಿಪ್ರಸಾದೇನ ಶಿವಸ್ಯ ಕೇಶವಃ ।
ಸಮಸ್ತ ಸಂಸಾರ ವಿವರ್ಜಿತೋಽಭವತ್ ॥
ಪ್ರನೃತ್ಯ ದೇವೋಽಪಿ ಮುಕುಂದಸನ್ನಿಧೌ ।
ಪುನಃ ಸುರೇಂದ್ರೈರಖಿಲೈಃ ಸಮಾವೃತಃ ॥೮೧॥

ಪುಂಡರೀಕ ಪುರಮಾಪ ಶಂಕರಃ ।
ತತ್ರ ಸರ್ವಗಣನಾಯಕೈಃ ಪುನಃ ।
ಪುಷ್ಪರಾಶಿಭಿ ರಹರ್ನಿಶಂ ಮುದಾ ।
ಪೂಜಿತಶ್ಚ ಭಗವಾನ್ ಸಭಾಪತಿಃ ॥೮೨॥

ಏವಂ ಸೂತವಚಃ ಶ್ರುತ್ವಾ ಮುನಯೋ ವೇದವಿತ್ತಮಾಃ ।
ಪ್ರಣಮ್ಯ ಸೂತಂ ಸರ್ವಜ್ಞಂ ಸರ್ವದಾ ಕರುಣಾಕರಂ ॥೮೩॥

ಮಾಡಿ ಆ ದೇವನು ಹೇಳಿದ ಮಾತಿನಲ್ಲಿ ನಂಬಿಕೆಯುಳ್ಳವನಾಗಿ, ಅವನ ಪಾದಕಮಲಗಳನ್ನು ತನ್ನ ಎರಡು ಕೈಗಳಲ್ಲಿ ಹಿಡಿದುಕೊಂಡು ತನ್ನ ತಲೆಯಮೇಲೆ ಇಟ್ಟುಕೊಂಡು, ಆ ಶಿವನ ಅನುಗ್ರಹಾತಿಶಯದಿಂದ ತನ್ನ ಸಕಲ ವಿಧವಾದ ಸಂಸಾರದುಃಖಗಳನ್ನೂ ಕಳೆದುಕೊಂಡನು. ॥೮೦॥

ಆ ದೇವನಾದ ಶಂಕರನು ವಿಷ್ಣುವಿನ ಎದುರಿಗೆ ನರ್ತನಮಾಡಿ ಮತ್ತೆ ದೇವೇಂದ್ರನೇ ಮೊದಲಾದ ಸಕಲ ದೇವತೆಗಳೊಡನೆ ಸೇರಿದವನಾಗಿ, ಎಲ್ಲ ದೇವತೆಗಳೂ ಅವನ ಸೇವೆಯನ್ನು ಮಾಡುತ್ತಿರಲು, ॥೮೧॥

ಆ ಮೇಲೆ ಶಿವನು ತನ್ನ ಸಮಸ್ತಗಣ ಮುಖ್ಯರೊಡನೆ ಪುಂಡರೀಕಪುರಕ್ಕೆ (ವ್ಯಾಘ್ರಪುರ) ಹೋಗಿ, ಅಲ್ಲಿ ಹಗಲೂ, ರಾತ್ರಿಯೂ ಹೂ ಮುಂತಾದವುಗಳಿಂದ ಭಕ್ತರು ಮಾಡುವ ಪೂಜೆಯನ್ನು ಸ್ವೀಕರಿಸುತ್ತಾ ಸಭಾಪತಿ ಎಂಬ ಹೆಸರಿನಿಂದ ಜನಗಳಿಗೆ ಇಷ್ಟಾರ್ಥಗಳನ್ನು ಕೊಡುತ್ತಿದ್ದನು. ॥೮೨॥

ವೇದವನ್ನು ತಿಳಿದವರಲ್ಲಿ ಶ್ರೇಷ್ಠರಾದ ಮುನಿಗಳು ಸೂತನು ಹೇಳಿದ ಈ ಮಾತುಗಳನ್ನು ಕೇಳಿ ಸರ್ವಜ್ಞನಾದ ಮತ್ತು ಯಾವಾಗಲೂ ದಯಾಶಾಲಿಯಾದ

ತಸ್ಯ ಶುಶ್ರೂಷಣೇ ನಿತ್ಯಂ ಮತಿಂ ಚಕ್ರುಃ ಸಮಾಹಿತಾಃ ॥೪೪॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಮುಕ್ತಿಖಂಡೇ ಗುರೂಪಸದನ ಶುಶ್ರೂಷಾ ಮಹಿಮಕಥನಂ ನಾಮ ಸಪ್ತಮೋಽಧ್ಯಾಯಃ

ಆ ಶಿವನಿಗೆ ನಮಸ್ಕಾರವನ್ನು ಮಾಡಿ, ಪ್ರತಿದಿನವೂ ಏಕಾಗ್ರಚಿತ್ತದಿಂದ ಅವನ ಸೇವೆಯನ್ನು ಮಾಡುತ್ತಿರಬೇಕೆಂದು ನಿಶ್ಚಯಿಸಿದರು. ॥೪೩-೪೪॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಮುಕ್ತಿಖಂಡದಲ್ಲಿ ಶಿಷ್ಯ ಜ್ಞಾನಲಾಭಕ್ಕಾಗಿ ಗುರುವನ್ನು ಪಡೆದು ಮಾಡಬೇಕಾದ ಸೇವಾ, ಶ್ರವಣ ಮುಂತಾದುವನ್ನು ವಿವರಿಸಿರುವ ಏಳನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಾಂದಪುರಾಣಾಂತರ್ಗತಾ
ಸೂತಸಂಹಿತಾ

ಮುಕ್ತಿಖಂಡಂ

|| ಅಷ್ಟಮೋಽಧ್ಯಾಯಃ ||

ಎಂಟನೆಯ ಅಧ್ಯಾಯವು

|| ಮುನಯ ಊಚುಃ ||

ಏವಂ ಮಹೇಶ್ವರಾತ್ ಜ್ಞಾನಂ ಲಬ್ಧ್ವಾ ವಿಷ್ಣುಃ ಸನಾತನಃ ।
ತತಃ ಕಿಮಕರೋದ್ವಿದ್ವಾನ್ ವದ ಕಾರುಣ್ಯವಿಗ್ರಹ ||೧||

|| ಸೂತ ಉವಾಚ ||

ಶೃಣುಧ್ವಂ ತತ್ಪ್ರವಕ್ಷ್ಯಾಮಿ ಮುನಯಃ ಶಂಸಿತವ್ರತಾಃ ।
ಮಹಾದೇವಂ ನಮಸ್ಕೃತ್ಯ ವಿಷ್ಣುರ್ವ್ಯಾಘ್ರಪುರಂ ಗತಃ ||೨||

ಲೌಕಿಕೈರ್ವೈದಿಕೈಃ ಸ್ತೋತ್ರೈಃ ಸ್ತುತ್ವಾಽನುಜ್ಞಾಮವಾಪ್ಯ ಚ ।
ಆರುಹ್ಯ ಗರುಡಂ ವಿಪ್ರಾ ಅಮರ್ತ್ಯೈರಖಿಲೈರ್ಹರಿಃ ||೩||
ಸ್ತೂಯಮಾನೋ ಮಹಾವಿಷ್ಣುರ್ಹೃಷ್ಟೋ ವೈಕುಂಠಮಾಪ ಸಃ ।

ಮುನಿಗಳು ಸೂತನನ್ನು ಕುರಿತು, ಎಲೈ ದಯಾಮೂರ್ತಿಯೂ, ಜ್ಞಾನಿಯೂ ಆದ ಸೂತನೇ, ಅನಾದಿಯಾದ ವಿಷ್ಣುವು ಮಹೇಶ್ವರನಿಂದ ಜ್ಞಾನವನ್ನು ಪಡೆದ ಮೇಲೆ ಏನನ್ನು ಮಾಡಿದನೆಂಬುದನ್ನು ನನಗೆ ಹೇಳಬೇಕು ಎಂದು ಕೇಳಿದನು. ||೧||

ಸೂತನುಹೇಳಿದನು—ಕ್ರೂರವಾದ ತಪಸ್ಸನ್ನು ಮಾಡಿದ ಮುನಿಗಳೇ, ನಿಮ್ಮ ಪ್ರಶ್ನೆಗೆ ಉತ್ತರವನ್ನು ಹೇಳುವೆನು, ಕೇಳಿರಿ. ಹೀಗೆ ವಿಷ್ಣುವು ಮಹಾದೇವನಿಗೆ ನಮಸ್ಕರಿಸಿ ವ್ಯಾಘ್ರಪುರಕ್ಕೆ ಹೋದನು. ಅಲ್ಲಿ ಶಿವನನ್ನು ಲೌಕಿಕವಾದ ಸ್ತೋತ್ರಗಳಿಂದಲೂ,

ತತಸ್ತಂ ಸರ್ವಲೋಕೇಶಂ ಶಂಖಚಕ್ರಗದಾಧರಂ ॥೪॥

ಶ್ರೀಪತಿಂ ಭೂಪತಿಂ ವಿಪ್ರಾಃ ಸುರಾ ಬ್ರಹ್ಮ ಪುರೋಗಮಾಃ ।
ಪ್ರಣಮ್ಯ ದಂಡವದ್ಭೂಮೌ ಭಕ್ತ್ಯಾ ಪರಮಯಾ ಸಹ ॥೫॥
ಕೃತಾಂಜಲಿಪುಟಾ ಭೂತ್ವಾ ಪಪ್ರಚ್ಛುಃ ಪಂಕಜೇಕ್ಷಣಂ ।

॥ ದೇವಾ ಊಚುಃ ॥

ಭಗವನ್ನೀಶ್ವರಾತ್ಸರ್ವಂ ಭವತಾ ಶ್ರುತಮಚ್ಯುತ ॥೬॥

ತತ್ಸರ್ವಂ ಶ್ರೋತುಮಿಚ್ಛಾಮೋ ಬ್ರೂಹಿ ನಃ ಸಂಗ್ರಹೇಣ ತತ್ ।

॥ ವಿಷ್ಣುರುವಾಚ ॥

ಭವದ್ಭಿರ್ಯಚ್ಛ್ರುತಂದೇವಾಸ್ತದ್ಧಿತಂ ಸರ್ವದೇಹಿನಾಂ ॥೭॥

ತಥಾಽಪಿ ನಾಹಂ ವಕ್ಷ್ಯಾಮಿ ಶಿವ ಏವ ಪ್ರವಕ್ಷ್ಯತಿ ।
ಭವಂತಃ ಶ್ರದ್ಧಯಾ ಸಾರ್ಧಂ ಪುಂಡರೀಕ ಪುರಾಭಿಧಂ ॥೮॥

ವೇದಮಂತ್ರಗಳಿಂದಲೂ, ಆ ಪರಮೇಶ್ವರನ ಸ್ತೋತ್ರವನ್ನು ಮಾಡುತ್ತಾ, ಆ ಶಿವನ ಅಪ್ಪಣೆಯನ್ನು ಪಡೆದು ಗರುಡನನ್ನೇರಿ ಸಮಸ್ತ ದೇವತೆಗಳೂ ಸ್ತೋತ್ರಮಾಡುತ್ತಿರಲು ಸಂತೋಷದಿಂದ ತನ್ನ ಲೋಕವಾದ ವೈಕುಂಠಕ್ಕೆ ಹೋದನು. ॥೨-೩॥

ಆಮೇಲೆ ಸಮಸ್ತ ಲೋಕಾಧಿಪತಿಯೂ, ಶಂಖ, ಚಕ್ರ, ಗದಾಧರನೂ, ಲಕ್ಷ್ಮೀದೇವಿಗೂ. ಭೂದೇವಿಗೂ, ಪತಿಯೂ, ಆದ ವಿಷ್ಣುವಿಗೆ ಬ್ರಹ್ಮನೇ ಮುಂತಾದ ದೇವತೆಗಳೂ, ಭಕ್ತಿಯಿಂದ ಸಾಷ್ಟಾಂಗನಮಸ್ಕಾರವನ್ನು ಮಾಡಿ, ಕೈಮುಗಿದು ಕೊಂಡು ಕಮಲಾಕ್ಷನಾದ ಅವನನ್ನು ಕುರಿತು ಪ್ರಶ್ನೆಮಾಡಿದರು. ॥೪-೫॥

ದೇವತೆಗಳು ಹೇಳಿದರು—ಮಹಾಮಹಿಮನಾದ ವಿಷ್ಣುವೇ, ಈಶ್ವರನಿಂದ ನೀನು ಸಮಸ್ತವಿಷಯಗಳನ್ನೂ ಕೇಳಿರುವೆ. ಅವೆಲ್ಲವನ್ನೂ ನಾವು ಕೇಳಬೇಕೆಂದಿರುವೆವು. ಅದನ್ನು ಸಂಗ್ರಹವಾಗಿ ನಮಗೆ ಹೇಳಬೇಕು. ಎಂದರು. ॥೬॥

ವಿಷ್ಣುವು ಹೇಳಿದನು—ಎಲೈ ದೇವತೆಗಳೇ, ನೀವು ಕೇಳಿದ ಪ್ರಶ್ನೆಯು ಎಲ್ಲರಿಗೂ ಹಿತಕರವಾದುದು. ಆದರೂ ನಾನೇ ಇದಕ್ಕೆ ಉತ್ತರವನ್ನು ಈಗಲೇ ಹೇಳುವುದಿಲ್ಲ. ಶಿವನೇ ಉತ್ತರವನ್ನು ಹೇಳುವನು. ನೀವು ಆಸಕ್ತಿಯಿಂದಲೂ, ಭಕ್ತಿಯಿಂದಲೂ ಕೂಡಿ ವ್ಯಾಘ್ರಪುರಕ್ಕೆ ಪ್ರಯಾಣಮಾಡಿರಿ. ಅಲ್ಲಿ ॥೭-೮॥

ಸ್ವರಾಟ್ ಸಂಜ್ಞಸ್ಯ ದೇವಸ್ಯ ಹೃತ್ಸರೋರುಹಮಧ್ಯಗಂ ।
ದಿನೇ ದಿನೇಽಥವಾ ಪಕ್ಷೇ ಪಕ್ಷೇ ವಾ ಮಾಸಿ ಮಾಸಿ ವಾ ॥೯॥

ಷಣ್ಮಾಸಾಂತೇಷು ವಾಽಬ್ದಾಂತೇಷ್ವಾ ಶರೀರವಿಮೋಕ್ಷಣಾತ್ ।
ದೃಶ್ಯತೇ ಪ್ರಾಣಿನಾ ಯೇನ ಶ್ರದ್ಧಯಾ ತಸ್ಯ ಮುಕ್ತಿದಂ ॥೧೦॥

ಅಚಿರಾತ್ಸರ್ವಪಾಪಘ್ನಂ ಭೋಗದಂ ಭೋಗಕಾಮಿನಾಂ ।
ಉಪೇತ್ಯ ಸುಮಹತ್ತೀರ್ಥಂ ತಪಃ ಕೃತ್ವಾ ಸುದುಶ್ಚರಂ ॥೧೧॥

ಶ್ರೀಮತ್ಪಂಚಾಕ್ಷರಂ ಮಂತ್ರಂ ಸತಾರಂ ಸರ್ವಸಿದ್ಧಿದಂ ।
ಸರ್ವಮಂತ್ರವರಂ ನಿತ್ಯಂ ಶತರುದ್ರೀಯ ಮಧ್ಯಗಂ ॥೧೨॥

ಜಪಿತ್ವಾ ಲಕ್ಷಮೇಕಂ ವಾ ಶ್ರೀಮದ್ದಭ್ರ ಸಭಾಪತಿಂ ।
ದೃಷ್ಟ್ವಾ ಪಂಚಾಕ್ಷರೇಣೈವ ಸ ತಾರೇಣಾಸ್ತಿಕಾಃ ಸುರಾಃ ॥೧೩॥
ಪೂಜಯಧ್ವಂ ಮಹಾದೇವಂ ಯುಷ್ಮಾಕಂ ಕರುಣಾಕರಃ ।

ಸ್ವರಾಡೆಂಬ ಅಪಂಚೀ ಕೃತಪಂಚಮಹಾಭೂತಕಾರ್ಯಗಳ ಸಮಷ್ಟಿರೂಪವೂ, ಹದಿನೇಳು ತತ್ವಗಳಿಂದ ಕೂಡಿದುದೂ ಆದ, ಲಿಂಗಶರೀರಾಭಿಮಾನಿಯಾದ, ದೇವನ ಹೃದಯಕಮಲದ ನಡುವೆ ಇರುವ ಆ ಪುಂಡರೀಕ ಪುರದಲ್ಲಿ ಪ್ರಾಣಿಗಳಿಗೆ ಪ್ರತಿ ದಿನವೂ, ಅಥವಾ ಪಕ್ಷಕ್ಕೊಂದು ದಿನವೂ, ಇಲ್ಲದೇ ತಿಂಗಳಿಗೊಂದು ದಿನವೂ, ಆರು ತಿಂಗಳಿಗೊಂದು ದಿನವೂ, ವರ್ಷಕ್ಕೊಂದು ದಿನವೂ, ಅಥವಾ ಶರೀರವಿರುವ ಪರ್ಯಂತ ವಾಗಿ ಯಾವುದಾದರೊಂದು ದಿನದಲ್ಲೋ ಈಶ್ವರನು ಗೋಚರನಾಗುವನು. ಅವರ ಭಕ್ತಿಗನುಸಾರವಾಗಿ ಮುಕ್ತಿಯನ್ನು ಕೊಡುವನು. ಸ್ವಲ್ಪಕಾಲದಲ್ಲಿಯೇ ಸಕಲ ಪಾಪ ಗಳನ್ನೂ ನಾಶಮಾಡುವನು. ಸುಖಾನುಭವಾಪೇಕ್ಷೆಯುಳ್ಳವರಿಗೆ ಸುಖವನ್ನು ಕೊಡು ವನು. ಆ ಶ್ರೇಷ್ಠವಾದ ಕ್ಷೇತ್ರಕ್ಕೆ ಹೋಗಿ ಕಠಿಣವಾದ ತಪಸ್ಸನ್ನು ಮಾಡಿರಿ. ॥೯-೧೦-೧೧॥

ಓಂಕಾರದೊಡನೆ ಸೇರಿದ, ಸಮಸ್ತ ಸಿದ್ಧಿಯನ್ನೂ ಕೊಡತಕ್ಕ ಶತರುದ್ರೀ ಯದ ನಡುವೆ ಇರುವ, ಶ್ರೇಷ್ಠಮಂತ್ರವಾದ ಪಂಚಾಕ್ಷರೀಮಂತ್ರವನ್ನು ಶಕ್ತ್ಯನುಸಾರ ವಾಗಿ ಒಂದನ್ನೋ ಒಂದು ಲಕ್ಷವನ್ನೋ ಜಪಿಸಿ ದಭ್ರಸಭಾಪತಿಯಾದ ಪರಮೇಶ್ವರ ನನ್ನು ಅದೇ ದರ್ಶನಮಾಡಿ ಮಂತ್ರದಿಂದ ಪೂಜೆಮಾಡಿರಿ. ಆ ಮಹಾದೇವನು ನಿಮ್ಮ ಭಕ್ತ್ಯುಪಾಸನೆಗಳಿಂದ ತುಷ್ಟನಾಗಿ ಕೃಪೆಯನ್ನು ತೋರಿಸುವನು. ॥೧೨-೧೩॥

ಅಂಬಿಕಾಪತಿರಾನಂದ ಮಹಾತಾಂಡವಪಂಡಿತಃ ॥೧೪॥

ಸರ್ವಾಧಾರವಟಚ್ಛಾಯಾ ನಿಷಣ್ಣೋ ಭೂತಿಭೂಷಣಃ ।
ಸೋಮಾರ್ಧಶೇಖರಃ ಸೋಮಃ ಸೋಮಸೂರ್ಯಾಗ್ನಿಲೋಚನಃ ॥೧೫॥

ಕಪರ್ದೀ ಕಾಲಕಂಠಶ್ರೀರ್ವೇದಯಜ್ಞೋಪವೀತವಾನ್ ।
ಗಂಗಾಧರಃ ಸುಪ್ರಸನ್ನಃ ಸುಸ್ಮಿತೋ ನಾಗಭೂಷಣಃ ॥೧೬॥

ದೀರ್ಘಬಾಹು ರ್ವಿಶಾಲಾಕ್ಷ ಸ್ತುಂದಬಂಧವಿರಾಜಿತಃ ।
ಹಾರಕೇಯೂರ ಕಟಕ ನೂಪುರಾದಿ ವಿಭೂಷಿತಃ ॥೧೭॥

ಭಸ್ಮಾಧಾರಧರಃ ಶ್ರೀಮಾನೇಕಕುಂಡಲಮಂಡಿತಃ ।
ಪವಿತ್ರಪಾಣಿರ್ಭಗವಾನ್ಪುಂಡರೀಕತ್ವಗಂಬರಃ ॥೧೮॥

ಕ್ವಣತ್ಕಿಂಕಿಣಿ ಸಂಯುಕ್ತ ಕಲಕಾಂಚೀ ವಿರಾಜಿತಃ ।
ಸರ್ವಾಭರಣ ಸಂಯುಕ್ತಃ ಸರ್ವಲಕ್ಷಣ ಸಂಯುತಃ ॥೧೯॥
ಗೋಕ್ಷೀರ ಧವಲಾಕಾರಃ ಕುಂದೇಂದುಸದೃಶಪ್ರಭಃ ।

ಆ ಶಿವನು ಅಂಬಿಕಾಪತಿಯಾಗಿ ಆನಂದಸ್ವರೂಪವಾದ ಮಹಾತಾಂಡವನರ್ತನವನ್ನು ಚೆನ್ನಾಗಿ ತಿಳಿದಿರುವನು. ಸಮಸ್ತ ಪ್ರಪಂಚಗಳಿಗೂ ಆಶ್ರಯವಾದ ಆಲದ ಮರದ ನೆರಳಿನಲ್ಲಿ ಕುಳಿತಿರುವನು. ಅಣಿಮಾದ್ಯಷ್ಟೈಶ್ವರ್ಯಗಳಿಂದ ಅಲಂಕೃತನಾಗಿರುವನು. ಅರ್ಧಚಂದ್ರನನ್ನು ತಲೆಯಲ್ಲಿ ಧರಿಸಿ ಉಮಾದೇವೀಸಹಿತನಾಗಿ, ಸೂರ್ಯ, ಚಂದ್ರಾಗ್ನಿ ಸ್ವರೂಪವಾದ ಕಣ್ಣುಗಳುಳ್ಳವನಾಗಿ ಜಟೆಯನ್ನು ಧರಿಸಿ, ಕಪ್ಪಾದ ಕುತ್ತಿಗೆಯುಳ್ಳವನಾಗಿ, ವೇದಸ್ವರೂಪವಾದ ಯಜ್ಞೋಪವೀತವುಳ್ಳವನಾಗಿ, ಗಂಗೆಯನ್ನು ತಲೆಯಲ್ಲಿ ಧರಿಸಿ, ನಾಗಭೂಷಣನಾಗಿ ಸಂತೋಷದಿಂದ ಮುಗುಳುನಗೆ ನಗುತ್ತ ಇರುವನು. ॥೧೪-೧೫-೧೬॥

ಅವನ ತೋಳುಗಳು ಉದ್ದವಾಗಿರುವುವು. ಹೊಟ್ಟೆಗೆ ಕಟ್ಟಿದ ಕಟ್ಟು ಶೋಭಿಸುತ್ತಿರುವುದು. ಹಾರ, ಬಾಹುಪುರಿ, ಕೈಬಳೆ, ಕಾಲಿನಗೆಜ್ಜೆ ಇವುಗಳಿಂದ ಪ್ರಕಾಶಿಸುತ್ತಿರುವನು. ಭಸ್ಮವನ್ನು ತುಂಬಿದ ಪಾತ್ರೆಯನ್ನು ಹಿಡಿದಿರುವನು. ಒಂದು ಕಿವಿಯಲ್ಲಿ ಕುಂಡಲವನ್ನು ಅಲಂಕರಿಸಿಕೊಂಡಿರುವನು. ಕೈಯ್ಯಲ್ಲಿ ಪವಿತ್ರವನ್ನು ಧರಿಸಿ, ಅಥವಾ ಪರಿಶುದ್ಧವಾದ ಕೈಗಳುಳ್ಳವನಾಗಿ, ಹುಲಿಯ ಚರ್ಮವನ್ನು ಹೊದೆದಿರು

ಸಂಸಾರ ಭಯಭೀತಾನಾ ಮೇಕೇನೈವಾಭಯಪ್ರದಃ ॥೨೦॥

ಅನ್ಯೇನ ಪಾಣಿನಾ ಸರ್ವಭಕ್ತಪ್ರಾಣಪರಿಗ್ರಹಃ ।
ತದನ್ಯಕರಸಂಲಗ್ನಸಮ್ಯಗ್ಡಮರುಕಧ್ವನಿಃ ॥೨೧॥

ವಾಮಭಾಗೋರ್ಧ್ವ ಪಾಣಿಸ್ಥಮಹಾದೀಪ್ತಹುತಾಶನಃ ।
ಕೃಪಯೈವಾತ್ಮಮಾಯೋತ್ಥ ಘೋರಾಪಸ್ಮಾರಸಂಸ್ಥಿತಃ ॥೨೨॥

ಸ್ವಸ್ವರೂಪಮಹಾನಂದ ಪ್ರಕಾಶಾಪ್ರಚ್ಯುತೋ ಹರಃ ।
ಪ್ರಸನ್ನಃ ಸರ್ವವಿಜ್ಞಾನಮುಪದೇಕ್ಷ್ಯತಿ ಸ ಪ್ರಭುಃ ॥೨೩॥

ವನು. ಧ್ವನಿಮಾಡುವ ಕಿರು ಘಂಟೆಗಳಿಂದ ಕೂಡಿದ ನಡುವಿನ ಪಟ್ಟಿಯಿಂದ ಶೋಭಿಸುತ್ತಿರುವನು. ಎಲ್ಲ ಒಡವೆಗಳನ್ನೂ ಧರಿಸಿ, ಎಲ್ಲ ಶುಭಲಕ್ಷಣಗಳಿಂದ ಕೂಡಿ, ಹಸುವಿನ ಹಾಲಿನಂತೆ ಮೈಬಣ್ಣವುಳ್ಳವನಾಗಿ, ಮಲ್ಲಿಗೆಯ ಹೂವಿನಂತೆಯೂ, ಚಂದ್ರನಂತೆಯೂ, ಪ್ರಕಾಶಿಸುತ್ತಿರುವನು. ॥೧೭-೧೮-೧೯॥

ಒಂದು ಕೈಯಲ್ಲಿ ಅಭಯಮುದ್ರೆಯನ್ನು ಧರಿಸಿ, ಸಂಸಾರಸಂಬಂಧವಾದ ಭಯವನ್ನು ಹೊಂದಿದ ಪ್ರಾಣಿಗಳಿಗೆ ಅಭಯವನ್ನು ಕೊಡುತ್ತಿರುವನು. ಮತ್ತೊಂದು ಕೈಯ್ಯಲ್ಲಿ ವರದ ಮುದ್ರೆಯನ್ನು ಧರಿಸಿ, ಸಮಸ್ತರಿಗೂ ಇಷ್ಟಾರ್ಥಗಳನ್ನು ಕೊಟ್ಟು ಅನುಗ್ರಹಿಸುವನು. ಇನ್ನೊಂದು ಕೈಯ್ಯಲ್ಲಿರುವ ಡಮರುಕವನ್ನು ಮನೋಹರವಾಗಿ ಧ್ವನಿಮಾಡುತ್ತಿರುವನು. ಎಡಭಾಗದ ಮೇಲಕ್ಕೆತ್ತಿದ ಕೈಯ್ಯಲ್ಲಿ ವಿಶೇಷವಾಗಿ ಉರಿಯುತ್ತಿರುವ ಅಗ್ನಿಯನ್ನು ಧರಿಸಿರುವನು. ತನ್ನ ಮಾಯೆಯಿಂದಲೇ ಹುಟ್ಟಿದ ಕ್ರೂರವಾದ ಅಪಸ್ಮಾರವನ್ನು ಅದು ಕೃತಾರ್ಥವಾಗಲೆಂಬ ದಯೆಯಿಂದಲೇ ಕಾಲಿನಿಂದ ತುಳಿದುಕೊಂಡು ನಿಂತಿರುವನು. ॥೨೦-೨೧-೨೨॥

ಆನಂದಸ್ವರೂಪವೂ, ಸ್ವಪ್ರಕಾಶವೂ ಆದ ತನ್ನ ಸ್ವರೂಪವನ್ನು ಬಿಡದೇ ಸ್ವಾಮಿಯಾದ ಶಿವನು ಸಕಲಪ್ರಾಣಿಗಳಿಗೂ ಅನುಗ್ರಹವನ್ನು ಮಾಡುತ್ತಿರುವವನಾಗಿ ಜ್ಞಾನವನ್ನು ಉಪದೇಶಿಸುವನು. ॥೨೩॥

ಪುಂಡರೀಕಪುರಮಾಪುರಾಸ್ತಿಕಾಃ
ಶ್ರದ್ಧಯೈವ ಸಹ ಯತ್ರ ನೃತ್ಯತಿ ।
ಅಂಬಿಕಾಪತಿ ರಶೇಷನಾಯಕಃ
ಚಂದ್ರಮೌಲಿರಖಿಲಾ ಮರಾ ಮುದಾ ॥೨೪॥

ತತಃ ಸುರಾಶ್ಚೇರುರತೀವ ಸತ್ತ್ವಮಾ
ವಿಲಕ್ಷಣಾ ಭೂತಿವಿಭೂಷಿತಾಶ್ಚಿರಂ ।
ವ್ರತಾನಿ ದಾನಾನಿ ತಪಾಂಸಿ ಚಾದರಾತ್ ।
ಮುನೀಶ್ವರಾಃ ಸರ್ವಜಗತ್ಪ್ರಿಯೇ ರತಾಃ ॥೨೫॥

॥ ಸೂತ ಉವಾಚ ॥

ಪಂಚಾಕ್ಷರಂ ಪರಮ ಮಂತ್ರ ಮಶೇಷ ವೇದ ।
ವೇದಾಂತ ಸಾರಮತಿಶೋಭನ ಮಾದರೇಣ ॥
ಜಪ್ತ್ವಾ ಸುರಾಃ ಪ್ರಣವಸಂಯುತ ಮಂಬಿಕೇಶಂ ।
ದೃಷ್ಟ್ವಾ ಸಭಾಪತಿಮಶೇಷಗುರುಂ ಪ್ರಣಮ್ಯ ॥೨೬॥

ಸೂತನು ಹೇಳಿದನು—ವಿಷ್ಣುವು ಹೇಳಿದುದನ್ನು ಕೇಳಿ ಸಮಸ್ತ ದೇವತೆಗಳೂ, ಸಂತೋಷದಿಂದಲೂ, ಆಸಕ್ತಿಯಿಂದಲೂ ಕೂಡಿದವರಾಗಿ, ಅವನ ಮಾತನ್ನು ನಂಬಿಕೊಂಡು, ಸರ್ವೇಶ್ವರನೂ, ಅಂಬಿಕಾಪತಿಯೂ, ಚಂದ್ರಶೇಖರನೂ ಆದ ಶಿವನು ಎಲ್ಲಿ ನರ್ತನ ಮಾಡುತ್ತಿರುವನೋ ಆ ವ್ಯಾಘ್ರಪುರಕ್ಕೆ ಹೋದರು. ॥೨೪॥

ಆ ಮೇಲೆ ವಿಶೇಷ ಸಾತ್ವಿಕಸ್ವಭಾವದಿಂದ ಕೂಡಿ, ದೇವತೆಗಳು ಭಸ್ಮಧಾರಣೆಯನ್ನು ಮಾಡಿಕೊಂಡು ಬಹಳ ಕಾಲದವರೆಗೆ ಬಗೆಬಗೆಯಾಗಿ, ತಮ್ಮ ಶಕ್ತ್ಯನುಸಾರವಾಗಿ ಸಕಲ ಜಗತ್ತಿಗೂ ಹಿತವನ್ನುಂಟುಮಾಡುವುದರಲ್ಲಿ ಆಸಕ್ತರಾಗಿ ಮೌನದಿಂದ ಕೂಡಿ ವ್ರತಗಳನ್ನೂ, ದಾನಗಳನ್ನೂ, ತಪಸ್ಸುಗಳನ್ನೂ ಅತ್ಯಾದರದಿಂದ ಮಾಡುತ್ತಿದ್ದರು. ॥೨೫॥

ಆ ದೇವತೆಗಳು ಸಮಸ್ತ ವೇದವೇದಾಂತಸಾರವಾದ ಅತ್ಯಂತ ಮಂಗಳಕರವಾದ ಓಂಕಾರದಿಂದ ಕೂಡಿದ ಪಂಚಾಕ್ಷರಮಂತ್ರವನ್ನು ಜಪಮಾಡಿ ಅಂಬಿಕಾಪತಿಯಾದ ಶಿವನ ದರ್ಶನವನ್ನು ಮಾಡಿ, ಎಲ್ಲರಿಗೂ ಗುರುವಾದ ಸಭಾಪತಿಗೆ ನಮಸ್ಕಾರವನ್ನು ಮಾಡಿ, ॥೨೬॥

ಭಕ್ತ್ಯಾ ಪೂಜ್ಯ ಮಹೇಶ್ವರಾಖ್ಯ ಮಮಲಂ ಮುಕ್ತಿಪ್ರದಂ ಭುಕ್ತಿದಂ ।
ಶಕ್ತ್ಯಾಯುಕ್ತಮತಿಪ್ರಸನ್ನವದನಂ ಬ್ರಹ್ಮೇಂದ್ರ ಪೂರ್ವಾಃ ಸುರಾಃ ॥

ನಿತ್ಯಾನಂದ ನಿರಂಜನಾಮೃತ ಪರಜ್ಞಾನಾನುಭೂತ್ಯಾ ಸದಾ ।
ನೃತ್ಯಂತಂ ಪರಮೇಶ್ವರಂ ಪಶುಪತಿಂ ಭಕ್ತ್ಯೈಕಲಭ್ಯಂ ಪರಂ ॥೨೭॥

ಲೌಕಿಕೇನ ವಚಸಾ ಮುನೀಶ್ವರಾ ।
ವೈದಿಕೇನ ವಚಸಾ ಚ ತುಷ್ಟುವುಃ ॥
ದೇವದೇವಮಖಿಲಾರ್ತಿಹಾರಿಣಂ ।
ಬ್ರಹ್ಮವಜ್ರಧರ ಪೂರ್ವಕಾಃ ಸುರಾಃ ॥೨೮॥

ಮುನೀಶ್ವರಾ ಮಹೇಶ್ವರಃ ಸಮಸ್ತದೇವ ನಾಯಕಃ ।
ಸುರೇಶ್ವರಾನ್ನಿರೀಕ್ಷಣಾನ್ನಿರಸ್ತ ಪಾಪಪಂಜರಾನ್ ॥
ಅನುಗ್ರಹೇಣ ಶಂಕರಃ ಪ್ರಗೃಹ್ಯ ಪಾರ್ವತೀಪತಿಃ ।
ಸಮಸ್ತ ವೇದ ಶಾಸ್ತ್ರಸಾರಭೂತಮುತ್ತಮೋತ್ತಮಂ ॥೨೯॥

ನಿರ್ಮಲನೂ, ಮುಕ್ತಿಯನ್ನೂ, ಭುಕ್ತಿಯನ್ನೂ, ಕೊಡತಕ್ಕವನೂ, ಶಕ್ತಿದೇವಿಯಿಂದ ಕೂಡಿದವನೂ, ದಯಾಯುಕ್ತವಾದ ಮುಖವುಳ್ಳವನೂ, ನಿತ್ಯವೂ, ಆನಂದವೂ, ನಿರ್ದೋಷವೂ ಆದ ಪರಮಾತ್ಮಜ್ಞಾನಾನುಭವದಿಂದ ಯಾವಾಗಲೂ ನರ್ತನಮಾಡುತ್ತಿರುವನೂ, ಸಮಸ್ತ ಲೋಕಕ್ಕೂ ಸ್ವಾಮಿಯೂ, ಸಕಲ ಜೀವಾಧಿಪತಿಯೂ, ಭಕ್ತಿ ಒಂದರಿಂದಲೇ ದೊರೆಯುತಕ್ಕವನೂ, ಆದ ಮಹೇಶ್ವರನನ್ನು ಬ್ರಹ್ಮ, ದೇವೇಂದ್ರ ಮುಂತಾದ ದೇವತೆಗಳು ಭಕ್ತಿಯಿಂದ ಪೂಜೆಮಾಡಿ, ||೨೭||

ಬ್ರಹ್ಮ, ದೇವೇಂದ್ರರೇ ಮೊದಲಾದ ದೇವತೆಗಳು ಸಮಸ್ತ ದುಃಖಗಳನ್ನೂ ನಾಶಮಾಡುವ ದೇವತೆಗಳಿಗೆಲ್ಲರಿಗೂ ದೇವನಾದ ಶಿವನನ್ನು ಲೌಕಿಕವಾದ ಮಾತುಗಳಿಂದಲೂ, ವೇದಮಂತ್ರಗಳಿಂದಲೂ ಸ್ತೋತ್ರಮಾಡಿದರು. ||೨೮||

ಋಷಿಶ್ರೇಷ್ಠರೇ, ಕೇಳಿರಿ. ಸಮಸ್ತ ದೇವತೆಗಳಿಗೂ ಸ್ವಾಮಿಗಳಿಗೂ ಸ್ವಾಮಿಯಾದ ಮಹೇಶ್ವರನು ಆ ದೇವತೆಗಳನ್ನು ನೋಡುವುದರಿಂದಲೇ ಅವರ ಪಾಪಪಂಜರಗಳನ್ನು ನಾಶಮಾಡಿ, ಪಾರ್ವತೀದೇವಿಯೊಡನೆ ಅವರಿಗೆ ಸುಖವನ್ನು ಉಂಟುಮಾಡುತ್ತಾ ಅನುಗ್ರಹಮಾಡುವುದರಿಂದ ಅವರನ್ನು ಶಿಷ್ಯರನ್ನಾಗಿ ಪರಿಗ್ರಹಿಸಿ, ಸಮಸ್ತ ವೇದಶಾಸ್ತ್ರಗಳ ಸಾರವಾದ ಅತ್ಯುತ್ತಮವಾದ ಜ್ಞಾನವನ್ನು ಪ್ರದರ್ಶಿಸುತ್ತ

ಪ್ರದರ್ಶಯನ್ನಟೇಶ್ವರಃ ಸಮಸ್ತದೇವಸನ್ನಿಧೌ ।
ಸ್ವನರ್ತನಂ ವಿಮುಕ್ತಿದಂ ಮಹತ್ತರಂ ಮಹೇಶ್ವರಃ ॥
ಸಮಸ್ತಲೋಕರಕ್ಷಕಂ ಮಹಾತ್ಮನಾಂ ಹೃದಿಸ್ಥಿತಂ ।
ನಿರೀಕ್ಷಣಾರ್ಹಮೀಶ್ವರೋಽಕರೋತ್ಸಭಾಪತಿಃ ಶಿವಃ ॥೩೦॥

ಪಶುಪತಿ ತಾಂಡವ ದರ್ಶನಾತ್ಸುರಾಃ ।
ಪರಮಮುದಾ ವಿವಶಾ ವಿಚೇಷ್ಟಿತಾಃ ॥
ಪುನರಮಲಾ ಮಹೇಶ್ವರಂ ಪ್ರಣಮ್ಯ ।
ಪ್ರಿಯ ವದನಂ ವಿನಯೇನ ಸಂಯುತಾಃ ॥೩೧॥

ಪಪ್ರಚ್ಛುಃ ಪರಮೇಶ್ವರಂ ಪಶುಪತಿಂ ಪಾರ್ಶ್ವಸ್ಥಿತಾಂಬಾಪತಿಂ ।
ಸರ್ವಜ್ಞಂ ಸಕಲೇಶ್ವರಂ ಶಶಿಧರಂ ಗಂಗಾಧರಂ ಸುಂದರಂ ॥
ವಿಜ್ಞಾನಂ ನಿಖಿಲಾಃ ಸುರಾಃ ಶ್ರುತಿಗತಂ ಸಂಸಾರ ದುಃಖಾಪಹಂ ।
ನಿರ್ದ್ವಂದ್ವೋ ಭಗವಾನ್ ಶಿವೋ ಗುರುಗುರುಃ ಪ್ರೋವಾಚ ಕಾರುಣ್ಯತಃ ॥೩೨॥

ನಟೇಶ್ವರನಾಗಿ, ಸಮಸ್ತ ದೇವತೆಗಳ ಇದುರಿಗೆ ಮುಕ್ತಿಯನ್ನು ಕೊಡುವ ಅತ್ಯಂತ ದೊಡ್ಡದಾದ ತನ್ನ ನರ್ತನವನ್ನು ತೋರಿಸುತ್ತಾ ಸಭಾಪತಿಯಾದ ಶಿವನು ಮಹಾತ್ಮರ ಹೃದಯದಲ್ಲಿರುವ, ಸಮಸ್ತಲೋಕವನ್ನೂ ಕಾಪಾಡುವ, ಈಶ್ವರನನ್ನು ತೋರಿಸಲು ಯೋಗ್ಯನಾಗುವಂತೆ ಮಾಡಿದನು. ದೇವತೆಗಳಿಗೆ ಅಪರೋಕ್ಷಜ್ಞಾನವನ್ನು ಉಂಟುಮಾಡಿದನೆಂದು ತಾತ್ಪರ್ಯವು. ॥೨೯-೩೦॥

ದೇವತೆಗಳು ಪಶುಪತಿಯಾದ ಶಿವನ ತಾಂಡವ ನರ್ತನವನ್ನು ನೋಡುವುದರಿಂದ ಅತ್ಯಂತ ಸಂತೋಷವನ್ನು ಹೊಂದಿ ಪರವಶರಾಗಿ ಚಲಿಸದೇ ಇದ್ದು ಮತ್ತೆ ಪರಿಶುದ್ಧವಾದ ಮನಸ್ಸಿನಿಂದ ಅವನಿಗೆ ನಮಸ್ಕಾರಮಾಡಿ ವಿನಯದಿಂದ ಕೂಡಿದ್ದರು. ॥೩೧॥

ಆ ಸಮಸ್ತ ದೇವತೆಗಳೂ, ಪಶುಪತಿಯೂ, ಅರ್ಧನಾರೀಶ್ವರನೂ, ಸರ್ವಜ್ಞನೂ, ಸಮಸ್ತರಿಗೂ ಸ್ವಾಮಿಯೂ, ಚಂದ್ರನನ್ನೂ, ಗಂಗೆಯನ್ನೂ ಧರಿಸಿದವನೂ, ಸುಂದರನೂ, ಆದ ಪರಮೇಶ್ವರನನ್ನು ಕುರಿತು ವಿನಯದಿಂದ ವೇದೋಕ್ತವಾದ, ಸಂಸಾರದುಃಖವನ್ನು ನಾಶಮಾಡುವ, ವಿಜ್ಞಾನಸ್ವರೂಪವನ್ನು ಪ್ರಶ್ನೆ ಮಾಡಿದರು.

|| ಈಶ್ವರ ಉವಾಚ ||

ವಕ್ಷ್ಯಾಮಿ ಪರಮಂ ಗುಹ್ಯಂ ವಿಜ್ಞಾನಂ ಸುರಸತ್ತಮಾಃ |
ಯುಷ್ಮಾಕಂ ಶ್ರದ್ಧಯಾ ಸಾರ್ಧಂ ಶೃಣುಧ್ವಂ ತತ್ಸಮಾಹಿತಾಃ ||೩೩||

ಸುಖದುಃಖಾದಿ ದ್ವಂದ್ವರಹಿತನೂ, ಮಹಾಮಹಿಮನೂ, ಮಂಗಳಸ್ವರೂಪನೂ ಗುರುಗಳಿಗೆಲ್ಲರಿಗೂ ಗುರುವೂ, ಆದ ಶಿವನು ಕರುಣೆಯಿಂದ ಆ ಜ್ಞಾನಸ್ವರೂಪವನ್ನು ಅವರಿಗೆ ಹೇಳಿದನು. ||೩೨||

ಇಲ್ಲಿ ವಿಶೇಷವೇನೆಂದರೆ—ಈಶ್ವರನು ನಿತ್ಯಾನಂದಸ್ವರೂಪನು, ಜ್ಞಾನ ಸ್ವರೂಪನು, ಅಮೃತ ಸ್ವರೂಪನು, ಎಂದು ಹೇಳಿರುವುದು. ಇವುಗಳೆಲ್ಲವೂ ಆತ್ಮ ಸ್ವರೂಪಗಳು. ಇವು ಸ್ವಾಭಾವಿಕವಾದವುಗಳು. ಆದರೂ ಆನಂದವು ಅದರ ಸ್ಥಿತಿ ಭೇದದಿಂದ ಅನಿತ್ಯ, ನಿತ್ಯ ಎಂದು ಎರಡು ವಿಧವಿರುವುದು. ಜೀವನಿಗೆ ನಿತ್ಯಾನಂದವು ಮಾಯೆಯಿಂದ ಆವೃತವಾಗಿ ಗೋಚರಿಸದೆ ತಾನು ಮಾಡಿದ ಶುಭಕರ್ಮಗಳ ಫಲ ವಾಗಿ ಬಂದು ಒದಗುತ್ತಿರುವ ವಿಷಯೇಂದ್ರಿಯಗಳ ಸಂಬಂಧದಿಂದುಂಟಾದ ಮನೋ ವೃತ್ತಿಯಲ್ಲಿ ಕಂಡು, ವೃತ್ತಿನಾಶವಾದಾಗ ಕಾಣದಿರುವ, ಆನಂದವು ಅನಿತ್ಯವಾದುದು. ಪರಶಿವಸ್ವಭಾವಭೂತವಾದ ನಿರತಿಶಯಾನಂದವು ಯಾವಾಗಲೂ ಆವರಣವಿಲ್ಲವಾದು ದರಿಂದ ಅದು ನಿತ್ಯವಾದುದು. ಹೀಗೆಯೇ ಜ್ಞಾನವೂ ಕೂಡ ಮಾಯೆಯಿಂದ ಆವೃತವಾಗಿ ಮನೋವೃತ್ತಿಯಲ್ಲಿ ಗೋಚರಿಸುವುದು ಅನಿತ್ಯವು. ಶಿವಸ್ವರೂಪ ಭೂತವಾದ ಜ್ಞಾನವು ಮಾಯೆಯಿಂದ ಆವರಿಸದೇ ಯಾವಾಗಲೂ ನಾಶವಾಗದೇ ಇರುವುದರಿಂದ ನಿತ್ಯವೂ ಅಮೃತವೂ ಆಗಿರುವುದು. ವೃತ್ತಿಜ್ಞಾನವು ಕ್ಷಣಿಕವಾದುದು. ಇದಕ್ಕಿಂತಲೂ ಉತ್ಕೃಷ್ಟವಾದುದು ಆತ್ಮಜ್ಞಾನವು. ಈ ಜ್ಞಾನದಿಂದ ಅಖಂಡೈಕ ರಸ ಸ್ವರೂಪವಾದ ವಸ್ತುವು ಪರಪ್ರೇಮಾಸ್ಪದವಾಗಿರುವುದರಿಂದ ಆನಂದವೆಂದು ಹೆಸರನ್ನು ಹೊಂದಿರುವುದು. ಆ ಆನಂದದ ಸ್ವಪ್ರಕಾಶಸ್ವರೂಪವಾದ ಅನುಭವವೇ ಶಿವನ ತಾಂಡವ ನರ್ತನಕ್ಕೆ ಕಾರಣವಾಗಿರುವುದು. ಆ ನೃತ್ಯವು ಪರಮಾನಂದ ಸ್ವರೂಪವನ್ನು ಅಭಿನಯದಿಂದ ವ್ಯಕ್ತಪಡಿಸುವುದಾಗಿರುವುದು.

ಈಶ್ವರನು ಹೇಳಿದನು—ದೇವಶ್ರೇಷ್ಠರೇ, ಅತ್ಯಂತ ಗೋಪ್ಯವಾದ ವಿಜ್ಞಾನ ಸ್ವರೂಪವನ್ನು ನಿಮಗೆ ಹೇಳುವೆನು. ಅತ್ಯಂತಾಸಕ್ತಿಯಿಂದಲೂ, ಏಕಾಗ್ರಚಿತ್ತ ದಿಂದಲೂ ನೀವು ಕೇಳಿರಿ. ||೩೩||

ಆತ್ಮಾ ತಾವತ್ಸುರಾ ಅಸ್ತಿ ಸ್ವಸಂವೇದ್ಯೋ ನಿರಾಸ್ಪದಃ ।
ಆನಂದಃ ಪೂರ್ಣಚೈತನ್ಯಃ ಸದಾ ಸೋಽಹಂ ನ ಸಂಶಯಃ ॥೩೪॥

ಎಲೈ ದೇವತೆಗಳೇ, ಆತ್ಮನು ಸತ್ಯಸ್ವರೂಪನು. ಸ್ವಸಂವೇದ್ಯನೆಂದರೆ ಜ್ಞಾನ ಸ್ವರೂಪನು. ಯಾವ ಆಶ್ರಯವೂ ಬೇಕಿಲ್ಲದವನು. ಸುಖಸ್ವರೂಪನು (ಪೂರ್ಣ ಕಾಮನು) ಅನಂತಸ್ವರೂಪನು. ಯಾವಾಗಲೂ ಇರತಕ್ಕವನು. ಆ ಆತ್ಮನೇ ನಾನಾ ಗಿರುವೆನು. ಈ ವಿಷಯದಲ್ಲಿ ಸಂದೇಹವಿಲ್ಲ.

ದೇಹೇಂದ್ರಿಯಾದಿಗಳಿಗಿಂತ ಬೇರೆಯಾದ ಆತ್ಮನು ಇರುವ ವಿಷಯದಲ್ಲಿ ಅನೇಕರು ನಾನಾಪ್ರಕಾರವಾಗಿ ತಿಳಿದುಕೊಂಡಿರುವರು. ಆದುದರಿಂದಲೇ ನಚಿಕೇತನು ಯಮನನ್ನು ಕುರಿತು ಆತ್ಮನಿರುವ ವಿಷಯದಲ್ಲಿ ಸಂದೇಹಾಸ್ಪದವಾದ ಪ್ರಶ್ನೆಯನ್ನೇ ಮೊದಲು ಕೇಳಿರುವನು. “ಯೇಯಂ ಪ್ರೇತೇ ವಿಚಿಕಿತ್ಸಾಮನುಷ್ಯೇಽಸ್ತೀತ್ಯೇಕೇ ನಾಯಮಸ್ತೀತಿಚೈಕೇ । ಏತದ್ವಿದ್ಯಾಮನುಶಿಷ್ಟಸ್ತ್ವಯಾಽಹಂ” ಎಂದು ಮನುಷ್ಯನು ಮರಣಹೊಂದಲಾಗಿ ಅವನ ಶರೀರ, ಇಂದ್ರಿಯ, ಮನಸ್ಸು, ಬುದ್ಧಿ ಇವುಗಳಿಗಿಂತ ಬೇರೆಯಾದ ದೇಹಾಂತರ ಸಂಬಂಧವುಳ್ಳ ಆತ್ಮನು ಇರುವನೆಂದು ಕೆಲವರೂ, ಅಂತಹ ಆತ್ಮನೇ ಇಲ್ಲವೆಂದು ಕೆಲವರೂ, ಈ ರೀತಿಯಾದ ಆತ್ಮನಿಲ್ಲವೆಂದು ಕೆಲವರೂ ಹೇಳು ವರು. ಪ್ರತ್ಯಕ್ಷಾನುಮಾನಪ್ರಮಾಣಗಳಿಂದ ಇದನ್ನು ನಿರ್ಣಯಿಸಲು ಸಾಧ್ಯವಿಲ್ಲ. ವೇದಾಂತಜ್ಞಾನದಿಂದಲೇ ನಿರ್ಣಯಿಸಬೇಕು. ಪರಮಪುರುಷಾರ್ಥವೂ, ಆ ಜ್ಞಾನಾ ಧೀನವಾಗಿರುವುದು. ಆದುದರಿಂದ ಜ್ಞಾನಸ್ವರೂಪವನ್ನು ನನಗೆ ಹೇಳಬೇಕು. ಎಂದು ವರವನ್ನು ಕೇಳಿಕೊಂಡಿರುವನು. ಯಮನೂ ಕೂಡ “ದೇವೈರತ್ರಾಪಿ ವಿಚಿಕಿತ್ಸಿತಂ ಪುರಾನಹಿ ಸುವಿಜ್ಞೇಯಮಣುರೇಷ ಧರ್ಮಃ ।” ಎಂದರೆ ದೇವತೆಗಳೂ ಇದನ್ನು ತಿಳಿಯಬೇಕೆಂದು ಹಿಂದೆ ಆಶಿಸಿದರು. ಇದು ಸೂಕ್ಷ್ಮವಾದ ವಿಷಯವಾದುದರಿಂದ ಹೇಳಿದರೂ ತಿಳಿಯುವುದು ಕಷ್ಟವಾದುದು. ಎಂದು ಹೇಳಿರುವನು. ತೈತ್ತರೀಯೋಪ ನಿಷತ್ತಿನಲ್ಲಿ “ಅಸ್ತಿಬ್ರಹ್ಮೇತಿ ಚೇದ್ವೇದ ಸನ್ತಮೇನಂ ತತೋವಿದುಃ” ಎಂದು ಬ್ರಹ್ಮನು (ಆತ್ಮನು) ಇರುವನೆಂದು ಮೊದಲು ತಿಳಿಯಬೇಕು ಎಂದೂ ಕಠೋಪನಿಷತ್ತಿನಲ್ಲಿ “ಅಸ್ತೀತ್ಯೇವೋಪಲಬ್ಧಸ್ಯ ತತ್ವಭಾವಃ ಪ್ರಸೀದತಿ” ಎಂದು ಆತ್ಮನು ಇರುವನೆಂದು ನಂಬಿದರೇ ತತ್ವಜ್ಞಾನವುಂಟಾಗುವುದೆಂದೂ ಹೇಳಿರುವುದು. ಆದುದರಿಂದಲೇ ಪರಮೇಶ್ವರನು ದೇವತೆಗಳಿಗೆ ಆತ್ಮನಿರುವನೆಂದು ಮೊದಲು ಹೇಳಿರುವನು. ನಿರಾಸ್ಪದವೆಂಬ ಶಬ್ದಕ್ಕೆ ಮಾಯಾ ಮತ್ತು ಮಾಯಾಕಾರ್ಯಗಳಿಗೆ ಆತ್ಮನೇ ಆಶ್ರಯವು.

ತಸ್ಯ ಕಾಚಿತ್ಸುರಾಃ ಶಕ್ತಿರ್ಮಾಯಾಽಖ್ಯಾಽಸ್ತಿ ವಿಮೋಹಿನೀ ।
ವಿಚಾರವೇಲಾಯಾಂ ಸಾಽಽತ್ಮಾ ಭವತ್ಯೇವ ನ ಚಾನ್ಯಥಾ ॥೩೫॥

ತದಭೇದೇನ ಸೋಽಸ್ಯಾತ್ಮಾ ಪ್ರಲಯೇ ಜಗತಃ ಸ್ಥಿತಃ ।
ತಸ್ಮಿನ್ ಪ್ರಪಂಚ ಸಂಸ್ಕಾರಃ ಸ್ಥಿತಃ ಸರ್ವಃ ಸುರೋತ್ತಮಾಃ ॥೩೬॥

ಆತ್ಮನಿಗಾದರೋ "ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ ಸ್ವೇಮಹಿಮ್ನಿ" ಇತಿ ಎಂಬ ವೇದವಾಕ್ಯದಿಂದ ತನ್ನ ಮಹಿಮೆಯ ಆತ್ಮಪ್ರತಿಷ್ಠೆಯನ್ನು ಹೇಳಿರುವುದರಿಂದ ಅವನಿಗೆ ಮತ್ತೊಂದು ಆಶ್ರಯವಿಲ್ಲ. ಇದೇ ಆತ್ಮನ ಅಸಾಧಾರಣರೂಪವು ಎಂಬುದೇ ತಾತ್ಪರ್ಯಾರ್ಥವು.

ಮನೋವೃತ್ತಿಯ ಅಳತೆಗೆ ಸಿಕ್ಕಿದ ಜ್ಞಾನವು ಕ್ಷಣಿಕವಾಗಿರುವುದು. "ಅಪ್ರಾಪ್ಯ ಮನಸಾಸಹ" ಎಂದು ಮನೋವೃತ್ತಿಗೆ ಸಿಕ್ಕದ ಆತ್ಮಜ್ಞಾನವು ಸಂಪೂರ್ಣವಾದುದರಿಂದ ನಿತ್ಯವಾದುದಾಗಿರುವುದು. ಈ ಆತ್ಮಜ್ಞಾನಕ್ಕೆ ಆನಂದಾನುಭವವೇ ಫಲವಾಗಿರುವುದು. ತಿಳಿಯಬೇಕಾದ ಆತ್ಮತತ್ವವೂ, ತಿಳಿಯತಕ್ಕ ಆತ್ಮನೂ, ಬೇರೆ ಬೇರೆಯಾದವರಲ್ಲವೆಂಬುದನ್ನು ತಿಳಿಸುವುದಕ್ಕಾಗಿ "ಸೋಽಹಂ" ಎಂಬ ಶಬ್ದವನ್ನು ಹೇಳಿರುವನು.

ಒಟ್ಟಿನಲ್ಲಿ ಈ ಶ್ಲೋಕದಲ್ಲಿ ಅಸ್ತಿ ಎಂಬ ಶಬ್ದದಿಂದ ಸತ್ಯತ್ವವನ್ನೂ, "ಸ್ವಸಂವೇದ್ಯ" ಎಂಬ ಶಬ್ದದಿಂದ ಜ್ಞಾನತ್ವವನ್ನೂ, ಸಂಪೂರ್ಣವೆಂಬ ಶಬ್ದದಿಂದ ಅನಂತತ್ವವನ್ನೂ ಆನಂದಶಬ್ದದಿಂದ ಸುಖತ್ವವನ್ನೂ, ಸೋಽಹಂ ಶಬ್ದದಿಂದ ಆಂತರಚೈತನ್ಯಸ್ವರೂಪವನ್ನೂ ಹೇಳಿದಂತೆ ಆಯಿತು. ಆದುದರಿಂದ ಸತ್ಯ, ಜ್ಞಾನ, ಅನಂತ, ಆನಂದ, ಆತ್ಮತ್ವ ಎಂಬ ಐದು ರೂಪದಿಂದ ಅನೃತ, ಜಡ, ನಾಶ, ದುಃಖ, ಅನಾತ್ಮ ಎಂಬ ಭ್ರಾಂತಿಯನ್ನು ಬಿಟ್ಟು ಅಖಂಡೈಕರಸಸ್ವರೂಪವನ್ನು ಶಿವನು ಉಪದೇಶಿಸಿರುವನು. ಎಂದು ತಿಳಿಯಬೇಕು. ॥೩೪॥

ಎಲೈ ದೇವತೆಗಳೇ, ಆ ಆತ್ಮನಿಗೆ ಮಾಯಾ ಎಂಬ ಹೆಸರಿನ ಮೋಹಜನಕ (ಭ್ರಾಮಕ)ವಾದ ಒಂದು ಶಕ್ತಿಯಿರುವುದು. ವಿಚಾರವಿಲ್ಲದ ಕಾಲದಲ್ಲಿ ಆತ್ಮನನ್ನಾಶ್ರಯಿಸಿದ ಈ ಶಕ್ತಿಯು ತನ್ನ ವಿಲಾಸವನ್ನು ತೋರಿಸುವುದು. ವಿಚಾರಸಮಯದಲ್ಲಿ ಜ್ಞಾನಸ್ವರೂಪದಿಂದ ಅದೂ ಆತ್ಮಸ್ವರೂಪವೇ ಆಗಿಬಿಡುವುದು. ಬೇರೆಯಾಗಿರುವುದಿಲ್ಲ. ॥೩೫॥

ದೇವಶ್ರೇಷ್ಠರೇ, ಪ್ರಪಂಚವು ಪ್ರಕೃತಿಯಲ್ಲಿ ಲೀನವಾದಾಗ ಆ ಪ್ರಕೃತಿಯು ಆತ್ಮನಲ್ಲಿ ಲೀನವಾಗಿ ಆತ್ಮಪ್ರಕೃತಿಗಳಿಗೆ ಭೇದವಿಲ್ಲದೇ ಇರುವುದು. ಆ ಆತ್ಮನಲ್ಲಿ

ಸ್ವಭಾವಾದೇವ ಸಂಕ್ಷುಬ್ಧಾ ವಾಸನಾ ಕರ್ಮಣಾ ಭವೇತ್ ।
ತತಸ್ತತ್ಕ್ಷೋಭಯುಕ್ತಾತ್ಮಾಽವಿಕ್ರಿಯೋಽಪಿ ಸ್ವಭಾವತಃ ॥೩೭॥

ಕ್ಷೋಭಕಃ ಕಾಲತತ್ತ್ವಸ್ಯ ಪುನಃ ಕಾಲೇನ ಸಂಯುತಃ ।
ಈಕ್ಷಣಾ ಪೂರ್ವವತ್ಕೃತ್ವಾ ಪುನಃ ಬ್ರಹ್ಮಾದಿಕಂ ಜಗತ್ ॥೩೮॥

ಸೃಷ್ಟ್ವಾಽನುಪ್ರಾಪ್ಯ ತನ್ಮೋಹಾತ್ ಸುರಾಃ ಸಂಸಾರಮಂಡಲೇ ।
ಜ್ಞೇಯ ಜ್ಞಾತ್ರಾದಿಕೇಽಶುದ್ಧೇ ಸ್ವಪ್ನತುಲ್ಯೇ ಮಹತ್ತರೇ ॥೩೯॥

ಅನಾದ್ಯಂತೇಽವಶೋ ಭೂತ್ವಾ ಸುರಾಃ ಕರ್ಮಾನುರೂಪತಃ ।
ವಿಚಿತ್ರಾಂ ಯೋನಿಮಾಸಾದ್ಯ ಸುಖದುಃಖಾದಿ ಪೀಡಿತಃ ॥೪೦॥

ಪ್ರಪಂಚವು ಸಂಸ್ಕಾರರೂಪದಿಂದ ಇರುವುದು. ಜೀವರುಗಳ ಪರಿಪಕ್ವವಾದ ಕರ್ಮ ಫಲಗಳು ಅನುಭವದಿಂದ ಕ್ಷೀಣವಾಗಿ, ಮಿಕ್ಕ ಕರ್ಮಗಳು ಪರಿಪಾಕಾವಸ್ಥೆಗೆ ಬರದೇ ಇರುವುದರಿಂದ ಆ ಕರ್ಮಗಳು ಪರಿಪಾಕಾವಸ್ಥೆಗೆ ಬರುವವರೆಗೂ ಪ್ರಪಂಚವು ಸಂಸ್ಕಾರರೂಪವಾಗಿ ಆತ್ಮನಲ್ಲಿ ಇದ್ದೇ ಇರುವುದು. ಈ ಸಂಸ್ಕಾರವೇ ಪುನಃ ಸೃಷ್ಟಿ ಯಾಗಲು ಬೀಜವಾಗಿರುವುದು. ಇದೆಲ್ಲವೂ ತೋರಿಕೆಯ ಸ್ವಭಾವವುಳ್ಳದಾದುದರಿಂದ ಅದ್ವೈತಸಿದ್ಧಾಂತಕ್ಕೆ ಬಾಧೆ ಇಲ್ಲವು. ಸಂಸ್ಕಾರರೂಪವಾದ ವಾಸನೆಯು ಜೀವರುಗಳ ಪರಿಪಕ್ವವಾದ ಕರ್ಮಗಳ ಸ್ವಭಾವದಿಂದ ಕಾರ್ಯಾಭಿಮುಖವಾಗಿ ಚಲಿಸುವುದು. ಆ ಮೇಲೆ ಆತ್ಮನು ತಾನು ವಿಕಾರವಿಲ್ಲದವನಾದರೂ ಸಂಸ್ಕಾರರೂಪವಾದ ಕರ್ಮಗಳ ಸ್ವಭಾವ ದಿಂದ ವಿಕಾರವಾದವನಂತೆ ತೋರುತ್ತಾ ಕಾರ್ಯಾಭಿಮುಖನಾಗುವನು. ॥೩೬-೩೭॥

ಕರ್ಮಾಭಿಮುಖನಾದ ಆತ್ಮನು ಕಾಲರೂಪವಾದ ತತ್ವಕ್ಕೆ ("ಕಾಲೋ ಮಾಯಾತ್ಮ ಸಂಬಂಧಃ") ಚಲನೆಯನ್ನುಂಟುಮಾಡುತ್ತ ಆ ಕಾಲತತ್ವದೊಡನೆ ಕೂಡಿ "ಸ ಐಕ್ಷತ ಲೋಕಾನ್ನು ಸೃಜೇ" ಇತಿ ಎಂಬ ವೇದವಾಕ್ಯದಂತೆ ಪೂರ್ವ ಸೃಷ್ಟಿ ಪರಂಪರೆಗೆ ಸಮಾನವಾಗಿಯೇ ಮತ್ತೆ ಮಾಯೋಪಾಧಿಕವಾದ ಬ್ರಹ್ಮಾದಿ ಪ್ರಪಂಚವನ್ನು ಸಂಕಲ್ಪಬಲದಿಂದ ಸೃಷ್ಟಿಸಿ ತಾದಾತ್ಮ್ಯಾಭಿಮಾನರೂಪವಾದ ಅನು ಪ್ರವೇಶವನ್ನು ಮಾಡಿ ಅಜ್ಞಾನದಿಂದ ಅಶುದ್ಧವೂ, ಸ್ವಪ್ನಸದೃಶವೂ, ಆದ್ಯಂತವಿಲ್ಲ ದುದೂ, ವಿಸ್ತಾರವೂ ಆದ ಸಂಸಾರ ಚಕ್ರದಲ್ಲಿ ಪರಾಧೀನನಾಗಿ ಕರ್ಮಾನುರೂಪ ವಾದ ವಿಚಿತ್ರವಾದ ಜನ್ಮಗಳನ್ನು ಪಡೆದು ಸುಖದುಃಖಾದಿಗಳನ್ನು ಅನುಭವಿಸುತ್ತಿರು ವಂತೆ ತೋರುತ್ತಿರುವನು. ॥೩೮-೩೯-೪೦॥

ಪೂರ್ವಜನ್ಮಾರ್ಜಿತಾತ್ಪುಣ್ಯಾನ್ನರೋ ಭೂತ್ವಾ ಮಹೀತಲೇ ।
ಮತ್ಪ್ರಸಾದೇನ ವೇದೋಕ್ತಂ ಕರ್ಮ ಕೃತ್ವಾ ವಿಶುದ್ಧಧೀಃ ॥೪೧॥

ವಿಚಾರ್ಯ ಸರ್ವಂ ದುಃಖಾದ್ಯ ಮನಿತ್ಯಂ ಸಾರವರ್ಜಿತಂ ।
ವಿರಕ್ತೋ ಮೋಕ್ಷಮಾಕಾಂಕ್ಷನ್ಮೋಕ್ಷೋಪಾಯಂ ಮಹತ್ತರಂ ॥೪೨॥

ವೇದೇನ ದರ್ಶಿತಂ ಸಮ್ಯಕ್ಸಂಪಾದ್ಯಾಸ್ಮತ್ಪ್ರಸಾದತಃ ।
ಆತ್ಮಮಾತ್ರಾಂ ಪರಾಂ ಮುಕ್ತಿಂ ಪ್ರಾಪ್ನೋತ್ಯಾತ್ಮಾ ಸ್ವಯಂ ಸುರಾಃ ॥೪೩॥

ಸರ್ವೇಷಾಮಾತ್ಮವಿಜ್ಞಾನಾದೇವ ಮುಕ್ತಿರ್ನಚಾನ್ಯತಃ ।
ಜ್ಞಾನಾದನ್ಯತ್ಸುರಾಃ ಸರ್ವಂ ವಿಜ್ಞಾನಸ್ಯೈವ ಸಾಧನಂ ॥೪೪॥

ತತ್ರ ಶಾಂತಾ(ತ್ಯಾ)ದಿಕಂ ಸರ್ವ ಮಿಹೈವ ಜ್ಞಾನಸಾಧನಂ ।
ಮಮ ಸ್ಥಾನೇ ಮೃತಿಃ ಶುದ್ಧೇ ವಾರಾಣಸ್ಯಾದಿಕೇ ಸುರಾಃ ॥೪೫॥

ದೇವತೆಗಳೇ, ಹೀಗೆ ಜೀವನು ಪೂರ್ವಜನ್ಮದಲ್ಲಿ ಸಂಪಾದಿಸಿದ್ದ ಪುಣ್ಯಫಲದಿಂದ ಭೂಮಿಯಲ್ಲಿ ಮನುಷ್ಯನಾಗಿ ಹುಟ್ಟಿ ನನ್ನ ಅನುಗ್ರಹದಿಂದಲೇ ವೇದೋಕ್ತವಾದ ಕರ್ಮಗಳನ್ನು ಮಾಡಿ ಚಿತ್ತಶುದ್ಧಿಯನ್ನು ಪಡೆದು ಪ್ರಪಂಚಾನುಭವವೆಲ್ಲವೂ ದುಃಖಮಿಶ್ರವಾದುದು. ಅಸಾರವಾಗಿ ಅನಿತ್ಯವಾದುದು. ಎಂದು ವಿಚಾರದಿಂದ ತಿಳಿದು, ವೈರಾಗ್ಯವನ್ನು ಹೊಂದಿ ಮೋಕ್ಷವನ್ನಪೇಕ್ಷಿಸಿ, ವೇದದಲ್ಲಿ ಹೇಳಿದ ಶ್ರೇಷ್ಠವಾದ ಮೋಕ್ಷೋಪಾಯಗಳನ್ನು ನನ್ನ ಅನುಗ್ರಹದಿಂದಲೇ ಪಡೆದು, ಆ ಆತ್ಮನು (ಜೀವನು) ಸ್ವಸ್ವರೂಪವಾದ ಪರಮಾನಂದದ ಅಪರೋಕ್ಷಾನುಭವರೂಪವಾದ ಮೋಕ್ಷವನ್ನು ಹೊಂದುವನು. ॥೪೧-೪೨-೪೩॥

ಎಲ್ಲರಿಗೂ ಆತ್ಮಜ್ಞಾನದಿಂದಲೇ ಮುಕ್ತಿಯಾಗುವುದು. ಬೇರೇ ವಿಧದಿಂದ ಮುಕ್ತಿಯಾಗುವುದಿಲ್ಲ. ಜ್ಞಾನವನ್ನು ಬಿಟ್ಟು ಬೇರೆಯಾದ ಕರ್ಮಗಳು ಸ್ವರ್ಗಾದಿ ಸಾಧನಗಳು. ಶಾಂತ್ಯಾದಿ ಸದ್ಗುಣಗಳು ಈ ಜನ್ಮದಲ್ಲಿಯೇ ಜ್ಞಾನಸಾಧನಗಳಾಗಿ ಫಲಪ್ರದವಾಗುವುವು. ॥೪೪॥

ದೇವೋತ್ತಮರೇ, ನನ್ನ ವಾಸಸ್ಥಾನವಾದ ಕಾಶೀ ಮುಂತಾದ ಕ್ಷೇತ್ರಗಳಲ್ಲಿ ಅಯೋಗ್ಯರಾಗಲಿ, ಯೋಗ್ಯರಾಗಲಿ ಮರಣಹೊಂದಿದರೆ ಈ ಪುಣ್ಯವು ಮರಣಾ

ಅಯೋಗ್ಯಾನಾಂ ಚ ಯೋಗ್ಯಾನಾಂ ನರಾಣಾಂ ಮರಣಾತ್ಪರಂ ।
ವಿಶುದ್ಧಬ್ರಹ್ಮವಿದ್ಯಾಯಾಃ ಸಾಧನಂ ಸುರಸತ್ತಮಾಃ ॥೪೬॥

ಶ್ರೀಮತ್ಪಂಚಾಕ್ಷರೋ ಮಂತ್ರೋ ಮಂತ್ರಾಣಾಮುತ್ತಮೋತ್ತಮಃ ।
ಮಾರ್ಗಾಣಾಂ ವೇದಮಾರ್ಗಶ್ಚ ಪ್ರಾಪ್ಯಾನಾಂ ಮುಕ್ತಿರುತ್ತಮಾ ॥೪೭॥

ದೇವತಾನಾಮಹಂ ಮುಖ್ಯಃ ಸ್ಥಾನಾನಾಂ ಸುರಸತ್ತಮಾಃ ।
ಮಮ ಸ್ಥಾನಾನಿ ಮುಖ್ಯಾನಿ ತೇಷಾಂ ವಾರಾಣಸೀ ತಥಾ ॥೪೮॥

ಶ್ರೀಕಾಲಹಸ್ತಿ ಶೈಲಾಖ್ಯಂ ಶ್ರೀಮದ್ವೃದ್ಧಾಚಲಾಭಿಧಂ ।
ಪುಂಡರೀಕಪುರಂ ತದ್ವಚ್ಛ್ರೀಮದ್ವಲ್ಮೀಕ ಮುತ್ತಮಂ ॥೪೯॥

ವೇದಾರಣ್ಯ ಸಮಾಖ್ಯಂಚ ಸ್ಥಾನಂ ಮುಖ್ಯಂ ಸುರೋತ್ತಮಾಃ ।
ಏಷಾಂ ಮುಖ್ಯತಮಾ ಖ್ಯಾತಾ ಶ್ರೀಮದ್ವಾರಾಣಸೀ ಪುರೀ ॥೫೦॥

ಪುಂಡರೀಕಪುರ ಮಪ್ಯತಿಪ್ರಿಯಂ ।
ವಿತ್ತ ಸರ್ವಸುರತ್ತಮಾ ಮಮ ॥
ಭುಕ್ತಿ ಮುಕ್ತಿಕರಮಾಶು ದೇಹಿನಾಂ ।
ಭಕ್ತಲಭ್ಯಮತಿಶೋಭನಂ ಸದಾ ॥೫೧॥

ನಂತರದಲ್ಲಿ ಬರುವ ಮುಂದಿನ ಜನ್ಮದಲ್ಲಿ ಪರಿಶುದ್ಧವಾದ ಬ್ರಹ್ಮವಿದ್ಯಾಭ್ಯಾಸಕ್ಕೆ ಸಾಧನವಾದುದಾಗಿರುವುದು. ||೪೫-೪೬||

ಮಂತ್ರಗಳಲ್ಲೆಲ್ಲಾ ಪಂಚಾಕ್ಷರಮಂತ್ರವೂ ಮಾರ್ಗಗಳಲ್ಲಿ ವೇದಮಾರ್ಗವೂ ಹೊಂದಬೇಕಾದುವುಗಳಲ್ಲಿ ಮುಕ್ತಿಯೂ, ಅತ್ಯುತ್ತಮುವಾದವುಗಳು. ||೪೭||

ದೇವತೆಗಳಲ್ಲೆಲ್ಲಾ ನಾನೇ ಮುಖ್ಯನಾದವನು. ನಾನು ನೆಲೆಸಿರುವ ಸ್ಥಾನಗಳೂ ಮುಖ್ಯವಾದವುಗಳು. ವಾರಾಣಸೀ, ಕಾಲಹಸ್ತಿ, ವೃದ್ಧಾಚಲ, ಪುಂಡರೀಕಪುರ, ವಲ್ಮೀಕ, ವೇದಾರಣ್ಯ ಇವುಗಳೇ ನಾನು ನೆಲೆಸಿರುವ ಕ್ಷೇತ್ರಗಳು. ಇವುಗಳಲ್ಲೆಲ್ಲಾ ಅತ್ಯಂತ ಮುಖ್ಯವಾಗಿ ಪ್ರಸಿದ್ಧವಾದುದು ಕಾಶೀಪಟ್ಟಣವು. ||೪೮-೪೯-೫೦||

ದೇವಶ್ರೇಷ್ಠರೇ, ಪುಂಡರೀಕಪುರವೂ ಕೂಡ ನನಗೆ ಅತ್ಯಂತ ಪ್ರೀತಿಪಾತ್ರವಾದುದೆಂಬುದಾಗಿ ತಿಳಿಯಿರಿ. ಜೀವರಿಗೆ ಆ ಕ್ಷೇತ್ರವು ಭುಕ್ತಿಯನ್ನೂ, ಮುಕ್ತಿಯನ್ನೂ ಶೀಘ್ರವಾಗಿ ಕೊಡುವುದು. ಭಕ್ತಿಯಿಂದ ಮಂಗಳಕರವಾದ ಆ ಕ್ಷೇತ್ರ

ಅಸ್ಮಾಭಿಃ ಸುರಸತ್ತಮಾ ಅಭಿಹಿತಂ ವಿಜ್ಞಾನಮತ್ಯದ್ಭುತಂ ।
ಯುಷ್ಮಾಕಂ ಮುನಿಪುಂಗವೈರಪಿ ತಥಾ ಸರ್ವಾರ್ಥಸಾರಂಗತೈಃ ॥
ಮದ್ಭಕ್ತೈರತಿ ಶೋಭನಂ ಪುರವರಂ ಸಂಸೇವನೀಯಂ ನರೈಃ ।
ಮುಕ್ತ್ಯರ್ಥಂ ಪರಮಾಸ್ತಿಕೈರಿತಿ ಪರಾ ಸಾಧ್ವೀ ಶ್ರುತಿರ್ವಕ್ತಿಹಿ ॥೫೨॥

|| ಸೂತ ಉವಾಚ ||

ಏವಂ ಮಹೇಶ್ವರಂ ಸಾಕ್ಷಾತ್ ಶ್ರೀಮದ್ದಭ್ರ ಸಭಾಪತಿಃ ।
ದೇವದೇವೋ ಜಗನ್ನಾಥಃ ಪಶುಪಾಶ ವಿಮೋಚಕಃ ॥೫೩॥

ಆಮ್ನಾಯಾಂತೈಕ ಸಂವೇದ್ಯಃ ಸಾಕ್ಷೀ ಸರ್ವಸ್ಯ ಸರ್ವದಾ ।
ಅಂಬಿಕಾ ಸಹಿತಃ ಶ್ರೀಮಾನ್ಪ್ರೋವಾಚ ಜ್ಞಾನಮುತ್ತಮಂ ॥೫೪॥

ದೇವಾಶ್ಚ ಬ್ರಹ್ಮವಿಜ್ಞಾನಂ ವೇದಾಂತೋತ್ಥಂ ವಿಮುಕ್ತಿದಂ ।
ಶ್ರುತ್ವಾ ಸರ್ವೇಶ್ವರಂ ವಿಪ್ರಾಃ ಪ್ರಣಿಪತ್ಯ ಮಹೀತಲೇ ॥೫೫॥

ಸೇವೆಯು ಯಾವಾಗಲೂ ದೊರೆವುದು. ಸಾಮಾನ್ಯಜನರಿಗೆ ಈ ಮಾರ್ಗವು ಅತ್ಯಂತ ಸುಲಭವಾದುದು. ||೫೧||

ದೇವಶ್ರೇಷ್ಠರೇ, ನಾನು ಅತ್ಯಾಶ್ಚರ್ಯಕರವಾದ ವಿಜ್ಞಾನದ ವಿಷಯವನ್ನು ನಿಮಗೆ ಹೇಳಿರುವೆನು. ಮುನಿಶ್ರೇಷ್ಠರೂ, ಸಮಸ್ತ ಶಾಸ್ತ್ರಾರ್ಥಗಳನ್ನೂ ತಿಳಿದ ನನ್ನ ಭಕ್ತರೂ, ವೇದಮಾರ್ಗಾಸಕ್ತರಾದ ಸಮಸ್ತ ಜನರೂ, ತಮಗೆ ಮೋಕ್ಷವಾಗಬೇಕಾದರೆ "ಸಭಗವಃ ಕಸ್ಮಿನ್ಪ್ರತಿಷ್ಠಿತ ಇತಿ ವರಣಾಯಾಂ" ಇತ್ಯಾದಿಯಾಗಿ ಉಪನಿಷತ್ತಿನಲ್ಲಿ ಹೇಳಿರುವಂತೆ, ಅತ್ಯಂತ ಶ್ರೇಷ್ಠಕ್ಷೇತ್ರವಾದ ಕಾಶೀಕ್ಷೇತ್ರದಲ್ಲಿ ಉಮಾಮಹೇಶ್ವರನನ್ನು ಸೇವೆಮಾಡಬೇಕು. ||೫೨||

ಸೂತನು ಹೇಳಿದನು—ಹೀಗೆ ದೇವದೇವನೂ, ಲೋಕಗಳಿಗೆಲ್ಲಕ್ಕೂ ಸ್ವಾಮಿಯೂ, ಪಶುಸ್ವರೂಪರಾದ ಜೀವರನ್ನು ಸಂಸಾರದುಃಖವೆಂಬ ಪಾಶಗಳಿಂದ ಬಿಡಿಸತಕ್ಕವನೂ, ವೇದಾಂತಗಳಿಂದಲೇ ತಿಳಿಯಲ್ಪಡತಕ್ಕವನೂ, ಸಮಸ್ತಕ್ಕೂ ಸಾಕ್ಷಿಸ್ವರೂಪನೂ, ದೇವೀಸಹಿತನಾದವನೂ ಆದ, ದಭ್ರಸಭಾಪತಿಯಾದ ಮಹೇಶ್ವರನು ಉತ್ತಮವಾದ ಜ್ಞಾನವನ್ನು ದೇವತೆಗಳಿಗೆ ಉಪದೇಶಮಾಡಿದನು. ||೫೩-೫೪||

ದೇವತೆಗಳೂ ಕೂಡ ವೇದಾಂತಮಹಾವಾಕ್ಯಗಳಿಂದ ಉಂಟಾಗುವ, ಮೋಕ್ಷವನ್ನು ಕೊಡತಕ್ಕ, ಬ್ರಹ್ಮಜ್ಞಾನವನ್ನು ಕೇಳಿ, ಆ ದೇವನಿಗೆ ಸಾಷ್ಟಾಂಗ ನಮಸ್ಕಾರ

ಲೌಕಿಕ್ಯೈಃ ವೈದಿಕ್ಯೈಃ ಸ್ತೋತ್ರೈಃ ಸ್ತುತ್ವಾ ಭಕ್ತ್ಯಾ ಸಭಾಪತಿಂ ।
ಪೂಜಾಂ ಪ್ರಚಕ್ರಿರೇ ದೇವಾಃ ಶ್ರೀಮತ್ಪಂಚಾಕ್ಷರೇಣ ವೈ ॥೫೬॥

ಇತಿ ಶ್ರೀಸ್ಕಾಂದಪುರಾಣೇ ಸೂತಸಂಹಿತಾಯಾಂ ಮುಕ್ತಿಖಂಡೇ
ವ್ಯಾಘ್ರಪುರೇ ದೇವೋಪದೇಶಕಥನಂ ನಾಮ ಅಷ್ಟಮೋಽಧ್ಯಾಯಃ

ವನ್ನು ಮಾಡಿ, ಆ ಸಭಾಪತೀಶ್ವರನನ್ನು ಲೌಕಿಕವಾದ ಸ್ತೋತ್ರಗಳಿಂದಲೂ, ವೇದ ಮಂತ್ರಗಳಿಂದಲೂ, ಸ್ತೋತ್ರಮಾಡಿ ಪಂಚಾಕ್ಷರಮಂತ್ರದಿಂದ ಪೂಜೆಯನ್ನು ಮಾಡಿದರು. ॥೫೫-೫೬॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಮುಕ್ತಿಖಂಡದಲ್ಲಿ
ವ್ಯಾಘ್ರಪುರದಲ್ಲಿ ಮಹೇಶ್ವರನು ದೇವತೆಗಳಿಗೆ ಮಾಡಿದ ಉಪದೇಶವನ್ನು ತಿಳಿಸುವ
ಎಂಟನೆಯ ಅಧ್ಯಾಯವು ಮುಗಿದುದು.

|| ಓಂ ತತ್ಸದ್ಬ್ರಹ್ಮಣೇ ನಮಃ ||

ಶ್ರೀಮತ್ಸ್ಕಂದಪುರಾಣಾಂತರ್ಗತಾ ಸೂತಸಂಹಿತಾ

ಮುಕ್ತಿಖಂಡಂ

|| ನವಮೋಽಧ್ಯಾಯಃ ||

ಒಂಬತ್ತನೆಯ ಅಧ್ಯಾಯವು

|| ಮುನಯ ಊಚುಃ ||

ಭವತಾ ಸರ್ವಮಾಖ್ಯಾತಂ ಸಂಕ್ಷೇಪಾದ್ವಿಸ್ತರಾದಪಿ ।
ಭವತ್ಪ್ರಸಾದಾದಸ್ಮಾಭಿರ್ವಿಜ್ಞಾತಂ ಚ ವಿಚಕ್ಷಣ ॥೧॥

ತಥಾಽಪಿ ದೇವದೇವಸ್ಯ ಶಿವಸ್ಯ ಪರಮಾತ್ಮನಃ ।
ವಿಶ್ವಾಧಿಕಸ್ಯ ರುದ್ರಸ್ಯ ಬ್ರಹ್ಮಣಃ ಸರ್ವಸಾಕ್ಷಿಣಃ ॥೨॥

ನರ್ತನಂ ದೃಷ್ಟುಮಿಚ್ಛಾಮಃ ಶಂಕರಸ್ಯಾಂಬಿಕಾಪತೇಃ ।
ಅತಃ ಕಾರುಣ್ಯತೋಽಸ್ಮಾಕಂ ತದುಪಾಯಂ ವದಾದ್ಭುತಂ ॥೩॥

ಹಿಂದಿನ ಅಧ್ಯಾಯದಲ್ಲಿ ಹೇಳಿದ ಶಿವನ ತಾಂಡವನೃತ್ಯದ ದರ್ಶನವು ಮುಕ್ತ್ಯುಪಾಯಗಳಲ್ಲಿ ಅತ್ಯಂತ ಸುಲಭವಾದುದೆಂದು ತಿಳಿದ ಮುನಿಗಳು ಸೂತನನ್ನು ಕುರಿತು, ಮಹಾಮಹಿಮನಾದ ಸೂತನೇ, ನೀನು ವಿಸ್ತಾರವಾಗಿಯೂ, ಸಂಕ್ಷೇಪವಾಗಿಯೂ, ಎಲ್ಲವನ್ನೂ ಹೇಳಿದೆ. ನಿನ್ನ ಅನುಗ್ರಹದಿಂದ ನಾವು ಅದನ್ನೆಲ್ಲ ತಿಳಿದುಕೊಂಡೆವು. ಹಾಗಾದರೂ ದೇವದೇವನೂ, ಪರಮಾತ್ಮನೂ, ಸರ್ವಸಾಕ್ಷಿಯೂ ಆದ ಶಿವನ ತಾಂಡವ ನರ್ತನವನ್ನು ನೋಡಬೇಕೆಂದುಅಪೇಕ್ಷಿಸುವೆವು. ಅಂಬಿಕಾಪತಿಯಾದ ಪರಮೇಶ್ವರನ ಆಶ್ಚರ್ಯಕರವಾದ ಆ ತಾಂಡವನರ್ತನವನ್ನು ನೋಡಲು ಯಾವ ಉಪಾಯವಿರುವುದು? ಅದನ್ನು ಕರುಣೆಯಿಂದ ನಮಗೆ ಹೇಳಬೇಕು. ಎಂದರು. ||೧-೨-೩||

|| ಸೂತ ಉವಾಚ ||

ಶೃಣುಧ್ವಂ ತತ್ಪ್ರವಕ್ಷ್ಯಾಮಿ ಶ್ರದ್ಧಯಾ ವೇದವಿತ್ತಮಾಃ ।
ಪುರಾ ನಂದೀಶ್ವರಂ ಧೀಮಾನಪೃಚ್ಛಚ್ಛೌನಕೋ ಮುನಿಃ ॥೪॥

ಸೋಽಪಿ ಕಾರುಣ್ಯತಃ ಶ್ರೀಮಾನ್ನಂದೀ ವೇದವಿದಾಂ ವರಃ ।
ಶೌನಕಾಯಾಬ್ರವೀನ್ನತ್ವಾ ಮಹಾದೇವಂ ಘೃಣಾನಿಧಿಂ ॥೫॥

|| ನಂದಿಕೇಶ್ವರ ಉವಾಚ ||

ಕೈಲಾಸೇ ಸಂಧ್ಯಯೋಃ ಶಂಭುಃ ಕರೋತ್ಯಾನಂದನರ್ತನಂ ।
ತಚ್ಛಿವಾ ಕೇವಲಂ ಪಶ್ಯತ್ಯನ್ಯಸ್ತತ್ರ ನ ಪಶ್ಯತಿ ॥೬॥

ಪುಂಡರೀಕ ಪುರೇ ರುದ್ರಃ ಶೌನಕಾನಂದನರ್ತನಂ ।
ಶ್ರೀಮದ್ದಭ್ರ ಸಭಾಮಧ್ಯೇ ಕರೋತಿ ಭಗವಾನ್ ಸದಾ ॥೭॥

ತತ್ರಾಪಿ ಶೌನಕಾಂಬಾಽಪಿ ಸ್ಕಂದೋ ವಿಘ್ನೇಶ್ವರೋಽಪಿಚ ।
ಕ್ಷೇತ್ರಪಾಲೋ ಮಯಾ ಸಾರ್ಧಂ ಪಶ್ಯತ್ಯನ್ಯೋ ನ ಪಶ್ಯತಿ ॥೮॥

ಸೂತನು ಹೇಳಿದನು—ವೇದವನ್ನು ತಿಳಿದವರಲ್ಲಿ ಶ್ರೇಷ್ಠರಾದ ಮುನಿಗಳೇ, ನಾನು ಹೇಳುವುದನ್ನು ಕೇಳಿರಿ. ಹಿಂದೆ ಬುದ್ಧಿವಂತನಾದ ಶೌನಕಮುನಿಯು ನಂದೀಶ್ವರನನ್ನು ಪ್ರಶ್ನೆಮಾಡಿದನು. ವೇದಗಳನ್ನು ತಿಳಿದವರಲ್ಲಿ ಶ್ರೇಷ್ಠರಾದ ಆ ನಂದೀಶ್ವರನು ದಯಾನಿಧಿಯಾದ ಮಹೇಶ್ವರನಿಗೆ ನಮಸ್ಕಾರವನ್ನು ಮಾಡಿ, ಅತ್ಯಂತ ಕರುಣೆಯಿಂದ ಶೌನಕನಿಗೆ ಹೇಳಿದನು. ||೪-೫||

ನಂದಿಕೇಶ್ವರನು ಹೇಳಿದನು—ಶೌನಕನೇ, ಕೈಲಾಸಪರ್ವತದಲ್ಲಿ ಎರಡು ಸಂಧ್ಯಾಕಾಲಗಳಲ್ಲಿಯೂ ಶಿವನು ಆನಂದದಿಂದ ನರ್ತನಮಾಡುವನು. ಅದನ್ನು ಪಾರ್ವತಿಯೊಬ್ಬಳೇ ನೋಡುವಳು. ಅಲ್ಲಿ ಮತ್ತೊಬ್ಬರು ಅದನ್ನು ನೋಡಲಾಗುವುದಿಲ್ಲ. ||೬||

ಪುಂಡರೀಕಪುರದಲ್ಲಿ ಶ್ರೀ ಮದ್ದಭ್ರಸಭಾಮಧ್ಯದಲ್ಲಿ ಯಾವಾಗಲೂ ರುದ್ರನು ಆನಂದ ನರ್ತನವನ್ನು ಮಾಡುತ್ತಿರುವನು. ಅಲ್ಲಿಯೂ ಗೌರೀದೇವೀ, ಕುಮಾರ, ವಿಘ್ನೇಶ್ವರ, ಕ್ಷೇತ್ರಪಾಲ, ನಾನು ಇಷ್ಟು ಜನರು ಮಾತ್ರ ನೋಡುವೆವು. ಮತ್ತಾರೂ ಅದನ್ನು ನೋಡಲಾಗುವುದಿಲ್ಲ. ||೭-೮||

ಯೇಷಾಂ ಪ್ರಸಾದೋ ದೇವಸ್ಯ ಶೌನಕಾಸ್ತಿ ಮಹತ್ತರಂ ।
ತೇ ಪ್ರಪಶ್ಯಂತಿ ತತ್ರೈವ ಮಹಾನರ್ತನಮೈಶ್ವರಂ ॥೯॥

ತಸ್ಮಾತ್ತತ್ಪ್ರಸಾದ ಸಿದ್ಧ್ಯರ್ಥಂ ಶೌನಕ ಶ್ರದ್ಧಯಾ ಸಹ ।
ಪುಂಡರೀಕಪುರಂ ಗತ್ವಾ ರವೌ ಚಾಪಸ್ಥಿತೇ ಸತಿ ॥೧೦॥

ಆದ್ರಾರ್ಯಾಂ ಪ್ರಾತರೇವ ತ್ವಂ ಶುಚಿರ್ಭೂತ್ವಾ ಸಮಾಹಿತಃ ।
ಶಿವಗಂಗಾಽಭಿಧೇ ತೀರ್ಥೇ ಸ್ನಾನಂ ಕೃತ್ವಾ ಮಹತ್ತರೇ ॥೧೧॥

ಯಥಾಶಕ್ತಿ ಧನಂ ಧಾನ್ಯಂ ದತ್ವಾಽನ್ಯಬ್ರಾಽನಸೂಯವೇ ।
ಉಪೋಷ್ಯ ದಿನ ಮೇಕಂ ವಾ ಶ್ರೀಮೂಲಸ್ಥಾನ ನಾಯಕಂ ॥೧೨॥

ಭಕ್ತ್ಯಾ ಪ್ರದಕ್ಷಿಣೀಕೃತ್ಯ ಪ್ರಣಮ್ಯ ಭುವಿ ದಂಡವತ್ ।
ಶ್ರೀಮತ್ಪಂಚಾಕ್ಷರಂ ಮಂತ್ರಂ ಜಪಿತ್ವಾಽಯುತಮಾದರಾತ್ ॥೧೩॥

ದಿನೇ ದಿನೇ ಮುನೇಽಬ್ದಾಂತೇ ಸ್ನಾನಂ ಕೃತ್ವಾ ಯಥಾ ಪುರಾ ।
ಪ್ರಣಮ್ಯ ದೇವಮೀಶಾನಂ ಶ್ರೀ ಮೂಲಸ್ಥಾನ ನಾಯಕಂ ॥೧೪॥

ಶೌನಕನೇ, ಯಾರಿಗೆ ಸ್ವಾಮಿಯ ಅನುಗ್ರಹವಿರುವುದೋ ಅವರು ಆ ಈಶ್ವರನ ಮಹಾನರ್ತನವನ್ನು ಅಲ್ಲಿಯೇ ನೋಡುವರು. ||೯||

ಆದುದರಿಂದ ಎಲೈ ಶೌನಕನೇ, ಆ ಈಶ್ವರಾನುಗ್ರಹವುಂಟಾಗುವುದಕ್ಕಾಗಿ ಅತ್ಯಂತಾಸಕ್ತಿಯಿಂದ ಪುಂಡರೀಕಪುರಕ್ಕೆ ಹೋಗಿ ಸೂರ್ಯನು ಧನುರ್ರಾಶಿಯಲ್ಲಿರುವಾಗ ಆದ್ರಾರ್ನಕ್ಷತ್ರದ ದಿನ ಪ್ರಾತಃಕಾಲದಲ್ಲಿ ಅಲ್ಲಿರುವ ಶಿವಗಂಗಾತೀರ್ಥದಲ್ಲಿ ಸ್ನಾನ ಮಾಡಿ ತನ್ನ ಶಕ್ತ್ಯನುಸಾರವಾಗಿ ಧನಧಾನ್ಯಾದಿಗಳನ್ನು ಯೋಗ್ಯನಾದ ಬ್ರಾಹ್ಮಣನಿಗೆ ದಾನಮಾಡಿ, ಒಂದು ದಿನ ಉಪವಾಸಮಾಡಿ, ಮೂಲಸ್ಥಾನೇಶ್ವರನನ್ನು ಭಕ್ತಿಯಿಂದ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ, ||೧೦-೧೧-೧೨||

ಆದರದಿಂದ ಪಂಚಾಕ್ಷರಮಂತ್ರವನ್ನು ಪ್ರತಿದಿನವೂ ಹತ್ತುಸಾವಿರ ಜಪಮಾಡುತ್ತಿದ್ದು, ಒಂದು ವರ್ಷವಾದಮೇಲೆ, ಮೊದಲಿನಂತೆ ಸ್ನಾನವನ್ನು ಮಾಡಿ, ಮೂಲಸ್ಥಾನೇಶ್ವರನಿಗೆ ನಮಸ್ಕಾರಮಾಡಿ, ಪ್ರತಿದಿನವೂ ಶ್ರೀಮದ್ಸಭ್ರಸಭಾಪತೀಶ್ವರನಿಗೂ ಮೂರು ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ, ಮೊದಲಿನಂತೆ ಪಂಚಾಕ್ಷರಮಂತ್ರ

ಪುನರ್ನಿತ್ಯಂ ಮಹಾಭಕ್ತ್ಯಾ ಶ್ರೀಮದ್ದಭ್ರ ಸಭಾಪತಿಂ ।
ಪ್ರದಕ್ಷಿಣ ತ್ರಯಂ ಕೃತ್ವಾ ಪ್ರಣಮ್ಯ ಭುವಿ ದಂಡವತ್ ॥೧೫॥

ಶ್ರೀಮತ್ಪಂಚಾಕ್ಷರಂ ಮಂತ್ರಂ ಜಪಿತ್ವಾ ಪೂರ್ವವತ್ಪುನಃ ।
ವತ್ಸರಾಂತೇ ಯಥಾಶಕ್ತಿ ಧನಂ ದತ್ವಾ ಸಭಾಪತೇಃ ॥೧೬॥

ಪೂಜಾಂ ಪಂಚಾಕ್ಷರೇಣೈವ ಕುರು ಶ್ರದ್ಧಾ ಪುರಃಸರಂ ।
ಪುನಃ ಪ್ರಸಾದಸ್ತೇ ತಸ್ಯ ಭವಿಷ್ಯತ್ಯೇವ ಶೌನಕ ॥೧೭॥

ಬಹವೋ ದೇವದೇವಸ್ಯ ನೃತ್ಯಮತ್ರ ಪ್ರಸಾದತಃ ।
ದೃಷ್ಟ್ವಾ ಸ್ವವಾಂಛಿತಂ ಸರ್ವಂ ಪ್ರಾಪ್ತವಂತೋ ಮುನೀಶ್ವರಾಃ॥೧೮॥

|| ಸೂತ ಉವಾಚ ||

ಏವಂ ನಂದೀಶವಚನಂ ಶ್ರುತ್ವಾಽಸೌ ಶೌನಕೋ ಮುನಿಃ ।
ಸರ್ವಂ ಕೃತ್ವಾ ಕ್ರಮೇಣೈವ ಶ್ರದ್ಧಯಾ ಮುನಿಸತ್ತಮಾಃ ॥೧೯॥

ಪ್ರಸಾದೇನ ಮಹೇಶಸ್ಯ ನರ್ತನಂ ಸರ್ವಸಿದ್ಧಿದಂ ।
ದೃಷ್ಟ್ವಾ ದಭ್ರ ಸಭಾಮಧ್ಯೇ ಭವಾನ್ಯಾ ಸಹ ಶೌನಕಃ ॥೨೦॥

ಅತೀವ ಪ್ರೀತಿಮಾಪನ್ನಃ ಸ್ತೋತ್ರೈಃ ಸ್ತುತ್ವಾ ಯಥಾಬಲಂ ।
ಭಕ್ತ್ಯಾ ಪರವಶೋ ಭೂತ್ವಾ ಕಿಂಚಿತ್ಕಾಲಂ ಮಹಾಮುನಿಃ ॥೨೧॥

ವನ್ನು ಜಪಿಸಿ ವರ್ಷದ ಕೊನೆಯಲ್ಲಿ ಶಕ್ತ್ಯನುಸಾರವಾಗಿ ಸಭಾಪತಿಯನ್ನುದ್ದೇಶಿಸಿ ದಾನವನ್ನು ಮಾಡಿ ಪಂಚಾಕ್ಷರಮಂತ್ರದಿಂದಲೇ ಪೂಜೆಯನ್ನು ಮಾಡು. ಹೀಗೆ ಮಾಡಿದರೆ ಆ ದೇವನ ಅನುಗ್ರಹವು ನಿನಗೆ ಆಗಿಯೇ ಆಗುವುದು. ||೧೩-೧೪-೧೫-೧೬-೧೭||

ಅನೇಕರು ದೇವದೇವನಾದ ಈಶ್ವರನ ಅನುಗ್ರಹದಿಂದ ಇಲ್ಲಿ ತಾಂಡವನರ್ತನವನ್ನು ನೋಡಿ ತಂತಮ್ಮ ಸಮಸ್ತವಾದ ಇಷ್ಟಾರ್ಥಗಳನ್ನೂ ಪಡೆದಿರುವವರು. ||೧೮||

ಸೂತನು ಹೇಳಿದನು—ಋಷಿಶ್ರೇಷ್ಠರೇ, ಕೇಳಿರಿ. ನಂದೀಶ್ವರನು ಹೇಳಿದ ಮಾತನ್ನು ಶೌನಕ ಮುನಿಯು ಕೇಳಿ ಭಕ್ತಿಯಿಂದ ಅವನು ಹೇಳಿದಂತೆ ಎಲ್ಲವನ್ನೂ ಮಾಡಿ, ಶಿವನ ಅನುಗ್ರಹದಿಂದ ದಭ್ರಸಭಾ ಮಧ್ಯದಲ್ಲಿ ದೇವಿಯೊಡನೆ ನರ್ತನವನ್ನು

ಪುನಶ್ಚ ದೃಷ್ಟ್ವಾ ದೇವೇಶಂ ನೃತ್ಯಂತಂ ದೇವನಾಯಕಂ ।
ಪ್ರಮೋದೇನ ಸ್ವಯಂ ವಿಪ್ರಾ ಅಕರೋದ್ದಂಡನರ್ತನಂ ॥೨೨॥

ದೇವದೇವೋಽಪಿ ಸಂತುಷ್ಟಃ ಶೌನಕಾಯ ದ್ವಿಜೋತ್ತಮಾಃ ।
ಪ್ರಾಹ ಗಂಭೀರಯಾ ವಾಚಾ ಶೌನಕ ತ್ವಂ ಮಹಾಮುನೇ ॥೨೩॥

ವೇದಾನಾಮಾದಿಭೂತಸ್ಯ ಋಗ್ವೇದಸ್ಯ ಮಮಾಜ್ಞಯಾ ।
ಭವ ನಿರ್ವಾಹಕಸ್ತತ್ರ ಶಾಕಲ್ಯಸ್ಯ ವಿಶೇಷತಃ ॥೨೪॥

ಏವಮಾಜ್ಞಾಪಿತಸ್ತೇನ ಶಿವೇನ ಮುನಿಸತ್ತಮಃ ।
ಶೌನಕೋ ಭಗವಾನ್ವಿಪ್ರಾ ಸ್ತಥಾ ನಿರ್ವಾಹಕೋಽಭವತ್ ॥೨೫॥

ತಸ್ಯ ಶಿಷ್ಯಸ್ತು ವಿಪ್ರೇಂದ್ರಾ ಸ್ತದ್ವಾಕ್ಯಾದಾಶ್ವಲಾಯನಃ ।
ಪೂರ್ವೋಕ್ತೇನೈವ ಮಾರ್ಗೇಣ ಭಗವಂತಂ ತ್ರಿಯಂಬಕಂ ॥೨೬॥
ಶ್ರೀಮದ್ದಭ್ರ ಸಭಾಮಧ್ಯೇ ನೃತ್ಯಂತಂ ದೇವನಾಯಕಂ ।

ಮಾಡಿದ ಮಹೇಶ್ವರನ ನೃತ್ಯವನ್ನು ನೋಡಿ ಅತ್ಯಂತ ಸಂತೋಷದಿಂದ ಸ್ತೋತ್ರ ಮಾಡಿ, ಕೆಲವುಕಾಲ ಭಕ್ತ್ಯತಿಶಯದಿಂದ ಪರವಶನಾಗಿದ್ದನು. ||೧೯-೨೦-೨೧||

ಶೌನಕನು ಮತ್ತೆ ನರ್ತನ ಮಾಡುತ್ತಿರುವ ಶಿವನನ್ನು ನೋಡಿ ಅತ್ಯಂತ ಸಂತೋಷದಿಂದ ತಾನೂ ಸಾಷ್ಟಾಂಗನಮಸ್ಕಾರಸಹಿತವಾದ ನರ್ತನವನ್ನು ಮಾಡಿದನು. ||೨೨||

ದೇವದೇವನಾದ ಶಿವನು ಸಂತೋಷದಿಂದ ಶೌನಕನನ್ನು ಕುರಿತು ಗಂಭೀರವಾದ ಮಾತಿನಿಂದ ಮಹಾಮುನಿಯಾದ ಶೌನಕನೇ, ನೀನು ನನ್ನ ಅಪ್ಪಣೆಯಿಂದ ಋಗ್ವೇದಕ್ಕೆ ಶಾಕಲ್ಯಕೃತ ಪದವಿಭಾಗಾನುಸಾರವಾಗಿ ಪ್ರಯೋಗನಿರ್ವಾಹಕನಾಗು. ಎಂದು ಹೇಳಿದನು. ಹೀಗೆ ಅಪ್ಪಣೆಮಾಡುತ್ತಲು ಮಹಾಮಹಿಮನಾದ ಶೌನಕನು ಹಾಗೆಯೇ ಮಾಡಿದನು. ಶೌನಕನು ಮಾಡಿದ ಋಗ್ವಿಧಾನ, ಬೃಹದ್ದೇವತಾ ಮಹಾವ್ರತಪ್ರಯೋಗ ಮುಂತಾದ ಗ್ರಂಥಗಳು ಈಗಲೂ ದೊರೆಯುವುವು.||೨೩-೨೪-೨೫||

ಆ ಶೌನಕನ ಶಿಷ್ಯನಾದ ಆಶ್ವಲಾಯನನು ಹಿಂದೆ ಹೇಳಿದ ಮಾರ್ಗದಿಂದಲೇ ಮಹಾತ್ಮನಾದ ಮುಕ್ಕಣ್ಣನು ದಭ್ರಸಭಾ ಮಧ್ಯದಲ್ಲಿ ನರ್ತನ ಮಾಡುವುದನ್ನು

ದೃಷ್ಟ್ವಾ ಪ್ರಣಮ್ಯ ಮೇಧಾವೀ ಪ್ರಸಾದೇನ ಶಿವಸ್ಯ ತು ॥೨೭॥

ಅಭವತ್ಸೂತ್ರಕೃದ್ವಿಪ್ರಾಃ ಶಾಕಲ್ಯಸ್ಯ ಮಹಾಮುನಿಃ ।
ಏವಂ ಪೂರ್ವೋಕ್ತ ಮಾರ್ಗೇಣ ಶ್ರದ್ಧಯಾ ಬಹವೋಜನಾಃ ॥೨೮॥

ದೃಷ್ಟ್ವಾದಭ್ರ ಸಭಾಮಧ್ಯೇ ನರ್ತನಂ ಶಂಕರಸ್ಯ ತು ।
ಕೃತಾರ್ಥಾ ವೇದವಿಚ್ಛ್ರೇಷ್ಠಾ ಅಭವನ್ನಚಿರೇಣ ತು ॥೨೯॥

ತಸ್ಮಾದ್ಭವಂತೋಽಪಿ ಪುರೋಕ್ತ ವರ್ತ್ಮನಾ ।
ಶಿವಸ್ಯ ನೃತ್ತಂ ಶಿವಯಾ ನಿರೀಕ್ಷಿತಂ ॥
ದೃಷ್ಟ್ವಾ ಮಹೇಶಸ್ಯ ಹರಸ್ಯ ಶೂಲಿನಃ ।
ಪ್ರಸಾದ ಮಾತ್ರೇಣ ವಿಮುಕ್ತಿ ಭಾಗಿನಃ ॥೩೦॥

ಭವತ ಪರಮ ತತ್ವ ಪ್ರಾಪ್ತ್ಯುಪಾಯೋ ಮಯೋಕ್ತಃ ।
ಸಕಲ ಗುರುವರಾಣಾಮುತ್ತಮೋ ವ್ಯಾಸಸಂಜ್ಞಃ ।
ಅವದದತಿ ರಹಸ್ಯಂ ಮೇ ಪುರಾ ಶ್ರದ್ಧಯೈವ ।
ಪ್ರವರ ಗುಣನಿಧಾನಃ ಪದ್ಮನಾಭಾಂಶಭೂತಃ ॥೩೧॥

ನೋಡಿ, ಆ ದೇವನಿಗೆ ನಮಸ್ಕಾರವನ್ನು ಮಾಡಿ ಅವನ ಅನುಗ್ರಹದಿಂದ ಋಗ್ವೇದ ಸಂಹಿತೆಗೆ ಸೂತ್ರವನ್ನು ರಚಿಸಿದನು. ||೨೬-೨೭||

ಹೀಗೆಯೇ ಹಿಂದೆ ಹೇಳಿದ ಮಾರ್ಗದಲ್ಲಿ ನಂಬಿಕೆಯಿಂದ ಅನೇಕಜನರು ದಭ್ರಸಭಾಮಧ್ಯದಲ್ಲಿ ಶಿವನ ನರ್ತನವನ್ನು ನೋಡಿ ಸ್ವಲ್ಪಕಾಲದಲ್ಲಿಯೇ ಕೃತಾರ್ಥರಾದರು. ||೨೮-೨೯||

ಆದುದರಿಂದ ನೀವೂ ಕೂಡ ಹಿಂದೆ ಹೇಳಿದ ಮಾರ್ಗದಿಂದ ಪಾರ್ವತಿಯು ನೋಡಿದ ಶಿವನ ತಾಂಡವನರ್ತನವನ್ನು ನೋಡಿ, ಮಹೇಶ್ವರನೂ, ತ್ರಿಶೂಲಧಾರಿಯೂ ಆದ ದೇವನ ಅನುಗ್ರಹದಿಂದ ಮುಕ್ತಿಗೆ ಭಾಗಿಗಳಾಗಿರಿ. ||೩೦||

ಋಷಿಶ್ರೇಷ್ಠರೇ, ಶ್ರೇಷ್ಠವಾದ ಆತ್ಮತತ್ವಪ್ರಾಪ್ತಿಯ ಉಪಾಯವನ್ನು ಹೇಳಿರುವೆನು. ಸಮಸ್ತ ಗುರುಗಳಲ್ಲಿ ಅತ್ಯಂತ ಶ್ರೇಷ್ಠನೂ, ಅನೇಕ ಸದ್ಗುಣಗಳಿಗೆ ಗಣಿಯಂತಿರುವವನೂ, ವಿಷ್ಣುವಿನ ಅಂಶದಿಂದ ಹುಟ್ಟಿದವನೂ ಆದ ವ್ಯಾಸನು ಅತ್ಯಂತ ಗೋಪ್ಯವಾದ ಈ ತತ್ವವನ್ನು ನಮಗೆ ಹೇಳಿದನು. ||೩೧||

✝

ಏವಮುಕ್ತ್ವಾ ಮುನೀಂದ್ರೇಭ್ಯಃ ಸೂತಃ ಪೌರಾಣಿಕೋತ್ತಮಃ ।
ಕೃಷ್ಣದ್ವೈಪಾಯನಂ ವ್ಯಾಸಂ ಸಸ್ಮಾರ ಶ್ರದ್ಧಯಾ ಸಹ ॥೩೨॥

ಏತಸ್ಮಿನ್ನಂತರೇ ಶ್ರೀಮಾನ್ಮಹಾಕಾರುಣಿಕೋತ್ತಮಃ ।
ಕೃಷ್ಣಾಜಿನೀ ಸೋತ್ತರೀಯ ಆಷಾಢೇನ ವಿರಾಜಿತಃ ॥೩೩॥

ಭಸ್ಮೋದ್ಧೂಲಿತ ಸರ್ವಾಂಗಃ ಶುದ್ಧತಿರ್ಯಕ್ತ್ರಿಪುಂಡ್ರಧೃತ್ ।
ರುದ್ರಾಕ್ಷಮಾಲಾಭರಣೋ ಜಪನ್ಪಂಚಾಕ್ಷರಂ ಮುದಾ ॥೩೪॥

ಶಿಷ್ಯೈಸ್ತಾದೃಗ್ವಿಧೈರ್ಯುಕ್ತೋ ಮಹಾತ್ಮಾ ಸ್ವಯಮಾಗತಃ ।
ತಂ ದೃಷ್ಟ್ವಾ ಪರಮಪ್ರೀತ್ಯಾ ಪ್ರಣಮ್ಯ ಭುವಿ ದಂಡವತ್ ॥೩೫॥

ಸೂತಃ ಸ್ವಶಿಷ್ಯೈರ್ಮುನಿಭಿಃ ಸಹ ಸತ್ಯವತೀಸುತಂ ।
ತತ್ಪಾದ ಪಂಕಜದ್ವಂದ್ವಂ ನಿಧಾಯ ಶಿರಸಿ ಕ್ರಮಾತ್ ॥೩೬॥

ಚಕ್ಷುಷೋರ್ಹೃದಯೇ ಚೈವ ಸಂತೋಷಾದ್ಗದ್ಗದಸ್ವರಃ ।
ಪಾದಪ್ರಕ್ಷಾಲನಂ ಕೃತ್ವಾ ಪವಿತ್ರಂ ತಜ್ಜಲಂ ಪುನಃ ॥೩೭॥

ಪುರಾಣ ಹೇಳುವವರಲ್ಲಿ ಶ್ರೇಷ್ಠನೂ, ಬುದ್ಧಿಶಾಲಿಯೂ, ಆದ ಸೂತನು ಋಷಿಗಳಿಗೆ ಹೀಗೆ ಹೇಳಿ, ಭಕ್ತಿಯಿಂದ ಕೃಷ್ಣದ್ವೈಪಾಯನವ್ಯಾಸನನ್ನು ಸ್ಮರಿಸಿದನು. ॥೩೨॥

ಈ ಸಮಯಕ್ಕೆ ಸರಿಯಾಗಿ ಮಹಾದಯಾಳುವೂ, ಮಹಾತ್ಮನೂ ಆದ ವ್ಯಾಸನು, ಕೃಷ್ಣಾಜನವನ್ನು ಹೊದೆದುಕೊಂಡು, ದಂಡವನ್ನು ಹಿಡಿದು, ಅಂಗಗಳಿಗೆಲ್ಲಕ್ಕೂ ಭಸ್ಮವನ್ನು ಬಳಿದುಕೊಂಡು, ಭಸ್ಮತ್ರಿಪುಂಡ್ರವನ್ನು ಅಡ್ಡಲಾಗಿ ಧರಿಸಿ, ರುದ್ರಾಕ್ಷಮಾಲೆಯನ್ನು ಹಾಕಿಕೊಂಡು, ಪಂಚಾಕ್ಷರಮಂತ್ರವನ್ನು ಜಪಿಸುತ್ತಾ, ಇದೇ ಅಲಂಕಾರಗಳಿಂದ ಕೂಡಿದ ಶಿಷ್ಯರೊಡನೆ ತಾನೇ ಅಲ್ಲಿಗೆ ಬಂದನು. ॥೩೩-೩೪॥

ಸೂತನು ಸತ್ಯವತೀಸುತನಾದ ವ್ಯಾಸನನ್ನು ನೋಡಿ, ಅತ್ಯಂತ ಸಂತೋಷದಿಂದ ತನ್ನ ಶಿಷ್ಯರಾದ ಮುನಿಗಳೊಡನೆ ಅವನಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ, ಅವನ ಪಾದಕಮಲವನ್ನು ಕ್ರಮವಾಗಿ ತಲೆ, ಕಣ್ಣು, ಎದೆ, ಈ ಪ್ರದೇಶ

ಪೀತ್ವಾ ಯಥಾರ್ಹಂ ಸಂಪೂಜ್ಯ ವ್ಯಾಸಂ ಶಿಷ್ಯಗಣಾವೃತಂ ।
ತದ್ವಾಕ್ಯಂ ವೇದವತ್ಸತ್ಯಂ ಸ್ವಶಿಷ್ಯಾನ್ವೇದವಿತ್ತಮಾನ್ ॥೩೮॥

ಶ್ರಾವಯಿತ್ವಾ ಮಹಾಧೀಮಾನ್ ಸಹ ತೇನಾಖಿಲೈರಪಿ ।
ಶ್ರೀಮದ್ವ್ಯಾಘ್ರಪುರಂ ದಿವ್ಯಂ ಅವಾಪ ಪುರುಷಾರ್ಥದಂ ॥೩೯॥

ಪುನಃ ಸರ್ವೇ ಮುನಿಶ್ರೇಷ್ಠಾ ವೇದವ್ಯಾಸಪುರೋಗಮಾಃ ।
ಚಾಪೇ ಸೂರ್ಯೇ ಸ್ಥಿತೇ ರೌದ್ರೇ ನಕ್ಷತ್ರೇ ಶುದ್ಧಯಾ ಸಹ ॥೪೦॥

ಸ್ನಾನಂ ಕೃತ್ವಾ ಮಹಾತೀರ್ಥೇ ಶಿವಗಂಗಾಭಿಧೇ ವರೇ ।
ಯಥಾಶಕ್ತಿ ಧನಂ ದತ್ವಾ ಬ್ರಾಹ್ಮಣಾನಾಂ ಮನೀಷಿಣಾಂ ॥೪೧॥

ಉಪೋಷ್ಯೈಕಂ ದಿನಂ ದೃಷ್ಟ್ವಾ ಶ್ರೀಮೂಲಸ್ಥಾನ ನಾಯಕಂ ।
ಪ್ರದಕ್ಷಿಣ ತ್ರಯಂ ಕೃತ್ವಾ ಪ್ರಣಮ್ಯ ಧರಣೀತಲೇ ॥೪೨॥

ಷಡಕ್ಷರೇಣ ಮಂತ್ರೇಣ ಶ್ರೀಮೂಲಸ್ಥಾನನಾಯಕಂ ।
ಸಮಾರಾಧ್ಯಾಯುತಂ ನಿತ್ಯಂ ಜಪಿತ್ವಾ ಮಂತ್ರಮುತ್ತಮಂ ॥೪೩॥

ಗಳಲ್ಲಿಟ್ಟುಕೊಂಡು, ಸಂತೋಷದಿಂದ ಆ ಪಾದಗಳನ್ನು ತೊಳೆದು, ಆ ನೀರನ್ನು ಕುಡಿದು, ಶಿಷ್ಯರ ಗುಂಪಿನೊಡನೆ ಕೂಡಿದ ವ್ಯಾಸನನ್ನು ತಕ್ಕಂತೆ ಪೂಜಿಸಿ, ವೇದದಂತೆ ಸತ್ಯವಾದ ಅವನ ವಾಕ್ಯಗಳನ್ನು ವೇದವನ್ನು ಬಲ್ಲ ತನ್ನ ಶಿಷ್ಯರಿಗೆ ಬೋಧಿಸಿ, ಆ ತನ್ನ ಶಿಷ್ಯರೊಡನೆ ಕೂಡಿ, ಪುರುಷಾರ್ಥವನ್ನುಂಟುಮಾಡುವ ಶ್ರೇಷ್ಠವಾದ ವ್ಯಾಘ್ರಪುರಕ್ಕೆ ಹೋದನು. ||೩೫-೩೬-೩೭-೩೮-೩೯||

ವೇದವ್ಯಾಸನೇ ಮುಂತಾದ ಸಮಸ್ತ ಮುನಿಗಳೂ, ಧನುರ್ಮಾಸದಲ್ಲಿ ಆರ್ದ್ರಾನಕ್ಷತ್ರದದಿನ ಶಿವಗಂಗಾ ಮಹಾತೀರ್ಥದಲ್ಲಿ ಸ್ನಾನವನ್ನು ಮಾಡಿ, ವಿದ್ವಾಂಸರಾದ ಬ್ರಾಹ್ಮಣರಿಗೆ ಶಕ್ತ್ಯನುಸಾರವಾಗಿ ದ್ರವ್ಯದಾನವನ್ನು ಮಾಡಿ, ಆ ಒಂದುದಿನ ಉಪವಾಸವಿದ್ದು, ಮೂಲಸ್ಥಾನೇಶ್ವರನ ವಿಗ್ರಹದರ್ಶನವನ್ನೂ ಮೂರು ಪ್ರದಕ್ಷಿಣೆಯನ್ನೂ ಸಾಷ್ಟಾಂಗನಮಸ್ಕಾರವನ್ನೂ, ಮಾಡಿ, ಷಡಕ್ಷರಮಂತ್ರದಿಂದ ಆ ಮೂಲಸ್ಥಾನೇಶ್ವರನನ್ನು ಪೂಜಿಸಿ, ಪ್ರತಿದಿನವೂ ಹತ್ತುಸಾವಿರ ಮಂತ್ರಜಪವನ್ನು ಮಾಡಿದರು. ||೪೦-೪೧-೪೨-೪೩||

ವತ್ಸರಾಂತೇ ಚ ತೀರ್ಥೇಽಸ್ಮಿನ್ ಸ್ನಾನಂ ಕೃತ್ವಾ ಮಹತ್ತರೇ ।
ಪ್ರದತ್ವಾ ಪೂಜ್ಯ ದೇವೇಶಂ ಶ್ರೀಮೂಲಸ್ಥಾನನಾಯಕಂ ॥೪೪॥

ತತಃ ಸಭಾಪತಿಂ ನಿತ್ಯಂ ಪ್ರಣಮ್ಯ ಭುವಿ ದಂಡವತ್ ।
ಮಂತ್ರಂ ಷಡಕ್ಷರಂ ನಿತ್ಯಂ ಜಪಿತ್ವಾಽಯುತಮಾದರಾತ್ ॥೪೫॥

ವತ್ಸರಾಂತೇ ಧನಂ ದತ್ವಾ ಬ್ರಾಹ್ಮಣಾನಾಂ ಯಥಾಬಲಂ ।
ಶ್ರೀಮತ್ಪಂಚಾಕ್ಷರೇಣೈವ ಸತಾರೇಣ ಮಹೇಶ್ವರಂ ।
ಪೂಜಯಾಮಾಸುರತ್ಯಂತಂ ಶ್ರದ್ಧಯೈವ ಸಭಾಪತಿಂ ॥೪೬॥

ತತಃ ಪ್ರಸನ್ನೋ ಭಗವಾನ್ ಮಹೇಶ್ವರೋ ।
ಮುನೀಶ್ವರಾಣಾ ಮಪಿ ದೃಷ್ಟಿಗೋಚರಃ ।
ಪ್ರನೃತ್ಯ ಮಾನೋಽಭವದಂಬಿಕಾಪತಿಃ ।
ಸಮಸ್ತ ವೇದಾಂತ ಸಭಾಪತಿಃ ಶಿವಃ ॥೪೭॥

ವ್ಯಾಸಾದಯೋ ವೇದವಿದಾಂ ವರಾ ಹರಂ ।
ದಿವಾಕರಾಣಾಂ ಶತಕೋಟಿ ಕೋಟಿಭಿಃ ।

ಒಂದು ವರ್ಷವಾದಮೇಲೆ ಮತ್ತೆ ಆ ಮೇಲಾದ ತೀರ್ಥದಲ್ಲಿ ಮಿಂದು, ದಾನಮಾಡಿ, ಮೂಲಸ್ಥಾನೇಶ್ವರನನ್ನು ಪೂಜಿಸಿ, ಆ ಮೇಲೆ ಸಭಾಪತೀಶ್ವರನಿಗೆ ಪ್ರತಿದಿನವೂ ನಮಸ್ಕಾರಮಾಡುತ್ತಾ ಹತ್ತುಸಾವಿರ ಷಡಕ್ಷರಮಂತ್ರವನ್ನು ಜಪಿಸಿ, ವರ್ಷದ ಕೊನೆಯಲ್ಲಿ ಬ್ರಾಹ್ಮಣರಿಗೆ ಯಥಾಶಕ್ತಿ ದಾನಮಾಡಿ, ಪಂಚಾಕ್ಷರಮಂತ್ರದೊಡನೆ ಓಂಕಾರವನ್ನು ಸೇರಿಸಿ ಅತ್ಯಂತ ಭಕ್ತಿಯಿಂದ ಸಭಾಪತೀಶ್ವರನನ್ನು ಪೂಜಿಸಿದರು. ॥೪೪-೪೫-೪೬॥

ಆ ಮೇಲೆ ಸಮಸ್ತವೇದಾಂತಸಭೆಗೆ ಸ್ವಾಮಿಯಾದ, ಸಭಾಪತಿಯೆಂಬ ಹೆಸರಿನ ಮಹಾಮಹಿಮನಾದ ಮಹೇಶ್ವರನು, ಆ ಮುನಿಗಳ ಕಣ್ಣಿಗೆ ಕಾಣಿಸುತ್ತ, ಅತ್ಯಂತ ಸಂತೋಷದಿಂದ ದೇವೀಸಹಿತನಾಗಿ ನರ್ತನಮಾಡುತ್ತಿದ್ದನು. ॥೪೭॥

ವೇದವನ್ನು ತಿಳಿದವರಲ್ಲಿ ಶ್ರೇಷ್ಠರಾದ ವ್ಯಾಸನೇ ಮೊದಲಾದ ಮುನಿಶ್ರೇಷ್ಠರು, ಅನೇಕಕೋಟಿ ಸೂರ್ಯರ ತೇಜಸ್ಸಿಗೆ ಸಮಾನವಾದ ತೇಜಸ್ಸುಳ್ಳವನೂ,

ಸಮಾನ ತೇಜಸ್ಕ ಮತೀವ ನಿರ್ಮಲಂ ।
ವಿಶಾಲವಕ್ಷಸ್ಥಲ ಮೂರ್ತಿ ಹಾರಿಣಂ ॥೪೮॥

ದೃಷ್ಟ್ವಾ ಪ್ರಸಾದೇನ ಮಹತ್ತರೇಣ ತೇ ।
ಪ್ರಣಮ್ಯ ಸರ್ವೇ ಭುವಿ ದಂಡವತ್ಪುನಃ ॥
ಪ್ರಜಲ್ಪ್ಯ ಭಕ್ತ್ಯಾ ವಿವಶಾ ವಿಚೇಷ್ಟಿತಾ ।
ನಿವೃತ್ತ ಬಂಧಾ ಅಭವನ್ ಪ್ರಸಾದತಃ ॥೪೯॥

ಪುಷ್ಪವೃಷ್ಟಿರಭವನ್ಮಹತ್ತರಾ ।
ಸ್ವಸ್ತಿ ಮಂಗಲಪುರಃಸರಾಽಪಿಚ ॥
ಕಾಹಲಾದಿರವಪೂರಿತಂ ಜಗತ್ ।
ತೋಷಿತಾ ಅಪಿ ಸುರಾಸುರಾ ಜನಾಃ ॥೫೦॥

ಆಗತಾ ಅಪಿ ಸುರಾಸುರಾ ಜನಾ ।
ಅಪ್ಸರೋಭಿರಖಿಲೈರನುತ್ತಮೈಃ ॥
ಶಂಕರಶ್ಚ ಭಗವಾನ್ ಸಭಾಪತಿಃ ।
ಸರ್ವಲೋಕ ಹಿತಕಾಮ್ಯಯಾಽಂಬಯಾ ॥೫೧॥

ಅತ್ಯಂತ ಪರಿಶುದ್ಧನೂ, ವಿಸ್ತಾರವಾದ ಎದೆಯುಳ್ಳವನೂ, ಪ್ರಾಣಿಗಳ ದುಃಖವನ್ನು ನಾಶಮಾಡುವವನೂ ಆದ ಶಿವನನ್ನು ನೋಡಿ ಅವನ ವಿಶೇಷವಾದ ಅನುಗ್ರಹದಿಂದ ಭಕ್ತಿಪರವಶರಾಗಿ ಸಾಷ್ಟಾಂಗ ನಮಸ್ಕಾರಮಾಡಿ ಸ್ತೋತ್ರಮಾಡುತ್ತ ಚಲಿಸದೆ ಸಂಸಾರದ ಕಟ್ಟಿನಿಂದ ಬಿಡುಗಡೆಯನ್ನು ಹೊಂದಿದರು. ॥೪೮-೪೯॥

ಆ ಕಾಲದಲ್ಲಿ ವಿಶೇಷವಾದ ಹೂಮಳೆಗರೆಯಿತು. ಮಂಗಳಧ್ವನಿಗಳೂ, ಕಹಳೆ ಮುಂತಾದ ವಾದ್ಯದ ಧ್ವನಿಗಳೂ, ಲೋಕದಲ್ಲೆಲ್ಲಾ ತುಂಬಿಕೊಂಡುವು. ಸಮಸ್ತ ಸುರಾಸುರರೂ ಮನುಜರೂ ಸಂತೋಷವನ್ನು ಹೊಂದಿದರು. ॥೫೦॥

ಅಲ್ಲಿಗೆ ಬಂದ ದೇವತೆಗಳೂ, ರಾಕ್ಷಸರೂ, ಮನುಜರೂ, ಅಪ್ಸರರೂ, ಇವರೊಡನೆ ಮಹಾಮಹಿಮನಾದ ಸಭಾಪತೀಶ್ವರನು ದೇವೀಸಹಿತನಾಗಿ ಸಮಸ್ತರ ಹಿತೇಚ್ಛೆಯಿಂದ ವೇದಮಂತ್ರವನ್ನುಚ್ಚರಿಸುತ್ತ, ನಡುವನ್ನು ಕಟ್ಟಿಕೊಂಡು ಸಮಸ್ತ ಪ್ರಪಂ

ಸಹಪರಿಕರಬಂಧಂ ವೇದಮಂತ್ರೇಣ ಕೃತ್ವಾ ।
ನಿಖಿಲಭುವನನಾಥೋ ನೀಲಕಂಠಸ್ತ್ರಿನೇತ್ರಃ ॥
ಸಕಲಜನ ಸಮೂಹೈಃ ಸೇವ್ಯಮಾನಃ ಸ್ವಭಕ್ತೈಃ ।
ತನಯಯುಗಲಯುಕ್ತೋ ನಂದಿನಾ ನಂದಿತೇನ ॥೫೨॥

ಮಹೋತ್ಸವ ವಿನೋದೇನ ಭಗವಾನ್ಪರಮೇಶ್ವರಃ ।
ಪುಂಡರೀಕಪುರಂ ದಿವ್ಯಂ ಪ್ರಾದಕ್ಷಿಣ್ಯ ಕ್ರಮೇಣ ಸಃ ॥೫೩॥

ಚರಿತ್ವಾ ಶಿವಗಂಗಾಯಾಂ ಶಂಭುಸ್ತಾಂಡವ ಮಂಡಿತಃ ।
ಸ್ನಾನಂ ಕೃತ್ವಾ ಪದೌ ತೀರ್ಥಂ ಸರ್ವೇಷಾಂ ಪ್ರಾಣಿನಾಂ ಹರಃ ॥೫೪॥

ಸುರಾಸುರಾದಯೋ ಯಸ್ಮಿನ್ ಶಿವಗಂಗಾಽಭಿಧೇ ವರೇ ।
ಶ್ರದ್ಧಯಾ ಸನ್ನಿಧೌ ತಸ್ಯ ಸ್ನಾನಂ ಕೃತ್ವಾ ಯಥಾಬಲಂ ॥೫೫॥

ಧನಂ ಧಾನ್ಯಂ ಚ ವಸ್ತ್ರಂ ಚ ತಿಲಂ ಗಾಂ ಭೂಮಿಮುತ್ತಮಾಂ ।
ಪ್ರದತ್ವಾ ಶಿವಭಕ್ತೇಭ್ಯಃ ಶಂಕರಂ ಶಶಿಭೂಷಣಂ ॥೫೬॥
ನೀಲಕಂಠಂ ವಿರೂಪಾಕ್ಷಂ ತುಷ್ಟುವುಶ್ಚ ಸುರಾದಯಃ ।

ಚಕ್ತಿ ಸ್ವಾಮಿಯೂ, ಮುಕ್ಕಣ್ಣನೂ, ನೀಲಕಂಠನೂ ಆದ ಶಿವನು ತನ್ನನ್ನು ಸಮಸ್ತರೂ ಸೇವಿಸುತ್ತಿರಲು, ತನ್ನಿಬ್ಬರು ಮಕ್ಕಳೊಡನೆ ಸೇರಿ, ನಂದಿಯು ಆನಂದಪಡುತ್ತಿರಲು, ದೊಡ್ಡ ಮೆರವಣಿಗೆಯಿಂದ ಪುಂಡರೀಕಪುರವನ್ನು ಪ್ರದಕ್ಷಿಣೆಮಾಡಿಕೊಂಡು ಬಂದು, ತಾಂಡವನರ್ತನವನ್ನು ಮಾಡುತ್ತ, ಶಿವಗಂಗಾತೀರ್ಥದಲ್ಲಿ ಸ್ನಾನವನ್ನು ಮಾಡಿ, ಸಮಸ್ತ ಪ್ರಾಣಿಗಳಿಗೂ ಆ ತೀರ್ಥವನ್ನು ಕೊಟ್ಟನು. ||೫೧-೫೨-೫೩-೫೪||

ದೇವತೆಗಳೂ, ಅಸುರರೂ, ಮುಂತಾದ ಸಮಸ್ತರೂ ಆ ಶ್ರೇಷ್ಠವಾದ ಶಿವಗಂಗಾತೀರ್ಥದಲ್ಲಿ ಆ ಶಿವನ ಸನ್ನಿಧಾನದಲ್ಲಿ ಸ್ನಾನವನ್ನು ಮಾಡಿ, ತಮ್ಮ ಶಕ್ತ್ಯನುಸಾರವಾಗಿ ಧನ, ಧಾನ್ಯ, ವಸ್ತ್ರ, ಎಳ್ಳು, ಗೋವು, ಭೂಮಿ ಮುಂತಾದ ದಾನಗಳನ್ನು ಶಿವಭಕ್ತರಾದವರಿಗೆ ಕೊಟ್ಟು, ಚಂದ್ರಶೇಖರನೂ, ನೀಲಕಂಠನೂ, ಮುಕ್ಕಣ್ಣನೂ ಆಗಿ ಲೋಕಕ್ಕೆ ಸುಖವನ್ನುಂಟುಮಾಡುವ ಶಿವನನ್ನು ಸ್ತೋತ್ರ ಮಾಡಿದರು. ||೫೫-೫೬||

ನಮಸ್ತೇ ರುದ್ರಮನ್ಯವ ಉತೋತ ಇಷವೇ ನಮಃ ॥೫೭॥

ನಮಸ್ತೇ ಅಸ್ತು ಧನ್ವನೇ ಕರಾಭ್ಯಾಂ ತೇ ನಮೋ ನಮಃ ।
ಯಾತೇ ರುದ್ರ ಶಿವಾ ತನೂಃ ಶಾಂತಾ ತಸ್ಯೈ ನಮೋ ನಮಃ ॥೫೮॥

ನಮೋ ಅಸ್ತು ನೀಲಗ್ರೀವಾಯ ಸಹಸ್ರಾಕ್ಷಾಯ ತೇ ನಮಃ ।
ಸಹಸ್ರಪಾಣಯೇ ತುಭ್ಯಂ ನಮೋ ಮೀಢುಷ್ಟಮಾಯ ತೇ ॥೫೯॥

ಕಪರ್ದಿನೇ ನಮಸ್ತುಭ್ಯಂ ಕಾಲರೂಪಾಯತೇ ನಮಃ ।
ನಮಸ್ತೇ ಚಾತ್ತಶಸ್ತ್ರಾಯ ನಮಸ್ತೇ ಶೂಲಪಾಣಯೇ ॥೬೦॥

ಹಿರಣ್ಯಪಾಣಯೇ ತುಭ್ಯಂ ಹಿರಣ್ಯಪತಯೇ ನಮಃ ।
ನಮಸ್ತೇ ವೃಕ್ಷರೂಪಾಯ ಹರಿಕೇಶಾಯ ತೇ ನಮಃ ॥೬೧॥

ಓ ರುದ್ರನೇ, ನಿನ್ನ ಕೋಪಕ್ಕೂ, ಬಾಣಕ್ಕೂ, ಧನುಸ್ಸಿಗೂ, ಕೈಗಳಿಗೂ ನಮಸ್ಕಾರಮಾಡುವೆವು. ಇವುಗಳನ್ನು ನಮ್ಮ ಮೇಲೆ ಪ್ರಯೋಗಿಸಬೇಡ, ನಮ್ಮ ಶತ್ರುಗಳಲ್ಲಿ ಪ್ರಯೋಗಿಸು. ಎಂದು ಅಭಿಪ್ರಾಯವು. ॥೫೭॥

ಓ ರುದ್ರನೇ, ಶಾಂತಸ್ವರೂಪವೂ, ಮಂಗಳಸ್ವರೂಪವೂ ಆದ ನಿನ್ನ ಶರೀರಕ್ಕೆ ನಮಸ್ಕಾರ ಮಾಡುವೆವು. ॥೫೮॥

ನೀಲವಾದ ಕುತ್ತಿಗೆಯುಳ್ಳವನೂ, ಅನೇಕ ಕಣ್ಣುಗಳುಳ್ಳವನೂ, ಅನೇಕ ಕೈಗಳುಳ್ಳವನೂ, ಅತ್ಯಂತ ಶ್ರೇಷ್ಠನೂ ಆದ ನಿನಗೆ ನಮಸ್ಕಾರವನ್ನು ಮಾಡುವೆವು. ॥೫೯॥

ಜಟಾಧಾರಿಯೂ, ಕಾಲಸ್ವರೂಪನೂ, ಶಸ್ತ್ರಧಾರಿಯೂ, ಶೂಲವನ್ನು ಧರಿಸಿದವನೂ, ಆದ ನಿನಗೆ ನಮಸ್ಕಾರವನ್ನು ಮಾಡುವೆವು. ॥೬೦॥

ಸುವರ್ಣಾಭರಣಗಳನ್ನು ಕೈಯ್ಯಲ್ಲಿ ಧರಿಸಿದ, ಸುವರ್ಣಕ್ಕೆ ಅಧಿಪತಿಯಾದ ವೃಕ್ಷಸ್ವರೂಪನಾದ ಹಸುರುಬಣ್ಣದ ಎಲೆಗಳೇ ಕೂದಲುಗಳಂತಿರುವ ನಿನಗೆ ನಮಸ್ಕಾರವನ್ನು ಮಾಡುವೆವು. ॥೬೧॥

ಪಶೂನಾಂ ಪತಯೇ ತುಭ್ಯಂ ಪಥೀನಾಂ ಪತಯೇ ನಮಃ ।
ಪುಷ್ಟಾನಾಂ ಪತಯೇ ತುಭ್ಯಂ ಕ್ಷೇತ್ರಾಣಾಂ ಪತಯೇ ನಮಃ ॥೬೨॥

ಆತತಾವಿಸ್ವರೂಪಾಯ ವನಾನಾಂ ಪತಯೇ ನಮಃ ।
ರೋಹಿತಾಯ ಸ್ಥಪತಯೇ ವೃಕ್ಷಾಣಾಂ ಪತಯೇ ನಮಃ ॥೬೩॥

ನಮಸ್ತೇ ಮಂತ್ರಿಣೇ ಸಾಕ್ಷಾತ್ಕಕ್ಷಾಣಾಂ ಪತಯೇ ನಮಃ ।
ಓಷಧೀನಾಂ ಚ ಪತಯೇ ನಮಃ ಸಾಕ್ಷಾತ್ಪರಾತ್ಮನೇ ॥೬೪॥

ಉಚ್ಚೈರ್ಘೋಷಾಯ ದೇವಾಯ ಪತ್ತೀನಾಂ ಪತಯೇ ನಮಃ ।
ಸತ್ವಾನಾಂ ಪತಯೇ ತುಭ್ಯಂ ಧನಾನಾಂ ಪತಯೇ ನಮಃ ॥೬೫॥

ಪಶುಗಳಿಗೂ, ದಾರಿಯಲ್ಲಿ ನಡೆವವರಿಗೂ, ಪರಿಪೂರ್ಣರಾದ ಮನುಜರಿಗೂ, ಅಥವಾ ವಾಕ್ಪುಷ್ಟಿ, ಕಾಯಪುಷ್ಟಿ ಮುಂತಾದ ಹತ್ತು ಬಗೆಯ ಪುಷ್ಟಿಗಳಿಗೂ, ಗದ್ದೆ, ಹೊಲ ಮುಂತಾದ ಕ್ಷೇತ್ರಗಳಿಗೂ, ಅಧಿಪತಿಯಾದ ನಿನಗೆ ನಮಸ್ಕಾರವನ್ನು ಮಾಡುವೆವು. ॥೬೨॥

ಹೆದೆ ಏರಿಸಿದ ಧನುಸ್ಸಿನಿಂದ ಲೋಕವನ್ನು ಕಾಪಾಡುವ ರೂಪವುಳ್ಳ, ವನಗಳಿಗೆ ಅಧಿಪತಿಯಾದ, ಲೋಹಿತವರ್ಣವುಳ್ಳ, ಪ್ರಭುವಾದ, ವೃಕ್ಷಗಳನ್ನು ಕಾಪಾಡುವ ನಿನಗೆ ನಮಸ್ಕಾರವನ್ನು ಮಾಡುವೆವು. ॥೬೩॥

ಮಂತ್ರಾಲೋಚನೆಯನ್ನು ಹೇಳುವ ಮಂತ್ರಿಸ್ವರೂಪನೂ, ವೃಕ್ಷ, ಗುಲ್ಮಾದಿಗಳಿಂದ ಕೂಡಿದ ಬೆಟ್ಟಗಳೂ, ಗವಿಗಳೂ ಇವುಗಳಿಗೆ ಅಧಿಪತಿಯೂ ಆದ, ಸಾಕ್ಷಾತ್ಪರಮಾತ್ಮಸ್ವರೂಪನಾದ ನಿನಗೆ ನಮಸ್ಕಾರವನ್ನು ಮಾಡುವೆವು. ಗಹನವಾದ ದೇಶ, ಭಾಷೆ, ಧರ್ಮಾಧರ್ಮ ಇವುಗಳನ್ನು ಕಕ್ಷಾ ಎಂದು ಹೇಳುವರು. ಇವುಗಳಿಗೆ ಅಧಿಪತಿಯೆಂದು ಬೇಕಾದರೂ ಹೇಳಬಹುದು. ॥೬೪॥

ಯುದ್ಧಕಾಲದಲ್ಲಿ ದೊಡ್ಡಧ್ವನಿಯನ್ನು ಮಾಡುವ ದೇವನಾದ, ಸೇನೆಗಳಿಗೆಲ್ಲಕ್ಕೂ ಅಧಿಪತಿಯಾದ, ಸಮಸ್ತ ಪ್ರಾಣಿಗಳಿಗೂ, ಮಹಾಪ್ರಮಥಗಣಗಳಿಗೂ ಸ್ವಾಮಿಯಾದ, ಧನಗಳಿಗೆ ಅಧಿಪತಿಯಾದ ನಿನಗೆ ನಮಸ್ಕಾರವನ್ನು ಮಾಡುವೆವು. ॥೬೫॥

ಸಹಮಾನಾಯ ಶಾಂತಾಯ ಶಂಕರಾಯ ನಮೋ ನಮಃ ।
ಆಧೀನಾಂ ಪತಯೇ ತುಭ್ಯಂ ವ್ಯಾಧೀನಾಂ ಪತಯೇ ನಮಃ ॥೬೬॥

ಕಕುಭಾಯ ನಮಸ್ತುಭ್ಯಂ ನಮಸ್ತೇಽಸ್ತು ನಿಷಂಗಿಣೇ ।
ಸ್ತೇನಾನಾಂ ಪತಯೇ ತುಭ್ಯಂ ಕೃತ್ರಿಮಾಯ ನಮೋ ನಮಃ ॥೬೭॥

ತಸ್ಕರಾಣಾಂ ನಮಸ್ತುಭ್ಯಂ ಪತಯೇ ಪಾಪಹಾರಿಣೇ ।
ವಂಚತೇ ಪರಿವಂಚತೇ ಸ್ತಾಯೂನಾಂ ಪತಯೇ ನಮಃ ॥೬೮॥

ನಮೋ ನಿಚೇರವೇ ತುಭ್ಯಮರಣ್ಯಪತಯೇ ನಮಃ ।
ಉಷ್ಣೀಷಿಣೇ ನಮಸ್ತುಭ್ಯಂ ನಮಸ್ತೇ ಪರಮಾತ್ಮನೇ ॥೬೯॥

ಶತ್ರುಗಳನ್ನು ತಿರಸ್ಕಾರಮಾಡತಕ್ಕ, ಶಾಂತನಾದ, ಸುಖವನ್ನುಂಟುಮಾಡುವ, ಮನೋವ್ಯಥೆಗೂ, ರೋಗಗಳಿಗೂ, ಅಧಿಪತಿಯಾದ ನಿನಗೆ ನಮಸ್ಕಾರವನ್ನು ಮಾಡುವೆವು. ॥೬೬॥

ದಿಕ್ಕೇ ವಸ್ತ್ರವಾಗಿವುಳ್ಳ ಬಾಣಗಳನ್ನು ತುಂಬಿದ ಬತ್ತಲಿಕೆಯನ್ನು ಅಥವಾ ಖಡ್ಗವನ್ನು ಧರಿಸಿದ, ಕಳ್ಳರಿಗೆಲ್ಲರಿಗೂ ಅಧಿಪತಿಯಾದ, ಗುಪ್ತಚೋರನನ್ನು ಕಾಪಾಡುವ, ಮಾಯಾಸ್ವರೂಪನಾದ ನಿನಗೆ ನಮಸ್ಕಾರವು. ॥೬೭॥

ಕಳ್ಳರಿಗೆ ಈಶ್ವರರೂಪದಿಂದ ಪಾಲಕನಾದ, ಪಾಪಗಳನ್ನು ನಾಶಮಾಡುವ, ವ್ಯಾಪಾರಾದಿಗಳಲ್ಲಿ ಮೋಸಮಾಡುವ ಸ್ವಭಾವವುಳ್ಳ, ಕಪಟ ಸಾಧುವೇಷದಿಂದ ವಸ್ತ್ರಾದಿಗಳನ್ನಪಹರಿಸುವ ಜನರಿಗೆಲ್ಲರಿಗೂ ಅಧಿಪತಿಯಾದ ನಿನಗೆ ನಮಸ್ಕಾರವು. ಇಲ್ಲಿ ವಿಶೇಷವೇನೆಂದರೆ—ಈಶ್ವರನು ಕಳ್ಳರೇ ಮುಂತಾದವರ ಶರೀರದಲ್ಲಿ ಎರಡು ರೂಪದಿಂದಿರುವನು. ೧. ಜೀವರ ರೂಪ, ೨. ಈಶ್ವರರೂಪ. ಈ ಶಬ್ದಗಳಿಗೆ ಜೀವ ರೂಪವೇ ವಾಚ್ಯಾರ್ಥವು. ಅದೇ ಶಾಸ್ತ್ರಗಳಲ್ಲಿ ನಿಂದ್ಯವಾಗಿರುವುದು. ಸ್ತೇನಾದಿ ಶಬ್ದಗಳಿಂದ ಈಶ್ವರರೂಪವನ್ನು ಅನುಸಂಧಾನಮಾಡಿದರೆ ಅದು ಪಾಪಕ್ಷಯಕ್ಕೆ ಕಾರಣವಾಗುವುದು. ಲಕ್ಷ್ಯಾರ್ಥದಿಂದ ಈ ವಿಷಯವನ್ನು ತಿಳಿಯಬೇಕು. ಎಂದು ವೇದವು ಲೌಕಿಕಶಬ್ದಗಳಿಂದಲೂ ಶಿವನನ್ನು ಸ್ತೋತ್ರಮಾಡಿರುವುದು. ॥೬೮॥

ಒಡೆಯನ ಮನೆಯಲ್ಲಿಯೇ ಇದ್ದು ಯಾವಾಗ ಅಪಹಾರಮಾಡಲಿ ಎಂದು ಸಮಯವನ್ನು ಕಾಯುತ್ತಿರುವವನು ನಿಚೇರುವೆನಿಸುವನು. ಅರಣ್ಯದಲ್ಲಿದ್ದುಕೊಂಡು ದಾರಿಯಲ್ಲಿ ಹೋಗುವವರ ವಸ್ತುವನ್ನು ಅಪಹರಿಸುವವನು ಅರಣ್ಯಪತಿ. ತಲೆಗೆ

ವಿಸ್ತೃತಾಯ ನಮಸ್ತುಭ್ಯ ಮಾಸೀನಾಯ ನಮೋನಮಃ ।
ಶಯಾನಾಯ ನಮಸ್ತುಭ್ಯಂ ಸುಷುಪ್ತಾಯ ನಮೋನಮಃ ॥೭೦॥

ಪ್ರಬುದ್ಧಾಯ ನಮಸ್ತುಭ್ಯಂ ಸ್ಥಿರಾಯ ಪರಮಾತ್ಮನೇ ।
ಸಭಾರೂಪಾಯ ತೇ ನಿತ್ಯಂ ಸಭಾಯಾಃ ಪತಯೇ ನಮಃ ॥೭೧॥

ನಮಃ ಶಿವಾಯ ಸಾಂಬಾಯ ಬ್ರಹ್ಮಣೇ ಸರ್ವಸಾಕ್ಷಿಣೇ ॥೭೨॥

॥ ಸೂತ ಉವಾಚ ॥

ಏವಂ ಸುರಾಸುರೈರನ್ಯೈಃ ಶಂಕರೋಽಭಿಷ್ಟುತಃ ಪುನಃ ।
ಕೃತ್ವಾ ಪ್ರಸಾದಂ ಸರ್ವೇಷಾಂ ತತ್ರೈವಾಂತರ್ಹಿತೋಽಭವತ್ ॥೭೩॥

ಅಸ್ಯ ತೀರ್ಥಸ್ಯ ಮಾಹಾತ್ಮ್ಯಂ ಸ್ಥಾನಸ್ಯಾಸ್ಯ ಸಭಾಪತೇಃ ।
ಯೋ ವೇತ್ತಿ ಶ್ರದ್ಧಯಾ ಮುಕ್ತಿಃ ಸಿದ್ಧಾ ತಸ್ಯ ಮಹಾತ್ಮನಃ ॥೭೪॥

ಬಟ್ಟೆಯನ್ನು ಸುತ್ತಿಕೊಂಡು ಬಂದು ಕಳ್ಳತನಮಾಡುವವನು ಉಷ್ಣೀಷಿ. ಈ ಸ್ವರೂಪನೂ ಆದ ಪರಮಾತ್ಮನಾದ ನಿನಗೆ ನಮಸ್ಕಾರವು. ॥೬೯॥

ಪ್ರಪಂಚರೂಪವಾಗಿ ವಿಸ್ತಾರವಾಗಿರುವ, ಸಮಸ್ತ ಪ್ರಾಣಿಗಳಲ್ಲಿಯೂ ವ್ಯಾಪಿಸಿರುವುದರಿಂದ, ಕುಳಿತುಕೊಂಡಿರುವ, ಮಲಗಿರುವ, ನಿದ್ರೆಮಾಡುತ್ತಿರುವ, ನಿನಗೆ ನಮಸ್ಕಾರವು. ॥೭೦॥

ಎಚ್ಚರದಿಂದಿರುವ, ಸ್ಥಿರನಾಗಿ ಚಲಿಸದಿರುವ, ಪರಮಾತ್ಮನಾದ ನಿನಗೆ ನಮಸ್ಕಾರವು. ಯಾವಾಗಲೂ ಸಭಾರೂಪನಾಗಿಯೂ, ಸಭಾಪತಿಯಾಗಿಯೂ, ಮಂಗಳಸ್ವರೂಪನಾಗಿ, ದೇವೀಸಹಿತನಾಗಿರುವ ಸರ್ವಸಾಕ್ಷಿಸ್ವರೂಪನಾದ, ಪರಬ್ರಹ್ಮಸ್ವರೂಪನಾದ ನಿನಗೆ ನಮಸ್ಕಾರ ಮಾಡುವೆವು. ॥೭೧-೭೨॥

ಸೂತನು ಹೇಳಿದನು — ಈ ರೀತಿಯಲ್ಲಿ ದೇವತೆಗಳಿಂದಲೂ, ಅಸುರರಿಂದಲೂ ಇತರರಿಂದಲೂ, ಸ್ತೋತ್ರಮಾಡಿಸಿಕೊಂಡ ಶಿವನು, ಎಲ್ಲರಿಗೂ ಅನುಗ್ರಹವನ್ನು ಮಾಡಿ, ಅಲ್ಲಿಯೇ ಅದೃಶ್ಯನಾದನು. ॥೭೩॥

ಶಿವಗಂಗಾತೀರ್ಥದ ಮಹಿಮೆಯನ್ನೂ, ಸಭಾಪತೀಶ್ವರನ ಸ್ಥಾನವಾದ ಈ ವ್ಯಾಘ್ರಪುರವನ್ನೂ ಯಾರು ತಿಳಿಯುವರೋ ಆ ಮಹಾತ್ಮರಿಗೆ ಮುಕ್ತಿಯು ದೊರಕುವುದು. ॥೭೪॥

ಯಃ ಪಠೇಚ್ಛೃಣುಯಾದ್ವಾಽಪಿ ಮುಕ್ತಿಖಂಡಮಿಮಂ ಸದಾ ।
ಸ ಸಾಕ್ಷಾನ್ಮುಕ್ತಿಮಾಪ್ನೋತಿ ಪ್ರಸಾದೇನ ಸಭಾಪತೇಃ ॥೭೫॥

ನಮೋ ವ್ಯಾಸಾಯ ಗುರವೇ ಮಮ ವಿಜ್ಞಾನದಾಯಿನೇ ।
ನಮಃ ಶಿವಾಯ ಸೋಮಾಯ ಸಾಕ್ಷಿಣೇ ಪ್ರತ್ಯಗಾತ್ಮನೇ ॥೭೬॥

ಇತಿ ಶ್ರೀಸ್ಕಂದಪುರಾಣೇ ಸೂತಸಂಹಿತಾಯಾಂ ಮುಕ್ತಿಖಂಡೇ
ಈಶ್ವರನೃತ್ಯದರ್ಶನಂನಾಮ ನವಮೋಽಧ್ಯಾಯಃ

॥ ಓಂ ತತ್ಸತ್ ॥

ಈ ಮುಕ್ತಿಖಂಡವನ್ನು ಯಾವಾಗಲೂ ಯಾರು ಪಾರಾಯಣಮಾಡುವರೋ ಅಥವಾ ಕೇಳುವರೋ ಅವರು ಸಭಾಪತೀಶ್ವರನ ಅನುಗ್ರಹದಿಂದ ನೇರವಾಗಿ ಮೋಕ್ಷವನ್ನು ಹೊಂದುವರು. ॥೭೫॥

ಸೂತನು ಈ ಗ್ರಂಥದ ಕೊನೆಯಲ್ಲಿ ಮಂಗಳವನ್ನು ಮಾಡುತ್ತ ಮೊದಲು, ತನಗೆ ಜ್ಞಾನೋಪದೇಶವನ್ನು ಮಾಡಿದ ಗುರುವಾದ ವ್ಯಾಸರಿಗೆ ನಮಸ್ಕಾರಮಾಡಿ, ಬಳಿಕ ಸರ್ವಾಂತರನಾಗಿರುವುದರಿಂದ ಪ್ರತ್ಯಗಾತ್ಮನೆನಿಸಿದ ಮಂಗಳಸ್ವರೂಪನೂ, ಉಮಾದೇವೀಸಹಿತನೂ ಆದ, ಸರ್ವಸಾಕ್ಷಿಯಾಗಿ ಜ್ಞಾನಸ್ವರೂಪನಾದ ಶಿವನಿಗೆ ನಮಸ್ಕಾರವನ್ನು ಮಾಡಿರುವನು. ॥೭೬॥

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಸೂತಸಂಹಿತೆಯಲ್ಲಿ ಮುಕ್ತಿಖಂಡದಲ್ಲಿ
ಸಭಾಪತೀಶ್ವರನ ನೃತ್ಯದರ್ಶನದ ಮಹಿಮೆಯನ್ನು ವಿವರಿಸುವ
ಒಂಬತ್ತನೆಯ ಅಧ್ಯಾಯವು ಮುಗಿದುದು.

ಮುಕ್ತಿಖಂಡವೂ ಮುಗಿದುದು.

॥ ಶ್ರೀರಸ್ತು ॥